ಅಧ್ಯಕ್ಷರು.—ಯಾರದೇ ಮನಸ್ಸಿಗೆ ಹತ್ತಬೇಕೆಂದು ನಾನು ಹಾಗೆ ಹೇಳಲಿಲ್ಲ. ಈಗಾಗಲೇ ಅವರು ಮೂರು ಗಂಟೆ ಕಾಲ ಮಾತನಾಡಿದ್ದಾರೆ. ಇನ್ನು ಹೆಚ್ಚು ಕಾಲ ಮಾತನಾಡುವದಕ್ಕೆ ಬೇಕೆಂದು ಅವರು ಕೇಳಿಕೊಂಡಿದ್ದಾರೆ. ಚೆನ್ನಾಗಿ ಮಾತನಾಡುವವರಿಗೆ ಹೆಚ್ಚು ಕಾಲ ಕೊಡಬೇಕೆಂದು ನನಗೆ ಅನಿಸುತ್ತದೆ. ಅವರ ಹಾಗೆ ಮತ್ತೆ ಯಾರಾದರೂ ಹೆಚ್ಚು ಕಾಲ ಬೇಕೆಂದು ಕೇಳಿದ್ದರೆ ಕೊಡಬಹುದಾಗಿತ್ತು. ಅವರು ಅಭ್ಯಾಸ ಮಾಡುತ್ತಾರೆ, ಶ್ರೀ ಪುಟ್ಟಸ್ವಾಮಿಯವರು ಅಭ್ಯಾಸ ಮಾಡುವದಿಲ್ಲ ಎಂದು ನಾನು ಹೇಳಲಿಲ್ಲ. ಚೆನ್ನಾಗಿ ಮಾತನಾಡುವವರಿಗೆ ಸಾಧ್ಯವಿದ್ದರೆ ಹೆಚ್ಚು ಕಾಲ ಕೊಡಬಹುದು ಎಂದು ನನ್ನ ಅಭಿಪ್ರಾಯ. ಆಳವಾಗಿ ಈ ವಿಷಯವನ್ನು ಅಭ್ಯಾಸ ಮಾಡಿದ್ದೇವೆ, ತಮಗೆ ಹೆಚ್ಚು ಕಾಲ ಮಾತನಾಡಲು ಬೇಕು ಎಂದು ಕೇಳಿದವರೆಲ್ಲರಿಗೂ ಅವಕಾಶ ಕೊಡುತ್ತೇನೆ. ಈ ನಾಲ್ಕು ದಿವಸಗಳ ಅವಧಿಯಲ್ಲಿ ಎಲ್ಲರಿಗೂ ಒಂದೊಂದು ಗಂಟೆ ಮಾತನಾಡಲು ಅವಕಾಶ ಕೊಡುವುದು ಶಕ್ಯವಿಲ್ಲ. ಆದುದರಿಂದ ಈ ಪಕ್ಷ ಮತ್ತು ಆ ಪಕ್ಷ ಎಲ್ಲರೂ ತಮ್ಮ ತಮ್ಮೊಳಗೆ ಸೇರಿಕೊಂಡು ನಮ್ಮ ಪಕ್ಷದ ಸದಸ್ಯರುಗಳಲ್ಲಿ ಇಷ್ಟು ಜನ ಮಾತನಾಡುತ್ತಾರೆ ಎಂಬ ಒಂದು ನಿರ್ಣಯವನ್ನು ಮಾಡಿಕೊಂಡು ಬಂದರೆ, ಆಗ ಹೆಚ್ಚು ಕಾಲ ಮಾತನಾಡಲು ಅವಕಾಶ ಕೊಡುವದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಶಕ್ಯವಾಗುವದಿಲ್ಲ. ಆದುದರಿಂದ ಇದನ್ನು ಸದಸ್ಯರೆಲ್ಲರೂ ವಿಚಾರ ಮಾಡಬೇಕು. ಮಾತನಾಡುವವರು ಯಾರು ಯಾರು ಎಂಬುದನ್ನು ನಿರ್ಣಯಮಾಡಬೇಕು. ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸುವವರು ನಾಲ್ಕು ಜನ ಮಾತನಾಡಿದರೂ ಅಷ್ಟೇ ಇಪ್ಪತ್ತು ಜನ ಮಾತನಾಡಿದರೂ ಅಷ್ಟೇ. ಆದುದರಿಂದ ಒಂದು ಸರಿಯಾದ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಎ. ಭೀಮಪ್ಪ ನಾಯಕ್ (ಚಳ್ಳಕೆರೆ).—ಶನಿವಾರದವರೆಗೆ ಚರ್ಚೆಯ ಅವಧಿಯನ್ನು ಹೆಚ್ಚಿಸಬೇಕು. ಪ್ರತಿಯೊಬ್ಬ ಸದಸ್ಯರಿಗೂ ಮಾತನಾಡುವದಕ್ಕೆ 15 ನಿಮಿಷ ಅವಧಿಯ ಬಂಧನ ಹಾಕಿದರೆ ಬಹಳ ಕಷ್ಟವಾಗುತ್ತದೆ. ಇಷ್ಟು ಕಡಿಮೆ ಕಾಲಾವಕಾಶದಲ್ಲಿ ಮಾತನಾಡಿ ಅನೇಕ ವಿಷಯಗಳನ್ನು ಹೇಳುವದಕ್ಕಾಗುವುದಿಲ್ಲ. ಆದುದರಿಂದ 15 ನಿಮಿಷಗಳ ಕಾಲ ನಿರ್ಬಂಧ ಇರಕೂಡದು. ಪ್ರತಿಯೊಬ್ಬರಿಗೂ ಮಾತನಾಡಲು ಹೆಚ್ಚು ಕಾಲ ಕೊಡಬೇಕು. ಯಾರು ಯಾರಿಗೆ ಎಷ್ಟೆಷ್ಟು ಅವಧಿಯವರೆಗೆ ಮಾತನಾಡಲು ಅವಕಾಶ ಕೊಡಬೇಕೆಂಬುದನ್ನು ಅಧ್ಯಕ್ಷರ ವಿವೇಚನೆಗೆ ಬಿಡುತ್ತೇವೆ. ಶನಿವಾರದವರೆಗೆ ಎಂದರೆ ಒಂದು ವಾರ ಚರ್ಚೆ ನಡೆದರೆ ಸರಿಹೋಗುತ್ತದೆ. ಆದುದರಿಂದ ದಯವಿಟ್ಟು ಇದನ್ನು ಚರ್ಚೆ ಮಾಡುವದಕ್ಕೆ ಒಂದು ವಾರ ಅವಧಿಯನ್ನು ಇಟ್ಟುಕೊಳ್ಳಬೇಕೆಂದು ನಾನು ಹೇಳುತ್ತೇನೆ.

Sri J. B. MALLARADHYA (Nanjangud).—You were pleased to say that you would restrict the time. My first request to the Chair is that more time may be allotted for the discussion of this very important subject which has created more than ordinary interest throughout the entire State and even beyond the State. If possible, the Leader of the House and the Leader of the Opposition may come to an understanding and Government may allot a little more time, because we have been thinking and talking about this particular reform for quite a long time, at any rate for more than ten years. I am

(MR. SPEAKER)

difficulty. I am not free in this respect because the House has already accepted four days for discussion in this respect. If the House wants more time, naturally a gesture may be made and it will be discussed in the Business Advisory Committee and we will try to get a few days more. On the whole, let us be guided by the principle that we are restricted in time and we have to finish our discussion within the time allotted. I would fix the maximum as one hour and the minimum as half an hour in individual cases. Apart from that I would like the Hon'ble Members, I mean the parties concerned, to give me a list of the persons who are going to speak. But the list should be in relation to the time. Generally the list in the beginning is small and it goes on increasing. It should not be like that. You calculate the time available and the number of persons may be fixed with reference to that. I will stick up to it and I will see that it is carried through.

Now the House will rise and meet after half-an-hour.

The House adjourned for Lunch at Twenty-five Minutes past Three of the Clock and re-assembled at Fifty-five Minutes past Three of the Clock.

[MR. DEPUTY SPEAKER in the Chair]

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಭೂ ಸುಧಾರಣೆಯ ವಿಷಯದಲ್ಲಿ ತಾರೀಖು 19ನೆಯ ಅಕ್ಟೋಬರ್ 1957ರಲ್ಲಿ ನಾನು ಅರ್ಧ ಮಾತನಾಡಿ ಈಗ ಮುಂದುವರಿಸಬೇಕಾಗಿದೆ. ಆಗ್ಗೆ ಕೆಲವು ಮುಖ್ಯಾಂಶಗಳನ್ನು ಈ ಸಭೆಯ ಗಮನಕ್ಕೆ ತಂದೆ. ಭೂ ಸುಧಾರಣೆ ಇಡೀ ಪ್ರಪಂಚದಲ್ಲಿ ಯಾವಯಾವ ದೇಶಗಳಲ್ಲಿ ಯಾವಯಾವ ರೀತಿ ನಡೆಯುತ್ತಿದೆಯೋ ಆ ರೀತಿಯಿಂದ ನಮ್ಮ ಭರತ ಖಂಡ ಯಾವ ವಲಯಕ್ಕೆ ಸೇರಿದೆ ಎಂಬುದನ್ನು ಸೂಚನೆ ಮಾಡಿದೆ. ಅದಕ್ಕೆ ಭೂಸುಧಾರಣೆಯಲ್ಲಿ ಲ್ಯಾಂಡ್ ರಿಫಾರಮ್ಸ್ ಜೋನ್ ಎಂದು ಹೇಳಿದ್ದೇವೆ. ಇಲ್ಲಿ ಭೂ ಸುಧಾರಣೆಯನ್ನು ಮಾಡತಕ್ಕಂಥಾದ್ದರ ಅತ್ಯಗತ್ಯ ನಾನಾಕಾರಣಗಳಿಂದ ಕಂಡುಬಂದಿರುವುದರಿಂದ ಈ ಸುಧಾರಣೆಯನ್ನು ದೇಶದಾದ್ಯಂತ ಮಾಡಬೇಕೆಂದು ನಾವು ಮಾಡಿಕೊಂಡಿದ್ದೇವೆ. ಭಾರತಾದ್ಯಂತ ಈ ಭೂ ಸುಧಾರಣೆಯನ್ನು ಒಂದೇರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವೆ, ಇಲ್ಲವೆ ಎಂಬುದನ್ನು ಪರೀಕ್ಷೆ ಮಾಡಿ ಭಿನ್ನಭಿನ್ನವಾದ ಪರಿಸ್ಥಿತಿಗಳಿರುವ ಈ ದೇಶದಲ್ಲಿ ಇಡೀ ಭರತಖಂಡಕ್ಕೆ ಒಂದೇರೀತಿಯಾಗಿ ಅನ್ವಯವಾಗುವ ಒಂದೇಒಂದು ಭೂ ಸುಧಾರಣಾ ಕಾನೂನನ್ನು ತರುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಪ್ಲಾನಿಂಗ್ ಕಮಿಷನ್ನವರು ಮನಗಂಡು ಕೆಲವು ಮುಖ್ಯವಾದಂಥ ನೀತಿಗಳನ್ನು ಹಾಕಿ ಈ ಗುರಿ ಮುಟ್ಟುವುದಕ್ಕೆ ಆಯಾ ಸ್ಥಳಗಳಲ್ಲಿ, ಆಯಾ ದೇಶಗಳಲ್ಲಿ, ಅಲ್ಲಿಯ ಪರಿಸ್ಥಿತಿ, ಸನ್ನಿವೇಶ, ಸಂದರ್ಭಗಳನ್ನನುಸರಿಸಿ ಸುಧಾರಣೆಯನ್ನು ಮಾಡಬೇಕೆಂದು ಅವರು ಆದೇಶಕೊಟ್ಟರು.

4 P.M.

ಈ ಕಾರಣದಿಂದಲೇ ಇಂದು ಒಂದೊಂದು ಸಂಸ್ಥಾನದಲ್ಲಿ ಒಂದೊಂದು ಶಾಸನ ಮಾಡುತ್ತಾಇದ್ದೇವೆ. ಇಲ್ಲಿ ಮೈಸೂರಿನಲ್ಲಿ ಒಂದು ಶಾಸನವಿತ್ತು; ಬೊಂಬಾಯಿ ಪ್ರದೇಶದಲ್ಲಿ ಒಂದು ಶಾಸನವಿತ್ತು; ಹೈದರಾಬಾದು ಪ್ರದೇಶದಲ್ಲಿ ಒಂದು ಶಾಸನವಿತ್ತು; ಮದರಾಸು ಪ್ರಾಂತ್ಯದಲ್ಲಿ ಒಂದು ಶಾಸನವಿತ್ತು. ಕೊಡಗಿನಲ್ಲಿ ಇರಲಿಲ್ಲ. ಅಂದರೆ ಆಯಾ ಪ್ರಾಂತ್ಯದಲ್ಲಿ ಆಯಾ ಲೆಜಿಸ್ಲೇಚರುಗಳು ಕಲೆತು ಚರ್ಚೆಮಾಡಿ ಅಲ್ಲಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ, ಸ್ಥಿತಿಗತಿಗಳನ್ನು ನೋಡಿ ಏನು ಏನು ಶಾಸನಗಳು ಬೇಕೋ ಅವುಗಳನ್ನು ಮಾಡಿದ್ದರು. ಈ ಹೊಸ ರಾಜ್ಯ ಸ್ಥಾಪಿತವಾಗಿ ಈ ಐದು ಪ್ರದೇಶಗಳು ಕೂಡಾ ಇಲ್ಲಿ ಒಂದುಗೂಡಿದವು. ಈ ಐದು ಪ್ರದೇಶಗಳೂ ಒಂದುಗೂಡಿದ್ದಕ್ಕೂ, ಭಾಷೆಯೆ ಕಾರಣವಾದುದು. ಈ ಭಾಷಾ ಆಧಾರದ ಮೇಲೆ ಈ ಒಂದು ಪ್ರಾಂತ್ಯವಾಯಿತು. ಈ ಐದು ಸ್ಥಾನಗಳೂ ಏಕರೀತಿಯ ಶಾಸನ ಮಾಡತಕ್ಕ ರೀತಿಯಲ್ಲಿ ಇದೆ ಎಂದರೆ ಒಪ್ಪಲಿಕ್ಕಾಗುವುದಿಲ್ಲ. ಹಾಗೆ ಇದ್ದಪಕ್ಷದಲ್ಲಿ ಇಂಡಿಯಾ ಸರ್ಕಾರದವರು ಮತ್ತು ಪ್ಲಾನಿಂಗ್ ಕಮಿಷನ್ನಿನವರು ಒಂದೇ ಶಾಸನವನ್ನು ಇಡೀ ದೇಶಕ್ಕೆ ಹಾಕಬೇಕಾಗಿತ್ತು. ಅದು ಸಾಧ್ಯವಿಲ್ಲ. ಈಗ ನಾನು ಕೆಲವು ಅಂಕಿಅಂಶಗಳನ್ನು ತಮ್ಮ ಮುಂದೆ ಇಡುತ್ತೇನೆ, ಅದರಿಂದ ತಮಗೆ ಗೊತ್ತಾಗುತ್ತದೆ. ಬಿಜಾಪುರ, ಧಾರವಾಡ, ನಾರ್ತ್ ಕೆನರಾ ಮತ್ತು ಬೆಳಗಾಂನಲ್ಲಿರುವ ಪರಿಸ್ಥಿತಿಗೂ, ಹಳೆಯ ಮೈಸೂರಿನಲ್ಲಿ ಇರುವ ಪರಿಸ್ಥಿತಿಗೂ, ಹೈದರಾಬಾದಿನಲ್ಲಿರುವ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಇಲ್ಲದ ಪಕ್ಷದಲ್ಲಿ ಈ ಶಾಸನದಲ್ಲಿ ತೀವ್ರವಾದ ಬದಲಾವಣೆಮಾಡುವುದಕ್ಕೆ ಕಾರಣವಿರಲಿಲ್ಲ. ಈ ಕಾರಣದಿಂದ ಸರ್ಕಾರದವರು ಜತ್ತಿ ಸಮಿತಿಯನ್ನು ನೇಮಕಮಾಡಿದರು. ಈ ಭೂ ಸುಧಾರಣೆಯ ಅಗತ್ಯವನ್ನು ನೋಡುವಾಗ, ಮೊಟ್ಟಮೊದಲನೆಯ ಅವಶ್ಯಕತೆ ಹೆಚ್ಚು ಉತ್ಪಾದನೆ. ಉತ್ಪಾದನೆ ಹೆಚ್ಚಿದಹೊರತು ಯಾವ ಭೂ ಸುಧಾರಣೆ ಮಾಡಿದರೂ ಕೂಡ ಅದು ಭೂ ಸುಧಾರಣೆಯಲ್ಲ. ಉತ್ಪಾದನೆಯ ಅಂಕಿಅಂಶಗಳನ್ನು ತೆಗೆದುಕೊಂಡರೆ, 1947ನೆಯ ಇಸವಿಯಿಂದ ಇಡೀ ಭರತಖಂಡದಲ್ಲೂ ಹಾಗೂ ಎಲ್ಲಾ ಪ್ರದೇಶಗಳಲ್ಲೂ ಕೂಡ ಉತ್ಪಾದನೆ ಕಡಮೆಯಾಗುತ್ತಿದೆಎಂದು ಗೊತ್ತಾಗುತ್ತದೆ. ಭೂ ಸುಧಾರಣೆಮಾಡುವಾಗ ಜಮೀನ್ದಾರಿ ಪದ್ಧತಿಯನ್ನು ರದ್ದುಮಾಡಿದೆ; ಇಂಟರ್‌ಮಿಡಿಯರಿಗಳು, ಇನಾಂದಾರರು ಮತ್ತು ಗುತ್ತಿಗೆದಾರರನ್ನು ವಜಾ ಮಾಡಿದೆ; ಅನೇಕ ಪ್ರಾಂತ್ಯಗಳಲ್ಲಿ ಶಾಸನಗಳನ್ನು ಮಾಡಿ ಇವುಗಳನ್ನು ಜಾರಿಗೆ ತಂದಿದ್ದಾರೆ. ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿ ದೊಡ್ಡದೊಡ್ಡ

you were pleased to say that Sri H. M. Channabasappa is to be given one hour while for others only 15 minutes will be given. I do not know what the rationale of the ruling is.

Mr. SPEAKER.—If the House wants that Sri Channabasappa should be given only 15 minutes, I have no objection. As all of us know, he is a member who has studied this subject.

***ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).**—ಸ್ವಾಮಿ, ಇದೊಂದು ಬಹಳ ಮುಖ್ಯವಾದ ವಿಚಾರವನ್ನು ಚರ್ಚೆ ಮಾಡಬೇಕಾಗಿದೆ. ಮೂರು ನಾಲ್ಕು ದಿವಸ ಚರ್ಚೆ ಮಾಡಬೇಕಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಇದನ್ನೇ ಚರ್ಚೆ ಮಾಡುವುದಕ್ಕೆ ಸರಕಾರ ಆರು ದಿವಸಗಳ ಅವಕಾಶ ಮಾಡಿಕೊಟ್ಟಿದ್ದಾರೆ. ಹಾಗೆ 20 ದಿನಗಳನ್ನು ಚರ್ಚೆಗೆ ಕೊಟ್ಟರೂ ಕೂಡ ಈ ಸಭೆಯಲ್ಲಿ ಅದು ಮುಗಿಯುವುದಿಲ್ಲ. ಅಷ್ಟು ದಿವಸಗಳನ್ನು ನಾವು ಕೇಳುವದಿಲ್ಲ, ಪ್ರತಿಯೊಬ್ಬ ಸದಸ್ಯನಿಗೆ ಮಾತನಾಡಲು ಅಧ್ಯಕ್ಷರು ಕೊಡಬೇಕೆಂದಿರುವ 15 ನಿಮಿಷಗಳ ಅವಧಿಯಲ್ಲಿ ಇಂಥ ಜಟಿಲ ಪ್ರಶ್ನೆಯನ್ನು ಚರ್ಚೆಮಾಡಿ ಅಭಿಪ್ರಾಯ ವ್ಯಕ್ತಪಡಿಸುವುದು ಒಂದು ಕಠಿಣ ಸಮಸ್ಯೆ. ಯಾವರೀತಿಯಾಗಿ ಅಧ್ಯಕ್ಷರು ಕಾಲ ನಿಗದಿ ಮಾಡಿದ್ದಾದರೂ ನಾವು ಅದಕ್ಕೆ ಒಪ್ಪಿಕೊಳ್ಳಬೇಕಾಗಿದೆ. ಹಿಂದಕ್ಕೆ ಈ ಟೆನನ್ಸಿ ಬಿಲ್ಲು ಸಭೆಯ ಮುಂದೆ ಚರ್ಚೆಗೆ ಬಂದಾಗ ಮಾನ್ಯ ಸ್ನೇಹಿತರಾದ ಶ್ರೀ ಚನ್ನಬಸಪ್ಪನವರು——ಅವರು ಆಗ್ಗೆ ಮಂತ್ರಿಯಾಗಿರಲಿಲ್ಲ——ಎರಡು ದಿನ ಮಾತನಾಡಿದರು. ಆ ಕಾಲದಲ್ಲಿ ಈ ಬಿಲ್ಲು ನಮ್ಮ ಕೈಗೆ ಸಿಕ್ಕಲಿಲ್ಲ. ಕಳೆದ ಅಧಿವೇಶನದಲ್ಲಿಯೂ ಅವರು ಮಾತನಾಡಿದ್ದಾರೆ. He performed a miracle. ಅವರಿಗೆ ಈಗ ಒಂದು ಗಂಟೆ ಮಾತನಾಡಲು ಅವಕಾಶಕೊಟ್ಟಿದ್ದೀರಿ. ಶ್ರೀ ಚನ್ನಬಸಪ್ಪನವರ ಬಗ್ಗೆ ಮಾನ್ಯ ಸ್ನೇಹಿತರಾದ ಶ್ರೀ ಭೀಮಪ್ಪ ನಾಯಕರು ವ್ಯಕ್ತಪಡಿಸಿದ್ದು ಬಹಳ ಅಮೂಲ್ಯವಾದ ಅಭಿಪ್ರಾಯವಾಗಿದೆ. ಆ ಅಭಿಪ್ರಾಯಕ್ಕೆ ಉತ್ತರ ಕೊಡಬೇಕು ಎಂದು ನಾವು ಕಾದಿದ್ದೇವೆ. ಇಲ್ಲಿಯವರೆಗೆ ಮೂರು ದಿನಗಳ ಚರ್ಚೆಯಾಯಿತು. ಶ್ರೀ ಚನ್ನಬಸಪ್ಪನವರು ಮಾತ್ರ ಈ ವಿಷಯವಾಗಿ ತಯಾರಾಗಿ ಓದಿಕೊಂಡು ಬರುತ್ತಾರೆ ಎಂದು ತಾವು ಹೇಳಿದಿರಿ. ಆದರೆ ನಾವೂ ಸಹ ಕಷ್ಟಪಟ್ಟು ಓದಿಕೊಂಡು ಬರುತ್ತೇವೆ ಎಂಬುದನ್ನು ತಾವು ಇನ್ನು ಮೇಲಾದರೂ ಸಹ ತಿಳಿದ ಕೊಳ್ಳಬೇಕು ಸ್ವಾಮಿ. ನಮಗೂ ಓದುವ ಅಭ್ಯಾಸವಿದೆ. ಅವರಿಗೆ ಒಂದು ಗಂಟೆ ಮಾತನಾಡಲು ಅವಕಾಶ ಕೊಡುವುದಾದರೆ ನಮಗೆ 15 ನಿಮಿಷ ಮಾತ್ರ ಏಕೆ? ನಮಗೂ ಸಹ ಒಂದು ಗಂಟೆ ಮಾತನಾಡುವ ಯೋಗ್ಯತೆಯಿದೆ. ಅಧ್ಯಕ್ಷರು ಹೇಳಿದ್ದಕ್ಕೆ ಟೀಕೆ ಮಾಡುವ ಯೋಗ್ಯತೆ ನನಗೆ ಇಲ್ಲ. ತಾವು ಹಾಗೆ ತಿಳಿದುಕೊಂಡಿರುವುದನ್ನು ಇನ್ನು ಮೇಲಾದರೂ ಬದಲಿಸಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಯಾರದೇ ಮನಸ್ಸಿಗೆ ಹತ್ತಬೇಕೆಂದು ನಾನು ಹಾಗೆ ಹೇಳಲಿಲ್ಲ. ಈಗಾಗಲೇ ಅವರು ಮೂರು ಗಂಟೆ ಕಾಲ ಮಾತನಾಡಿದ್ದಾರೆ. ಇನ್ನು ಹೆಚ್ಚು ಕಾಲ ಮಾತನಾಡುವದಕ್ಕೆ ಬೇಕೆಂದು ಅವರು ಕೇಳಿಕೊಂಡಿದ್ದಾರೆ. ಚೆನ್ನಾಗಿ ಮಾತನಾಡುವವರಿಗೆ ಹೆಚ್ಚು ಕಾಲ ಕೊಡಬೇಕೆಂದು ನನಗೆ ಅನಿಸುತ್ತದೆ. ಅವರ ಹಾಗೆ ಮತ್ತೆ ಯಾರಾದರೂ ಹೆಚ್ಚು ಕಾಲ ಬೇಕೆಂದು ಕೇಳಿದ್ದರೆ ಕೊಡಬಹುದಾಗಿತ್ತು. ಅವರು ಅಭ್ಯಾಸ ಮಾಡುತ್ತಾರೆ, ಶ್ರೀ ಪುಟ್ಟಸ್ವಾಮಿಯವರು ಅಭ್ಯಾಸ ಮಾಡುವದಿಲ್ಲ ಎಂದು ನಾನು ಹೇಳಲಿಲ್ಲ. ಚೆನ್ನಾಗಿ ಮಾತನಾಡುವವರಿಗೆ ಸಾಧ್ಯವಿದ್ದರೆ ಹೆಚ್ಚು ಕಾಲ ಕೊಡಬಹುದು ಎಂದು ನನ್ನ ಅಭಿಪ್ರಾಯ. ಆಳವಾಗಿ ಈ ವಿಷಯವನ್ನು ಅಭ್ಯಾಸ ಮಾಡಿದ್ದೇವೆ, ತಮಗೆ ಹೆಚ್ಚು ಕಾಲ ಮಾತನಾಡಲು ಬೇಕು ಎಂದು ಕೇಳಿದವರೆಲ್ಲರಿಗೂ ಅವಕಾಶ ಕೊಡುತ್ತೇನೆ. ಈ ನಾಲ್ಕು ದಿವಸಗಳ ಅವಧಿಯಲ್ಲಿ ಎಲ್ಲರಿಗೂ ಒಂದೊಂದು ಗಂಟೆ ಮಾತನಾಡಲು ಅವಕಾಶ ಕೊಡುವುದು ಶಕ್ಯವಿಲ್ಲ. ಆದುದರಿಂದ ಈ ಪಕ್ಷ ಮತ್ತು ಆ ಪಕ್ಷ ಎಲ್ಲರೂ ತಮ್ಮ ತಮ್ಮೊಳಗೆ ಸೇರಿಕೊಂಡು ನಮ್ಮ ಪಕ್ಷದ ಸದಸ್ಯರುಗಳಲ್ಲಿ ಇಷ್ಟು ಜನ ಮಾತನಾಡುತ್ತಾರೆ ಎಂಬ ಒಂದು ನಿರ್ಣಯವನ್ನು ಮಾಡಿಕೊಂಡು ಬಂದರೆ, ಆಗ ಹೆಚ್ಚು ಕಾಲ ಮಾತನಾಡಲು ಅವಕಾಶ ಕೊಡುವದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಶಕ್ಯವಾಗುವದಿಲ್ಲ. ಆದುದರಿಂದ ಇದನ್ನು ಸದಸ್ಯರೆಲ್ಲರೂ ವಿಚಾರ ಮಾಡಬೇಕು, ಮಾತನಾಡುವವರು ಯಾರು ಯಾರು ಎಂಬುದನ್ನು ನಿರ್ಣಯಮಾಡಬೇಕು. ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸುವವರು ನಾಲ್ಕು ಜನ ಮಾತನಾಡಿದರೂ ಅಷ್ಟೇ ಇಪ್ಪತ್ತು ಜನ ಮಾತನಾಡಿದರೂ ಅಷ್ಟೇ. ಆದುದರಿಂದ ಒಂದು ಸರಿಯಾದ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಎ. ಭೀಮಪ್ಪ ನಾಯಕ್ (ಚಳ್ಳಕೆರೆ).—ಶನಿವಾರದವರೆಗೆ ಚರ್ಚೆಯ ಅವಧಿಯನ್ನು ಹೆಚ್ಚಿಸಬೇಕು. ಪ್ರತಿಯೊಬ್ಬ ಸದಸ್ಯರಿಗೂ ಮಾತನಾಡುವದಕ್ಕೆ 15 ನಿಮಿಷ ಅವಧಿಯ ಬಂಧನ ಹಾಕಿದರೆ ಬಹಳ ಕಷ್ಟವಾಗುತ್ತದೆ. ಇಷ್ಟು ಕಡಿಮೆ ಕಾಲಾವಕಾಶದಲ್ಲಿ ಮಾತನಾಡಿ ಅನೇಕ ವಿಷಯಗಳನ್ನು ಹೇಳುವದಕ್ಕಾಗುವುದಿಲ್ಲ. ಆದುದರಿಂದ 15 ನಿಮಿಷಗಳ ಕಾಲ ನಿರ್ಬಂಧ ಇರಕೂಡದು. ಪ್ರತಿಯೊಬ್ಬರಿಗೂ ಮಾತನಾಡಲು ಹೆಚ್ಚು ಕಾಲ ಕೊಡಬೇಕು. ಯಾರು ಯಾರಿಗೆ ಎಷ್ಟೆಷ್ಟು ಅವಧಿಯವರೆಗೆ ಮಾತನಾಡಲು ಅವಕಾಶ ಕೊಡಬೇಕೆಂಬುದನ್ನು ಅಧ್ಯಕ್ಷರ ವಿವೇಚನೆಗೆ ಬಿಡುತ್ತೇವೆ. ಶನಿವಾರದವರೆಗೆ ಎಂದರೆ ಒಂದು ವಾರ ಚರ್ಚೆ ನಡೆದರೆ ಸರಿಹೋಗುತ್ತದೆ. ಆದುದರಿಂದ ದಯವಿಟ್ಟು ಇದನ್ನು ಚರ್ಚೆ ಮಾಡುವದಕ್ಕೆ ಒಂದು ವಾರ ಅವಧಿಯನ್ನು ಇಟ್ಟುಕೊಳ್ಳಬೇಕೆಂದು ನಾನು ಹೇಳುತ್ತೇನೆ.

Sri J. B. MALLARADHYA (Nanjangud).—You were pleased to say that you would restrict the time. My first request to the Chair is that more time may be allotted for the discussion of this very important subject which has created more than ordinary interest throughout the entire State and even beyond the State. If possible, the Leader of the House and the Leader of the Opposition may come to an understanding and Government may allot a little more time, because we have been thinking and talking about this particular reform for quite a long time, at any rate for more than ten years. I am

(SRI J. B. MALLARADHYA)

afraid even six days will not be sufficient. Left to me, I would suggest that one week may be allotted. That is No. 1.

No. 2 : Regarding allotment of time most of us are very anxious to speak. As suggested by the Speaker, it is much better that we in the opposition and they on that side both come to an understanding about the number of speakers. With regard to the time to be taken by each speaker, you may restrict it. Even granting that an understanding is likely to be reached, I am afraid that the time fixed, that is, four days, is grossly inadequate and at any rate has no bearing on the importance of this subject. In view of this, I would like this matter to be considered by the Leader of the House and the Government to see that a little more time may be allotted. Our leader is not in Bangaloae to-day; he is likely to come back this evening. We on our part shall come to a decision and give a list of persons who are to speak and indicate the time required by us and you may take a decision.

ಶ್ರೀ ಕೆ. ಹನುಮಂತಯ್ಯ (ರಾಮನಗರಂ).—ಶ್ರೀ ಮಲ್ಲಾರಾಧ್ಯರು ಸಭೆಯ ಮುಂದಿಟ್ಟ ಪ್ರಾರ್ಥನೆಯನ್ನು ನಾನು ಪುಷ್ಟೀಕರಿಸುತ್ತೇನೆ. ತಮಗೇ ಗೊತ್ತಿರುವ ಹಾಗೆ, ಈ ಪ್ರಶ್ನೆಯ ವಿಷಯದಲ್ಲಿ ಇಂಡಿಯಾ ದೇಶದಲ್ಲಿ ದೊಡ್ಡ ಚರ್ಚೆ ಎದ್ದಿದೆ. ಇದು ಪಾರ್ಟಿಯ ವಿಷಯವಾದರೂ ಕೂಡ ಎಲ್ಲ ಸದಸ್ಯರೂ ಕೂಲಂಕಷವಾಗಿ ಯೋಚನೆ ಮಾಡಬೇಕಾದದ್ದಾಗಿದೆ. ಬಹುಶಃ ಇಷ್ಟು ದೊಡ್ಡ ವಿವಾದಯುತವಾದ ಸಮಸ್ಯೆ ಇದುವರೆಗೂ ಹುಟ್ಟಿಲ್ಲವೆಂದು ಹೇಳಬಹುದು. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ಹಿಡುವಳಿಗಳ ಮೇಲೆ ಬೇಕಾದರೆ ಸೀಲಿಂಗ್ ಹಾಕುವ ಪ್ರಯತ್ನ ಮಾಡಿದರೂ ಮಾಡಲಿ, ತಾವು ಮಾತ್ರ 'time' ಮೇಲೆ ಸೀಲಿಂಗ್ ಹಾಕಕೂಡದೆಂದು ನನ್ನ ಪ್ರಾರ್ಥನೆ. ಇದಲ್ಲದೆ ಸಭಾ ಸದಸ್ಯರ ಹಕ್ಕು, ಬಾಧ್ಯತೆಗಳನ್ನು ಲೆಜಿಸ್ಲೆಟಿವ್ ಕೌನ್ಸಿಲ್‌ನಲ್ಲಿ ಅಲ್ಲಿನ ಸದಸ್ಯರ ಹಕ್ಕು ಬಾಧ್ಯತೆಗಳನ್ನು ಎಷ್ಟುಮಟ್ಟಿಗೆ ಎತ್ತಿ ಹಿಡಿಯುತ್ತಾರೋ ಅಷ್ಟರಮಟ್ಟಿಗಾದರೂ ತಾವಿಲ್ಲಿ ಎತ್ತಿ ಹಿಡಿಯುತ್ತೀರೆಂದು ನಂಬಿದ್ದೇನೆ. ಅಲ್ಲಿ time limit ಎಂಬುದೇ ಇಲ್ಲ. ಪ್ರತಿಯೊಬ್ಬರೂ ಈ ವಿಚಾರದಲ್ಲಿ ಮಾತನಾಡಿದ್ದಾರೆ. ಅದೇ ರೀತಿ ಇಲ್ಲಿಯೂ ಅವಕಾಶ ಕೊಡಬೇಕಾದದ್ದು ಬಹಳ ಮುಖ್ಯ. ಪ್ರತಿಯೊಂದು ಕಾನ್‌ಸ್ಟಿಟ್ಯೂಯನ್‌ಸಿಯವರೂ ಇದನ್ನು ಆಲೋಚನೆಮಾಡಬೇಕಾಗಿದೆ. ಆದ್ದರಿಂದ ಈ ವಿಷಯದಲ್ಲಿ ಕೊನೆಗೆ ಏನೇ ತೀರ್ಮಾನವಾದರೂ ಉಭಯ ಪಕ್ಷದವರಿಗೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಪೂರ್ಣವಾಗಿ ವ್ಯಕ್ತಪಡಿಸುವುದಕ್ಕೆ ಅವಕಾಶ ಸಿಕ್ಕಿತು ಎಂದು ಹೇಳುವಹಾಗೆ ತಾವು ಮಾಡಬೇಕೆಂದು ಹೇಳುತ್ತೇನೆ.

Sri M. P. PATIL.—As reference has been made to Government, I want to make one point clear. It is not Government which has fixed the number of days; it is the Business Advisory Committee which has fixed four days for discussion of this Report. Government want to leave it to Hon'ble Members, to the Speaker and the Business Advisory Committee as to how much time should be devoted to the discussion of this Report. However, I want to point out that this Report was, I think, discussed for two days at the last session and four days have been allotted now. In addition to this if any more time is to be allotted I have no objection. I also wish to point out another thing that, after the discussion, a Bill has to be drafted and placed before the Hon'ble House and we shall have to enact the Bill before June and also frame rules, as the Tenancy (Amendment) (Suspension of Provisions) Act has been extended only up to June. These are the points which I wanted to bring to the notice of the House. Government have absolutely no objection for fixing any time for discussion of this report.

*ಶ್ರೀ ಕೆ. ಎಫ್. ಪಾಟೀಲ್ (ರಾಣಿಬೆನ್ನೂರು).—ಅಧ್ಯಕ್ಷರೇ, ಜತ್ತಿ ಸಮಿತಿಯು ನೇಮಕವಾದಮೇಲೆ, ಅವರು ಪ್ರಶ್ನಾವಳಿಯೊಂದನ್ನು ಹೊರಡಿಸಿ ಎಲ್ಲ ಸದಸ್ಯರಿಗೂ ಮತ್ತು ಮಹಾಜನರಿಗೂ ಭೂಸುಧಾರಣೆಯ ಸಂಬಂಧದಲ್ಲಿ ಅಭಿಪ್ರಾಯವನ್ನು ಸಲ್ಲಿಸುವ ಅವಕಾಶ ಕೊಟ್ಟು ಅವುಗಳೆಲ್ಲವನ್ನೂ ಸಮಿತಿಯವರು ಕ್ರೋಡೀಕರಿಸಿದ್ದಾರೆ. ಇದಾದನಂತರ ವೃತ್ತಪತ್ರಿಕೆಗಳಲ್ಲೂ ಮತ್ತು ಬೇರೆ ಬೇರೆ ವೇದಿಕೆಗಳಲ್ಲೂ ಬೇಕಾದಷ್ಟು ಈ ಸಮಸ್ಯೆ ಚರ್ಚೆಯಾಗುತ್ತಿದೆ. ಇಷ್ಟೆಲ್ಲಾ ಆಗಿರುವುದಲ್ಲದೆ, ಹಿಂದಿನ ಸಭೆಯಲ್ಲಿ ಎರಡು ದಿವಸ ಈ ವಿಷಯ ಚರ್ಚೆಯಾಗಿದೆ. ಈಗಲೂ ಕೂಡ ನಾಲ್ಕು ದಿವಸಗಳನ್ನು Business Advisory ಕಮಿಟಿಯವರು ಈ ಮಸೂದೆಯ ಚರ್ಚೆಯ ಬಗ್ಗೆ allot ಮಾಡಿದ್ದಾರೆ. ಇದರ ಮೇಲೆ, ಸದಸ್ಯರುಗಳು ಹೇಳುವಂತೆ, ಒಂದು ವಾರವಲ್ಲ ಆರು ತಿಂಗಳು ಅವಕಾಶಕೊಟ್ಟರೂ ಮಾತನಾಡುವವರಿದ್ದಾರೆ. ಆದರೆ ಹಾಲಿ ನಮ್ಮ ಮುಂದಿರತಕ್ಕ ಸಮಯವನ್ನು ಲಕ್ಷ್ಯಕ್ಕೆ ತಗೆದುಕೊಂಡರೆ—ಈಗಾಗಲೇ ಜತ್ತಿ ಸಮಿತಿಯನ್ನು ನೇಮಿಸಿದಮೇಲೆ ಇದುವರೆಗೂ ಭೂಸುಧಾರಣೆಯ ಬಿಲ್ಲನ್ನು ತರುವುದಕ್ಕಾಗದೆ ಎರಡು ಸಲ ಆರ್ಡಿನೆನ್ಸ್ ಹೊರಡಿಸಬೇಕಾಗಿ ಬಂದಿದೆ. ಬರುವ ಜೂನ್ ತಿಂಗಳಿನೊಳಗಾಗಿ ಈ ಸಮಸ್ಯೆಯ ಮೇಲೆ ಬಂದಿರುವ ಈ ಬಿಲ್ಲನ್ನು ಪೂರಾ ಪೂರಾ ಚರ್ಚೆಮಾಡಿ, ಕೌನ್ಸಿಲ್‌ನಲ್ಲಿಯೂ ಪರಿಗಣಿಸಲ್ಪಟ್ಟು, ಅನಂತರ ಪ್ರೆಸಿಡೆಂಟರ ಒಪ್ಪಿಗೆಗೆ ಕಳುಹಿಸಿ, ಅದಾದಮೇಲೆ ರೂಲ್ಸ್ ತಯಾರುಮಾಡಿ ಜಾರಿಗೆತರಲು ಜೂನ್ಒಳಗೆ ಸಾಧ್ಯವಾಗುತ್ತದೆಯೇ ಎಂಬುದನ್ನು

ಲಕ್ಷ್ಯದಲ್ಲಿಟ್ಟುಕೊಂಡು ನಮ್ಮ ಕಾರ್ಯಕ್ರಮಗಳನ್ನು ಸರಿಯಾಗಿ ಅಳವಡಿಸಿಕೊಳ್ಳದೆಇದ್ದರೆ ಪುನಃ ಒಂದು ಆರ್ಡಿನೆನ್ಸ್ ಹೊರಡಿಸಬೇಕಾದೀತು. ಈ ದೃಷ್ಟಿಯಿಂದ ನಾವು ಹೇಳತಕ್ಕ ವಿಷಯಗಳನ್ನು ಸಂಕ್ಷೇಪವಾಗಿ ಹೇಳಿ, ಪ್ರತ್ಯಕ್ಷವಾಗಿ ಬಿಲ್ ನಮ್ಮ ಮುಂದೆ ಬಂದಾಗ ಬೇಕಾದಷ್ಟು ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ಈಗ ಮಾಡುವ ಸಾಮಾನ್ಯ ಚರ್ಚೆ ಏನಿದ್ದರೂ ಆ ಬಿಲ್ಲನ್ನು draft ಮಾಡುವುದಕ್ಕೆ ಅನುಕೂಲವಾಗುತ್ತದೆ ಅಷ್ಟೆ. ಆದ್ದರಿಂದ ಈ ಸಂದರ್ಭದಲ್ಲಿ ಹೆಚ್ಚಿಗೆ ಕಾಲಾವಕಾಶ ಕೊಡುವುದು ಅನವಶ್ಯಕವೆಂದು ನಾನು ತಿಳಿಸಬಯಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೃಷ್ಣರಾಜನಗರ).—ಅಧ್ಯಕ್ಷರೇ, ಇದು ನಮ್ಮ ದೇಶದಲ್ಲಿ ಸ್ಥಿರ ಆಸ್ತಿಯ ವಿಚಾರದಲ್ಲಿ ವಂಶ ಪಾರಂಪರ್ಯವಾಗಿ ಬರತಕ್ಕ ಒಂದು ಹಕ್ಕಿಗೆ ಧಕ್ಕೆ ತರುವಂಥಾದ್ದಾಗಿದ್ದು, ಆ ಬಗ್ಗೆ ಒಂದು ಕಾನೂನು ರಚಿಸುವಂತಹದಾದ್ದರಿಂದ ಈ ವಿಷಯದಲ್ಲಿ ನಾವು ದೀರ್ಘವಾಗಿ ಚರ್ಚೆಮಾಡಬೇಕಾಗಿದೆ. ಹತ್ತು ದಿವಸಗಳಾದರೂ ಇದಕ್ಕೆ ಬೇಕು. ಮಾನ್ಯ ಮಿತ್ರರು ಬೇಗಮಾಡಿ ಮುಗಿಸಬೇಕೆಂದು ಹೇಳಿದರು. ಅಷ್ಟು ಆತುರ ಪಡಿಸುವ ಕಾರಣವಿಲ್ಲ. ಜೂನ್ ತಿಂಗಳಿನಲ್ಲಿ ಅಲ್ಲದಿದ್ದರೆ ಅಕ್ಟೋಬರಿನಲ್ಲಿ ಬಿಲ್‌ಮಾಡಲಿ, ಅಂತೂ ಎಲ್ಲ ಸದಸ್ಯರಿಗೂ ಅವಕಾಶಕೊಡಬೇಕೆಂದು ನಾನು ಹೇಳುತ್ತೇನೆ.

Sri J. B. Mallaradhya has raised a pertinent point, supported by Sri K. Hanumanthaiya also. The issue before us is of such great importance for the people that it is desirable that all view-points are put before the House. We may appreciate and either convert or be converted. As far as possible we want a good Bill to be framed in the interest of the country. We have already adverse economy. Let us not have a hurried legislation. Let all people who have differences of opinion place their view-points before this House. Let us take stock of all those views and then come finally to some decision. I appeal to the Chair not to put any ceiling or maximum limit, as the Hon'ble Member Sri Hanumanthaiya put it, on members to speak. After all it is within your discretion to rule out if anything is irrelevant and call the member to order if he speaks irrelevantly. Five more days may be allotted and I even go to the extent of saying that if the House feels I see no reason why adequate time for every member on this important subject should not be given.

I thank you for the privilege you have given me and I would appeal to you to give me ample time and similarly to all members of the House.

Sri Kadidal MANJAPPA (Sringeri).—The question before us is a very important one touching the interests of nearly 75 per cent of the people in the State. Many members are anxious to express their views on the subject. If, as suggested by the Hon'ble Member Sri Channabasappa, no time limit is fixed, a few people will speak for two days and some more for three days. I am of the view that there should be some restriction on time. I think half an hour is sufficient for each member. Since many members are anxious to express their views, Government may think of extending the time by two days at least.

Sri MAHMOOD SHARIFF.—I submit, Sir, that so far as this Report is concerned, it is going to affect important social aspects of our society. Therefore, it seems to me that ample time may be given to us. To say that ample time means one hour and all that, I do not think it is all right. I would request the Government to extend the time limit at least by two or three days.

Sri M. C. NARASIMHAN (Kolar Gold Fields).—Sir, there should be equality of treatment in this matter. You called upon Sri H. M. Channabasappa and gave him one hour. Others also should be given the same treatment. He has already represented the view-point of the landlords.

(*Sri H. M. Channabasappa rose*)

Mr. SPEAKER.—Let us not quarrel about it.

Sri M. C. NARASIMHAN.—On the other side, there may be some views which are quite contrary to the views of Sri Channabasappa so far as I know. Looking at the discussion in the Council, Members representing the views of the opposite side were in a minority. We should have an equal footing with respect to whatever time is allotted.

Mr. SPEAKER.—So far as time is concerned, at present, I am not free to increase the time. Four days have been allotted by the Business Advisory Committee whose report has been accepted by the House. That is the

(MR. SPEAKER)

difficulty. I am not free in this respect because the House has already accepted four days for discussion in this respect. If the House wants more time, naturally a gesture may be made and it will be discussed in the Business Advisory Committee and we will try to get a few days more. On the whole, let us be guided by the principle that we are restricted in time and we have to finish our discussion within the time allotted. I would fix the maximum as one hour and the minimum as half an hour in individual cases. Apart from that I would like the Hon'ble Members, I mean the parties concerned, to give me a list of the persons who are going to speak. But the list should be in relation to the time. Generally the list in the beginning is small and it goes on increasing. It should not be like that. You calculate the time available and the number of persons may be fixed with reference to that. I will stick up to it and I will see that it is carried through.

Now the House will rise and meet after half-an-hour.

The House adjourned for Lunch at Twenty-five Minutes past Three of the Clock and re-assembled at Fifty-five Minutes past Three of the Clock.

[MR. DEPUTY SPEAKER in the Chair]

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಭೂ ಸುಧಾರಣೆಯ ವಿಷಯದಲ್ಲಿ ತಾರೀಖು 19ನೆಯ ಅಕ್ಟೋಬರ್ 1957ರಲ್ಲಿ ನಾನು ಅರ್ಧ ಮಾತನಾಡಿ ಈಗ ಮುಂದುವರಿಸಬೇಕಾಗಿದೆ. ಆಗ್ಗೆ ಕೆಲವು ಮುಖ್ಯಾಂಶಗಳನ್ನು ಈ ಸಭೆಯ ಗಮನಕ್ಕೆ ತಂದೆ. ಭೂ ಸುಧಾರಣೆ ಇಡೀ ಪ್ರಪಂಚದಲ್ಲಿ ಯಾವಯಾವ ದೇಶಗಳಲ್ಲಿ ಯಾವಯಾವ ರೀತಿ ನಡೆಯುತ್ತಿದೆಯೋ ಆ ರೀತಿಯಿಂದ ನಮ್ಮ ಭರತಖಂಡ ಯಾವ ವಲಯಕ್ಕೆ ಸೇರಿದೆ ಎಂಬುದನ್ನು ಸೂಚನೆ ಮಾಡಿದೆ. ಅದಕ್ಕೆ ಭೂಸುಧಾರಣೆಯಲ್ಲಿ ಲ್ಯಾಂಡ್ ರಿಫಾರಮ್ಸ್ ಜೋನ್ ಎಂದು ಹೇಳಿದ್ದೇವೆ. ಇಲ್ಲಿ ಭೂ ಸುಧಾರಣೆಯನ್ನು ಮಾಡತಕ್ಕಂಥಾದ್ದರ ಅತ್ಯಗತ್ಯ ನಾನಾಕಾರಣಗಳಿಂದ ಕಂಡುಬಂದಿರುವುದರಿಂದ. ಈ ಸುಧಾರಣೆಯನ್ನು ದೇಶದಾದ್ಯಂತ ಮಾಡಬೇಕೆಂದು ನಾವು ಮಾಡಿಕೊಂಡಿದ್ದೇವೆ. ಭಾರತಾದ್ಯಂತ ಈ ಭೂ ಸುಧಾರಣೆಯನ್ನು ಒಂದೇರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವೆ, ಇಲ್ಲವೆ ಎಂಬುದನ್ನು ಪರೀಕ್ಷೆ ಮಾಡಿ ಭಿನ್ನಭಿನ್ನವಾದ ಪರಿಸ್ಥಿತಿಗಳಿರುವ ಈ ದೇಶದಲ್ಲಿ ಇಡೀ ಭರತಖಂಡಕ್ಕೆ ಒಂದೇರೀತಿಯಾಗಿ ಅನ್ವಯವಾಗುವ ಒಂದೇಒಂದು ಭೂ ಸುಧಾರಣಾ ಕಾನೂನನ್ನು ತರುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಪ್ಲಾನಿಂಗ್ ಕಮಿಷನವರು ಮನಗಂಡು ಕೆಲವು ಮುಖ್ಯವಾದಂಥ ನೀತಿಗಳನ್ನು ಹಾಕಿ ಈ ಗುರಿ ಮುಟ್ಟುವುದಕ್ಕೆ ಆಯಾ ಸ್ಥಳಗಳಲ್ಲಿ, ಆಯಾ ದೇಶಗಳಲ್ಲಿ, ಅಲ್ಲಿಯ ಪರಿಸ್ಥಿತಿ, ಸನ್ನಿವೇಶ, ಸಂದರ್ಭಗಳನ್ನನುಸರಿಸಿ ಸುಧಾರಣೆಯನ್ನು ಮಾಡಬೇಕೆಂದು ಅವರು ಆದೇಶಕೊಟ್ಟರು.

4 P.M.

ಈ ಕಾರಣದಿಂದಲೇ ಇಂದು ಒಂದೊಂದು ಸಂಸ್ಥಾನದಲ್ಲಿ ಒಂದೊಂದು ಶಾಸನ ಮಾಡುತ್ತಾಇದ್ದೇವೆ. ಇಲ್ಲಿ ಮೈಸೂರಿನಲ್ಲಿ ಒಂದು ಶಾಸನವಿತ್ತು; ಬೊಂಬಾಯಿ ಪ್ರದೇಶದಲ್ಲಿ ಒಂದು ಶಾಸನವಿತ್ತು; ಹೈದರಾಬಾದು ಪ್ರದೇಶದಲ್ಲಿ ಒಂದು ಶಾಸನವಿತ್ತು; ಮದರಾಸು ಪ್ರಾಂತ್ಯದಲ್ಲಿ ಒಂದು ಶಾಸನವಿತ್ತು. ಕೊಡಗಿನಲ್ಲಿ ಇರಲಿಲ್ಲ. ಅಂದರೆ ಆಯಾ ಪ್ರಾಂತ್ಯದಲ್ಲಿ ಆಯಾ ಲೆಜಿಸ್ಲೇಟರುಗಳು ಕಲೆತು ಚರ್ಚೆಮಾಡಿ ಅಲ್ಲಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ, ಸ್ಥಿತಿಗತಿಗಳನ್ನು ನೋಡಿ ಏನು ಏನು ಶಾಸನಗಳು ಬೇಕೋ ಅವುಗಳನ್ನು ಮಾಡಿದ್ದರು. ಈ ಹೊಸ ರಾಜ್ಯ ಸ್ಥಾಪಿತವಾಗಿ ಈ ಐದು ಪ್ರದೇಶಗಳು ಕೂಡಾ ಇಲ್ಲಿ ಒಂದುಗೂಡಿದವು. ಈ ಐದು ಪ್ರದೇಶಗಳೂ ಒಂದುಗೂಡಿದ್ದಕ್ಕೂ, ಭಾಷೆಯೆ ಕಾರಣವಾದುದು. ಈ ಭಾಷಾ ಆಧಾರದ ಮೇಲೆ ಈ ಒಂದು ಪ್ರಾಂತ್ಯವಾಯಿತು. ಈ ಐದು ಸ್ಥಾನಗಳೂ ಏಕರೀತಿಯ ಶಾಸನ ಮಾಡತಕ್ಕ ರೀತಿಯಲ್ಲಿ ಇದೆ ಎಂದರೆ ಒಪ್ಪಲಿಕ್ಕಾಗುವುದಿಲ್ಲ. ಹಾಗೆ ಇದ್ದಪಕ್ಷದಲ್ಲಿ ಇಂಡಿಯಾ ಸರ್ಕಾರದವರು ಮತ್ತು ಪ್ಲಾನಿಂಗ್ ಕಮಿಷನ್ನಿನವರು ಒಂದೇ ಶಾಸನವನ್ನು ಇಡೀ ದೇಶಕ್ಕೆ ಹಾಕಬೇಕಾಗಿತ್ತು. ಅದು ಸಾಧ್ಯವಿಲ್ಲ. ಈಗ ನಾನು ಕೆಲವು ಅಂಕಿಅಂಶಗಳನ್ನು ತಮ್ಮ ಮುಂದೆ ಇಡುತ್ತೇನೆ, ಅದರಿಂದ ತಮಗೆ ಗೊತ್ತಾಗುತ್ತದೆ. ಬಿಜಾಪುರ, ಧಾರವಾಡ, ನಾರ್ತ್ ಕೆನರಾ ಮತ್ತು ಬೆಳಗಾಂನಲ್ಲಿರುವ ಪರಿಸ್ಥಿತಿಗೂ, ಹಳೆಯ ಮೈಸೂರಿನಲ್ಲಿ ಇರುವ ಪರಿಸ್ಥಿತಿಗೂ, ಹೈದರಾಬಾದಿನಲ್ಲಿರುವ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಇಲ್ಲದ ಪಕ್ಷದಲ್ಲಿ ಈ ಶಾಸನದಲ್ಲಿ ತೀವ್ರವಾದ ಬದಲಾವಣೆಮಾಡುವುದಕ್ಕೆ ಕಾರಣವಿರಲಿಲ್ಲ. ಈ ಕಾರಣದಿಂದ ಸರ್ಕಾರದವರು ಜತ್ತಿ ಸಮಿತಿಯನ್ನು ನೇಮಕಮಾಡಿದರು. ಈ ಭೂ ಸುಧಾರಣೆಯ ಅಗತ್ಯವನ್ನು ನೋಡುವಾಗ, ಮೊಟ್ಟಮೊದಲನೆಯ ಅವಶ್ಯಕತೆ ಹೆಚ್ಚು ಉತ್ಪಾದನೆ. ಉತ್ಪಾದನೆ ಹೆಚ್ಚಿದಹೊರತು ಯಾವ ಭೂ ಸುಧಾರಣೆ ಮಾಡಿದರೂ ಕೂಡ ಅದು ಭೂ ಸುಧಾರಣೆಯಲ್ಲ. ಉತ್ಪಾದನೆಯ ಅಂಕಿಅಂಶಗಳನ್ನು ತೆಗೆದುಕೊಂಡರೆ, 1947ನೆಯ ಇಸವಿಯಿಂದ ಇಡೀ ಭರತಖಂಡದಲ್ಲೂ ಹಾಗೂ ಎಲ್ಲಾ ಪ್ರದೇಶಗಳಲ್ಲೂ ಕೂಡ ಉತ್ಪಾದನೆ ಕಡಮೆಯಾಗುತ್ತಿದೆಎಂದು ಗೊತ್ತಾಗುತ್ತದೆ. ಭೂ ಸುಧಾರಣೆಮಾಡುವಾಗ ಜಮೀನ್ದಾರಿ ಪದ್ಧತಿಯನ್ನು ರದ್ದುಮಾಡಿದೆ; ಇಂಟರ್‌ಮೀಡಿಯರಿಗಳು, ಇನಾಂದಾರರು ಮತ್ತು ಗುತ್ತಿಗೆದಾರರನ್ನು ವಜಾ ಮಾಡಿದೆ; ಅನೇಕ ಪ್ರಾಂತ್ಯಗಳಲ್ಲಿ ಶಾಸನಗಳನ್ನು ಮಾಡಿ ಇವುಗಳನ್ನು ಜಾರಿಗೆ ತಂದಿದ್ದಾರೆ. ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿ ದೊಡ್ಡದೊಡ್ಡ

ಯೋಜನೆಗಳನ್ನು ನಿರ್ಮಾಣಮಾಡಿದ್ದಾರೆ. ಹಿಂದೆ ಎಂದೂ ಕಾಣದ ರೀತಿಯಲ್ಲಿ ರೈತಾಪಿ ಜನಗಳಿಗೆ ಅನುಕೂಲತೆಗಳನ್ನು ಒದಗಿಸಿಕೊಡುತ್ತಾ ಇದೆ. ಇಷ್ಟಾಗ್ಯೂ ಕೂಡ ನಮ್ಮಲ್ಲಿ ಉತ್ಪಾದನೆ ಹೆಚ್ಚಿಲ್ಲ. ಆದ್ದರಿಂದ ತತ್ವಷಃ ಎಲ್ಲಿಯೋ ತಪ್ಪಿರಬೇಕು. ಇಲ್ಲವೇ ನಮ್ಮ ಶಾಸನಗಳು ಸರಿಯಾಗಿ ಜಾರಿಗೆ ಬಂದಿಲ್ಲ, ಅವುಗಳಿಂದ ಪ್ರಯೋಜನವಾಗುತ್ತಿಲ್ಲ. ಇಲ್ಲವೇ ಮಳೆಬೆಳೆಗಳು ಸರಿಯಾಗಿ ಆಗದೆ ಭೂಮಿಯಿಂದ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇಲ್ಲವೇ ಭೂಸುಧಾರಣೆ ಮಾರ್ಗದಲ್ಲಿ ಏನೋ ಲೋಪದೋಷಗಳು ಇರಬೇಕು. ಏನು ಕಾರಣದಿಂದ ಈ ರೀತಿಯಾಗಿದೆಯೋ ನನಗಂತೂ ಅರ್ಥವಾಗಿಲ್ಲ. ನಾನು ಬಹಳ ಯೋಚನೆಮಾಡಿದ್ದರಲ್ಲಿ ಈ ಶಾಸನಗಳನ್ನು ಮಾಡುವುದರಲ್ಲಿ ಲೋಪದೋಷಗಳು ಮತ್ತು ಅನಿಶ್ಚಿತ ಪರಿಸ್ಥಿತಿ ಈ ದೇಶದಲ್ಲಿರುವುದರಿಂದಲೇ, ಭೂಮಿಯ ಮೇಲಿನ ಪ್ರೇಮ ಜನಗಳಿಗೆ ಕಡಮೆಯಾಗಿದೆ; ಉತ್ಪಾದನೆ ಕಾರ್ಯಕ್ರಮ ಕಡಮೆಯಾಗಿದೆ ಎಂದನ್ನಿಸುತ್ತದೆ. ಜತ್ತಿ ಸಮಿತಿ ವರದಿಯಲ್ಲಿ ಒಂದು ಕಡೆ ಹೇಳಿದ್ದಾರೆ ಬೊಂಬಾಯಿ ಟೆನೆನ್ಸಿ ಆಕ್ಟ್ ಬಹಳ ಆದರ್ಶವಾದ ಆಕ್ಟ್ ಎಂದು. ಅದು ಪ್ರೋಗ್ರೆಸೀವ್ ಆಗಿಯೂ ಇದೆ ಎಂದಿದ್ದಾರೆ. ಬೊಂಬಾಯಿಯಲ್ಲಿ ಟೆನೆನ್ಸಿ ಆಕ್ಟ್ ಮೊಟ್ಟಮೊದಲು ಜಾರಿಗೆ ಬಂದದ್ದು 1939ನೆಯ ಇಸವಿಯಲ್ಲಿ 1939 ರಿಂದ ಈವರೆಗೆ, 20 ವರ್ಷಗಳ ಕಾಲ ಈ ಕಾಯಿದೆ ಒಂದಲ್ಲ ಒಂದು ರೀತಿಯಲ್ಲಿ ಅಲ್ಲಿ ಜಾರಿಯಲ್ಲಿದೆ. ಇಷ್ಟಾದಾಗ್ಯೂ ಕೂಡ, ಈ ಕಾಯಿದೆಯನ್ನು ಎಷ್ಟೋ ಬದಲಾವಣೆಗಳನ್ನು ಮಾಡಿ ಜಾರಿಗೆ ತಂದರೂ ಕೂಡ, ಇವೊತ್ತಿನ ಸ್ಥಿತಿ ಏನಿದೆ? ಅದು ನನ್ನ ಅಭಿಪ್ರಾಯ. ಇದಕ್ಕೆ ಏನು ಕಾರಣ? ಗೋಖಲೆ ಇನ್ಸ್ಟಿಟ್ಯೂಟ್ ಆಫ್ ಪಾಲಿಟಿಕ್ಸ್ ಎಂಡ್ ಎಕನಾಮಿಕ್ಸ್ ಅವರು ಈ ಬೊಂಬಾಯಿ ಟೆನೆನ್ಸಿ ಆಕ್ಟನ್ನು ಪರಿಶೀಲಿಸಿ ಅದರ ಮೇಲೆ ಅವರ ತೀರ್ಮಾನವನ್ನು ಕೊಟ್ಟಿದ್ದಾರೆ. ಅವರ ಅಭಿಪ್ರಾಯವನ್ನು ಯಾರೂ ಅಲ್ಲಗಳೆಯುವಹಾಗಿಲ್ಲ. ಹೈದರಾಬಾದಿನ ಪರಿಸ್ಥಿತಿ ಏನಾಗಿದೆ? ಬೊಂಬಾಯಿ ಶಾಸನವನ್ನೂ ಅನುಸರಿಸಿ 1945ನೆ ಇಸವಿಯಲ್ಲಿ ಹೈದರಾಬಾದಿನಲ್ಲೂ ಒಂದು ಷಿಕ್ಮಿ ಶಾಸನವನ್ನು ಮಾಡಿದರು. ಇದಾದ ಐದು ವರ್ಷಗಳ ಮೇಲೆ ಹೈದರಾಬಾದಿನಲ್ಲಿ ಒಂದು ಸಮಿತಿಯನ್ನು ಮಾಡಿದರು. ಈ ಸಮಿತಿಯವರು ಕೊಟ್ಟಿರುವ ಒಂದು ವರದಿಯಲ್ಲಿ 'The Bombay Shikmi Act is a thorough failure' ಎಂದೂ ಹೇಳಿದ್ದಾರೆ. ಅಷ್ಟೇಅಲ್ಲ. ಅದರಿಂದ ಏನೂ ಉದ್ದೇಶ ಸಾಧನೆಯಾಗಿಲ್ಲ, ಇದರ ಜೊತೆಗೆ ಅನ್ಯಾಯ ಮತ್ತು ತೊಂದರೆಗಳು ಆಗಿ ಹೋಗಿವೆ; ಜನಗಳಿಗೆ ಪ್ರಯೋಜನವಾಗಲಿಲ್ಲ ಎಂದು ಹೇಳಿದ್ದಾರೆ. ಕೆಲವರು ಹೇಳಬಹುದು ಈ ಶಾಸನಗಳಲ್ಲಿ ಏನೂ ಲೋಪದೋಷಗಳು ಇರದೆ ಜಾರಿಗೆ ಕೊಡುವಾಗ ದಕ್ಷತೆಯಿಂದ ಜಾರಿಗೆ ಕೊಡಲಲ್ಲ ಎಂದು. ಹಾಗೆ ಹೇಳಿದರೆ, ಸುಮಾರು 20 ವರ್ಷಗಳಿಂದ ಇದ್ದ ಅಧಿಕಾರಿಗಳು ನಮ್ಮವರೇ; ಈಗ ಇರುವವರೂ ಅವರೇ. ಇನ್ನು ಮುಂದಕ್ಕೆ ಇರತಕ್ಕವರೂ ಅವರೇ. ಈಗ ಶಾಸನವನ್ನು ಮಾಡುವಾಗ ಆಡಳಿತದ ಭದ್ರತೆ ಇಲ್ಲದೆಹೋದರೆ ಮುಂದಕ್ಕೆ ಬಹಳ ಕೆಡಕುಂಟಾಗುವುದು. ಅದೂಅಲ್ಲದೆ ಬಹಳ ಕಷ್ಟವಾಗುತ್ತದೆ. ಇವತ್ತು ನಾವು ಈ ಶಾಸನವನ್ನು ಮಾಡುವಾಗ ಹಿಂದಿನ ಅನುಭವವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮುಂದೆ ನಮ್ಮ ಗುರಿ ಸಾಧನೆಯಾಗಬೇಕಾದರೆ ಏನು ಬದಲಾವಣೆ ಯಾಗಬೇಕು, ಯಾವರೀತಿ ಇರಬೇಕು ಎಂದು ಯೋಚನೆ ಮಾಡಬೇಕು. ಈ ಶಾಸನಗಳು ಸುಲಭವಾಗಿರಬೇಕು. ಸುಲಭವಾಗಿ ಜಾರಿಗೆ ಕೊಡುವುದಕ್ಕೆ ಅನುಕೂಲವಾಗಿರಬೇಕು. ಜಾರಿಗೆ ಬಂದ ಸ್ವಲ್ಪಕಾಲದೊಳಗೆ ಜನಗಳಿಗೆ ಅನುಕೂಲ ಒದಗುವಂತಿರಬೇಕು. ಈ ರೀತಿ ಯೋಜನೆಗಳು ಇರಬೇಕೇ ವಿನಾ, ಈ ಒಂದು ಶಾಸನಮಾಡಿ ಬೇಕಾದಷ್ಟು ಕಾಲಂಗಳನ್ನು ಹಾಕಿದರೆ ಏನೂ ಪ್ರಯೋಜನವಾಗುವುದಿಲ್ಲ. 20-25 ವರ್ಷಗಳಕಾಲ ಶಾಸನ ಸಭೆಯಲ್ಲಿ ಕೆಲಸಮಾಡಿದ ನಮಗೆ ಇದನ್ನು ಓದಿದರೆ ಇದರಲ್ಲಿ ಅನೇಕ ಕಾಲಂಗಳು ತಲೆಗೆ ಹಿಡಿಯುವುದಿಲ್ಲ. ಆದ್ದರಿಂದ ಈ ಭೂ ಶಾಸನವನ್ನು ಮಾಡುವ ಮುನ್ನ ನಾವು ಒಂದು ಸೂಚನೆಯನ್ನು ಕೊಡತಕ್ಕಂಥಾದ್ದು ಇದೆ. ಯಾವ ಶಾಸನವನ್ನೇ ಮಾಡಲಿ ಆ ಶಾಸನವು ಸಾಧ್ಯವಾದ ಮಟ್ಟಿಗೂ ಸುಲಭವಾಗಿ ಜಾರಿಗೆ ಕೊಡುವಂತೆ ಇರಬೇಕು; ಮತ್ತು ಅದರಿಂದ ನಮ್ಮ ಗುರಿ ಮುಟ್ಟಬೇಕು. ಈಗ ನಮ್ಮಲ್ಲಿ ಸೋಷಿಯಲಿಸ್ಟಿಕ್ ಸೊಸೈಟಿಯನ್ನು ಸ್ಥಾಪನೆ ಮಾಡಬೇಕು ಎಂದು ಇದೆ. ಅದಕ್ಕೋಸ್ಕರವಾಗಿ ಈಶಾಸನ ವಾಗಬೇಕು. ಸೋಷಿಯಲಿಸಂ ಎನ್ನುವಂಥಾದ್ದು ಇಡೀದೇಶದಲ್ಲಿ ಸಮಗ್ರವಾಗಿ ಸಾಧ್ಯವೇ? ಒಂದೊಂದು ಕ್ಷೇತ್ರದಲ್ಲಿ ಒಂದೊಂದು ತರಹ ಸೋಷಿಯಲಿಸಂ ಜಾರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಎಲ್ಲರೂ ಒಪ್ಪಲೇಬೇಕು. ಇಂಗ್ಲೀಷಿನಲ್ಲಿ ಹೇಳುವುದಾದರೆ with one leg in socialism and another leg in capitalism the nation cannot survive. We must have both the legs in socialism if you want to implement socialism. ಈಗ ನಾವು ಪ್ರತಿಯೊಂದು sector ನಲ್ಲಿಯೂ ಇದೇರೀತಿಯಾಗಿ ಮಾಡುವುದಕ್ಕೆ ಹೊರಟಿದ್ದೇವೆ. ಇದು ಯಾವರೀತಿ ಸರಿ ಹೋಗುತ್ತದೆ ಎನ್ನುವುದನ್ನು ತಿಳಿದುಕೊಳ್ಳುವುದು ಕಷ್ಟವಾಗಿದೆ.

Sri C. K. RAJAIAH SETTY (Chiknaikanhally).—Can anything be made applicable at one stretch ?

Sri H. M. CHANNABASAPPA.—I quite understand your query. You start first with the agricultural sector, then extend it to the industrial sector and then to the other sectors. Let us not go half way and try to land ourselves and the country into trouble. ನಮ್ಮ ನೀತಿಯನ್ನು ನಿರೂಪಿಸುವ ಮಟ್ಟದಲ್ಲಿ ನನಗೆ ಕಾಣತಕ್ಕದ್ದು ಚೈನಾ ದೇಶದ ಪ್ರಭಾವ ಬಹುಮಟ್ಟಿಗೆ ಬೀರಿದೆಎಂದು. ಇದಕ್ಕೆ ಸಾಕಷ್ಟು ರುಜುವಾತಿದೆ. ಚೈನಾದೇಶದಲ್ಲಿ ಉತ್ಪಾದನೆಯನ್ನು ಹೆಚ್ಚುಮಾಡುವುದಕ್ಕೆ ಉಗ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡದ್ದು ನಿಜ. ಅವರು ಅದರಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಅವರು ಏನೇನು ಕಾರ್ಯಕ್ರಮಗಳನ್ನು ಮಾಡಿದರೋ ಅವನ್ನು ನಾವೂ ಕೂಡ ಮಾಡುವುದಕ್ಕೆ ಮುಂಚೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಅಲ್ಲಿಯ ಪೊಲಿಟಿಕಲ್ ಸೆಟಪ್ ನಮ್ಮಲ್ಲಿಯ ಪೊಲಿಟಿಕಲ್ ಸೆಟಪ್ ಇವೆರಡಕ್ಕೂ ವ್ಯತ್ಯಾಸವಿದೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಯಾವಯಾವರೀತಿಯಲ್ಲಿ ಅವರ ಮಾರ್ಗಗಳನ್ನು ಅನು

(SRI H. M. CHANNABASAPPA)

ಸರಿಸಬೇಕು ಎನ್ನುವುದನ್ನು ಯೋಚನೆಮಾಡಿ ನಾವು ಅನುಷ್ಠಾನಕ್ಕೆತರಬೇಕು. ಏಕೆಂದರೆ ನಾವು ಇವೊತ್ತು Communistic set up ನಮ್ಮ ದೇಶದಲ್ಲಿ ಮಾಡುವುದಕ್ಕಾಗುವುದಿಲ್ಲ, ಅವರು ಹೋದಮಾರ್ಗದಲ್ಲಿ ನಾವು ಹೋಗುವುದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ಯಾವ ಮನುಷ್ಯನು ಭೂಮಿಯಲ್ಲಿ ದುಡಿಯುತ್ತಾನೆಯೋ ಅವನಿಗೇ ಭೂಮಿಯಿರಬೇಕು ಭೂಮಿಯನ್ನಿಟ್ಟುಕೊಂಡು ಅದರ ಮೇಲೆ ಪ್ರೇಮ ಆದರವಿಲ್ಲದವರಿಗೆ ಭೂಮಿ ಇರಬಾರದು. ಇಂಥವರಿಗೆ ಭೂಮಿಯಿದ್ದರೆ ಉತ್ಪನ್ನವು ಹೆಚ್ಚಾಗುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಅಭಿಪ್ರಾಯವನ್ನು ನಿರ್ವಿವಾದದಿಂದ ಈ ಸಭೆಯಲ್ಲಿ ಹೇಳುತ್ತೇನೆ.

Sri S. D. KOTHAVALE (Chikodi).—What distinguishes communism from socialism ?

Sri H. M. CHANNABASAPPA.—In Russia for example the men who do not work or who whileaway their time are whipped whereas here in a democratic set up no such treatment is meted out to the rich and idle people. That is the difference. A person will have food if he works. No work, no food. This is the condition in communist countries. Here, our position is different. We have got to persuade the people. We cannot make a man work, by force

ನಾನು ಹೇಳಿದ್ದು ಈಗ ಚೈನಾ ದೇಶದಲ್ಲಿ ಯಾವನು ಉಳುತ್ತಾನೆಯೋ ಯಾವನು ಭೂಮಿಯಲ್ಲಿ ಶ್ರಮಪಟ್ಟು ಉತ್ಪನ್ನವನ್ನು ಹೆಚ್ಚುಮಾಡಬೇಕು ಎಂದು ಆಕಾಂಕ್ಷೆಯನ್ನಿಟ್ಟುಕೊಂಡಿರುತ್ತಾನೆಯೋ ಅವನಲ್ಲಿ ಭೂಮಿ ಇದೆ. ಉತ್ಪನ್ನ ಹೆಚ್ಚಾಗತಕ್ಕ ಆವಶ್ಯಕತೆ ನಮ್ಮಲ್ಲಿದೆ ಈ ಸಂದರ್ಭದಲ್ಲಿ ಅದು ಯಾವ ರೀತಿ ಸಾಧ್ಯವೆಂದು ನೋಡೋಣ. ಈಗ ಭೂಮಿ ಎಷ್ಟಿರಬೇಕು, ಯಾರಿಗೆ ಇರಬೇಕು, ಹೇಗೆ ಕೊಡಬೇಕು ಎನ್ನುವುದು ಮುಖ್ಯವಾದ ಪ್ರಶ್ನೆ. ಈಗ ನಮ್ಮ ದೇಶದಲ್ಲಿ uneconomic holdings ಎಂದರೆ ಕೆಲಸಮಾಡುವುದಕ್ಕೆ ಅನಾನುಕೂಲವಾಗಿರತಕ್ಕ ಸಣ್ಣಪುಟ್ಟ ಹಿಡುವಳಿಗಳು ಹೆಚ್ಚಾಗಿವೆ. ಅದಕ್ಕೆ ಕಾರಣಗಳನ್ನು ನಾನು ಹೇಳಬೇಕಾಗಿಲ್ಲ, ನಾನಾ ಕಾರಣಗಳಿಂದ ಹಾಗಾಗಿದೆ. ಇವೊತ್ತು ನಮ್ಮ ದೇಶದಲ್ಲಿ ಉತ್ಪನ್ನಕ್ಕೆ ಧಕ್ಕೆ ಬಂದಿರುವುದಕ್ಕೆ ಇದೂ ಒಂದು ಬಹಳ ಮುಖ್ಯವಾದ ಕಾರಣವೆನ್ನತಕ್ಕದ್ದನ್ನು ಎಲ್ಲರೂ ಕೂಡ ಒಪ್ಪಲೇಬೇಕು. Fragmentation and uneconomic holdings ಇರುವುದರಿಂದ ಹೊಸ ಹೊಸ ಸುಧಾರಣೆಯ ಮಾರ್ಗಗಳನ್ನು ಅನುಸರಿಸುವುದಕ್ಕೆ ಸಾಧ್ಯವಿಲ್ಲ. ಎರಡನೆಯದು ಉತ್ಸಾಹಿಗಳೂ ದಕ್ಷರೂ ಆಗಿರತಕ್ಕ ಜನ ವ್ಯವಸಾಯವನ್ನು ಕೈಕೊಳ್ಳಬೇಕು. ನಮ್ಮ ದೇಶದಲ್ಲಿ ನಾನಾಕಾರಣಗಳಿಂದ ಅನೇಕ ವರ್ಷಗಳಿಂದ ಈ ವ್ಯವಸಾಯ ಯಾರ ಕೈಯಲ್ಲಿದೆ ಎಂದರೆ ಬುದ್ಧಿವಂತರಲ್ಲದ ಜನರ ಕೈಯಲ್ಲಿದೆ. ಬುದ್ಧಿವಂತರಾದ ಜನರೆಲ್ಲರೂ ಬಂದು ಪಟ್ಟಣಗಳಲ್ಲಿ ನೆಲೆಸಿ ಬೇರೆ ಬೇರೆ ಉದ್ಯಮಗಳಲ್ಲಿ ತೊಡಗಿದ್ದಾರೆ. ಎಲ್ಲಿಹೋದರೂ ಕೂಡ ನಾವು ನೋಡತಕ್ಕದ್ದು ಯಾರನ್ನು? ಬುದ್ಧಿ ಸ್ವಲ್ಪ ಕಡಮೆ ಇರತಕ್ಕವರು ಅಥವಾ ಯಾವಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲದೆ ಹೋದವರು ಭೂಮಿಯನ್ನು ಅನುಸರಿಸುತ್ತಿರುವುದನ್ನು ನಾವು ನೋಡುತ್ತೇವೆ. ಇದರ ಪರಿಣಾಮವಾಗಿ ಪರಿಸ್ಥಿತಿ ಏನಾಗಿದೆ ಎಂದರೆ ಅನೇಕ ಬೇರೆ ಬೇರೆ ಸಣ್ಣಪುಟ್ಟ ವೃತ್ತಿಗಳನ್ನು ಅನುಸರಿಸುತ್ತಿದ್ದ ಜನ, ಇವೊತ್ತು ಆ ಕೈಗಾರಿಕೆಗಳೆಲ್ಲ ದೇಶದಲ್ಲಿ ಹಾಳಾಗಿ ಹೋದುದರಿಂದ ಅವರೆಲ್ಲರೂ ಕೂಡ ಅನಿವಾರ್ಯವಾಗಿ, ವಿಧಿ ಇಲ್ಲದೆ, ಭೂಮಿಯಲ್ಲಿ ವ್ಯವಸಾಯಮಾಡುವ ಕಸಬನ್ನು ಜೀವನಕ್ಕೋಸ್ಕರ ಅವಲಂಬಿಸುತ್ತಿದ್ದಾರೆ. ಅದೇ ಕಾರಣದಿಂದ ಭೂಮಿಯ ಮೇಲೆ ಒತ್ತಡ ದಿನ ಕ್ರಮೇಣ ದಿನಕ್ರಮೇಣ ವಿಶೇಷರೀತಿಯಲ್ಲಿ ಬೆಳೆದುಕೊಂಡು ಬಂದಿದೆ. ಈಗ ನಮ್ಮ ಮುಂದೆ ಇರತಕ್ಕದ್ದು ಇರುವ ಭೂಮಿಯನ್ನು ಇರತಕ್ಕ ಜನರನ್ನನುಸರಿಸಿ ಕೊಡುವುದು ಸರಿಯೇ ಎನ್ನುವುದು ಒಂದುವಿಷಯ. ಭೂಮಿಯ ಮೇಲಿನ ಒತ್ತಡವನ್ನು ಕಡಮೆ ಮಾಡಬೇಕೇ ಎನ್ನುವುದೇ ಮೊದಲ ಪ್ರಶ್ನೆ.

ಶ್ರೀ ಬಿ. ಬಸವಲಿಂಗಪ್ಪ (ಬೆಂಗಳೂರು ದಕ್ಷಿಣ).—ಇದರಲ್ಲಿ ಉಳುವವರಿಗೆ ಹಂಚತಕ್ಕ ಪ್ರಶ್ನೆಇದೆಯೇ ಹೊರತು ಇರುವವರಿಗೆ ಹಂಚುವ ಪ್ರಶ್ನೆಯಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಉಳುವವನಿಗೇ ಭೂಮಿಯನ್ನು ಕೊಡಬೇಕು ಎಂದು ಹೇಳಿದಾಗ, ದಕ್ಷತೆಯಿಂದ ಉಳತಕ್ಕವನಿಗೆ ಮಾತ್ರ ಭೂಮಿಯನ್ನು ಕೊಡಬೇಕು, ಉತ್ತಮ ರೀತಿಯಲ್ಲಿ ವ್ಯವಸಾಯ ಮಾಡತಕ್ಕವನಿಗೆ ಮಾತ್ರ ಭೂಮಿಯನ್ನು ಕೊಡಬೇಕು. ದೇಶದಲ್ಲಿ ಉತ್ಪನ್ನ ಹೆಚ್ಚಿಗೆಆಗಬೇಕಾದರೆ ದಕ್ಷತೆಯಿಂದ, ಚೆನ್ನಾಗಿ ಉತ್ತು, ಬಿತ್ತಿ, ಬೆಳೆಯತಕ್ಕವನಿಗೆ ಭೂಮಿಯನ್ನು ಕೊಡಬೇಕು. ಹಾಗಿಲ್ಲದೆ ಹೋದರೆ ಭೂಮಿಯಿಂದ ಹತ್ತುಪಲ್ಲ ಬೆಳೆಯುವ ಕಡೆ ಎರಡು ಪಲ್ಲ ದವಸ ಬೆಳೆದರೆ ಅದರಿಂದ ದೇಶದ ಹಿತಕ್ಕೆ ಧಕ್ಕೆ ಬರುತ್ತದೆ. ಇವೊತ್ತು ಈ ಶಾಸನವನ್ನು ಮಾಡುವಾಗ, ಭೂಸುಧಾರಣೆಯನ್ನು ಮಾಡುವಾಗ ಯಾವುದಾದರೂ ಒಂದು section, ಒಂದು classಗೆ, ಸಂಬಂಧಪಟ್ಟವರಿಗೆ ಅನುಕೂಲಪಡಿಸಬೇಕು ಎನ್ನುವ ದೃಷ್ಟಿಯಿಂದ ಹೋದಪಕ್ಷದಲ್ಲಿ ಅದಕ್ಕಿಂತ ಕೆಡುಕಾದದ್ದು ಇನ್ನೊಂದಿಲ್ಲ. ಇವೊತ್ತು ಈಪಂಗಡಕ್ಕೆ ಅನುಕೂಲವನ್ನು ಕಲ್ಪಿಸಬೇಕು, ಆ ಪಂಗಡಕ್ಕೆ ಅನುಕೂಲಕಲ್ಪಿಸಬೇಕು ಎಂದು ಮಾಡುವುದು ಸರಿಯಲ್ಲ. ಎಲ್ಲಪಂಗಡಗಳೂ ಕೂಡ ಅನುಕೂಲವನ್ನು ಹೊಂದಬೇಕು. ಯಾವ ಒಂದು ಪಂಗಡದ ಏಳಿಗೆಗೋಸ್ಕರವಾಗಿಯಾದರೂ ಇದರಲ್ಲಿ ಅವಕಾಶಮಾಡುವುದು ಸರಿಯಾದುದಲ್ಲ. ಭೂಮಿಯನ್ನು ಉಳುಮೆಮಾಡುವುದಕ್ಕೆ ಶಕ್ತಿಇಲ್ಲದ ಮನುಷ್ಯನಿದ್ದರೆ ಅವನಿಗೆ ಜೀವನಮಾಡುವುದಕ್ಕೆ ತಕ್ಕವ್ಯವಸ್ಥೆಯನ್ನು ಮಾಡತಕ್ಕ ಜವಾಬ್ದಾರಿ ದೇಶದಮೇಲೆ ಮತ್ತು ಸರ್ಕಾರದಮೇಲೆ ಇದೆ. Welfare State ಎಂದರೆ ಎಲ್ಲರಿಗೂ ಜೀವನೋಪಾಯಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕು. ಜೀವನವನ್ನು ನಡೆಸುವುದಕ್ಕಾಗಿ ಭೂಮಿಯಮೇಲಿನ ಒತ್ತಡದ ಪ್ರಮಾಣ ಹೆಚ್ಚಿದೆ. ನಮ್ಮ ಕಮಿಟಿಯವರು ಈ ಅಂಕಿಅಂಶಗಳನ್ನು ನಮ್ಮ ಮುಂದೆ ಇಟ್ಟಿಲ್ಲ. ಇದು ಒಂದು ದೊಡ್ಡ ಲೋಪವೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಇದು ಮೈಸೂರು ಸಂಸ್ಥಾನಕ್ಕೆ ಮಾತ್ರ ಅನ್ವಯಿಸುತ್ತದೆಯಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಭರತಖಂಡಕ್ಕೂ ಅನ್ವಯಿಸುತ್ತದೆ. We are part and parcel of India and what we do and what they do are identical. After all we do in the interest of all people.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಯಾರು ತಾವೇ ಚೆನ್ನಾಗಿ ಉಳತಕ್ಕವರೋ ಅವರಿಗೆ ಮಾತ್ರ ಜಮೀನು ಕೊಡಬೇಕೆಂದು ಹೇಳಿದರು, ಅವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ರಾಜಕೀಯದಲ್ಲಿ ನೊಂದವರೆಂದು ಕೆಲವರಿಗೆ ಜಮೀನು ಕೊಟ್ಟರು ಅವರೆಲ್ಲರೂ ಚೆನ್ನಾಗಿ ಉಳುವವರು ಎಂತಲೇ ?

ಶ್ರೀ ಎಚ್. ಎಂ ಚನ್ನಬಸಪ್ಪ.—ದಕ್ಷತೆಯಿಂದ ಉಳುತ್ತಾರೆಂದು ಕೊಡಲಾಯಿತು, ಇಲ್ಲದಿದ್ದರೆ ಭೂಮಿಯನ್ನು ಕಿತ್ತುಕೊಳ್ಳುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವು ತಮ್ಮ ಜಮೀನನ್ನು ಉಳುತ್ತಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಬಂದು ನೋಡಿ, ಗೊತ್ತಾಗುತ್ತದೆ. I cannot tolerate land being misused because land must be efficiently used. That is one of the objectives laid down.

Sri K. A. PATIL (Talikot).—I would request the Chair not to allow such interruptions. After he speaks, others may speak out what they feel.

Sri S. D. KOTHAVALE.—It is a correct procedure to have parliamentary interruptions.

ಶ್ರೀ ಎಚ್. ಎಂ. ಚನ್ನಬಸಪ್ಪ.—Interruption ಎನ್ನುವುದು ಪಾರ್ಲಿಮೆಂಟರಿ ಚರ್ಚೆಯಲ್ಲಿ ಒಳ್ಳೆಯದು; ಇದರಿಂದ ತೊಂದರೆಯೇನೂ ಇಲ್ಲ.

ಈಗ ನಮ್ಮಲ್ಲಿ ಭೂಮಿಯ ಒತ್ತಡ ಎಷ್ಟಿದೆ ಎನ್ನುವುದನ್ನು ತಮಗೆ ಹೇಳುವುದಾದರೆ ಮುಂದಿನ ಚರ್ಚೆಗೆ ಅನುಕೂಲವಾಗುತ್ತದೆ. ಬೆಳೆಯನ್ನು ಬಿತ್ತಿದಪ್ರದೇಶದಲ್ಲಿ ಪ್ರತಿನೂರು ಎಕರೆಗೂ ಜಪಾನ್‌ನಲ್ಲಿ 300 ಜನರ ಒತ್ತಡವಿದೆ, ಚೈನಾದಲ್ಲಿ 200 ಜನರ ಒತ್ತಡವಿದೆ, ಭಾರತದಲ್ಲಿ 77 ಜನರ ಒತ್ತಡವಿದೆ. ಅಂದ ಮೇಲೆ ಭರತಖಂಡದಲ್ಲಿ ಭೂಮಿಯ ಮೇಲೆ ವ್ಯವಸಾಯಗಾರರ ಒತ್ತಡ ಚೈನಾ ಮತ್ತು ಜಪಾನ್ ದೇಶಗಳಿಗಿಂತಲೂ ಕಡಮೆ ಇರುವುದು ಒಂದು ವಿಷಯ. ಇದೇ ಭರತಖಂಡದ ನಾನಾ ಭಾಗಗಳಲ್ಲಿ ಹೇಗಿದೆಯೆಂದರೆ.—

ಕೇರಳದಲ್ಲಿ 100 ಎಕರೆಗೆ	166	ಜನರಒತ್ತಡವಿದೆ
ಬೀಹಾರಿನಲ್ಲಿ ...	160	,,
ಮದರಾಸಿನಲ್ಲಿ	143	,,
ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ.	130	,,
ಉತ್ತರ ಪ್ರದೇಶದಲ್ಲಿ ...	115	,,
ಆಂಧ್ರದಲ್ಲಿ ...	83	,,
ಮೈಸೂರಿನಲ್ಲಿ ...	60	,,

ಏಕೆ ಇದನ್ನು ಹೇಳಿದೆನೆಂದರೆ ನಮ್ಮ ರಾಜ್ಯದಲ್ಲಿ ನೂರು ಎಕರೆ ಬೆಳೆಮಾಡಿದ ಪ್ರದೇಶಕ್ಕೆ 60 ಜನ ವ್ಯವಸಾಯಗಾರರಿದ್ದಾರೆ. ಒಟ್ಟು 138 ಲಕ್ಷ ವ್ಯವಸಾಯಗಾರರಿದ್ದೇವೆ. ಇದು simple mathematics.

Sri J. B. MALLARADHYA.—Why only discuss about the sown area and not the entire land available ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವ್ಯವಸಾಯಗಾರರ ಒತ್ತಡ ಎಷ್ಟಿದೆಯೆಂಬುದನ್ನು ತಿಳಿದುಕೊಳ್ಳುವುದು ಸುಲಭ. ಪ್ರಜಾಸಂಖ್ಯೆಯ ಒತ್ತಡ ಎಷ್ಟಿದೆಯೆಂಬುದು ಗೊತ್ತಿದೆ. ಶೇಕಡ 70ರಷ್ಟು ನಮ್ಮ ದೇಶದಲ್ಲಿ ವ್ಯವಸಾಯಗಾರರಿದ್ದಾರೆ. ಲೆಕ್ಕಾಚಾರ ಮಾಡಿದರೆ ಗೊತ್ತಾಗುತ್ತದೆ. ಇದು ಏನು ತೋರಿಸುತ್ತದೆಂದರೆ, ನಮ್ಮ ಮೈಸೂರಿನಲ್ಲಿ ಒತ್ತಡ ಭಾರತದ ಇತರ ಪ್ರಾಂತಗಳಿಗಿಂತಲೂ ಕಡಮೆ ಇದೆ ಎಂಬುದನ್ನು ತೋರಿಸುತ್ತದೆ. ಜಪಾನ್ ಮತ್ತು ಚೈನಾದಲ್ಲಿರುವುದಕ್ಕಿಂತ ಕಡಮೆ ಇದೆ ಎಂದು ಸಿದ್ಧಾಂತವಾಯಿತು. ಹೀಗೆ 60 ಇದ್ದರೂ ಕೂಡ ಇದು ಹೆಚ್ಚಾಗಿದೆಯೇ ಅಥವಾ ಕಡಮೆ ಇದೆಯೇ ಎನ್ನುವುದನ್ನು ಮನಗಂಡು, ಕಡಮೆ ಇದ್ದರೆ ಹೆಚ್ಚುಮಾಡಲಿ, ಹೆಚ್ಚಿದ್ದರೆ ಕಡಮೆ ಮಾಡಲಿ. ನಮ್ಮಲ್ಲಿ ಈಗ ಎಷ್ಟು ಭೂಮಿ ಇದೆ, ಎಷ್ಟು ಜನರು ಭೂಮಿಬೇಕೆಂದು ಕೇಳುತ್ತಿದ್ದಾರೆಂಬುದನ್ನು ನೋಡೋಣ. ಇವರೆಲ್ಲರಿಗೂ ಕೊಡಬೇಕೆಂದರೆ ಯಾವ ಅಭ್ಯಂತರವೂ ಇದೆಯೆಂದು ಹೇಳುವ ಹಾಗಿಲ್ಲ. ಆದರೂ ಭೂಸುಧಾರಣೆಯ ಮುಖ್ಯ ಗುರಿಯೊಂದಿದೆ. ಕೇಳಿದವರಿಗೆಲ್ಲಾ ಭೂಮಿಯನ್ನು ಕೊಡಬೇಕೆಂಬುದು ಅದರ ಉದ್ದೇಶವಲ್ಲ. ವ್ಯವಸಾಯ ಮಾಡುವವನಿಗೆ, ಉತ್ತಮವಾಗಿ ವ್ಯವಸಾಯಮಾಡಿ ಉತ್ಪತ್ತಿಯನ್ನು ಹೆಚ್ಚು ಮಾಡುವವನಿಗೆ ಭೂಮಿಯನ್ನು ಕೊಡುವುದು ಅವಶ್ಯಕ. ಹಾಗೆಯೇ ಭೂಮಿಯಲ್ಲಿ ದುಡಿದು ಕೆಲಸ ಮಾಡದೇಯಿರುವವನಿಂದ ಭೂಮಿಯನ್ನು ಬಿಡಿಸುವುದೂ ಆವಶ್ಯಕ. ಈ ಲೆಕ್ಕಾಚಾರವನ್ನು ಯಾರೂ ಮಾಡಿಲ್ಲ. ಇಂಡಿಯಾ ದೇಶದಲ್ಲಿ, ಮೈಸೂರು ದೇಶದಲ್ಲಿ ಭೂಮಿ ಇಷ್ಟಿದೆ, ಇಷ್ಟು ಜನರನ್ನು ಮಾತ್ರ ವ್ಯವಸಾಯ ಕ್ಷೇತ್ರದಲ್ಲಿಡಬೇಕು, ಇನ್ನೂ ಎಷ್ಟು ಜನರಿದ್ದಾರೆ ಇವರಿಗೆಲ್ಲಾ ಯಾವ ಯಾವ ವ್ಯವಸ್ಥೆ ಮಾಡಬೇಕು ಎಂಬ ವಿಷಯವನ್ನು ತೀವ್ರವಾಗಿ ಅಷ್ಟಾಗಿ ಪರ್ಯಾಲೋಚನೆ ಮಾಡಿದುದು ಕಂಡುಬಂದಿಲ್ಲ. ಈಗ ಕಂಡುಬಂದಿರುವುದೇನೆಂದರೆ, ಭೂಮಿ ಇದೆ, ಯಾವುದೋ ಕಾರಣಾಂತರದಿಂದ ಇಷ್ಟು ಜನರು ಭೂಮಿಯನ್ನವಲಂಬಿಸಿದ್ದಾರೆ, ಈ ಭೂಮಿಯನ್ನು ನಾವು ಹಂಚಿಕೆಮಾಡಬೇಕು, ಎಂಬುದರ ಕಡೆ ನಮ್ಮ ಗಮನ ತೀವ್ರವಾಗಿ ಹರಿಯುತ್ತಿದೆ.

Sri A. BHEEMAPPA NAIK.—On a point of information. I would like to ask him whether equitable and economic distribution also is not one of the objectives of Government.

Sri H. M. CHANNABASAPPA.—Subject to the overall consideration of production, there should be distributive justice amongst all people who are tillers of the soil. The nation's interests are of paramount importance and keeping that in view, the rest automatically follows.

ಈಗ ಇದನ್ನು ಯಾವರೀತಿ ಮಾಡಬೇಕೆಂಬುದು ನಮ್ಮ ಮುಂದಿರುವ ಪ್ರಶ್ನೆ. ಒಂದು ವೇಳೆ ಇದರಿಂದ ಒಳ್ಳೆಯದಾಗುವುದಾದರೆ ಭೂಮಿಯನ್ನು ಹಂಚಿಬಿಡೋಣ. ಇದಕ್ಕೆ ಖಂಡಿತವಾಗಿ ನನ್ನ ಅಭ್ಯಂತರವಿಲ್ಲ. ಪ್ರತಿಯೊಬ್ಬನೂ ವ್ಯವಸಾಯ ಮಾಡುವವನಾಗಿರುವ ಪರಿಸ್ಥಿತಿ ನಮ್ಮಲ್ಲಿರಬೇಕೆಂದಮೇಲೆ ಒಂದೊಂದು ಹೋಲ್ಡಿಂಗ್ ಎರಡು ಮೂರು ಎಕರೆ ಇರುವುದನ್ನು ಬಿಟ್ಟುಬಿಡಬೇಕೆ

(SRI H. M. CHANNABASAPPA)

ಅಥವ 10—12 ಎಕರೆ ಇರಬೇಕೆ, ಅಥವ 500—600 ಎಕರೆ ಇರಬೇಕೆ ಎನ್ನುವುದು ಪ್ರಶ್ನೆ. ಕೋ-ಆಪರೇಟಿವ್ ಫಾರ್ಮಿಂಗ್ ಪ್ರಶ್ನೆ ಬೇರೆಇದೆ. ಇದಕ್ಕೆ ಚೈನಾದ ಉದಾಹರಣೆಯನ್ನು ಕೊಟ್ಟರೆ ಬಹುಶಃ ಚೆನ್ನಾಗಿ ಅರ್ಥವಾಗುತ್ತದೆ. ಮೊದಲು Peasant farming ಆಗಬೇಕೆಂದು ಅಲ್ಲಿ 110 ಮಿಲಿಯನ್ ಜನರಿಗೆ 300 ಮಿಲಿಯನ್ ಎಕರೆಗಳನ್ನು ಹಂಚಿದರು. ಎಂದರೆ ಒಬ್ಬನಿಗೆ ಮೂರು ಎಕರೆ ಬಂದಹಾಗಾಯಿತು. ಇದರಿಂದ ಒಂದೇ ವರ್ಷದಲ್ಲಿ ಉತ್ಪತ್ತಿ ಕೆಳಕ್ಕೆ ಬಂತು. ದೇಶದಲ್ಲಿ ಪರಿಸ್ಥಿತಿ ಕೆಟ್ಟುಹೋಯಿತು. ಹೀಗೆ ಸಣ್ಣ ಸಣ್ಣ ಭಾಗಮಾಡಿ ಹಂಚುವುದು ಸರಿಯಿಲ್ಲವೆಂದರಿತು ಪರಸ್ಪರ ಒಡಂಬಡಿಕೆಯಿಂದ ಕೋ-ಆಪರೇಟಿವ್ ಫಾರ್ಮಿಂಗ್ ವ್ಯವಸ್ಥೆ ಮಾಡಿದರು.

I would like to read a small passage from the Report of the Indian Delegation to China on Agricultural Planning and Techniques. It is on page 106.

> "As a result of land reform, agricultural holdings in China became extremely small. Without larger units, a continuous increase in agricultural production could not be envisaged. The conditions for a steady rise in agricultural output in the ordinary course did not exist......"

4-30 P.M.

> "... The Chinese have adopted a policy of rapid industrialization with special emphasis on the building up of heavy and basic industries, machine-building and defence. In such development, no small part of the burden of industrialization falls on peasants—a burden, the Chinese authorities feel, the peasants cannot discharge if they continue with their individual holdings, each ploughing his land with his limited resources and selling his small surplus. Thus, the pattern of industrialization of a country dictates to no small extent the pattern of agricultural development and the structure of the rural economy.
>
> "No less important than these technical and economic considerations was the view held by the leaders of the Communist Party that a socialist society could not be built up unless co-operative farming took the place of peasant-proprietorship and step by step all vestiges of individual ownership in land were discarded. As they put it 'the nation could not stand with one foot on socialistic industry and the other on a peasant economy.' Or in the words of Chairman Mao Tse-Tung, 'if positions in the countryside are not held by socialism capitalism will assuredly occupy them.' Furthermore, apart from considerations of national defence, unless agriculture itself in due course begins to employ improved techniques, including machines, the building up of basic industries and of machine building industries creates its own difficulties. The mechanisation of agriculture, over whatever period it may be achieved, requires relatively large farms so that in each country embarking upon a course, the pooling of the bulk of peasant holdings is a path difficult to escape."

AN HON'BLE MEMBER.—What is the point that the Hon'ble Member is referring to ?

Sri H. M. CHANNABASAPPA.—If the Hon'ble Member has patience I shall say that.

ಇದನ್ನೆಲ್ಲಾ ಏತಕ್ಕೋಸ್ಕರ ಓದಿ ಹೇಳಿದೆನೆಂದರೆ, ನಾವು ನಮ್ಮ ದೇಶದಲ್ಲಿಯು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ. ಕೈಗಾರಿಕೆಗಳ ಬೆಳವಣಿಗೆಯಾಗಿ ಉನ್ನತ ಮಟ್ಟದಲ್ಲಿರುವಂತಾದರೆ ದೇಶದಲ್ಲಿಯ ಜನಗಳಿಗೆಲ್ಲರಿಗೂ ಉದ್ಯೋಗ ಸಿಕ್ಕುವಂತಾಗುತ್ತದೆ. ಅದರಿಂದ ವ್ಯವಸಾಯದ ಉತ್ಪತ್ತಿಯೂ ಸಹ ಬೆಳೆಯುತ್ತದೆ. ಈ ವ್ಯವಸಾಯದ ಉತ್ಪತ್ತಿಯು ಹೆಚ್ಚಾಗಬೇಕಾದರೆ ಕೇವಲ ಸಣ್ಣ ಪುಟ್ಟ ಪ್ರಮಾಣದಲ್ಲಿ ಹಿಡುವಳಿಗಳನ್ನು ಮಾಡುವುದರಿಂದ ಆಗುವುದಿಲ್ಲ. ಸಣ್ಣ ಪುಟ್ಟ ಪ್ರಮಾಣದಲ್ಲಿರುವ ಹಿಡುವಳಿಗಳಿಂದ ವ್ಯವಸಾಯದ ಉತ್ಪತ್ತಿ ಹೆಚ್ಚಾಗುವುದು ಕಷ್ಟ.

ಶ್ರೀ ವೈ. ವೀರಪ್ಪ.—ಜಪಾನ್ ದೇಶದಲ್ಲಿ ಏನು ಅಭಿಪ್ರಾಯವಿದೆ ಎಂಬುದನ್ನು ತುಲನಾತ್ಮಕವಾಗಿ ಪರಿಶೀಲನೆಮಾಡಿ ನೋಡಿದ್ದೀರಾ ?

Sri H. M. CHANNABASAPPA.—I come to Japan also in due course; since you have raised that question I will answer.

ಚೀಣಾ ದೇಶದಲ್ಲಿಯ ಘಟನೆಗಳು ಇಲ್ಲಿನ ಭೂಸುಧಾರಣೆಯ ರೀತಿಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದೆ ಎಂದು ನಾನು ತಿಳಿದಿದ್ದೇನೆ. ಚೀಣಾ ದೇಶದಲ್ಲಿ ವ್ಯವಸಾಯದ ಉತ್ಪತ್ತಿ ಹೆಚ್ಚಾಗಲು ಅಲ್ಲಿನ ರಾಜಕೀಯ ವ್ಯವಸ್ಥೆಯೂ ಕಾರಣವಾಗಿದೆ. ಆದುದ

ರಿಂದ ಚೀಣಾದಲ್ಲಿ ವ್ಯವಸಾಯದ ಉತ್ಪತ್ತಿ ಯಾವ ರೀತಿಯಾಗಿ ಹೆಚ್ಚಾಗಿದೆ ಎಂಬುದನ್ನು ತುಲನಾತ್ಮಕ ದೃಷ್ಟಿಯಿಂದ ನೋಡಬೇಕಾಗಿದೆ. ದೇಶದಲ್ಲಿ ಕೈಗಾರಿಕೆಗಳ ಬೆಳವಣಿಗೆ ಯಾಗಬೇಕಾದರೆ ಮೊದಲು ವ್ಯವಸಾಯದ ಬೆಳವಣಿಗೆಯಾಗಬೇಕು. ಈ ವಿಷಯದಲ್ಲಿ ನಮ್ಮದು ಒಂದು ರೀತಿಯ ಅನುಭವವಿರಬಹುದು. ನಮ್ಮ ಅನುಭವವನ್ನು ಅವರಿಗೆ ಕೊಡೋಣ. ಅವರ ಅನುಭವವನ್ನು ನಾವು ತೆಗೆದುಕೊಳ್ಳೋಣ. ಎರಡು ಮೂರು ಎಕರೆಯಾದರೂ ಚಿಂತೆಯಿಲ್ಲ. ಸಣ್ಣ ಸಣ್ಣ ಹಿಡುವಳಿಗಳನ್ನುಮಾಡಿ ಭೂಮಿಯನ್ನು ಹಂಚಿಬಿಡೋಣ ಎಂಬುದು ಅಷ್ಟೊಂದು ಸರಿಯಾದ ಅಭಿಪ್ರಾಯವಲ್ಲ ಎಂದು ನಾನು ತಿಳಿಯುತ್ತೇನೆ.

Sri S. D. KOTHAVALE.—The Jatti Committee Report has not said that.

Sri H. M. CHANNABASAPPA.—I have not yet come to Jatti Committee Report.

ಸಣ್ಣ ಪುಟ್ಟ ಹಿಡುವಳಿಗಳು ಹೆಚ್ಚಾಗುವುದರಿಂದ, ಉತ್ಪತ್ತಿ ಹೆಚ್ಚಾಗದೆ ದೇಶಕ್ಕೆ ತೊಂದರೆಯಾಗುತ್ತದೆಂದು ನನ್ನ ಅಭಿಪ್ರಾಯ. ಜತ್ತಿ ಸಮಿತಿ ವರದಿಯಲ್ಲಿ ಈ ವಿಷಯವನ್ನು ಅಷ್ಟು ಸಮಂಜಸವಾಗಿ ವಿವೇಚನೆ ಮಾಡಿಲ್ಲ.

Sri J. B. MALLARADHYA.—The Hon'ble Member must take the basic holding, family holding or the ceiling fixed or proposed to be fixed in the Report and compare the conditions either in Japan or China. Otherwise he will be misleading by saying distribute 1⅓ to one hundred millions as in China. But that is not what we are proposing to do here. I want him to take what exactly is the recommendation of the Report and then compare with the foreign countries. It would be helpful.

Sri H. M. CHANNABASAPPA.—I shall try to convince him.

ಆದುದರಿಂದ ನಾವು ಭೂಮಿಯ ಹಿಡುವಳಿಗಳನ್ನು ಇನ್ನು ಸಣ್ಣದಾಗಿ ಮಾಡತಕ್ಕಂಥ ಮಾರ್ಗ ಅನುಸರಿಸುವುದಾದರೆ ಖಂಡಿತವಾಗಿ ಉತ್ಪತ್ತಿಗೆ ಧಕ್ಕೆ ಯಾಗುತ್ತದೆ. ಆದಕಾರಣ ಈ ವಿಷಯದಲ್ಲಿ ಹೆಚ್ಚಾಗಿ ನಾನು ಹೇಳಬೇಕಾಗಿಲ್ಲ.

ಈ ಜತ್ತಿ ಸಮಿತಿ ವರದಿಯಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ತೀರ್ಮಾನಮಾಡುವುದಕ್ಕೆ ಅನೇಕ ಶಿಫಾರಸುಗಳನ್ನು ಮಾಡಲಾಗಿದೆ. ಈ ಶಿಫಾರಸುಗಳಲ್ಲಿ ಅನೇಕ ಲೋಪದೋಷಗಳು ಇವೆ. ಈ ಲೋಪದೋಷಗಳಿಗೆ ಸಮಿತಿಯು ಹೊಣೆಯಲ್ಲ. ಅದಕ್ಕೆ ನಿಜವಾಗಿಯೂ ಸಮಿತಿಗೆ ಇರುವ ಸನ್ನಿವೇಶವೇ ಕಾರಣ. ಎರಡು ತಿಂಗಳುಗಳಲ್ಲಿ ಅಂದರೆ 60 ದಿವಸಗಳಲ್ಲಿ ರಾಜ್ಯದಾದ್ಯಂತವೆಲ್ಲಾ ತಿರುಗಾಡಿ ಇಂಥ ಅತ್ಯಂತ ಜಟಿಲವಾದ ಭೂಸಮಸ್ಯೆಯನ್ನು ಪರಿಶೀಲಿಸಿ ಎಲ್ಲವನ್ನೂ ಕ್ರೋಡೀಕರಿಸಿ ವರದಿಯನ್ನು ಒಪ್ಪಿಸಬೇಕೆಂದು ಹೇಳಿದರೆ ಅವರು ಏನು ಮಾಡಬಲ್ಲರು ? ಸಮಿತಿಯವರು ಕಳಿಸಿದ ಪ್ರಶ್ನಾವಳಿಗಳಿಗೆ ಐದು ಸಾವಿರಕ್ಕಿಂತ ಹೆಚ್ಚಾಗಿ ಉತ್ತರಗಳು ಬಂದಿವೆ. ಈ ಉತ್ತರಗಳನ್ನೇ ಪರಿಶೀಲನೆ ಮಾಡುವುದಕ್ಕೆ ಆರು ತಿಂಗಳು ಬೇಕಾಗಬಹುದು. ಬೇರೆ ಬೇರೆ ಪ್ರದೇಶಗಳಿಂದ ಬೇರೆ ಬೇರೆ ಪರಿಹಾರೋಪಾಯಗಳ ಸೂಚನೆಗಳು ಬಂದಿವೆ. ಈ ಸೂಚನೆಗಳನ್ನೆಲ್ಲಾ ಪರಿಶೀಲನೆ ಮಾಡಬೇಕಾಗಿದೆ. ಕೇವಲ ಪ್ರತಿಯೊಂದು ಪ್ರದೇಶದಲ್ಲಿ ಹೇಳಿದ ಅನೇಕ ವಿಷಯಗಳನ್ನು ಗ್ರಹಣ ಮಾಡುವುದಕ್ಕೇ ಹೆಚ್ಚು ಕಾಲಬೇಕು. ಅವನ್ನು ಪರಿಶೀಲನೆ ಮಾಡುವುದು ಇನ್ನೂ ಹೆಚ್ಚು ಕಷ್ಟವಾಗಿರಬಹುದು. ಮೊದಲಿನದಕ್ಕಿಂತ ಎರಡು ತಿಂಗಳ ಅವಧಿಯನ್ನು ಹೆಚ್ಚಿಗೆ ಸಮಿತಿಗೆ ಕೊಟ್ಟಿದ್ದರೂ ಅದು ಸಾಕಷ್ಟು ಆಗಿರುವುದಿಲ್ಲ. ಜತ್ತಿಸಮಿತಿಯವರು ಒಪ್ಪಿಸಿದ ವರದಿಯನ್ನು ನಾವು ಈಗ ಪರಿಶೀಲನೆ ಮಾಡಬೇಕಾಗಿದೆ. ಜತ್ತಿಸಮಿತಿಯವರು ಯಾವ ಒರೆಗಲ್ಲನ್ನು ಇಟ್ಟುಕೊಂಡು ಈ ಶಿಫಾರಸುಗಳನ್ನು ಮಾಡಿದ್ದಾರೆಯೋ ಅಂಥ ಒರೆಗಲ್ಲನ್ನು ನಾವು ಮೊದಲು ಪರಿಶೀಲನೆ ಮಾಡಬೇಕಾಗಿದೆ. The Committee have enunciated the following as the main objectives of tenancy reform :—

(1) The elimination of the landlord-tenant relationship,

and

(2) redistribution of land to satisfy the aspiration of the landless.

ಜತ್ತಿ ಸಮಿತಿಯ ಮೊದಲನೆಯ ಶಿಫಾರಸನ್ನು ಒಪ್ಪಿಕೊಂಡರೆ ದೇಶದಲ್ಲಿ ವ್ಯವಸಾಯ ಉತ್ಪತ್ತಿ ಹೆಚ್ಚುವುದಿಲ್ಲ. ಎರಡನೆಯ ಶಿಫಾರಸನ್ನು ಕುರಿತು ಹೇಳುವುದಾದರೆ ರೈತಾಪಿ ಜನರೂ ಸಹ ಮನುಷ್ಯರಾಗಿರುವುದರಿಂದ ಎಲ್ಲಾ ಭೂಮಿಯನ್ನೂ ಕಷ್ಟಪಟ್ಟು ಸಂಪೂರ್ಣವಾಗಿ ಸಾಗುವಳಿಮಾಡಿ ಹೆಚ್ಚು ಉತ್ಪತ್ತಿ ಬರುವ ಹಾಗೆ ಒಂದು ವಾತಾವರಣವನ್ನು ಕಲ್ಪಿಸಬೇಕಾಗಿದೆ. ಸಮಾಜದಲ್ಲಿ ಎಲ್ಲರಿಗೂ ಸಮಾನವಾಗಿ ನ್ಯಾಯ ದೊರಕಬೇಕು. ಗ್ರಾಮಗಳಲ್ಲಿರುವ ಮುಂದಾಳುಗಳು ಮುಂದೆ ಬಂದು ಮುಂದಾಳುತನವನ್ನು ವಹಿಸಿ ವ್ಯವಸಾಯೋತ್ಪತ್ತಿ ಹೆಚ್ಚಾಗುವ ರೀತಿಯಲ್ಲಿ ಸಹಾಯ ಮಾಡುವುದು ಅವಶ್ಯಕವಾಗಿದೆ. ಆ ರೀತಿ ಒಂದು ಪರಿಣಾಮವನ್ನು ಉಂಟುಮಾಡತಕ್ಕಂಥಾದ್ದು ಏನಾದರೂ ಈ ವರದಿಯಲ್ಲಿ ಇದೆಯೇ ? ಈ ವ್ಯವಸಾಯ ಕ್ಷೇತ್ರಕ್ಕೆ ಒಂದು ಉತ್ತಮ ದರ್ಜೆಯಸ್ಥಾನ ದೊರೆತು ಜನರು ಆದರಿಸುವಂತೆ ಮಾಡುವುದಕ್ಕೆ ಏನಾದರೂ ಈ ಶಿಫಾರಸುಗಳ ಮೂಲಕ ಏರ್ಪಾಡು ಆಗಿದೆಯೇ ಎನ್ನತಕ್ಕಂಥಾದ್ದು ಇನ್ನೊಂದು ವಿಷಯ. ಗ್ರಾಮಾಂತರಗಳಲ್ಲಿಯ ಜನರು ವ್ಯವಸಾಯದ ಬಗ್ಗೆ ಮುಂದಾಳುತನ ವಹಿಸಲು ಏನಾದರೂ ಮಾಡಲಾಗಿದೆಯೇ ?

ಉತ್ತಮ ದರ್ಜೆಯ ಜನ, ದಕ್ಷತೆಯಿಂದ ವ್ಯವಸಾಯ ಮಾಡುವ ಜನ, ಬುದ್ಧಿಶಕ್ತಿಯಿಂದ ಕೆಲಸಮಾಡುವ ಜನ ಆಕರ್ಷಿತರಾಗಿ ಬರುವುದಕ್ಕೆ ಅವಕಾಶವಿರಬೇಕು. ಒಂದುವೇಳೆ ಈ ಶಿಫಾರಸುಗಳನ್ನು ನಾವು ಅನುಕರಣೆ ಮಾಡುವುದರಿಂದ ಆ ಉದ್ದೇಶ ಪೂರೈಕೆಯಾಗುವ ಪಕ್ಷದಲ್ಲಿ ಅಗತ್ಯವಾಗಿಮಾಡಿ. ಮುಖ್ಯವಾಗಿ ಪ್ರತಿಯೊಂದು ಶಿಫಾರಸ್ಸನ್ನೂ ಈ ಒರೆಗಲ್ಲಿನಲ್ಲಿ ಪರಿಶೀಲನೆಮಾಡಿ ಸರಿಯಾಗಿದ್ದರೆ ಒಪ್ಪಿಕೊಳ್ಳೋಣ. ಒಂದುವೇಳೆ ಹೆಚ್ಚು ಕಡಮೆಯಿದ್ದರೆ ಸರಿಪಡಿಸೋಣ; ಅಥವಾ ಇನ್ನೂ ಮುಂದೆ ಹೋಗಿ ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡೋಣ. ಈ ಶಿಫಾರಸ್ಸುಗಳನ್ನು ಪರಿಶೀಲಿಸುವಾಗ ಸ್ಥಳದ ವಿದ್ಯಮಾನಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು.

(SRI H. M. CHANNABASAPPA)

ಈಗ ನಮ್ಮಲ್ಲಿ ಏನಾಗಿದೆ? ಒಂದು ಕಡೆ ಜತ್ತಿ ಸಮಿತಿಯ ರಿಪೋರ್ಟಿನಲ್ಲೇ ಹೇಳಿದ್ದಾರೆ, ಎಲ್ಲಿ ಹೊಸದಾಗಿ ಈ ರೀತಿಯ ಶಾಸನಗಳನ್ನು ಜಾರಿಗೆ ತಂದೆವೋ, ಅಲ್ಲಿ tenancy problem ಬಹಳ ಉತ್ಕಟವಾಗಿದೆ. ಇದು ತಪ್ಪು ಅಭಿಪ್ರಾಯ. ಅಂಕಿ ಅಂಶಗಳಿಂದ ಇದು ಹೊರಬೀಳುವುದಿಲ್ಲವೆಂದು ನಾನು ವಿನಯದಿಂದ ಹೇಳುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಇತ್ತೀಚೆಗೆ ಈ ಶಾಸನಗಳು ಬಂದಿವೆ. ಹೈದರಾಬಾದಿನಲ್ಲಿ, ಬೊಂಬಾಯಿನಲ್ಲಿ ಬಹಳ ವರ್ಷಗಳಿಂದ ಇತ್ತು. ವಾಸ್ತವವಾಗಿ ನೋಡಿದರೆ, ಹಳೆಯ ಮೈಸೂರು ಸಂಸ್ಥಾನದಲ್ಲಿ ಟೆನೆನ್ಸಿ ಪ್ರಶ್ನೆ ಹೈದರಾಬಾದ್, ಬೊಂಬಾಯಿ ಪ್ರದೇಶದಲ್ಲಿರುವಂತೆ ಇಲ್ಲವೇ ಇಲ್ಲ. ಹೀಗಿರುವಲ್ಲಿ, ಈ ಅಭಿಪ್ರಾಯವನ್ನೇ ತಳಹದಿಯಾಗಿಟ್ಟುಕೊಂಡು ಚರ್ಚೆ ಮಾಡುತ್ತಾ ಹೋದರೆ, ನಮ್ಮ ಚರ್ಚೆ futile ಆಗುತ್ತದೆ. ಹೈದರಾಬಾದಿನಲ್ಲಿ, ಬೊಂಬಾಯಿನಲ್ಲಿ ಮತ್ತು ಹಳೆಯ ಮೈಸೂರಿನ ಭಾಗದಲ್ಲಿ ಎಷ್ಟೆಷ್ಟು ಭೂಮಿಯನ್ನು ಬೇಸಾಯಕ್ಕೆ ಗೇಣಿಗೆ ಕೊಟ್ಟಿದ್ದಾರೆಂಬುದನ್ನು ನೋಡಿ. 1955-56ನೆಯ Statistics ಪ್ರಕಾರ 61,36,000 ಎಕರೆಗಳಷ್ಟು ಗೇಣಿ ಜಮೀನಿದೆ. ಸರ್ಕಾರದವರು ಇತ್ತೀಚಿನ ಅಂಕಿಅಂಶಗಳನ್ನು ಒದಗಿಸಿದ್ದಿದ್ದರೆ ಚೆನ್ನಾಗಿತ್ತು. ಏಕೆಂದರೆ ಈ ಶಾಸನಗಳು ಜಾರಿಯಲ್ಲಿರುವುದರಿಂದಲೂ ಮತ್ತು ಇತರ ನಾನಾ ಕಾರಣಗಳಿಂದಲೂ ಅನೇಕ ಬದಲಾವಣೆಗಳು ಆಗುತ್ತಿರುತ್ತವೆ. ಈಗ ಬೇರೆ Statistics ನಮ್ಮಲ್ಲಿ ಇಲ್ಲದಿರುವುದರಿಂದ ಈ ಹಳೆಯದನ್ನೇ ಆಧಾರವಾಗಿಟ್ಟುಕೊಂಡು ನಾನು ಹೇಳಬೇಕಾಗಿದೆ. ಹೀಗೆ ನಮ್ಮಲ್ಲಿರುವ 61 ಲಕ್ಷ 36 ಸಾವಿರ ಎಕರೆ ಗೇಣಿಗೆ ಲಾಯಕ್ಕಾದ ಜಮೀನುಗಳಲ್ಲಿ ಮೈಸೂರಿನಲ್ಲಿ 6 ಲಕ್ಷ 83 ಸಾವಿರ ಎಕರೆಗಳನ್ನು ಮಾತ್ರ ಗೇಣಿಗೆ ಕೊಟ್ಟಿದ್ದಾಗಿದೆ; ಬೊಂಬಾಯಿನಲ್ಲಿ ನಾಲ್ಕೂವರೆ ಲಕ್ಷ ಎಕರೆ ಕೊಟ್ಟಿದ್ದಾರೆ; ಹೈದರಾಬಾದಿನಲ್ಲಿ ನಾಲ್ಕೂವರೆ ಲಕ್ಷ ಎಕರೆ ಕೊಟ್ಟಿದ್ದಾರೆ. ಮದರಾಸಿನಲ್ಲಿ ಒಂದು ಲಕ್ಷ ಎಕರೆ ಕೊಟ್ಟಿದ್ದಾರೆ; ಅಲ್ಲಿಗೆ ಒಟ್ಟಿನಲ್ಲಿ ಯಾವ ಪ್ರಮಾಣದಲ್ಲಿ ಗೇಣಿಗೆ ಜಮೀನುಗಳನ್ನು ಕೊಡಲಾಗಿದೆಯೆಂಬುದು ವ್ಯಕ್ತಪಡುತ್ತಿದೆ. ನಾನು ಹೋದ ಸಲ ಮಾತನಾಡುವಾಗಲೂ ಇದೇ ವಿಚಾರವನ್ನು ಹೇಳಿದೆ. ಇನ್ನು ಸ್ವಂತ ಬೇಸಾಯ ಮಾಡತಕ್ಕ ಒಬ್ಬ ಮನುಷ್ಯನ ಕೈಯಲ್ಲಿ ಎಷ್ಟಿದೆ, ಗೇಣಿ ಮಾಡತಕ್ಕ ಮನುಷ್ಯನ ಕೈಯಲ್ಲಿ ಎಷ್ಟಿದೆಯೆಂಬುದನ್ನು ನೋಡೋಣ. ಈ ಬಗ್ಗೆ ಹೋದ ವರ್ಷ ನಾನು ಅಂಕಿಅಂಶಗಳನ್ನು ಕೊಟ್ಟಿದ್ದು ತಮಗೆ ಜ್ಞಾಪಕವಿರಬಹುದು. ಒಂದೊಂದು ಜಿಲ್ಲೆಯನ್ನೂ ನೋಡೋಣ. ಬಿಜಾಪುರ ಜಿಲ್ಲೆಯಲ್ಲಿ ಬಹಳಮಟ್ಟಿಗೆ ಗೇಣಿಯ ಸಮಸ್ಯೆಯಿದೆ. ಸರಾಸರಿ ಒಬ್ಬೊಬ್ಬ ಗೇಣಿಮಾಡತಕ್ಕವನ ಹತ್ತಿರ 75 ಎಕರೆಗಳಿವೆ.

ಒಬ್ಬ ಸದಸ್ಯರು.—ಹೇಗೆ ಹೇಳುತ್ತಿದ್ದೀರಿ? ಖುಷ್ಕಿಯೂ ಸೇರಿಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನಲ್ಲಿರುವ ಅಂಕಿಅಂಶಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಖುಷ್ಕಿ, ತರಿ ಎಲ್ಲವೂ ಸೇರಿರಬಹುದು. ಅಂತು ಬಿಜಾಪುರ ಜಿಲ್ಲೆಯಲ್ಲಿ ಸರಾಸರಿ 75 ಎಕರೆಯಷ್ಟಿದೆ. ಅದೇ ಜಿಲ್ಲೆಯಲ್ಲಿ ವಾಸ್ತವವಾಗಿ ಬೇಸಾಯಮಾಡತಕ್ಕವನ ಕೈಯಲ್ಲಿ 16 ಎಕರೆಗಳು ಮಾತ್ರ ಇವೆ. ರಾಯಚೂರು ಡಿಸ್ಟ್ರಿಕ್ಟ್ ತೆಗೆದುಕೊಂಡರೆ, ಗೇಣಿ ಮಾಡತಕ್ಕವನ ಕೈಯಲ್ಲಿ 54 ಎಕರೆಯಿದೆ; ಸ್ವಂತ ಬೇಸಾಯಮಾಡತಕ್ಕವನ ಕೈಯಲ್ಲಿ 22½ ಎಕರೆಯಿದೆ. ಗುಲ್ಬರ್ಗದಲ್ಲಿ ಗೇಣಿಮಾಡತಕ್ಕವನ ಕೈಯಲ್ಲಿ 54 ಎಕರೆಯಿದೆ, ಸ್ವಂತ ಬೇಸಾಯ ಮಾಡತಕ್ಕವನ ಕೈಯಲ್ಲಿ 27 ಎಕರೆಯಿದೆ.

ಒಬ್ಬ ಸದಸ್ಯರು.—ಎಲ್ಲಾ ಅಣ್ಣಾವಟ್ಟೆಗಾರ್ರೇ ಜಾಸ್ತಿ!!

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಅಂಕಿಅಂಶಗಳನ್ನು ನೀವೇ ಪರಿಶೀಲನೆಮಾಡೋಣವಾಗಲಿ. ಒಂದು ವೇಳೆ ಅಲ್ಲಿನವರು ಅಷ್ಟು ಉತ್ತಮವಾದ ಕಾನೂನನ್ನು, ಬಹಳ ಮುಂದುವರಿದಂಥ ಕಾನೂನನ್ನು ಅಲ್ಲಿ ಜಾರಿಗೆ ತಂದಿದ್ದಾರೆಂದರೆ, ಅಲ್ಲಿ ಆಗ್ಗೆ ಬಹಳ ಅವಶ್ಯಕವಾಗಿತ್ತು ಎಂದು ಗೊತ್ತಿತ್ತು. ಆದಾದ ಮೇಲೆ ಆ ಪ್ರದೇಶಗಳು ಮೈಸೂರಿಗೆ ಬಂದುವು. ಅಲ್ಲಿ ಏಪ್ರಿಲ್ ಒಂದನೆಯ ತಾರೀಖಿಂದ ಮೇಲೆ ಭೂಮಿ ಯಾರಿಗೆ ಹೋಗಬೇಕೆಂದು ಅಲ್ಲಿನ ಶಾಸನ ಸಭೆಗಳು ತೀರ್ಮಾನ ತೆಗೆದುಕೊಂಡವು. ಈ ಬಗ್ಗೆ ಇಲ್ಲಿಯೂ ಅನೇಕ ಸದಸ್ಯರು ಮಾತನಾಡಿದರು; ಅದಕ್ಕೆ ರೆವಿನ್ಯೂ ಮಂತ್ರಿಗಳೂ ಒಪ್ಪಿಗೆ ಕೊಟ್ಟರು. ನಾನೀಗ ಪ್ರಶ್ನೆ ಮಾಡುವುದೇನೆಂದರೆ, ಅದು ಬಹಳ ಮುಂದುವರಿದ ಕಾನೂನಾದರೆ ಅದನ್ನೇಕೆ ಬೇಡ ಎನ್ನುತ್ತೀರಿ? ಏಪ್ರಿಲ್ ಒಂದನೆಯ ತಾರೀಖಿನ ದಿವಸ ಯಾವಯಾವ ಜನಗಳ ಕೈಯಲ್ಲಿ ಭೂಮಿಯಿತ್ತೋ, ಅವರಿಗೇ ಅದಾಗಬೇಕೆಂದು ಬೊಂಬಾಯಿ ಶಾಸನ ಸಭೆ ಒಪ್ಪಿತು. ಅಂದಮೇಲೆ, ಅದು ಉತ್ತಮವಾದದ್ದು, ಅನುಕೂಲವಾದದ್ದು ಎಂದದ್ದೇ ಆದರೆ ಅದನ್ನೇಕೆ ಇಲ್ಲಿ ನಿಲ್ಲಿಸಿದಿರಿ? ಹಳೆಯ ಮೈಸೂರಿನಲ್ಲಿ ಇಲ್ಲ, ಕೊಡಗಿನಲ್ಲಿ ಇಲ್ಲ, ಆದ್ದರಿಂದ ಅದು ಇಲ್ಲಿಯೂ ಬೇಡ ಎನ್ನುವುದೇಕೆ? ಒಂದು ಕಡೆ ಈ ಕಾನೂನು ಮುಂದುವರಿದ ಕಾನೂನು, ಬಹಳ ಪ್ರಗತಿದಾಯಕವಾದದ್ದು ಎಂದು ವಾದಿಸುವುದೂ, ಇನ್ನೊಂದು ಕಡೆ ಈ ಕಾನೂನು ಬೇಡ ಎನ್ನುವುದೂ ಸರಿಯಲ್ಲ. ಈ ಹೊತ್ತು ಇಡೀ ಬೊಂಬಾಯಿ ಪ್ರಾಂತದ ಜನರಿಗೆ ಒಂದು ಆಶಾಕಾಂಕ್ಷೆಯನ್ನು ತೋರಿಸಿದ್ದೀರಿ; ಇಂಥ ದಿವಸ ಬರುತ್ತದೆಂದು ಆಶ್ವಾಸನ ಕೊಟ್ಟಿದ್ದೀರಿ. ಈ ಹೊತ್ತು ಆ ಕಾನೂನು ಬೇಡ, ಬೇರೊಂದು ಶಾಸನ ಮಾಡುತ್ತೇವೆಂದರೆ ಅಲ್ಲಿಗೆ, ಹಿಂದೆ ಕೊಟ್ಟ ವಾಗ್ದಾನ ಏನಾಯಿತು? Uniform Law ಆಗಬೇಕೆಂದು ಹೇಳಿ, ಬೊಂಬಾಯಿನಲ್ಲಿ ಈ ರೀತಿ ಆಗಿದೆಯೆಂದು ಹೇಳಿ ಇಲ್ಲಿಯೂ ತನ್ನಿ ಎಂದು ಹೇಳುತ್ತೀರಾ? ನಾವು ಬೊಂಬಾಯಿನಲ್ಲಿ ಆ ರೀತಿ ತೀರ್ಮಾನ ತೆಗೆದುಕೊಂಡಿದ್ದೇವೆ ಎಂದು ಹೇಳಿ ಕೊಡಗಿನಲ್ಲಿಯೂ ಅದೇ ರೀತಿ ಮಾಡಿ ಎನ್ನುವುದು ಸರಿಯೇ? ನಿಮಗೆ 108 ಡಿಗ್ರಿ ಜ್ವರ ಬಂದಿದೆಯೆಂದುಕೊಂಡು ಇಂಜಕ್ಷನ್ ತೆಗೆದುಕೊಂಡರೆ, ನೀವೂ ಅದೇ ರೀತಿ ಇಂಜಕ್ಷನ್ ತೆಗೆದುಕೊಳ್ಳಿರಿ ಎನ್ನುವುದರಲ್ಲಿ ಅರ್ಥವೇನು? ನಿಮ್ಮ ಉದ್ದೇಶವಾದರೂ ಜನಗಳಿಗೆ ಭೂಮಿ ಸಿಕ್ಕಿ ಅವರು ಚೆನ್ನಾಗಿ ಬೇಸಾಯಮಾಡುವಂತಾಗಲಿ ಎಂಬುದು. ಅದನ್ನು ಸಾಧಿಸುವುದದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡಬೇಕೇ ಹೊರತು ಅದಕ್ಕೊಂದು ರಾಜಕೀಯ ಬಣ್ಣವನ್ನು ಕೊಡುವುದು ಸರಿಯಲ್ಲ. ಇದೊಂದು ರಾಜಕೀಯ ರಂಗವಾಗಬಾರದು. ಒಂದುವೇಳೆ ಶ್ರೀ ಚನ್ನಬಸಪ್ಪನವರ ಜಮೀನೇ ಹೋಗಬಹುದು; ಅಥವಾ ಇನ್ನೊಬ್ಬರದೇ ಹೋಗಬಹುದು. ಅದು ಪ್ರಾಮುಖ್ಯವಲ್ಲ. ನಾಳೆ ದಿವಸ ದೇಶಕ್ಕೆ ಒಳ್ಳೆಯದಾಗಬೇಕಾದದ್ದು ಮುಖ್ಯ.

ಈಗ ಅನೇಕ ಜನಗಳಲ್ಲಿ ಒಂದು ತಪ್ಪಭಿಪ್ರಾಯವಿದೆ. ಅದನ್ನು ತೆಗೆಯಬೇಕೆಂಬುದೇ ನನ್ನ ಆಸೆ. ಶ್ರೀ ಚನ್ನಬಸಪ್ಪನವರಿಗೆ ಬಹಳ ಜಮೀನಿದೆಯೆಂದು ಹೇಳುತ್ತಾರೆ. ಶ್ರೀ ನರಸಿಂಹನ್‌ರವರು "ಚನ್ನಬಸಪ್ಪನವರು ಜಮೀನುದಾರರ ಕಡೆ ವಾದಿಸುತ್ತಾರೆ" ಎಂದು ನಾನು ಮಾತನಾಡುವುದಕ್ಕೆ ಮುಂಚೆ ಹೇಳಿದರು. I may assure my Hon'ble friend Sri Narasimhan that Channabasappa is not a Zamindar in the sense of the terminology in which he is referring to me. But he is a man who is able to produce wealth. ಈಗ ಇರತಕ್ಕಂಥ ಪ್ರಶ್ನೆಯನ್ನು ಬಿಡಿಸುವಾಗ ಯಾರಿಗೆ ಸಂಬಂಧವಿದೆ, ಯಾರಿಗಿಲ್ಲ ಎಂಬುದನ್ನು ನೋಡೋಣ. ಭೂಮಾಲೀಕರು ತಾವು ಸ್ವತಃ ವ್ಯವಸಾಯಮಾಡದಿದ್ದರೆ ಭೂಮಿಯನ್ನಿಟ್ಟುಕೊಂಡು dog in the manger policy ಅನುಸರಿಸುವುದು ಸರಿಯಿಲ್ಲ ಎಂದು ಹೇಳಿದ್ದಾರೆ. ಅಂದ ಮೇಲೆ ಇನ್ನು ಟೆನೆನ್ಸಿ ಪ್ರಶ್ನೆ ಏಳುವುದಕ್ಕೆ ಅವಕಾಶವಿದೆ. ಇದಕ್ಕೆ ಒಂದು ಸಲಹೆಯಿದೆ, ಅದರಿಂದ ಸುಲಭವಾಗಿ ಈ ಸಮಸ್ಯೆ ಪರಿಹಾರವಾಗುತ್ತದೆ, ಇನ್ನು ಮುಂದೆ ಉಳುವವನೇ ಭೂಮಿಯ ಒಡೆಯ ಎಂದು ಶಾಸನವನ್ನು ಮಾಡಿದರೆ ಸರಿಹೋಗುತ್ತದೆ, ಟೆನೆಂಟ್ ಮತ್ತು ಲ್ಯಾಂಡ್ ಲಾರ್ಡ್ ಎಂದಿರುವವರೆಗೆ ಇಲ್ಲದಿರುವ ಜಾಡ್ಯ ಇದ್ದೇ ಇರುತ್ತದೆ ಎಂದು ಹೇಳುವುದು ಒಂದು ಭ್ರಾಂತಿಯ ಮಾತು. ಎಷ್ಟೋ ಪಾಳು ಭೂಮಿ ಅನೇಕ ಕಡೆ ಇದೆ. The Fallow Lands Act, when it was enacted, I said that it would be a dead letter on the statute book. ಟೆನೆನ್ಸಿ ಲ್ಯಾಂಡ್ ಲಾರ್ಡಿಸಂ ಲೆಜಿಸ್ಲೇಷನ್ ಮಾಡುವುದಕ್ಕೆ ಸಾಧ್ಯವಾಗಿಲ್ಲ, ಈ ವಿಚಾರ ಆಖೈರು ಮಾಡಬೇಕು ಎಂದು ಜತ್ತಿ ಸಮಿತಿಯವರೂ ಸಹ ಹೇಳಿದ್ದಾರೆ. ಈ ವಿಷಯದಲ್ಲಿ ನನ್ನ ಸಂಪೂರ್ಣ ಬೆಂಬಲವನ್ನು ಸಮಿತಿಯವರಿಗೆ ಕೊಡುತ್ತೇನೆ. ಲೆಜಿಸ್ಲೇಷನ್‌ನಿಂದ ಈ ಟೆನೆನ್ಸಿ ಲ್ಯಾಂಡ್ ಲಾರ್ಡಿಸಂ ಸುಧಾರಣೆ ಮಾಡುವುದರಲ್ಲಿ ನಾವು ಯಶಸ್ವಿಯಾಗಿಲ್ಲವೆಂದು ಹೇಳಿದ್ದಾರೆ. ಇದು ಹೋಗಬೇಕು, ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಟೆನೆನ್ಸಿ ಇರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ, ಮೈನರ್ಸ್, ಹೆಂಗಸರು, ಡಿಸ್‌ಏಬಲ್ಡ್ ಪರ್ಸನ್ಸ್ ಇರುವ ಕಡೆ ವಿನಾಯಿತಿಯಿರಬೇಕು ಎಂದು ಹೇಳಿರುವುದನ್ನು ಒಪ್ಪಿಕೊಳ್ಳುತ್ತೇನೆ. ಎಂದಮೇಲೆ ಡಿಸ್‌ಏಬಲ್ಡ್ ಪೀಪಲ್, ಹೆಂಗಸರು, ಮಕ್ಕಳು ಇಂಥವರ ವಿಷಯದಲ್ಲಿ ಮಾತ್ರ ಟೆನೆನ್ಸಿಗೆ ಅವಕಾಶವಿರಬೇಕೇ ವಿನಾ ಟೆನೆನ್ಸಿ ವಿಷಯದಲ್ಲಿ ಹೆಚ್ಚು ಪ್ರಾಮುಖ್ಯತೆ ಕೊಡುವುದು ಅನಾವಶ್ಯಕ. ಈ ಸಮಸ್ಯೆಯನ್ನು ನಾವು ಕಾಂಪ್ಲಿಕೇಟ್ ಮಾಡಿದಷ್ಟೂ ಬಡವರಿಗೆ ಕಷ್ಟವಾಗುತ್ತದೆ, ಅವರು ಕೋರ್ಟು ಕಛೇರಿಗಳಿಗೆ ಅಲೆಯಬೇಕಾಗುತ್ತದೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ಒಂದು ತಾರೀಖನ್ನು ಗೊತ್ತುಮಾಡಿ ಅವೊತ್ತಿನಿಂದಾಚೆಗೆ ಯಾವಯಾವುದಕ್ಕೆ ವಿನಾಯಿತಿ ತೋರಿಸಿದೆಯೋ ಆ ಸಂದರ್ಭಗಳಲ್ಲಿ ಮಾತ್ರ ಟೆನೆನ್ಸಿಗೆ ಅವಕಾಶಕೊಡಲಾಗುತ್ತದೆಯೇ ವಿನಾ ಉಳಿದ ಸಂದರ್ಭಗಳಲ್ಲಿ ಅದನ್ನು ಪರಿಗಣಿಸುವುದಿಲ್ಲ ಎಂದು ಶಾಸನಮಾಡಬೇಕು ಎಂಬುದು. ಆಮೇಲೆ ಭೂಮಾಲೀಕರಿಗೆ ಎರಡು ಮಾರ್ಗಗಳು ಮಾತ್ರ ಇರುತ್ತವೆ. ಅವರು ಭೂಮಿಯನ್ನು ಉಳಬೇಕು ಅಥವಾ ಕೊಟ್ಟುಬಿಡಬೇಕು. ಹಾಗಿರುವಾಗ ಶಾಸನದಲ್ಲಿ ಎಪ್ಪತ್ತೆಂಟು ಕಲಮುಗಳೇಕೆ ?

Mr. DEPUTY SPEAKER.—The Hon'ble Member's time is up.

Sri H. M. CHANNABASAPPA.—I beg to submit, Sir, that I require a little more time. If the Hon'ble Speaker and the House will bear with me, I shall be much obliged.

Sri B. BASAVALINGAPPA.—Mr. Speaker, Sri Channabasappa just now has placed before the House certain guiding principles which should be before the Jatti Committee, namely, how the Report has helped the growth of personality, how it has helped production, how it has helped rural relation. Let him explain the point further, Sir.

Sri H. M. CHANNABASAPPA.—Nowhere in the Jatti Committee Report do I read a proposal to augment production. I am telling you, but the time is so short. ಈಗ ಮೊದಲು ಟೆನೆನ್ಸಿ ಪ್ರಶ್ನೆಯನ್ನು ಕೊನೆಗಾಣಿಸಬೇಕಾದ್ದು ಉತ್ತಮವಾದುದು ; ನಾನು ಇದನ್ನು ಒಪ್ಪುತ್ತೇನೆ. ನೀವು ಹೇಳುವ ಮಾರ್ಗದಲ್ಲಿ ಸ್ವಲ್ಪ ಬದಲಾವಣೆಮಾಡಿ ಒಂದು ತಾರೀಖು ನಿಗದಿಮಾಡಿ ಅಲ್ಲಿಂದಾಚೆಗೆ ಟೆನೆನ್ಸಿ ಇರುವುದನ್ನು ಪರಿಗಣಿಸುವುದಿಲ್ಲ, ವಿನಾಯತಿ ತೋರಿಸಿರುವುದಕ್ಕೆ ಮಾತ್ರ ಅವಕಾಶವಿದೆ ಎಂದು ಹೇಳಬೇಕು.

5 P.M.

Sri M. P. PATIL.—The Hon'ble Member has spoken for one hour, the maximum time fixed for him.

Sri H. M. CHANNABASAPPA.—If the Hon'ble Minister thinks that I am overstepping the limit and that my suggestions are not convenient, I request the Chair and the Hon'ble Members to bear with me.

Sri B. D. JATTI (Jamkhandi).—I request the Hon'ble Member to be brief.

Sri H. M. CHANNABASAPPA.—You make your remarks precisely but I take a little more time.

Sri B. D. JATTI.—Please come to the Report.

Sri H. M. CHANNABASAPPA.—I am coming to that.

ಗೇಣಿ ಪ್ರಮಾಣ ಒಟ್ಟು ಉತ್ಪತ್ತಿಯಲ್ಲಿ ನಾಲ್ಕನೆಯ ಒಂದು ಭಾಗ ಮತ್ತು ಐದನೆಯ ಒಂದು ಭಾಗವಿರಬೇಕೆಂದು ಸಮಿತಿ ವರದಿಮಾಡಿದೆ. ನನ್ನ ಅಭಿಪ್ರಾಯದಲ್ಲಿ ಒಬ್ಬ ದೊಡ್ಡ ಜಮೀನ್‌ದಾರನನ್ನು ಮತ್ತಿತರರನ್ನೂ ಒಂದೇ ತಕ್ಕಡಿಯಲ್ಲಿ ಹಾಕುವುದು ಮಾರ್ಪಾಡಾಗಬೇಕು. ವಿನಾಯಿತಿ ವರ್ಗದವರಿಗೆ ಸಂಬಂಧಪಟ್ಟ ಸಂದರ್ಭಗಳಲ್ಲಿ ಗೇಣಿ ಪ್ರಮಾಣವನ್ನು ಮೂರನೆಯ ಒಂದು ಭಾಗದಷ್ಟು ಗೊತ್ತುಮಾಡುವುದು ಧರ್ಮ ಮತ್ತು ಸೂಕ್ತ.

(SRI H. M. CHANNABASAPPA)

ಈ ಆಬ್ಸೆಂಟೀ ಲ್ಯಾಂಡ್‌ಲಾರ್ಡ್ಸ್: ಇವರದೇ ಒಂದು ದೊಡ್ಡ ಪ್ರಶ್ನೆ. ಅವರು ಇರಬೇಕೇ, ಹೋಗಬೇಕೇ; ಏಕೆ ಅವರು ಇರಬಾರದು ಎನ್ನುವ ಪ್ರಶ್ನೆ ದೇಶದ ಮುಂದಿದೆ. "ನಾವು ಏನು ತಪ್ಪುಮಾಡಿದ್ದೇವೆ. ಕಾನೂನು ಪ್ರಕಾರ ಎಲ್ಲರೂ ಜಮೀನನ್ನು ಇಟ್ಟುಕೊಂಡಿರಬಹುದು" ಎಂದು ಅವರು ಹೇಳುತ್ತಾರೆ. ಈ ಆಬ್ಸೆಂಟೀ ಲ್ಯಾಂಡ್‌ಲಾರ್ಡ್ಸ್ ವಿಚಾರವಾಗಿ ಮಾತನಾಡುವಾಗ ಮಾನ್ಯ ಸದಸ್ಯರಲ್ಲಿ ಒಂದು ವಿಷಯ ವಿನಂತಿಮಾಡಿಕೊಳ್ಳುತ್ತೇನೆ. ಜಮೀನ್‌ದಾರಿ ಪದ್ಧತಿ ಹೊರಟುಹೋಗಲಿ. ಇಲ್ಲಿ ಭೂಮಿಯನ್ನು ಕೊಂಡುಕೊಂಡಿರತಕ್ಕಂಥ ಪ್ರತಿಯೊಬ್ಬ ಮನುಷ್ಯನೂ ತಾನು ಸಂಪಾದಿಸಿದ ಹಣದಿಂದ ಕೊಂಡುಕೊಂಡಿದ್ದಾನೆ. ಅವನು ಅದನ್ನು ಪುಕಸಟ್ಟೆಯಾಗಿ ತೆಗೆದುಕೊಂಡಿಲ್ಲ. ಇವತ್ತು ಲ್ಯಾಂಡ್‌ಲಾರ್ಡ್ಸ್‌ಗಳಲ್ಲಿ ದೊಡ್ಡವರೂ ಇದ್ದಾರೆ, ಸಣ್ಣವರೂ ಇದ್ದಾರೆ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಗ್ರೋಮೋರ್ ಫುಡ್ ಕ್ಯಾಂಪೈನ್ ಸಂಬಂಧದಲ್ಲಿ ಬಂದ ಜಮೀನು ಹೇಗೆ ಬಂದದ್ದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದಿಂದ ಬಂದದ್ದು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಶಿಷ್ಯರಿಂದ ಗುರುಗಳಿಗೆ ಬಂದದ್ದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಪುಗಸಟ್ಟೆ ಬಂದದ್ದು. ಭೂಮಾಲೀಕರು ಎಂದರೆ ನಮ್ಮ ಮುಂದೆ ಬರತಕ್ಕಂಥವರು, ದೊಡ್ಡ ದೊಡ್ಡ ಜಮೀನ್ದಾರರು. ಅದು ಅಲ್ಲ. ನಮ್ಮ ಹಳೆಯ ಮೈಸೂರು ಸಂಸ್ಥಾನದಲ್ಲಿ ಎರಡು ಎಕರೆಯಿಂದ ಹತ್ತು ಎಕರೆವರೆಗೆ ಪಡೆದಿರುವ ಜಮೀನ್ದಾರರು ಇದ್ದಾರೆ. ಖುದ್ದಾಗಿ ವ್ಯವಸಾಯ ಮಾಡದಿರುವ ಭೂಮಾಲೀಕರು ಹೋಗಬೇಕು ಎನ್ನುವ ತೀರ್ಮಾನ ತೆಗೆದುಕೊಂಡರೆ ಜಯಪುರದಲ್ಲಿ ಇದ್ದುಕೊಂಡು ಕೃಷ್ಣರಾಜನಗರದಲ್ಲಿ ಮೂರು-ನಾಲ್ಕು ಎಕರೆ ಹೊಂದಿರುವ ಸಣ್ಣ ಹಿಡುವಳಿದಾರ ಅದನ್ನು ಬಿಟ್ಟುಬಿಡಬೇಕಾಗುತ್ತದೆ. ಈ ಜಮೀನ್ದಾರರಲ್ಲಿ ಅನೇಕ ಜನ ಬಡವರು ಇದ್ದಾರೆ.

Sri J B. MALLARADHYA.—The Jatti Committee has given a clear finding on this matter and there is no room for doubt. They determine the ceiling with reference to 4½ times or 3½ times.

Sri H. M. CHANNABASAPPA.—I am not dealing with ceiling but with absentee landlordism. ಜಯಪುರದಿಂದ ಕೃಷ್ಣರಾಜನಗರಕ್ಕೆ 35 ಮೈಲಿಗಳು. ಒಬ್ಬ ಬಡ ನೌಕರನು ಕೆ. ಆರ್. ನಗರದಲ್ಲಿ ನಾಲ್ಕು ಎಕರೆ ಜಮೀನು ಇಟ್ಟುಕೊಂಡರೆ ಏನು ತೊಂದರೆ ಆಯಿತು ?

Sri M. C. NARASIMHAN.—The Committee has stated in respect of small holders. The restriction regarding absentee landlords will not apply.

Sri H. M. CHANNABASAPPA.—I go one step further so that the land may be put to proper use. If the Committee has not gone sufficiently far, I am prepared to go. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸುವಾಗ, ನಾನು ಹೇಳುವ ಮನುಷ್ಯನ ವಿಚಾರವನ್ನು ಜ್ಞಾಪಕದಲ್ಲಿಡಬೇಕು. ಒಬ್ಬ ಉಪಾಧ್ಯಾಯನಿಗೆ ಬರತಕ್ಕಂಥ ಸಂಬಳ 40 ರೂಪಾಯಿ. ಅವನು ಅದರಜೊತೆಗೆ ಈ ಭೂಮಿಯಲ್ಲಿ ಬರುವ ಆದಾಯವನ್ನೂ ಸೇರಿಸಿಕೊಂಡು ಕಾಲಹರಣ ಮಾಡುತ್ತಾನೆ. ಇವತ್ತು ಅವನನ್ನು ಆಬ್ಸೆಂಟೀ ಲ್ಯಾಂಡ್‌ಲಾರ್ಡ್ ಎಂದು ಕರೆಯುವುದು ಸರಿಯೇ ? ಹಾಗೆ ಅವನನ್ನು ಕರೆದರೆ, ಅವನೂ ಜಮೀನನ್ನು ಬಿಟ್ಟುಕೊಡಬೇಕಾಗುವುದು. ಅವನಿಗೆ ಬರತಕ್ಕಂಥ ಆದಾಯ ಹೋಗುವುದನ್ನು ಕಣ್ಣುಮುಚ್ಚಿಕೊಂಡು ನೋಡಲು ಸಾಧ್ಯವಿಲ್ಲ. ಅವನೂ ಪ್ರಜೆ. ಅವನ ಹಿತವನ್ನೂ ಕಾಯಬೇಕು. ಸಣ್ಣಪುಟ್ಟ ಹಿಡುವಳಿದಾರರೂ ಅನೇಕ ಜನ ಕೂಲಿಮಾಡಿಕೊಂಡಿದ್ದಾರೆ. ಹಳ್ಳಿಗಳಲ್ಲಿ ನಾಲ್ಕು-ಹತ್ತು ಎಕರೆ ಜಮೀನು ಇಟ್ಟುಕೊಂಡಿರತಕ್ಕಂಥವರು, ಉಳುವುದಕ್ಕೆ ಎತ್ತಿಲ್ಲದೆ ಬೇರೆ ಕಡೆ ಕೂಲಿಮಾಡುತ್ತಿದ್ದಾರೆ. ಹೀಗೆ ವ್ಯವಸಾಯದ ಅನುಕೂಲವಿಲ್ಲದೆ ಸಣ್ಣ ಜಮೀನುದಾರರೂ ಇದ್ದಾರೆ. ಇವರನ್ನು ಗುತ್ತಿಗೆದಾರರು ಎಂದು ಬರೆದಿರುತ್ತಾರೆ. ಇವರ ಗತಿ ನಾಳೆ ಏನಾಗಬೇಕು ?

Sri M. C. NARASIMHAN.—I invite the attention of the Hon'ble Member to para 4, page 47 of the Report. It says :—

> "To prevent abuse of this concession we would recommend that only small holders (owning not more than a family holding) whose total income from all sources including the rent of the land in question does not exceed Rs. 1,200 should have the benefit of this exemption."

Sri H. M. CHANNABASAPPA.—I have already made it clear that the system of leasing out land itself should go.

Sri J. B. MALLARADHYA.—On the basis of your recommendations you cannot criticise the Report. You may give your suggestions and the basis on which you have arrived at them.

Sri H. M. CHANNABASAPPA.—I am too glad to get converted if my view is wrong.

Sri J. B. MALLARADHYA.—Kindly give all your recommendations, but don't criticise the Report while giving your recommendations.

Sri H. M. CHANNABASAPPA.—I have every right. You leave it to me. I am not going to be dictated by you. I know how to present the case myself.

In regard to the absentee landlordism while asking people to give up land, the cases of those people who are small holders, who are in service and who are elsewhere on account of so many difficulties must be kept in view while taking the decision.

Now about personal cultivation.

ಬೊಂಬಾಯಿ ಕಾನೂನಿನಲ್ಲಿ personal cultivation of land ಗೆ ಪರಿಮಿತಿಯನ್ನು ಹಾಕಿಲ್ಲ. ಇಲ್ಲಿ personal cultivation ಗೆ ಸಹ ಒಂದು ಪರಿಮಿತಿ ಇರಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಬೊಂಬಾಯಿಯ ಕಾನೂನಿಗಿಂತ ಪ್ರಗತಿಯಲ್ಲಿ ಇದು ಕಡಮೆಯಾದುದು ಎಂದು ಅವರ ಅಭಿಪ್ರಾಯದಿಂದ ಗೊತ್ತಾಗುತ್ತದೆ. ಒಂದು ವೇಳೆ ಬೊಂಬಾಯಿ ಕಾನೂನು ಬಹಳ ಪ್ರಗತಿಯುತವಾದುದು ಎಂದರೂ, ಇಲ್ಲಿ personal cultivation ಗೆ ಏಕೆ ಪರಿಮಿತಿಯನ್ನು ಹಾಕಬೇಕು ಎಂದರೆ ಭೂಮಿ ಸಿಕ್ಕುವುದಿಲ್ಲವೆಂದು ಒಂದು ಕಾರಣವನ್ನು ಹೇಳುತ್ತಾರೆ. ಇದೇ ಒಂದು ಮಹತ್ವದ ಕಾರಣ. ಇಂಥ ಒಂದು ಪರಿಮಿತಿಯನ್ನು ಹಾಕದೆ ಹೋದರೆ ಎಲ್ಲರಿಗೂ ಹಂಚಿಕೆ ಮಾಡುವುದಕ್ಕೆ ಭೂಮಿ ಸಾಕಾಗುವುದಿಲ್ಲವೆಂದು ಹೇಳುತ್ತಾರೆ. ಆದರೆ ನಾನು ತಮಗೆ ಅರಿಕೆಮಾಡಿಕೊಳ್ಳುವುದು ಭೂಮಿಯನ್ನು ಹಂಚಿಕೆ ಮಾಡತಕ್ಕದ್ದರಲ್ಲಿ ಭೂಮಿಯನ್ನು ಯಾವರೀತಿ ಉಪಯೋಗಕ್ಕೆ ಹಾಕುತ್ತಿದ್ದೇವೆ ಎನ್ನುವುದೇ ಸ್ವಲ್ಪ ಪ್ರಾಮುಖ್ಯತೆಯುಳ್ಳದ್ದು. Personal cultivation ಗೆ ಏತಕ್ಕೋಸ್ಕರ ಇವರು ಒಂದು ಪರಿಮಿತಿಯನ್ನು ಹಾಕಬೇಕು ಎನ್ನತಕ್ಕದ್ದು ನನಗೆ ಅರ್ಥವಾಗುವುದಿಲ್ಲ. ಭೂಮಿ ಸಾಕಾಗುವುದಿಲ್ಲವೆಂಬ ಕಾರಣದಮೇಲೆ ಸ್ವಂತ ಸಾಗುವಳಿಮಾಡುವುದರ ಮೇಲೆ ಒಂದು ಪರಿಮಿತಿಯನ್ನು ಹಾಕುವುದಾದರೆ, ಒಂದು ವೇಳೆ ಹಾಗೆ ಭೂಮಿಯನ್ನು ಹಂಚಿಕೆಮಾಡಿದರೆ ನಾಳೆದಿವಸ ಇದೇ ಸ್ಥಿತಿಯಲ್ಲಿ ಇನ್ನೂ ಹತ್ತಾರು ವರ್ಷಗಳು ಇರತಕ್ಕದ್ದು ಇವರ ಧ್ಯೇಯವೇ ? ಪರಿಮಿತಿ ಅಥವಾ ceiling limit ಹಾಕಬೇಕೆನ್ನುವ ಪ್ರಶ್ನೆ ಬಂದಾಗ ಇದನ್ನು ಪುನಃ ಎತ್ತಿಕೊಳ್ಳುತ್ತೇನೆ. Personal cultivation ಗೆ ನಾವು ಭೂಮಿಯನ್ನು ಕೊಡುವಾಗ ಅದಕ್ಕೆ ಒಂದು ಪರಿಮಿತಿಯನ್ನು ಹಾಕಿ ಬೇರೆ ಕ್ಷೇತ್ರಗಳಲ್ಲಿ ಒಬ್ಬ ಮನುಷ್ಯನು ತನ್ನ ಬುದ್ಧಿಶಕ್ತಿ ಮತ್ತು ಸಾಮರ್ಥ್ಯಕ್ಕೆ ತಕ್ಕ ಪ್ರಮಾಣದಲ್ಲಿ ಉತ್ಪಾದನೆ ಮಾಡುವುದಕ್ಕೆ ಅವಕಾಶವಿರುವಾಗ ಭೂಮಿಯಲ್ಲಿ ಸಾಗುವಳಿ ಮಾಡುವವನಿಗೆ ಅಂಥ ಅವಕಾಶವನ್ನು ಕೊಡದೆ ಕುಂಠಿತಮಾಡಿದಪಕ್ಷದಲ್ಲಿ ಆ ಮನುಷ್ಯನ ಸಂಪೂರ್ಣ ಬೆಳೆವಣಿಗೆಗೆ ಅಡ್ಡಿ ಆತಂಕವನ್ನು ತಂದು ಒಡ್ಡಿದಂತಾಗುತ್ತದೆ, ನಾಲ್ಕುವರೆ family holding ಇರಬೇಕು ಎಂದು ತೀರ್ಮಾನಮಾಡಿರುವುದರಲ್ಲಿ ಒಬ್ಬ Second Class Officer ಸಂಪಾದನೆಯಷ್ಟು ಕನಿಷ್ಠ ಪಕ್ಷ ಆಪ್ರಮಾಣ ವಿರಬೇಕು ಎಂದು ಹೇಳುತ್ತಾರೆ. ಹಾಗೆ ಹೇಳುವಾಗ ಬಹಳ ಪಶ್ಚಾತ್ತಾಪದಿಂದ ಹೇಳಿದ್ದಾರೆ. ಆ ವಾಕ್ಯವನ್ನು ತಾವು ಗಮನಿಸಬೇಕು, ವರದಿಯ 70ನೇ ಪುಟದಲ್ಲಿ 'Even with the higher ceiling, the owner cultivater will have only an annual income of Rs. 5,400 which is about the same as the income of a class II officer.' ಎಂದು ಹೇಳಿದ್ದಾರೆ. ಎಂದರೆ ನಾವಾದರೂ ಕೂಡ ಇವನು Second Class Officer ಮಟ್ಟದಲ್ಲಿ ಇರುತ್ತಾನೆ ಎಂದು ಹೇಳಲಾರೆವು ಎಂಬುದಾಗಿ ತಿಳಿಸಿದ್ದಾರೆ. ಇದರಿಂದ ಏನು ಗೊತ್ತಾಗುತ್ತದೆಯೆಂದರೆ ಅವರ ಹೃದಯದಲ್ಲಿ ಹೀಗೆ ಮಾಡಿದ್ದು ಸರಿಯಲ್ಲ, ನಾವು ಆ ಮಟ್ಟಕ್ಕೆ ಇಳಿಸತಕ್ಕದ್ದು ಸರಿಯಲ್ಲ, ಆದರೂ ವಿಧಿಯಿಲ್ಲವೆನ್ನುವ ರೀತಿಯಲ್ಲಿ ಹೇಳಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—Personal cultivation ವಿಷಯದಲ್ಲಿ ಮಾತನಾಡುವಾಗ ಜಮೀನಿಲ್ಲದ ಕಾರಣದಿಂದ personal cultivation ಪರಿಮಿತಿಯನ್ನು ಕಡಮೆಮಾಡಿದ್ದಾರೆ ಎಂದು ಅಪ್ಪಣೆಕೊಡಿಸಿದರು. ಅದು ರಿಪೋರ್ಟಿನ ಯಾವ ಭಾಗದಲ್ಲಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಬನ್ನಿ, ತೋರಿಸುತ್ತೇನೆ.

Sri J. B. MALLARADHYA.—About ceiling on personal cultivation it is nowhere stated in the Report. Personal cultivation ವಿಷಯ ಮಾತನಾಡುವಾಗ ಅವರು ಅಪ್ಪಣೆ ಕೊಡಿಸಿದರು. ಕಮಿಟಿಯವರು ಜಮೀನುಗಳು ಹಂಚಿಕೆಗೆ ಸಾಲದೆ ಇರುವ ದೃಷ್ಟಿಯಿಂದ personal cultivation ಪರಿಮಿತಿಯನ್ನು ಕಡಿಮೆ ಮಾಡಿದ್ದಾರೆಂದು. ಆ ವಿಷಯವನ್ನು ವರದಿಯಲ್ಲಿ ಯಾವ ಪುಟದಲ್ಲಿ ನಿರೂಪಿಸಿದ್ದಾರೆಂಬುದನ್ನು ದಯವಿಟ್ಟು ಹೇಳುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು personal cultivation ವಿಚಾರದಲ್ಲಿ ಮಾಡಿರುವ ಅಧ್ಯಾಯವನ್ನು ಸಂಪೂರ್ಣವಾಗಿ ಓದಿದರೆ ಅದರಲ್ಲಿ ಹೇಳಿದ್ದಾರೆ. Personal cultivation ನಲ್ಲಿರುವ ಜಮೀನುಗಳ ಮೇಲೆ ಒಂದು ಮಿತಿಯನ್ನು ಹಾಕದೆ ಇದ್ದರೆ ವ್ಯವಸಾಯ ಮಾಡುವವರಿಗೆ ಹಂಚುವುದಕ್ಕೆ ಭೂಮಿಯೇ ಇರುವುದಿಲ್ಲವೆಂದು ತಿಳಿಸಿದ್ದಾರೆ. ಆದುದರಿಂದ personal cultivation ಗೆ ಒಂದು ಪರಿಮಿತಿಯನ್ನು ಹಾಕುವುದರಿಂದ ಗ್ರಾಮಗಳಲ್ಲಿ ಯುವಕರಾಗಿರತಕ್ಕವರು, ವಿದ್ಯಾವಂತರಾಗಿರತ್ಕವರು, ದಕ್ಷರಾಗಿರತಕ್ಕವರು ಈ ಕ್ಷೇತ್ರದಲ್ಲಿ ಬರುವುದಕ್ಕೆ ತುಂಬ ಅಡ್ಡಿಯಾಗುತ್ತದೆ. 5,400 ರೂಪಾಯಿಗಳು ಸೀಲಿಂಗ್ ಲಿಮಿಟ್ ಎಂದು ನಿಗದಿಮಾಡುವಾಗ ಅಷ್ಟು ಮಾತ್ರ ಏಕೆ ಸೀಲಿಂಗ್ ನಿಗದಿಮಾಡಬೇಕು, ಒಬ್ಬರು ಎಂಟು ಸಾವಿರವಿರಲಿ ಎಂದು ಹೇಳಬಹುದು, ಇನ್ನೊಬ್ಬರು ಹತ್ತು ಸಾವಿರವಿರಲಿ ಎಂದು ಹೇಳಬಹುದು.

I invite your kind attention to page 73 of the Report:

> "As the surplus above the ceiling in respect of lands leased out to tenants will have to be sold to the tenants themselves, the only source of getting some lands for re-distribution among the landless persons is the imposition of ceilings on personal cultivation also...."

Are you satisfied ?

Sri J. B. MALLARADHYA.—But where is it said ? Your interpretation is wrong. It is nowhere provided like that.

Sri H. M. CHANNABASAPPA.—The Report says so. What more you want?

ಆದುದರಿಂದ personal cultivationಗೆ ಸೀಲಿಂಗ್ ಲಿಮಿಟ್ ಇರತಕ್ಕದ್ದು ಸರಿಯಲ್ಲ, ಅದರಿಂದ ವ್ಯವಸಾಯಕ್ಕೆ ಧಕ್ಕೆಯಾಗುತ್ತದೆ ಎಂದು ಹೇಳುತ್ತೇನೆ. ಒಂದು ವೇಳೆ ಸೀಲಿಂಗ್ ಲಿಮಿಟ್ ಹಾಕಬೇಕು ಎಂದರೆ ಅದಕ್ಕೆ ಕೆಲವು ಕಂಡಿಷನ್‌ಗಳನ್ನು ಕೊಡುತ್ತೇನೆ. Personal cultivation ಗೆ ಎಂದು ನೂರಾರು ಎಕರೆ ಭೂಮಿಯನ್ನು ಕೊಡುವುದಕ್ಕಾಗುವುದಿಲ್ಲ. ನಾನು ಮೊದಲೇ ಹೇಳಿದ್ದೇನೆ. ಬಹಳ ದಕ್ಷತೆಯಿಂದ ಯಾರು ವ್ಯವಸಾಯವನ್ನು ಮಾಡುತ್ತಾರೆಯೋ ಅವರಿಗೆ ಮಾತ್ರ ಭೂಮಿಯನ್ನು ಕೊಡಬಹುದೆಂದು ಹೇಳಿದ್ದೇನೆ. ಬುದ್ಧಿವಂತರಾಗಿರುವವರು, ದಕ್ಷರಾಗಿರುವವರು, ಇವರಿಗೆ ಅಲ್ಪಸ್ವಲ್ಪ ಭೂಮಿಯನ್ನು ಕೊಟ್ಟರೆ ಏನೂ ಉಪಯೋಗವಾಗುವುದಿಲ್ಲ. ಹೀಗೆ ಮಾಡಿದರೆ ವ್ಯವಸಾಯಕ್ಷೇತ್ರಕ್ಕೆ ವಾಪಸ್ಸು ಬಂದು ಇದರಲ್ಲಿ ಯಾರು ಇರುತ್ತಾರೆಂದರೆ scrap materials ಮಾತ್ರ ಎಂದು ಹೇಳುತ್ತೇನೆ. Personal cultivation ಗೆ ಜಮೀನನ್ನು ಕೊಡಬೇಕೆಂದು ಹೇಳುವುದರಲ್ಲಿ ತಪ್ಪಿಲ್ಲ. ಆದರೆ ಕುರ್ಚಿಯ ಮೇಲೆ ಆರಾಮವಾಗಿ ಕುಳಿತುಕೊಂಡಿದ್ದರೆ ವ್ಯವಸಾಯ ನಡೆಯುವುದಿಲ್ಲ. Absentee landlords ವಿಚಾರವನ್ನು ಪರಿಶೀಲನೆ ಮಾಡುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅಳಿಯ ಸಂತಾನದ ಪದ್ಧತಿಯ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳದೇಯಿರುವುದು ವಿಷಾದಕರವಾದ ಸಂಗತಿ. ಅದೊಂದು ದೊಡ್ಡ ಜಿಲ್ಲೆ. ಶಾಸನಕ್ಕನುಗುಣವಾಗಿ ಕೆಲವರು ವ್ಯವಸಾಯ ಮಾಡಬೇಕೆಂದು ಇಚ್ಛೆಪಟ್ಟರೂ ಅವರು ವ್ಯವಸಾಯಕ್ಕೆ ಹೋಗುವಸ್ಥಿತಿಯಲ್ಲಿಲ್ಲ......

ಶ್ರೀ ಬಿ. ಬಸವಲಿಂಗಪ್ಪ.—ಎಸ್ಟೇಟ್ ಡ್ಯೂಟಿ ಕಾನೂನು ಬಂದಾಗ ಅಲ್ಲಿ ಯಾರೂ ಪ್ರೊಟೆಸ್ಟ್ ಮಾಡಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ —ಅವರು ಮಾಡಲಿ ಮಾಡದೇಯಿರಲಿ, ಅದು ಬೇರೆ ವಿಷಯ. ಅಳಿಯ ಸಂತಾನ ಪದ್ಧತಿ ಇರುವಕಡೆ, ಶಾಸನಕ್ಕನುಸಾರವಾಗಿ ವ್ಯವಸಾಯಮಾಡಲು ಇಷ್ಟಪಟ್ಟರೂ ಆಗುವುದಿಲ್ಲ. ಹೀಗಿರುವಾಗ absentee landlords ನ್ನು ತೆಗೆದುಹಾಕಿದರೆ, ಇವರ ಸ್ಥಿತಿ ಏನು ಮಾಡಬೇಕೆಂಬುದನ್ನು ನೋಡದೇಯಿದ್ದರೆ ಬಹಳ ಅನ್ಯಾಯವಾಗುತ್ತದೆ. ತನ್ನ ಭೂಮಿಯನ್ನು ವ್ಯವಸಾಯಮಾಡುತ್ತೇನೆಂದರೆ ಅವನಿಗೆ ಏಕೆ ಕೊಡಬಾರದು ? ಅಲ್ಲಿ ಒಬ್ಬ ಟೆನೆಂಟು, ಇನ್ನೊಬ್ಬ ಓನರ್, ಇವರಿಬ್ಬರಲ್ಲಿ ಯಾರಿಗೆ ಕೊಡಬೇಕು ? ಒಬ್ಬ ಹೇಳುತ್ತಾನೆ, ಟೆನೆಂಟ್‌ಗೇ ಕೊಡಿ, ಭೂಮಿಯನ್ನು ವ್ಯವಸಾಯ ಮಾಡಿಕೊಂಡು ಬಂದಿದ್ದಾನೆ, ಇವನಿಗೇ ಕೊಡಬೇಕೆಂದು. ನಾನು ವ್ಯವಸಾಯ ಮಾಡುವುದಕ್ಕೆ ಅವಕಾಶವಿಲ್ಲ, ನಾನು ವ್ಯವಸಾಯಮಾಡುವುದಕ್ಕೆ ಸಿದ್ಧನಾಗಿದ್ದೇನೆ ಎಂದು ಮಾಲೀಕ ಹೇಳಿದರೆ ಆಗ ನ್ಯಾಯ, ಧರ್ಮ ಎಂಬುದನ್ನಿಟ್ಟುಕೊಳ್ಳುವುದಾದರೆ, ಭೂಮಿಯನ್ನು ಹೊಂದಿರತಕ್ಕವನಿಗೆ ಅವಕಾಶ ಕೊಡದೇಯಿದ್ದರೆ, ಅದು ನ್ಯಾಯಕ್ಕೆ ವಿರುದ್ಧವಾಗುತ್ತದೆ. ಆದಕಾರಣ ಅಳಿಯ ಸಂತಾನದ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲನೆಮಾಡಿ, ಅನ್ಯಾಯವಾಗುವುದಕ್ಕವಕಾಶವಿಲ್ಲದಂತೆ ವ್ಯವಸ್ಥೆಮಾಡುವುದು ಅಗತ್ಯ. ಇದನ್ನು ಮಸೂದೆ ತಯಾರುಮಾಡುವಾಗ ಪರಿಶೀಲನೆ ಮಾಡಬೇಕಾದುದು ಅತ್ಯಗತ್ಯವೆಂದು ಹೇಳುವುದು ನನ್ನ ಕರ್ತವ್ಯ.

ಪ್ಲಾನಿಂಗ್ ಕಮಿಷನ್‌ನವರು ಒಂದು ಮಟ್ಟದ ಸೀಲಿಂಗ್ ಇರಬೇಕೆಂದು ಹೇಳಿರುವಾಗ, ಈ ಸಮಿತಿಯವರು ಇಷ್ಟೇ ಸೀಲಿಂಗ್ ಇರಬೇಕೆಂದು ಹೇಳಿಲ್ಲ. ಉತ್ತರ ಪ್ರದೇಶದಲ್ಲಿ ಇಷ್ಟಿದೆ, ಹೈದರಾಬಾದಿನಲ್ಲಿ ಇಷ್ಟಿದೆ, ಬೊಂಬಾಯಿನಲ್ಲಿ ಇಷ್ಟಿದೆ, ನಾವು ಇಷ್ಟು ಮಾಡಿದ್ದೇವೆ ಎಂದು ಹೇಳಿದ್ದಾರೆ. ಭೂಮಿಯ ಪರಿಮಿತಿಹಾಕಿದ ಮೇಲೆ ಹೆಚ್ಚುವರಿ ಭೂಮಿಯನ್ನು ಅವರಿಂದ ತೆಗೆದುಕೊಳ್ಳುವುದರಿಂದ ಬಹಳ ಜನರಿಗೆ ತೊಂದರೆಯಾಗುತ್ತದೆ. ದೊಡ್ಡ ದೊಡ್ಡ ಜಮೀನುದಾರರಿಗೆ ತೊಂದರೆಯಾಗುತ್ತದೆ, ಬೇರೆಯವರಿಗೆ ತೊಂದರೆಯಾಗುವುದಿಲ್ಲವೆಂದು ಹೇಳಬಹುದು. ಏನೇ ಆಗಲಿ ಹಳ್ಳಿಗಳಲ್ಲಿ ಏನು ಕಾನೂನು ಮಾಡಿದರೆಂದು ತಿಳಿಯದೇಯಿರುವವರಿದ್ದಾರೆ. ಮಧ್ಯಮ ವರ್ಗದ ಜನರಿದ್ದಾರೆ, ಇವರಿಗೂ ತೊಂದರೆಯಾಗುತ್ತದೆ.

ಈ ವರದಿಯ ಪ್ರಕಾರ resumption for personal cultivation ಒಪ್ಪಿದರೆ ಬಹಳ ಜನರಿಗೆ ತೊಂದರೆಯಾಗುತ್ತದೆ. Personal cultivationಗೆ ಒಂದು ಬೇಸಿಕ್ ಹೋಲ್ಡಿಂಗ್ ಬಿಡಬಹುದೆಂದು ಹೇಳಿದ್ದಾರೆ. ಒಂದು ಬೇಸಿಕ್ ಹೋಲ್ಡಿಂಗ್ ಎಂದರೆ 400 ರೂಪಾಯಿ ಉತ್ಪತ್ತಿ ಕೊಡುವ ಒಂದು ಜಮೀನು. ಇದು ಬಹಳ ಸಣ್ಣದಾಯಿತು. ನಮ್ಮ ಉದ್ದೇಶ ಎಕನಾಮಿಕ್ ಹೋಲ್ಡಿಂಗ್ ಆಗಿರಬೇಕೆಂಬುದು. ವ್ಯವಸಾಯಮಾಡುವವನಿಗೆ ಹೆಚ್ಚು ಉತ್ಪತ್ತಿಮಾಡುವುದಕ್ಕೆ ಅವಕಾಶವಿರಬೇಕೆಂದು ಹೇಳುವಾಗ ಈ ರೀತಿ ಒಂದು ಬೇಸಿಕ್ ಹೋಲ್ಡಿಂಗ್ ಇಟ್ಟರೆ ಏನಾಗುತ್ತದೆ? ಈ ಒಂದು ಬೇಸಿಕ್ ಹೋಲ್ಡಿಂಗ್ ತೆಗೆದುಕೊಂಡು ಅವನೂ ಅವನ ಕುಟುಂಬವೂ ಜೀವನಮಾಡಬೇಕು!...

Sri J. B. MALLARADHYA.—He may be a tenant under two different landlords. That possibility has to be examined.

Sri H. M. CHANNABASAPPA.—I have examined. I could claim to know much more with due respects to him.

Sri J. B. MALLARADHYA.—He must respect somebodyelse's also.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂಥ ಬಡವನ ಗತಿ ಏನಾಗುತ್ತದೆ ? ಈ ಒಂದು ಬೇಸಿಕ್ ಹೋಲ್ಡಿಂಗ್‌ನಲ್ಲಿ ಅವನು ಹೆಚ್ಚು ಸಂಪಾದನೆ ಮಾಡುವುದಕ್ಕೆ ಶಕ್ಯವಿಲ್ಲ ; ಇದನ್ನು ಬಿಟ್ಟರೆ ಅವನಿಗೆ ಬೇರೆ ಗತಿ ಇಲ್ಲ. ಅವನ ಮಕ್ಕಳು ದೊಡ್ಡವರಾದರೆ ಒಬ್ಬೊಬ್ಬರಿಗೆ ಅರ್ಧ, ಕಾಲು ಬೇಸಿಕ್ ಹೋಲ್ಡಿಂಗ್ ಆಗುತ್ತದೆ. ಉದಾಹರಣೆಗೆ ಒಬ್ಬ ಮನುಷ್ಯನಿಗೆ ನಾಲ್ಕು ಬೇಸಿಕ್ ಹೋಲ್ಡಿಂಗ್ ಅಥವಾ ಒಂದು ಫ್ಯಾಮಿಲಿ ಹೋಲ್ಡಿಂಗ್ ಇರುತ್ತದೆ ; ನಾಲ್ಕು ಜನಕ್ಕೆ ಮುಕ್ಕಾಲು ಹೋಲ್ಡಿಂಗ್‌ನಂತೆ ವ್ಯವಸಾಯಕ್ಕೆ ಕೊಡುತ್ತಾನೆ. ಇದು ಸಾಕಾಗುತ್ತದೆಯೇ ಎಂದು ಯೋಚಿಸಬೇಕು. ಒಬ್ಬನು ಇನ್ನೊಬ್ಬನಿಗೆ ತಾನು ಮಾಡುತ್ತಿರುವ ಜಮೀನನ್ನು ವ್ಯವಸಾಯಕ್ಕೆ ಕೊಟ್ಟಮಾತ್ರಕ್ಕೇ ಅವನು absentee land lord ಎಂದು ಹೇಳುವುದು ತಪ್ಪು. ಇನ್ನೊಬ್ಬನ ಜೀವನಕ್ಕೆ ಅವಕಾಶ ಮಾಡೋಣವೆಂದು ಕೊಡಬಹುದು. ನಾನು ಈಗತಾನೇ ಹೇಳಿದಂತೆ ನಾಲ್ಕು ಜನ ಮಕ್ಕಳಿದ್ದಾರೆ. ಒಬ್ಬೊಬ್ಬನಿಗೆ ಮುಕ್ಕಾಲು ಬೇಸಿಕ್ ಹೋಲ್ಡಿಂಗ್ ಬರುತ್ತದೆ. ಇದನ್ನು ಬದಲಾಯಿಸಬೇಕೆಂದರೆ ಒಂದು ಗುಂಟೆ ಜಮೀನನ್ನೂ ಹೆಚ್ಚುಮಾಡುವುದಕ್ಕಾಗುವುದಿಲ್ಲ

5-30 P.M.

ಈ ಜತ್ತಿ ಸಮಿತಿಯ ವರದಿಯಲ್ಲಿ ಬೇಸಿಕ್ ಹೋಲ್ಡಿಂಗ್ ಡೆಫಿನಿಷನ್ ಅಷ್ಟು ಸರಿಯಾಗಿಲ್ಲ. ಒಂದು ಪ್ರದೇಶದ ಭೂಮಿಯಲ್ಲಿ ಇಷ್ಟೇ ಉತ್ಪತ್ತಿಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಬೆಳೆ ಸರಿಯಾಗಿ ಬೆಳೆಯುವುದಕ್ಕೆ ನಾನಾ ಕಾರಣಗಳಿವೆ. ಮುಖ್ಯವಾಗಿ ಪರಿಸ್ಥಿತಿಯೇ ಅದಕ್ಕೆ ಸಾಕ್ಷಿಯಾಗಿದೆಯೆಂದು ನಾನು ಅರಿತುಕೊಂಡಿದ್ದೇನೆ. ನಮ್ಮದು ವೆಲ್‌ಫೇರ್ ಸ್ಟೇಟ್ ಆದ ಮೇಲೆ ಗೇಣಿ ಸರಿಪಡಿಸಲಾಗುವುದು, ಜಮೀನ್ದಾರಿ ಪದ್ಧತಿ ಸರಿಪಡಿಸಲಾಗುವುದು ಎಂದು ಹೇಳಲಾಗುತ್ತಿದೆ. ಆದರೆ ಗೇಣಿದಾರನಿಗೂ ಮತ್ತು ಭೂಮಿಯ ಒಡೆಯನಿಗೂ ಅಂದರೆ ಇಬ್ಬರಿಗೂ ಸರಿಯಾಗುವಂತೆ ಮಾಡಬೇಕಾಗಿದೆ. ಭೂಮಿಯನ್ನು ಸ್ವತಃ ಸಾಗುವಳಿ ಮಾಡುವುದಕ್ಕೆ ಬೇಕು ಎಂದು ಹೇಳಿದರೆ ರೈತನಿಂದ ಬಿಡಿಸಿ ಭೂಮಿಯನ್ನು ಅವರಿಗೆ ಕೊಡೋಣ.

ಶ್ರೀ ವೈ. ವೀರಪ್ಪ.—ನಿಮ್ಮ ಸೂಚನೆಗಳು ಏನು ಎಂಬುದನ್ನು ಇನ್ನೂ ನೀವು ಹೇಳಲಿಲ್ಲ. ನಿಮ್ಮ ಸೂಚನೆಗಳನ್ನು ಹೇಳಬೇಕು. ನಾವು ಅವುಗಳನ್ನು ತಿಳಿದುಕೊಳ್ಳಬೇಕಾಗಿದೆ.

Sri H. M. CHANNABASAPPA.—I do not know whether the Hon'ble Member has followed : I have been trying to take the House step by step and as far as possible trying to meet the objections also. ಕಾನೂನು ಪ್ರಕಾರ ಕಾಂಪೆನ್‌ಜೇಷನ್ ಫಿಕ್ಸ್ ಮಾಡಬೇಕಾಗಿದೆ. ಇದು ಬಹಳ ಕಾಂಪ್ಲಿಕೇಟೆಡ್ ವಿಷಯ. ಹೆಗ್ಗಡದೇವನಕೋಟೆಯಲ್ಲಿ 50 ಎಕರೆ 100 ಎಕರೆ ಭೂಮಿಯು ಒಬ್ಬೊಬ್ಬರ ಹತ್ತಿರವಿರುವ ಉದಾಹರಣೆಗಳು ಸಿಕ್ಕುತ್ತವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅನೇಕ ಕಡೆಗಳಲ್ಲಿ ಸಾವಿರಾರು ಎಕರೆ ಜಮೀನು ಇಟ್ಟುಕೊಂಡಿರುವುದು ತಮ್ಮ ಅನುಭವದಲ್ಲಿ ಇರಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕಾಗಿ ನಾನು ಸಲಹೆ ಮಾಡುವುದೇನೆಂದರೆ ಇದನ್ನು ಫಿಕ್ಸ್ ಮಾಡುವುದು ಬೇಡ, ಒಂದು ಸರಿಯಾದ ವಾತಾವರಣ ಉಂಟಾಗುವಂತೆ ಮಾಡೋಣ. ವ್ಯವಸಾಯ ಮಾಡುತ್ತೇವೆಂದು ಯಾರಾದರೂ ಮುಂದೆ ಬಂದರೆ ಅವರಿಗೆ ಭೂಮಿಯನ್ನು ಕೊಡುವುದಕ್ಕೆ ಮನ್ನಣೆ ಕೊಡೋಣ. ಸೀಲಿಂಗ್ ಅಂದರೆ ಏನು ? ಸೀಲಿಂಗ್ ಯಾಕೆ ಬೇಕು ? ಇಷ್ಟು ಎಕರೆ ಖುಷ್ಕಿ, ಬಾಗಾಯಿತು ಭೂಮಿ ಇರಬೇಕೆಂದು ಒಂದು ಪ್ರಮಾಣವನ್ನು ಗೊತ್ತುಮಾಡೋಣ ಹೆಚ್ಚಿಗೆ ಭೂಮಿಯನ್ನಿಟ್ಟುಕೊಂಡಿದ್ದರೆ ಅದನ್ನು ತೆಗೆದುಕೊಳ್ಳೋಣ. ಯಾಕೆಂದರೆ the excess of land will vest in Government. ಒಂದು ತಾರೀಖನ್ನು ಗೊತ್ತುಮಾಡಿಬಿಡೋಣ. ಆ ತಾರೀಖಿನ ನಂತರ ಹೆಚ್ಚಾದ ಭೂಮಿಯೆಲ್ಲಾ ಸರಕಾರದ್ದು ಎಂದು ಹೇಳಬೇಕು. ಅಂದಿನಿಂದ ಯಾರೇ ಅಗಲಿ ಇಷ್ಟು ಪ್ರಮಾಣಕ್ಕಿಂತ ಹೆಚ್ಚು ಜಮೀನನ್ನು ಇಟ್ಟುಕೊಳ್ಳಬಾರದು ಎಂದು ಹೇಳಿ. ಆಗ ಆ ದಿನದೊಳಗೆ ಭೂ ಮಾಲೀಕರೆಲ್ಲಾ ಭೂಮಿಯನ್ನು ಮಾರಿಬಿಡುತ್ತಾರೆ ಅಥವಾ ಸ್ವಂತ ವ್ಯವಸಾಯಕ್ಕೆ ಇಟ್ಟುಕೊಳ್ಳುತ್ತಾರೆ. ಹೀಗೆ ಸ್ವಾಭಾವಿಕವಾಗಿ ಪರಿಸ್ಥಿತಿ ಸರಿಹೋಗುತ್ತದೆ. ಒಂದು ವೇಳೆ ಭೂಮಿಯನ್ನು ಮಾರಾಟ ಮಾಡುವುದಾದರೆ ವ್ಯವಸಾಯ ಮಾಡುವವನಿಗೆ ಮಾರಬೇಕು ಎಂಧು ವಿಧಿಸಬೇಕು. ಈ ರೀತಿಯಾಗಿ ಮಾಡಿದರೆ ಅವರವರೇ ಹೊಂದಿಸಿಕೊಳ್ಳುತ್ತಾರೆ. ಹೆಚ್ಚಾಗಿರುವ ಭೂಮಿಯನ್ನು ಸರಕಾರ ವಶಪಡಿಸಿಕೊಂಡು ಅದಕ್ಕೆ ಪ್ರತಿಯಾಗಿ 20 ವರ್ಷ ಅವಧಿಯ ಬಾಂಡ್ ಕೊಡಬೇಕು. ಅನೇಕ ಬಡ ಜನರು ಸಾಲ ಮಾಡಿಕೊಂಡು ಜಮೀನು ಸಾಗುವಳಿ ಮಾಡುತ್ತಿದ್ದಾರೆ. ಆದುದರಿಂದ ಈ ರೀತಿಯಾಗಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅಮೆರಿಕಾದಲ್ಲಿ ಭೂಮಿ ಕೊಳ್ಳುವುದಕ್ಕೆ ಶೇಕಡ ಮೂರರಂತೆ ಬಡ್ಡಿ ಕೊಡುತ್ತಾರೆ. ಈ ಹಣವನ್ನು 40 ವರ್ಷಗಳಲ್ಲಿ ವಾಪಸ್ಸು ಮಾಡಬಹುದು. ಬೆಲ್ಜಿಯಂನಲ್ಲಿ ಕೊಡುವ ಸಾಲವನ್ನು 25 ವರ್ಷಗಳಲ್ಲೂ, ಜರ್ಮನಿಯಲ್ಲಿ 69 ವರ್ಷಗಳಲ್ಲೂ, ಡೆನ್‌ಮಾರ್ಕಿನಲ್ಲಿ 33 ವರ್ಷಗಳಲ್ಲೂ, ಹಂಗೇರಿ, ಫಿನ್‌ಲ್ಯಾಂಡ್, ಪೋಲೆಂಡ್, ಜೆಕೊಸ್ಲೋವೇಕಿಯಾ ಮುಂತಾದ ದೇಶಗಳಲ್ಲಿ ಒಂದೊಂದು ಯೋಜನೆಮಾಡಿ ವಾಪಸ್ಸು ಕೊಡಲು ಅವಕಾಶವನ್ನು ಕಲ್ಪಿಸಿದ್ದಾರೆ. ಇದಕ್ಕಾಗಿ ನಮ್ಮ ದೇಶದಲ್ಲಿ ಮೈಸೂರು ಸರಕಾರ, ಜನರು ಭೂಮಿ ಕೊಳ್ಳಲು ಹಣಸಿಕ್ಕಲು ಒಂದು ಕ್ರೆಡಿಟ್ ಸೊಸೈಟಿ ಏರ್ಪಾಡು ಮಾಡಬೇಕು. ಇಂಥ ಕ್ರೆಡಿಟ್ ಬ್ಯಾಂಕ್ ಮುಖಾಂತರ ವ್ಯವಸಾಯ ಮಾಡುವವರು ಭೂಮಿಯನ್ನು ಕೊಂಡುಕೊಳ್ಳುವುದಾದರೆ ಭೂಮಿಯ ಮಾಲೀಕರಿಗೆ ಹಣವನ್ನು ಕೊಟ್ಟುಬಿಡುತ್ತೇವೆ ಎಂದು ಹೇಳಬೇಕು. ಆ ಹಣವನ್ನು 50 ವರ್ಷ ಅಥವಾ 20 ವರ್ಷಗಳಲ್ಲಿ ಕಂತುಗಳ ರೂಪದಿಂದ ಭೂಮಿಯನ್ನು ಕೊಂಡುಕೊಳ್ಳುವವರು ವಾಪಸು ಕೊಡಬೇಕೆಂದು ಹೇಳತಕ್ಕದ್ದು. ಈ ತರದ ವ್ಯವಸ್ಥೆಯನ್ನೇನಾದರೂ ಮಾಡತಕ್ಕ ಯೋಚನೆಯನ್ನಾದರೂ ನಾವು ಮಾಡಿದ್ದೇವೆಯೇ ? ಏನೂ ಇಲ್ಲ.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಅಮೆರಿಕಾ, ಬೆಲ್ಜಿಯಂ ಮುಂತಾದ ಪ್ರದೇಶಗಳ ವಿಚಾರವನ್ನು ಉದಹರಿಸಿರಿ. ಮೈಸೂರು ದೇಶ ಆ ಮಟ್ಟಕ್ಕೇನಾದರೂ ಬಂದಿದೆಯೇ?

Sri H. M. CHANNABASAPPA.—When you want money, you must obtain it from where it is available. ದುಡ್ಡೆಲ್ಲಿದೆಯೆಂದು ತಾವು ಕೇಳಬಹುದು. ಮನಸ್ಸುಮಾಡಿ, ದುಡ್ಡಿರುವ ಕಡೆಗೆ ಕೈಹಾಕಬೇಕು. ಭೂಮಿಯು ಕೇವಲ ಉತ್ಪಾದನಾಸಾಧನ, ಅಷ್ಟೆ. ಬರಿಯ ಭೂಮಿಯಿಂದೇನೂ ಪ್ರಯೋಜನವಿಲ್ಲ. ದುಡ್ಡಿಲ್ಲದೆ ಭೂಮಿಯಿಂದ ಏನೂ ಪ್ರಯೋಜನವಿಲ್ಲ. ಕೂಲಿ ಮಾಡತಕ್ಕವನು ಸಿಕ್ಕದಿದ್ದರೆ ಏನು ಮಾಡಾನು ? ಉಳುವುದಕ್ಕೆ ಎತ್ತುಗಳನ್ನು ಕೊಂಡುಕೊಳ್ಳಲು ದುಡ್ಡಿಲ್ಲದಿದ್ದರೆ ಏನಾದೀತು ? ದುಡಿಮೆ ಮಾಡುವವನಿಲ್ಲದಿದ್ದರೆ ಬೆಳೆಯಾದೀತೇ ? ಆದ್ದರಿಂದ ಭೂಮಿಗೆ ಎಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯ ಈ ಉತ್ಪಾದನಾಸಾಧನಗಗಳಿಗೂ. ಆದ್ದರಿಂದ ಹಣವಿಲ್ಲದೆ ಬರೀ ಭೂಮಿಯಿಂದ ಏನೂ ಪ್ರಯೋಜನ ಲಭಿಸದು. ಆದ್ದರಿಂದ ರಾಷ್ಟ್ರದ ಹಿತದೃಷ್ಟಿಯಿಂದ ಹಣವನ್ನು ಎಳೆಯತಕ್ಕ ಪ್ರಯತ್ನ ಮಾಡಬೇಕು. ದೇಶದಲ್ಲಿ ಈಗಲೂ ಲಕ್ಷೋಪಲಕ್ಷ, ಕೋಟಿಕೋಟಿಯಷ್ಟು ಹಣ ಬ್ಯಾಂಕುಗಳಲ್ಲಿ ಸುಮ್ಮನೆ ಬಿದ್ದಿದೆ. ಇದನ್ನೆಲ್ಲಾ ಉಪಯೋಗಕ್ಕೆ ತರುವ ಪ್ರಯತ್ನ ಮಾಡಿದ್ದೀರಾ ? ಅದನ್ನಿಂದು ನಿಮಗೆ ಮುಟ್ಟುವುದಕ್ಕೆ ಧೈರ್ಯವಿಲ್ಲ. ಅದನ್ನು ಮುಟ್ಟದೆ ಹಳ್ಳಿಯಲ್ಲಿ ಕುಳಿತುಕೊಂಡಿರುವ ಬಡಪಾಯಿಯನ್ನು ಹಿಡಿದುಕೊಂಡು ಅಲ್ಲಾಡಿಸುತ್ತಿದ್ದೀರಿ! ಈ ಹೊತ್ತಿನ ದಿವಸ ಹಳ್ಳಿಯಲ್ಲಿರುವ ನಮ್ಮ ಆಸ್ತಿಯನ್ನೆಲ್ಲಾ ಮಾರಿದರೂ ಪಟ್ಟಣದಲ್ಲಿರುವ ಒಂದು ಮನೆಯ ಬೆಲೆಯಾಗು

(SRI H. M. CHANNABASAPPA)

ವುದಿಲ್ಲ. ದೇಶಾದ್ಯಂತ ಧನದ ವ್ಯಾಮೋಹ ಹೆಚ್ಚಿ ಪ್ರಕರಣಗಳು ಹೇಗೆ ಹೋಗುತ್ತಿವೆ ಎಂಬುದನ್ನು ನೀವು ಯೋಚನೆ ಮಾಡಿಲ್ಲ. ಈ ಹೊತ್ತು ನೀವು ಪಟ್ಟಣದಲ್ಲಿ ಮೈ ಬೆವರು ಸುರಿಸದೆ ಲಕ್ಷಗಟ್ಟಳೆ ಸಂಪಾದಿಸುತ್ತಿರುವವರನ್ನು ಬಿಟ್ಟು, ಹಳ್ಳಿಯಲ್ಲಿದ್ದುಕೊಂಡು ಹಗಲು ರಾತ್ರಿ ಬೆವರು ಸುರಿಸಿ ದುಡಿಯುತ್ತಿರುವವರನ್ನು ಐದೂವರೆ ಅಡಿಯ ಮೇಲೆ ಎದ್ದರೆ ಕತ್ತರಿಸಿ ಹಾಕುತ್ತೇನೆ ಎಂದು ಹೇಳುತ್ತೀರಿ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು)—ತಾವು ಷೇರ್ ಹೋಲ್ಡರುಗಳು ಮತ್ತು ಬ್ಯಾಂಕರುಗಳ ವಿಚಾರ ಹೇಳುತ್ತಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀವು ceiling ಹಾಕುತ್ತಿದ್ದೇವೆಂದು ಹೇಳುತ್ತಿದ್ದೀರಿ. ಯಾವ ceiling limit ಆದರೂ ಹಾಕಿ, ಮುಖ್ಯವಾಗಿ ನಾನು ಮೊದಲೇ ಹೇಳಿದ ಹಾಗೆ, if it could lead to Socialism. ಇತ್ತ Capitalismನ್ನೂ ಇಟ್ಟುಕೊಂಡು ಅತ್ತ Socialismನ್ನೂ ತಂದು ರಾಷ್ಟ್ರ ಕಟ್ಟುತ್ತೇವೆ ಎನ್ನುವುದು ಕನಸಿನ ಮಾತು. ಸೋಷಿಯಲಿಸಂ ಎಂದ ಮೇಲೆ ಹೃದಯಾಂತರಾಳದಿಂದ ಮನಃಪೂರ್ವಕವಾಗಿ ಅದನ್ನು ಕಾರ್ಯಗತ ಮಾಡುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡಿಯೇ ತೀರಬೇಕು. ಈ ಹೊತ್ತು ನಾನು ಹೇಳುತ್ತೇನೆ, ತಾವು ಎಲ್ಲರಿಗೂ ಭೂಮಿ ಕೊಡುತ್ತೇವೆಂದು ಹೇಳುತ್ತಾ ನಾನಾ ಆಸೆ ಪಾಸೆಗಳನ್ನು ಜನರಿಗೆ ತೋರಿಸಿದ್ದೀರಿ. ನಾವು ಆಶ್ವಾಸನೆ ಕೊಟ್ಟುಬಿಟ್ಟಿದ್ದೇವೆಂದು ಹೇಳಿ ಭೂಮಿಯನ್ನು ಹಂಚಿಕೆ ಮಾಡುತ್ತೇವೆನ್ನುವುದು ಸರಿಯಲ್ಲ. ಎಲ್ಲರೂ ಚೆನ್ನಾಗಿರಬೇಕು, ಎಲ್ಲಗೂ ಸುಖವಾಗಿರಬೇಕು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಮುಂದುವರಿಯಬೇಕು. ಈಗ ನೀವು ಒಂದು ವೇಳೆ ಭೂಮಿ ಹಂಚಿದರೂ ಅವನಿಗೆ ಅದಕ್ಕೆ ಕೊಡುವುದಕ್ಕೆ ದುಡ್ಡೆಲ್ಲಿಂದ ಬರಬೇಕು ; ಆಮೇಲೆ ಎತ್ತಿಗೆ ಎಲ್ಲಿಗೆ ಹೋಗಬೇಕು ? ಎತ್ತಿಲ್ಲದಿದ್ದರೆ ವ್ಯವಸಾಯವಾಗುತ್ತದೆಯೇ ? Money is as important as land. When land is made available, money must be made available. From whatever source you bring money, I do not mind.

[MR. SPEAKER in the Chair].

Mr. SPEAKER.—May I know how much more time the Hon'ble Member would still require ?

Sri H. M. CHANNABASAPPA.—I am almost at the tail end of my speech, Sir.

Sri K. PUTTASWAMY.—Sir, in some cases, the tail itself will be very long (*Laughter*).

Mr. SPEAKER.—I propose that Sri Channabasappa will finish his speech today.

Sri H. M. CHANNABASAPPA.—I do not want to trouble either the Speaker or the Hon'ble Members here. I only want to place certain facts which are very important, if only the House and you can bear with me, Sir. Otherwise I will sit down.

ಒಬ್ಬ ಸದಸ್ಯರು.—ಯಾರೂ ಅವರನ್ನು ತಡೆಗಟ್ಟಬೇಕೆಂದಿಲ್ಲ. ಅವರಿಗೆ ಕೊಟ್ಟಿರುವ ಹಾಗೆ special consideration ನ್ನನ್ನು ಇತರರಿಗೂ ಕೊಡಬೇಕೆಂಬುದೇ ನನ್ನ ಕೋರಿಕೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೀಲಿಂಗ್ ಎಷ್ಟಿರಬೇಕು ಎಂಬ ಪ್ರಶ್ನೆಯನ್ನು ಎತ್ತಿದರು. ಈ ವಿಚಾರದಲ್ಲಿ ನಾನಾ ಕಮಿಟಿಗಳು ನಾನಾ ಸಲಹೆಗಳನ್ನು ಮಾಡಿನೆ. ಫೈನಾನ್ಸ್ ಕಮಿಷನ್ನಿನವರು ಇದೇನೂ ಬೇಕಿಲ್ಲವೆಂದೇ ಹೇಳಿದ್ದಾರೆ. ಕಾಂಗ್ರೆಸ್ ಎಕನಾಮಿಕ್ ಪ್ರೋಗ್ರಾಂ ಕಮಿಟಿಯವರು ತಿಂಗಳೊಂದಕ್ಕೆ 4,000 ರೂಪಾಯಿಗಳ ಉತ್ಪನ್ನವಿರುವಷ್ಟು ಒಂದು ಸೀಲಿಂಗ್ ಇರಬೇಕೆಂದು ಹೇಳಿದ್ದಾರೆ. ಕಾಂಗ್ರೆಸ್ Agrarian ಕಮಿಟಿಯವರು ಮೂರು ಫ್ಯಾಮಿಲಿ ಹೋಲ್ಡಿಂಗ್‌ನಷ್ಟು ceiling ಆಗಿ ಇಡಬೇಕೆಂದು ಹೇಳಿದ್ದಾರೆ. ಆದರೆ, ಪ್ರೊಫೆಸರ್ ರಂಗಾಅವರು ಮತ್ತು ರಾಮಸ್ವಾಮಿ ರೆಡ್ಡಿಯಾರ್‌ಅವರು, ಇದು ಸರಿಯಲ್ಲ, ಗ್ರಾಮಾಂತರಗಳಲ್ಲಿ leadership ಬೆಳೆಯಬೇಕಾದರೆ ಜೀವನರಂಗದ ವಿವಿಧ ಭಾಗಗಳಲ್ಲಿ ಒಂದಕ್ಕೊಂದಕ್ಕೆ ತಾರತಮ್ಯವುಂಟುಮಾಡುವುದು ಸರಿಯಲ್ಲ. ಯಾವ ತೆರದ ಸೀಲಿಂಗ್ ಹಾಕಿದರೂ ಅದೇ ಸೀಲಿಂಗ್ ಎಲ್ಲಾ ಕ್ಷೇತ್ರಗಳಲ್ಲೂ ಅನ್ವಯವಾಗಬೇಕು. ಆಮೇಲೆ ಹೈದರಾಬಾದ್ ಕಮಿಟಿಯವರು ಐದರಿಂದ ಹತ್ತು ಫ್ಯಾಮಿಲಿ ಹೋಲ್ಡಿಂಗಿನಷ್ಟಕ್ಕೆ ceiling ಹಾಕಬಹುದು ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಜನ ಸಾಮಾನ್ಯರ ಅಭಿಪ್ರಾಯ, ದೇಶದಲ್ಲಿ ಒಂದು ಕ್ಷೇತ್ರದಲ್ಲಿ ಸೀಲಿಂಗ್ ಹಾಕಿ ಇನ್ನೊಂದು ಕ್ಷೇತ್ರದಲ್ಲಿ ಹಾಗೆಯೇ ಬಿಡುವುದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ ; ಜನರಲ್ಲಿ ಅತೃಪ್ತಿ ಅಸಮಾಧಾನಗಳು ಉಂಟಾಗುವುದಕ್ಕೆ ಅವಕಾಶವಾಗುತ್ತದೆ ಎಂಬುದಾಗಿದೆ. Low ceiling fix ಮಾಡಿದ್ದೇ ಆದರೆ, ಗ್ರಾಮಾಂತರಗಳಲ್ಲಿ ವ್ಯವಸಾಯವನ್ನೇ ಅವಲಂಬಿಸಿಕೊಂಡಿರತಕ್ಕ 130-150 ಲಕ್ಷ ಜನ ಈ ಮಾನ್ಯ ಸಭೆಗೆ ಚುನಾಯಿತರಾಗಿ ಬರುವುದಕ್ಕೆ ಅವಕಾಶವಿಲ್ಲದಹಾಗಾಗುತ್ತದೆ. ನಮ್ಮ ಉತ್ಪನ್ನ 5,400 ರೂಪಾಯಿಗಳಿಗೆ ಮೇಲಿರಕೂಡದೆಂದು ಮಾಡಿದರೆನ್ನೋಣ. ಅಲ್ಲಿಗೆ 5,400 ರೂಪಾಯಿಗಳಲ್ಲಿ ತಮ್ಮ ವಿಶಿಷ್ಟ ವ್ಯವಹಾರಗಳನ್ನೂ ನಡೆಸಿ, ಮುಂದಿನ ಐದು ವರ್ಷದ ಚುನಾವಣೆಗಳು ನಡೆಯುವ ಹೊತ್ತಿಗೆ ಕಾನೂನು ಪ್ರಕಾರ ಹೋದರೂ ಸುಮಾರು 6,000 ರೂಪಾಯಿಗಳನ್ನು ಹೊಂದಿಸಿಕೊಳ್ಳಬೇಕೆಂದರೆ, ಅದು ಸಾಧ್ಯದ ಮಾತೇ ? ಇಷ್ಟರಲ್ಲಿ ಮಕ್ಕಳ ವಿದ್ಯಾಭ್ಯಾಸವನ್ನೂ ನಡೆಸಿ, ನಿತ್ಯ ಜೀವನ ಕಳೆದು, ಕೊನೆಗೆ ಚುನಾವಣೆಯಲ್ಲೂ ಹೋರಾಡಿ ಜಯಗಳಿಸಬಲ್ಲೆವೆನ್ನುವ ಜನ ಗ್ರಾಮಾಂತರಗಳಲ್ಲಿ ಇರಬಲ್ಲರೇ ?

ಒಬ್ಬ ಸದಸ್ಯರು.—ಇದೊಂದೇ ಎಲಕ್ಷನ್ನೇ ಅವನು ಹೋರಾಡಬೇಕಾಗಿರುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಳೆ ಬೆಂಗಳೂರಿನಲ್ಲಿರುವವರಿಗೆ ಪೆರಿಯಾಪಟ್ಟಣದಲ್ಲಿ ಕೋ-ಆಪರೇಟಿವ್ ಫಾರಂ ಹಂಚಿಬಿಟ್ಟರೆ ನನ್ನ ಗತಿಯೇನು ? ಇತರ ಕ್ಷೇತ್ರಗಳಲ್ಲಿ ನಮಗೆ ಸಾಧ್ಯವಿಲ್ಲ. ಜನರಿಗೆ ಹೊಟ್ಟೆಗಿಲ್ಲದಿರುವಾಗ ನಾನು 50 ರೂಪಾಯಿ ಕೊಟ್ಟು ವ್ಯವಸಾಯದ ಕೆಲಸ ಮಾಡಿಸಿರಬಹುದು. ಪ್ರಜಾಪ್ರಭುತ್ವದಲ್ಲಿ ಗ್ರಾಮಾಂತರಗಳಲ್ಲಿರುವ ಜನ ರಾಜ್ಯ

ವಸ್ತ್ವಾಳಬೇಕೆಂದು ನಿರ್ಧಾರ ಮಾಡಿರುವಾಗ ಈ ದಿವಸ ಅದಕ್ಕೆ ಸರಿಯಾದ ಸಮಾಜ ನಿರ್ಮಾಣ ಮಾಡಬೇಕು, ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ದಿವಸ ಬೇರೆ ದೇಶಗಳಲ್ಲಿ ಯಾವ ರೀತಿ ಮಾಡಿದ್ದಾರೆಂಬುದನ್ನು ನೋಡದೆ ಇಷ್ಟಕ್ಕೇ ಕೊನೆಗಾಣಿಸಿದರೆ ಬಹುಭಾಗದ ಗ್ರಾಮಾಂತರ ಜನರಿಗೆ ತೊಂದರೆಯಾಗಿ ಪರಿಸ್ಥಿತಿಯೇನಾಗುತ್ತದೆ, ಪ್ರಜಾಪ್ರಭುತ್ವದ ತತ್ವ ಪರಿಪಾಲನೆಯಾಗುತ್ತದೆಯೆ ಎಂಬುದನ್ನು ನೋಡಬೇಕು. ಬ್ಯೂರೋಕ್ರಾಟಿಕ್ ಸರ್ಕಾರವಿದ್ದಾಗ ಯಾವ ಪರಿಸ್ಥಿತಿಯಿತ್ತೋ ಅದು ಮುಂದೆ ಇರಬಾರದು. ಅವಕ್ಕೆ ಅವಕಾಶವಿಲ್ಲದಂತೆ ಎಲ್ಲವನ್ನೂ ದೃಷ್ಟಿಯಲ್ಲಿಟ್ಟು ಸಮಗ್ರವಾಗಿ ಮಸೂದೆಯನ್ನು ಜಾರಿಗೆ ತಂದು ಕಾರ್ಯಗತ ಮಾಡಬೇಕು. ಯಾರಿಂದಲೂ ಪ್ರತಿಭಟನೆ ಬಾರದಿರುವ ಹಾಗೆ ಜನರಿಗೆ ಅನುಕೂಲವಾಗುವ ಹಾಗೆ ಒಂದು ಸರಿಯಾದ ಮಾರ್ಗವನ್ನನುಸರಿಸಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ.

Sri D. DEVARAJ URS.—I want to know from my friend the number of farmers who will be affected by the ceiling that is suggested in this Report.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಈ ವರದಿಯಲ್ಲೇ ಇದೆ. ಎಷ್ಟು ಸೀಲಿಂಗ್ ನಿಗದಿಮಾಡುತ್ತಾರೋ ಅದರ ಮೇಲೆ ಲೆಕ್ಕ ಹಾಕಬೇಕಾಗುತ್ತದೆ.

Sri J. B. MALLARADHYA.—That is the one thing which is not mentioned in the Report. If the ceiling proposed by the Committee is given effect to, what is the number of holdings based on that ceiling and how many people will be affected ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಷ್ಟು ಲಕ್ಷ ಎಕರೆ ಬಿಡುಗಡೆಯಾಗಬೇಕೆಂದು ಹೇಳಿಲ್ಲ. ಅದು ಸಮಿತಿಯವರ ತಪ್ಪಲ್ಲ, ಕಾಲಾವಕಾಶ ಕಡಿಮೆಯಾಗಿತ್ತು, ಅಂಕಿಅಂಶ ಸರ್ಕಾರ ಕೊಟ್ಟಿಲ್ಲ ಎಂಬುದು ನನ್ನ ಊಹೆ.

ದೇಶದಲ್ಲಿ ಅನ್ನದ ಅಭಾವ ಇಷ್ಟು ಹೆಚ್ಚಾಗಿರುವಾಗ ಎಷ್ಟು ಲಕ್ಷ ಎಕರೆ ಸರ್ಕಾರದ ಕೈಲಿದೆಯೋ ಅದರ ಕಡೆ ಗಮನ ಹೋಗಿಲ್ಲ. 35 ಲಕ್ಷ ಎಕರೆ ಹಿಡುವಳಿ ಬಂಜರು ಈ ದಿವಸ ಪಾಳು ಬಿದ್ದಿದೆ; ವ್ಯವಸಾಯಕ್ಕೆ ಕೊಟ್ಟಿರುವ ಜಮೀನುಗಳಲ್ಲಿ ವ್ಯವಸಾಯ ಮಾಡದೆ ಪಾಳು ಬಿದ್ದಿರುವುದು ಈ ದಿವಸ ಇಷ್ಟಿದೆ: ಬಿಜಾಪುರದಲ್ಲಿ 2,51,300 ಎಕರೆ ಸರ್ಕಾರಿ ಬಂಜರು, ಹಿಡುವಳಿ ಬಂಜರು ಭೂಮಿಯಿದೆ. 15ಲಕ್ಷ ಚಿಲ್ಲರೆ ಎಕರೆ ಸರ್ಕಾರಿ ಬಂಜರು. 51ಲಕ್ಷ ಎಕರೆ ಪಾಳು ಬಿಟ್ಟುಕೊಂಡು ಈ ದಿವಸ ದೇಶದಲ್ಲಿ ಉತ್ಪತ್ತಿ ಹೆಚ್ಚಬೇಕೆಂದು ಹೇಳಿದರೆ ಎರಡು ಮಾರ್ಗವಿದೆ, ಒಂದು ಎಕ್ಸ್‌ಟೆನ್ಸಿವ್ ಕಲ್ಟಿವೇಷನ್, ಇನ್ನೊಂದು ಇನ್‌ಟೆನ್ಸಿವ್ ಕಲ್ಟಿವೇಷನ್. Why have you not done it ?

Sri J. B. MALLARADHYA.—I have a set of figures published by the Government of India called the Agricultural Statistics of the reorganised States. The figures furnished by my friend Sri Channabasappa are not capable of verification so far as Mysore is concerned.

Sri H. M. CHANNABASAPPA.—These are the figures furnished by the Government of Mysore in the year 1957-58.

Sri J. B. MALLARADHYA.—My information is basedon the figures furnished by the All-India Agricultural Statistics of the re-organised States. According to that, the figures furnished by my Hon'ble friend are not correct.

Sri H. M. CHANNABASAPPA.—Then, the Mysore Government has furnished false figures to the Government of India.

Sri J. B. MALLARADHYA.—This is the authenticated figure after the re-organisation of States.

Sri H. M. CHANNABASAPPA.—These are the figures furnished by the Government of Mysore. If you think them to be false, I have nothing to say.

1956ನೆಯ ಇಸವಿ ನವೆಂಬರ್ ಒಂದನೆಯ ತಾರೀಖು ವಿಲೀನೀಕರಣವಾದಮೇಲೆ ನನಗೆ ತಿಳಿದಹಾಗೆ ಬಡವರಿಗೆ ಭೂಮಿ ಹಂಚುವುದು ನಿಂತುಹೋಯಿತು. ಕೊಡುವುದು ನಿಂತುಹೋಗಿ ಒಂದೂವರೆ ವರ್ಷವಾಯಿತು. ಮೊದಲು ನಮ್ಮ ಭೂಮಿ ಏನು ಮಾಡಿದ್ದೇವೆಂದು ಯೋಚನೆ ಮಾಡದಿದ್ದರೆ ಏನು ಮಾಡಿದ್ದೇ ಹಣವಿಲ್ಲವೆಂದು ಹೇಳಬಹುದು, ಮನಸ್ಸು ಮಾಡಿದರೆ ಎಷ್ಟು ಬೇಕೋ ಅಷ್ಟು ಬರುತ್ತದೆ ಮನಸ್ಸು ಮಾಡುವ ಹಾಗಿಲ್ಲ, ಹಣ ಬರುವಹಾಗಿಲ್ಲ. ಜೊತೆಗೆ ಯೋಜನೆಗಳನ್ನು ಹಾಕಬಹುದು. ಬೇಕಾದಷ್ಟು ಟ್ರಾಕ್ಟರುಗಳಿವೆ. ಈ ಟ್ರಾಕ್ಟರುಗಳಿಂದ ನಾಲ್ಕು ವರ್ಷಗಳಲ್ಲಿ ಸಾಗುವಳಿ ಮಾಡಿರುವುದು ಹನ್ನೊಂದು ಸಾವಿರ ಎಕರೆ. ಇಂಡಿಯಾ ಸರ್ಕಾರದಲ್ಲಿ ಏಳು ಕೋಟಿ ಎಕರೆ ಹಿಡುವಳಿ ಬಂಜರು ಭೂಮಿಯಿದೆ. ಎಲ್ಲಾ ಸೇರಿ ಒಟ್ಟು ಹನ್ನೊಂದು ಕೋಟಿ ಎಕರೆ ಸಾಗುವಳಿ ಬಂಜರಿದೆ. ಇದು ಸರ್ಕಾರ ಒದಗಿಸಿರುವ ಅಂಕಿ ಅಂಶ. ಹೀಗಿರುವುದಕ್ಕೇನು ಕಾರಣ ? This is a very serious matter and I charge the Government with failure to discharge its duty in this respect. The Government is the biggest landlord and it has to put every inch of land in the State to the best possible use. I have no objection to call upon the people to make any sacrifice whatsoever in the national interest. ಯಾವ ಗಚನಾತ್ಮಕವಾದ ಮಾರ್ಗಗಳನ್ನೂ ನೀವು ಅನುಸರಿಸುತ್ತಿಲ್ಲ. ನೀವು ಮಾಡುತ್ತಿರುವ ಕಾನೂನುಗಳಿಂದ ಆಗುತ್ತಿರುವುದೇನು ? All the tenancy laws have been a failure. It is an admitted. fact. The Bombay Tenancy Act, however progressive it may be, has also been a failure.

Mr. SPEAKER.—The Hon'ble Member need not make a reference to the Bombay Tenancy Act here.

Sri H. M. CHANNABASAPPA.—The question has been referred to in the Report.

6 P.M.

What guarantee is there that we are going to succeed? The lines which have been proposed cannot be implemented. Therefore my suggestion is that whatever the House may determine......

Sri K. PUTTASWAMY.—May I know the date for wiping out the tenants?

Sri H. M. CHANNABASAPPA.—How best the existing land could be put to use must be considered. The pressure of the people on the land must be relieved and not increased.

Sri S. D. KOTHAVALE.—Even in a capitalist manner?

Sri H. M. CHANNABASAPPA.—Subject to over-all consideration you must do justice as you think best.

Sri C. J. MUCKANNAPPA.—How long are we sitting, Sir?

Mr. SPEAKER.—Anyway, the Hon'ble Member Sri Channabasappa must finish his speech today.

Sri J. B. MALLARADHYA.—Let us prepare ourselves. (*Laughter*).

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದನ್ನು ಬಿಟ್ಟುಬಿಟ್ಟು ನೀವು ಹೇಳುವ ರೀತಿಯಲ್ಲಿ ಊರಿಗೆಲ್ಲಾ ಹಂಚಿಬಿಟ್ಟರೆ, ಕೇಳಿದವರಿಗೆಲ್ಲಾ ಭೂಮಿ ಕೊಟ್ಟುಬಿಟ್ಟರೆ ಅದು ಸಮಾಧಾನಕರವಾಗುವುದಿಲ್ಲ. ಕೋ-ಆಪರೇಟಿವ್ ಫಾರ್ಮಿಂಗ್ ಒಂದರ ಮೇಲೆ ಮಹತ್ತರವಾದ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಇಂಡಿಯಾ ಸರ್ಕಾರದವರು, ಮೈಸೂರು ಸರ್ಕಾರದವರು ಒಂದು ಪ್ರೋಗ್ರಾಂ ಹಾಕಿದ್ದಾರೆ. ಇದಕ್ಕೆ ಅಲ್ಟಿಮೇಟ್ ಎಂಡ್ ಎಲ್ಲಿದೆ? ಕೋ-ಆಪರೇಟಿವ್ ವಿಲೇಜ್ ಮ್ಯಾನೇಜ್‌ಮೆಂಟ್ ವಿಚಾರದಲ್ಲಿ ನಾನು ಬಹಳ ಭಕ್ತಿಯಿಂದಲೂ ಮತ್ತು ಪಶ್ಚಾತ್ತಾಪದಿಂದಲೂ ಹೇಳುತ್ತಿದ್ದೇನೆ. ನಮ್ಮಲ್ಲಿ ಪೆಸೆಂಟ್ ಪ್ರೊಪ್ರೈಟರ್‌ಶಿಪ್ ಮತ್ತು ಪೆಸೆಂಟ್ ಕಲ್ಟಿವೇಟರ್‌ಶಿಪ್ ಒಪ್ಪಿಕೊಂಡಮೇಲೆ it is miserable. Any amount that we have invested so far is a criminal waste.

Sri T. D. MARANNA (Magadi).—Can an Hon'ble Member speak in many languages?

Mr. SPEAKER.—The point is whenever the Hon'ble Member Sri Channabasappa gets into heat he will express himself in English (*Laughter*). I do not say it is his weakness, it is also my weakness.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಮ್ಮ ಭರತಖಂಡದಲ್ಲಿ ಹಾಗೂ ಮೈಸೂರಿನಲ್ಲಿ ಕೋ-ಆಪರೇಟಿವ್ ಸೊಸೈಟಿಗಳೂ, ಫಾರಮಿಂಗ್ ಸೊಸೈಟಿಗಳೂ ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆ? ನಾನು ಮಂತ್ರಿಯಾಗಿದ್ದಾಗ ಖುದ್ದಾಗಿ ಹೋಗಿ ಅವುಗಳ ಕೆಲಸವನ್ನು ಪರಿಶೀಲನೆ ಮಾಡಿದ್ದೇನೆ.

ಭರತಖಂಡದಲ್ಲಿ ಇರತಕ್ಕಂಥ ಕೋ-ಆಪರೇಟಿವ್ ಫಾರ್ಮಿಂಗ್ ಪರಿಶೀಲನೆಮಾಡಿ ಇಂಡಿಯನ್ ಕೋ-ಆಪರೇಟಿವ್ ಯೂನಿಯನ್ ಅವರು ಒಂದು ವರದಿ ಕೊಟ್ಟಿದ್ದಾರೆ. ಅದರಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್‌ನಲ್ಲಿ ಯಾವ ಯಾವ ಆಶಾಭಾವನೆ ಇಟ್ಟುಕೊಂಡಿದ್ದೆವೋ ಅದಕ್ಕಾಗಿ ಪಶ್ಚಾತ್ತಾಪಪಡಬೇಕಾಗಿದೆ ಎಂದು ಹೇಳಿದ್ದಾರೆ. They are all a miserable failure. ನಮಗೆ ಈ ಕೋ-ಆಪರೇಟಿವ್ ಫಾರ್ಮಿಂಗ್ ಅಥವಾ ವಿಲೇಜ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಅತ್ಯಾವಶ್ಯಕವಲ್ಲ. ಇದು ಸದ್ಯಕ್ಕೆ ಅನಾವಶ್ಯಕ, ಮುಂದಕ್ಕೆ ಯಾವಾಗಲಾದರೂ ಇದನ್ನು ಮಾಡಿಕೊಳ್ಳೋಣ. ನಿಮ್ಮೆಲ್ಲರ ಅನುಭವದಲ್ಲಿ ಇದು ಒಂದು ಫ್ಯಾಡ್ ಆಗಿದೆ. ಚೈನಾದಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ನಡೆಯುತ್ತಾ ಇದ್ದಪಕ್ಷದಲ್ಲಿ ಅಲ್ಲಿರತಕ್ಕಂಥ ಪೊಲಿಟಿಕಲ್ ಸೆಟ್‌ಅಪ್ ಅದಕ್ಕೆ ಬಹಳ ಸಹಾಯಕವಾಗಿದೆ. ನಾಳೆ ಆ ಪೊಲಿಟಿಕಲ್ ಸೆಟ್ ಅಪ್ ಅಲ್ಲಿ ಹೋಗಿಬಿಟ್ಟರೆ ಈ ಕೋ-ಆಪರೇಟಿವ್ ಫಾರ್ಮಿಂಗ್ ಏನಾಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಈ ಕೋ-ಆಪರೇಟಿವ್ ಫಾರ್ಮಿಂಗ್ ಮತ್ತು ಕೋ-ಆಪರೇಟಿವ್ ವಿಲೇಜ್ ಮ್ಯಾನೇಜ್‌ಮೆಂಟ್ ವಿಷಯಗಳಲ್ಲಿರುವ ಚಳವಳಿಗಳನ್ನು ಕೆಲವು ಕಾಲ ಕೊಂಚ ಷೆಲ್ವ್ ಮಾಡಿದರೆ ಉತ್ತಮ.

ಸರ್ಕಾರ ಮೈಸೂರಿನಲ್ಲಿ ಒಂದು ಲ್ಯಾಂಡ್ ಬ್ಯಾಂಕ್ ಮಾಡಬೇಕು. ಈ ಭೂಬ್ಯಾಂಕ್ ಕೆಲಸ ಮಾಡುವುದರ ಜೊತೆಗೆ ನಮ್ಮ ಮೈಸೂರಿನಲ್ಲಿ ಸ್ಟೇಟ್ ಬ್ಯಾಂಕುಗಳು ಕೆಲಸ ಮಾಡಲಿ. ಭೂಮಿಯನ್ನು ಕೇಳತಕ್ಕವರಿಗೆ, ಬಡವರಿಗೆ, ಹಣವನ್ನು ಸಂಪೂರ್ಣವಾಗಿ, ಎಂದರೆ ಭೂಮಿಯ ಫುಲ್ ವ್ಯಾಲ್ಯು (ಶೇಕಡ 90ರಷ್ಟಾದರೂ) ಕೊಡುವುದಕ್ಕೆ ಈ ಭೂ ಬ್ಯಾಂಕುಗಳಲ್ಲಿ ವ್ಯವಸ್ಥೆ ಮಾಡಬೇಕು. ಇವತ್ತು ಹೊಲ ಉಳತಕ್ಕವನಿಗೆ ಯಾವ ಬ್ಯಾಂಕಿನಲ್ಲಿ ಒಂದು ರೂಪಾಯಿ ಸಾಲ ಸಿಕ್ಕುತ್ತದೆ, except Land Mortgage Bank ಅದು ಹೋಗಲಿ, ಕಮರ್ಷಿಯಲ್ ಬ್ಯಾಂಕುಗಳು ಅವನಿಗೆ ಎಲ್ಲಿಯಾದರೂ ಸಾಲ ಕೊಡುತ್ತವೆಯೋ? ಎರಡು ಆಣೆ ಸಹ ಕೊಡುವುದಿಲ್ಲ, ಕ್ರೆಡಿಟ್-ವರ್ದಿನೆಸ್ ಇಲ್ಲದೆ ಹೋದರೆ ಇವನು ವ್ಯವಸಾಯ ಮಾಡುವುದು ಏನು? ಯಾವ ಮಾರ್ಗದಲ್ಲಿ ವ್ಯವಸಾಯವನ್ನು ರೀವೈಟಲೈಸ್ ಮಾಡಬೇಕು? ಒಂದೇ ಮಾತಿನಲ್ಲಿ ಅವನು ಭೂಮಿಯ ಒಡೆಯನಾಗುವುದು ಹೇಗೆ? ದುಡ್ಡು ಎಲ್ಲಿದೆ? ಅವನ ಹತ್ತಿರ ಒಂದೂವರೆ ಆಣೆ ಇಲ್ಲ. ಅವನಿಗೆ ಸಾಯಂಕಾಲಕ್ಕೆ ಊಟಕ್ಕೆ ಇಲ್ಲ. ಶಾಸನವನ್ನು ಬರೆದುಬಿಟ್ಟರೆ ಅವನಿಗೆ ಭೂಮಿ ಹೋಯಿತೇನು?

ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಗೌರ್ನಮೆಂಟ್ ಗ್ಯಾರಂಟಿ ಕೊಟ್ಟು ಲಕ್ಷೋಪಲಕ್ಷ ರೂಪಾಯಿ ಕೊಟ್ಟಿದ್ದಾರೆ. ನಾನು ಕೈಗಾರಿಕಾ ಮಂತ್ರಿಯಾಗಿದ್ದಾಗ್ಗೆ ನಾನೇ ಹಾಗೆ ಹಣ ಕೊಟ್ಟಿದ್ದೇನೆ. ಗೌರ್ನಮೆಂಟ್

ಗ್ಯಾರಂಟಿ ಕೊಟ್ಟು ಕೈಗಾರಿಕೆಗಳಿಗೆ ಬ್ಯಾಂಕುಗಳಲ್ಲಿ ಸಾಲ ಕೊಡಿಸುತ್ತಾ ಇದ್ದಾರೆ. ಜಮೀನನ್ನು ಉತ್ತಮ ದರ್ಜೆಗೆ ತರಬೇಕು.

ಆದುದರಿಂದ ಆ ಮಾರ್ಗದಲ್ಲಿ ಕೈಗಾರಿಕೋದ್ಯಮಗಳಿಗೆ ಯಾವ ರೀತಿಯಲ್ಲಿ ಸಾಲಗಳನ್ನು ಸರ್ಕಾರದ ಗ್ಯಾರಂಟಿ ಮೇಲೆ ಕೊಡುವುದಕ್ಕೆ ಏರ್ಪಾಡು ಮಾಡಿದ್ದೀರೋ ಅದೇ ರೀತಿ ಸರ್ಕಾರದ ಗ್ಯಾರಂಟಿ ಮೇಲೆ ಗೇಣಿದಾರರಿಗೆ, ಭೂಮಿಯನ್ನು ಪಡೆದಿರುವವರಿಗೆ ಮತ್ತು ವ್ಯವಸಾಯ ಮಾಡಬೇಕೆಂಬ ಇಚ್ಛೆ ಇರತಕ್ಕವರೆಲ್ಲರಿಗೂ ಕೂಡ ಭೂಮಿಯ full value ಎಷ್ಟಿದೆ ಅಷ್ಟನ್ನು, ರಿಜಿಸ್ಟರ್‌ಮಾಡಿ ಬಾಂಡನ್ನು ಕೊಟ್ಟರೆ ಎಲ್ಲ ಬಾಂಕುಗಳಲ್ಲಿಯೂ ಹಣವನ್ನು ಕೊಡುವ ಏರ್ಪಾಡು ಮಾಡಬೇಕು. ಆ ರೀತಿ ಕೊಟ್ಟ ಹಣವನ್ನು 20-30 ವರ್ಷಗಳಲ್ಲಿ ಕಂದಾಯದ ಜೊತೆಗೆ 1/20 ದಾಮಾಷಾ ಪ್ರಕಾರ ವಸೂಲ್ಮಾಡಬೇಕೆಂದು ಹೇಳುತ್ತೇನೆ. ಇದಾಗಬೇಕು. ಇಲ್ಲದಿದ್ದರೆ ದೇಶದಲ್ಲಿ ನಾವು ರಚನಾತ್ಮಕವಾಗಿ ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ. ಒಂದುವೇಳೆ ಈ ಶಾಸನವನ್ನು ನಾವ್ ಪಾಸ್ ಮಾಡಬಹುದು, ನಮ್ಮ ಸ್ನೇಹಿತರು ದೂರಾಲೋಚನೆ ಮಾಡಬಹುದು. ಆದರೆ ಇದರಿಂದ ಜನಗಳಿಗೆ ಪ್ರಯೋಜನವಾಗುತ್ತದೆಂದು ಯಾರಾದರೂ ನಂಬಿಕೆಯನ್ನಿಟ್ಟುಕೊಂಡಿದ್ದರೆ ಅದನ್ನು ದಯವಿಟ್ಟು ಮರೆತುಬಿಡಿ. ಈಗ ಬೊಂಬಾಯಿ ಕಾನೂನು ಯಾವರೀತಿಯಲ್ಲಿದೆ. ಆದುದರಿಂದ ಈ ವ್ಯವಸ್ಥೆಯನ್ನು ಮಾಡುತ್ತೇವೆಂದು ಯಾವ ಕಾಲಕ್ಕೂ ತಿಳಿದುಕೊಳ್ಳಬೇಡಿ. ಈಗ ಬೇರೆ ಕಾನೂನುಗಳೆಲ್ಲ ಯಾವರೀತಿ ineffective ಆಗಿವೆಯೋ ಅದೇರೀತಿ ಮುಂದೆ ಇದೂ ಆಗುತ್ತದೆ. ನಾನು ಬಿಜಾಪುರ, ಕಾರವಾರ ಮುಂತಾದ ಭಾಗಗಳಿಂದ ಬಂದಂಥ ವ್ಯವಸಾಯಗಾರರನ್ನು ಅಲಾಯಿದಾ ಕರೆದುಕೊಂಡು ಹೋಗಿ ವಿಚಾರಿಸಿದ್ದೇನೆ. ಅವರ ಕಡೆಯಲ್ಲಿ ಕಾನೂನು ಹೇಗೆ ನಡೆಯುತ್ತಿದೆ ಎಂದು ಕೇಳಿದ್ದೇನೆ. ಈ ಕಾನೂನಿನಿಂದ ಏನಾಗಿದೆ ಎಂಬುದನ್ನು ಅವರು ಹೇಳಿದರು. ಕರಣೀಕರಾದವರಿಗೆ ಒಂದು ಗ್ರಾಮದಲ್ಲಿ ಎರಡು ಸಾವಿರ, ಮೂರು ಸಾವಿರ, ನಾಲ್ಕು ಸಾವಿರ—ಹೀಗೆ ಉತ್ಪತ್ತಿ ಸಂಬಳ ಬಂದಹಾಗೆ ಬರುತ್ತದೆಂದು ಹೇಳಿದರು. ಹೆಸರಿಗೆ ಮಾತ್ರ ಇಂಥ ಭೂಮಿಯನ್ನು ಇಂಥವನೇ ಸ್ವತಃ ಬೇಸಾಯ ಮಾಡುತ್ತಾನೆ ಎಂದು ಬರೆಯುತ್ತಾರೆ. ವಾಸ್ತವವಾಗಿ ಆ ಭೂಮಿಯನ್ನು ಗುತ್ತಿಗೆಗೆ ಕೊಟ್ಟು ವ್ಯವಸಾಯ ನಡೆಯುತ್ತಿರುತ್ತದೆ. ಆ ಗುತ್ತಿಗೆಯನ್ನು ಸಹ ಪೂರ್ವದಲ್ಲಿದ್ದಂತೆ ಅವನು ಬೆಳೆಯನ್ನು ಬೆಳೆದ ಮೇಲೆ ಕೊಡುವುದಲ್ಲ, ಅವನು ಸಾಲ ಸೋಲ ಮಾಡಿ ಹೆಂಡತಿಯ ತಾಳಿಯನ್ನು ಅಡವಿಟ್ಟು ಹಣ ತೆಗೆದುಕೊಂಡು ಬಂದು ಭೂಮಿದಾರನಿಗೆ ಗುತ್ತಿಗೆಯನ್ನು ವರ್ಷದ ಮೊದಲಿನಲ್ಲಿಯೇ ಕೊಡಬೇಕು. ಒಂದು ವರ್ಷ ಮುಂಚೆ ಕೊಡಬೇಕು.

Mr. SPEAKER.—Those are not the full facts. Somebody has misinformed you about it.

Sri H. M. CHANNABASAPPA.—I have told you what the information is that may has been given to me.

Mr. SPEAKER.—I do not think Report there are any such facts. There be a small percentage like that.

Sri H. M. CHANNABASAPPA.—Unfortunately, Jatti Committee's Report says that it is thoroughly a failure. What can I do ?

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಶ್ಯಾನುಭೋಗರಿಗೆ ದುಡ್ಡು ಕೊಟ್ಟು ನಾವೇ personal cultivation ಮಾಡುತ್ತೇವೆಂದು ಬರೆಸಿಕೊಳ್ಳುತ್ತಾರೆಂದು ಮಾನ್ಯ ಸದಸ್ಯರು ಹೇಳಿದರು. Personal cultivation ಮಾಡತಕ್ಕವರಿಗೆ ceiling fix ಮಾಡಬಾರದೆಂದು ಆ ದೃಷ್ಟಿಯಿಂದ ಹೇಳಿದರೇ, ಸ್ವಾಮಿ?

Sri H. M. CHANNABASAPPA.—I am telling you what has been brought to my notice. ಇದರಿಂದ ಏನಾಗುತ್ತದೆ ಎಂದರೆ ಈ ಕಾನೂನುಗಳನ್ನು ಈ ರೀತಿ ಮಾಡುವುದರಿಂದ ಅವರುಗಳಿಗೆಲ್ಲ ಆದಾಯಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ವಾಸ್ತವವಾಗಿ ಬಡವನಾದವನಿಗೆ ಅನುಕೂಲವಾಗುವುದಿಲ್ಲ. ಈ ವ್ಯವಹಾರಗಳಲ್ಲಿ ಬ್ಲಾಕ್ ಮಾರ್ಕೆಟ್ ನಡೆಯುತ್ತಿದೆ ಎನ್ನುವುದು ನನ್ನ ದೃಷ್ಟಿಗೆ ಬಂದಿದೆ; ತಮ್ಮ ದೃಷ್ಟಿಗೂ ಬಂದಿದೆ ಎಂದು ನನ್ನ ಭಾವನೆ. ಈ ರೀತಿಯಾಗುವುದಕ್ಕೆ ಅವಕಾಶ ಕೊಡಬೇಡಿ. ಇಂಥ ಕಾನೂನುಗಳನ್ನು ಆದಷ್ಟು ಸರಳವಾಗಿ ಮಾಡಬೇಕು ಎಂದು ನಾನು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಸೀಲಿಂಗ್ ಎಷ್ಟಿರಬೇಕು ಎಂದು ಎಲ್ಲರೂ ಕೇಳುತ್ತಿದ್ದಾರೆ. ಸೀಲಿಂಗ್ ಫಿಕ್ಸ್ ಮಾಡುವಾಗ ಧಾರಾಳವಾಗಿ ಒಂದು ತೀರ್ಮಾನ ಮಾಡಬೇಕು. ಆ ಸೀಲಿಂಗ್ ಎಲ್ಲ ಕ್ಷೇತ್ರಗಳಿಗೂ ಅನ್ವಯವಾಗಬೇಕು. ಇವೊತ್ತೇ ಅದನ್ನು ಮಾಡಲು ಆಗಲಾರದು, ಆ ರೀತಿ ಆಗುವವರೆಗೂ ತಡೆಯಬೇಕು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಯಾವುದಾದರೂ ಒಂದು ಕ್ಷೇತ್ರದಲ್ಲಿ ಇದನ್ನು ಮೊದಲು ಪ್ರಾರಂಭಮಾಡಬೇಕು. ವ್ಯವಸಾಯ ಕ್ಷೇತ್ರದಲ್ಲಿ ಪ್ರಾರಂಭಮಾಡಿದರೂ I have no objection. ಸೀಲಿಂಗ್ ಎಷ್ಟಿರಬೇಕು ಎನ್ನುವುದನ್ನು ತೀರ್ಮಾನ ಮಾಡುವಾಗ ಬರೀ ವ್ಯವಸಾಯ ಕ್ಷೇತ್ರವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಮಾಡಬಾರದು. ವ್ಯಾಪಾರ ಮಾಡುವವರು, ಲೇವಾದೇವಿ ಮಾಡತಕ್ಕವರು, ಲಾಯರುಗಳು-ಹೀಗೆ ಎಲ್ಲ ಕ್ಷೇತ್ರಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮಾಡಬೇಕು. ಹೀಗೆ ಎಲ್ಲ ಕ್ಷೇತ್ರಗಳನ್ನೂ ಸಮಗ್ರವಾಗಿ ತೆಗೆದುಕೊಂಡು ಇಲ್ಲಿ ಏನು ಸೀಲಿಂಗ್ ಇರಬೇಕೆಂದು suggest ಮಾಡುತ್ತೀರೋ ಆ ಸೀಲಿಂಗ್ ಎಲ್ಲರಿಗೂ ಅನ್ವಯವಾಗಬೇಕು. ಈ ರೀತಿಯಲ್ಲಿ ಒಂದು ಸೀಲಿಂಗ್ ಎಷ್ಟಿರಬೇಕೆಂದು ಹೇಳಿದರೆ ಆಗ ನಾವೆಲ್ಲರೂ ಕೈ ಎತ್ತಿ ಬೆಂಬಲವನ್ನು ಕೊಡುತ್ತೇವೆ. ಹಾಗೆ ಮಾಡದೆ ಸುಮ್ಮನೆ higgle haggle ಮಾಡಿ ಏನೋ ಒಂದನ್ನು ಈಗ ನಮ್ಮ ಮುಂದೆ ತಂದು ಉಳಿದುದನ್ನು ಅನಂತರ ನೋಡೋಣವೆಂದರೆ ಅದನ್ನು ಒಪ್ಪಲು ಸಾಧ್ಯವಿಲ್ಲ. You please look to para three or four of the Planning Commission Report of the First Five-Year Plan. They have said it. ಇಲ್ಲಿ ಇದನ್ನು ಮೊದಲು ಮಾಡೋಣ, ಮುಂದಕ್ಕೆ ನೋಡೋಣವೆಂದು ಹೇಳುತ್ತಾರೆ. ಇದು Central subject ಆಗುವುದಿಲ್ಲ. ಪ್ಲಾನಿಂಗ್ ಕಮಿಷನವರು 'as also in other sectors' ಎಂದು ಹೇಳಿದ್ದಾರೆ. ಅವರು ಬೇಡವೆಂದು

(SRI H. M. CHANNABASAPPA)

ಎಲ್ಲಿಯೂ ಹೇಳಿಲ್ಲ. ಒಂದು ವೇಳೆ ಅವರು ಬೇಡವೆಂದು ಹೇಳುವ ಕಾಲಕ್ಕೆ ಏನು ಆರ್ಗ್ಯುಮೆಂಟ್ ಕೊಡುತ್ತಾರೆಯೋ ನೋಡೋಣ.

Mr. SPEAKER.—What powers have we to put ceilings in other spheres ?

Sri H. M. CHANNABASAPPA.–When we possess powers to put a ceiling limit on agriculture, which commands seventy per cent, don't you think we should have a right to fixing ceiling limits in other spheres ?

Mr. SPEAKER.—I want to know whether we have the power under the Constitution. We are legislating only in respect of land, which is a State subject. In other respects it is the Centre who have the power.

Sri H. M. CHANNABASAPPA.—But it is within our power to suggest.

Mr. SPEAKER.—-That is a different thing.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಬಿಟ್ಟು ನಾಳೆ ನೋಡೋಣ ನಾಳಿದ್ದು ನೋಡೋಣವೆಂದರೆ ಯಾರಿಗೋಸ್ಕರ ನಾವು ಹೆದರಬೇಕು? Are we afraid of the capitalists ?

ಅಧ್ಯಕ್ಷರು.—ನಮಗೋಸ್ಕರ ನಾವು ಹೆದರೋಣ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಬ್ಬರಿಗೊಂದು ಒಬ್ಬರಿಗೊಂದು ಮಾಡುವುದಕ್ಕೆ ಹೊರಟರೆ ರಾಜ್ಯಾಂಗಕ್ಕೆ ವಿರೋಧವಾಗುವುದಲ್ಲದೆ, ದೇಶದಲ್ಲಿ ಅಸ್ಥಿರತೆಯನ್ನು ಹೆಚ್ಚಿಸಿ ಗ್ರಾಮಾಂತರಗಳಲ್ಲಿರತಕ್ಕ ಜನರ ಮನಸ್ಸನ್ನು ಕೆಡಿಸುತ್ತದೆ. ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ.

We have fixed a ceiling. I go one step further. Fix a ceiling for all incomes in other sectors also. If it is not accepted in other sectors, you should remove this ceiling here also. Do you approve of it ?

Sri J. B. MALLARADHYA.—Does the view expressed by my Hon'ble friend Sri H. M. Channabasappa reflect the view of the entire Congress Party in Mysore ?

Sri K. PUTTASWAMY.—My Hon'ble friend Sri Mallaradhya will have occasion to hear the opinion of the party tomorrow or the day after.

Sri J. B. MALLARADHYA.—I only wanted to know whether it is his individual view or whether it is his party view. I am quite prepared to listen to every one of you.

Sri H. M. CHANNABASAPPA.—We are still discussing these points and we are likely to come to a conclusion in one or two days and we will place it before you.

ಅವರು ಯಾವ ಯಾವ ವಿಷಯಗಳನ್ನು ಹೇಳಿದ್ದಾರೋ ಸ್ವಲ್ಪ ಹೆಚ್ಚುಕಡಮೆ ಅವೆಲ್ಲವನ್ನೂ ಪ್ರಸ್ತಾಪ ಮಾಡಿದ್ದೇನೆ. ಕೊನೆಯದಾಗಿ ನನ್ನ ಅರಿಕೆ ಇಷ್ಟೆ. ಕರಡು ಮಸೂದೆಯನ್ನು ತಯಾರುಮಾಡಿ ಮಂಡಿಸುವಾಗ, ಬೊಂಬಾಯಿ ಕಾನೂನಿನಲ್ಲಿ ಅಥವ ಬೇರೆ ಕಡೆ ಆ ರೀತಿ ಇದೆ, ಅದನ್ನು ಇಲ್ಲಿ ಸೇರಿಸಿದ್ದೇವೆ ಎಂದು ಹೇಳಬಾರದು. ನಮ್ಮ ಗುರಿಯನ್ನು ನಾವು ನೇರವಾಗಿ ಮುಟ್ಟಬೇಕು. ರೈತರಿಗೆ ತೊಂದರೆಯಾಗಬಾರದು, ವ್ಯವಸಾಯಕ್ಕೆ ಧಕ್ಕೆ ಬರಬಾರದು, ಜನರು ವಕೀಲರಲ್ಲಿಗೆ ಹೋಗುವ ಕಷ್ಟವನ್ನು ಅನುಭವಿಸಬಾರದು, ದೇಶದಲ್ಲಿ ಅಶಾಂತಿ ಆಗಬಾರದು, ಇದನ್ನೆಲ್ಲಾ ಗಮನದಲ್ಲಿಟ್ಟು ಮಾಡುವುದು ಮುಖ್ಯ. ನಾನು ಕೊಟ್ಟಿರುವ ಸಲಹೆಗಳನ್ನು ಕಾರ್ಯಗತಮಾಡುವುದು ಸುಲಭ. ಕೆಲವರಿಗೆ ತೊಂದರೆಯಾಗಬಹುದು ಇವುಗಳನ್ನು ಸ್ವಲ್ಪ ಸುಧಾರಣೆಮಾಡಿ ಜಾರಿಗೆ ಕೊಡಬಹುದು. ಇದಕ್ಕಿಂತ ಸುಲಭವಾದ ಮಾರ್ಗ ಬೇರೆ ಇಲ್ಲ. ಹೆಚ್ಚುವರಿ ಜಮೀನನ್ನು ಬೇರೆಯವರಿಗೆ ಕೊಡಿ ಎಂದು ಹೇಳಿದರೆ ಕೊಡುತ್ತಾರೆ. ಆದರೆ ಅದಕ್ಕೆ ತಕ್ಕಷ್ಟು ಹಣವನ್ನು ಕೊಡದೆ ಹೀಗೆ ಮಾಡಿದರೆ ಒಬ್ಬ ಬಡವನಿಗೂ ಒಂದು ಅಂಗುಲ ಭೂಮಿ ಸಿಕ್ಕುವುದಿಲ್ಲವೆಂದು ನಾನು ಸ್ಥೂಲವಾಗಿ ಸೂಚನೆ ಕೊಟ್ಟಿದ್ದೇನೆ.

ಅಧ್ಯಕ್ಷರು.—ಸ್ವಲ್ಪ ರಚನಾತ್ಮಕವಾದ ಸಲಹೆಗಳಿದ್ದರೆ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹೇಳಿದಾಗ ತಾವಿರಲಿಲ್ಲ.

ಅಧ್ಯಕ್ಷರು.—ನಾನು ಇಲ್ಲಿದ್ದಾಗ ತಾವು ಹೇಳಲಿಲ್ಲ.

Sri H. M. CHANNABASAPPA.—My constructive suggestions are these :— 1. Prescribe a date after which all absentee landlords shall be removed except in the case of some class of people who are disabled, women and certain others. Say that all lands not cultivated by the owner will vest in the Government as from that date. ಆರು ತಿಂಗಳು ಅಥವಾ ಮೂರು ತಿಂಗಳು ಕಾಲಾವಕಾಶ ಕೊಡಲಿ.

ಎರಡನೆಯದಾಗಿ, ಯಾರು ಯಾರು ಸ್ವತಃ ಭೂಮಿಯನ್ನು ವ್ಯವಸಾಯ ಮಾಡುವುದಿಲ್ಲವೋ ಅವರು ಭೂಮಿಯನ್ನು ಹೊಂದುವುದಕ್ಕೆ ಅವಕಾಶವಿಲ್ಲ. ಮೂರನೆಯದಾಗಿ ಪರಮಾವಧಿ ಮಟ್ಟದ ಪರಿಮಿತಿಯನ್ನು ಹಾಕಬೇಕೆಂದು ಅಭಿಪ್ರಾಯಪಟ್ಟರೆ, ಸ್ವತಃ ಸಾಗುವಳಿ ಮಾಡತಕ್ಕವರಿಗೆ ಪರಮಾವಧಿ ಖುಷ್ಕಿ ಇಷ್ಟು ತರಿ ಇಷ್ಟು ಎಂದು ಗೊತ್ತುಮಾಡಿ ಅದಕ್ಕಿಂತ ಹೆಚ್ಚಾಗಿರುವ ಜಮೀನನ್ನು ಇಂಥ ತಾರೀಖಿನೊಳಗೆ ಬಿಡಬೇಕು, ಯಾರಿಗಾದರೂ ಆ ಹೆಚ್ಚುವರಿ ಜಮೀನನ್ನು ಕೊಡಿ, ಉಳುವವನಿಗೆ ಕೊಡಬೇಕು ಎಂದು ಹೇಳಬೇಕು. ಯಾರಿಗೆ ಆ ಜಮೀನನ್ನು ಕೊಟ್ಟರು ಎನ್ನುವುದನ್ನು ತಾಲ್ಲೂಕು ಕಚೇರಿಯಲ್ಲಿ ನೋಡಿ ತಿಳಿದುಕೊಳ್ಳಬಹುದು. ಹೀಗೆ ಮಾಡಿದರೆ ಅವರವರೇ ಕುಳಿತುಕೊಂಡು ಪರಸ್ಪರ ಸರಿಮಾಡಿಕೊಳ್ಳುತ್ತಾರೆ.

ಇನ್ನು ಹಣದ ಪ್ರಶ್ನೆ ಅವರಿಗೆ ಹಣವನ್ನು ಕೊಡಬೇಕು. ಗೇಣಿದಾರ ಕೊಂಡುಕೊಳ್ಳಬೇಕಾದರೆ

ಸರ್ಕಾರ ಲ್ಯಾಂಡ್ ಬ್ಯಾಂಕ್ ಎಂದಿಡಬೇಕು. ಇತರ ಬ್ಯಾಂಕುಗಳಿಂದಲೂ ಸರ್ಕಾರದ ಗ್ಯಾರಂಟಿಯಮೇಲೆ ಗೇಣಿದಾರರೂ ಕೂಲಿಗಾರರೂ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆಮಾಡಬೇಕು. ದರಗಳನ್ನು ಅವರವರೇ ನಿರ್ಧಾರ ಮಾಡಿಕೊಳ್ಳುತ್ತಾರೆ. ಬ್ಯಾಂಕಿನವರೇನಿದ್ದರೂ ಹಣವನ್ನು ಕೊಡಬೇಕು. ಪ್ರತಿವರ್ಷವೂ ದಾಮಾಷಾ ರೇಟಿನಂತೆ ಆ ಹಣವನ್ನು ಅವರಿಂದ ಕಂದಾಯದ ರೂಪದಲ್ಲಿ ವಸೂಲು ಮಾಡಬೇಕು . . . . .

ಶ್ರೀ ಡಿ. ದೇವರಾಜ ಅರಸ್.—ಶ್ರೀಮಾನ್ ಚನ್ನಬಸಪ್ಪನವರು ಕೊಡುವ ಸಲಹೆಯ ಸಂಬಂಧದಲ್ಲಿ ಒಂದು ವಿಷಯವನ್ನು ತಿಳಿಯಬೇಕು. ಜತ್ತಿ ಸಮಿತಿಯ ವರದಿಯಲ್ಲಿ ಕೊಟ್ಟಿರುವ personal cultivation ಎಂಬುದರ ವಿವರಣೆಯನ್ನು ಒಪ್ಪಿಕೊಂಡಿದ್ದಾರೆ. ಯಾರಾದರೂ ಜಮೀನನ್ನು ಕೊಂಡುಕೊಳ್ಳಲು ಅವಕಾಶ ಕೊಡಬೇಕು, ಇದೇನೋ ಸರಿ. ಯಾವುದಾದರೂ ಬೇರೆ ಉದ್ಯಮದಲ್ಲಿರುವವರು, ಅಥವ ವ್ಯಾಪಾರ ಮಾಡುವವರು ಜಮೀನನ್ನು ಕೊಂಡುಕೊಂಡರೂ ಸಹ ಅವರು ಜಮೀನನ್ನಿಟ್ಟುಕೊಳ್ಳಲು ಅವಕಾಶವಿದೆ. ಇಂಥವರಿಗೆ ಜಮೀನು ದೊರೆಯುವುದು ನ್ಯಾಯ ಎಂದು ಹೇಳುತ್ತಾರೆಯೆ ? ಅಥವ ಬೇರೆ ರೀತಿಯಲ್ಲಿ ಸಂಪಾದನೆ ಮಾಡಲು ಅವಕಾಶವಿರುವವರು under the pretence of personal cultivation ಜಮೀನನ್ನಿಟ್ಟುಕೊಳ್ಳಲು ಅವಕಾಶವಿದೆಯೆ ಎಂಬುದನ್ನು ಅವರು ಹೇಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಕೇಳಿದುದು ಸರಿ. ಒಬ್ಬ ಡೆಪ್ಯುಟೀ ಕಮೀಷನರು, ಸಾವಿರ ರೂಪಾಯಿ ಸಂಬಳ ಪಡೆಯುವವನು ಪರ್ಸನಲ್ ಕಲ್ಟಿವೇಷನ್‌ಗೆಂದು ಗುಮಾಸ್ತರನ್ನಿಟ್ಟು ನನಗೆ ಜಮೀನು ಬೇಕೆಂದು ಹೇಳಿ ಪಡೆದು ಇಟ್ಟುಕೊಳ್ಳಬಹುದು. ಇಂಥದಕ್ಕೆ ಅವಕಾಶ ಕೊಡುವುದು ಒಳ್ಳೆಯದಲ್ಲ. ಎಲ್ಲರಿಗೂ ಕೆಲಸ ದೊರಕಬೇಕು, ದುಡಿಮೆ ಮಾಡುವುದಕ್ಕೆ ಅವಕಾಶವಿರಬೇಕೆನ್ನುವಾಗ ಅವನು ಗೇಣಿದಾರನಾಗಿರಲಿ, ಬೇರೆಯವನಾಗಿರಲಿ, ಬೇರೆ ಉತ್ಪತ್ತಿಗೆ ಮಾರ್ಗವಿದ್ದರೂ ಎಲ್ಲವೂ ನನಗಿರಲೆಂದು ಭೂಮಿಯನ್ನು ಪಡೆಯಲು ಅವಕಾಶವಿರಬಾರದು. ಅಧಿಕಾರ, ಭೂಮಿ, ಬಸ್ಸು ಸರ್ವಿಸು ಎಲ್ಲವೂ ತಮಗಿರಬೇಕೆಂದು ಕೇಂದ್ರೀಕೃತ ಮಾಡಿಕೊಳ್ಳಲು ಸೋಷಿಯಲಿಸ್ಟಿಕ್ ಸ್ಟೇಟ್‌ನಲ್ಲಿ ಅವಕಾಶವಿರಬಾರದು.

ಅಷ್ಟು ಹಣವನ್ನು ಒದಗಿಸಬೇಕಾದರೆ ಹಣ ಎಲ್ಲಿಂದ ಬರಬೇಕು ? ಈಗ ಇರುವ ಹಣ ಸಾಲುತ್ತದೆಯೇ ? ಈ ವಿಚಾರದಲ್ಲಿ ಒಂದು ರಚನಾತ್ಮಕ ಸಲಹೆಯನ್ನು ನಾನು ಕೊಡುತ್ತೇನೆ. ಮೊಟ್ಟಮೊದಲು ಎಷ್ಟು ಹಣಬೇಕಾಗಬಹುದು ಎಂಬುದನ್ನು ಅಂದಾಜುಮಾಡಬೇಕು. ಎಷ್ಟೋಹಣ ಸುಮ್ಮನೆ ಸರಕಾರದ ಹತ್ತಿರ ಬಿದ್ದುಕೊಂಡಿದೆ, ಧೈರ್ಯದಿಂದ ನಮ್ಮ ಗುರಿಯನ್ನು ಸಾಧಿಸುವುದಕ್ಕಾಗಿ ಬಾಂಡ್‌ರೂಪದಿಂದ ಹಣವನ್ನು ಕೊಟ್ಟುಬಿಡೋಣ. ನಾವು ನಮ್ಮ ಕರ್ತವ್ಯವನ್ನು ಮಾಡುತ್ತಿದ್ದೇವೆ ಎಂಬ ಒಂದು ಸಮಾಧಾನವು ಇರಲಿ. ಏನೇ ಪರಿಸ್ಥಿತಿ ಬರಲಿ ಅದನ್ನು ನಾವು ಧೈರ್ಯದಿಂದ ಎದುರಿಸುತ್ತೇವೆಂಬ ಭರವಸೆಯಿರಲಿ. ಭೂಮಿಯನ್ನು ಕೊಂಡುಕೊಳ್ಳುವಾಗ ಅದಕ್ಕೆ ಪ್ರತಿಫಲವನ್ನು ಬಾಂಡ್ ರೂಪದಲ್ಲಿ ಕೊಡೋಣ. ಫ್ಯಾಮಿಲಿ ಹೋಲ್ಡಿಂಗ್ ಎಷ್ಟು ಇರಬೇಕೆಂಬುದನ್ನು ಮೊದಲು ನಿರ್ದಿಷ್ಟಪಡಿಸಿ ಅದರ ವಿವರಣೆಕೊಡಬೇಕು. ಈ ಒಂದು ವ್ಯವಸ್ಥೆಯನ್ನು ಮೊದಲುಮಾಡಬೇಕಾಗಿದೆ. ಎಂದರೆ ಮುಂದೆ ಕೋ-ಆಪರೇಟಿವ್ ಫಾರ್ಮಿಂಗ್ ಮಾಡುವುದಕ್ಕೆ ಅನುಕೂಲವಾಗುವುದು. ಈಗಾಗಲೇ ಹಿಡುವಳಿಯಲ್ಲಿ ಇಟ್ಟುಕೊಂಡಿರತಕ್ಕಂಥ 35 ಲಕ್ಷ ಎಕರೆ ಭೂಮಿಯಲ್ಲಿ ಸರಿಯಾಗಿ ಉತ್ಪತ್ತಿಯಾಗುತ್ತಿದೆಯೇ ಎಂಬುದನ್ನು ಯೋಚನೆಮಾಡಬೇಕು. ಅದರಲ್ಲಿಯ 15 ಲಕ್ಷ ಎಕರೆ ಭೂಮಿಯು ಸಾಗುವಳಿಯಾಗುವಂತೆ ಇನ್ನೂ ಒಂದು ವ್ಯವಸ್ಥೆಮಾಡಬೇಕಾಗಿದೆ. ಸಾಗುವಳಿಮಾಡುವುದಕ್ಕೆ ಭೂಮಿಯಿಲ್ಲದೆ ಇರುವ ಬಡವರಿಗೆ ಭೂಮಿಯನ್ನು ಕೊಟ್ಟು ಸಾಗುವಳಿಯಾಗುವಂತೆ ಮಾಡಲು ಸಾಧ್ಯವಿಲ್ಲವೇ ! ಆದರೆ ಒಂದು ವಿಚಾರ ಭೂಮಿಯನ್ನು ತೆಗೆದುಕೊಳ್ಳಲು ಬಡವರ ಹತ್ತಿರ ದುಡ್ಡು ಎಲ್ಲಿಂದ ಬರಬೇಕು ? ಆದುದರಿಂದ ಒಂದು ಸ್ಕೀಮು ತಯಾರು ಮಾಡಬೇಕಾಗಿದೆ. ಸರಕಾರ ಅಷ್ಟು ಬಂಡವಾಳ ಹಾಕಿದರೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ನೋಡಬಹುದು. ಅಂಥ ಭೂಮಿಯಲ್ಲಿ ಹತ್ತಿಪ್ಪತ್ತು ಭಾಗಗಳನ್ನು ಮಾಡಬೇಕು. ಕೋ-ಆಪರೇಟಿವ್ ಸೊಸೈಟಿ ಏರ್ಪಾಡುಮಾಡಿ ಭೂಮಿಯನ್ನು ಕೊಡಬೇಕು. ಹತ್ತಿಪ್ಪತ್ತು ಬ್ಲಾಕ್‌ಗಳನ್ನು ಮಾಡಿ ಅದಕ್ಕೆ ಬೇಕಾಗುವ ದುಡ್ಡನ್ನು ಸರಕಾರ ಒದಗಿಸಬೇಕು. ನಾನು ಹಿಂದಕ್ಕೆ ಮಂತ್ರಿಯಾಗಿದ್ದಾಗ ಇದನ್ನೆಲ್ಲಾ ಲೆಖ್ಖ ಹಾಕಿದ್ದೇನೆ. ಒಂದು ಸ್ಕೀಮು ತಯಾರುಮಾಡಿದ್ದೇನೆ. ಈ ಪ್ರಕಾರಮಾಡಿ ಸಾಗುವಳಿಮಾಡಲು ಸೊಸೈಟಿ ಮುಖೇನ ಭೂಮಿಯನ್ನು ಕೊಡಬೇಕು. ಎಂದರೆ ಭೂಮಿಯು ಸಾಗುವಳಿಗೆ ಬರುತ್ತದೆ. ಭೂಮಿಯಿಲ್ಲದವರಿಗೆ ಸಾಗುವಳಿಮಾಡಲು ಭೂಮಿ ದೊರೆಯುತ್ತದೆ. ನಾನು ತಯಾರುಮಾಡಿದ ಈ ಸ್ಕೀಮು ಸರಕಾರದ ರಿಕಾರ್ಡ್ಸ್‌ನಲ್ಲಿ ಇದೆ. ಒಂದು ಇಂಚು ಭೂಮಿಯು ಕೂಡ ಸಾಗುವಳಿಯಾಗದೆ ಉಳಿಯದು. ಹಾಗೂ ಉತ್ತಮ ರೀತಿಯಿಂದ ಸಾಗುವಳಿಯಾಗುವಂತೆ ಒಂದು ವ್ಯವಸ್ಥೆಯಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ತಮ್ಮ ಆ ಸ್ಕೀಮಿನ ಪ್ರಕಾರ ಗೊಟ್ಟಿಗೆರೆ, ಬ್ಯೈರಾಪೂರ ಕಾಲನಿ ಸ್ಕೀಮುಗಳ ಪರಿಣಾಮವೇನಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮಂಥವರ ಕೈಯಲ್ಲಿ ಆ ಸ್ಕೀಮು ಸಿಕ್ಕಿಬಿಟ್ಟಿದ್ದರಿಂದ ಹಾಗೆ ಆಯಿತು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನನ್ನ ಕೈಯಲ್ಲಿ ಆ ಸ್ಕೀಮು ಸಿಕ್ಕಿದ್ದರೆ ಬೇರೆತರಹ ಮಾಡಲಾಗುತ್ತಿತ್ತು. I am sure my Hon'ble friend is under a big maya.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮಂಥವರ ಕೈಯಲ್ಲಿ ಸಿಕ್ಕಿ ಬೇರೆ ತರಹವಾಯಿತು. ಈ ರೀತಿ ಸ್ಕೀಮುಗಳನ್ನು ಕಾರ್ಯಗತಮಾಡುವದಕ್ಕೆ ಒಂದು ಸರಿಯಾದ ವ್ಯವಸ್ಥೆಮಾಡದಿದ್ದರೆ ಅವುಗಳ ಪರಿಣಾಮ ಹೀಗಾಗುವುದು. The Agricultural Minister at the Centre has said that he would create a land army of legislators, lawyers and workers.

AN HON'BLE MEMBER.—Just as a ceiling on land is proposed, let there be a ceiling on time also.

MR. SPEAKER.—I request the Hon'ble Member to finish his speech within a short time.

Sri H. M. CHANNABASAPPA.—Sir, you asked me to give concrete proposals and I am doing that. I do not want to take much time of the House. I would appeal to the Hon'ble Members of this House to consider this issue as not a sectional issue either of tenants or of labourers or of landlords but to consider it as a national question. I would request them to keep in mind some of the ideas I have mentioned here and also the primary question, namely, that the majority of the people that we are dealing with are the illiterate people who do not know law. We must design a scheme by which the land will pass on to the persons who cultivate the land and not merely cultivate but cultivate efficiently. We must not be carried away by any political slogans. Production is of primary importance.

ಅಧ್ಯಕ್ಷರು.—ಯಾರಾದರೂ ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತುವ ಮೊದಲೇ ನಾನು ನಿಮಗೆ ಹೇಳುವದೇನೆಂದರೆ ತಾವು ಭಾಷಣವನ್ನು ಯಾವ ಭಾಷೆಯಲ್ಲಿ ಪ್ರಾರಂಭಿಸಿರುವಿರೋ ಅದೇ ಭಾಷೆಯಲ್ಲಿ ಎಂದರೆ ಕನ್ನಡ ಭಾಷೆಯಲ್ಲಿ ಮಾತನಾಡಿ ಭಾಷಣ ಮುಕ್ತಾಯಗೊಳಿಸಬೇಕು ಎಂದು ಸೂಚಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದ್ದರಿಂದ ಯಾವುದೇ ಒಂದು ಭಾಗದ ಜನರ ದೃಷ್ಟಿಯಿಂದ ಈ ಶಾಸನವನ್ನು ಮಾಡುವುದು ಬೇಡ. ದೇಶದಲ್ಲಿ ಉತ್ಪನ್ನಕ್ಕೆ ಧಕ್ಕೆತರುವಂಥ ಶಾಸನವನ್ನು ಅಂಗೀಕಾರ ಮಾಡುವುದು ಬೇಡ. ಉತ್ಪನಕ್ಕೆ ಧಕ್ಕೆ ಬಂದರೂ ಚಿಂತೆಯಿಲ್ಲ, ಭೂಮಿಯನ್ನು ಎಲ್ಲರಿಗೂ ಹಂಚಬೇಕು ಎನ್ನುವುದು ಸರಿಯಲ್ಲ. ಸಣ್ಣಪುಟ್ಟ ಹಿಡುವಳಿಗಳು ಹೆಚ್ಚಾದರೆ ದೇಶಕ್ಕೇ ಹಾನಿ. ಇವುಗಳನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಶಾಸನಮಾಡಬೇಕೆಂದು ನಾನು ಸೂಚನೆಮಾಡುತ್ತೇನೆ.

Sri J. B. MALLARADHYA.—It would be very useful, if the House agrees with me, that if Sri Jatti who happens to be a member of this House is given an opportunity to speak on the very first occasion tomorrow because it will facilitate...

Mr. SPEAKER.—I would be very happy to hear Sri Jatti if he can speak tomorrow.

Sri A. V. NARASIMHA REDDY (Bangalore South).—It is better that Sri Jatti as Chairman of the Committee replies to the debate after all the members express their views.

Mr. SPEAKER.—The point is that Sri Jatti should take part in the debate.

The House will now rise and meet tomorrow at 1 P.M.

The House adjourned at Forty Minutes past Six of the Clock to meet again at One of the Clock on Tuesday, the 11th March 1958.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಅವಾಪ್ತಿ ಕ್ರಮಾಂಕ Accession No. (B) 4742
ದಿನಾಂಕ Date..........................

WD 122—GPB—900—15-7-58

Accession No (B) 4743
Date

MYSORE LEGISLATIVE COUNCIL.

ELEVENTH DAY.

Monday, 10th March 1958.

The House met in the Council Hall, Vidhana Soudha, Bangalore, at Fifteen Minutes past Two of the Clock.

MR. CHAIRMAN (SRI P. SITHARAMIAH, B.A., B.L.) in the Chair.

STARRED QUESTIONS

(to which oral answers were given)

Beggars in Bangalore City.

*Q.—13. **Dr. N. A. AIENGAR** (Nominated).—

Will the Government be pleased to state:—

(*a*) whether they have made a statistics of the beggar population in Bangalore;

(*b*) the total number that the local home can accommodate;

(*c*) whether they are aware that the beggars get out of the home very easily;

(*d*) whether they will consider bringing legislation making beggary punishable by law?

A.—**Sri B. VAIKUNTA BALIGA** (Minister for Labour and Legal Affairs).—

(*a*) Yes.

(*b*) 200 persons.

(*c*) No. They are however released on parole by the officer in charge or by the Magistrate on proper surety.

(*d*) It is already punishable under the law.

Dr. N. A. AIENGAR.—By way of supplementary to (*a*): What is the total number of beggars in Bangalore?

Sri B. VAIKUNTA BALIGA.—In Bangalore it was 795 in 1935. When reckoned again in 1951 it was 5,749.

Sri M. L. SREEKANTIAH.—How many of them were educated and how many were uneducated?

Sri B. VAIKUNTA BALIGA.—I have no information on that point.

Dr. N. A. AIENGAR.—Is Government aware that quite a large number of them are able-bodied beggars?

Sri B. VAIKUNTA BALIGA.—There are some like that. Attempts are being made to put them to some useful occupation.

Dr. N. A. AIENGAR.—In its survey has Government been able to find out the number of people who cannot earn and the number of people who have got some backing?

Sri B. VAIKUNTA BALIGA.—It is a question of unemployment and attempts are being made to put them to some useful occupation.

Dr. N. A. AIENGAR.—How many of them belong to the State of Mysore?

Sri B. VAIKUNTA BALIGA.—I have no information with me at present. If necessary, I will call for it.

Dr. N. A. AIENGAR.—Is Government aware that many of them manage to get out even before they are brought to the colony after they are arrested?

Sri B. VAIKUNTA BALIGA.—I am not aware of any particular instance.

Dr. N. A. AIENGAR.—Who is the authority to enforce the law?

Sri B. VAIKUNTA BALIGA.—There is a special department which is on the perpetual move to find out if there are any beggars infringing the law and they are arrested and produced before a Magistrate.

Dr. N. A. AIENGAR.—Will Government consider the desirability of rehabilitating the disabled persons and making them earn their own livelihood?

Sri B. VAIKUNTA BALIGA.—Government is already doing that. If the Hon'ble member kindly pays a visit to the Beggar Homes he will find out what efforts are being made in that direction.

ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್.—ಸ್ವಾಮಿ, ಈ ಪ್ರಶ್ನೆಯ ಮೂಲವನ್ನು ಶೋಧಿಸಿ ಹೀಗೆ ಈ ಭಿಕ್ಷುಕರ ಸಂಖ್ಯೆ ದಿನದಿನಕ್ಕೂ ಹೆಚ್ಚಾಗುತ್ತಿರುವುದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿಯಲು ಸರಕಾರದವರು ಏನು ಪ್ರಯತ್ನಗಳನ್ನು ಮಾಡಿದ್ದಾರೆ?

Sri B. VAIKUNTA BALIGA.—Beggary has been there all these years. The attempt of the present Government is to eradicate it. That being a big problem t is not so easy to solve it so soon.

ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್.—ಭಿಕ್ಷುಕ ಸಂಖ್ಯೆ ವರ್ಷ ವರ್ಷಕ್ಕೂ ಹೆಚ್ಚಾಗುತ್ತಿದೆಯೋ ಅಥವಾ ಕಡಮೆಯಾಗುತ್ತಿದೆಯೋ?

Sri B. VAIKUNTA BALIGA.—It is at present thought to be on the decrease.

ಶ್ರೀ ಕೆ. ರಂಗಪ್ಪ.—ಭಿಕ್ಷಾಟನೆಯನ್ನು ನಿರೋಧಿಸತಕ್ಕ ಕಾನೂನನ್ನು ಕೇವಲ ಮೈಸೂರು ಮತ್ತು ಬೆಂಗಳೂರು ಈ ಎರಡು ಪಟ್ಟಣಗಳಿಗೆ ಮಾತ್ರ ಅನ್ವಯ ಮಾಡಲಾಗಿದೆಯೋ ಅಥವಾ ಇದನ್ನು ಗ್ರಾಮಾಂತರ ಪ್ರದೇಶಕ್ಕೂ ಅನ್ವಯಿಸುತ್ತೀರೋ?

Sri B. VAIKUNTA BALIGA.—It is not extended to the villages as yet.

ಶ್ರೀ ಕೆ. ರಂಗಪ್ಪ.—ಹಾಗಾದರೆ ಈ ಶಾಸನವನ್ನು ಗ್ರಾಮಾಂತರ ಪ್ರದೇಶಗಳಿಗೆ ಅನ್ವಯಿಸಲು ಸಾಧ್ಯವಿಲ್ಲವೇ?

Sri B. VAIKUNTA BALIGA.—It will entail huge financial commitments which it may not be possible to carry out at the moment.

Sri M. P. L. SASTRY.—Is there any possibility of increasing the number of Beggar Homes in Bangalore?

Sri B. VAIKUNTA BALIGA.—The matter is under consideration. The present number of Beggar Homes is 160 and it is likely to go up to 200 immediately.

Sri M. P. L. SASTRY.—What steps have Government taken to make these people take up some other profession than beggary?

Sri B. VAIKUNTA BALIGA.—As I have already said, an attempt is being made to rehabilitate them and give them some other useful profession. One such step is to make them do some manual labour such as gardening, stitching, or some other associate work.

Sri M. P. L. SASTRY.—May I know the machinery that is employed by Government for collecting the statistics in regard to the number of beggars in Bangalore City?

Sri B. VAIKUNTA BALIGA.—The machinery is the usual machinery of Government officers. These are the figures collected by them in 1941. If the Hon'ble member wants further detailed information, I will call for it and try to give detailed information.

Sri M. P. L. SASTRY.—Has it come to the notice of Government that entire families have taken to this profession on account of their not being able to get suitable employment?

Sri B. VAIKUNTA BALIGA.—It would not be wise or proper to say that entire families have taken to beggary bacause they could not find any employment for themselves. An attempt is being made to find out employment for those who are not employed and for that purpose Employment Exchanges have been set up. The tempo of work in that direction is increasing.

Sri M P. L. SASTRY.—Is Government aware that even educated people have taken to beggary during the last five years in Bangalore City?

Sri B. VAIKUNTA BALIGA.—I will not say that there are not stray individuals like that, but certainly I will not be able to concede that it has grown to such an extent which is worth mentioning.

Sri M. P. L. SASTRY.—Has Government considered the desirability of employing a more perfect machinery for collecting statistics both in regard to educated beggars and uneducated ones?

Sri B. VAIKUNTA BALIGA.—It will see the perpetual attempt of Government to effect improvements in the machinery, but in this case how to achieve the desired result is the problem because we are lacking in finance needed for the purpose.

Dr. N. A. AIENGAR.—Is Government aware that beggary seems to be a much more profitable profession than other professions?

Sri B. VAIKUNTA BALIGA.—It is rather a vague question. I have heard of a story that a certain cinema actor took to begging and found it more profitable and, therefore he would not revert to his profession.

Recruitment of Assistant Public Prosecutors.

*Q.—48. Sri Y. DHARMAPPA (Local Authorities' Constituency).—

Will the Government be pleased to state :—

(a) whether it is a fact that the previous Government had decided to recruit Assistant Public Prosecutors from amongst the active lawyers in the place of Sub-Inspectors working as such;

(b) the action they contemplate to take in this matter ?

A.—Sri B. VAIKUNTA BALIGA (Minister for Labour and Legal Affairs).—

(a) Yes, for conducting criminal cases in the First Class Magistrates' Courts.

(b) The matter is under the active consideration of the Government.

Sri M. L. SREEKANTIAH.—How long will it take to implement this policy of appointing Advocates as Assistant Public Prosecutors ?

Sri B. VAIKUNTA BALIGA.—I can assure the Hon'ble Member that the time that will be taken will be reduced to the irreducible minimum. There are two principles here. One is the claim of officers of the Police Department that they must have some sort of promotion and that the experience that they have gained may be very useful for working as Assistant Public Prosecutors. There is also the question of direct recruitment because it is recognised that the Public Prosecutor should as far as possible not be influenced by the habits and customs formed by a person in the Police Department. We are trying to reconcile these two viewpoints and trying to take the best for the benefit of the public.

Appointment of Advocate-General, Additional and Assistant Advocates-General in the High Court.

*Q—49. Sri Y. DHARMAPPA (Local Authorities' Constituency)).—

Will the Government be pleased to state :—

(a) the number of Advocate-General and Additional and Assistant Advocates-General working in the High Court;

(b) the respective age of these persons now working;

(c) whether there is any age limit fixed for persons appointed to the above posts;

(d) what is their term of office;

(e) whether they intend to give a change-over to these appointments ?

A.—Sri B. VAIKUNTA BALIGA (Minister for Labour and Legal Affairs).—

(a) Advocate-General ...	One
Assistant Advocate-General ...	One
Additional Assistant Advocate-General ...	One
(b) Sri G. R. Ethirajulu Naidu, Advocate-General ...	57
Sri G. Channappa, Assistant Advocate-General.	57
Sri G. Shankara Chetty, Additional Assistant Advocate-General ...	55

(c) No age limit is prescribed for an Advocate-General or for his assistants.

(d) 1. Advocate-General—term of office not fixed.

Article 165 (3) of the Constitution: "The Advocate-General will hold office during the pleasure of the Governor."

2. Assistant Advocate-General—till the end of December 1958.

3. Additional Assistant Advocate-General—Term of office 3 years—till 11th May 1959.

(e) Does not arise now.

Sri M. L. SREEKANTIAH.—May I know whether in previous years the term of the Advocate General was not fixed? When was the practice given up?

Sri B. VAIKUNTA BALIGA.—If the Hon'ble members mentions anything more precise with regard to the chronological sequence, I will be able to ascertain. I may however say that as mentioned in the answer at present there is no period fixed.

Sri Y. DHARMAPPA.—Has it come to the notice of the Government that all the Advocate-Generals previously employed had a definite term fixed, except the present incumbent in office?

Sri B. VAIKUNTA BALIGA.—May I invite Hon'ble member's attention to Article 165 (3) and it is in accordance with this Article that the present appointment has been made. Neither the age nor the period of appointment is fixed under the said Article.

Sri Y. DHARMAPPA.—When were Government Pleaders recruited?

Sri B. VAIKUNTA BALIGA.—They were appointed very recently. If the member wants the exact date, I can furnish it after ascertaining it.

Sri Y. DHARMAPPA.—What is the basis on which these Government Pleaders were appointed?

Sri B. VAIKUNTA BALIGA.—The need of the Government to have their services, their competency and ability to work efficiently.

Sri Y. DHARMAPPA.—What is the method adopted to measure the ability or the qualification of the persons recruited to the posts? Was any information called for either from the District Judge or from the High Court on the merits and demerits and qualifications of the officers appointed?

Sri B. VAIKUNTA BALIGA.—There is no statutory or mandatory provision to determine the particular requirements of a post. The Government Pleaders have to attend to the litigation involving Government and every attempt has been made to see that competent men from among those that desire to serve the Government are selected and at times the appointments are made in consultation with the Presiding officers of the courts or the High Court where they have to function.

Sri Y. DHARMAPPA.—What is the precise nature of material available with the Government to determine the competency of the persons who have now been recruited?

Sri B. VAIKUNTA BALIGA.—Their standing at the Bar and the manner in which they have handled cases and got candisuccess for the clients.

Sri Y. DHARMAPPA.—Was any statistics with respect to the number of cases they handled, either civil or criminal or in High Court work, collected? Was any material available for determining preferential choice given to the dates recruited?

Sri B. VAIKUNTA BALIGA.—It is rather difficult to find out the exact number of cases they have handled. At time they appear in their own cases and at times they take up a case on behalf of others. But the length of an individual's experience at the Bar, the tone which he maintains and the traditions he has built in the course of the profession are things which are usually well-known.

Sri Y. DHARMAPPA.—May I know whether in order to ascertain the tone of the advocacy he has maintained at the Bar and also the length of the period he has worked, any information was called for from the Presiding Officers of the courts and the High Court?

Sri B. VAIKUNTA BALIGA.—It is not necessary to get the information in every case?

Sri M. P. L. SASTRY.—It has been stated that no age-limit is prescribed. Does it mean that persons beyond the age prescribed for judges could be appointed?

Sri B. VAIKUNTA BALIGA.—The Hon'ble member is aware of the Articles of the Constitution. So far as the High Court Judges are concerned, the Constitution itself provides 60 years as the age limit. But in regard to the Advocate General I have pointed out the relevant Article of the Constitution. There is no age-limit prescribed for the Advocate General. But this question has been the subject matter of a decision in the Nagpur High Court where it has been held that there is no age-bar so far as the Advocate General is concerned.

Mr. CHAIRMAN.—We will take up Short Notice Question No. 6.

SHORT NOTICE QUESTION AND ANSWER

Transfer of D. L. B. Road of North Karnatak to P.W.D.

Q.—6. **Sri G. B. PATIL** (Legislative Assembly Constituency).—

Will the Government be pleased to state:—

(*a*) whether it is a fact that the orders have been passed recently for taking back the roads by the P.W.D. from District Local Boards of North Karnatak, which were transferred by the erstwhile Bombay Government;

(*b*) if so, the policy followed regarding the maintenance and continuance of such roads;

(*c*) whether it is not a fact that they are taking retrograde step?

A.—**Sri H. K. VEERANNA GOWDH** (Minister for Public Works).—

(*a*) Yes.

(*b*) The question is not clear. These roads would be treated in the same manner in respect of maintenance and original works as other P. W. D. roads.

(*c*) No.

Sri G. B. PATIL.—What are the reasons for taking back these roads?

Sri H. K. VEERANNA GOWDH.—These roads were given to the District Boards for maintenance as an experimental measure. It was stated in the Government Order when transferring these roads that after a period of 3 years the position would be reviewed. After 3 years, it was found that the roads were not maintained properly considering the amount given to them for maintenance. Therefore the Department was of the opinion that these roads could have been maintained more efficiently with the amount made available, if the Department itself had looked after it. Thefore Government were advised to take back these roads under them.

ಶ್ರೀ ಪಿ. ಎಂ. ನಾಡಗೌಡ.—ಡಿಸ್ಟ್ರಿಕ್ಟ್ ಲೋಕಲ್ ಬೋರ್ಡಿನವರು ಒಂದು ಮೈಲಿ ರಸ್ತೆಗೆ ಎಷ್ಟು ರೊಕ್ಕವನ್ನು ಕೊಡುತ್ತಾರೋ ಅದೇ ರೀತಿ ಏನಾದರೂ ಪಿ. ಡಬ್ಲ್ಯು. ಡಿ. ಯವರು ರಸ್ತೆಗಳಿಗಾಗಿ ಅಷ್ಟೇ ರೊಕ್ಕವನ್ನು ಕೊಡುತ್ತಾರೆಯೋ ?

ಶ್ರೀ ಎಚ್. ಕೆ. ವೀರಣ್ಣಗೌಡ.—ರೊಕ್ಕದ ವಿಚಾರವಾಗಿ ವಿವರಗಳು ಬಹಳವಾಗಿವೆ. ಎಷ್ಟು ಬೇಕೆಂದರೆ ಅಷ್ಟನ್ನು ಒದಗಿಸುತ್ತೇನೆ.

ಸಭಾಪತಿಯವರು.—ಒಟ್ಟಿಗೆ ಅಲಾಟ್‌ಮೆಂಟ್ ಎಷ್ಟಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಒಂದೊಂದು ಜಿಲ್ಲೆಯಲ್ಲಿ 12, 15, 20 ರಸ್ತೆಗಳಿರುತ್ತವೆ. ಒಂದೊಂದು ರಸ್ತೆಗೆ ಬೇರೆ ಬೇರೆ ಅಲಾಟ್‌ಮೆಂಟ್ ಇದೆ. ಈಗ ಆ ವಿವರಗಳನ್ನೆಲ್ಲಾ ಹೇಳಬೇಕಾದರೆ ಹೆಚ್ಚು ಕಾಲ ಬೇಕಾಗುತ್ತದೆ.

ಶ್ರೀ ಪಿ. ಎಂ. ನಾಡಗೌಡ.—ಒಂದು ಮೈಲಿ ರಸ್ತೆಗೆ ಮೇಂಟನೆನ್ಸಿಗಾಗಿ ಪಿ. ಡಬ್ಲ್ಯು. ಡಿ. ಯವರು ಹೆಚ್ಚು ಕೊಡುವುದರಿಂದ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾವು ಒಂದು ರಸ್ತೆಗೆ ಇಷ್ಟು ಮೇಂಟನೆನ್ಸ್ ಚಾರ್ಜಸ್ ಎಂಬುದಾಗಿ ಕೊಡುತ್ತೇವೆ. ಸುಮಾರು ಮೂರು ವರ್ಷಗಳಿಂದಲೂ ಆ ರಸ್ತೆಗಳನ್ನು ಡಿಸ್ಟ್ರಿಕ್ಟ್ ಲೋಕಲ್ ಬೋರ್ಡಿನವರು ಸರಿಯಾಗಿಟ್ಟುಕೊಳ್ಳಲಿಲ್ಲ. ಆದ್ದರಿಂದ ಅದೇ ಹಣವನ್ನು ಸಂಬಂಧಪಟ್ಟ ಇಲಾಖೆಯವರೇ ತೆಗೆದುಕೊಂಡು ಕೆಲಸಮಾಡಿದ್ದರೆ ರಸ್ತೆ ರಿಪೇರಿ ಸಾಧ್ಯವಾಗುತ್ತಿತ್ತು ಎಂಬ ಅಭಿಪ್ರಾಯ ಬಂತು. ಆ ಅಭಿಪ್ರಾಯದಂತೆ ಸರ್ಕಾರದವರ ಆರ್ಡರ್ ಸಹ ಆಗಿತ್ತು. ಈ ರೀತಿ ಮೂರು ವರ್ಷಗಳಿಂದಲೂ ಈ ಸಮಸ್ಯೆಯನ್ನು ವಿಮರ್ಶೆಮಾಡಿದಮೇಲೆ ಇದನ್ನು ಇಲಾಖೆಯವರೇ ವಾಪಸ್ಸು ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ.

ಶ್ರೀ ಪಿ. ಎಂ. ನಾಡಗೌಡ.—ಇಂತಹ ರಸ್ತೆಗಳನ್ನು ಎಷ್ಟು ಮೈಲಿ ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ತೆಗೆದುಕೊಂಡಿಲ್ಲ. ಒಂದೊಂದು ತಾಲ್ಲೂಕಿಗೆ ಬೇರೆ ಬೇರೆ ಮೈಲೇಜ್ ಇದೆ. ಈಗ ಬೆಳಗಾಮಿನಲ್ಲಿ 109 ಮೈಲಿ, ಧಾರವಾಡದಲ್ಲಿ 230 ಮೈಲಿ, ಬಿಜಾಪುರದಲ್ಲಿ 251 ಮೈಲಿ ಹೀಗೆ ಬೇರೆ ಬೇರೆ ಇದೆ.

ಶ್ರೀ ನಾರಾಯಣಪ್ಪ ವೆಂಕಯ್ಯ.—ಗುಲ್ಬರ್ಗ, ರಾಯಚೂರ್ ಡಿಸ್ಟ್ರಿಕ್ಟುಗಳಲ್ಲಿ ಎಷ್ಟು ಮೈಲಿ ರಸ್ತೆಗಳು ಬರುತ್ತವೆ ?

ಶ್ರೀ ಎಚ್. ಕೆ. ವೀರಣ್ಣ ಗೌಡ.—ಅದು ಈ ಮುಖ್ಯ ಪ್ರಶ್ನೆಗೆ ಸಂಬಂಧಿಸುವುದಿಲ್ಲ.

Mr. CHAIRMAN.—That does not arise. ತಾವು ಅದಕ್ಕೆ ಒಂದು ಪ್ರಶ್ನೆಯ ರೂಪವಾಗಿ ಮೊದಲೇ ನೋಟೀಸ್ ಕೊಟ್ಟರೆ, ಅದಕ್ಕೆ ಜವಾಬು ಕಳಿಸುತ್ತಾರೆ.

Sri M. P. L. SASTRY.—Sir, there are two short-notice questions tabled by me.

Mr. CHAIRMAN.—The Home Minister is not here.

Sri M. P. L. SASTRY.—He comes to the other House, but he does not come here.

Mr. CHAIRMAN.—We will ask the Home Minister to be present here tomorrow. We shall take them up then.

PAPERS LAID ON THE TABLE.

SECRETARY.—The following papers are laid on the Table of the House :

(1) The Mysore Court Fees and Suits Valuation Bill, 1957.

(2) The Mysore Contingency Fund (Amendment) Bill, 1958.

(3) The Madras District Boards (Mysore Amendment) Bill, 1958.

(4) The Mysore Forest Laws (Amendment) Bill, 1958.

(5) The Mysore Tenancy Laws (Amendment) Bill, 1958.

REPORT OF THE MYSORE TENANCY AGRICULTURAL LAND LAWS COMMITTEE.

(*Debate continued*)

Mr. CHAIRMAN.—Before taking up further debate on the motion that the Report of the Mysore Tenancy Agricultural Land Laws Committee be taken into consideration, I would request the Hon'ble Members to kindly take minimum time possible so that we may close the debate on this consideration motion. In this connection I would like to submit that it is the duty of the Chair to regulate the debate and see that it is conducted impartially. I am very well aware of the fact that the Chair takes no part in the debate itself and does not seek to influence the decision of the House in any way. In order to conduct the debate regularly and impartially, the Chair may have to invite the attention of the Hon'ble Members to relevancy and to points at issue and correct any facts and figures if not correctly stated or quoted. In order to minimise the time, the Chair may have to draw the attention of the Members to points which have been left out or to points which are not relevant to the issues under debate. It has been reported in a paper that the Chair intervened in the debate when the Chair did not do so and I therefore request the Press to report fully so as to explain the context in which certain remarks might have been made by the Chair. The Chair however assures the House that it was never its intention to intervene in the debate much less to influence the decision that is being taken by this Hon'ble House. If by any chance inadvertently I should have made any remark, I hope the Hon'ble House will excuse me. With the best of intentions, to conduct the debate in an impartial way, I might have made certain remarks. Therefore, I request the Hon'ble Members to kindly co-operate with me so that I may give opportunities to every Hon'ble Member and close the debate this evening. If it is necessary, we may even sit till 7 o'clock and close the debate.

Sri M. P. L. SASTRY (Teachers' Constituency).—Generally speaking, the Chair will have the best co-operation in conducting the affairs of the House as has been put by you honestly, wisely and impartially.

Mr. CHAIRMAN.—Now Sri Kanthappa Setty will continue the debate on the motion.

†ಶ್ರೀ ಕೆ. ಕಾಂತಪ್ಪಶೆಟ್ಟಿ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಜತ್ತಿ ಸಮಿತಿಯು ರಚನೆಯ ಸಂದರ್ಭದಲ್ಲಿ ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಿದೆ. ಅದು ಏನೆಂದರೆ, ಭೂ ಶಾಸನವನ್ನು ರಾಜ್ಯದ ಪ್ರ ಪ್ರದೇಶಕ್ಕೂ ಒಂದೇ ರೀತಿಯಲ್ಲಿ ತರುವುದು ವ್ಯವಹಾರ್ಯ ಆಗಲಾರದು ಎಂದು. ಏಕೆಂದರೆ ಪ್ರತಿ ದೇಶದ ಸ್ಥಿತಿಗತಿಗಳು ಭಿನ್ನ ಭಿನ್ನವಾಗಿವೆ. ಸ್ವಲ್ಪ ಕರಾವಳಿ ಪ್ರದೇಶದಲ್ಲಿ ಜನಸಂಖ್ಯೆ ಬಹಳ ಇದೆ. ಪ್ರಾಯಶಃ ಚದುರ ಮೈಲಿಗೆ 800ರಷ್ಟು ಇರಬಹುದು. ಬೊಂಬಾಯಿ ಮತ್ತು ಹೈದ್ರಾಬಾದಿನಿಂದ ಮೈಸೂರಿಗೆ ಸೇರಿದ ಪ್ರದೇಶಗಳಲ್ಲಿ ಜನಸಂಖ್ಯೆ ಕಡಮೆಯಿದೆ. ಅದೇ ರೀತಿಯಲ್ಲಿ ಒಂದು ಜೋಡೆತ್ತಿಗೆ ಉಳುವುದಕ್ಕೆ ಬೇಕಾದ ಪ್ರದೇಶದ ಮಿತಿಯನ್ನು ತೆಗೆದುಕೊಂಡರೆ ಉತ್ತರ ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ಮೂರು ಎಕರೆ ಅಥವಾ ಎರಡು ಎಕರೆ ಇರುವಾಗ ಮೈಸೂರಿನ ನಾಲ್ಕು-ಎಂಟು ಎಕರೆ ಮತ್ತು ಹೈದ್ರಾಬಾದ್ ಮತ್ತು ಉತ್ತರ ಧಾರಾವಾಡ, ಬಿಜಾಪುರದ ಕಡೆ 20 ರಿಂದ 30 ಎಕರೆವರೆಗೆ ಇದೆ. ಪರಂಪರಾಗತವಾಗಿ ಭೂಭಾಗದ ಸ್ಥಿತಿಯು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಾಗಿದೆ. ಆದ್ದರಿಂದ ಎಲ್ಲಾ ಭಾಗಗಳಿಗೂ ಒಂದೇ ರೀತಿಯ ಕಾನೂನನ್ನು ತರಲು ಸಾಧ್ಯವಿದೆ; ಅದು ವ್ಯವಹಾರ್ಯ ಎಂಬುದು ನನಗೆ ಇನ್ನೂ ಸಂದೇಹಕರವಾಗಿದೆ. ಆದ್ದರಿಂದ ಕಾನೂನನ್ನು ತರುವಾಗ ನಮ್ಮ ಜಿಲ್ಲೆಯಮಟ್ಟಿಗೆ ಹೇಳುವುದಾದರೆ ಪ್ರತ್ಯೇಕವಾದ ಒಂದು ಸೆಕ್ಷನನ್ನು ಸೇರಿಸಿ ಆ ಜಿಲ್ಲೆಯ ಪರಿಸ್ಥಿತಿಗೆ ಬೇಕಾಗುವ ತಿದ್ದುಪಡಿಗಳನ್ನು ಸೇರಿಸುವುದು ಅತ್ಯಗತ್ಯವಿದೆ. ನಮ್ಮ ಜಿಲ್ಲೆ ಉತ್ತರ ಕನ್ನಡ ಮತ್ತು ಮಲೆನಾಡು. ಈ ಪ್ರದೇಶಗಳಲ್ಲಿ ಒಂದೇ ಪ್ರ

---

† Indicates that the remarks or speeches have not been revised by the member concerned.

ಸ್ಥಿತಿ ಇರುವುದರಿಂದ ಆ ಭಾಗಗಳ ಆವಶ್ಯಕತೆ ಕುರಿತು ಪ್ರತ್ಯೇಕ ಗಮನ ಕೊಡುವುದು ಅತ್ಯಗತ್ಯವೆಂದು ಹೇಳುತ್ತೇನೆ. ಏಕೆಂದರೆ ಜತ್ತಿ ಸಮಿತಿಯವರು ಆ ಭಾಗದ ಪರಿಸ್ಥಿತಿಯನ್ನು ಕುರಿತು, ಅಲ್ಲಿಯ ಭೂಮಿಗಳ ಬಗ್ಗೆ ಹೆಚ್ಚಿನ ಪರಿಶೀಲನೆ ಮಾಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ನಾನು ಇಡಿಯ ರಾಜ್ಯವನ್ನು ಕುರಿತು ಮಾತನಾಡುವಾಗ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆ ಪ್ರದೇಶಗಳ ಕಡೆ ಸರ್ಕಾರದವರು ಪ್ರತ್ಯೇಕ ಗಮನವನ್ನು ಸೆಳೆಯಬೇಕಾಗಿದೆ. ಇಂತಹ ಶಾಸನವನ್ನು ಮಾಡುವುದು ಭೂ ಸಂಬಂಧವಾದ, ಭೂ ವ್ಯವಸ್ಥೆಗೆ ಸಂಬಂಧಪಟ್ಟ ಒಂದು ಕಾನೂನನ್ನು ಮಾಡುವುದು ಫ್ಯಾಕ್ಟರಿ ಆಕ್ಟುಗಳನ್ನು ಮಾಡಿದಷ್ಟು ಸುಲಭವಲ್ಲ. ಇದು ಬಹಳ ಸಿಕ್ಕಿನ ಸಮಸ್ಯೆ ಮತ್ತು ಬಹಳ ತಿಕ್ಕಿನ ಪ್ರಶ್ನೆ. ವಿಶೇಷವಾಗಿ ಈ ಕಾಲದಲ್ಲಿ ಮತ್ತು ದೇಶದ ಈಗಿನ ಪರಿಸ್ಥಿತಿಯಲ್ಲಿ ಭೂಮಿಯ ವಿಷಯದಲ್ಲಿ ಸಾಮಾಜಿಕ ನ್ಯಾಯವನ್ನು ಉಂಟುಮಾಡುವುದು. ಜನಸಾಮಾನ್ಯರಲ್ಲಿ ಒಂದು ವಿಧವಾದ ತೃಪ್ತಿಯನ್ನು ಉಂಟುಮಾಡುವುದು ಅವಶ್ಯವಾಗಿದೆ. ಅದಕ್ಕಿಂತಲೂ ಹೆಚ್ಚಾಗಿ ಭೂಮಿಯಲ್ಲಿ ಹೆಚ್ಚಿನ ಉತ್ಪತ್ತಿಯನ್ನು ಮಾಡುವ ವ್ಯವಸ್ಥೆ ಮಾಡುವುದು ಮತ್ತು ಆ ದೃಷ್ಟಿಯಿಂದ ಭೂಮಿಯನ್ನು ಹಂಚುವುದು ಬಹಳ ಅತ್ಯಗತ್ಯವಾಗಿದೆ. ಈ ಕಾಲದಲ್ಲಿ ಭೂಮಿಯನ್ನು ತುಂಡುತುಂಡಾಗಿ ಹಂಚದಂತೆ, ಫ್ರಾಗ್‌ಮೆಂಟೇಷನ್, ಆಗದಂತೆ ಹೆಚ್ಚು ಗಮನ ಕೊಡುವುದು ಅತ್ಯಗತ್ಯ. ಏಕೆಂದರೆ ಭೂಮಿಯು ಕೇವಲ ತುಂಡು ತುಂಡಾಗಿ ಹೋದರೆ ಅವು ಎಕನಾಮಿಕ್ ಹೋಲ್ಡಿಂಗ್ಸ್ ಆಗುವುದಿಲ್ಲ. ಅವುಗಳಿಂದ ಉತ್ಪತ್ತಿ ಹೆಚ್ಚುವ ಹಾಗೆ ಮಾಡುವುದಕ್ಕೆ ಆಗುವುದಿಲ್ಲ ಎಂಬುದು ಎಲ್ಲರಿಗೂ ತಿಳಿದವಿಷಯ. ಕಾಂಗ್ರೆಸ್ಸಿನ ಮೂಲಭೂತ ತತ್ತ್ವಗಳ ದೃಷ್ಟಿಯಿಂದ ಜತ್ತಿ ಸಮಿತಿಯವರು ಮಾಡಿದ ಸರ್ವೇ ಸಾಧಾರಣವಾದ ಸೂಚನೆಗಳು ಇವು. ಯಾವುದಾದರೂ ಒಂದು ವರ್ಗವನ್ನು ದ್ವೇಷಪೂರ್ವಕವಾಗಿ ನಿರ್ಮೂಲಮಾಡಿ ಇನ್ನೊಂದು ವರ್ಗದ ಹಿತವನ್ನು ಸಾಧಿಸುವುದು ಕಾಂಗ್ರೆಸ್ಸಿನ ತತ್ತ್ವ ಎಂದಿಗೂಯಿಲ್ಲ. ಶ್ರೀ ರಾಘವೇಂದ್ರಚಾರಿಯವರು ಜತ್ತಿ ಸಮಿತಿಯ ವರದಿಯಿಂದ ಬಹಳ ಕಳವಳ ಉಂಟಾಗಿದೆ ಎಂದೂ ನಮ್ಮ ತಳಮಳ ಅವರ ಸಂತೋಷವೆಂದು ಹೇಳಿದರು. ಆದರೆ ಅದು ನಮ್ಮ ತತ್ತ್ವವಲ್ಲ. ಸಮಾಜದ ಯಾವ ಒಂದು ಅಂಗದಲ್ಲೂ ಯಾವ ರೀತಿಯ ಒಂದು ವಿಘ್ನವನ್ನು ಉಂಟುಮಾಡುವುದು, ಕಳವಳ ಉಂಟುಮಾಡುವುದು ಎಂದಿಗೂ ಕಾಂಗ್ರೆಸ್ಸಿನ ತತ್ತ್ವವಲ್ಲ. ಕಾಂಗ್ರೆಸ್ಸಿನ ತತ್ತ್ವ ಎಲ್ಲಾ ಅಂಗಗಳಿಗೂ ಸರಿಯಾದ ನ್ಯಾಯವನ್ನುಂಟುಮಾಡುವುದು, ನ್ಯಾಯದೊರೆಯುವಂತೆ ವ್ಯವಸ್ಥೆಮಾಡುವುದು. ಇದನ್ನು ಏಕೆ ಒತ್ತಿ ಹೇಳುತ್ತಿದ್ದೇನೆಂದರೆ ನಮ್ಮ ಜಿಲ್ಲೆಯಲ್ಲಿ ಜತ್ತಿ ಸಮಿತಿಯ ವರದಿಯಿಂದ ಅಷ್ಟೊಂದು ದೊಡ್ಡ ತಳಮಳ ಎದ್ದಿದೆ. ಮಾನ್ಯ ಮಂತ್ರಿಗಳಾದ ಶ್ರೀ ವೈಕುಂಠ ಬಾಳಿಗರವರಿಗೆ ಈ ವಿಷಯ ತಿಳಿದಿದೆ. ಮಂಗಳೂರಿನವರು ಬಹಳ ಮಂದಿ ಇಲ್ಲಿಗೆ ಬಂದು ನೀವು ಈ ರೀತಿ ಭಾಷಣ ಕೊಡಬೇಕು, ಈ ರೀತಿ ಭಾಷಣ ಕೊಡಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಒಂದು ಸಮ್ಮೇಳನ ಕೂಡಾ ನಡೆದಿದೆ. ದಕ್ಷಿಣ ಹಿಂದೂ ಸ್ಥಾನದ ರಾಜ್ಯಗಳ ಭೂಮಾಲಿಕರು ಮತ್ತು ಕೃಷಿಗಾರರು ಸೇರಿಕೊಂಡು ಒಂದು ಪರಿಷತ್ತನ್ನು ನಡೆಸಿದ್ದಾರೆ. ಒಂದು ದೊಡ್ಡ ಚಳವಳಿಯನ್ನೇ ನಡೆಸಿದ್ದಾರೆ. ಎಲ್ಲಾ ಕಡೆಯಲ್ಲೂ ಕಾಂಗ್ರೆಸ್ಸಿನಲ್ಲಿ ದುಡಿದಂಥ ಮತ್ತು ದೇಶಕ್ಕಾಗಿ ತ್ಯಾಗಮಾಡಿದಂಥ ಜನರು ಇದರಲ್ಲಿ ಸೇರಿರುತ್ತಾರೆ. ಅವರು ಕೊಡುವ ಅಭಿಪ್ರಾಯಗಳನ್ನೆಲ್ಲಾ ನಾವು ಒಪ್ಪಿಕೊಳ್ಳುವುದಿಲ್ಲ. ಅದು ಸರಿಯೆಂದು ಹೇಳುವುದಿಲ್ಲ. ನಾನು ಅದರಲ್ಲಿ ಅಪ್ರತ್ಯಕ್ಷವಾಗಿ ಭಾಗವಹಿಸಿದುದಕ್ಕೆ ನಿಜವಾಗಿ ವಿಷಾದಪಡುತ್ತೇನೆ. ಏಕೆಂದರೆ ನಾನು ನೋಡಿದ ಪ್ರಕಾರ ಕಾಂಗ್ರೆಸ್ಸನ್ನು ದ್ವೇಷಿಸುವುದಕ್ಕೆ ಕಾಂಗ್ರೆಸ್ಸನ್ನು ಕುರಿತು ಒಂದು ರೀತಿ ದ್ವೇಷಾಸೂಯೆ ಪ್ರಚಾರ ಮಾಡುವುದಕ್ಕೆ ಅದನ್ನು ನಿಲ್ದಾಣವನ್ನಾಗಿ ಉಪಯೋಗಿಸಿದ್ದಾರೆ ಎಂಬುದು ಬಹಳ ವಿಷಾದಕರ.

ನಿಜವಾಗಿಯೂ ಭೂಮಾಲೀಕರ ಹಿತರಕ್ಷಣೆಗೆ ಕಾಂಗ್ರೆಸ್ಸು ಯಾವಾಗಲೂ ತಯಾರಾಗಿದೆ. ಅವರು ಉತ್ಪನ್ನ ಹೆಚ್ಚಿಸುವುದಾದರೆ ಮತ್ತು ಗೇಣೀದಾರರನ್ನು ಜಮೀನಿನಿಂದ ಯಾವ ರೀತಿಯಿಂದಲೂ ಬಿಡಿಸುವುದಿಲ್ಲವೆಂದು ಆಗುವುದಾದರೆ, ಅದರಿಂದ ದೇಶದ ಹಿತ ಮತ್ತು ಆರ್ಥಿಕಸ್ಥಿತಿ ಉತ್ತಮ ಆಗುವುದಾದರೆ, ಅವರನ್ನು ನಿರ್ಮೂಲಮಾಡಲೇಬೇಕೆಂದು ಹೇಳುವುದು ಯಾವ ಧರ್ಮವೂ ಅಲ್ಲ. ಪರಂಪರೆಯಾಗಿ ಬಂದಿರುವ ಹಕ್ಕುಗಳನ್ನು ಕೀಳುವುದಕ್ಕೆ ಸಾಧ್ಯವಿಲ್ಲ. ಇದು ಮೂಲಭೂತವಾದ ಹಕ್ಕು. ನಮ್ಮ ಕಾಂಗ್ರೆಸ್ಸು ಅವರನ್ನು ನಿರ್ಮೂಲಮಾಡಲಿಕ್ಕೆ ಹೊರಟಿಲ್ಲ. “ಓಬೀರಾಯನ ಕಾಲದಿಂದ ಬಂದ ಭೂಮಾಲೀಕರ ಹಕ್ಕುಗಳನ್ನು ನಿರ್ಮೂಲ ಮಾಡಲಿಕ್ಕೆ ಹೊರಟಿದ್ದೇವೆಂದು ಹೇಳಿದರೆ ಅದು ಸರಿಯಾದ ಮಾರ್ಗವಾಗುವುದಿಲ್ಲ”. ಅದು ಕಾಂಗ್ರೆಸ್ಸನ್ನು ಕುರಿತು ಒಂದು ಅಪಪ್ರಚಾರ ಮಾಡಿದಂತಾಗುತ್ತದೆ. ಅಲ್ಲದೆ ಅದು ಕಾಂಗ್ರೆಸ್ಸಿನ ಮುಖ್ಯವಾದ ಕಾರ್ಯಕ್ರಮಕ್ಕನುಗುಣವಾಗಿ ಇರುವುದಿಲ್ಲ. ಇದು ಹೇಗಾದರೂ ಇರಲಿ, ಸರ್ವೇ ಸಾಮಾನ್ಯವಾಗಿ ಈ ಜತ್ತಿ ಸಮಿತಿಯ ಸೂಚನೆಗಳನ್ನು ಸ್ವಾಗತಿಸಬೇಕಾಗಿದೆ. ಬೊಂಬಾಯಿನಲ್ಲಿ ಇದು ಮೊದಲೇ ಜಾರಿಯಲ್ಲಿತ್ತು. ಹೈದರಾಬಾದಿನಲ್ಲಿಯೂ ಯಾವ ರೀತಿಯಾದ ಅತೃಪ್ತಿಯೂ ಇಲ್ಲದೆ ಜಾರಿಯಲ್ಲಿತ್ತು. ಮೈಸೂರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಭಾಗಗಳಲ್ಲಿ ಇದು ಒಂದು ರೀತಿಯ ತಳಮಳವನ್ನು ಉಂಟುಮಾಡಿದೆ. ಜತ್ತಿ ಸಮಿತಿಯನ್ನು ನೇಮಕ ಮಾಡಿದಾಗಲೇ ಈ ವಿಷಯಗಳನೆಲ್ಲ ಸರಿಯಾಗಿ ಆಲೋಚನೆ ಮಾಡಿದ್ದರೆ ಚೆನ್ನಾಗಿತ್ತು. ಮೈಸೂರು ಮತ್ತು ದಕ್ಷಿಣ ಜಿಲ್ಲೆಯ ಪರಿಸ್ಥಿತಿಯನ್ನು ವರದಿಯಲ್ಲಿ ಪ್ರಸ್ತಾಪಿಸಿರುವುದು ಅಕಾಲಿಕ ಎಂದು ಹೇಳಿದರೂ ತಪ್ಪಾಗಲಾರದು. ಈ ಸಮಿತಿಯು ಬೊಂಬಾಯಿ ಮತ್ತು ಹೈದರಾಬಾದು ಈ ಕಡೆಗಳಲ್ಲಿ ಸುತ್ತಿ ಅಲ್ಲಿಯ ಪರಿಸ್ಥಿತಿಗಳನ್ನು ತಿಳಿದುಕೊಂಡು ಬಂದಿದೆ. ಹಾಗೆಯೇ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೂ ಹೋಗಿದೆ. ಈ ಸಂದರ್ಭದಲ್ಲಿ ಆಯಾ ಸ್ಥಳಗಳಿಗೆ ಹೋದಾಗ ಒಕ್ಕಲು ಸರಿಯಾಗಿ ಆಗುತ್ತಿದೆಯೇ ಎಂಬುದನ್ನೆಲ್ಲ ಸ್ವಲ್ಪ ಪರಿಶೀಲನೆಮಾಡಿ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನಮ್ಮ ಅಭಿಪ್ರಾಯವಾಗಿದೆ. ಈಗ ಈ ಜತ್ತಿ ಸಮಿತಿಯ ವರದಿಯು ಎಲ್ಲ ಕಡೆಗಳಿಗೂ ಅನ್ವಯಿಸುವ ರೀತಿಯಲ್ಲಿ ಬಂದಿರುವುದರಿಂದ ಇನ್ನು ವಿಳಂಬ ಮಾಡದೆ ಒಂದು ತೃಪ್ತಿಕರವಾದ ಭೂ ಶಾಸನವನ್ನು ತರುವುದು ಅತ್ಯಗತ್ಯವಾಗಿದೆ.

ನಾನು ಒಂದು ಪತ್ರಿಕೆಯಲ್ಲಿ ಈ ವಿಚಾರವಾಗಿ ಬರೆದಿರುವುದನ್ನು ಓದಿದ್ದೆ. ಆ ಪತ್ರಿಕೆಯಲ್ಲಿ, ಬೊಂಬಾಯಿನ ಒಕ್ಕಲು ಮಸೂದೆಯು ಅಲ್ಲಿ ಉತ್ಪನ್ನವನ್ನು ಹೆಚ್ಚಿಸಲು ಕಾರಣವಾಗಿಲ್ಲ ಮತ್ತು ಹಿಡುವಳಿಯ ಮಿತಿಯನ್ನು ಸರಿಯಾಗಿ ಕೊಟ್ಟಿಲ್ಲ, ಹಿಂದೆ ಕಂಟ್ರೋಲು

(ಶ್ರೀ ಕೆ. ಕಾಂತಪ್ಪಶೆಟ್ಟಿ).

ಹಾಕಿದ್ದಾಗ ಹೇಗೆ ಆಹಾರವಸ್ತುಗಳನ್ನು ಹೆಚ್ಚಿಗೆ ಬೆಳೆಯಲಿಲ್ಲವೋ, ಅದೇ ರೀತಿಯಲ್ಲಿ ಹಿಡುವಳಿಗೆ ಒಂದು ಮಿತಿ ಗೊತ್ತುಮಾಡಿದ್ದರಿಂದ, ಹೆಚ್ಚಿಗೆ ಅನುಕೂಲವಿಲ್ಲದ ಭೂಮಿಯನ್ನು ಸಾಗುವಳಿ ಮಾಡಲಿಲ್ಲ ಎಂದು ಹೇಳಿದೆ. ಹಿಡುವಳಿಯನ್ನು ತುಂಡು ತುಂಡಾಗಿ ಮಾಡಬಾರದು, ಭೂಮಿಯಲ್ಲಿ ಕೆಲಸಮಾಡತಕ್ಕವರಿಗೆ ಭೂಮಿ ಹೋಗಬೇಕು, ಎಲ್ಲ ಕೈಗಾರಿಕೆಗಳೂ ರಾಷ್ಟ್ರೀಕರಣವಾಗಬೇಕು, ಇವೆಲ್ಲ ಮೂಲಭೂತವಾದ ತತ್ವಗಳು. ಒಮ್ಮೆಲೇ ಇವನ್ನೆಲ್ಲ ಜಾರಿಗೆ ತರಲಿಕ್ಕೆ ಸಾಧ್ಯವಿಲ್ಲ. ಕ್ರಮ ಕ್ರಮವಾಗಿ ಇಂತಹ ವಿಷಯಗಳಲ್ಲಿ ನಾವು ಮುಂದೆ ಹೋಗಬೇಕು. ಈ ಭೂ ಒಕ್ಕಲುತನದ ಶಾಸನವನ್ನು ತರುವ ವಿಷಯದಲ್ಲಿ ಆಕ್ಷೇಪಣೆಯಿಲ್ಲ. ನಾನು ಹೀಗೆ ಮಾತನಾಡುವಾಗ ಭೂ ಮಾಲೀಕರ ಪರವಾಗಿ ಮಾತನಾಡುತ್ತಿದ್ದೇನೆಂದು ಯಾರೂ ಭಾವಿಸಲಾರರು ಎಂದು ತಿಳಿದಿದ್ದೇನೆ. ನನಗೆ ಈ ಒಕ್ಕಲುತನದ ಮಸೂದೆಯ ವಿಚಾರವಾಗಿ ಮೈಸೂರು, ಹೈದರಾಬಾದು ಮತ್ತು ಬೊಂಬಾಯಿ ಭಾಗಗಳ ಹೆಚ್ಚಿನ ಮಾಹಿತಿ ಇಲ್ಲ. ನಮ್ಮ ಜಿಲ್ಲೆಯ ವಿಚಾರವಾಗಿ ಮಾತ್ರ ಇಲ್ಲಿ ಹೇಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಸರ್ವೇಸಾಧಾರಣವಾಗಿ ಸಾಗುವಳಿ ಮಾಡುವವರ ಸಂಖ್ಯೆ ಶೇಕಡ 36–37ರಷ್ಟಿದೆ. ಸ್ವಂತವಾಗಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆಯೇ ಹೆಚ್ಚಾಗಿದೆ. ಅಲ್ಲಿ ದೊಡ್ಡ ದೊಡ್ಡ ಒಕ್ಕಲುಮಾಡುವ ಭೂಮಿಗಳಿಲ್ಲ. ವಿಶಾಲವಾದ ಪ್ರದೇಶ ಎಂದರೆ ಮೂರುಎಕರೆ, ಹೆಚ್ಚು ಎಂದರೆ ಐದು ಎಕರೆಯಷ್ಟು ಭೂಮಿಯನ್ನು ಸಾಗುಮಾಡುತ್ತಿದ್ದಾರೆ. ಹೋಂ ಫಾರಮ್ಮಿನ ರೀತಿಯಲ್ಲಿ ಎಲ್ಲರೂ ಸಹಕರಿಸಿ ಸಾಗುಮಾಡುತ್ತಾರೆ ಈ ಪದ್ಧತಿಯಂತೆ ಸಾಗುವಳಿ ಮಾಡುವ ಕೆಲಸವು ನಮ್ಮ ಜಿಲ್ಲೆಯಲ್ಲಿ ಚೆನ್ನಾಗಿ ನಡೆಯುತ್ತಿದೆ. ಹತ್ತಿಪ್ಪತ್ತು ಎಕರೆಗಳಷ್ಟು ಭೂಮಿಗೆ ಒಬ್ಬ ದಣಿ ಇರುತ್ತಾನೆ, ಇಂತಹ ಭೂಮಿಯನ್ನು ಹೋಂ ಫಾರಂ ಪದ್ಧತಿಯಲ್ಲಿ ಸಾಗುಮಾಡಿಕೊಂಡು ಆ ದಣಿಗೆ ಅನುಕೂಲವಾದ ಗೇಣಿಯನ್ನು ಕೊಟ್ಟುಕೊಂಡುಬರುವ ವ್ಯವಸ್ಥೆ ನಮ್ಮ ಜಿಲ್ಲೆಯಲ್ಲಿ ಹೆಚ್ಚಾಗಿದೆ. ಅನುಕೂಲವಾದ ಗೇಣಿ ಎಷ್ಟು ಎನ್ನುವುದನ್ನು ನಮ್ಮ ಜಿಲ್ಲೆಯ ಮಟ್ಟಿಗೆ ಹೇಳಲು ಈ ಒಕ್ಕಲುತನದ ಕಾಯಿದೆ ನಮ್ಮಲ್ಲಿ ಜಾರಿಗೆ ಬಂದಿಲ್ಲ. ಮದರಾಸು ಸರಕಾರದವರೇನೋ ಶೇಕಡ ನಲವತ್ತರಷ್ಟು ಗೇಣಿ ನ್ಯಾಯವಾದುದು ಎಂದು ನಿಶ್ಚಯ ಮಾಡಿದ್ದಾರೆ. ಆದರೆ ಸರ್ವೇ ಸಾಮಾನ್ಯವಾಗಿ ಈ ಜತ್ತಿ ಸಮಿತಿಯಲ್ಲಿ ನಾಲ್ಕನೆಯ ಒಂದು ಭಾಗ ಗೇಣಿ ಇರಬೇಕೆಂದು ಹೇಳಿದ್ದಾರೆ. ಎಲ್ಲ ಕಾಂಗ್ರೆಸ್ಸಿಗರೂ, ಇತರರೂ ನಾಲ್ಕನೆಯ ಒಂದು ಭಾಗ ಮಾಡಿರುವುದು ಸರಿಯಾದುದು ಎಂದು ಹೇಳಿದರು. ಆದರೆ ನಮ್ಮ ಜಿಲ್ಲೆಯಮಟ್ಟಿಗೆ ಹೇಳುವುದಾದರೆ, ನಾಲ್ಕನೆಯ ಒಂದು ಪಾಲು ಎಂದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಇಲ್ಲಿ ಸಾಗುಮಾಡುವವರು ತುಂಡು ತುಂಡಾಗಿರುವ ಸಣ್ಣ ಸಣ್ಣ ಪರಿಮಿತಿಯುಳ್ಳ ಭೂಮಿಯನ್ನು ಸಾಗುಮಾಡುತ್ತಿದ್ದಾರೆ. ಹತ್ತಿಪ್ಪತ್ತು ಎಕರೆಯುಳ್ಳವರಿಗೆ ಇದರಿಂದ ಅಡ್ಡಿಯೇನಿಲ್ಲ. ಆದರೆ ಈ ಭೂಮಿಯನ್ನೇ ನಂಬಿಕೊಂಡಿರುವ ಸಣ್ಣ ಸಣ್ಣ ಹಿಡುವಳಿದಾರರಿಗೆ ಬಹಳ ಕಷ್ಟವಾಗುತ್ತಿದೆ. ಆದುದರಿಂದ, ಕೆಲವು ವರ್ಷಗಳವರೆಗೆ ಎಂದರೆ ಸುಮಾರು ಐದು-ಹತ್ತು ವರ್ಷಗಳವರೆಗೆ ಈ ಗೇಣಿಯ ಪರಿಮಿತಿಯನ್ನು ಮೂರನೆಯ ಒಂದು ಭಾಗ ಗೇಣಿ ಎಂದು ಸೂಚನೆಮಾಡಿ, ಅಮೇಲೆ ನಾಲ್ಕನೆಯ ಒಂದು ಭಾಗ ಎಂದು ಮಾಡಬೇಕೆಂದು ನನ್ನ ಅಭಿಪ್ರಾಯ. ಈ ಅಭಿಪ್ರಾಯಕ್ಕೆ ನಮ್ಮ ಜಿಲ್ಲೆಯಲ್ಲಿ ಬಹುಮಟ್ಟಿಗೆ ಹೆಚ್ಚಿನ ಒಮ್ಮತವಿದೆ.

ಇದಾದಮೇಲೆ ನಮ್ಮ ಕಡೆ ತೆಂಗು ಮತ್ತು ಅಡಕೆ ತೋಟಗಳು ಜಾಸ್ತಿಯಾಗಿರುತ್ತವೆ. ಕರಾವಳಿ ಪ್ರದೇಶವನ್ನು ಬಿಟ್ಟರೆ ಒಳಪ್ರದೇಶದಲ್ಲಿ ಅಡಕೆ ತೋಟಗಳು ಜಾಸ್ತಿ ಇವೆ. ಆದರೆ ಈ ತೋಟಗಳ ವಿಷಯದಲ್ಲಿ ಎಷ್ಟು ವಿಸ್ತೀರ್ಣದ ಭೂಮಿಯಿರಬಹುದೆಂಬ ವಿಚಾರದಲ್ಲಿ ಒಂದು ಮಿತಿಯನ್ನು ಹಾಕುವುದು ಅಷ್ಟು ಅಗತ್ಯವಾಗಿದೆಯೇ ಎಂಬುದು ಒಂದು ಚರ್ಚಾಸ್ಪದವಾದಂಥ ವಿಷಯ. ಅಡಕೆ—ತೆಂಗಿನ ತೋಟಗಳ ವ್ಯವಸಾಯ ಇತರೇ ಟೀ ತೋಟಗಳಂತೆ ಇರುವುದಿಲ್ಲ. ಇವುಗಳ ವ್ಯವಸಾಯ ಬಹಳ ಕಷ್ಟ. ಒಂದು ಎಕರೆಯಲ್ಲಿ ಈ ತೋಟಗಳನ್ನು ಬೆಳೆಸಲು ಐದಾರು ಸಾವಿರ ರೂಪಾಯಿಗಳನ್ನು ಖರ್ಚುಮಾಡಬೇಕಾಗಿರುತ್ತದೆ. ಮೇಲಾಗಿ ಪ್ರತಿ ವರ್ಷವೂ ಈ ತೋಟಗಳ ಆರೈಕೆ ಮತ್ತು ಇವುಗಳಿಗೆ ಗೊಬ್ಬರ–ಗೋಡು ಹಾಕಿಕೊಂಡು ಇವುಗಳ ಮೇಲ್ವಿಚಾರಣೆ ನೋಡಿಕೊಳ್ಳಲು ಪ್ರತಿ ದಿವಸವೂ ಅಲ್ಲಿ ಒಬ್ಬಿಬ್ಬರ ಆವಶ್ಯಕತೆ ಇದ್ದೇ ಇರುತ್ತದೆ. ಹೀಗೆಲ್ಲ ಇರುವುದರಿಂದ ಈ ತೋಟಗಳ ವಿಚಾರದಲ್ಲಿ ಆ ಒಂದು ಹಿಡುವಳಿಯ ಮಿತಿಯನ್ನು ಹಾಕುವುದರಿಂದ ಅಷ್ಟೇನೂ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂದು ನನಗನಿಸುತ್ತದೆ. ಈಗಾಗಲೇ ನಮ್ಮ ಕಡೆಯ ಜನರು ಇಂಥ ಒಂದು ಜತ್ತಿ ಸಮಿತಿಯ ವರದಿಯಮೇಲೆ ಭೂಮಿಗಳೆಲ್ಲ ಹೋಗಿಬಿಡುತ್ತವೆಂಬ ಕಾರಣದಿಂದ ಧಾರಾಳವಾಗಿ ಹಣವನ್ನು ಈ ವ್ಯವಸಾಯದಮೇಲೆ ಹಾಕುತ್ತಿಲ್ಲ. ಈ ಬಗ್ಗೆ ಅವರ ಪ್ರಯತ್ನಗಳನ್ನೆಲ್ಲ ನಿಲ್ಲಿಸಿಬಿಟ್ಟಿದ್ದಾರೆ. ಈ ಹಿಂದೆ ಬೊಂಬಾಯಿಯ ಸರ್ಕಾರದವರು ಇಂಥದೇ ಒಂದು ಶಾಸನವನ್ನು ಜಾರಿಗೆ ತರಬೇಕೆಂದು ಉದ್ದೇಶಿಸಿದಾಗ ಅವರು ಈ ತೋಟದ ಜಮೀನುಗಳಿಗೆ ಎಂದರೆ ಹಾಲಿ ಇದ್ದಂಥ ಬಾಗಾಯಿತು ಆಸ್ತಿಗಳ ವಿಸ್ತೀರ್ಣದ ಬಗ್ಗೆ ಏನೊಂದು ಮಿತಿಯನ್ನೂ ಹಾಕದೆ, ಮುಂದೆ ಅಕ್ವಯರ್ ಮಾಡಿಕೊಂಡು ಹಂಚಿಕೆಮಾಡತಕ್ಕ ಭೂಮಿಗಳ ವಿಚಾರದಲ್ಲಿ ಇಂಥಾ ಒಂದು ಮಿತಿಯನ್ನು ಅವರು ಹಾಕಿದ್ದರು. ಅದೇ ರೀತಿ ನಮ್ಮ ಜಿಲ್ಲೆಯ ಮಟ್ಟಿಗಾದರೂ ಈ ಬಗ್ಗೆ ಈಗಿರತಕ್ಕ ಹಿಡುವಳಿಗಳಿಗೆ ಒಂದು ಮಿತಿಯನ್ನು ಹಾಕಬಾರದೆಂದು ಸೂಚಿಸುತ್ತೇನೆ. ಇಷ್ಟೇ ಅಲ್ಲ, ಮುಂದಿನ ಹಿಡುವಳಿಗಳ ಬಗ್ಗೆ ಒಂದು ಮಿತಿ ಹಾಕಬೇಕೆಂಬ ವಿಚಾರದಲ್ಲಿ ನನಗಿನ್ನೂ ಸಂಶಯವಿದ್ದೇ ಇದೆ. ಈಗ ಹಾಲಿ ಇರತಕ್ಕ ಹಿಡುವಳಿಗಳಿಗೆ ಈ ಸಮಿತಿಯವರ ಸಲಹೆಯ ಪ್ರಕಾರ ಒಂದು ಮಿತಿಯನ್ನು ಹಾಕುವುದಾದರೆ ಇದರಿಂದ ಒಕ್ಕಲಿಗೆ ಬಹಳ ತೊಂದರೆಯಾಗುತ್ತದೆ. ಉನ್ನತಸ್ಥಿತಿಯಲ್ಲಿರತಕ್ಕವರೆಲ್ಲ ಭೂಮಾಲೀಕರೇ. ಇವರು ತಮ್ಮ ಹಿಡುವಳಿಯಲ್ಲಿರತಕ್ಕ ಭೂಮಿಯನ್ನು ತಮ್ಮ ತಮ್ಮೊಳಗೇ ಹಂಚಿಕೆಮಾಡಿಕೊಳ್ಳಲು ಅವಕಾಶವಾಗುತ್ತದೆ. ಹೀಗಾಗಿ ಈ ಧನಿಕ ಆಸ್ತಿವಂತರಮೇಲೆ ಕೋರ್ಟಿಗೆ ಹೋಗಿ ಕಾನೂನುಗಳ ರಕ್ಷಣೆಪಡೆಯಲು ಹೆಚ್ಚಿನ ಖರ್ಚುವೆಚ್ಚಗಳಿಗೆ ಅವಕಾಶವಿದೆ. ಆದುದರಿಂದ ಈ ಕಾನೂನುಗಳಿಂದ ಬಡವನಾದವನಿಗೆ ಯಾವ ಒಂದು ಪ್ರಯೋಜನವಾಗಲೀ ರಕ್ಷಣೆಯಾಗಲೀ ದೊರೆಯಲಾರದೆಂಬುದು ನನ್ನ ಅಭಿಪ್ರಾಯ. ಈಗಿನ ಕಾಲದಲ್ಲಿ ಒಂದು–ಎರಡು ಜೊತೆ ಎತ್ತುಗಳನ್ನಿಟ್ಟುಕೊಂಡು ಸ್ವಂತ ಸಾಗುವಳಿ ಮಾಡತಕ್ಕಂಥ ಒಕ್ಕಲುಗಳೇನೂ ಅಷ್ಟು ಹೆಚ್ಚಾಗಿರುವುದಿಲ್ಲ. ಗೇಣಿ ಸಾಗಿಗೆ ಜಮೀನು ಕೊಟ್ಟಿರತಕ್ಕ ನಿದರ್ಶನಗಳು

ಹೆಚ್ಚಾಗಿವೆ. ಇಂಥ ಸಣ್ಣ-ಪುಟ್ಟ ಹಿಡುವಳಿಗಳಲ್ಲಿ ಅರ್ಧ ಜಮೀನು ಮಾಲೀಕನಿಗೆ ಅರ್ಧ ಜಮೀನು ರೈತನಿಗೆಂದು ಹೇಳಿದರೆ ಆ ಅರ್ಧ ಜಮೀನಿನಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಆ ರೀತಿ ಅರ್ಧ ಜಮೀನನ್ನು ಪಡೆಯುವುದಕ್ಕೆ ಬದಲಾಗಿ ನಮಗೇನಾದರೂ ಒಂದು ಪರಿಹಾರ ಕೊಟ್ಟುಬಿಡಿ, ನಾವೆಲ್ಲಾದರೂ ಊರುಬಿಟ್ಟು ಹೊರಟುಹೋಗಿಬಿಡುತ್ತೇವೆ ಎಂಬುದಾಗಿ ಹೇಳಬಹುದು. ನಮ್ಮ ಜಿಲ್ಲೆಯ ವಿಷಯ ಹೀಗೆಲ್ಲ ಬಹಳ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದೆ. ಆದರೆ ಏನೇ ಆಗಲಿ ಇದರಲ್ಲಿ ಭೂಮಾಲೀಕರಿಗಿಂತ ಒಕ್ಕಲಿಗೇ ಹೆಚ್ಚು ಭಾಧಕವಾಗುತ್ತದೆಂದು ನನಗೆ ಅನಿಸುತ್ತಿದೆ. ಈ ದಿವಸ ಈ ಅನೇಕ ಕಾರಣಗಳಿಂದ ಭೂಮಾಲೀಕರಿಗೂ ಒಕ್ಕಲಿಗೂ ಇರಬೇಕಾಗಿದ್ದಂಥ ಒಂದು ಸ್ನೇಹದ ಸಂಬಂಧ ಕೆಟ್ಟುಹೋಗಿದೆ. ಎಲ್ಲಿ ನೋಡಿದರೂ ವಿಷವಾತಾವರಣ ಮೂಡುತ್ತಿರುವುದು ಕಂಡು ಬರುತ್ತಿದೆ. ಆದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಕೂಲಂಕಷವಾಗಿಯೂ ಆಳವಾಗಿಯೂ ಆಲೋಚನೆಮಾಡಿ, ವಿಚಾರಮಾಡಿನೋಡಿ ಭೂಮಿ ಹಿಡುವಳಿಗಳ ಬಗ್ಗೆ ಒಂದು ಮಿತಿಯನ್ನು ಹಾಕುವುದು ಯೋಗ್ಯವೇ. ಉಚಿತವೇ ಅನ್ನುವುದನ್ನು, ತೀರ್ಮಾನ ಮಾಡಬೇಕಾಗಿದೆ. ಆದರೆ ಉಳತಕ್ಕ ಮನುಷ್ಯನಿಗೆ ಎಲ್ಲಿ ಭೂಮಿ ಇಲ್ಲವೋ ಅಲ್ಲಿ ಆತನಿಗೆ ಭೂಮಿ ಕೊಡ ಬಾರದೆಂದು ಯಾರೂ ಹೇಳುವುದಿಲ್ಲ. ಆದರೆ ಅನೇಕರು ಈ ಒಂದು ಸೋಗಿನಲ್ಲಿ ಭೂಮಿಯನ್ನು ಒಂದು ರಿಯಾಯಿತಿ ದರದಲ್ಲಿ ಪಡೆದು ಅದನ್ನು ಸಾವಿರಾರು ರೂಪಾಯಿಗಳ ಫಾಯಿದೆಗೆ ಮಾರಿಕೊಳ್ಳಬೇಕೆಂಬ ಉದ್ದೇಶದಿಂದಲೇ ಭೂಮಿಯನ್ನು ತೆಗೆದುಕೊಳ್ಳುತ್ತಾರೆ. ಆದುದರಿಂದ ಭೂಮಿಯಿಲ್ಲದವರಿಗೆ ಭೂಮಿ ದೊರೆಯಬೇಕೆಂದು ಹೇಳುವುದರಲ್ಲೇನೂ ಅಂಥ ಪ್ರಯೋಜನವಿಲ್ಲ. ಆದರೆ ಇನ್ನು ಮುಂದಕ್ಕೆ ಭೂಮಿ ತೀರಾ ತುಂಡು ತುಂಡುಗಳಾಗಿ ಹಂಚಿಹೋಗತಕ್ಕದ್ದನ್ನು ತಡೆಗಟ್ಟಲು—ಈ ವ್ಯವಸಾಯವನ್ನು ಒಂದು ಸಹಕಾರಪದ್ಧತಿಯ ಮೇಲೆ ನಡೆಸುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ. ಇದು ಬಹಳ ಅಗತ್ಯವೆಂದು ತೋರುತ್ತದೆ. ಆದರೆ ಈ ಹಿಂದೆ ಮಾತನಾಡಿದ ಸದಸ್ಯರ ಪೈಕಿ ಯಾರೋ ಒಬ್ಬಿಬ್ಬರು ಈ ಸಹಕಾರ ಪದ್ಧತಿಯ ವ್ಯವಸಾಯ ಎಲ್ಲಿಯೂ ಜಯಶಾಲಿಯಾಗಿಲ್ಲವೆಂದು ಹೇಳಿದ್ದಾರೆ. ಈ ವಿಚಾರವಾಗಿ ನಾನು ಕೊಡಗಿನ ಶ್ರೀ ಮಲ್ಲಪ್ಪನವರನ್ನು ಕಂಡು ಮಾತನಾಡಿದ್ದೇನೆ. ಏಕೆಂದರೆ ಅವರು ಈ ಸಹಕಾರ ತತ್ವಗಳ ಬಗ್ಗೆ ಹೆಚ್ಚಾಗಿ ದುಡಿದಿದ್ದಾರೆ. ಅವರೇ ಸ್ವತಃ ಹೇಳಿದ್ದರಲ್ಲಿ ಈ ಸಹಕಾರ ಪದ್ಧತಿಯ ವ್ಯವಸಾಯ ಐದಾರು ಕಡೆಗಳಲ್ಲಿ ಬಹಳ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆಯೆಂದು ಗೊತ್ತಾಯಿತು. ಕೊಡಗಿನಲ್ಲಿ ಗುಂಡೇನಹಳ್ಳಿ ಎಂಬ ಸ್ಥಳದಲ್ಲಿ ಸುಮಾರು 75 ಜನರು ನೆಲಸಿ ಅಲ್ಲಿ ಕಳೆದ ಐದು ವರ್ಷಗಳಿಂದ ಸಹಕಾರ ಪದ್ಧತಿಯ ಮೇಲೆ ವ್ಯವಸಾಯೋದ್ಯಮವನ್ನು ನಡೆಸಿಕೊಂಡು ಬರುತ್ತಿದ್ದಾರೆಂಬುದಾಗಿ ತಿಳಿಸಿದ್ದಾರೆ. ಕಳೆದ ವರ್ಷ ಈ ಜಾಯಿಂಟ್ ಕೋ-ಆಪರೇಷನ್ ಬೇಸಿಸ್ ಮೇಲೆ ವ್ಯವಸಾಯ ನಡೆಸಿ ಐದು ಸಾವಿರ ರೂಪಾಯಿಗಳ ಫಾಯಿದೆಪಡೆದಂತೆ ಈ ವರ್ಷ ಸುಮಾರು 16 ಸಾವಿರ ರೂಪಾಯಿಗಳಷ್ಟು ಫಾಯಿದೆ ಪಡೆದಿದ್ದಾರೆಂದೂ ಮತ್ತು ಈ ಕಾಲೋನಿ ಮುಂದಿನ್ನೂ ಬಹಳ ಒಳ್ಳೆಯ ಸ್ಥಿತಿಗೆ ಬರತಕ್ಕದ್ದಾಗಿದೆಯೆಂದೂ ಅವರು ತಿಳಿಸಿದರು. ಅವರಿಗೆ ಅಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರಂತೆ. ಅದೇ ರೀತಿ ಸರ್ಕಾರದವರು ಇಲ್ಲಿಯೂ ಅಂಥ ಯೋಜನೆಯನ್ನು ಜಾರಿಗೆ ತರುವುದು ಒಳ್ಳೆಯದು. ಆದರೆ ಈ ಬಗ್ಗೆ ಜನಗಳು ತಾವಾಗಿಯೇ ಒಂದು ಐಕಮತ್ಯಕ್ಕೆ ಬಂದರೆ ಈ ಕಾರ್ಯ ಬಹು ಬೇಗ ಮುಂದುವರಿಯುತ್ತದೆ. ಹಾಗಿಲ್ಲದೆ ಜನರೇನಾದರೂ ತಮ್ಮ ಅನುಕೂಲಗಳ ಬಗ್ಗೆ ಈ ನೌಕರಶಾಹಿಮೇಲೆ ನಂಬಿಕೆಯಿಟ್ಟರೆ ಅದರಿಂದ ಯಾವ ಅನುಕೂಲವೂ ಆಗಲಾರದು. ಏಕೆಂದರೆ ಈ ನೌಕರಶಾಹಿಗೆ ಪ್ರಜೆಗಳಿಗೆ ಅನುಕೂಲ ಆಗುವಂತೆ ಕೆಲಸಮಾಡಬೇಕೆಂಬ ಮನೋಭಾವ ಅಥವಾ ಅಂಥ ಒಂದು ಪ್ರವೃತ್ತಿ ಅವರಲ್ಲಿಲ್ಲ. ಆ ಗುಂಡೇನಹಳ್ಳಿಯಲ್ಲಿ ನೆಲೆಸಿರತಕ್ಕ ಜನರು ಅವರವರೇ ಒಂದು ಮಾರ್ಗದರ್ಶಕ ರೀತಿಯಲ್ಲಿ ಒಬ್ಬರಿಗೊಬ್ಬರು ಹೊಂದಾಣಿಕೆಯಾಗಿ ಎಲ್ಲವನ್ನೂ ತಮ್ಮ ಸ್ವಂತ ಪ್ರಯತ್ನದಿಂದಲೇ ಮಾಡಿಕೊಂಡು ಏನೋ ಕೆಲವು ಸಲಹೆಗಳನ್ನು ಮಾತ್ರ ಸರ್ಕಾರದವರಿಂದ ಪಡೆದುಕೊಂಡಿದ್ದಾರೆಂದು ಕೇಳಿದೆನು. ಹಾಗೆ ಒಂದು ಹಳ್ಳಿಯಲ್ಲಿ ಜನರು ತಮ್ಮ ಸ್ವಯಂ ಪ್ರೇರಣೆಯಿಂದ ಕೆಲಸಮಾಡಿದರೆ ಅದನ್ನು ನೋಡಿಕೊಂಡು ಮತ್ತೊಂದು ಹಳ್ಳಿಯ ಜನರು ಅದರಂತೆ ಮಾಡಲು ಅವಕಾಶವಾಗುತ್ತದೆ. ಈರೀತಿ ನಮ್ಮ ಉತ್ತರ ಕನ್ನಡ ಜಿಲ್ಲೆ, ದಕ್ಷಿಣಕನ್ನಡ ಜಿಲ್ಲೆ ಮತ್ತು ಕೊಡಗು— ಈ ಪ್ರದೇಶಗಳಲ್ಲಿ ಹೆಚ್ಚುಹೆಚ್ಚಾಗಿ ಕೋ-ಆಪರೇಟೀವ್ ಫಾರಂಗಳನ್ನು ಸ್ಥಾಪನೆ ಮಾಡಿದರೆ ಅಥವಾ ಇಂಥ ಒಂದು ಪದ್ಧತಿಯನ್ನು ಜಾರಿಗೆ ತರಲು ಅವಕಾಶ ಮಾಡಿಕೊಟ್ಟರೆ ಅಲ್ಲಿಯ ಜನರು ತಾವಾಗಿಯೇ ಮುಂದೆ ಬಂದು ಇಂಥ ಸಹಕಾರ ತತ್ತ್ವದ ಸಾಗುವಳಿ ಫಾರಂಗಳನ್ನು ಸ್ಥಾಪನೆಮಾಡಿ ದೇಶದಲ್ಲಿ ಆಹಾರಧಾನ್ಯಗಳ ಉತ್ಪನ್ನವನ್ನು ಹೆಚ್ಚಿಸುವದರ ಜೊತೆಗೆ ಅವರ ಸಾಂಪತ್ತಿಕ ಸ್ಥಿತಿಯೂ ಉನ್ನತಮಟ್ಟಕ್ಕೇರಲು ಸಾಧ್ಯವಿದೆ. ಆದುದರಿಂದ ಮುಂದೆ ಈ ಕೋ-ಆಪರೇಟೀವ್ ಫಾರಂಗಳನ್ನು ಎಲ್ಲಿ ಯಾವ ಜನರಲ್ಲಿ ಅಂಥ ಒಂದು ಉತ್ಸಾಹಕರವಾದ ಸೂಚನೆಗಳಿರುವಂತೆ ಕಂಡು ಬರುತ್ತದೋ ಅಲ್ಲಿ ಮಾತ್ರ ಇವುಗಳನ್ನು ಸ್ಥಾಪಿಸಿದರೆ ಅವು ಅಭಿವೃದ್ಧಿಗೆ ಬರುತ್ತವೆ. ಹಾಗಿಲ್ಲದೆ ಇವುಗಳನ್ನು ಅಲ್ಲಿಯೋ-ಇಲ್ಲಿಯೋ ಪ್ರಾರಂಭಿಸಿದರೆ ಅದರಿಂದ ದೇಶಕ್ಕೇನೂ ಪ್ರಯೋಜನವಾಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಈ ವರದಿಯ ಕೆಲವು ಸಲಹೆಗಳ ಬಗ್ಗೆ ನನಗೆ ಬಹಳ ಭಯ ಉಂಟಾಗಿದೆ. ಕೆಲವು ಶಿಫಾರಸ್ಸುಗಳ ಬಗ್ಗೆ ಅನೇಕ ದೂರುಗಳಿರುತ್ತವೆ. ವಕೀಲರೂ, ಕೆಲವು ಬುದ್ಧಿವಂತರಾದ ಜನರೂ ಇದರಲ್ಲಿ ಸೇರಿರುತ್ತಾರೆ. ಇದರಲ್ಲಿ ಯಾವ ಸಲಹೆಗಳನ್ನು ಜಾರಿಗೆತಂದರೆ ಏನಾಗುತ್ತದೋ ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಸರ್ಕಾರದವರು ಈ ಬಗ್ಗೆ ಒಂದು ಮಸೂದೆಯನ್ನು ತಯಾರಿಸಿ ಶಾಸನ ಸಭೆಗಳ ಮುಂದೆ ತರುವಾಗ ಈ ಎಲ್ಲ ವಿಚಾರಗಳಿಗೂ ಪೂರಾ ನಿಗಾ ಕೊಟ್ಟು ಸಂಪೂರ್ಣವಾಗಿ ವಿಮರ್ಶೆಮಾಡಿ ಮುಂದುವರಿಯಬೇಕಾಗಿದೆ. ಈ ಸಮಿತಿಯವರು ಸೂಚಿಸಿರುವಂತೆ ಈ ಮೊಕದ್ದಮೆಗಳ ವಿಚಾರಣೆಯ ಬಗ್ಗೆ ನಮಗೆ ಒಂದು ಟ್ರೈಬ್ಯುನಲ್ ಮಂಡಲಿಯೂ ಮತ್ತು ಡಿಸ್ಟ್ರಿಕ್ಟ್ ಜಡ್ಜಿಗಳ ದರ್ಜೆಯ ಒಂದು ಅಪಲೇಟ್ ಕೋರ್ಟೂ ಇದ್ದರೆ ಸಾಕೆಂದು ತೋರುತ್ತದೆ. ಇದಕ್ಕೆ ಬದಲಾಗಿ ರೆಗ್ಯುಲರ್ ಸಿವಿಲ್ ಕೋರ್ಟುಗಳಿಗೆ ಈ ಮೊಕದ್ದಮೆಗಳನ್ನು ವಿಚಾರಣೆಮಾಡುವಂತೆ ಮಾಡಿದರೆ ರೈತಾಪಿ ಜನರೆಲ್ಲ ತಮ್ಮ ಉದ್ಯೋಗವನ್ನು ಕೈಬಿಟ್ಟು ಯಾವತ್ತೂ ಅವರು ಈ ಕೋರ್ಟು ವ್ಯವಹಾರಗಳಲ್ಲೇ ಇರಬೇಕಾಗುತ್ತದೆ. ಆದರೆ ಸರ್ಕಾರ ಯಾವ ಕಾನೂನನ್ನೇ ಮಾಡಲಿ ಅದು ಜನರಿಗೆ ಸರಳವಾಗಿ ಗೊತ್ತಾಗುವ ರೀತಿಯಲ್ಲಿರಬೇಕು. ಅವಸರದಲ್ಲಿ ಏನೂ ಮಾಡಬಾರದು. ಆದರೆ ಜತ್ತಿ ಸಮಿತಿಯವರು

(ಶ್ರೀ ಕೆ. ಕಾಂತಪ್ಪಶೆಟ್ಟಿ)

ಬಹಳ ಆತುರದಲ್ಲಿ ಕೆಲಸಮಾಡಿದ್ದಾರೆಂದು ಕಾಣುತ್ತಿದೆ. ಅವರು ನಮ್ಮ ಜಿಲ್ಲೆಯಲ್ಲಿ ಅಷ್ಟು ತಿರುಗಾಟ ಮಾಡಲೇ ಇಲ್ಲವೆಂಬ ದೂರುಗಳು ಬಂದಿವೆ.

ಕೆಲವು ಕಡೆಗಳಲ್ಲಿರುವ ಜನರಿಗೆ ಇದು ಏನು ಎಂಬುದೇ ಗೊತ್ತಾಗಿಲ್ಲ. ಆದ್ದರಿಂದ ಅವಸರಮಾಡದೆ ಸರಿಯಾದ ರೀತಿಯಲ್ಲಿ ಇತರ ಎಲ್ಲಾ ಜನಾಭಿಪ್ರಾಯವನ್ನು ಕೇಳಿಕೊಂಡು ಆಯಾ ಪ್ರದೇಶಗಳಿಗೆ ಸರ್ವಸಾಮಾನ್ಯವಾಗಿ ತೃಪ್ತಿಯಾಗುವ ಹಾಗೆ ಒಂದು ಮಸೂದೆಯನ್ನು ತರಬೇಕು. ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ದೊಡ್ಡ ಅಲ್ಲೋಲ ಕಲ್ಲೋಲವೆದ್ದಿದೆ. ಆದ್ದರಿಂದ ಒಕ್ಕಲಿಗರಿಗೆ ನಿಜವಾಗಿ ಹಿತವಾಗುವ ರೀತಿಯಲ್ಲಿ ಮತ್ತು ಭೂಮಾಲೀಕರು ನ್ಯಾಯವಾಗಿ ಬಾಳುವಂತಹ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕು. ಅಲ್ಲಿನ ಸಂಕಷ್ಟಗಳನ್ನು ಕೇಳಿ ಅವುಗಳಿಗೆ ವಿಶೇಷವಾಗಿ ಸರ್ಕಾರದವರು ನಿಗಾಕೊಡಬೇಕೆಂದು ಸೂಚಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ನಾಡಗೌಡ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಈಗ ನಾಲ್ಕೈದು ದಿವಸಗಳಿಂದಲೂ ಮಾನ್ಯ ಜತ್ತಿ ಸಮಿತಿಯವರ ವರದಿಯಮೇಲೆ ಕೆಲವು ವಿಚಾರಗಳು ತಮ್ಮ ಮುಂದೆ ಚರ್ಚೆಯಾಗುತ್ತಿವೆ. ಈಗ ನಾನು ಮಾನ್ಯ ಜತ್ತಿ ಕಮಿಟಿಯ ವರದಿಗೆ ಸ್ವಾಗತಬಯಸುತ್ತೇನೆ. ವೈಯಕ್ತಿಕವಾಗಿ ಮಾನ್ಯ ಜತ್ತಿ ಕಮಿಟಿಯ ವರದಿಯಿಂದ ಯಾವೊಂದು ಧಕ್ಕೆ ತಾಗದೆ ಇದ್ದರೂ ಈಗಿನ ಸಮಸ್ಯೆಯನ್ನು ಪರಿಹರಿಸುವುದು ಅತ್ಯಾವಶ್ಯಕವೆಂದು ಹೇಳುತ್ತೇನೆ. ಸರ್ಕಾರದವರು ಇಂತಹ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡದ್ದರಿಂದ ಮಾನ್ಯ ನಿಜಲಿಂಗಪ್ಪನವರ ಮಂತ್ರಿಮಂಡಲಕ್ಕೆ ನನ್ನ ವಂದನೆಗಳು. ಈಗಿನ ಭೂಸುಧಾರಣೆಯ ಪ್ರಶ್ನೆ ಬಹಳ ದೊಡ್ಡ ಪ್ರಶ್ನೆ. ಈ ಪ್ರಶ್ನೆಯನ್ನು ಬಿಡಿಸುವಾಗ ಎಲ್ಲಾ ಜನರಿಗೆ ಅನುಕೂಲವಾಗುವಂತೆ ಭೂಸುಧಾರಣೆಯನ್ನು ಮಾಡುವುದು ಅವಶ್ಯಕವೆಂದು ಈ ಕ್ರಮವನ್ನು ತೆಗೆದುಕೊಂಡಿದ್ದಾರೆಂದು ನಾನು ಭಾವನೆಮಾಡುತ್ತೇನೆ. ಶ್ರೀಮಾನ್ ಜತ್ತಿ ಸಮಿತಿಯ ವರದಿಯನ್ನು ನಾನು ಬಹಳ ಆಸಕ್ತಿಯಿಂದ ಎರಡು-ಮೂರು ತಿಂಗಳುಗಳಿಂದಲೂ ನೋಡುತ್ತಾ ಬಂದಿದ್ದೇನೆ. ಅವರಿಗೆ ಬಾಗಲಕೋಟೆಯ ತಾಲ್ಲೂಕ್ ಕಾಂಗ್ರೆಸ್ ಕಮಿಟಿಯಿಂದ ಮತ್ತು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯಿಂದ ಒಂದು ಮನವಿಯನ್ನು ಕೊಟ್ಟಿದ್ದಾರೆ. ಆದರೆ ನಾನು ಒಂದೆರಡು ಸೂಚನೆಗಳನ್ನು ತಮ್ಮ ಮುಂದಿಡಲು ಬಯಸುತ್ತೇನೆ. ಇವೊತ್ತಿನ ದಿವಸ ಲ್ಯಾಂಡ್ ರಿಫಾರಮ್ಸ್ ಅಥವಾ ಭೂಸುಧಾರಣೆಯ ಆವಶ್ಯಕತೆ ಏಕೆ ಉಂಟಾಗಿದೆಯೆಂದು ಹೇಳುವುದು ಒಂದು ಸಹಜವಾದ ಮಾತು. ನೂರಕ್ಕೆ 80 ಜನರು ಒಕ್ಕಲುತನದವರು ಇದ್ದಾರೆ. ಇವರು ಹಳ್ಳಿಗಳಲ್ಲಿಯೇ ವಾಸವಾಗಿದ್ದುಕೊಂಡು ಬೆವರು ಸುರಿಸಿ ಹೊಲಗಳಲ್ಲಿ ಹೆಚ್ಚು ಹುಮ್ಮಸ್ಸಿನಿಂದ ಕೆಲಸಮಾಡಿ ಉತ್ತಮವಾದ ಒಕ್ಕಲುತನದವರು ಎಂದು ಅನ್ನಿಸಿಕೊಂಡಿದ್ದಾರೆ. ಆಧರೆ ಈ ಭೂ ಸುಧಾರಣೆಯನ್ನು ಅತಿ ತೀವ್ರವಾಗಿ ಮಾಡದಿದ್ದರೆ. ಮೈಸೂರಿನಲ್ಲಾಗಲೀ, ಅಥವಾ ಇತರ ಪ್ರಾಂತ್ಯಗಳಲ್ಲಾಗಲೀ ಒಕ್ಕಲುತನದವರ ಪರಿಸ್ಥಿತಿ ಬಹಳವಾಗಿ ಹದಗೆಡುತ್ತಿತ್ತು. ಆದ್ದರಿಂದ ಸರ್ಕಾರದವರು ಈ ಒಂದು ವಿಷಯವನ್ನು ಸುತ್ತಮುತ್ತ ಪ್ರಾಂತಗಳಲ್ಲಿ ಯಾವ ರೀತಿ ಬಗೆಹರಿಸಿದ್ದಾರೆಂಬುದನ್ನೂ ಸಹ ಸ್ವಲ್ಪ ನೋಡಬೇಕು. ಈಗ ಕೇರಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ಬಂದಿದೆ. ಈ ರಾಜ್ಯ ಮೈಸೂರಿನ ಮಗ್ಗುಲಲ್ಲಿರುವ ರಾಜ್ಯ. ಆ ರಾಜ್ಯದಲ್ಲಿ ಜನರನ್ನು ಆಕರ್ಷಣೆಮಾಡುವ ಕ್ರಮವನ್ನು ತೆಗೆದುಕೊಂಡಿದ್ದಾರೆ. ಕಾಂಗ್ರೆಸ್ ಸರ್ಕಾರದವರು ಯಾವ ತರಹದ ಪ್ರಯತ್ನವನ್ನೂ ಜನರಿಗೆ ಆಕರ್ಷಿಕವಾಗುವ ರೀತಿಯಲ್ಲಿ ಏಕೆ ಮಾಡಬಾರದು ! ಮೈಸೂರು ರಾಜ್ಯ ಮಾದರಿ ರಾಜ್ಯವೆಂಬ ಹೆಸರನ್ನು ಪಡೆದು ಪ್ರಖ್ಯಾತಿಹೊಂದಿರುವಾಗ, ನಾವು ಮಾದರಿ ಕಾಯಿದೆಗಳನ್ನು ಮಾಡುವುದರಲ್ಲಿ ಹಿಂತೆಗೆಯಬಾರದು. ಆದರೆ ಅವರಂತೆ ಇವೊತ್ತಿನ ದಿವಸ ಕೇವಲ ಭೂಸುಧಾರಣೆ ಮಾತ್ರ ಮಾಡಿದರೆ ಸಾಲದು. ಇವೊತ್ತಿನ ದಿವಸ ಕೇಂದ್ರ ಸರ್ಕಾರದಲ್ಲಿ ಮತ್ತು ಇತರ ರಾಜ್ಯ ಸರ್ಕಾರಗಳಲ್ಲಿ ಯಾವ ಯಾವ ಭೂಸುಧಾರಣೆಯ ಕಾನೂನುಗಳು ಜಾರಿಯಲ್ಲಿವೆ ಎಂಬುದನ್ನು ಆಮೂಲಾಗ್ರವಾಗಿ ವಿಚಾರಮಾಡಿ, ಅದಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಂಡು ತಕ್ಕ ಕಾಯಿದೆಗಳನ್ನು ಮಾಡಬೇಕು. ಇವೊತ್ತಿನ ದಿವಸ ಕೂಲಿಗಾರರಿಗೆ ಹೆಚ್ಚು ಅವಕಾಶವನ್ನು ಕೊಡಬೇಕು. ಏಕೆಂದರೆ ಅವರು ಹೊಲಗಳನ್ನು ಆಬಾದುಮಾಡಿ ಹೆಚ್ಚು ಬೆಳೆಯನ್ನು ಬೆಳೆದರೂ, ದೊಡ್ಡ ದೊಡ್ಡ ಭೂಮಾಲೀಕರು ಅವರಲ್ಲಿ ಏನೋ ಒಂದು ದೊಡ್ಡ ಅಧಿಕಾರವಿದೆಯೆಂದು ಬಡ ಒಕ್ಕಲಿಗರನ್ನು ಅಲಕ್ಷ್ಯಭಾವದಿಂದ ನೋಡುತ್ತಾರೆ. ಅವರಿಗೂ ಅವರ ಪಾಲು ಸಿಕ್ಕುವ ಹಾಗೆ ಒಂದು ವ್ಯವಸ್ಥೆಮಾಡಬೇಕು. ಯಾವಾಗಲೂ ಹಿಂದೆ ಹೆಜ್ಜೆ ಇಡಬಾರದು. ನನಗೆ 300-400 ಎಕರೆ ಜಮೀನುಗಳಿದ್ದರೂ ಸಹ, ಅವುಗಳನ್ನು ಉಳಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲ. ಮುಂಬೈ ರಾಜ್ಯದಲ್ಲಿ ಟೆನೆನ್ಸಿ ಕಾನೂನು ಬಂದು ನಮ್ಮ ಹೊಲಗಳು ಈಗಾಗಲೇ ಒಕ್ಕಲಿಗರಿಗೆ ಸಿಕ್ಕಿವೆ. ಅವನ್ನು ಉಳಿಸಿಕೊಳ್ಳಲು ಇವೊತ್ತಿನ ದಿವಸ ಕಾಂಗ್ರೆಸ್ ಸಂಸ್ಥೆಯಲ್ಲಿರುವವರು ಪ್ರಯತ್ನಮಾಡಬಾರದಾಗಿತ್ತು. ಜತ್ತಿ ಕಮಿಟಿ ರಿಪೋರ್ಟಿನಲ್ಲಿ ಇವೊತ್ತಿನ ದಿವಸ ಈ ಭೂಸುಧಾರಣೆಗೆ ಬೇಕಾದಂಥ ಅನೇಕ ಸಲಹೆಗಳನ್ನು ಮಾಡಿದ್ದಾರೆ. ಜತ್ತಿಯವರ ಕಾಯಿದೆಗಳು ಪ್ರತಿಗಾಮಿಯಾಗಿ ಒಕ್ಕಲಿಗರಿಗೆ ಮಾತ್ರ ಮಾಡಲಿಲ್ಲ. ಇಂತಹ ವರದಿಯಲ್ಲಿ ತಪ್ಪುಮಾಡುವುದಾದರೂ ಏನಿದೆ ? ಒಂದುವೇಳೆ ಜತ್ತಿ ಸಮಿತಿ ವರದಿಯಲ್ಲಿ ಎಷ್ಟೋ ಸೂಚನೆಗಳನ್ನು ಮಾಡಬೇಕಾಗಿ ಬರುತ್ತದೆ. ಸೀಲಿಂಗ್ ನಿಗದಿಮಾಡಿರುವ ಬಗ್ಗೆ ಬೇಕಾದಷ್ಟು ಬದಲಾವಣೆಮಾಡಬಹುದು. 1,200 ರೂಪಾಯಿಗಳಷ್ಟು ಆದಾಯ ಬರುವಂಥ ಭೂಮಿಯನ್ನು ಭೂಮಾಲೀಕನಿಗೆ ಬಿಟ್ಟು ಉಳಿದ ಜಮೀನನ್ನು ಒಕ್ಕಲಿಗರಗೆ ಹಂಚಬಹುದು. ಇಷ್ಟಾದರೂ ಸೀಲಿಂಗ್ ಇಡಬಹುದು. ಜತ್ತಿ ಸಮಿತಿಯ ವರದಿಯನ್ನು ಒಪ್ಪದಿದ್ದರೆ ಬಹಳ ತಪ್ಪುಮಾಡಿದಂತಾಗುತ್ತದೆ. ಅದರಂತೆಯೇ ಇನ್ನೊಂದು ನನ್ನ ನಮ್ರವಾದ ಸೂಚನೆ ಏನಂದರೆ ಇವೊತ್ತಿನ ದಿವಸ ಸರ್ಕಾರದವರು ಯಾವ ಕಾಯಿದೆ ಕಾನೂನುಗಳನ್ನಾಗಲಿ ಎರಡು ವರ್ಗಗಳಿಗೆ ಅನ್ವಯಿಸುವಂತೆ ಮಾಡುತ್ತಿದ್ದಾರೆ ; ದುಡ್ಡಿದ್ದವನಿಗೆ ಮತ್ತು ಕೂಲಿಗಾರನಿಗೆ ಎಂದು ಮಾಡುತ್ತಿದ್ದಾರೆ ; ಮಧ್ಯಮವರ್ಗದವರನ್ನು ಸರ್ಕಾರದವರು ವಿಚಾರ ಮಾಡುವುದೇ ಇಲ್ಲ. ರಾಷ್ಟ್ರದ ಬೆನ್ನೆಲುಬು ಮಧ್ಯಮ ವರ್ಗದವರು. ಅವರು ನಿರ್ಮೂಲವಾಗುತ್ತಾರೆ. ಎಂದರೆ, ರಾಷ್ಟ್ರಕ್ಕೇ ಒಂದು ದೊಡ್ಡ ಗಂಡಾಂತರವಿದೆ. ಆದ್ದರಿಂದ ಯಾವುದೇ ಕಾನೂನುಗಳನ್ನು ನಮ್ಮ ಸರ್ಕಾರದವರು ಮಾಡಿದರೂ, ಮಧ್ಯಮ ವರ್ಗದವರ ಹಿತವನ್ನು ಸೂಕ್ಷ್ಮವಾಗಿ ಮತ್ತು ದೀರ್ಘವಾಗಿ ವಿಚಾರಮಾಡಬೇಕು. ಅವರಿಗೆ 40-50 ವರ್ಷಗಳಿಂದ

ಕೇವಲ 15-20 ಎಕರೆ ಜಮೀನು ಇದ್ದರೆ, ಅದನ್ನು ಈ ಟೆನೆನ್ಸಿ ವರದಿಯ ಪ್ರಕಾರ ಅವರ ಕೈತಪ್ಪಿಸಿ ತೆಗೆದುಕೊಂಡು ಹೋಗುವ ವಿಚಾರ ಬರುತ್ತದೆ. ಇಂತಹ ಪರಿಸ್ಥಿತಿ ಅದರಲ್ಲಿ ಅಡಕವಾಗಿದೆ. ಅವನ್ನೆಲ್ಲಾ ವಿಚಾರಮಾಡಬೇಕು. ಒಕ್ಕಲುತನಮಾಡುವ ಒಂದು ಆಸ್ಪದವನ್ನು ಮಧ್ಯಮ ವರ್ಗದವರಿಗೆ ಕೊಟ್ಟಿಲ್ಲ. ಸರ್ಕಾರದವರು ಕಾನೂನು ಕಾಯಿದೆಗಳನ್ನು ಮಾಡುವಾಗ ಮಧ್ಯಮವರ್ಗದವರ ವಿಚಾರ ಚರ್ಚೆಮಾಡದೆ ಬಿಟ್ಟಿದ್ದು ಒಂದು ಶೋಚನೀಯವಾದ ಸಂಗತಿ. ಆದ್ದರಿಂದ ಮುಂದೆ ಜತ್ತಿ ಕಮಿಟಿಯವರ ವರದಿಯ ಪ್ರಕಾರ ಕಾನೂನು ಕಾಯಿದೆಗಳನ್ನು ಜಾರಿಗೆ ತರುವಾಗ ನಮ್ಮ ಸರ್ಕಾರದವರು ಈ ವಿಚಾರದಲ್ಲಿಯೂ ಹೆಚ್ಚು ಗಮನಕೊಡಬೇಕೆಂದು ನನ್ನ ಸೂಚನೆ. ಅದರಂತೆಯೇ ಇನ್ನು ಮುಂದೆ ಟೆನೆಂಟ್ಸ್ ಹೊಲಗಳನ್ನು ತೆಗೆದುಕೊಳ್ಳುವುದಕ್ಕೆ ಏನಾದರೂ ಒಂದು ರಿಸ್ಟ್ರಿಕ್ಷನ್ ಇಡುವುದು ಆವಶ್ಯಕವೆಂದು ನನಗನ್ನಿಸುತ್ತದೆ. ಒಂದು ವಿಚಾರ. ಇವತ್ತಿನ ದಿವಸ ಯಾರಾದರೂ ಭೂ ಒಡೆಯ ಹೆಚ್ಚು ಜಮೀನನ್ನು ತೆಗೆದುಕೊಳ್ಳಬೇಕೆಂದು ಮುಂದೆ ಬಂದರೆ, ಶ್ರೀಮಾನ್ ಜತ್ತಿ ಕಮಿಟಿಯ ವರದಿಯ ಪ್ರಕಾರ ಅದನ್ನು ಒಕ್ಕಲಿಗರಿಗೇ ಹಂಚಿಕೊಡಬೇಕೆಂದು ಹೇಳಿದ್ದಾರೆ. ಒಕ್ಕಲಿಗರೆಲ್ಲರೂ ಒಟ್ಟಾಗಿ ಸೇರಿ ಒಂದು ಸಹಕಾರ ಸಂಘವನ್ನು ಮಾಡಿ, ಅವರಿಗೆ ಜಮೀನು ಹಂಚಬೇಕೆಂದರೆ ಅದು ಅಶಕ್ಯವಾದ ಮಾತು, ಹೊಲಗಳು ಸಿಕ್ಕುವುದು ಸುಲಭ. ಒಕ್ಕಲಿಗರ ಸಂಖ್ಯೆ ಕಡಮೆ. ಇದರಿಂದ ಒಂದು ತರಹದ ವೆಸ್ಟೆಡ್ ಇಂಟರೆಸ್ಟನ್ನು ಕ್ರಿಯೇಟ್‌ಮಾಡಬೇಕಾಗಿದೆ. ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುವುದು ಎಂದು ಎಷ್ಟೋ ಜನರ ಅಭಿಪ್ರಾಯವಿದ್ದರೂ, ಅವುಗಳನ್ನು ಸರ್ಕಾರದವರು ಜಾಯಿಂಟ್ ಫಾರಂಗೆ ಕೊಡಬೇಕು. ಕೋ-ಆಪರೇಟಿವ್ ಸೊಸೈಟಿಗಳಿಗೆ ಕೊಡಬಾರದು. ಜತ್ತಿ ಸಮಿತಿಯ ವರದಿಯ ಪ್ರಕಾರ. ಭೂಮಾಲೀಕರೇ ಆಗಲಿ, ಗೇಣೀದಾರರೇ ಆಗಲೀ ಸ್ಪೆಷಲ್ಲಾಗಿ ಹುಮ್ಮಸ್ಸಿನಿಂದ ಕೆಲಸಮಾಡಬೇಕು. ಆ ವರದಿಯಲ್ಲಿರುವ ಕಟ್ಟಳೆಗಳನ್ನು ತೀರ್ಮಾನಿಸಬೇಕಾದರೆ ಸಿವಿಲ್ ಕೋರ್ಟುಗಳು ಆವಶ್ಯಕ.

ಕೋರ್ಟುಗಳಿಗೆ ಕಟ್ಟಳೆಗಳನ್ನು ಕೊಡಬೇಕು. ಈ ಟೆನೆನ್ಸಿ ಕೇಸುಗಳನ್ನು ಮೂರು-ನಾಲ್ಕು ತಿಂಗಳಲ್ಲಿ ಮುಗಿಸಬೇಕೆಂದು ಕೋರ್ಟುಗಳಿಗೆ ನಿರ್ಬಂಧ ಹಾಕಬೇಕು. ಈ ಬಿಲ್ಲಿನಲ್ಲಿ ಆ ರೀತಿ ಅವರಿಗೆ ಟೈಂಕೊಟ್ಟರೆ ಹೆಚ್ಚು ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಕೋರ್ಟುಗಳಲ್ಲಿ ವಿಳಂಬವಾಗುತ್ತದೆ. ಆದ್ದರಿಂದ ನನ್ನ ಸೂಚನೆ ಏನೆಂದರೆ, ಕೋರ್ಟುಗಳು ಹೆಚ್ಚು ವೇಳೆಗಳನ್ನು ತೆಗೆದುಕೊಳ್ಳಬಾರದು, ಆರು ತಿಂಗಳಲ್ಲಿ ಚೌಕಸಿ ಆಗಬೇಕು ಎಂದು ತಿಳಿಸಬೇಕು. ಹಾಗೆ ಮಾಡಿದರೆ, ಆ ಕಟ್ಟಳೆಗಳಿಗೆ ಪ್ರಾಶಸ್ತ್ಯಕೊಟ್ಟು ಮಾಡುತ್ತಾರೆ. ಇಲ್ಲದಿದ್ದರೆ ಒಕ್ಕಲಿಗರಿಗೆ ನಿರ್ಬಂಧಮಾಡುವ ಪರಿಸ್ಥಿತಿ ಬರುತ್ತದೆ. ಒಕ್ಕಲಿಗರನ್ನು ಇನ್ನೂ ನಿರ್ಬಂಧಮಾಡಬಾರದು. ಲಿಟಿಗೆಂಟ್ ಪಬ್ಲಿಕ್ಕಿಗೆ ಕೋರ್ಟಿನಲ್ಲಿ ವಕೀಲರಿಗೆ ಹಾಜರು ಆಗಲಿಕ್ಕೆ ಅಪ್ಪಣೆಕೊಟ್ಟು ನ್ಯಾಯ ಶೀಘ್ರವಾಗಿ ದೊರೆಯುವ ಹಕ್ಕು ಇರಬೇಕು. ನ್ಯಾಯ ದೊರಕುವ ಹಾಗೆ ಕಟ್ಟಳೆಗಳನ್ನು ಮಾಡಿಕೊಡಬೇಕು. ಒಕ್ಕಲಿಗರಿಗೆ ನ್ಯಾಯಬದ್ಧವಾದ ಹಕ್ಕುಗಳು ದೊರೆಯುವಂತೆ ಏರ್ಪಾಡುಮಾಡಬೇಕು ಎಂದು ನನ್ನ ನಮ್ರ ಸೂಚನೆ ಇದೆ. ಇನ್ನೊಂದು ಮುಖ್ಯವಿಷಯ. ಇವೊತ್ತಿನ ದಿವಸ ಜತ್ತಿ ಸಮಿತಿಯ ರಿಪೋರ್ಟಿನಲ್ಲಿ ಶಿಕ್ಷಣ ಸಂಸ್ಥೆಗಳಿಗೆ ವತನದಾರರು ಪುಣ್ಯವಂತರು ಹೊಲವನ್ನು ಕೊಡುವುದಕ್ಕೆ ಅವಕಾಶವಿಲ್ಲ. ಮುಂಬೈ ರಾಜ್ಯದಲ್ಲಿ ಇಂಥ ಪರಿಸ್ಥಿತಿ ಇದೆ. ಜತ್ತಿ ಸಮಿತಿಯವರ ರಿಪೋರ್ಟಿನಲ್ಲಿ ಇದಕ್ಕೆ ಅವಕಾಶಕೊಟ್ಟಿಲ್ಲ. ಶಿಕ್ಷಣ ಸಂಸ್ಥೆಗಳಿಗೆ ಚಾರಿಟಬಲ್ ಎಂಡೋಮೆಂಟ್‌ಗಳ ಆಸ್ಪದಕೊಡಬೇಕು. ಅದಕ್ಕಾಗಿ ಒಂದು ಎಗ್ಜಮ್ಷನ್ ಕ್ಲಾಸ್ ಹಾಕಬೇಕು. ಇಲ್ಲದಿದ್ದರೆ ಶಿಕ್ಷಣ ಸಂಸ್ಥೆಗಳು ನಡೆಯುವುದು ಕಠಿಣ. ಶಿಕ್ಷಣ ಸಂಸ್ಥೆಗಳು ಸರಿಯಾಗಿ ನಡೆಯಬೇಕಾದರೆ, ಭೂದಾನ ಇಡಬೇಕು, ಎಂದರೆ ಅಂಥ ಸಂಸ್ಥೆಗಳು ಚೆನ್ನಾಗಿ ನಡೆಯುತ್ತವೆ. ಸರ್ಕಾರದವರಿಗೆ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನೂ ನಡೆಸುವ ಸಾಮರ್ಥ್ಯ ಇಲ್ಲದೆ ಇರುವುದರಿಂದ ಈ ರೀತಿ ಎಗ್ಜಮ್ಷನ್‌ನನ್ನು ಬಿಲ್ಲಿನಲ್ಲಿ ಹಾಕುವುದು ಆವಶ್ಯಕ ಎಂದು ನನಗನ್ನಿಸುತ್ತದೆ. ಇವೊತ್ತಿನ ದಿವಸ ಏನು ಈ ಜತ್ತಿ ಕಮಿಟಿ ರಿಪೋರ್ಟು ಇದೆ ಅದನ್ನು ಸ್ವಾಗತಮಾಡುತ್ತಿದ್ದೇನೆ. ಸರ್ಕಾರದವರು ಈ ಬಗ್ಗೆ ತೀವ್ರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಪರಿಸ್ಥಿತಿ ನಮ್ಮ ಕೈಯಲ್ಲಿ ಉಳಿಯುವುದಿಲ್ಲ. ಕಾಂಗ್ರೆಸ್ ಸರ್ಕಾರದವರು ಈ ಒಂದು ಸುಧಾರಣೆಯನ್ನು ತರಲು ಬದ್ಧಕಂಕಣರಾಗಿದ್ದಾರೆ. ನಾವು ಜನರ ಮುಂದೆ ಹೋಗಬೇಕಾದರೆ ಈ ಕಾಯಿದೆಯನ್ನು ತೆಗೆದುಕೊಂಡು ಹೋದರೆ ನಮ್ಮನ್ನು ನಂಬುತ್ತಾರೆ, ಇಲ್ಲದಿದ್ದರೆ ಇವರು ಬರಿಯ ಎಲೆಕ್ಷನ್‌ಗೋಸ್ಕರ ಬಂದಿದ್ದರು, ಇವರ ಕೆಲಸ ವಾಯಿತು; ದೇಶಕ್ಕಾಗಿ ಇವರು ಏನೂ ಕೆಲಸಮಾಡುವುದಿಲ್ಲವೆಂದು ತಿಳಿದುಕೊಳ್ಳುತ್ತಾರೆ. ಆದ್ದರಿಂದ ನಾನು ಜತ್ತಿ ಸಮಿತಿಯ ರಿಪೋರ್ಟನ್ನು ಸ್ವಾಗತಿಸಿ ನನಗೆ ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ವೆಂಕಟರಮಣಯ್ಯ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಸರ್ಕಾರದವರು ಶ್ರೀಮಾನ್ ಜತ್ತಿಯವರ ಆಶ್ರಯದಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿದಮೇಲೆ ಅವರು ಸಂಸ್ಥಾನದಲ್ಲಿ ತಿರುಗಿ ರೈತರಿಗೂ ಜಮೀನ್ದಾರರಿಗೂ ಇರತಕ್ಕ ಬಾಂಧವ್ಯ ಮತ್ತು ಇರಬೇಕಾದ ರೀತಿ ನೀತಿಗಳನ್ನು ನಿರೂಪಿಸಿ ನಮ್ಮ ಮುಂದೆ ಒಂದು ರಿಪೋರ್ಟನ್ನು ಇಟ್ಟಿದ್ದಾರೆ. ಬೊಂಬಾಯಿ ಭಾಗ, ಹೈದ್ರಾಬಾದ್ ಭಾಗ ಮತ್ತು ಇನ್ನೂ ಕೆಲವು ಭಾಗಗಳಲ್ಲಿ ಇರತಕ್ಕಂಥ ಅನುಕೂಲಗಳನ್ನು ಮತ್ತು ಅನನುಕೂಲಗಳನ್ನು ಪರಿಶೀಲಿಸಿ ವಿಶದವಾಗಿ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆ ಭಾಗದಲ್ಲಿ ಇರತಕ್ಕಂಥ ರೈತರ ತೊಂದರೆಗಳನ್ನು ನಿವಾರಿಸುವುದಕ್ಕೆ ತತ್ವಶಃ ಕೆಲವು ಅಂಶಗಳನ್ನು ಈ ರಿಪೋರ್ಟಿನಲ್ಲಿ ಅಡಕಮಾಡಿದ್ದಾರೆ. ಆದರೆ ಹಳೆಯ ಮೈಸೂರಿಗೆ ಸಂಬಂಧಪಟ್ಟಂತೆ ಅವರು ವಿಶೇಷವಾಗಿ ಪರಿಶೀಲನೆಗಳನ್ನು ನಡೆಸಿದ ಹಾಗೆ ಕಾಣಿಸುವುದಿಲ್ಲ. ಅವರು ಹೇಳಿರತಕ್ಕ ಅಂಕಿ ಅಂಶಗಳ ಪ್ರಕಾರ ನಮ್ಮಲ್ಲಿ ಜಮೀನ್ದಾರರು ಅಥವಾ ಹೆಚ್ಚು ಎಕರೆಗಳ ಜಮೀನು ಇರತಕ್ಕವರು ಬಹಳ ಕಡಮೆ ಅದರಲ್ಲೂ ಕೂಡ ಈ ರೀತಿಯಾಗಿ ಅವರ ರಿಪೋರ್ಟನ್ನು ಇಲ್ಲಿ ಜಾರಿಗೆ ತಂದಿದ್ದೇ ಆದರೆ ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಎರಡು ಎಕರೆಗಳಿಗಿಂತ ಜಾಸ್ತಿಯಾಗಿ ಯಾರೂ ಇಟ್ಟುಕೊಳ್ಳುವದಕ್ಕೆ ಸಾಧ್ಯವಿಲ್ಲ. ಅದರಿಂದ ಬಹಳ ಜನಗಳಿಗೆ ತೊಂದರೆಯಾಗುತ್ತದೆ. ಅವರು ಹೇಳಿರತಕ್ಕ ಅಂಕಿ ಅಂಶಗಳನ್ನು ತೆಗೆದುಕೊಂಡರೆ ಒಬ್ಬರಿಗೆ ಎಷ್ಟು ಜಮೀನು ಇರಬೇಕು ಎಂಬುದನ್ನು ನಿರ್ಧಾರಮಾಡಲು ಆದಾಯದ ಮೇಲೆ ಲೆಕ್ಕಹಾಕಿದರೆ ಒಬ್ಬರಿಗೆ ಕೇವಲ ಎರಡು ಎಕರೆ ಬರುತ್ತದೆ. ಮೈಸೂರು ಡಿಸ್ಟ್ರಿಕ್ಟಿನ ಕೆಲವು ಭಾಗದಲ್ಲಿಯೂ ಹೀಗೆಯೇ ಆಗುತ್ತದೆ. ಅಂಕಿ ಅಂಶಗಳನ್ನು ಪರಿಶೀಲಿಸಿದರೆ ಮುಂದೆ ವ್ಯವಸಾಯಕ್ಕೆ

(ಶ್ರೀ ಟಿ. ವೆಂಕಟರಮಣಯ್ಯ)

ಎಷ್ಟು ಅನನುಕೂಲವಾಗುತ್ತದೆ ಎಂಬುದನ್ನು ಈ ಮಾನ್ಯ ಸಭೆಯಲ್ಲಿ ಅನೇಕರು ವಿವರಿಸಿದ್ದಾರೆ. ನಾನೂ ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಮೊನ್ನೆ ತಾನೆ ಪಾಂಡವಪುರ ತಾಲ್ಲೂಕಿನಲ್ಲಿ ಈ ಸಾರಿ ಸುಗ್ಗಿಯ ಕಾಲದಲ್ಲಿ ಸರಿಯಾಗಿ ಯಾರೂ ಗುತ್ತಿಗೆಗಳನ್ನು ಪಾವತಿಮಾಡದೆ ಪೋಲೀಸರು ಹೋಗಿ ಅನಂತರ ಗುತ್ತಿಗೆ ಕೊಡಿಸಬೇಕಾದ ಪ್ರಸಂಗ ಒದಗಿತ್ತು. ಇದಕ್ಕೆ ಕಾರಣ ಐದಾರುವರ್ಷಗಳಿಂದ ಗೇಣಿ ಕಾನೂನನ್ನು ಸರ್ಕಾರದವರು ಕೂಲಂಕಷವಾಗಿ ವಿಮರ್ಶಿಸಿದ್ದಾರೆ. ಒಂದೇ ಸಾರಿ ಒಂದು ಕಾನೂನನ್ನು ಮಾಡದೆ ಪದೇ ಪದೇ ಪೀಸ್‌ಮೀಲಾಗಿ ಮಾಡಿರುವುದು. ಅದರಿಂದ ಕೆಲವರಲ್ಲಿ ತಪ್ಪು ಅಭಿಪ್ರಾಯಗಳು ಬಂದು ಕೆಲವರು ಕೆಲಸಗಳು ಇಲ್ಲದೆ ಇರತಕ್ಕ ಜನರು ರೈತರ ಹತ್ತಿರ ದುಡ್ಡುಗಳನ್ನು ವಸೂಲ್ಮಾಡಿ ಅವರು ಈ ವರ್ಷ ಯಾವ ವಿಧವಾದ ಫಸಲನ್ನೂ ಜಮೀನ್ದಾರರಿಗೆ ಸಂದಾಯ ಮಾಡಬೇಕಾದ್ದು ಇಲ್ಲ ಎಂದು ತಪ್ಪು ತಿಳಿವಳಿಕೆಗಳನ್ನು ಕೊಟ್ಟು ಬಹಳ ಅನನುಕೂಲಗಳನ್ನು ಮಾಡಿದರು.

ಸಭಾಪತಿಯವರು.—ಯಾರು ಮಾಡಿದರು ?

ಶ್ರೀ ಟಿ. ವೆಂಕಟರಮಣಯ್ಯ.—ಕೆಲಸ ಇಲ್ಲದೆ ಇರುವ ಜನಗಳು. ಆದ್ದರಿಂದ ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುವುದು ಏನೆಂದರೆ ಯಾವುದಾದರೂ ಕಾನೂನು ಮಾಡಬೇಕಾದರೆ ಕೂಲಂಕಷವಾಗಿ ವಿಮರ್ಶಿಸಿ ಮಾಡಬೇಕು. ಇನ್ನೂ ಹತ್ತು ಹದಿನೈದು ವರ್ಷಗಳಕಾಲ ಯಾವ ವಿಧವಾಗಿಯೂ ಗೇಣಿದಾರರ ವಿಷಯದಲ್ಲಿ ಬೇರೆ ಕಾನೂನು ಮಾಡುವುದಿಲ್ಲ ; ಕಡ್ಡಾಯವಾಗಿ ಇಷ್ಟೇ ಉಳಿಸಿಕೊಳ್ಳುವುದು, ಇಷ್ಟೇ ಬಿಡತಕ್ಕದ್ದು ಎಂದು ಒಂದು ನಿಖರವಾದ ಕಾನೂನು ಮಾಡಿದರೆ ಜನರಿಗೂ ನೆಮ್ಮದಿಯಾಗುತ್ತದೆ; ಮತ್ತು ಜನರು ನಮ್ಮಲ್ಲಿ ಏನು ವಿಶ್ವಾಸ ಇಟ್ಟಿದ್ದಾರೆ ಅದಕ್ಕೂ ಬೆಲೆ ಸಿಕ್ಕಿದ ಹಾಗಾಗುತ್ತದೆ. ಪ್ರತಿಯೊಂದು ವರ್ಷವೂ ಕಾನೂನನ್ನು ಹೊಸದಾಗಿ ಸೇರಿಸಿದರೆ ಜನರು ನಮ್ಮ ವಿಷಯದಲ್ಲಿ ಏನು ವಿಶ್ವಾಸ ಇಟ್ಟುಕೊಂಡಿದ್ದಾರೆ ಅದು ನಶಿಸಿ ಹೋಗುವುದಕ್ಕೆ ಅವಕಾಶವಾಗುತ್ತದೆ. ಸರ್ಕಾರದಲ್ಲಿ ನಾನು ಪ್ರಾರ್ಥಿಸುವುದು ಇಷ್ಟು: ಯಾವ ಒಂದು ಕಾನೂನೇ ಆಗಲೀ ಒಂದು ಖಚಿತವಾದ ಅಭಿಪ್ರಾಯವನ್ನು ನಿರೂಪಿಸಿ ಅದರಂತೆ ಮಾಡತಕ್ಕದ್ದು ಒಳ್ಳೆಯದು. ಇನ್ನು ಸೀಲಿಂಗ್ ವಿಷಯ. ನನ್ನ ಅಭಿಪ್ರಾಯದಲ್ಲಿ ಯಾವಾಗಲೂ ಕೂಡ ಒಬ್ಬ ಮನುಷ್ಯನಿಗೆ ಆದಾಯ ಇಷ್ಟೇ ಬರುತ್ತದೆ ಎಂದು ಹೇಳತಕ್ಕದ್ದು ಬಹಳ ಕಷ್ಟವಾಗುತ್ತದೆ. ಕಾರಣ ಮಳೆ ಬೆಳೆ ಇಲ್ಲದಿರುವ ವರ್ಷ ಏನೂ ಇರುವುದಿಲ್ಲ. ನೀರಾವರಿ ಇರತಕ್ಕ ಕಡೆ ಸರಿಯಾಗಿ ನೀರು ಸೌಕರ್ಯ ಇದ್ದರೆ ಹೆಚ್ಚು ಗೊಬ್ಬರವನ್ನು ಗೋಡುಗಳನ್ನು ಹಾಕಿ ಬಹಳ ಮುತುವರ್ಜಿಯಿಂದ ವ್ಯವಸಾಯ ಮಾಡಿದರೆ ಆಗ ಅವನು ಏನಾದರೂ ಫಲಕಾಣಬಹುದು. ಆದ್ದರಿಂದ ಇಷ್ಟೇ ನಿಖರವಾಗಿ ಒಬ್ಬ ವ್ಯವಸಾಯಗಾರನಿಗೆ ಉತ್ಪತ್ತಿ ಇದೆ ಎಂದು ಹೇಳತಕ್ಕದ್ದು ಯಾರಿಂದಲೂ ಸಾಧ್ಯವಿಲ್ಲ. ಕಾರಣ, ಯಾವ ಖರ್ಚು ವೆಚ್ಚಗಳ ಪಟ್ಟಿಯನ್ನು ಬರೆದು ಇಟ್ಟುಕೊಳ್ಳಲು ಅನುಕೂಲ ಅವನಲ್ಲಿಲ್ಲ. ಇದರ ಮೇಲೆ ಬರೆದು ಇಟ್ಟುಕೊಂಡಿರುವುದನ್ನು ನೋಡಿ ತಿಳಿದುಕೊಳ್ಳುವುದು ಕೂಡ ಅವನಿಗೆ ಬಹಳ ಕಷ್ಟವಾದ ಕೆಲಸ. ವ್ಯವಸಾಯಗಾರರು ವಿದ್ಯಾವಂತರೂ ಆಗಿಲ್ಲದಿರುವುದರಿಂದ ಕಾಫಿ ಪ್ಲಾಂಟೇಷನ್ನು, ಟೀ ಮತ್ತು ರಬ್ಬರ್ ಎಸ್ಟೇಟುಗಳಲ್ಲಿ ಖರ್ಚಿನ ಬಾಬುಗಳನ್ನು ಬರೆಯುವಂತೆ ರೈತನು ಬರೆದಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಆದುದರಿಂದ ಈ ವ್ಯವಸ್ಥೆಯಲ್ಲಿ ಒಂದು ceiling limit ಗಾಗಿ 1,200, 5,400 ರೂಪಾಯಿಗಳು ಎನ್ನತಕ್ಕದ್ದು ಅಷ್ಟು ಹೊಂದಿಕೊಳ್ಳುವುದಿಲ್ಲವೆಂದು ನನ್ನ ಅಭಿಪ್ರಾಯವನ್ನು ತಮ್ಮಮುಂದೆ ಇಟ್ಟಿದ್ದೇನೆ. ಕೊನೆಯದಾಗಿ ಮನುಷ್ಯನು ವಿದ್ಯಾವಂತನಾಗಿ ಅವನ ಇಚ್ಛೆಗೆ ಅನುಸಾರವಾಗಿ ಯಾವ ವೃತ್ತಿಯನ್ನಾದರೂ ಅನುಸರಿಸಬಹುದು. ಅದನ್ನು ಮೊಟಕುಮಾಡಬೇಕು ಎಂದರೆ ಯಾರಿಂದಲೂ ಸಾಧ್ಯವಿಲ್ಲ. ಎಲ್ಲ ಕಡೆಗಳಲ್ಲಿ ಅವನು ತನ್ನ ಸ್ವಂತ ಸಾಮರ್ಥ್ಯಗಳಿಂದಲೇ ತನ್ನ ಸಂಪಾದನೆಯನ್ನು ಮಾಡುತ್ತಾನೆ. ನನ್ನ ಸ್ವಂತ ಅನುಭವದಿಂದ ಹೇಳುವುದಾದರೆ, ಮೈಸೂರಿನ ಹತ್ತಿರ ಒಬ್ಬ ಜಮೀನುದಾರರಲ್ಲಿ ಒಂದು ಜಮೀನಿತ್ತು. ನಾನು ನೋಡಿದ ಹಾಗೆ ಆ ಜಮೀನಿನಿಂದ ಸಾಲಿಯಾನ 1,800 ರೂಪಾಯಿಗಳ ಗುತ್ತಿಗೆ ಬರುತ್ತಿತ್ತು. ಅಲ್ಲಿದ್ದ ರೈತರು ಎಲ್ಲರೂ ಸೇರಿಕೊಂಡು ಸರಿಯಾದ ಖರ್ಚನ್ನು ಸಕಾಲದಲ್ಲಿ ಮಾಡದೆ ಐದಾರುವರ್ಷಗಳಲ್ಲೇ ಅದರ ಗುತ್ತಿಗೆಯನ್ನು ನಾಲ್ಕು ನೂರು ರೂಪಾಯಿಗಿಳಿಸಿದರು. ಹೀಗಾದಾಗ ಆ ಜಮೀನುದಾರರು ಇದರ ಉತ್ಪತ್ತಿ ಸರಿಯಾಗಿಲ್ಲವೆಂದು ಮಾರಬೇಕಾಗಿಬಂತು, ಮಾರಿದರು. ಮಾರಿದಮೇಲೆ ಮತ್ತೊಬ್ಬರು ಸ್ವಂತವಾಗಿ ಈ ವ್ಯವಸಾಯದಲ್ಲಿ ಅನುಭವವಿರುವವರು ಈ ಜಮೀನನ್ನು ಮಾಡುತ್ತಿದ್ದಾರೆ. ಇವರು ಅದೇ ರೈತರಿಂದಲೇ ಕೆಲಸ ಮಾಡಿಸುತ್ತಿದ್ದಾರೆ. ಇದಕ್ಕಾಗಿ ಹೇರಳವಾಗಿ ದುಡ್ಡನ್ನು ಖರ್ಚುಮಾಡಿ ಇದೇ ರೀತಿಯಾಗಿ ಕೆಲಸ ಮಾಡುತ್ತಿರುವುದರಿಂದ ಅದರ ಉತ್ಪತ್ತಿ ಹೆಚ್ಚಾಗಿದೆ. ಹೀಗೆ ಸ್ವಂತ ಹಿಡುವಳಿಗೆ ಕೊಟ್ಟಾಗ ನನ್ನ ಅನುಭವದಿಂದ ಹೇಳುವುದಾದರೆ, ಬಂಡವಾಳವನ್ನು ಹಾಕಿ ಸ್ವಲ್ಪ ಮುಂದುವರಿಸುವಂತೆ ಮಾಡಿದರೆ ಅದರಿಂದ ವ್ಯವಸಾಯ ಉತ್ತಮಗೊಳ್ಳುತ್ತದೆ. ವ್ಯವಸಾಯದಲ್ಲಿ ಸಕಾಲದಲ್ಲಿ ಕೆಲಸ ಮಾಡದಿದ್ದರೆ ಸರಿಯಾದ ಫಲ ದೊರಕುವುದಿಲ್ಲ. ಮಳೆ ಎಂಟು ದಿವಸ ಮೊದಲು ಬಂದರೂ ಸರಿ ಹೋಗುವುದಿಲ್ಲ. ಮಳೆ ಬಂದು ಮೂರು ದಿನಗಳಲ್ಲಿ ಸರಿಯಾಗಿ ಬಿತ್ತನೆ ಕೆಲಸವನ್ನು ಮಾಡದಿದ್ದರೆ ಆ ವ್ಯವಸಾಯ ಎಲ್ಲ ಹಾಳಾಗುತ್ತದೆ. ಕೂಲಿ ಆಳುಗಳನ್ನು ನೇಮಿಸಿ ವ್ಯವಸಾಯವನ್ನು ಮಾಡಬೇಕಾದರೆ ಯಾರೇ ಆಗಲೀ ಬರಿಯ ಕೈಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ರೈತರನ್ನು ಉದ್ಧಾರ ಮಾಡಬೇಕು ಎಂದರೆ ಅವರಿಗೆ ತಕ್ಕಹಾಗೆ ಆಧುನಿಕ ಸಕಲ ಸೌಲಭ್ಯಗಳನ್ನು ಒದಗಿಸದೇ ಇದ್ದರೆ ಯಾವ ರೈತನಿಂದಲೂ ಇದರಲ್ಲಿ ಎಷ್ಟು ಉತ್ಪತ್ತಿ ಸಿಕ್ಕಬೇಕೋ ಅಷ್ಟು ಉತ್ಪನ್ನವನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಈ ರೀತಿಯಾದ ಎಲ್ಲ ಸೌಕರ್ಯಗಳನ್ನು ರೈತನಿಗೆ ಕೊಟ್ಟರೆ ಹೆಚ್ಚು ಉತ್ಪನ್ನವನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕಾಗಿ ವಿಪುಲವಾದ ಖರ್ಚು ಮಾಡದೇ ಇದ್ದರೆ ಹೆಚ್ಚಿನ ಉತ್ಪನ್ನವನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಲ್ಲಿ ಸರಕಾರ ಯೋಚನೆಮಾಡಿ ಎಲ್ಲ ವಿಷಯಗಳನ್ನೂ ಪುಷ್ಟೀಕರಿಸಿ ಮುಂದೆ ಮಾಡತಕ್ಕ ಕಾನೂನನ್ನು ಒಂದು ಅತ್ಯುತ್ತಮವಾದ ಕಾನೂನನ್ನಾಗಿಮಾಡಿ ಜನರಿಗೆ ಯಾವ ವಿಧವಾದ ನ್ಯೂನತೆಗಳೂ ಇಲ್ಲದಂತೆ ಮಾಡತಕ್ಕದ್ದು ಒಳ್ಳೆಯದು ಎಂದು ಇಷ್ಟನ್ನು ಹೇಳಿ, ನನಗೆ ಇಷ್ಟು ಮಾತುಗಳನ್ನು ಆಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳನ್ನು ತಮ್ಮಲ್ಲಿ ಅರ್ಪಿಸಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

ಸಭಾಪತಿಯವರು.—ಈಗ ಉಪಾಹಾರಕ್ಕಾಗಿ ಅರ್ಧ ಗಂಟೆಕಾಲ ಎದ್ದು ಮತ್ತೆ ನಾಲ್ಕು ಗಂಟೆಗೆ ಸೇರೋಣ.

The House adjourned for recess at Thirty Minutes past Three of the Clock and re-assembled at Four of the Clock.

[MR. CHAIRMAN in the Chair]

ಶ್ರೀ ಕೆ. ಎಂ. ನಂಜುಂಡಪ್ಪ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ನಾನು ಜತ್ತಿ ಸಮಿತಿಯ ವರದಿಯ ಮೇಲೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಈಗಾಗಲೇ ನನ್ನ ಮಾನ್ಯ ಮಿತ್ರರನೇಕರು ಮೂರು ದಿವಸಗಳಿಂದಲೂ ಅನೇಕ ಸಂಗತಿಗಳನ್ನು ಕೂಲಂಕಷವಾಗಿ ತಿಳಿಸಿರುತ್ತಾರೆ. ನಾನು ಈಗ ಹೆಚ್ಚಾಗಿ ಹೇಳಲು ಬಯಸುವುದಿಲ್ಲ. ಕೆಲವು ವಿಷಯಗಳನ್ನು ಮಾತ್ರ ಸಭೆಯ ಗಮನಕ್ಕೆ ತರುತ್ತೇನೆ.

ಭೂಮಿಯನ್ನು ಭೂಮಾಲಿಕರೇ ಮಾಡಬೇಕೇ ಹೊರತು ಭೂಮಿಯು ಸಮಾಜಕ್ಕೆ ಸೇರತಕ್ಕದ್ದಲ್ಲ. ಆ ಸಮಾಜಕ್ಕೆ ಸೇರಿದವರು ಇಟ್ಟುಕೊಳ್ಳುವುದಿಲ್ಲ. ಏಕೆಂದರೆ, ಕಷ್ಟಪಟ್ಟು ವರ್ಷಗಟ್ಟಳೆ ಮಾಡಿರುವ ಭೂಮಿಯನ್ನು ಬಿಡುವುದು ಸರಿಯಲ್ಲ. ನನ್ನ ಸ್ವಂತ ಆಸ್ತಿಯೆಂದು ಬಹಳ ತೊಂದರೆಯಿಂದ ಸಾಗುವಳಿ ಮಾಡಿರುವ ಭೂಮಿಯನ್ನು ಹೀಗೆ ಹೋಗಲು ಬಿಡಬಾರದು. ಸಂಪಾದನೆ ಮಾಡಿರತಕ್ಕ ಜಮೀನು ಭೂ ಮಾಲೀಕನ ಬಳಿಯೇ ಇರಬೇಕಾಗಿದೆ. ಸಮಾಜಕ್ಕೆ ಸೇರುವುದಕ್ಕೆ ಅವಕಾಶವಿಲ್ಲ. ಸಮಾಜಕ್ಕೆ ಸೇರಬೇಕು, ಸಮಾಜಕ್ಕೆ ಕೊಡಬೇಕು ಎಂದು ಬಹಳ ಸುಲಭವಾಗಿ ಹೇಳಬಹುದು. ಆದರೆ ಸಮತಾವಾದ ಸಮಾಜ ಮಾಡಬೇಕೆಂದು ಹೇಳಿ ಭೂ ಮಾಲಿಕನು ಭೂಮಿಯನ್ನು ಬಿಟ್ಟುಬಿಡುವುದಿಲ್ಲ. ಅವನು ಸ್ವಂತವಾಗಿ ತನ್ನ ಜಮೀನಿಗಾಗಿ ಹೆಚ್ಚಿನ ವೆಚ್ಚವನ್ನು ಖರ್ಚು ಮಾಡಿರುವುದರಿಂದ ಆ ಜಮೀನಿನ ಜವಾಬ್ದಾರಿಯೆಲ್ಲ ಅವನೊಬ್ಬನಿಗೇ ಸೇರಿದ್ದು. ಆದರೆ ನೌಕರರಾಗಿರುವ ಪ್ರತಿಯೊಬ್ಬರೂ ಜಮೀನನ್ನು ಸಮಾಜಕ್ಕೆ ಕೊಡಬೇಕು ಎಂದು ಹೇಳುವುದನ್ನು ನೋಡಿದರೆ ಬಹಳ ಶೋಚನೀಯವಾಗಿ ಕಾಣುತ್ತಿದೆ. ಆದರೆ ಈ ಟೆನೆನ್ಸಿ ಆಕ್ಟನ್ನು ಜಾರಿಗೆ ತಂದಾಗ ಏನೇನು ಪರಿಣಾಮವಾಯಿತು ಎನ್ನುವುದನ್ನು ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ನನ್ನ ಡಿಸ್ಟ್ರಿಕ್ಟಾದ ಕೋಲಾರದಲ್ಲೇ ಇದರಿಂದ ಬಹಳ ಕಷ್ಟಗಳಾದುವು. ಅಲ್ಲಿಯ ತಾಲ್ಲೂಕು ಆಫೀಸುಗಳಲ್ಲಿ ಇದರ ವಿವಾದದ ಕೇಸುಗಳ ಫೈಸಲಾತಿಗಾಗಿ ಪರಿಷೆಯಂತೆ ಜನ ಸೇರುತ್ತಿದ್ದರು. ಆದರೆ ಒಂದು ಕೇಸಾದರೂ ಕೂಡ ಇತ್ಯರ್ಥವಾಗುತ್ತಿರಲಿಲ್ಲ. ಭೂ ಮಾಲೀಕನಿಗೂ ಉಳುವವನಿಗೂ ಹೋಲಿಸಿದರೆ ಬಹಳ ವ್ಯತ್ಯಾಸಗಳಿರುತ್ತವೆ. ಹದಿನೈದು ಜನ ಇರತಕ್ಕ ಒಂದು ಸಂಸಾರದಲ್ಲಿ ಹಳ್ಳಿಯಲ್ಲಿ ಎಲ್ಲರೂ ವ್ಯವಸಾಯವನ್ನೇ ನಂಬಿರುವುದಿಲ್ಲ. ಒಬ್ಬ ವಿದ್ಯಾವ್ಯಾಸಂಗ ಮಾಡಲು ಹೋಗುತ್ತಾನೆ. ಅಂತಹವನನ್ನು ಓದುವುದರಿಂದ ಬಿಡಿಸಿ ಜಮೀನನ್ನು ಉಳಲಿಕ್ಕೆ ಎಂದು ಕರೆದು ತಂದರೆ ಅವನಿಂದ ಈ ಭೂಮಿಯ ಕೆಲಸ ಮಾಡಲು ಸಾಧ್ಯವಿಲ್ಲ. ಜಮೀನುದಾರರಾದವರಿಗೆ ಭೂಮಿಯನ್ನು ರೈತರಿಂದ ಮಾಡಿಸುವುದು ಎಷ್ಟು ಕಷ್ಟ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ. ರೈತರಾದವರು ಪ್ರತಿ ವರ್ಷವೂ ಜಮೀನಿಗಾಗಿ ಹೆಚ್ಚು ವೆಚ್ಚವನ್ನು ಮಾಡಬಾರರು. ಭೂ ಮಾಲೀಕನಾದವನೇ ಈ ವೆಚ್ಚಗಳನ್ನೆಲ್ಲ ಹೊತ್ತು ಕಷ್ಟಪಟ್ಟು ಭೂಮಿಗಾಗಿ ಕಷ್ಟಪಡುತ್ತಿರುತ್ತಾನೆ. ಅಂತಹ ಜಮೀನನ್ನು ನೀವು ಸಮಾಜಕ್ಕೆ ಬಿಟ್ಟುಕೊಡು ಎಂದು ಸುಲಭವಾಗಿ ಹೇಳಬಹುದು. ಹಾಗೆ ನಾವು ಕೊಡುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಈ ಜತ್ತಿ ಸಮಿತಿಯ ರಿಪೋರ್ಟಿನಿಂದ ದೇಶಕ್ಕೆ ಹಾನಿಕರವೇ ಹೊರತು ಅದರಿಂದ ಯಾವ ಪ್ರಯೋಜನವೂ ಇಲ್ಲ.

ಸ್ವಾಮಿ, 1,200 ರೂಪಾಯಿಗಳಷ್ಟು ವರಮಾನ ಐದು ಜನಗಳಿರುವ ಒಂದು ಸಂಸಾರಕ್ಕೆ ಎನ್ನುವುದೇನೋ ಒಪ್ಪತಕ್ಕದ್ದೇ. ನೂರು ರೂಪಾಯಿಗಳ ಸಂಬಳವೇ ಹೆಚ್ಚು ಎನ್ನತಕ್ಕ ಜನಗಳು ಒಬ್ಬ ರೈತನಿಗೆ 20 ರೂಪಾಯಿಗಳ ವರಮಾನ ಸಾಕೇ ಎನ್ನುವುದನ್ನು ಯೋಚಿಸಬೇಕು. 5,400 ಎಂದು ಸೀಲಿಂಗೇನೋ ಇಟ್ಟಿದ್ದಾರೆ.

ನಮ್ಮ ತಾಲ್ಲೂಕಿನ ಒಂದು ಹಳ್ಳಿಯಲ್ಲಿ 130 ಜನರ ಒಂದು ಸಂಸಾರವಿದೆ. ಅವರ ವಿಷಯವಾಗಿ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಡಿ. ವೆಂಕಟರಾಮಯ್ಯನವರು ಹೇಳಿದ್ದಾರೆ. ನೂರು ಜನಗಳಿರುವ ಜನಗಳೆಲ್ಲ ಸೇರಿ ಒಂದು ಸಂಸಾರದವರಾಗಿದ್ದಾರೆ. ಅವರಲ್ಲಿ ಇಪ್ಪತ್ತೈದು ಜನ ಈ ಗೇಣಿದಾರಿ ಸಮಿತಿಯ ವರದಿಯಂತೆ ಬೇರೆಯಾಗಬೇಕಾಗುತ್ತದೆ. ಅದರಿಂದ ಅವರ ಮನೆಯೆಲ್ಲ ಭಾಗವಾಗಬೇಕಾಗುತ್ತದೆ, ಅಂತಹದನ್ನು ಉಳಿಸಬೇಕು ; ಮತ್ತು ಉಳಿಸುವುದಕ್ಕೆ ಇದರಲ್ಲಿರುವ ನಿರ್ಬಂಧದಿಂದ ಆಗುತ್ತಿಲ್ಲ. ಸರಕಾರ ಜಮೀನನ್ನೇನೋ ತೆಗೆದುಕೊಳ್ಳಲಿ ಎಂದರೆ, ಅಂತಹ ಒಂದು ಸಂಸಾರಕ್ಕೆ ಹೇಗೆ ಪರಿಹಾರವನ್ನು ಕೊಡುತ್ತಾರೆ. ನನ್ನಂತಹವನೊಬ್ಬನಿಗೇ ಈಗಿನ ಕಾಲದಲ್ಲಿ 300 ರೂಪಾಯಿಗಳ ಸಂಬಳವೇ ನನ್ನ ಜೀವನಕ್ಕೆ ಸಾಕಾಗುವುದಿಲ್ಲ, ಅದಕ್ಕಾಗಿ ಇನ್ನು ಹೆಚ್ಚಾಗಿ ಕೊಡಬೇಕಾಗಿದೆ.

ಹೀಗೆ ಸಮಾಜದಲ್ಲಿ ಕೆಲವರ ಅಂತರವನ್ನು ತಗ್ಗಿಸಿ ಮತ್ತೆ ಕೆಲವರ ಅಂತರವನ್ನು ಹೆಚ್ಚುಮಾಡುವುದರಲ್ಲಿ ಯಾವ ನ್ಯಾಯವಿದೆ ? ಬಾಕಿ ಜಮೀನ್ದಾರರ ವಿಚಾರ ಹಾಗಿರಲಿ, ನನ್ನ ವಿಚಾರವನ್ನೇ ನಾನು ಹೇಳುವುದಾದರೆ ನಾನೂ ಒಬ್ಬ ದೊಡ್ಡ ಜಮೀನ್ದಾರನೆ. ನಾಲ್ಕು ಪಂಪುಗಳನ್ನು ನನ್ನ ಜಮೀನಿಗೆ ಹಾಕಿಸಿ ವ್ಯವಸಾಯ ಮಾಡಿಸುತ್ತಿದ್ದೇನೆ. ಇಷ್ಟು ಆಸ್ತಿಯನ್ನು ಸಂಪಾದಿಸಬೇಕಾಗಿದ್ದರೆ ನಾನೂ ನನ್ನ ಪೂರ್ವಿಕರೂ ಅದೆಷ್ಟು ಕಷ್ಟಪಟಿದ್ದೇವೆಂಬುದು ನಮಗೇ ಗೊತ್ತು. ಆದರೂ ಈ ನಮ್ಮ ಆಸ್ತಿಯೆಲ್ಲ ಪೇಟೆಯಲ್ಲಿರತಕ್ಕ ಒಬ್ಬ ಸಾಹುಕಾರರ ಕಾರಿನ ಬೆಲೆಗೆ ಸಮವಿಲ್ಲ. ಹೀಗೆ ನಾವು ಎಷ್ಟೇ ದೊಡ್ಡ ಜಮೀನ್ದಾರರಾದಾಗ್ಯೂ ನಮಗೆ ಒಂದು ಕಾರನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಏನೋ ಈ ರೀತಿಯ ಒಂದು ಸ್ಲೋಗನ್ನೆಬ್ಬಿಸಿ ಜಮೀನಿಲ್ಲದ ಕೆಲವು ಬಡವರಿಗೆ ಜಮೀನು ಕೊಟ್ಟರೆ ಮುಂದೆ ಅವರಿಂದ ಸುಲಭವಾಗಿ ಓಟನ್ನು ಪಡೆಯಲು ಅನುಕೂಲವಾಗುತ್ತದೆಂದು ಹೇಳಿ ಈರೀತಿ ಮಾಡತಕ್ಕದ್ದು ಯಾವ ನ್ಯಾಯ ? ಈಗ ಸರ್ಕಾರದವರು ನ್ಯಾಷನಲ್ ಡೆವಲಪ್‌ಮೆಂಟ್ ಸ್ಕೀಂ, ಕಮ್ಯೂನಿಟಿ ಪ್ರಾಜೆಕ್ಟ್ ಮುಂತಾದುದರ ಬಗ್ಗೆ ಏಳು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದರೆ ಅದರಿಂದ ದೇಶಕ್ಕಾಗಿರುವ ಪ್ರಯೋಜನವೇನು? ಬಡವನಿಗೇನು ಉದ್ಧಾರಮಾಡಿದಂತಾಯಿತು? ಆ ಹಣವೆಲ್ಲ ಕೇವಲ ಕಾರು, ಆಫೀಸರುಗಳ ಟೂರಿಂಗಿಗೇ ಆಗಿಹೋಯಿತು. ಆ ಯೋಜನೆಗಳಲ್ಲಿ ಏನೊ ಒಂದು ಮಕ್ಕೀಕಾಮಕ್ಕಿ ಕೆಲಸ ನಡೆಯುತ್ತಿದೆ. ನಮ್ಮ ಜಿಲ್ಲೆಯಲ್ಲಿ ಈ ಸ್ಕೀಂನ ಬಗ್ಗೆ ರಚಿಸಿರತಕ್ಕ ಸಮಿತಿಯಲ್ಲಿ

(ಶ್ರೀ ಕೆ. ಎಂ. ನಂಜುಂಡಪ್ಪ)

ನಾನೂ ಕೂಡ ಒಬ್ಬ ಸದಸ್ಯನಾಗಿದ್ದೇನೆ. ಶಿಡ್ಲಘಟ್ಟದಿಂದ ಗೋರಿಬಿದನೂರಿಗೊಂದು ಟಪ್ಪಾಲು ಕಳಿಸುವುದಕ್ಕೆ ಅದಕ್ಕೇ ಒಂದು ಜೀಪ್ ಬೇಕಾಗಿದೆ. ಇಲ್ಲಿ ಸರ್ಕಾರದವರೇನೋ ಸುಲಭವಾಗಿ ಪ್ರತಿಯೊಂದು ಕೆಲಸವನ್ನೂ ಕೊ-ಆಪರೇಟಿವ್ ಬೇಸಿಸ್ ಮೇಲೆ ನಡೆಸುವುದುತ್ತಮ ಎಂದು ಹೇಳುತ್ತಾರೆ. ಹಳ್ಳಿಗಳಲ್ಲಿ ಒಂದು ಮನೆಯವರೇನಾದರೂ ಸ್ವಲ್ಪ ಕಸವನ್ನು ಪಕ್ಕದ ಮನೆಯವರ ಕಡೆಗೆ ಒತ್ತರಿಸಿದ್ದರೆ ಅದಕ್ಕೇ ಎಷ್ಟೋ ದೊಡ್ಡ ಜಗಳಗಳಾಗಿವೆ. ಹಾಗೆ ಸರ್ಕಾರದವರಿಗೆ ಜಮೀನಿಲ್ಲದ ಬಡಜನರ ಬಗ್ಗೆ ಒಂದು ಕನಿಕರವಿದ್ದರೆ ಅವರ ಸುಪರ್ದಿನಲ್ಲಿರುವ ಹತ್ತಾರು ಲಕ್ಷ ಪಾಳುಬಿದ್ದಿರುವ ಬಂಜರ್ ಭೂಮಿಯನ್ನು ಅವರಿಗೆ ಕೊಟ್ಟು ಅಲ್ಲಿ ಕೋ-ಆಪರೇಟೀವ್ ಬೇಸಿಸ್ ಮೇಲೆ ಕೆಲಸ ನಡೆಸುವಂತೆ ಮಾಡಲಿ, ಅವರಿಗೆ ಮನೆಗಳನ್ನು ಕಟ್ಟಿಸಿಕೊಡಲಿ, ಬಾವಿಗಳನ್ನು ತೋಡಿಸಿಕೊಡಲಿ, ಅದಕ್ಕೆ ಯಾರೂ ಅಡ್ಡಿಬರುವುಲ್ಲ. ಅಷ್ಟು ಶಿವಾಯಿ ಈ ಕಾರ್ಯಕ್ಕೆ ಊರಿನವರ್ಯಾರೂ ತಮ್ಮ ಜಮೀನನ್ನು ಬಿಟ್ಟು ಕೊಡುವುದಕ್ಕೆ ಈ ದಿವಸ ತಯಾರಾಗಿಲ್ಲ. ಈ ಸಮಿತಿಯವರು ವ್ಯವಸಾಯಗಾರನಿಗೆ ಒಂದು ಸಂಸಾರಕ್ಕೆ ಒಂದು ವರ್ಷಕ್ಕೆ 1,200 ರೂಪಾಯಿಗಳ ಆದಾಯಬಂದರೆ ಸಾಕೆಂದು ಹೇಳಿದ್ದಾರೆ. ಆದರೆ ಇದು ತೀರಾ ಕಡಮೆಯೆಂದು ನಾನು ಹೇಳುತ್ತೇನೆ. ಐದು ಜನರಿರತಕ್ಕಂಥ ಒಂದು ಸಂಸಾರಕ್ಕೆ ತಿಂಗಳೊಂದಕ್ಕೆ ತಲಾ ಒಂದು ನೂರು ರೂಪಾಯಿಗಳಂತೆ ಒಂದು ವರ್ಷಕ್ಕೆ ಆರು ಸಾವಿರ ರೂಪಾಯಿಗಳ ವರಮಾನ ಬರುವಂತೆ ನಿಗದಿಮಾಡಿ, ಇನ್ನೂ ದೊಡ್ಡ ಸಂಸಾರಗಳಿಗೆ ಒಂದು ವರ್ಷಕ್ಕೆ ಕನಿಷ್ಠಪಕ್ಷ 12 ಸಾವಿರ ರೂಪಾಯಿಗಳ ವರಮಾನ ಬರುವಂತೆ ಭೂಮಿಯ ಮಿತಿಯನ್ನು ನಿಗದಿಮಾಡಬೇಕೆಂದು ಹೇಳುತ್ತೇನೆ. ಜಮೀನಿಲ್ಲದವರಿಗೆ ಜಮೀನು ಕೊಡಿ. ಈ ಸಮಿತಿಯವರ ವರದಿಯಲ್ಲಿ ಏನೂ ಇಲ್ಲ. ಏನೋ ಸರ್ಕಾರಕ್ಕೆ ಒಂದು ವರದಿ ಒಪ್ಪಿಸಬೇಕಲ್ಲ ಎಂದು ಹೀಗೆಲ್ಲ ಬರೆದು ಕೊಟ್ಟಿದ್ದಾರೆ. ಈ ಜತ್ತಿ ಸಮಿತಿಯವರು ನಮ್ಮ ಕೋಲಾರಕ್ಕೂ ಬಂದಿದ್ದರು. ಅಲ್ಲಿದ್ದುದೆಲ್ಲ ಕೇವಲ ಅರ್ಧಗಂಟೆ ಕಾಲ ಮಾತ್ರ. ಅನಂತರ ಅವರು ತಮಗೆ K.G.F. ನ ಪ್ರೋಗ್ರ್ಯಾಂ ಇದೆಯೆಂದು ಹೇಳಿ ಹೋಗಿಬಿಟ್ಟರು. ಹಾಗೆ ಇವರು ಅಲ್ಲಿಗೆ ಬಂದು ಟ್ರಾವಲರ್ಸ್ ಬಂಗಲೆಯಲ್ಲಿ ಹಾಯಾಗಿ ಅರ್ಧಗಂಟೆಯ ಕಾಲವಿದ್ದು ಮುಂದಕ್ಕೆ ಪ್ರಯಾಣ ಬೆಳಸಿದರು. ಆದರೆ ನನಗೆ ಶ್ರೀ ಜತ್ತಿಯವರ ಪರಿಚಯವೇ ಇರಲಿಲ್ಲ-ಅವರನ್ನು ನಾನು ನೋಡೇ ಇರಲಿಲ್ಲ. ಮೊನ್ನೆತಾನೆ ನಾನು ಅವರನ್ನು ಇಲ್ಲೇ ನೋಡಿದೆ. "ನೀವೇನೇ ಸ್ವಾಮಿ ಈ ಒಂದು ವರದಿಯನ್ನು ಬರೆದು ಸರ್ಕಾರಕ್ಕೆ ಒಪ್ಪಿಸಿದವರು" ಎಂಬುದಾಗಿ ಕೇಳಿದೆ. ಆದಕ್ಕೆ ಅವರು ಹೌದು, ಸರ್ಕಾರದವರು ಈ ವಿಚಾರದಲ್ಲಿ ಒಂದು ವರದಿಯನ್ನು ಒಪ್ಪಿಸಬೇಕೆಂದು ಒಂದು ಸಮಿತಿಯನ್ನು ಮಾಡಿದರು, ಆದ್ದರಿಂದ ನಾವು ಒಂದು ವರದಿಯನ್ನು ಒಪ್ಪಿಸಬೇಕಾಗಿತ್ತು. ಅವರ ಪ್ರಕಾರ ಈ ವರದಿಯನ್ನು ಒಪ್ಪಿಸಿದ್ದೇನೆಂದು ಹೇಳಿದರು. ಆದರೆ ಇದರಿಂದ ಸರ್ಕಾರಕ್ಕಾದುದೇನೆಂದರೆ 20-30 ಸಾವಿರ ರೂಪಾಯಿಗಳ ಖರ್ಚು. ಆದರೆ ನಾನೇ ಇಂಥ ಕಮಿಟಿಯಲ್ಲಿದ್ದಿದ್ದರೆ ಇಂಥ ವರದಿ ಒಪ್ಪಿಸುವುದಕ್ಕೆ ಬದಲಾಗಿ ರಾಜಿನಾಮೆ ಕೊಟ್ಟು ಮನೆಗೆ ಬರುತ್ತಿದ್ದೆನು. ವ್ಯವಸಾಯ ಮಾಡದಿರತಕ್ಕವರೆಲ್ಲ ಜಮೀನನ್ನು ಬಿಟ್ಟುಕೊಡಬೇಕು; ಉಳುವವನೇ ಭೂಮಿಗೆ ಒಡೆಯನಾಗಬೇಕು ಎಂದರೇನು ಅರ್ಥ? ಹಾಗಾದರೆ ವ್ಯವಸಾಯಮಾಡದವರಿಗಾರಿಗೂ ಭೂಮಿ ಇರಲೇ ಕೂಡದ್ದೋ? ಈ ಒಂದು ಗಾಬರಿಯಿಂದ ನನ್ನ ಮಕ್ಕಳ ವಿದ್ಯಾಭ್ಯಾಸ ಹೋಯಿತು. ಅಲ್ಲಿಗಾದರೂ ಶಾಂತಿಯಿದೆಯೇ ಎಂದರೆ ಯಾರೇ ಆಗಲೀ ಇಷ್ಟು ಭೂಮಿಗಿಂತ ಜಾಸ್ತಿ ಇಟ್ಟುಕೊಳ್ಳಬಾರದೆಂದು ಹೇಳಿದರೆ ಆಗ ನನ್ನ ಜಮೀನೂ ಹೋಗುತ್ತದೆ. ಇದೇನು ನ್ಯಾಯವೋ ನಾನು ಕಾಣೆ. ವ್ಯವಸಾಯಗಾರರಿಗೆ ಯಾರಿಗೆ ಭೂಮಿಯಿಲ್ಲವೋ ಅಂಥವರಿಗೆ ಸರ್ಕಾರದವರು ತಮ್ಮ ಕೈಯಲ್ಲಿರುವ ಭೂಮಿಯನ್ನು ಕೊಡಲಿ. ಆದನ್ನು ಬಿಟ್ಟು ಜಮೀನ್‌ದಾರರಲ್ಲಿರತಕ್ಕ ಜಮೀನನ್ನು ನೀವು ಬೇರೆಯವರಿಗೆ ಉಳಲು ಭೂಮಿಯಿಲ್ಲದವರಿಗೆ ಬಿಟ್ಟುಕೊಡಬೇಕೆಂದರೆ ಅದು ಹೇಗೆ ಸಾಧ್ಯ? ಮೊನ್ನೆತಾನೆ ನಾನು ನಮ್ಮ ಗ್ರಾಮದಲ್ಲಿ ಬೇರೆಯವರೊಬ್ಬರ ಜಮೀನನ್ನು ಐದು ಸಾವಿರಕ್ಕೆ ಕೊಂಡಿದ್ದೇನೆ. ಅದಕ್ಕೀಗಾಗಲೇ 15 ಸಾವಿರಕ್ಕೂ ಮೇಲ್ಪಟ್ಟು ಖರ್ಚುಮಾಡಿದ್ದೇನೆ. ಆದರೆ ಅಲ್ಲೇ ಇನ್ನು 200-300 ಎಕರೆ ಜಮೀನು ಖರೀದಿಗಿದೆ: ಆದರೆ ಅಲ್ಲಿ ಕೊಳ್ಳತಕ್ಕವರೇ ಇಲ್ಲ: ಏಕೆಂದರೆ ಸರ್ಕಾರದವರು ಪುಕ್ಕಟೆಯಾಗಿ ಜಮೀನು ಕೊಡಿಸುತ್ತಾರೆಂಬ ಆಸೆಯಿಂದ ಜನರು ತೆಪ್ಪಗಿದ್ದಾರೆ. ಸರ್ಕಾರದವರು ಒಂದು ವೇಳೆ ಹಾಗೆ ಜಮೀನನ್ನು ಪುಕ್ಕಟೆಯಾಗಿ ಕೊಡಬಹುದು. ಆದರೆ ನಾಳೆ ಯಾವ ಸಂಸ್ಥೆಯವರೂ ಅವರಿಗೆ ಒಂದು ಕಾಸನ್ನೂ ಕೂಡ ಸಾಲ ಕೊಡುವುದಿಲ್ಲ. ಸರ್ಕಾರಕ್ಕೇ ಒಂದು ವೇಳೆ ಅವನು ಸಾಲಕ್ಕೆ ಅರ್ಜಿ ಹಾಕಿಕೊಂಡರೂ—ಅವರು ಸಾಲಕೇಳತಕ್ಕ ಆಸ್ತಿಗೆ ಬೆಲೆಯೇನೆಂದು ಕೇಳುತ್ತಾರೆ. ಅದಕ್ಕೇನು ಮಾಡುವುದು? ಅದಕ್ಕೆ ಸಾಲಕೊಡುವವರು ಅವನಿಗೇನಯ್ಯ, ಆ ಜಮೀನನ್ನು ಸರ್ಕಾರದವರು ಪುಕ್ಕಟೆಯಾಗಿ ಕೊಟ್ಟಿದ್ದಾರೆ, ಅವನಿಗೆಲ್ಲಿ ಸಾಲಮಂಜೂರು ಮಾಡುವುದಕ್ಕಾಗುತ್ತದೆ ಎಂದು ಕೇಳುತ್ತಿದ್ದಾರೆ. ಅಲ್ಲಿಗೆ ಆ ಬಡವನ ಉದ್ಧಾರವಾಯಿತೇನು? ಹಾಗಿಲ್ಲದೆ ಜಮೀನಿನ ಕ್ರಯಪತ್ರದಲ್ಲಿ ಅದರ ಬೆಲೆ ಆರು ಸಾವಿರ ಎಂದು ಹಾಕಿದ್ದರೆ ಆಗ ಯಾರಾದರೂ ಅದಕ್ಕೆ ಸಾಲಕೊಟ್ಟಾರು. ಹೀಗಿರುವುದರಿಂದ ಈ ನಿಮ್ಮ ಯೋಜನೆಯಲ್ಲಿ ನಿರ್ಗತಿಕನು ಇನ್ನೂ ನಿರ್ಗತಿಕನಾಗುತ್ತಾನೆಯೇ ಶಿವಾಯಿ ಅವನೇನೂ ಗತಿಕನಾಗುವುದಿಲ್ಲ. ಹೀಗೇ ನೀವು ಹೇಳುವುದೆಲ್ಲ ಒಂದು, ಮಾಡುವುದು ಮತ್ತೊಂದು. ಈ ದಿವಸ ಸರ್ಕಾರಕ್ಕೆ ಯಾರೇ ಸಾಲಕ್ಕಾಗಿ ಅರ್ಜಿಹಾಕಲಿ ಅದುಇಂಡಸ್ಟ್ರಿಯಲ್ ಬಗ್ಗೆ ಕೇಳಿರತಕ್ಕ ಸಾಲವೇ ಆಗಿದ್ದರೂ ಸಾಲಕೇಳತಕ್ಕವನಿಗೆ ಆಸ್ತಿಯಿದ್ದೇತೀರಬೇಕು. ಇಂಥ ಪರಿಸ್ಥಿತಿಯಲ್ಲಿ ಒಬ್ಬನ ಆಸ್ತಿಯನ್ನು ಕಿತ್ತು ಇನ್ನೊಬ್ಬನಿಗೆ ಕೊಡಲು ಸಾಧ್ಯವಿದೆಯೇ ಎಂದು ಕೇಳುತ್ತೇನೆ. ಹಳ್ಳಿಗಳಕಡೆ ಏನಾದರೂ ಒಬ್ಬ ಜಮೀನ್ದಾರನಿಗೆ ಒಂದು ಎಕರೆ ಜಮೀನೇನಾದರೂ ಈ ರೀತಿ ಕಿತ್ತುಕೊಂಡಿದ್ದೇ ಆದರೆ ಪಟ್ಟಣಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿರತಕ್ಕ ಮನೆಯ ಮಾಲೀಕರಿಗೆ ಎಂದಿಗೂ ಉಳಿಗಾಲವಿಲ್ಲ. ಅವನು ಈ ದಿವಸ ಮನೆಗಳನ್ನು ಯಾರ್ಯಾರಿಗೆ ಬಾಡಿಗೆಗೆ ಕೊಟ್ಟಿರುತ್ತಾನೋ ಅವರನ್ನು ನೀವು ಮನೆಬಿಡಬೇಡಿ ಆ ಮನೆ ನಿಮ್ಮದೇ ಎಂದು ತಕರಾರುಹೂಡಿ ಎಂದು ಹೇಳಿಕೊಡತಕ್ಕ ಅವಕಾಶ ತೀರ ಹತ್ತಿರದಲ್ಲಿದೆ. ಅಂತೂ ಇಂತೂ ಎರಡು ಕಡೆಗಳಿಂದಲೂ ವ್ಯಾಜ್ಯಗಳು ಸರ್ಕಾರಕ್ಕೆ ಬಂದೇ ಬರುತ್ತವೆ. ಆಗ ನಾವೂ ನೀವೂ ಯಾರೂ ಉಳಿಯುವುದಿಲ್ಲ. ಹೀಗೆಲ್ಲ ಆಗತಕ್ಕ ಸಂಭವಗಳಿರುವುದರಿಂದ ಈಗ ಈ ಸಮಿತಿಯವರು ಒಪ್ಪಿಸಿರತಕ್ಕ ಸಲಹೆಗಳೊಂದೂ ಸರಿಯಾಗಿಲ್ಲ; ತಾವು ಇದನ್ನು ನಿಷ್ಪಕ್ಷಪಾತದಿಂದ ಜಾರಿಗೆ ತರುವುದಾ

ಗಿದ್ದರೆ ಪ್ರತಿಯೊಂದು ಬಾಬಿನಲ್ಲೂ ಯಾರ್ಯಾರಿಗೆ ಎಷ್ಟೆಷ್ಟು ಸಲ್ಲಬೇಕೆಂಬುದನ್ನು ಮೊದಲು ನಿರ್ಧರ ಮಾಡಿ. ಶಿಡ್ಲಘಟ್ಟದಿಂದ—ಬೆಂಗಳೂರಿಗೆ ಬರತಕ್ಕ ದಾರಿಯಲ್ಲಿ ವ್ಯವಸಾಯಕ್ಕೆ ಯೋಗ್ಯವಾದಂಥ ಜಮೀನು ಲಕ್ಷಾಂತರ ಎಕರೆ ಇದೆ. ಅಲ್ಲಿ ನೀರಿನ ಅನುಕೂಲವೂ ಇದೆ. ಬಾವಿಮಾಡಿಸುವುದಕ್ಕೂ ಅವಕಾಶವಿದೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಬೇಕಾದರೂ ತಾವು ಖರ್ಚುಮಾಡಿ, ಯಾರ್ಯಾರಿಗೆ ಜಮೀನಿಲ್ಲವೋ ಅವರಿಗೆ ಅಲ್ಲಿ ಜಮೀನು ಕೊಡುವುದರ ಜೊತೆಗೆ ಮನೆಯನ್ನೂ ಕಟ್ಟಿಸಿಕೊಡಿ; ಅಲ್ಲಿ ಪ್ರತಿಯೊಬ್ಬರಿಗೂ ನಾಲ್ಕು ಎಕರೆ ಭೂಮಿ, ಒಂದು ಬಾವಿ, ಒಂದು ಜೊತೆ ಎತ್ತು ಇಷ್ಟನ್ನು ಕೊಟ್ಟು ಅವರು ಆ ಜಮೀನನ್ನು ಯಾರಿಗೂ ಇಷ್ಟು ವರ್ಷಗಳವರೆಗೆ ಮಾರಾಟ ವಗೈರೆ ಮಾಡಬಾರದೆಂದು ನಿಗದಿಮಾಡಿ. ಈ ರೀತಿ ತಾವು ಅನುಕೂಲ ಎಲ್ಲೆಲ್ಲಿದೆಯೋ ಅಲ್ಲಿ ಮಾಡುತ್ತ ಹೋದರೆ ಇನ್ನು ಹತ್ತು ವರ್ಷಗಳೊಳಗಾಗಿ ನಮ್ಮ ದೇಶದಲ್ಲಿ ಬಡವರೆಂಬುವವರೇ ಇಲ್ಲದಂತಾಗುತ್ತದೆ. ಈ ರೀತಿ ಏನಾದರೂ ಒಂದು ಏರ್ಪಾಡನ್ನು ಮಾಡುವುದು ಬಿಟ್ಟು ಬರಿಯ ಮಾತುಗಳಿಂದ ಆಶೆ ಉಬ್ಬಿಸುವುದನ್ನು ಬಿಟ್ಟು ಮತ್ತು ಖಾಲಿ ಯೋಜನೆಗಳನ್ನು ಮಾಡುತ್ತಾ ಕಾಲ ಕಳೆಯುವುದರಿಂದೇನೂ ಪ್ರಯೋಜನವಾಗುವುದಿಲ್ಲ. ಸುಮ್ಮನೆ ನಾವು ಅಂಥ ಯೋಜನೆ ಮಾಡುತ್ತೇವೆ, ಇಂಥ ಯೋಜನೆ ಮಾಡುತ್ತೇವೆಂದು ಬರಿಯ ಸಿಸ್ಟಂ ಆದ ಮಾತುಗಳನ್ನಾಡುತ್ತಾ ಹೋದರೇನು ಸಾರ್ಥಕ? ಬಡವನೇನು ಉದ್ಧಾರವಾಗಲಿಲ್ಲ. ತತ್ತ್ವ ಹೇಳುವುದು ಬಹಳ ಸುಲಭ. ಆದರೆ ಅದರಂತೆ ನಡೆಯುವುದು ಬಹಳ ಕಷ್ಟ. ಆದ್ದರಿಂದ ಸರ್ಕಾರದವರು ಈ ಜತ್ತಿ ಸಮಿತಿಯ ವರದಿಯನ್ನು ಹಿಂದಕ್ಕಿಡಬೇಕೆಂದು ಹೇಳುತ್ತೇನೆ. ಈ ಒಂದು ವರದಿಯನ್ನು ಸರ್ಕಾರದವರೇ ತಂದಿದ್ದರೆ ಆಗ ನಾವು ಇದಕ್ಕೆ ಒಂದು ಸ್ವಾಗತವನ್ನು ಬಯಸಬೇಕಾಗಿತ್ತು. ಆದರೆ ಅದೇ ಸ್ವಾಗತವನ್ನು ನಾವು ಈಗಲೂ ಇದಕ್ಕೆ ಬಯಸಬಹುದಿತ್ತು. ಹಾಗೆ ನಾವು ಈ ವರದಿಗೊಂದು ಸ್ವಾಗತ ಬಯಸಿ ನಮ್ಮ ಊರುಗಳಿಗೆ ವಾಪಸು ಹೋದಾಗ ನಮ್ಮ ಗತಿ ಏನಾಗಬೇಕು? ಈವರೆಗೆ ಮಾತನಾಡಿರತಕ್ಕ ಸದಸ್ಯರಲ್ಲಿ ಶೇಕಡ 75ರಷ್ಟು ಸದಸ್ಯರು ಈ ವರದಿಯನ್ನು ವಿರೋಧಿಸಿದ್ದಾರೆ. ಆದ್ದರಿಂದ ಈ ವರದಿಯಿಂದ ಖಂಡಿತ ಸುಖವಿಲ್ಲ. ಇದರಿಂದ ದೇಶಕ್ಕೆ ತುಂಬ ತೊಂದರೆಯಾಗುತ್ತದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಲ್. ರಾಮಯ್ಯ (ನಾಮನಿರ್ದೇಶ ಹೊಂದಿದವರು).—ಮಾನ್ಯ ಸಭಾಪತಿಗಳೇ, ಮೈಸೂರು ಗೇಣಿದಾರರ ಶಾಸನರಚನೆಗೆ ಸಂಬಂಧಪಟ್ಟ ವರದಿಯ ಕನ್ನಡ ಪ್ರತಿಯೊಂದನ್ನು ನಮ್ಮಗಳಿಗೆ ಒದಗಿಸಿದ್ದಾರೆ. ಆದರೆ ಈ ವರದಿಯಲ್ಲಿ ಉಪಯೋಗಿಸಿರತಕ್ಕ ಹಲವಾರು ಪದಗಳು ನಮಗೆ ಅರ್ಥವಾಗುತ್ತಿಲ್ಲ. ಪುಟ 13ರಲ್ಲಿ ''ದಂಟಿನ'' ಎಂಬುದಾಗಿ ಒಂದು ಪದವನ್ನುಪಯೋಗಿಸಿದ್ದಾರೆ. ನಮ್ಮ ಕಡೆ ''ದಂಟು'' ಎಂದರೆ ಸಾರಿಗೆ ಹಾಕುವ ದಂಟು ಎಂದು ಅರ್ಥವಾಗುತ್ತದೆ. ಹೀಗೆ ಇನ್ನೊಂದು ಕಡೆ ''ಲಾಗೂ'' ಎಂಬುದಾಗಿದೆ. ಇದೂ ಕೂಡ ನಮಗೆ ಸರಿಯಾಗಿ ಅರ್ಥವಾಗುವುದಿಲ್ಲ. ಮತ್ತೊಂದು ಕಡೆ ''ಲಾವಣಿ'' ಎಂಬ ಶಬ್ದವನ್ನುಪಯೋಗಿಸಿದ್ದಾರೆ. ನಮ್ಮ ಕಡೆ ಲಾವಣಿ ಎಂದರೆ ಹಾಡು ಹೇಳುವುದೆಂದು ಅರ್ಥವಾಗುತ್ತದೆ. ಇನ್ನೂ ಹಾಗೆಯೇ ಮುಂದುವರಿದು ಈ ವರದಿಯನ್ನು ವಿಮರ್ಶೆಮಾಡುತ್ತಾ ಹೋದರೆ ಇದರಲ್ಲಿ ಹೇಳಿರುವ ತತ್ತ್ವಗಳು ಕಾಂಗ್ರೆಸ್ ಸರ್ಕಾರಕ್ಕೂ ಅನ್ವಯಿಸಿದಂತೆ ಕಾಣುವುದಿಲ್ಲ, ಸೋಷಿಯಲಿಸ್ಟ್ ಪಕ್ಷದ ತತ್ತ್ವಗಳಿಗೂ ಅನ್ವಯಿಸುವುದಿಲ್ಲ ; ಕಮ್ಯುನಿಸ್ಟ್ ತತ್ತ್ವಗಳಿಗೂ ಇವು ಅನ್ವಯಿಸುವುದಿಲ್ಲ. ಕಾಂಗ್ರೆಸ್ ಸರ್ಕಾರದವರು ಯಾವ ಧೈರ್ಯದಿಂದ ಈ ದಿವಸ ಈ ಭೂಸುಧಾರಣೆಗಳನ್ನು ಜಾರಿಗೆ ತರಬೇಕೆಂದು ಮನಸ್ಸು ಮಾಡಿದ್ದಾರೋ ಇದೇ ರೀತಿ ಅವರು ಎಲ್ಲ ವಿಚಾರಗಳಲ್ಲೂ ಹೀಗೇ ಮಾಡಬೇಕಾಗಿರುತ್ತದೆ.

ಕಾಂಗ್ರೆಸ್ ತತ್ತ್ವ ಏನಿದೆ ಎಂದರೆ, ಕೆಳಮಟ್ಟದಲ್ಲಿರುವವರನ್ನು ಮೇಲ್ಮಟ್ಟಕ್ಕೆ ತರುವುದು. ಆ ರೀತಿ ಮಾಡಬೇಕಾದರೆ ಹೆಚ್ಚಿಗೆ ಜಮೀನು ಇರುವವರ ಹತ್ತಿರ ತೆಗೆದುಕೊಳ್ಳಿ. ಅಲ್ಪ ಸ್ವಲ್ಪ ಇಟ್ಟುಕೊಂಡಿರುವವನು ಎಲ್ಲೋ ವಾಸವಾಗಿರುತ್ತಾನೆ. ಅವನಿಗೇಕೆ ಭೂಮಿ ಇರಬೇಕೆಂದು ಶ್ರೀಮಾನ್ ಶೆಟ್ಟಿಯವರು ಹೇಳಿದರು. ಆದರೆ ಈ ವಿಚಾರದಲ್ಲಿ ಅನೇಕರು ವಿಶದವಾಗಿ ಹೇಳಿದ್ದಾರೆ. ಒಬ್ಬ ಮನುಷ್ಯ ತಾನು ಜಮೀನ್ದಾರನಾಗಿದ್ದು ಜಮೀನು ಸಾಗುವಳಿ ಮಾಡುತ್ತ ತನ್ನ ಮಗನಿಗೆ ವಿದ್ಯಾಭ್ಯಾಸ ಮಾಡಿಸಿಕೊಂಡು ಜೀವನ ಮಾಡುತ್ತಿರುತ್ತಾನೆ. ತಂದೆ ತೀರಿಹೋಗುತ್ತಾನೆ. ಮಗ ಸರ್ಕಾರೀ ನೌಕರಿಯಲ್ಲೋ ಅಥವಾ ಖಾಸಗೀ ಸಂಸ್ಥೆಗಳಲ್ಲೋ ಕೆಲಸ ಮಾಡಿಕೊಂಡು ಇರುತ್ತಾನೆ. ಅವನು ಕೆಲಸದಿಂದ ನಿವೃತ್ತನಾಗುವಾಗ ಅವನ ಮಕ್ಕಳಿಗೆ ಸರ್ಕಾರದವರು ಕೆಲಸ ಕೊಡುವುದಿಲ್ಲ. ಎಲ್ಲಿ ಹೋದರೂ ನಿರುದ್ಯೋಗ ಸಮಸ್ಯೆ ಜಾಸ್ತಿ ಇರುತ್ತದೆ. ಅವನು ಯಾವ ರೀತಿ ಜೀವನ ಮಾಡಬೇಕೆಂಬುದನ್ನು ಮಾನ್ಯ ಶ್ರೀ ಶೆಟ್ಟಿಯವರು ಯೋಚಿಸಲಿಲ್ಲವೆಂದು ಕಾಣುತ್ತದೆ. ಹಿಂದೆ ಭಾಷಣ ಮಾಡಿದ ಮಹನೀಯರಲ್ಲಿ ಕೆಲವರು ಮಾತ್ರ ಮಧ್ಯಮವರ್ಗದವರ ವಿಷಯವನ್ನು ಪ್ರಸ್ತಾಪ ಮಾಡಿದರು; ಅವರೂ ಸಹ ಕೆಳಮಟ್ಟದವರನ್ನು ಮೇಲ್ಮಟ್ಟಕ್ಕೆ ತರಬೇಕೆಂದು ಹೇಳಿದರು. ಸಂಸ್ಕೃತದಲ್ಲಿ, ಉತ್ತಮ, ಮಧ್ಯಮ, ಅಧಮ ಎಂದು ಮೂರು ಬಗೆಗಳಿವೆ ಆದರೆ ಅಧಮನ ಗತಿಯೇನು ? ಭಾಷಣಕಾರರು ಇವರ ವಿಚಾರದಲ್ಲಿ ಏನೂ ಪ್ರಸ್ತಾಪ ಮಾಡಲಿಲ್ಲ. ಈಗ ಇಲ್ಲಿ ಚರ್ಚೆಯಾಗುತ್ತಿರುವ ಗೇಣೀ ವರದಿಯಲ್ಲಿ ಗ್ರಾಮದಲ್ಲಿ ರೈತರು ಯಾರು ಎಂಬ ಪ್ರಶ್ನೆಯನ್ನು ಮೊದಲು ಬಗೆಹರಿಸಬೇಕಾಗಿದೆ. ಕೂಲಿ ಮಾಡುವವರು ರೈತರೇ, ಅಥವಾ ಒಬ್ಬ ಜಮೀನ್ದಾರನಿಂದ ಗುತ್ತಿಗೆ ಪಡೆದು ಜಮೀನು ಮಾಡುವವರು ರೈತರೇ. ಇದು ಮೊದಲು ವಿಮರ್ಶೆ ಮಾಡಬೇಕಾದ ವಿಚಾರ. ಒಬ್ಬ ರೈತ ಜಮೀನ್ದಾರನಿಂದ ಒಂದು ಜಮೀನನ್ನು ಪಡೆದು ತನ್ನ ಕೂಲಿಗಾಗಿ, ಹೊಟ್ಟೆಬಟ್ಟೆಗಾಗಿ ತಾನು ಯಾರಿಂದ ಗುತ್ತಿಗೆ ಪಡೆದಿದ್ದಾನೋ ಆತನ ಜಮೀನಿನಲ್ಲಿ ಕೂಲಿಕೆಲಸ ಮಾಡುತ್ತಾನೆ. ಹಾಗಾದರೆ ರೈತ ಕೂಲಿಗಾರನಾದನೇ ಅಥವಾ ಜಮೀನ್ದಾರನಿಂದ ಕೂಲಿಪಡೆದು ಗುತ್ತಿಗೆದಾರನೆಂದನ್ನಿಸಿಕೊಂಡವನು ರೈತನೇ ? ಆ ವಿಷಯವನ್ನು ಇದರಲ್ಲಿ ಯಾವ ರೀತಿಯಲ್ಲೂ ವಿಮರ್ಶೆ ಮಾಡದೆ ಇರುತ್ತಾರೆ. ಕೂಲಿಗಾರನಾದವನನ್ನು ಇನ್ನೂ ಅಧೋಗತಿಗೆ ಇಳಿಸಬೇಕೆಂಬ ಅಂಶ ಇದರಲ್ಲಿ ಕಾಣುತ್ತದೆ. ಆದ್ದರಿಂದ ಜಮೀನ್ದಾರನಾದವನು ಜಮೀನಿನಲ್ಲಿ ಕಷ್ಟಪಡದೆ ಕೂಲಿಗಾರನಿಂದ ಶ್ರಮ ತೆಗೆದುಕೊಂಡು ಬೆಳೆ ಬೆಳೆದು ತನ್ನ ಗುತ್ತಿಗೆದಾರನಿಗೆ ಎಷ್ಟು ಕೊಡಬೇಕೋ ಅಷ್ಟು ಪ್ರಮಾಣವನ್ನು ಕೊಟ್ಟು ಮಿಕ್ಕಿದ್ದನ್ನು ಅವನು ಉಪಯೋಗಿಸಿಕೊಳ್ಳುತ್ತಾನೆ. ಆದರೆ ರೈತ ಯಾರು ಎಂಬುದನ್ನು ದೀರ್ಘವಾಗಿ ವಿಮರ್ಶೆಮಾಡಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಪಾಳುಬಿದ್ದ ಜಮೀನುಗಳ ವಿಮರ್ಶೆ ಮಾಡೋಣ. ನಾನು ಸುಮಾರು 20-30 ವರ್ಷ

(ಶ್ರೀ ಎಲ್. ರಾಮಯ್ಯ)

ಗಳಿಂದಲೂ ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣ ಮಾಡುತ್ತಿರುತ್ತೇನೆ. ಆಹಾರಧಾನ್ಯಗಳ ಬೆಲೆ ಯಾವಾಗ ಜಾಸ್ತಿ ಇದೆಯೋ ಆ ಸಂದರ್ಭದಲ್ಲಿಯೂ, ಈಚೆಗೆ ಎಂದರೆ ಈ ಯುದ್ಧ ಪ್ರಾರಂಭವಾದ ಮೇಲೆ ಮತ್ತು ಆಹಾರದ ಬೆಲೆ ಜಾಸ್ತಿಯಾದಮೇಲೂ ಅನೇಕ ಬಂಡವಾಳಗಾರರು ಹಳ್ಳ ಕೊಳ್ಳಗಳನ್ನು ಮುಚ್ಚಿ ದ್ರಾಕ್ಷಿ ಗಿಡಗಳನ್ನು ಹೆಚ್ಚಿಗೆ ಬೆಳೆಸಿರುವುದನ್ನು ನಾವು ಬೆಂಗಳೂರಿನಿಂದ ಮೈಸೂರಿಗೆ ಹೋಗುವಾಗ ಕಾಣಬಹುದು. ಇನ್ನು ಕೆಲವು ದುಡ್ಡಿರುವ ಮನುಷ್ಯರು ಎಲ್ಲಿ ಜಮೀನು ಸಾಗುವಳಿಗೆ ಅನುಕೂಲವಾಗುತ್ತದೋ ಅಲ್ಲಿ ಹೆಚ್ಚಿಗೆ ಹಣವನ್ನು ಖರ್ಚುಮಾಡಿ, ಜಮೀನನ್ನು ಆಬಾದುಮಾಡಿ ಆಹಾರೋತ್ಪತ್ತಿಯನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದರಿಂದ ದೇಶದಲ್ಲಿ ಆಹಾರೋತ್ಪತ್ತಿ ಜಾಸ್ತಿಯಾಗುತ್ತಿದೆ ಎಂದು ನಾನು ಘಂಟಾಘೋಷವಾಗಿ ಹೇಳಬೇಕಾಗಿದೆ. ಹಾಗೆ ಹೇಳುತ್ತಾ ಈಗ ಜಮೀನನ್ನು ರೈತನಿಗೆ ಕೊಡಬೇಕು. ಕೂಲಿಗಾರನನ್ನು ರೈತನೆಂದು ಪರಿಗಣಿಸಿ ಜಮೀನನ್ನು ಕೊಡಬಹುದು. ಆ ರೀತಿ ಕೊಟ್ಟು ವ್ಯವಸಾಯಕ್ಕೋಸ್ಕರ ಗೊಬ್ಬರ, ನೇಗಿಲು ವಗೈರೆ ತೆಗೆದುಕೊಳ್ಳುವುದಕ್ಕೆ, ಮತ್ತು ಜಮೀನು ಆಬಾದುಮಾಡುವುದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಳ್ಳುವುದಕ್ಕೆ ಮತ್ತು ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರದವರು ಹಣವನ್ನು ಸಾಲದ ರೂಪವಾಗಿ ಒದಗಿಸಬೇಕು. ಶ್ರೀಮಾನ್ ನಂಜುಂಡಪ್ಪನವರು ಸರ್ಕಾರ ಸಾಲವನ್ನು ಕೊಡುವುದಿಲ್ಲವೆಂದು ಹೇಳಿದರು. ನೀವು ಈ ಕಾನೂನನ್ನು ಜಾರಿಗೆ ತಂದ ಮೇಲೆ ಯಾರು ದುಡ್ಡನ್ನು ಕೊಡುತ್ತಾರೆ? ಜಮೀನ್‌ದಾರನಾಗಲಿ ರೈತನಾಗಲಿ, ಯಾರೇ ಆಗಲಿ ಕೂಲಿ ಮಾಡುವವನಿಗೆ ಸಾಲವನ್ನೇ ಕೊಡುವುದಿಲ್ಲ. ಆಗ ಅವನು ಜಮೀನನ್ನು ಪಾಳು ಬಿಡಬೇಕಾಗುತ್ತದೆ. ಆಗ ಆಹಾರೋತ್ಪತ್ತಿ ಎಲ್ಲಿಂದ ಬಂತು? ದುಡ್ಡು ಇರುವವನು ಆಹಾರೋತ್ಪತ್ತಿಯನ್ನು ಜಾಸ್ತಿಮಾಡಬೇಕೆಂಬ ಭಾವನೆಯನ್ನಿಟ್ಟುಕೊಂಡು ತನ್ನಲ್ಲಿರುವ ಹಣವನ್ನು ಪಯೋಗಿಸಿ ಅದರಿಂದ ಲಾಭ ಪಡೆಯುತ್ತಾನೆ. ಈಗಾಗಲೇ ಅನೇಕ ಜಮೀನುಗಳನ್ನು ಪಾಳುಬಿಟ್ಟಿದ್ದಾರೆಂದು ಅನೇಕ ಮಹನೀಯರು ವಿಶದವಾಗಿ ಹೇಳಿದ್ದಾರೆ. ಹಾಗೆ ಮಾಡುವುದರಿಂದ ಸರ್ಕಾರಕ್ಕೆ ಬರತಕ್ಕ ವರಮಾನ ಖೋತಾ ಆಗುತ್ತದೆ ಎನ್ನುವುದನ್ನೂ ಕೂಡ ಯೋಚನೆ ಮಾಡಬೇಕು. ಈಗ ಜಮೀನು ಒಬ್ಬನಿಂದ ಇನ್ನೊಬ್ಬನಿಗೆ ಖರೀದಿ, ಭೋಗ್ಯ, ಆಧಾರವಾಗುತ್ತಿದೆ. ನಾಳೆ ಯಾರೂ ಅಂತಹ ಜಮೀನನ್ನು ಭೋಗ್ಯ, ಕ್ರಯ, ಆಧಾರಮಾಡಿಕೊಳ್ಳುವುದಿಲ್ಲ. ಇದರಿಂದ ರಿಜಿಸ್ಟ್ರೇಷನ್ ಫೀಸ್ ಮೂಲಕ, ಸರ್ಕಾರಕ್ಕೆ ಬರುವ ಆದಾಯ ಕೈತಪ್ಪಿ ಹೋಗುತ್ತದೆ. ಇದನ್ನು ಸರ್ಕಾರದವರು ದೀರ್ಘವಾಗಿ ಯೋಚನೆ ಮಾಡಬೇಕು.

ಇನ್ನೊಂದು ವಿಷಯ. 20 ವರ್ಷಗಳವರೆಗೂ ಕಂತು ಕೊಡಬೇಕೆಂದು ಹೇಳಿದ್ದಾರೆ. ಜಮೀನ್‌ದಾರನು ಕಷ್ಟಪಟ್ಟು ಜಮೀನನ್ನು ಆಬಾದು ಮಾಡಿ 20 ವರ್ಷಗಳವರೆಗೂ ಕಂತ ಕೊಡಬೇಕೆಂದು ಹೇಳಿದರೆ ಯಾವ ನ್ಯಾಯ? ಆಗ ಶೇಕಡ ನಾಲ್ಕು ಅಥವಾ ಶೇಕಡ ಐದರಂತೆ ಬಡ್ಡಿ ಹಾಕುತ್ತಾರೆ. ಆ 20 ವರ್ಷಗಳೊಳಗೆ ಒಂದು ವೇಳೆ ಆ ಜಮೀನ್‌ದಾರನು ಗೋತಾ ಆದರೆ ಆ ಸಾಲವನ್ನು ತೀರಿಸುವ ಕೆಲಸ ಮಗನಿಗೆ ಬರುತ್ತದೆ. ಈ ಟೆನೆನ್ಸಿ ಕಾನೂನು ತೆಗೆದುಕೊಂಡು ಬಂದಮೇಲೆ ಎಷ್ಟೋ ಜನ ಜಮೀನ್‌ದಾರರಿಗೆ ಗುತ್ತಿಗೆ ಕೂಡ ಕೊಡುತ್ತಿಲ್ಲ. ತಾನು ಕೊಟ್ಟಿದ್ದಕ್ಕೆ ರಸೀದಿ ಇಲ್ಲ, ಗುತ್ತಿಗೆ ಕರಾರು ಬರೆಯಲಿಲ್ಲ. ತಾನು ಎಲ್ಲವನ್ನೂ ಕೊಟ್ಟಿದ್ದೇನೆ ಎಂದು ಹೇಳುವ ಸನ್ನಿವೇಶ ನಾಳೆ ಬರುತ್ತದೆ. ಈ 20 ವರ್ಷಗಳಲ್ಲಿ ಸಾಲ ತೀರಿಸುವಾಗ ಒಂದೆರಡು ವರ್ಷ ಕಂತುಗಳನ್ನು ಕೊಡುವುದನ್ನು ನಿಲ್ಲಿಸಿ, ನನಗೆ ತೊಂದರೆಯಾಯಿತು, ಈ ವರ್ಷ ಬೆಳೆಯಾಗಲಿಲ್ಲ, ನಾನು ಹಣವನ್ನು ಕಂತಿನ ರೂಪವಾಗಿ ಎಲ್ಲಿಂದ ಕೊಡಲಿ ಎಂದು ಕೋರ್ಟಿಗೆ ದಾವಾ ಹಾಕುತ್ತಾನೆ. ಇದರಿಂದ 20 ವರ್ಷಗಳು ಹೆಚ್ಚು ಎನ್ನುವುದನ್ನು ಯೋಚನೆಮಾಡಿ. ಒಂದು ವೇಳೆ ಹೆಚ್ಚಿಗೆ ಜಮೀನನ್ನು ತೆಗೆದುಕೊಂಡರೆ, ಅವರ ಹಣ ಪೂರ್ತ ಸಂದಾಯವಾಗಬೇಕು.

ಒಬ್ಬ ಸದಸ್ಯರು.—ಹಣಕ್ಕೆ ಬದಲು ಈಗ ಪೇಪರ್ ಕೊಡುತ್ತಾರೆ.

ಶ್ರೀ ಎಲ್. ರಾಮಯ್ಯ.—ಬಾಂಡ್ ವಿಚಾರ ಹೇಳಬೇಕಾಗಿಯೇ ಇಲ್ಲ. ಇಂಡಸ್ಟ್ರೀಸ್ ವಿಚಾರ. ನಮ್ಮ ಮೈಸೂರಿನಲ್ಲಿ ಅನೇಕ ಇಂಡಸ್ಟ್ರಿಗಳಿವೆ. ಅದರಲ್ಲಿ ಕೆಲವು ಇಂಡಸ್ಟ್ರಿಗಳನ್ನು ನೇರವಾಗಿ ನಮ್ಮ ಸರ್ಕಾರದವರೇ ನಡೆಸುತ್ತಿದ್ದಾರೆ. ಯಾವ ಇಂಡಸ್ಟ್ರಿ ಬಂಡವಾಳಗಾರನ ಕೈಯ್ಯಲ್ಲಿ ಇರುತ್ತದೋ, ಅಂಥ ಇಂಡಸ್ಟ್ರಿ ಎಫಿಷಿಯೆಂಟ್ ಆಗಿ ಕೆಲಸ ಮಾಡುತ್ತಿದೆ ಎಂದು ನಾನು ಹೇಳಬೇಕಾಗುತ್ತದೆ. ಸರ್ಕಾರದವರು ನಡೆಸುತ್ತಾ ಇರುವ ಇಂಡಸ್ಟ್ರೀಸ್‌ನಲ್ಲಿ ಬಹಳ ನಷ್ಟವಾಗುತ್ತಿದೆ. ಉದಾಹರಣೆಗೆ ಪೋರ್ಸಿಲೈನು ಫ್ಯಾಕ್ಟರಿ ತೆಗೆದುಕೊಂಡರೆ, ಸಾಧಾರಣವಾಗಿ ಮೂರು ನಾಲ್ಕು ವರ್ಷಗಳಿಂದಲೂ ಅದರಿಂದ ನಷ್ಟವಾಗುತ್ತಿದೆ. ಹಾಗೆಯೇ ಉತ್ಪತ್ತಿ ಜಾಸ್ತಿ ಮಾಡಬೇಕು ಎನ್ನುವ ಸಂದರ್ಭದಲ್ಲಿ ನಾವು ಜಮೀನನ್ನು ಬಂಡವಾಳಗಾರನ ಕೈಯಲ್ಲಿ ಕೊಟ್ಟರೆ ಅವರು ಎಷ್ಟುಮಟ್ಟಿಗೆ ಎಫಿಷಿಯೆನ್ಸಿಯಿಂದ ಕೆಲಸಮಾಡುತ್ತಾರೆ ಎಂಬುದನ್ನು ನೋಡಬಹುದು. ಜಮೀನು ಇಲ್ಲದೆ ಇರುವವರಿಗೆ ಕೊಡಬೇಕು ಎಂದರೆ ಇವೊತ್ತಿನ ದಿವಸ ಜಮೀನು ಕೊಟ್ಟಿರುವವರು ಜಮೀನನ್ನು ಉಳಿಸಿಕೊಂಡಿದ್ದಾರೆಯೇ ಎಂಬುದನ್ನು ನೋಡಬೇಕು. ಅನೇಕರು ಜಮೀನು ಮಾಡದೆ ಸ್ವಲ್ಪ ಆಬಾದು ಮಾಡುತ್ತಾರೆ. ಆದ್ದರಿಂದ ಯಾರು ಮುಂದೆ ಬರುತ್ತಾರೋ ಅಂಥವರಿಗೆ ಖಾಲಿ ಇರುವ ಜಮೀನು ಕೊಡಬೇಕು. ಆಹಾರ ಉತ್ಪತ್ತಿಯನ್ನು ಸರ್ಕಾರದವರು ದೃಷ್ಟಿಯಲ್ಲಿ ಇಟ್ಟುಕೊಂಡು ಐಶ್ವರ್ಯವಂತರಿಗೆ ಜಮೀನುಕೊಟ್ಟು ಅವರ ಕೈಕೆಳಗೆ ರೈತರನ್ನು ಕೊಟ್ಟರೆ ಕೆಲವಾರು ವರ್ಷಗಳಲ್ಲಿ ಕೊಟ್ಟ ಜಮೀನಿನ ಮೇಲೆ ಆಶೆ ಉಂಟಾಗಿ ಆ ಜಮೀನು ಸರಿಯಾಗಿ ಸಾಗು ಆಗುತ್ತದೆ. ಇದರಲ್ಲಿರುವ ಅನೇಕ ವಿಚಾರಗಳನ್ನೂ ತಮ್ಮ ಗಮನಕ್ಕೆ ತಂದಿದ್ದೇನೆ. ಇದು ಅಷ್ಟು ಸಮರ್ಪಕವಾಗಿಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಿ. ಎಸ್. ತಿಮ್ಮಾರೆಡ್ಡಿ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ ಈ ನಮ್ಮ ಜತ್ತಿ ಸಮಿತಿಯವರು ಏನು ರಿಪೋರ್ಟು ಬರೆದಿದ್ದಾರೆ ಅದರ ಮೇಲೆ ಎರಡು ಮೂರು ಸೂಚನೆಗಳನ್ನು ಮಾಡಬೇಕು ಎಂದು ಇಚ್ಛೈಸುತ್ತೇನೆ. ಜತ್ತಿ ಸಮಿತಿಯವರು ಅಲ್ಪವತಿಯೊಳಗೆ ತಮಗೆ ತಿಳಿದಮಟ್ಟಿಗೆ ಅಂಕಿಸಂಖ್ಯೆಗಳನ್ನು ಕೂಡಿಸಿ ಬಹಳ ವೇಳೆ ತೆಗೆದುಕೊಳ್ಳದೆ ಒಂದು ಉತ್ತಮವಾದಂಥ ರಿಪೋರ್ಟು ಮಾಡಿದಾರೆ. ಇದು ತುಂಬ ಖರೆ ಇದೆ. ಆದರೆ ಅಷ್ಟು ಅಲ್ಪವತಿಯೊಳಗೆ ರಿಪೋರ್ಟ್ ಹೇಗೆ ತಯಾರು ಆಯಿತು ಎಂದು ನೋಡಿದರೆ ಆಷ್ಟು ಅಲ್ಪವತಿಯೊಳಗೆ ಆಗಿಲ್ಲ ಎಂದು ಹೇಳುತ್ತೇನೆ. ಶ್ರೀ ಜತ್ತಿಯವರಿಗೆ 20 ವರ್ಷದ ತಾಳಿಂ

ಇದೆ. ಮುಂಬೈ ಟೆನೆನ್ಸಿ ಕಾಯಿದೆ ಏನು ಇದೆ ಅದು 1937ರಲ್ಲೇ ಪ್ರಾರಂಭವಾಗಿದೆ. ಆ ಕಾಲಕ್ಕೆ ಜಮೀನ್ದಾರರು ಮತ್ತು ಗೇಣಿದಾರರು ಅಥವಾ ಲೇವಣಿದಾರರು ಅತ್ಯಂತ ಸ್ಫೂರ್ತಿಯಾದ ವಿಚಾರ ವಿನಿಮಯವಾಗಿ ಒಂದು ಕಾಯಿದೆ ಆಗಿದೆ. ಆ ಕಾಯಿದೆಯೊಳಗೆ ಲೋಪದೋಷಗಳು ಕಂಡುಬಂದಾಗ ಮತ್ತೆ ಪುನಃ ಅಮೆಂಡ್‌ಮೆಂಟ್ಸ್ ತಂದರು. ಅದು ಪಾಸು ಆದಮೇಲೆ ಉತ್ತಮವಾದ ಕಾಯಿದೆ ಆಯಿತು. ಜಮೀನ್ದಾರರವತಿಯಿಂದ, ಗೇಣಿದಾರರವತಿಯಿಂದ ತಕರಾರು ಬಂದ ಮೇಲೆ ಮತ್ತೆ ಪುನಃ ಹೊಸದಾಗಿ 1955 ರೊಳಗೆ ಕಾಯಿದೆಯಾಯಿತು. ಆ ಕಾಲಕ್ಕೆ ಅವರು ಇದನ್ನೆಲ್ಲಾ ಹೀಗೆ ತಿಳಿದುಕೊಂಡಿರಬೇಕು. ಉತ್ತರ ಕರ್ಣಾಟಕ ಬೇಜವಾಬ್ದಾರಿಯಿಂದ ಗೇಣಿದಾರ ಪಕ್ಷ ಕಟ್ಟಿ ಟೆನೆನ್ಸಿ ಕಾಯಿದೆಯನ್ನು ಆಗಲೇ ತರಬೇಕು ಎಂದು ಮಾಡಿಲ್ಲ. ಗೇಣಿದಾರರ ಕಾಯಿದೆ ಆಗುವುದಕ್ಕೆ ಮುಂಚೆ, ಉತ್ತರ ಕರ್ಣಾಟಕದವರು 54 ಮಂದಿ ವಕಾಲತ್ತು ಮಾಡುವ ಪ್ರಸಂಗ ಬಂತು. ಅದರ ದೆಶೆಯಿಂದ ಬೊಂಬಾಯಿ ಸ್ಟೇಟಿನೊಳಗೆ ಏನು ಕಾಯಿದೆ ಆಗಿದೆ ಅದು ಉತ್ತರ ಕರ್ಣಾಟಕದವರ ಸೌಮ್ಯತೆಯಿಂದ ಆಯಿತು ಎಂದು ನಮ್ಮ ಮೇಲೆ ಅಪವಾದ ಇದೆ. ಅಷ್ಟೆಲ್ಲಾ ತಾಲಿಂ ಅವರಿಗೆ ಇದೆ. ಶ್ರೀ ಜತ್ತಿಯವರು ಬಹಳ ತೀವ್ರವಾಗಿ ಈ ಕಾರ್ಯವನ್ನು ಮಾಡಿದರು. ಸರ್ವೇ ಸಾಧಾರಣವಾಗಿ ಗೇಣಿದಾರರ ಮತ್ತು ಜಮೀನ್ದಾರರ ಸಂಬಂಧ ಏನು ಎಂದು ತಿಳಿದುಕೊಂಡು ಸರ್ವಸಾಮಾನ್ಯವಾದ ರಿಪೋರ್ಟನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮಾನ್ಯ ಶಾಸ್ತ್ರಿಯವರು ಹೇಳಿದರು ಭೂಸಂಪತ್ತು ಏನು ಇದೆ ಅದನ್ನೂ ಮನುಷ್ಯ ಸ್ಯಾಕ್ರಿಫೈಸ್ ಮಾಡುವುದಕ್ಕೆ ತಯಾರಾಗಿಲ್ಲ, ಭೂಸಂಪತ್ತು ಒಂದು ಪ್ರಾಣಿ ಇದ್ದಹಾಗೆ ಎಂದು. ಅಂದಮೇಲೆ ಹಾಗಿದ್ದರೂ ಕೂಡ ಜತ್ತಿ ರಿಪೋರ್ಟ್ ಮೂರು ನಾಲ್ಕು ಸೀಲಿಂಗ್ ಮಾಡಿದೆ. ಅದರಮೇಲೆ ಎಲ್ಲಾ ಮಾನ್ಯ ಸದಸ್ಯರೂ ಚರ್ಚೆ ಮಾಡಿದ್ದಾರೆ. ಆದರೆ ಅದನ್ನು ಸ್ವಾಗತ ಮಾಡಬೇಕಾಗುತ್ತದೆ. ನಾವು ಆಗಲೇ ನಮ್ಮ ಎಲೆಕ್ಷನ್ ಮ್ಯಾನಿಫೆಸ್ಟೋವಿನಲ್ಲಿ ಇದನ್ನು ಕಬೂಲು ಮಾಡಿದ್ದೇವೆ. ಈ ಉದ್ದೇಶ ನಮ್ಮದು ಇದೆ. ಗೇಣಿದಾರರಿಗೆ ರೈತರಿಗೆ ಕಾಯಿದೆ ಮಾಡಿ ಸೌಲಭ್ಯಗಳನ್ನು ಒದಗಿಸಿ ಕೊಡುತ್ತೇವೆ, ಎಂದು ಕಳೆದ ಎಲೆಕ್ಷನ್ ಪತ್ರದಲ್ಲಿ ಬರೆದು ಕೊಂಡಿದ್ದೇವೆ. ಅದನ್ನು ತಿಳಿದಮೇಲೆ ನಮಗೆ ಓಟು ಹಾಕಿರುವುದರಿಂದ ನಮ್ಮ ಮೇಲೆ ಬೇಜವಾಬ್ದಾರಿ ಇದೆ. ಇಲ್ಲಿ ಮೆಜಾರಿಟಿ ಪಾರ್ಟಿ ಕಾಂಗ್ರೆಸ್ ಇರುವ ದೆಶೆಯಿಂದ ನಮ್ಮ ಕರ್ತವ್ಯ ಮಾಡಬೇಕಾಗಿದೆ. ಕಾಂಗ್ರೆಸ್ಸಿನವರು ಸಮತಾವಾದ ಸಮಾಜ ರಚನೆ ಮಾಡಬೇಕೆಂದು ಉದ್ದೇಶ ಇದೆ. ಆ ಉದ್ದೇಶದಿಂದಲೇ ಲುಕ್ಸಾನು ಆಗಲಿ ಅಥವಾ ಲಾಭವಾಗಲಿ ಈ ಕಾಯಿದೆ ಬರುವುದು ಅತ್ಯಂತ ಅನಿವಾರ್ಯ ಮತ್ತು ಇದನ್ನು ಸ್ವಾಗತ ಮಾಡಬೇಕು. ಇದರಿಂದ ಎಲ್ಲರಿಗೂ ಉಪಯೋಗ ಆಗುತ್ತದೆ. ಮಾನ್ಯ ಸದಸ್ಯರು ಹೇಳಿದರು ಜುಲುಮೆ ಮಾಡುತ್ತೇವೆ ಎಂದು. ಇದು ಕಮ್ಯುನಿಸ್ಟ್ ಪಾರ್ಟಿಯು ಅಲ್ಲ ಸೊಷಲಿಷ್ಟ್ ಪಾರ್ಟಿಯು ಅಲ್ಲ. ಇದು ಕಾಂಗ್ರೆಸ್ ಸಂಸ್ಥೆ. ಇದು ಒಂದು ಸರ್ಕಸ್ ಇದ್ದ ಹಾಗೆ; ಇದರಲ್ಲಿ ಜಮೀನ್ದಾರರೂ, ಇದ್ದಾರೆ, ರೈತರೂ ಇದ್ದಾರೆ, ಗೇಣಿದಾರರೂ ಇದ್ದಾರೆ, ಕೂಲಿಗಾರರೂ, ಬಂಡವಾಳಗಾರರೂ ಇದ್ದಾರೆ. ಸರ್ಕಸ್ಸನ್ನು ಉತ್ತಮ ರೀತಿಯಲ್ಲಿ ಆಡಿ ತೋರಿಸಬೇಕು ಎಂದು ಕಾಂಗ್ರೆಸ್ ಸಂಸ್ಥೆಯ ಉದ್ದೇಶ. ಯಾವರೀತಿಯಾದರೂ ಗೇಣಿದಾರರ ಮನಸ್ಸಿಗೆ ಸಂತಾಪವಾಗಬಾರದು, ಗೇಣಿದಾರರಿಗೆ ಶೋಷಣೆ ಮಾಡುವ ಹಾಗೆಯೂ ಇರಬಾರದು ಆ ದೃಷ್ಟಿಯಿಂದ ಕಾಯಿದೆ ತರಬೇಕು. ಭೂಮಿಯಿಲ್ಲದವರಿಗೆ ಭೂಮಿ ಕೊಡುವುದು ಸರಿ. ಆದರೆ ಒಬ್ಬರ ಭೂಮಿ ಕಿತ್ತು ಇನ್ನೊಬ್ಬರಿಗೆ ಕೊಡುವುದು ಕಾಂಗ್ರೆಸಿನ ಉದ್ದೇಶವಲ್ಲ. ಕಾಂಗ್ರೆಸ್ ಹಾಗೆ ಮಾಡಲಿಲ್ಲ. ಈ ಜತ್ತಿ ಸಮಿತಿಯ ರಿಪೋರ್ಟ್ ನೋಡಿ ಹಳೆಯ ಮೈಸೂರಿನೊಳಗೆ ಬಹಳ ಮಂದಿ ಗಾಭರಿಯಾಗಿದ್ದಾರೆ. ಈ ಕಾಯಿದೆ ಒಪ್ಪಿದಮೇಲೆ ನಮ್ಮ ಗತಿ ಏನು ? ಎಂದು ಹೆದರಿದ್ದಾರೆ. ಅಷ್ಟು ಗಾಬರಿಯಾಗತಕ್ಕ ಕಾರಣವಿಲ್ಲ. ಏತಕ್ಕೆಂದರೆ ನನ್ನ ವಿಷಯವನ್ನೇ ಹೇಳುವುದಾದರೆ ನನಗೆ 130 ಎಕರೆಯಿದೆ, ನನ್ನ ತಮ್ಮನಿಗೆ 150 ಎಕರೆ ಇದೆ. ನಾನು ಜಮೀನ್ದಾರನಲ್ಲ. ನಾನು ಸೀಲಿಂಗ್‌ನೊಳಗೆ ಬರುವುದಿಲ್ಲ. ಜಮೀನ್ದಾರ ಯಾರೆಂದು ನಿರ್ಧಾರ ಮಾಡುವುದು ಕಠಿಣ. ಒಂದು ಜಿಲ್ಲೆಯಲ್ಲಿ ಅಲ್ಲ, ಒಂದು ತಾಲ್ಲೋಕು ಅಲ್ಲ, ಒಂದು ಊರು ಅಲ್ಲ, ಜಮೀನು ಜಮೀನಿಗೆ ವ್ಯತ್ಯಾಸ ಬರುತ್ತದೆ. ಒಬ್ಬರಿಗೆ 100 ಎಕರೆ ತೆಗದುಕೊಳ್ಳುತ್ತಾರೆ, ಇನ್ನೊಬ್ಬರಿಗೆ ಐದು ಎಕರೆ ತೆಗೆದುಕೊಳ್ಳುತ್ತಾರೆ, ಇದರ ಸೀಲಿಂಗ್ ಹೀಗೆ ಇಡಬೇಕು ಎನ್ನುವುದು ಕಠಿಣ ಇದೆ. ಗೇಣಿದಾರರ ಕಾಯಿದೆ ಮಾಡುವ ಪ್ರಶ್ನೆಯಲ್ಲ. ಹಾಗೆಯೇ ಮಾಡಿದರೆ ತಪ್ಪು ಆಗುತ್ತದೆ. ಎಲ್ಲರೂ ಸಂತೋಷದಿಂದ ಇರಬೇಕು, ಎಲ್ಲರಿಗೂ ನ್ಯಾಯ ಕೊಡುತ್ತೇವೆ ಎನ್ನುವ ಕಾಲದಲ್ಲಿ ಯಾವ ಜಮೀನ್ದಾರ ಅನ್ನಿಸುತ್ತಾನೋ ಅವನು ಜಮೀನು ಹೋಗುತ್ತದೆ ಎಂದು ಹೇಳುವುದಕ್ಕೆ ಕಾರಣವಿಲ್ಲ, ಎಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಜಮೀನ್ದಾರ ಕಾಯಿದೆ 1947 ಇತ್ತು. ಅದರಿಂದ ಮುಗ್ಗಟ್ಟು ಆಯಿತು. ಹಾಗೆ ಆದ ಮೇಲೆ ಪರಿಸ್ಥಿತಿ ಅಲ್ಲೋಲ ಕಲ್ಲೋಲವಾಗಿ, ಆಗ ಒಂದು ತಿಳಿವಳಿಕೆ ಬಂತು.

ಈಗ ಜಮೀನುದಾರರಲ್ಲಿ ಬಹುತೇಕ ಒಂದು ಐವತ್ತು ಎಕರೆ ಜಮೀನಿರಬಹುದು. ಅದರಲ್ಲಿ ಐದು ಅಥವಾ ಹತ್ತು ಎಕರೆಯನ್ನು ಸಾಗು ಮಾಡಬೇಕಾದರೆ ಅದಕ್ಕೆ ತಕ್ಕಂತೆ ಮಳೆ ಬೀಳಬೇಕು. ಹವಾಬೇಕು. ಹೀಗೆ ಮಳೆ ಬಿದ್ದು ಆ ಭೂಮಿಯಿಂದ ಬೆಳೆದ ಉತ್ಪನ್ನಗಳನ್ನು ಮಾರಾಟಮಾಡಲಿಕ್ಕೆ ತಕ್ಕ ಮಾರುಕಟ್ಟೆಗಳು ಸಿಕ್ಕಬೇಕು.

ಈಗ ಇಲ್ಲಿ ಮಾಡಿರುವಂತೆ ಹಿಡುವಳಿಯಲ್ಲಿ ರೂ. 1,200 1,500, 5,400, ನಿಶ್ಚಿತವಾಗಿ ಬರುತ್ತದೆ ಎಂದು ಯಾರಾದರೂ ಜವಾಬ್ದಾರಿ ತೆಗೆದುಕೊಳ್ಳುತ್ತೀರೇನು ? ರೈತನು ಗೇಣೀದಾರನಾಗಿ, ಜಮೀನುದಾರನಿಗೆ ಸರಿಯಾದ ಗೇಣಿಯನ್ನು ಕೊಡಬೇಕಾದರೆ ಮೊದಲು ಆತನಲ್ಲಿ ರೊಕ್ಕವಿದ್ದರೆ ತಾನೇ ಅವನು ಜಮೀನಿಗಾಗಿ ಖರ್ಚುಮಾಡಿ ಬೆಳೆಯನ್ನು ಬೆಳೆಯಲು ಅನುಕೂಲವಾಗುತ್ತದೆ ? ಇವನ್ನೆಲ್ಲ ವಿಚಾರಮಾಡಬೇಕು ; ಮತ್ತು ಈಗ ಸಮಿತಿಯು ಶಿಫಾರಸು ಮಾಡಿರುವಂತೆ ಹಿಡುವಳಿಯ ಮಿತಿಯೊಳಗೇ ಬಹುತೇಕ ಹಿಡುವಳಿದಾರರು ಪಾರಾಗುತ್ತಾರೆ, ಈಗ ನನ್ನಲ್ಲಿ 190 ಎಕರೆಯಷ್ಟು ಜಮೀನಿದ್ದರೆ ಅದಕ್ಕೆ ಎಷ್ಟು ಹಿಡುವಳಿ ಮಿತಿಯನ್ನುವುದನ್ನು ಮುಂದೆ ಅವರೇ 1,200, 1,500, 3,600, 5,600 ಹೀಗೆ ಎಲ್ಲರಿಗೂ ಬೇರೆಯಾಗಿ ಕೊಡುತ್ತಾರೆ. ಒಬ್ಬ ಜಮೀನುದಾರನಿಗೆ ಇಬ್ಬರು ಹುಡುಗರಿರುತ್ತಾರೆ. ಅವರನ್ನೆಲ್ಲ ಓದಿಸಿ, ಅವರಿಗೆ ಸರಿಯಾದ ಶಿಕ್ಷಣವನ್ನು ಕೊಟ್ಟರೆ ಹಿಂದೂಸ್ತಾನದ ಸರಕಾರದಿಂದ ನೇಮಿತವಾಗಿರುವ ಡಿಗ್ರಿಯನ್ನು ಪಡೆಯುತ್ತಾರೆ. ಆದರೆ ಓದಿದವರೆಲ್ಲ ಹಿಂದೂಸ್ತಾನದ Prime Minister ಆಗಬೇಕೆಂದರೆ ಅದು ಸಾಧ್ಯ

(ಶ್ರೀ ವಿ. ಎಸ್. ತಿಮ್ಮಾರೆಡ್ಡಿ)

ವಾಗುವುದಿಲ್ಲ. ಒಬ್ಬೊಬ್ಬರಿಗೆ ಒಂದೊಂದು ಬಾಬಿನಲ್ಲಿ ಆಸಕ್ತಿಯಿರುತ್ತದೆ. ಹೀಗೆ ಜಮೀನುದಾರರಾಗಿರುವವರು ದೊಡ್ಡ ವ್ಯವಸಾಯಗಾರರಾಗಿರುವುದಿಲ್ಲ. ಕೂಲಿಯವರ ಕೈಯಲ್ಲಿ ತಮ್ಮ ಜಮೀನಿನ ಕೆಲಸಗಳನ್ನು ಮಾಡಿಸುತ್ತಾರೆ. ಸ್ವಂತವಾಗಿ ವ್ಯವಸಾಯ ಮಾಡುವುದಿಲ್ಲ. ನಮ್ಮ ಉತ್ತರ ಕರ್ನಾಟಕದಲ್ಲಿ ಈ ರೀತಿಯಾಗಿ ವ್ಯವಸಾಯವನ್ನು ಮಾಡುತ್ತಿದ್ದಾರೆ. ಈ ಕೂಲಿಯವರು ಜಮೀನುದಾರರ ಹತೋಟಿಯಲ್ಲಿದ್ದು ಅವರು ಉತ್ತಮತರವಾದ ಕೆಲಸವನ್ನು ಮಾಡುತ್ತಿದ್ದಾರೆ. ಅಲ್ಲದೆ ಅಲ್ಲಿ ಗೇಣಿದಾರರು ತುಂಬ ಬರುತ್ತಾರೆ. ಶ್ರೀಮಂತರಾಗಿರುವವರು ತಮ್ಮ ಜಮೀನನ್ನು ಉತ್ತಮವಾದ ರೀತಿಯಲ್ಲಿ ಮಾಡುತ್ತಾರೆ. ಬಡವರಾದವರಿಗೆ ಹೀಗೆ ಖರ್ಚು ಮಾಡುವುದು ಕಷ್ಟವಾಗುತ್ತದೆ. ಈಗ ಯಾರಿಗಾದರೂ ರೋಗ ಬಂದರೆ ಔಷಧಿಗಾಗಿ ಡಾಕ್ಟರವರ ಬಳಿಗೆ ಹೋಗುತ್ತಾರೆ. ರೋಗವಿಲ್ಲದಿದ್ದರೆ ಹೋಗುವುದಿಲ್ಲ. ಹಾಗೆ ಗೇಣಿದಾರರು ಬಡವರಾಗಿದ್ದರೆ. ಜಮೀನುದಾರರಿಂದ ಸಹಾಯವನ್ನು ಪಡೆದು ಜಮೀನನ್ನು ಮಾಡುತ್ತಾರೆ. ಈಗ ಸುಮಾರು ಒಂದು ಸಾವಿರ ಅಥವಾ ಎರಡು ಸಾವಿರ ಎಕರೆಗಳಷ್ಟು ಜಮೀನಿದ್ದರೆ ಅಂತಹ ಕಡೆಗಳಲ್ಲಿ ಸರಿಯಾದ ಗೊಬ್ಬರ, ಬೀಜಗಳನ್ನು ಸರಬರಾಜುಮಾಡಿ ಅದಕ್ಕೆ ತಕ್ಕ ಯಂತ್ರೋಪಕರಣಗಳನ್ನು ಉಪಯೋಗಿಸಿದರೆ ವ್ಯವಸಾಯ ಮಾಡಲಿಕ್ಕೆ ಸಾಧ್ಯವಾಗುವುದು. ಇಲ್ಲದಿದ್ದರೆ ಆಗುವುದಿಲ್ಲ. ಇದಕ್ಕಾಗಿ ಈಗ ಈ ವರದಿಯಲ್ಲಿ ಹಿಡುವಳಿಯ ಮಿತಿಯನ್ನು ನಿರ್ಧರಿಸಲಾಗಿದೆ. ಆದರೆ ಈ ರೀತಿಯಾಗಿ ದೊಡ್ಡದಾಗಿರುವ ಕ್ಷೇತ್ರದಲ್ಲಿ ಅಮೇರಿಕ ಇಂಗ್ಲೆಂಡುಗಳಲ್ಲಿ Mechanisation ಪದ್ಧತಿಯಿಂದ ಮಾಡಲು ಸಾಧ್ಯವಾಗಿದೆ. ಇಲ್ಲಿ ಹಾಗೆ ಮಾಡಲು ಸಾಧ್ಯವಿಲ್ಲ, ಸಾವಿರಾರು ಎಕರೆ ಜಮೀನು ಪಡೆದಿರುವವರು ಜಮೀನನ್ನು ಈ ಭೂಸುಧಾರಣೆಯ ಪ್ರಕಾರ ಕೊಡಬೇಕಾಗುತ್ತದೆ. ಆದುದರಿಂದ ಅವರು ತಮಗೆ ಎಷ್ಟು ಬೇಕೋ ಅಷ್ಟು ತೆಗೆದುಕೊಂಡು ಬಾಕಿಯುದನ್ನು ಕೊಟ್ಟು ರೊಕ್ಕವನ್ನು ತೆಗೆದುಕೊಳ್ಳಬಹುದು. ಹೀಗೆ ಇಂತಹವರು ವಿಶಾಲ ಮನಸ್ಸಿನಿಂದ ಮಾಡಿದರೆ ಆ ಜಮೀನುದಾರರಿಗೇ ಕಲ್ಯಾಣವಾಗುತ್ತದೆ. ಇದಕ್ಕೆ ಮಿತಿಯೇನೋ ಇರಬೇಕು. ಆದರೆ ಈ ceiling ನ ಮಿತಿ ಎಷ್ಟು ಎನ್ನುವುದನ್ನು ನಿರ್ಣಯ ಮಾಡಿ. ಅದು ರೈತರಿಗೆ ಎಷ್ಟೋ ಸಂತೋಷವಾಗುತ್ತದೆ. ಮತ್ತು ಎಷ್ಟೋ ಹಣ ಉಳಿತಾಯವಾಗುತ್ತದೆ. ಹೀಗೆ ಒಂದು ಮಧ್ಯ ಮಾರ್ಗವನ್ನು ಹಿಡಿದು ಜಮೀನುದಾರರು ಸಂತೋಷದಿಂದ ಒಪ್ಪಿಮಾಡಿದರೆ ದೇಶಕ್ಕೆ ಇದರಿಂದ ಅನುಕೂಲವಾಗತ್ತದೆ. ಇದಕ್ಕಾಗಿ ಟ್ರಿಬ್ಯೂನಲ್ಲಿಗಾಗಲಿ ಕೋರ್ಟಿಗಾಗಲಿ ಹೋಗುವ ಅಗತ್ಯವಿಲ್ಲ.

ಅಲ್ಲದೆ, ಈ ವ್ಯವಹಾರಗಳ ಪರಿಶೀಲನೆಗಾಗಿ ಟ್ರಿಬ್ಯೂನಲ್‌ಗೆ ಹೋಗಬೇಕೆಂದಿದೆ. ಆದರೆ ಈ ವ್ಯವಹಾರಗಳೆಲ್ಲ ಸಿವಿಲ್ ಕೋರ್ಟುಗಳಿಗೇ ಹೋದರೆ ಅನುಕೂಲವಾಗುತ್ತದೆ.

ನಮ್ಮಲ್ಲಿ ರಾಗಿ, ಭತ್ತದ ಬೆಳೆಗಳು ಇವೆ. ಗೋಧಿ, ತಂಬಾಕು, ಜೋಳ ಹೀಗೆ ಎಲ್ಲ ಬೆಳೆಗಳನ್ನೂ ಬೆಳೆಯುತ್ತಾರೆ. ಅವನ್ನೆಲ್ಲ ಪಾಲುಮಾಡವುದಕ್ಕೋಸ್ಕರ ಒಂದು ಕಡೆ ಬೆಳೆದ ಬೆಳೆಯನ್ನೆಲ್ಲ ರಾಶಿ ಹಾಕುತ್ತಾರೆ. ಗೇಣಿದಾರರು ಇಷ್ಟು ಪಲ್ಲದಷ್ಟು ಬೆಳೆಗಳನ್ನು ಬೆಳೆದಿದ್ದೇವೆಂದು ಹೇಳುವುದನ್ನು ಜಮೀನುದಾರರೂ ಒಪ್ಪಿಕೊಳ್ಳುತ್ತಾರೆ. ಅದರಿಂದಾಗಿ ರೈತರು ಬಂದು ಸಂತೋಷದಿಂದ ಎಷ್ಟು ಬೆಳೆಯನ್ನು ಬೆಳೆಯಬೇಕೆಂದು ಜಮೀನುದಾರರಿಂದ ನೇಮಕವಾಗಿದೆಯೋ ಅದಕ್ಕಿಂತ ಹೆಚ್ಚಿನ ಬೆಳೆಯನ್ನು ಬೆಳೆಯುತ್ತಾರೆ. ಸಾವೆ, ಸಜ್ಜೆ ಬೆಳೆಯತಕ್ಕ ಭೂಮಿಯೂ ಕೂಡ ಇದೆ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಭತ್ತದ ಜಮೀನುಗಳು ಬಹುವಾಗಿ ಇರುವುದಿಲ್ಲ, ಅದರಿಂದ ಅಲ್ಲಿ ರೈತರು ಕೂಲಿಮಾಡುತ್ತಾರೆ. ನಾಲ್ಕು ಎಕರೆಯಿಂದ ಐದು ಎಕರೆಯವರಿಗೆ ಕೂಲಿಮಾಡುತ್ತಾರೆ. ಗೋಧಿ ಬೆಳೆಯುತ್ತಾರೆ. ಅವರು ಬೆಳೆದ ಗೋಧಿಯ ಪ್ರಮಾಣದಂತೆ ಅವರಿಗೆ ಗೋಧಿಯನ್ನು ಕೂಲಿಗಾಗಿ ಕೊಡುತ್ತಾರೆ. ಅಲ್ಲದೆ ಎಂಟನೆಯ ಒಂದು ಭಾಗ ಹತ್ತಿ, ಜೋಳ, ರಾಗಿ ಬೆಳೆಯಲ್ಲಿ ಒಂದು ನಿಗದಿಯಾದ ಪಾಲನ್ನು ಕೊಡುತ್ತಾರೆ.

ಸಭಾಪತಿಯವರು.—ಅವರ ಜೊತೆಗೆ ರೊಕ್ಕ ಕೊಡುವುದಿಲ್ಲವೇನು !

ಶ್ರೀ ವಿ. ಎಸ್. ತಿಮ್ಮಾರೆಡ್ಡಿ.—ಅವರು ಇಷ್ಟಪಟ್ಟರೆ ಕೊಡುತ್ತಾರೆ. ಅರಿವೆಗಳನ್ನು ಹಾಕಲು ಕೊಡುತ್ತಾರೆ. ಅಲ್ಲದೆ ರೊಕ್ಕ ಒಂದೂ ಕಾಲು ರೂಪಾಯಿನಿಂದ ಒಂದೂವರೆ ರೂಪಾಯಿನವರೆಗೆ ಕೊಡಬೇಕೆಂದು ವ್ಯವಸ್ಥೆ ಇದೆ. ಅವರಿಗೆ ಭೂಮಿ ಕೊಡುವುದಿಲ್ಲ, ಅವರು ಇಷ್ಟೇ ಕೊಡಬೇಕೆಂದೂ ಕೇಳುವುದಿಲ್ಲ.

ಇಲ್ಲಿ ತಂದಿರುವಂತೆ ನಾಲ್ಕನೆಯ ಒಂದುಪಾಲು ಕೊಡುವುದಕ್ಕೆ ಬದಲಾಗಿ ಮೂರನೆಯ ಒಂದುಪಾಲು ಎಂದು ತೆಗೆದುಕೊಂಡು ಬಂದರೆ ಸರಿಯಾಗಿ ತೋರುತ್ತದೆ.

ಇಷ್ಟು ಸೂಚನೆಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಎಂ. ಗಂಗಾಧರಯ್ಯ (ವಿಧಾನ ಸಭಾಕ್ಷೇತ್ರ).—ಮಾನ್ಯ ಸಭಾತಿಗಳೇ, ಈಗಾಗಲೇ ಅನೇಕ ಮಾನ್ಯ ಸದಸ್ಯರು ನಮ್ಮ ಮುಂದೆ ಇರತಕ್ಕ ಶ್ರೀಮಾನ್ ಜತ್ತಿಯವರ ಭೂಸುಧಾರಣಾ ವರದಿಯ ಮೇಲೆ ತಮ್ಮ ನಿಲುವನ್ನು ಸಭೆಯ ಮುಂದೆ ಇಟ್ಟಿದಾರೆ. ನಾನೂ ಅವೆಲ್ಲವನ್ನೂ ಇಲ್ಲಿಯವರೆಗೆ ಕೂಲಂಕಷವಾಗಿ ಕೇಳಿದ್ದೇನೆ. ನಮ್ಮ ಮುಂದೆ ಇಂದು ಇರತಕ್ಕ ಮುಖ್ಯವಾದ ಪ್ರಶ್ನೆ ಎಂದರೆ ಆಹಾರದ ಪ್ರಶ್ನೆ. ಮೊದಲನೆಯ ಪಾಂಚವಾರ್ಷಿಕ ಯೋಜನೆಯನ್ನು ಮುಗಿಸಿ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ನಾವು ಇದ್ದೇವೆ; ಈ ಯೋಜನೆಯ ಅವಧಿಯೊಳಗೆ ನಾವು ಆಹಾರದ ಸ್ವಯಂ ಪರಿಪೂರ್ಣತೆಯನ್ನು ಪಡೆಯಬೇಕಾಗಿದೆ. ಅದನ್ನು ಪಡೆಯುವುದಕ್ಕಾಗಿ ಮೂರು ಕಾರಣಗಳು ಮುಖ್ಯವಾದುವು ಎಂದು ನನಗೆ ಕಂಡುಬರುತ್ತದೆ. ಮೊದಲನೆಯದು ಜಮೀನು ಹಂಚಿಕೆ ವ್ಯವಸ್ಥಿತವಾಗಿರಬೇಕು. ಎರಡನೆಯದು, ಪುರಾತನವಾಗಿ ಬಂದಿರತಕ್ಕ ವ್ಯವಸಾಯ ಪದ್ಧತಿಯನ್ನು ಮಾರ್ಪಾಡು ಮಾಡುವುದು ; ಮೂರನೆಯದು, ಜಮೀನಿನಲ್ಲಿ ಇಷ್ಟು ಆಹಾರ ಪದಾರ್ಥಗಳನ್ನು ಬೆಳೆಯ ಬೇಕೆಂಬ ನಿರ್ಬಂಧ ಹಾಕುವುದು. ಇದರಿಂದಲೇ ನಾವು ಆಹಾರ ಪದಾರ್ಥಗಳ ಉತ್ಪನ್ನದ ಬಗ್ಗೆ ಸ್ವಯಂಪರಿಪೂರ್ಣತೆಯನ್ನು ಪಡೆಯುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ನಮ್ಮ ದೇಶದಲ್ಲಿ ಎದ್ದು ಕಾಣುತ್ತಿರುವ ಈ ಆಹಾರ ಸಾಮಗ್ರಿಗಳ ಕೊರತೆಯನ್ನು ಹೇಗೆ ಸರಿಪಡಿಸಬೇಕೆಂಬ ಸಮಸ್ಯೆ ಇನ್ನೂ ನಮ್ಮ ಮುಂದೆ ಇದ್ದೇ ಇದೆ. ಆದರೆ ಇಲ್ಲಿಯವರೆಗೂ ಮಾತನಾಡಿರತಕ್ಕ ನನ್ನ ಮಾನ್ಯ ಸ್ನೇಹಿತರುಗಳೆಲ್ಲ ಕೇವಲ ಭೂಮಿ ಒಡೆತನದ ವಿಚಾರವಾಗಿಯೇ ಹೆಚ್ಚಾಗಿ ಮಾತನಾಡಿದ್ದಾರೆ. ಆದರೆ ಅವರ ಗಮನ

ಕ್ರಮಾಂಕ Accession No. 4743
ದಿನಾಂಕ Date

ಅಷ್ಟಾಗಿ ಇಂದು ನಮಗಿರತಕ್ಕ ಆಹಾರ ಕೊರತೆಯ ಕಡೆಗೆ ಹೋಗಿರುವುದಿಲ್ಲ. ನಮ್ಮ ದೇಶದಲ್ಲಿರುವ ಆಹಾರಕೊರತೆಯನ್ನು ನೀಗಲು ನಮಗಿರತಕ್ಕ ಒಂದೇ ಒಂದು ಮಾರ್ಗವೆಂದರೆ ಅದು ಭೂಸುಧಾರಣಾ ವ್ಯವಸ್ಥೆ. ಇದನ್ನು ಬಿಟ್ಟರೆ ಬೇರೆ ಉಪಾಯವೇ ಇಲ್ಲ. ಭೂಸುಧಾರಣೆಗಳನ್ನು ನಾವು ಎಷ್ಟು ಬೇಗ ಜಾರಿಗೆ ತಂದರೆ ಅಷ್ಟು ಬೇಗ ನಮ್ಮ ಆಹಾರ ಕೊರತೆಯನ್ನು ನಾವು ಕೊನೆಗಾಣಿಸಬಹುದು. ನಾವೇನಾದರೂ ಹೀಗೆಯೇ ಈ ಸುಧಾರಣೆಗಳ ವಿಚಾರದಲ್ಲಿ ಕಾಲತಳ್ಳುತ್ತ ಹೋದರೆ ಇನ್ನು ಹತ್ತಾರು ವರ್ಷಗಳಲ್ಲೇ ಇಡೀ ದೇಶವೇ ಕೂಳಿಲ್ಲದೆ ಕೊನೆಗಾಣತಕ್ಕ ಕಾಲಬರಬಹುದೆಂದು ಕಾಣುತ್ತದೆ. ಸ್ವಾಮಿ, ಶ್ರೀ ಎಂ. ಪಿ. ಲ್. ಶಾಸ್ತ್ರಿಗಳವರು ವಿದ್ವನ್ಮಣಿಗಳು, ಅವರೂ ಸಹ ಭೂಹಿಡುವಳಿಗಳ ಬಗ್ಗೆ ಈ ರೀತಿ ಒಂದು ಸೀಲಿಂಗ್ ಪರಿಮಿತಿಯನ್ನು ಹಾಕಬಾರದೆಂದೂ, ಇದನ್ನು ಹಾಕಿದರೆ ವ್ಯವಸಾಯಗಾರರಿಗೆ ಬಹಳ ತೊಂದರೆಯಾಗುತ್ತದೆಂದೂ ಹೇಳಿದರು. ಆದುದರಿಂದ ಅವರ ಅಭಿಪ್ರಾಯ ಶ್ರೀಮಂತರಾಗಿರತಕ್ಕವರು ಸೌಧಗಳ ಮೇಲೆ ಸೌಧಗಳನ್ನು ಕಟ್ಟಿಸಿಕೊಂಡು ಅವರು ಶ್ರೀಮಂತಿಕೆಯ ತುಟ್ಟತುದಿಯಲ್ಲೇ ಇರಲಿ ಕಡುಬಡತನದಲ್ಲಿರತಕ್ಕವರು ಹೀಗೆ ದಿನದಿನಕ್ಕೂ ಇನ್ನೂ ಅತಿಯಾದ ಬಡತನಕ್ಕೆ ಇಳಿಯುತ್ತಿರಲಿ ಎನ್ನುವಂತೆ ಕಾಣುತ್ತಿದೆ. ಆದರೆ ಅದು ಅಷ್ಟು ಸರಿಯಾದುದೆಂದು ನನಗೆ ಅನಿಸುತ್ತಿಲ್ಲ. ಈ ದಿವಸ ಸಮಾಜದಲ್ಲಿ ಅಂತರಗಳೂ ಏರುಪೇರುಗಳೂ ಬಹಳವಾಗಿವೆ. ಇವರು ವಿದ್ಯಾವಂತರು, ಇವರು ಅವಿದ್ಯಾವಂತರು, ಬಡವರು ಶ್ರೀಮಂತರು, ಇವರು ಮೇಲು, ಇವರು ಕೀಳು ಎನ್ನುತಕ್ಕ ಭೇದಭಾವನೆಗಳು ಒಂದಲ್ಲ ಒಂದು ರೀತಿಯಲ್ಲಿ ಹೋಗಲೇ ಬೇಕು. ಇಂಥ ಅಸಮಾನತೆಗಳನ್ನು ಸಮಾಜದಿಂದ ತೊಡೆದು ಹಾಕಬೇಕಾದ್ದು ಪ್ರಜಾಪ್ರಭುತ್ವ ಸರ್ಕಾರದ ಗುರಿಗಳಲ್ಲಿ ಬಹಳ ಮುಖ್ಯವಾದದ್ದು.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಸಭಾಪತಿಗಳೆ, ನಾನು ಹೇಳಿದ್ದೇನೆಂದರೆ-ಭೂಹಿಡುವಳಿಯ ಬಗ್ಗೆ ಒಂದು ಮಿತಿಯನ್ನು ಹಾಕಬಾರದೆಂದು ಹೇಳಿದುದರ ಅಭಿಪ್ರಾಯ ಸಮಾಜದಲ್ಲಿರುವ ಈ ಅಂತರಗಳು ಅವಶ್ಯಕವಾಗಿ ಹೋಗಬೇಕು ಎಂಬ ಉದ್ದೇಶದಿಂದಲೇ ಹಾಗೆ ಹೇಳಿದ್ದೇನೆ. ಹಾಗಿದ್ದರೇನೇ ಇತರರೂ ಕೂಡ ಸೌಧಗಳನ್ನು ಕಟ್ಟಿಸತಕ್ಕ ಮಟಕ್ಕೇರಲು ಅವಕಾಶವಿರುತ್ತದೆ. ಅಂಥ ಅವಕಾಶವನ್ನು ಈ ದಿವಸ ಮುರಿದುಹಾಕಬಾರದೆಂದು ನಾನು ತಿಳಿಸಿದೆ ಅಷ್ಟೆ.

ಶ್ರೀ ಎಚ್. ಎಂ. ಗಂಗಾಧರಯ್ಯ.—ಆ ರೀತಿ ಒಂದು ಮಿತಿಯನ್ನು ಇಡದಿರುವುದು ಅಂತರಗಳನ್ನು ತಪ್ಪಿಸಲು ಹೇಗೆ ಅವಕಾಶ ನೀಡಬಲ್ಲದೆಂಬುದನ್ನು ಎಲ್ಲರೂ ಆಲೋಚಿಸಬೇಕಾದಂಥ ವಿಷಯ. ಆ ಮಾತು ಹಾಗಿರಲಿ. ಒಂದು ಇರುವೆಗೂಡಿನಲ್ಲಿರತಕ್ಕ ಇರುವೆಗಳಲ್ಲಿ ಸಹ ಕೇವಲ ನಾಲ್ಕಾರು ಇರುವೆಗಳನ್ನು ಮಾತ್ರ ಹೊರಗೆ ಕಳುಹಿಸಿ ಅವುಗಳು ತರತಕ್ಕ ಆಹಾರದಿಂದ ಜೀವಿಸಬೇಕೆಂಬ ಭಾವನೆ ಇರುವುದಿಲ್ಲ ಎನ್ನುವಾಗ ಇನ್ನು ಮಾನವ ಸಮಾಜದ ಏಳಿಗೆಯ ಬಗ್ಗೆ ಎಲ್ಲರೂ ಎಷ್ಟರಮಟ್ಟಿಗೆ ದುಡಿಮೆ ಮಾಡಬೇಕಾಗಿದೆಯೆಂಬ ಒಂದು ತತ್ವವನ್ನು ಆ ಪ್ರಾಣಿಗಳಿಂದ ನಾವಿನ್ನೂ ತಿಳಿದುಕೊಳ್ಳಬೇಕಾದ್ದಿದೆ. ಆ ಇರುವೆಗಳೆಲ್ಲ ನಿರಂತರವೂ ಸೋಮಾರಿಗಳಾಗಿರದೆ ಕೆಲಸ ಮಾಡುತ್ತಿರುವುದಾದರೂ ಅವುಗಳ ಆಹಾರ ಶೇಖರಣೆಗೋಸ್ಕರವಾಗಿಯೇ. ನಮ್ಮ ಬಾಳೂ ಇಷ್ಟೆ. ಹೀಗೆ ಸಮಾಜದಲ್ಲಿರತಕ್ಕವರೆಲ್ಲರೂ ದುಡಿಯುವಂತಾಗಬೇಕಾದರೆ, ನಮ್ಮ ದೇಶದ ಆಹಾರ ಕೊರತೆ ನಿವಾರಣೆಯಾಗಬೇಕಾಗಿದ್ದರೆ ಇಂದಿನ ಈ ಭೂಮಾಲೀಕ ವ್ಯವಸ್ಥೆಯೇನಿದೆ ಅದುಮೊದಲು ಹೋಗಬೇಕು. ಸ್ವಾಮಿ, ತಮಗೆಲ್ಲಾ ಗೊತ್ತಿರುವಂತೆ ಮತ್ತು ಈ ಜತ್ತಿ ಸಮಿತಿಯ ವರದಿಯಲ್ಲಿ ಸೂಚಿಸಿರುವಂತೆ ಸಮಾಜದಲ್ಲಿರತಕ್ಕ ಕೆಲವು ಜನರು ಮಾತ್ರ ಒಂದಕ್ಕಿಂತ ಹೆಚ್ಚು ಉದ್ಯೋಗಗಳನ್ನಿಟ್ಟುಕೊಂಡಿರತಕ್ಕದ್ದು ಎಲ್ಲರಿಗೂ ಗೊತ್ತಿದೆ. ಇತ್ತ ಸರ್ಕಾರಿ ಕೆಲಸದಲ್ಲಿದ್ದುಕೊಂಡು ತಿಂಗಳಿಗೆ ಸಾವಿರಗಟ್ಟಲೆ ಸಂಬಳವನ್ನೂ ಪಡೆಯುತ್ತಿದ್ದಾರೆ; ಅತ್ತಲಾಗಿ ಜಮೀನನ್ನಿಟ್ಟುಕೊಂಡು ಅದರಿಂದಲೂ ಸಂಪಾದನೆ ಹೊಂದುತ್ತಿದ್ದಾರೆ. ಹೀಗಾಗಿ ಈ ದಿವಸ ಹೊಲದಲ್ಲಿ ಕೆಲಸಮಾಡತಕ್ಕ ರೈತನಿಗೆ ಜಮೀನಿನ ವಿಚಾರದಲ್ಲಿರಬೇಕಾದಂಥ ಶ್ರದ್ಧಾಭಕ್ತಿ ಹೊರಟು ಹೋಗಿದೆ. ಶ್ರೀಮಾನ್ ಕೆಂಪಹೊನ್ನಯ್ಯನವರು ಕೌಪೀನದಷ್ಟಿರುವ ಭೂಮಿಯನ್ನು ಹೇಗೆ ಹರಿದು ಹಂಚಬೇಕೆಂದು ಕೇಳಿದರು. ಅಷ್ಟೆ ಅಲ್ಲ, ಆ ಕೌಪೀನ ಹಿಂದೂ ಮುಂದೂ ತೂತುಬಿದ್ದು ಹೋಗಿರತಕ್ಕದ್ದೆಂದು ಹೇಳಿದರು. ಇರಲಿ, ಈ ದಿವಸ ಜಮೀನು ಸಾಗುವಳಿ ಮಾಡತಕ್ಕ ವ್ಯವಸಾಯಗಾರನಿಗೆ ಆ ಜಮೀನು ತನ್ನದಲ್ಲವೆಂಬ ಭಾವನೆಯಿರುವಾಗ ಅವನು ಹೇಗೆ ವ್ಯವಸಾಯವನ್ನು ಶ್ರದ್ಧಾಭಕ್ತಿಯಿಂದ ಮಾಡಲು ಅವಕಾಶವಿದೆ? ನಮ್ಮ ದೇಶದಲ್ಲಿ ವ್ಯವಸಾಯಾಭಿವೃದ್ಧಿಯಾಗಬೇಕಾದರೆ ರೈತನಾದವನಿಗೆ ಈ ಭೂಮಿ ನನ್ನದು, ಇದು ನನ್ನ ಒಂದು ಶಾಶ್ವತವಾದ ಆಸ್ತಿ ಎಂಬ ವಿಶ್ವಾಸ ಹುಟ್ಟಿದರಲ್ಲವೇ ಆತನಿಗೆ ಈ ವ್ಯವಸಾಯದಲ್ಲಿ ಒಂದು ಹೆಚ್ಚಿನ ಶ್ರದ್ಧಾಭಕ್ತಿ ಹುಟ್ಟಿ ಆತ ಒಂದು ಆಸಕ್ತಿಯಿಂದ ಕೆಲಸ ಮಾಡುವುದು! ಆದರೆ ಈ ದಿವಸ ಇರತಕ್ಕ ಸನ್ನಿವೇಶ ರೈತರಲ್ಲಿರಬೇಕಾದ ಆ ಆಸಕ್ತಿಯನ್ನೆಲ್ಲಾ ಮಾಯಗೊಳಿಸಿದೆ. ಜಮೀನ್ದಾರರು ತಮ್ಮ ಭೂಮಿಯನ್ನು ಈ ವರ್ಷ ಒಬ್ಬ ರೈತನಿಗೆ ಕೊಟ್ಟರೆ ಮುಂದಿನ ವರ್ಷ ಅದನ್ನು ಇವನಿಗೆ ತಪ್ಪಿಸಿ ಬೇರೆಯವನಿಗೆ ಕೊಟ್ಟುಬಿಡುತ್ತಾನೆ. ಈ ಅಂಶವನ್ನು ಮಾನ್ಯ ಸದಸ್ಯರೆಲ್ಲರೂ ತಮ್ಮ ಗಮನದಲ್ಲಿಡಬೇಕಾಗಿದೆ. ಇಂಥ ಒಂದು ಅನಿಶ್ಚಿತ ಪರಿಸ್ಥಿತಿಯಿರುವಾಗ ರೈತನಾದವನಿಗೆ—ಸ್ವತಃ ಸಾಗುವಳಿ ಮಾಡತಕ್ಕ ಮನುಷ್ಯನಿಗೆ ಈ ಜಮೀನು ಇನ್ನು ಮುಂದಕ್ಕೆ ನಿನ್ನದಾಗಿದೆ, ಈ ಜಮೀನಿಗೆ ನೀನೇ ಒಡೆಯನು, ಇದು ನಿನ್ನ ಒಂದು ಶಾಶ್ವತವಾದ ಆಸ್ತಿ ಎಂಬ ಪ್ರೋತ್ಸಾಹಕೊಟ್ಟಲ್ಲಿ ಆತನಿಗೆ ಭೂಮಿಯ ಬಗ್ಗೆ ಹೆಚ್ಚು ಅಭಿಮಾನ ಹುಟ್ಟಿ ಹೆಚ್ಚು ಹೆಚ್ಚು ಆಹಾರಧಾನ್ಯಗಳನ್ನು ಬೆಳೆಸಬೇಕು, ತನ್ನ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಬೇಕೆಂಬ ಆಸಕ್ತಿ ಹುಟ್ಟುವುದಿಲ್ಲವೇ! ಈ ರೀತಿ ಮಾಡಿದರೆ ಆಗ ಪ್ರತಿಯೊಬ್ಬ ರೈತನೂ ಅವನ ಜೀವನವನ್ನಾದರೂ ಸುಗಮವಾಗಿ ನಡೆಸಿಕೊಂಡುಬರಲು ಹೆಚ್ಚಿನ ಮಟ್ಟದಲ್ಲಿ ಶ್ರಮಿಸಲೇಬೇಕಾಗಿರುತ್ತದೆ. ನಾವು ಎಲ್ಲಿಯವರೆಗೆ ಸ್ವಂತ ವ್ಯವಸಾಯ ಮಾಡತಕ್ಕ ಜನರಿಗೆ ಇಂಥ ಪ್ರೋತ್ಸಾಹಗಳನ್ನು ನೀಡುವುದಿಲ್ಲವೋ ಮತ್ತು ಎಲ್ಲಿಯವರೆಗೆ ಅವರಿಗೆ ಭೂಮಿಯ ಒಡೆತನವನ್ನು ಕೊಡುವುದಿಲ್ಲವೋ ಅಲ್ಲಿಯವರೆಗೂ ನಮ್ಮ ದೇಶದ ದಾರಿದ್ರ್ಯ ಹೋಗುವುದಿಲ್ಲ; ಆಹಾರದ ಕೊರತೆಯೂ ತಪ್ಪುವುದಿಲ್ಲ. ಎಲ್ಲಿಯತನಕ ಈ ಒಂದು ಪ್ರಶ್ನೆ ಬಗೆಹರಿಯುವುದಿಲ್ಲವೋ ಅಲ್ಲಿಯತನಕ ನಮ್ಮ ಮುಂದಿರತಕ್ಕ ಬಾಕಿ ಸಮಸ್ಯೆಗಳನ್ನು ಬಗೆಹರಿಸಲು ನಮಗೆ ಸಾಧ್ಯವಾಗುವುದಿಲ್ಲ. ಜಮೀನ್ದಾರರು ಹೀಗೆಯೇ ಜಮೀನ್ದಾರರಾಗಿರಲಿ, ಜಮೀನಿಲ್ಲದವರು ಹೀಗೆಯೇ ಭಿಕಾರಿಗಳಾಗಿ ತಿರುಗುತ್ತಿರಲಿ, ಅವರಿಗೆ ಭೂಮಾಲೀಕತೆ

(ಶ್ರೀ ಎಚ್. ಎಂ. ಗಂಗಾಧರಯ್ಯ)

ಯನ್ನು ಕೊಡಬಾರದು ಎಂಬುದನ್ನು ನಾನು ಖಂಡಿತ ಒಪ್ಪುವುದಕ್ಕಾಗುವುದಿಲ್ಲ. ಸಾಗುವಳಿ ದಾರನ ಜೀವನ ಈ ದಿವಸ ಬಹಳ ಕಷ್ಟಕ್ಕೆ ಬಂದಿದೆ. ನಾನು ಸ್ವಂತ ವ್ಯವಸಾಯಗಾರನಾದುದರಿಂದ ನನಗೆ ಅದರ ರುಚಿ ಸ್ವಲ್ಪಮಟ್ಟಿಗೆ ತಿಳಿದಿದೆ. ರೈತನಾದವನ ಜೀವನವೆಲ್ಲ-ಆತನ ಸರ್ವ ಆಗುಹೋಗುಗಳೆಲ್ಲವೂ ಈ ವ್ಯವಸಾಯದ ಕಸುಬೊಂದರಿಂದಲೇ ನಡೆದುಕೊಂಡು ಹೋಗಬೇಕಾಗಿದೆ. ಈ ಎಲ್ಲ ಕಾರಣಗಳಿಂದಲೂ ಈ ದಿವಸ ಗೇಣೀಧಾರರಾಗಿರತ್ಕವರಿಗೆ ಆಯಾ ಭೂಮಿಗಳ ಒಡೆತನವನ್ನು ಅವರವರಿಗೇ ಕೊಡತಕ್ಕದ್ದು ನ್ಯಾಯ ಎಂಬುದನ್ನು ಎಲ್ಲ ಮಾನ್ಯ ಸದಸ್ಯರೂ ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಈಗಾಗಲೇ ಅನೇಕ ಮಾನ್ಯಸದಸ್ಯರು ಭೂಸುಧಾರಣೆ ಅತ್ಯಗತ್ಯವಾಗಿದೆಯೆಂದು ತಿಳಿಸಿದ್ದಾರೆ, ನಾವು ನಮ್ಮ ಆಹಾರದಲ್ಲಿ ಸ್ವಯಂ ಪರಿಪೂರ್ಣತೆ ಪಡೆಯಲು ಜತ್ತಿ ಸಮಿತಿಯವರು ಒಪ್ಪಿಸಿರತಕ್ಕ ವರದಿಯಲ್ಲಿ ಕೆಲವು ವಿಚಾರಗಳಲ್ಲಿ ಮಾತ್ರ ಸ್ವಲ್ಪ ಮಾರ್ಪಾಡನ್ನು ಮಾಡಿದರೆ ಇನ್ನುಳಿದ ಸಲಹೆಗಳು ಬಹಳ ಸಾಧುವಾಗಿರುತ್ತವೆ, ಇವುಗಳನ್ನೆಲ್ಲಾ ಒಪ್ಪಿಕೊಳ್ಳಲು ನನ್ನ ಅಭ್ಯಂತರವೇನೂ ಇಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri M. N. MAHANTA DEVARU (Legislative Assembly Constituency).—Sir, as this House has considered this Report for the last four days, I think there is very little for me to add to what the other Hon'ble Members have already said. In the first place, some of my friends here said that after the coming into force of the Tenancy Act here, agricultural production has gone down very much. In support of that argument, we must also remember that, as my Hon'ble friend Sri Sastry pointed out, till the year 1954 the production of foodgrains in our State was 3,000 tons surplus and it is only after that our production has begun to go down. Our Tenancy Act of 1952 was extended to all parts of Mysore State in the year 1954 and it is only after the introduction of that Act in the whole State in the year 1954 that the whole trouble arose. As a result of the introduction of that Act the relationship between landlords and tenants was disturbed. You will see a remarkable change in our production after the year 1954. The contention of the tenants is that from the year 1954 they are bound to give to the landlords a certain portion of the production from the land. Therefore the incentive to grow more has become absent in the mind of the tenant. He is not expending labour, he was not putting as much manure as he was putting before 1954. This, I feel, is the reason why we are sufferring with want of foodstuffs in our State. Had the same peaceful relationship that prevailed before 1954 prevailed afterwards also, I think it would have been possible to solve the food problem by now, because irrigation projects have been extended in various places and a large acreage has been brought under irrigation.

Mr. CHAIRMAN.—Is there no provision in the Tenancy Act requiring the tenant to cultivate properly?

Sri M. N. MAHANTA DEVARU.—Absolutely no provision. No obligation is thrown upon the tenant to cultivate properly. Not a word of this we find in the Act of 1952. On the other hand restrictions are placed on the landlord. He has been fettered after 1954. My submission is that the present Tenancy law, if it is properly amended and if obligation is thrown upon the tenant, I think food production will increase. Such a law could be applied to the entire State of Mysore.

Mr. CHAIRMAN.—Are you suggesting that the minimum quantity that a tenant must grow should be stipulated in the Act?

Sri M. N. MAHANTA DEVARU.—He could cultivate to the maximum extent, provided he makes up his mind.

Mr. CHAIRMAN.—Are you for fixing up minimum production?

Sri M. N. MAHANTA DEVARU.—There are side by side the owner-cultivators and tenant-cultivators. You can compare the production of both. If you take into account the production turned out by the owner-cultivator, you will find that the tenant-cultivator falls short. I submit that so far as the fixing up of rent is concerned, you will have to take into consideration the owner-cultivator's production in the neighbouring land. We have also Inams—Jagirs and Watans. It is only in Inam villages that the question of tenancy arises. I believe that 75 per cent of the total number of tenants reside in Inam villages. In old Mysore State, at any rate, this is the case. Also extensive land-owners are very few in old Mysore

State, excepting tea and coffee estates. The Jatti Committee Report has excluded from the operation of the Tenancy Act, these estates. If that is so, I think there is very little for distribution among the landless people. It has been stated that, because the tiller of the soil is not proprietor, food production has suffered. This question has to be examined in a cool atmosphere. The owner-cultivators are 46 per cent and tenant-cultivators are only 9 per cent. What 46 per cent cannot achieve, can the 9 per cent achieve? I would ask this question of my learned friends who said that the title of land should be conferred on the tiller. This proposition does not convince me at all. It is only if the peaceful, old relationship exists, production could be increased. Unless you impose an obligation on the part of the tenant to cultivate properly, to manure properly, we would not be able to secure maximum benefits out of land. In the Report sufficient safeguards have not been suggested. Take away from the absentee landlords and give land to the landless, but provide sufficient safeguards to ensure maximum production. I will quote instances. From times immemorial, Governments have been giving land. How many of them are owners now? They will sell the land. He becomes landless again and prays for more and more land. They have become traders in land. According to the statistics furnished by the Government, there are 13 per cent landless agricultural labourers, but yet their problem has not been considered in the Report. These landless labourers want to be landless always. They have shown no great desire to possess land. Possessing land is very difficult. How many lands have not been sold for arrears of Khandayam? If a person loves land and cultivates sincerely, can he not pay land revenue? It is so small—merely 1 rupee per acre, if it is dry land or 4 or 5 rupees if it is wet land. To cultivate land, it requires capital, bullocks, plough, manure, etc. What is the use of safeguarding the tenant, if he cannot safeguard the land? Then, is the tenant cultivating land all by himself. He is only a head cooly. He engages agricultural labourers and he will be a supervisor, so to say. He gets the produce. He pays a small amount to agricultural labourers and thus he becomes a rich man. Nowadays, the tenant has become the rich man.

Mr. CHAIRMAN.—There are hereditary Jeetkaras.

Sri M. N. MAHANTA DEVARU.—They are content with being Jeetkaras.

Mr. CHAIRMAN.—Not that they do not want land, but they have no opportunity to get it.

Sri M. N. MAHANTA DEVARU.—They cannot also manage land. Unless somebody comes forward and pays gratis the agricultural expenses, implements, bullocks, etc., they cannot be real agriculturists. If the Government moves in this direction, then it can be done.

Inam Abolition has come into existence. If the Government thinks for a moment to implement that Act, I think most of the problem will be solved. It is only in Inam villages a large number of tenants live, and these tenants would be satisfied if the land is confirmed in their favour.

I want the House to consider as to who is a landlord. The landlord is a person who has acquired land. He is not a squatter or a usurper. He has acquired land lawfully, according to the rules. He has put in a lot of money on the land. He wants to have profits. May be he is an absentee landlord, but he has invested money, as other people have invested in banks, in companies and so on and get dividend or whatever it is. In the same way, these landlords are also expecting a certain amount of interest for the amount they have invested on the land. In that way, we have to consider landlords not as blood-suckers as some of our friends have put it; in one sense or other, we are all sailing in the same boat, in one capacity or other, we depend entirely upon our neighbours or some other person. In the same way, I submit the landlord should not be abused in such a way as our friends do. Next, if the Government wants to give lands to the landless people, I think according to the statistics, which they have already furnished in this book, there is cultivable waste land available

(SRI M. N. MAHANTA DEVARU)

to the extent of about 15 lakhs acres, grazing lands 43 lakhs acres, current fallow 19 lakhs acres and other fallow lands 16 lakhs. That comes to about 95,10,887 acres. Now we have a tenant population of 18 lakhs and agricultural labourers 21 lakhs. If you reduce this into a family of five persons, you get only about 10 lakhs of families. If you divide these lands which are available for distribution you can confer 10 acres per family. Therefore, Sir, this problem will at once be solved if the Government makes up its mind to distribute the land in its possession and in its control at present. After all, supposing the landlords' lands are taken away, what is the number of acres you get? That is another position you will have to consider. The total acreage that they would get for distribution including all that they have got in their own possession after exempting coffee estates, tea estates, orchards and special farms would come to nothing. If the ceiling is fixed, then also I fail to understand what is the relief they are going to confer? Therefore, Sir, on this ground also it is a failure.

Now, I come to basic holding. Basic holding is such a scanty holding that it is not at all worth considering according to me. So far as family holding is concerned, I think even if he is an absentee landlord or anybody else, he must be given back the land if he wants to cultivate the full family holdings. It should be restored to him in full. There should be no restriction whatsoever. It should not be divided into halves, one half to be made resumable and the other half to be conferred on the tenant. That should not be done because it yields only Rs. 1,200 per year, and it is a very small holding. These absentee landlords will be generally employed in Government service and after their retirement they will go back to the land. Then they will have to be given full family holding for their cultivation.

Next, I will come to the ceiling limit. Celing limit, according to me, must yield at least Rs. 12,000 per year. Unless Rs. 12,000 per year is secured to a landlord, he cannot live in a decent manner.

Mr. CHAIRMAN.—Net income?

Sri M. N. MAHANTA DEVARU.—Yes, net income. Otherwise, he cannot educate his children as any citizen of Bangalore or Mysore could do. He cannot lead a decent life unless he has got Rs. 12,000 per year. If a person has got an estate which could yield Rs. 12,000 per year, he should not be disturbed, if he is going to have land cultivated by himself. So far as the fixation of rent on lands of absentee landlords is concerned, I beg to submit that at least that rent must have a proportion to the capital invested on the land as in any other concern. I think 9 per cent of the capital invested on the land would be reasonable. That should be the measuring yard so far as the fixation of rent is concerned. If you fix the value of the land and also the rent, the tenant will have an incentive to grow more because he knows what is to be paid to the landlord. It is only that a definite sum, an ascertainable sum, has to be paid to the landlord and therefore he will be putting all his energy and enthusiasm and all that on the land. Therefore, it must bear a definite proportion to the value of the land so far as absentee landlords' holdings are concerned.

Mr. CHAIRMAN.—The Committee in their Report recommend that it is desirable to pay in kind instead of paying a fixed cash rent.

Sri M. N. MAHANTA DEVARU.—It may be paid in cash or in kind. Suppose a landlord does not take at all gutta for a period of 3 months from the date of harvest, then the tenant is empowered to give it in cash.

Mr. CHAIRMAN.—They have also recommended that the landlord must receive the rent in the place where it is grown.

Sri M. N. MAHANTA DEVARU.—There is difficulty in the landlord going to the tenant and receiving rent. Whenever the landlord goes, the tenant may refuse to give rent. Then how many times he should go? That is the trouble that the tenant will create so far as the landlord is concerned. We are also active lawyers and we have seen how cases are coming up and how the tenants are giving the landlord as much trouble as possible. Sir, after the enactment of tenancy laws, the position of landlords has become precarious and pitiable. If the tenant fails to give the rent for two years, then the landlord can take possession of the land. This is too long a period. This requires modification.

I said that family holding must be resumed fully and given over to the landlord whenever he wants to cultivate his lands. If this benefit is not conferred on the landlords, the result would be fragmentation of the land. It cannot be economic holding. On page 99 they have said:

> "The implementation of the provisions regarding the rights of resumption, especially by holders with less than a family holding, may result in the creation of fragments."

Therefore, I submit that the family holding must be restored in full and the concept of basic holding must be removed from the Committee's Report itself.

So far as suggestion for the Tribunal is concerned, I am of the opinion that the Amildar is not the competent authority to decide cases in this regard. He has got multifarious duties and responsibilities. Moreover, he is not a person who has studied law. Therefore, such cases should never be referred to a Tribunal. If the Government wants to have a separate tribunal for this purpose, a judicial officer should be posted to such places. Regarding a lawyer appearing for raiyats, I submit that this facility should be allowed to the raiyats. Most of the landlords would be literate whereas almost all the raiyats would be illiterate and they will not be able to present their case properly. Therefore, the tenant must necessarily engage a lawyer to present his case properly. In the interest of both the parties, lawyers must be allowed to appear for the parties in these courts. With these words, I conclude.

†ಶ್ರೀ ರುಮಾಲೆ ಚನ್ನಬಸವಯ್ಯ (ನಾಮನಿರ್ದೇಶ ಹೊಂದಿದವರು).—ಸ್ವಾಮೀ, ಇದುವರೆಗೆ ಜತ್ತಿ ಸಮಿತಿಯ ವರದಿಯಮೇಲೆ ಈ ಸಭೆಯ ಬಹುಮತ ಸದಸ್ಯರು ತಮ್ಮ ನಿಶ್ಚಿತ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಎಲ್ಲರೂ ಸಹ ಅವರಿಗೆ ಸರಿಯೆಂದು ತೋಚಿದುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹೀಗೆ ಇಲ್ಲಿ ವಿಚಾರ ಮಾಡಿರತಕ್ಕವರೆಲ್ಲ ಈ ಸಮಸ್ಯೆಯನ್ನು ಸರಳವಾಗಿ ಬಿಡಿಸಿ ತೋರಿಸಿದ್ದಾರೆ. ಈಗ ನಾವು ಇವೊತ್ತಿನ ದಿವಸ ಸಮಿತಿಯ ಬಗ್ಗೆ ಯೋಚನೆಮಾಡುವುದಾದರೆ ದೊಡ್ಡದಾದ ದೇಶದಲ್ಲಿ ಮೊದಲು ಎಷ್ಟು ಭಿನ್ನಾಭಿಪ್ರಾಯಗಳು ಬಂದಿದ್ದುವೋ ಈಗ ಅಷ್ಟು ಭಿನ್ನಾಭಿಪ್ರಾಯಗಳಿಲ್ಲ, ಕಡಿಮೆಯಾಗಿವೆ. ಎರಡು ಕಡೆಯವಾದವನ್ನೂ ಹುಟ್ಟಿಸಿದವರು ಒಬ್ಬರಿಗೊಬ್ಬರು ಪರಸ್ಪರ ಅರಿತುಕೊಂಡು ಒಂದು ಮಧ್ಯಮಮಾರ್ಗವನ್ನು ಅನುಸರಿಸುವುದಕ್ಕೆ ಅಷ್ಟೇನೂ ಕಷ್ಟವಾಗುವುದಿಲ್ಲ. ಇವತ್ತು ಭೂಮಿಯ ಬಗ್ಗೆ ceiling ಇರಬೇಕು ಎನ್ನುವುದಾಗಲಿ ಕೂಡದು ಎನ್ನುವುದಾಗಲಿ ಮುಖ್ಯವಾದ ವಿಷಯಗಳಾಗಿವೆ ಎನ್ನುವುದನ್ನು ಮೊದಲು ಒಪ್ಪಬೇಕು. ಮೊದಲನೆಯದು ಗೇಣೀದಾರರಿಗೆ ರಕ್ಷಣೆ ಕೊಡಬೇಕು. ಎರಡನೆಯದು ನ್ಯಾಯವಾದ ಗೇಣಿ ಎಷ್ಟು ಇರಬೇಕು ಎನ್ನುವುದು. ಮೂರನೆಯದು ಹಣವಂತರಾದ ಬೇಸಾಯಗಾರರಿಗೆ ಹೆಚ್ಚು ತೆರಿಗೆ ಹಾಕಬೇಕು. ಇದರ ಬಗ್ಗೆ ಒಮ್ಮತ ಇರಬಹುದೇ ಎನ್ನುವುದೇ ಪ್ರಶ್ನೆ.

ಈ ceiling ಮಿತಿ ಮಾತ್ರ ಈಗ ಶ್ರೀ ಜತ್ತಿ ಸಮಿತಿಯವರು ತಿಳಿಸಿರುವುದು ಸರಿಯಾದುದಲ್ಲ. ಈ ಮಿತಿಯು ಇರಬೇಕಾದರೆ ಕಾಲಧರ್ಮಕ್ಕನುಗುಣವಾಗಿ ಇವತ್ತಿನ ದಿವಸ ಮೈಸೂರಿನಲ್ಲಿ ಜಾರಿಗೆ ತರಬೇಕು. ಈ ವರದಿಯಲ್ಲಿ 1,200 ರೂಪಾಯಿಗಳಿಂದ 5,000ದ ವರೆಗೆ ಇರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಇದನ್ನು 5,000 ರೂಪಾಯಿಗಳಿಂದ ಹತ್ತು, ಹನ್ನೆರಡು ಸಾವಿರ ರೂಪಾಯಿಗಳವರೆಗಾದರೂ ಏರಿಸಬಹುದೆಂದು ನನಗೆ ಅನಿಸುತ್ತದೆ. ಭೂಮಿಯ ಮೇಲೆ ಬಂಡವಾಳ ಹಾಕಿರುವವರು, ಹೆಚ್ಚಿಗೆ ಅನುಕೂಲವಾಗಬೇಕಾದರೆ ಆಹಾರವನ್ನು ಬೆಳೆಯುವುದು ಹೆಚ್ಚಾಗಬೇಕು ಎಂದು ಯೋಚಿಸುವುದು ಸಹಜ. ಆಹಾರವನ್ನು ಹೆಚ್ಚಿಗೆ ಬೆಳೆಯುವುದರಿಂದ ಕ್ಷಾಮದ ಭಯ ತಪ್ಪುತ್ತದೆ. ಇದರ ಸಲುವಾಗಿ ಹೇಗಿರಬೇಕು ಎನ್ನುವುದನ್ನು ನಾನು ಮಾನ್ಯ ಸದಸ್ಯರಲ್ಲಿ ಮುಂದೆ ಅರಿಕೆಮಾಡಿಕೊಳ್ಳುತ್ತೇನೆ.

ನಮ್ಮಲ್ಲಿ ಕೆಲವರು ನಮ್ಮ ದೇಶದಲ್ಲಿ ಆಹಾರದ ಉತ್ಪನ್ನಕ್ಕಾಗಿ "Intensive cultivation" ಅಗತ್ಯವೆಂದು ಹೇಳಿದರು, ಇನ್ನು ಕೆಲವರು "Extensive cultivation" ಅಗತ್ಯ ಎಂದರು, ಎಲ್ಲ ಕಡೆಗಳಲ್ಲಿಯೂ ಎಲ್ಲ ಜಮೀನಿನ ಸ್ಥಿತಿಗತಿಗಳೂ ಒಂದೇ ರೀತಿಯಲ್ಲಿಲ್ಲ. ಕೇವಲ ಹದಿನೈದು ಇಪ್ಪತ್ತು ಊರುಗಳಲ್ಲೇ ಬೇಕಾದಷ್ಟು ಅಂತರವಿದೆ. ಇದಕ್ಕೆ ಉದಾಹರಣೆಯಾಗಿ ಹೊಸಕೋಟೆ ದೇವನಹಳ್ಳಿ ಮತ್ತು ಚಿಕ್ಕಬಳ್ಳಾಪುರ ಇಲ್ಲಿ ನಡೆಯುತ್ತಿರುವುದು Intensive cultivation. ಇಲ್ಲೆಲ್ಲ ಐದು ಎಕರೆಗಳಿಗಿಂತ ಜಾಸ್ತಿಯಾಗಿ ಯಾರೂ ಜಮೀನನ್ನು ಇಟ್ಟುಕೊಂಡಿಲ್ಲ; ಮತ್ತು ಇಲ್ಲಿ ಬಹುವಾಗಿ ಆಲೂಗೆಡ್ಡೆ, ಹೂವು ಇಂತಹುದನ್ನೇ ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಇಲ್ಲಿ ಇರುವ ಜಮೀನುಗಳ ಬೆಲೆ ಐದು ಸಾವಿರದಿಂದ ಎಂಟು ಹತ್ತು ಸಾವಿರದವರೆಗೆ ಇತ್ತು. ಕೆಲವು ಕಡೆ ಹತ್ತು ಗುಂಟೆ, 15 ಗುಂಟೆ, 20 ಗುಂಟೆಯಷ್ಟು ಇರುವ ಜಮೀನುಗಳೂ ಕೂಡ ಇವೆ. ದೇವನಹಳ್ಳಿಯಲ್ಲಿ ಒಬ್ಬ ವರ್ತಕರೊಬ್ಬರು ಅವರೇ ಪ್ರೋತ್ಸಾಹಿತರಾಗಿ ಸುಮಾರು ಮೂರು ಲಕ್ಷ ರೂಪಾಯಿಗಳನ್ನು ಹಾಕಿ 200 ಎಕರೆ

(ಶ್ರೀ ರುಮಾಲೆ ಚೆನ್ನಬಸವಯ್ಯ)

ಜಮೀನನ್ನು ಸಾಗುವಳಿಮಾಡುತ್ತಿದ್ದಾರೆ. ನಾನು ಬಂಡವಾಳಗಾರನಾಗಿ ಎರಡು ಪರ್ಸೆಂಟಿನಷ್ಟು ಬಡ್ಡಿಯಂತೆ ದುಡಿದರೂ ಇಲ್ಲಿಯಷ್ಟು ಉತ್ಪನ್ನವಾಗುವುದಿಲ್ಲ. ಅವರೇ ಇಲ್ಲಿ ಸ್ವತಃ ಪ್ರೋತ್ಸಾಹಿತರಾಗಿ ದೊಡ್ಡ ದೊಡ್ಡ ಭಾವಿಗಳನ್ನು ತೋಡಿ ಆಹಾರದ ಉತ್ಪತ್ತಿಯನ್ನು ಮಾಡಲು ಮುಂದೆ ಬಂದಿರುವ ಸಂದರ್ಭದಲ್ಲಿ ಅವರ ಶಕ್ತಿಯನ್ನು ನಾವು ದೇಶಕ್ಕೆ ಉಪಯೋಗಿಸಬೇಕಾದುದು ಅಗತ್ಯ. Intensive cultivationಗೆ ನಮ್ಮ ದೇಶದಲ್ಲಿ ಅವಕಾಶವಿದೆ. ಈ ರೀತಿಯಾದ ವ್ಯವಸಾಯಕ್ಕೆ ಸಾವಿರಾರು ಎಕರೆಗಳಷ್ಟು ಭೂಮಿಯಿದ್ದರೂ ಅದರಲ್ಲಿ ಕೆಲಸಮಾಡಲು ತಕ್ಕಷ್ಟು ಜನ ಇರುವುದಿಲ್ಲ. ಈ ವ್ಯವಸಾಯಕ್ಕೆ ನಮ್ಮ ಜನಗಳು ಸಾಕಷ್ಟು ತರಬೇತಿ ಹೊಂದಲು ಏರ್ಪಾಡು ಮಾಡಬೇಕು. ದೊಡ್ಡ ದೊಡ್ಡ ವರ್ತಕರುಗಳನ್ನು ಈ ಉದ್ಯಮವನ್ನು ಮಾಡುವುದಕ್ಕೆ ತರುವ ನೀತಿಯನ್ನು ಯಾರೂ ಒಪ್ಪುವುದಿಲ್ಲ. ಟ್ರಾಕ್ಟರುಗಳನ್ನು ಉಪಯೋಗಿಸಿಕೊಂಡು ಈ ರೀತಿಯಾದ ವ್ಯವಸಾಯ ಪದ್ಧತಿಯನ್ನು ಹೆಚ್ಚಿಸಬೇಕು, ಕೆಲವು ಕಡೆಗಳಲ್ಲಿ ಬೇಕಾದರೆ ಇದಕ್ಕಾಗಿ ಟ್ರಾಕ್ಟರುಗಳನ್ನು ಇಟ್ಟುಕೊಳ್ಳಬಹುದು. ಹೀಗೆ ಯಂತ್ರೋಪಕರಣಗಳನ್ನು ಉಪಯೋಗಿಸಿಕೊಳ್ಳದೆ ಹೋದರೆ ಈ ಆಹಾರ ಧಾನ್ಯದ ಸಮಸ್ಯೆ ಬಗೆಹರಿಯುವುದು ಬಹಳ ಕಷ್ಟ. ಹೀಗೆ ನಮ್ಮಲ್ಲಿ ಇಂತಹ ದೊಡ್ಡ ಕೆಲಸಗಳಿಗೆ ಹೆಚ್ಚಿಗೆ ಬಂಡವಾಳವನ್ನು ಹಾಕಿ ಮಾಡಲು ಮುಂದೆ ಬರುವುದಿಲ್ಲ. ಸರಕಾರ ಹೆಚ್ಚಿಗೆ ಹಣವನ್ನು ಖರ್ಚು ಮಾಡಿದರೆ ಆಗ ಈ ಯೋಜನೆಯಿಂದ ಹೆಚ್ಚಿನ ಹಣ ಬರುವಂತೆ ಮಾಡಲಿಕ್ಕೆ ಅವಕಾಶವಿದೆ.

ಈ ಮೊದಲೇ ಹೇಳಿದ ಹಾಗೆ ಗೇಣಿದಾರನಿಗೆ ನ್ಯಾಯವಾದ ಗಿರಾಕಿಯಿಲ್ಲ. ಇಂತಹ ಕ್ರಮಗಳನ್ನು ಕೈಗೊಳ್ಳಲು ತೊಂದರೆ ಏನೂ ಆಗುವುದಿಲ್ಲ. ಎಲ್ಲಕ್ಕಿಂತಲೂ ನಮ್ಮಲ್ಲಿ ಒಂದು ರೀತಿಯಾದ ಮನೋಭಾವನೆ ಬೆಳೆದು ಬಂದಿದೆ. ಉದಾಹರಣೆಯಾಗಿ ಒಂದು ವಿಷಯ ಹೇಳುತ್ತೇನೆ. 1936ನೆಯ ಇಸವಿಯಲ್ಲಿ ನನಗೆ Poultry Farmನ್ನು ಮಾಡುವ ಒಬ್ಬ ಸ್ನೇಹಿತರು ಸಿಕ್ಕಿದರು. ಅವರನ್ನು ಆಗಾಗ್ಗೆ ನೋಡುತ್ತ ಹಾಗೆಯೇ ಪರಿಚಯವಾಯಿತು. ಅನಂತರ ಇವರಿಗೆ 80 ರೂಪಾಯಿಗಳ ಸಾಲವನ್ನು ನಾನು ಕೊಡಬೇಕಾಯಿತು, ಒಂದು ವಾರದಲ್ಲಿ ವಾಪಸು ಕೊಡುವೆನೆಂದು ತೆಗೆದುಕೊಂಡು ಹೋದರು. ಹದಿನೈದು ಇಪ್ಪತ್ತು ದಿನಗಳಾದರೂ ನನಗೆ ಹಣ ಬರಲಿಲ್ಲ, ಇವರು ಉತ್ತಮವಾದ ಒಂದು ಸಮಾಜದಲ್ಲಿ ಇರುವವರು ಮತ್ತು ದೊಡ್ಡ ವಿದ್ಯಾವಂತರೂ ಆಗಿರುವವರು ಹೀಗೆ ಮಾಡಿದರು. ದೇಶದಲ್ಲಿ ಜನಗಳ ಮನೋಭಾವ ಹೀಗಿರುತ್ತದೆ. ಹಣವನ್ನು ಸಾಲವಾಗಿ ತೆಗೆದುಕೊಂಡರೂ ಅದನ್ನು ವಾಪಸು ಕೊಡುವುದಿಲ್ಲ. ಹೀಗಿದೆ ಜನರ ಮನೋಭಾವನೆ. ಈ ಮನೋಭಾವನೆಯನ್ನು ಬದಲಾಯಿಸದಿರುವ ಮನುಷ್ಯನು ಧರ್ಮಬುದ್ಧಿಯಿಂದ ನಡೆಯುವುದಿಲ್ಲ. ಕಾಲ ಧರ್ಮಕ್ಕನುಗುಣವಾಗಿ ಹಣವಂತರಾಗಲಿ ಬಡವರಾಗಲಿ ಧರ್ಮ ಬುದ್ಧಿಯಿಂದ ನಡೆಯಬೇಕು. ಬಡತನದಲ್ಲಿ ಬಡವರಾದರೂ ನೀತಿಯಲ್ಲಿ ನಾವು ಬಡವರಾಗಿಲ್ಲ.

ಯಾರೇ ಆಗಲಿ ಇತರರಿಗೆ ಕೊಡತಕ್ಕದ್ದನ್ನು ಕೊಡಲೇಬೇಕೆಂಬ ಮನೋಭಾವವನ್ನು ಎಲ್ಲರೂ ಇಟ್ಟುಕೊಳ್ಳಬೇಕು. ಆದರೆ ಕೆಲವರಿಗೆ ಅವರು ಬಿಟ್ಟುಕೊಡತಕ್ಕ ಜಮೀನ್ ಬಗ್ಗೆ ಕೊಡಬೇಕಾದ ನ್ಯಾಯವಾದ ಒಂದು ಬೆಲೆಯೇನಿದೆಯೋ ಅದನ್ನು ಕೊಡದಿರುವುದರಿಂದ ಆ ರೀತಿ ಕೆಲವರಿಗೆ ಅವರ ಜಮೀನುಗಳನ್ನು ಬಿಟ್ಟುಕೊಡಲು ಇಚ್ಛೆ ಇಲ್ಲದಿರಬಹುದು. ಸಮಾಜ ವಾದದ ಬಗ್ಗೆ ಎಲ್ಲ ಕಡೆಗಳಲ್ಲೂ ಒಂದು ಒಳ್ಳೆಯ ಮಾತು ಕೇಳಿಬರುತ್ತಿದೆ. ಆದರೆ ಇದರಲ್ಲಿ ಒಂದು ಬಹುಮುಖ್ಯವಾದ ಪ್ರಕರಣವಿದೆ; ಅದು ನಮ್ಮಲ್ಲಿ ಅನೇಕರಿಗೆ ಗೊತ್ತಿಲ್ಲದಿರಬಹುದು. ಆದರೆ ನಾನು ವೀರಶೈವನಾದುದರಿಂದ ನನಗೆ ಆ ವಿಚಾರ ಗೊತ್ತಿದೆಯೆಂದು ಧೈರ್ಯವಾಗಿ ಹೇಳುತ್ತೇನೆ. ಇಲ್ಲಿಗೆ 300 ವರ್ಷಗಳ ಕೆಳಗೆ ನಮ್ಮಲ್ಲಿ ಜಂಗಮರು ಒಂದು ಕ್ರಾಂತಿಯನ್ನಿಬ್ಬಿಸಿದರು. ಸಮಾಜದಲ್ಲಿ ಒಂದು ದೊಡ್ಡ ಚಳುವಳಿಯನ್ನೇ ಮಾಡಿದರು. ಅದೇನೆಂದರೆ ದೇವೇಂದ್ರರಾಯ ಮಳೆಯನ್ನು ಸುರಿಸುತ್ತಾನೆ, ಬಸವಣ್ಣ ಭೂಮಿಯನ್ನುಳುತ್ತಾನೆ. ಹೀಗಿರುವಾಗ ಬೇಸಾಯಗಾರರು ರಾಜರುಗಳಿಗೇಕೆ ಕಂದಾಯಕೊಡಬೇಕು ಎಂಬುದಾಗಿ. ಆ ಕಾಲದಲ್ಲಿದ್ದ ಜನರಿಗೆ ಆ ವಾದವೂ ಸಹ ಬಹಳವಾಗಿ ರುಚಿಸಿತು. ಆದರೆ ಆ ವಾದದಿಂದ ಮುಂದೇನಾಯಿತು ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕ ಇಚ್ಛೆಪಡುವುದಿಲ್ಲ. ಆದ್ದರಿಂದ ನಾವು ಏನು ಬದಲಾವಣೆಗಳನ್ನೇ ಜಾರಿಗೆ ತರಲಿ ಅವುಗಳ ಬಗ್ಗೆ ಜನರಲ್ಲಿ ಒಂದು ರೀತಿಯ ಸಂಶಯ ಮನೋಭಿಪ್ರಾಯ ಉಂಟಾಗುವುದಕ್ಕೆ ಅವಕಾಶವಿಲ್ಲದಂತೆ, ತಾವು ತರತಕ್ಕ ಸುಧಾರಣೆಗಳಲ್ಲಿ ಒಂದು ನಿರ್ದಿಷ್ಟ ರೀತಿಯ ತತ್ವ ಇದೆಯೆಂಬುದನ್ನು ಜನರು ಸರಳವಾದ ರೀತಿಯಲ್ಲಿ ಅರಿತುಕೊಳ್ಳುವಂತಿರಬೇಕು. ಒಟ್ಟಿನಲ್ಲಿ ಹೇಳುವುದಾದರೆ ಈ ವಿಚಾರದಲ್ಲಿ ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ರೂಪರೇಖೆಗಳಿವೆ, ಯಾವ ಯಾವ ಸ್ಥಳದಲ್ಲಿ ಏನೇನು ಬದಲಾವಣೆಗಳನ್ನು ತರಬಹುದು, ಯಾವ ಯಾವ ಪ್ರದೇಶದಲ್ಲಿ ಏನೇನು ಬೆಳೆ ಬೆಳೆಯಲಾಗುತ್ತಿದೆ ಎಂಬ ವಿಚಾರಗಳನ್ನೆಲ್ಲ ನಮ್ಮ ರಾಜ್ಯದಲ್ಲಿರತಕ್ಕಂಥ ಅರಿತು-ನುರಿತ ಮುಖಂಡರುಗಳೆಲ್ಲ ಒಂದು ಕಡೆ ಸೇರಿ ಈ ಸಮಸ್ಯೆಯನ್ನು ಪರಿಹರಸತಕ್ಕದ್ದು ಅಗತ್ಯವೆಂದು ನನಗನಿಸುತ್ತದೆ. ಹೀಗೆ ಮಾಡಿದರೆ ಇದು ಸುಲಭವಾಗಿ ಬಗೆಹರಿಯಬಹುದು. ಈ ವರದಿಯಲ್ಲಿ ಸ್ವಂತ ಸಾಗುವಳಿ ಮಾಡದವರಿಗೆ ಭೂಸ್ವಾಮ್ಯವನ್ನು ತ್ಯಾಗಮಾಡಬೇಕೆಂದು ಹೇಳಿದ್ದಾರೆ. ಆದರೆ ನಮ್ಮ ಅನುಭವದಲ್ಲಿರುವುದನ್ನೇ ಹೇಳುವುದಾದರೂ, ಇಂಥ ಜನರೂ ಸಹ ಭೂಮಿಯ ಮೇಲೆ ತಮ್ಮ ಸ್ವಂತ ಬಂಡವಾಳವನ್ನು ವಿಶೇಷವಾಗಿ ಹಾಕಿರತಕ್ಕವರಾಗಿದ್ದಾರೆ. ಹೀಗಿರುವಾಗ ವ್ಯವಸಾಯಮಾಡುತ್ತೇವೆಂದು ಹೇಳತಕ್ಕ 200-300 ಎಕರೆಗಳವರೆಗೂ ವ್ಯವಸಾಯ ಮಾಡುವುದಕ್ಕೆ ಜಮೀನನ್ನು ಬಿಟ್ಟುಕೊಡಲು ಅವಕಾಶ ಇರಬೇಕು. ಇದರಿಂದ ದೇಶದಲ್ಲಿ ಹೆಚ್ಚು ಆಹಾರ ಬೆಳೆಯಲು ಅವಕಾಶವಾಗುತ್ತದೆ. ಆದರೆ ಈ ದಿವಸ ಯಾರಿಗೆ ಉಳಲು ಭೂಮಿಯಿಲ್ಲವೋ ಅಂಥವರಿಗೆ ಭೂಮಿ ಕೊಡಲು ಸರ್ಕಾರದವರಿಗೆ ಸಾಧ್ಯವಿದೆ, ಸರ್ಕಾರದವರು ಇತ್ತೀಚೆಗೆ ಅಲ್ಲಲ್ಲೆ ಅನೇಕ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ನಿರ್ಮಾಣಮಾಡಿದ್ದಾರೆ. ಅಲ್ಲಿ ಭೂಮಿಯಿಲ್ಲದ ಜನರಿಗೆ ಭೂಮಿಯನ್ನು ಸರ್ಕಾರದವರು ಕೊಡಬಹುದು, ಮೇಲಾಗಿ ಭೂದಾನ ಚಳವಳಿಯಲ್ಲಿ ಗಳಿಸುವ ಭೂಮಿ ಏನಿದೆಯೋ ಅದನ್ನು ಸಹ ಇಂಥ ಭೂಮಿಯಿಲ್ಲದ ಜನರಿಗೆ ಹಂಚಲು ಅಲ್ಲಿಯೂ ಒಂದು ಅವಕಾಶವಿದೆ. ಆದರೆ ಸರ್ಕಾರದವರು ಏನೋ ಒಂದು ಉದಾರ ಭಾವನೆಯಿಂದ ಭೂಮಿಯಿಲ್ಲದವರಿಗೆ ಭೂಮಿಯನ್ನು ಕೊಟ್ಟಮಾತ್ರಕ್ಕೇ ಅದರಿಂದೇನೂ ಅಷ್ಟು ಪ್ರಯೋಜನವಾಗಲಾರದು. ಆದುದರಿಂದ ಈ ಬಗ್ಗೆ ಒಂದು ಕೋ-ಅಪರೇಟೀವ್ ಸಿಸ್ಟಂ

ಮಾಡಿ ಅವರಿಗೆ ಇನ್ನಿತರ ಸಹಾಯಗಳನ್ನು ಒದಗಿಸಿ, ಅವರು ಆ ಭೂಮಿಗಳನ್ನು ಇತರರಿಗೆ ಮಾರಾಟ ವಗೈರೆ ಮಾಡದಂತೆ, ಆ ಭೂಮಿಗಳಿಂದ ಅವರೂ ಉದ್ಧಾರವಾಗಿ ದೇಶದಲ್ಲಿ ಹೆಚ್ಚಿನ ಬೆಳೆ ಬೆಳೆಯಲು ಒಂದು ಏರ್ಪಾಡನ್ನು ಮಾಡುವುದುತ್ತಮ. ಆದುದರಿಂದ ಈ ಕೋ-ಆಪರೇಟೀವ್ ಸಿಸ್ಟಂ ವ್ಯವಸಾಯಕ್ಕೆ ಹೆಚ್ಚಿನ ಪ್ರಾಶಸ್ತ್ಯವಿರಬೇಕಾದದ್ದು ಅಗತ್ಯ. ಒಟ್ಟಿನಲ್ಲಿ ಹೇಳುವುದಾದರೆ ಎರಡು ಕಡೆಯ ಅಭಿಪ್ರಾಯಗಳನ್ನೂ ಒಂದು ಹೊಂದಾವಣಿಕೆಗೆ ತಂದು ಇದರಲ್ಲಿ ಯಾರೊಬ್ಬರಿಗೂ ನೋವಾಗದಂತೆ, ಜಮೀನು ಇಲ್ಲದವರಿಗೂ ಒಂದು ನೋವಾಗಬಾರದು, ಜಮೀನ್ದಾರರೂ ಸಹ ಹೆಚ್ಚು ಬಂಡವಾಳ ಹಾಕಿರುವುದರಿಂದ ಅವರ ಮನಸ್ಸಿಗೂ ಕೂಡ ಒಂದು ನೋವಾಗದಂತೆ ಉಭಯತ್ರರಿಗೂ ಸಮ್ಮತವಾದ ಒಂದು ಮಧ್ಯಮಾರ್ಗವನ್ನು ಕಂಡುಹಿಡಿಯಬೇಕು. ಉಭಯ ಪಾರ್ಟಿಗಳಲ್ಲೂ ಒಂದು ಹೃದಯ ವೈಶಾಲ್ಯತೆಯಿದ್ದರೆ ಅದೇನೂ ಅಂಥ ಕಷ್ಟದ ಕೆಲಸವಲ್ಲ. ಇದರಲ್ಲಿ ಏನೇ ಬದಲಾವಣೆಯಾದರೂ ಅದು ಉಭಯತ್ರರಿಗೂ ಒಂದು ಒಪ್ಪಂದದ ಮೂಲಕ ನಡೆಯುವುದು ಬಹಳ ಒಳ್ಳೆಯದು. ಅಂಥ ಒಂದು ಹಾದಿಯಲ್ಲಿ ಈ ಭೂಸಮಸ್ಯೆಯನ್ನು ವಿಮರ್ಶೆಮಾಡಿ ತಾವು ತರುವಂಥ ಬದಲಾವಣೆಗಳನ್ನು ತಂದರೆ ಆಗ ದೇಶದಲ್ಲಿ ಶಾಂತಿ-ಸಹನೆಗಳು ಕಲಕಿಹೋಗದೆ ನಮ್ಮ ಆಚರಣೆ ಇತರರಿಗೊಂದು ಮಾರ್ಗದರ್ಶನವಾಗಿರುತ್ತದೆ. ಆರೀತಿ ಈ ಭೂಸಮಸ್ಯೆ ಬಗ್ಗೆ ಒಂದು ಸುಗಮವಾದ ತೀರ್ಮಾನಕ್ಕೆ ಬರಲು ನಮ್ಮ ಮೈಸೂರು ದೇಶದಲ್ಲಿರತಕ್ಕ ಈ ಉಭಯ ಪಾರ್ಟಿಗಳ ಅಭಿಪ್ರಾಯಗಳನ್ನೂ ಸಮನ್ವಯಗೊಳಿಸಿ ಒಂದು ಹೊಂದಾವಣಿಕೆಗೆ ತರಬಲ್ಲಂಥ ಸಮಾಜ ಮುಖಂಡರುಗಳೆಲ್ಲ ಒಂದು ಕಡೆ ಸೇರಿ ಈ ಬಗ್ಗೆ ಒಂದು ಸಮಾಲೋಚನೆ ನಡೆಸುವುದು ಅಗತ್ಯ. ಉಭಯತ್ರರಲ್ಲೂ ಸೋತು ಗೆಲ್ಲಬೇಕೆಂಬ ಒಂದು ಮನೋಭಾವವಿದ್ದರೆ ಈ ಸಮಸ್ಯೆ ಬಹಳ ಸುಲಭವಾಗಿ ಬಗೆಹರಿಯಲು ಸಾಧ್ಯವಿದೆಯೆಂಬ ಅಂಶವನ್ನು ಎಲ್ಲರಿಗೂ ತೋರಿಕೊಡತಕ್ಕ ರೀತಿಯಲ್ಲಿ ಆ ಮುಖಂಡರು ಈ ಕೆಲಸವನ್ನು ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†**Sri D. VENKATARAMIAH** (Local Authorities' Constituency).—Mr. Chairman, Sir, perhaps I am the last member to speak on the Report. In the Introductory chapter of the Report of the Mysore Tenancy Agricultural Land Laws Committee you will find it stated that "the Committee shall examine the existing laws and practices in regard to the land tenancy in the several areas in the State and consistent with the recommendations of the Planning Commission suggest suitable measures for regulating land tenancies." So the most important point that has been emphasized in the order issued by Government is regarding land tenancy. Ownership is not the important point that has been stressed. The important point that has been stressed is land tenancy 'consistent with the recommendations of the Planning Commission'. The objectives of the Planning Commission in respect of land reforms are two in number, namely, (1) maximum food production and (2) equitable distribution of profits between the tenant and landlord as a matter of social justice. These two objectivers were in the mind of Government when they appointed this Committee. I may refer to three subjects in the terms of reference themselves, namely, (*e*) ceiling extent of land holdings, (*f*) fixing the extent of basic or economic and family holdings and (*g*) prohibition of land ownership.

I fail to understand the reasons that prompted the Government to refer this subject also for the consideration of the Committee. Nowhere, either in the Congress manifesto or in the reports of the Planning Commission, has this question of fixing or limiting ownership of land is mentioned. What is mentioned relates to production and equitable distribution among persons tilling the land. This is necessary in order to improve food production. But the suggestion with respect to the fragmentation of the holdings is contained in the Government Order which constituted the Committee. This, I submit, is because of the wrong approach of the Government. The half-hearted and ill-digested thinking on the part of the Government was responsible in putting down ceiling also as one of the subjects for discussion in the Committee. I would like to remind the House that 41 years ago, *i.e.*, in 1917, immediately after the so-called Russian revolution, a similar problem was sought to be solved by introducing land reforms, *i.e.*, by conferring ownership on the tillers of the soil. Two or three years later it was discovered that production did not increase. The intention to step up production by making the tiller the owner, to create greater enthusiasm in him, did not succeed. Then that great Russian, Lenin, wrote a book entitled "Two Steps Forward and one Step Backward." He said that conferring ownership on peasants was no good and the only remedy would be for Government to take over land: "Confiscate the whole property", he

(SRI D. VENKATARAMIAH)

said, and the Government nationalised land. It now looks as though we are going the Russian way. Tomorrow, it would become an argument that since food production has retarded because of lack of incentive in the cultivators, Government itself would become the owner of all landed property. Unless the Government's objective is to ultimately nationalise all lands in the State, and cultivate them under their direct supervision, I find no valid reason given as to why they should attempt to impose ceilings and fragmentation of land holdings further. I would very respectfully submit that the Committee has made a very good mixture of the reforms of Bombay, U.P., Madras, Andhra and other States and brought out their own version. I feel they have not given their original thought to the subject. What is immovable property in India, in Mysore? What are the rights of the owner? What is the sanctity that people attach to land holdings In India? These vital questions have been ignored by the Committee. They have collected statistics from various States and brought out something which is at the best a sort of *via media*. It was unnecessary for the Committee to go on a four over the whole State and write this kind of Report. Some Secretary of the Mysore Government would have ably drafted the Report of this Committee. The Committee has not given theut most consideration to the subject that it deserves. No member of this House would express an opinion that food production should not increase or that there should not be proper distribution of profits. The only question is' how best this can be achieved.

So far as increasing food production is concerned, I will give an instance of Kolar District. Will conferring ownership of land to the tenants, increase food production in this District? Definitely no. It is on the border of Rayalaseema. Production facilities could be developed only by sinking wells and by modernising methods of cultivation. Government could help by way of supply of good manure, sinking wells, giving subsidies and so on. Merely making the tenant the owner would not help food production. As a matter of fact, there are not very many big landholdings in Kolar.

So far as distribution of profits is concerned, it depends on the cost of production also. It also depends on the extent and nature of investments the land-owner has made. For the risk the owner takes, rent is fixed. This is only a minor matter. The fixity of tenure and fixing of rent on either side, is an easy matter. But fixing of ceilings as proposed by the Committee, is far removed from actual facts, from realism and such a step ignores the practical sides of the question. If there were real agriculturists or agricultural experts in the Committee this Report would have been different. This Report has no relevance to vital data and is contrary to practical experience. They have given some imaginary and arbitrary definitions about basic holding, family holding, etc. Even the calculations they have made and the conclusions they have arrived at are erroneous. For a family of five, the income per head would workout to Rs. 20 per mensem. In other words it is Re. 0-10-8 per day. What would be the result, just consider Mr. Chairman, in respect of the approach that the Committee has made? The Committee's mind looks as though it intends to make the Manager of the Joint Family equivalent to that of a labourer. His income is reduced to that of 10 annas 8 pies. What is the sin that he has committed, I am asking you, Mr. Chairman. He has purchased the land at a great cost; it has not been given to him by gift or otherwise. Perhaps he must have spent a lot of money on that. He has given a lot of money to the tenant also who is cultivating it. To say that 3½ family holdings will be the last limit and lands beyond that should be given to Government would amount to an expropriation of property, a legal robbery. If a man were to get into another man's house and take away any property, it will be called robbery and he will be sentenced to 7 years' imprisonment. But to pass a law and say that one cannot have more, and the property beyond a certain limit should be given to Government which in its turn would give it to some other person, would be legal robbery. Mr. Chairman, supposing that land is given to another person. Will he himself cultivate that property unless that man is again helped by the Government ? If the Government does not give him any help, the land will again be forfeited to Government. The recommendation made by the Committee in respect of ceiling looks to be a communistic method of approach to the whole subject, Mr. Chairman. Perhaps what is working in their mind is, in view of the fact that the objective of the Constitution is socialistic pattern of society, why should a man have so much money and why should a man have so much of property ; let that be given to others. But that is not the way how a socialistic theory should be worked out. It is a wrong application, a mis-statement of socialism, as it were. There should be greater production and that production should be distributed between all persons and the property of another should not be take away either by force or by law, Mr. Chairman. We have passed the Inam Abolition Bill. It has become an Act. You know for the last 2½ years the hardship, the turmoil and the troubles that are being undergone not merely by the Jodidars but also by the tenants therein. The Jodidars are not given the compensation that they are entitled to. The tenants who are in possession of the property and who were cultivating the land and taking the profit are not giving the yield or any share of it to the Jodidars. Cases before the Inam Abolition Courts are pending for the last three years. Even such a small piece of legislation as that has not been implemented fully. It will take, I will assure you, Mr. Chairman, and the Treasury Benches, 20 years more to be fully implemented. As a person who is very familiar with these things, I submit that that cannot be finalised till about 20 years. Have we got the time and is it the opportune time and is there need for expropriation of property like this at this juncture ? Because regarding compensation, they say that they will be given some 4 per cent bonds and some other things instead of giving money itself. Even for implementation of the Five-Year Plan, we have no money, and we are going about begging. Now, to introduce such a kind of tenancy reform will result in making most confusion in the land tenure ; already sufficient confusion is existing ; if we are to implement the Report of the Committee, it will be creating more litigation and as such it will be a troublesome affair to the tenants themselves and also to the owners of the property then. Mr. Chairman, it may be argued that some of the tenants are in the agricultural sector and the tenants want the property to be made out in their name itself and so why not we let the landless persons have lands by this method ? My submission to you, Mr. Chairman, is that this question of having land and not having land, having money and not having money, these haves and have-nots exists in every sector; it not only exists in the agriculture sector, but it is also found in the industrial sector and in every field of practical life. So, if there is a person who has no land why not you entertain him in the industrial sector and give him employment ? Why only say you take away the land from another person and give it to him ? Finally coming to the creation of either Munsiff courts or land tribunals or land commissions, you as an experienced lawyer of 40 to 50 years standing know what an amount of confusion will be created by these complicated, not practical but utopian bodies ; I feel that sufficient thought has not been given to implement the recommendations. I would request the Government to shelve this Report on the question of ownership of land. That is all my request.

ಶ್ರೀ ಮುಕುಂದ ಮೈಲಾರಪ್ಪ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಜತ್ತಿ ಸಮಿತಿಯ ವರದಿಯ ಮೇಲೆ ಮಾನ್ಯ ಸದಸ್ಯರು ಕೂಲಂಕಷವಾಗಿ ವಿಮರ್ಶೆಮಾಡಿ ತಮ್ಮ ಭಾವನೆಗಳನ್ನು ಹೊರಪಡಿಸಿದ್ದಾರೆ. ಆದರೆ ನಾನು ಒಂದೆರಡು ಅಂಶಗಳನ್ನು ಮಾತ್ರ ಹೇಳುತ್ತೇನೆ. ಈ ವರದಿಗೆ ಅನುಮೋದನೆ ಮತ್ತು ಸ್ವಾಗತವನ್ನು ಬಯಸುತ್ತೇನೆ. ಈ ವರದಿಯನ್ನು ತಯಾರು ಮಾಡಿದವರಲ್ಲಿ ಅನೇಕರು ಪರಿಪೂರ್ಣ ಪಂಡಿತರು, ಜಮೀನ್ದಾರರು ಮತ್ತು

(ಶ್ರೀ ಮುಕುಂದ ಮೈಲಾರಪ್ಪ)

ಒಳ್ಳೆಯ ಅನುಭವಸ್ಥರು ಸೇರಿದ್ದಾರೆ. ಈ ಸಮಿತಿಯನ್ನು ನೇಮಕಮಾಡಿದ ಕೇವಲ ಕೆಲವು ದಿನಗಳಲ್ಲೇ ದೇಶದ ನಾನಾ ಭಾಗಗಳಲ್ಲಿ ತಿರುಗಿ ಮುಖ್ಯ ಮುಖ್ಯ ಸ್ಥಳಗಳಿಗೆ ಹೋಗಿ ಅಲ್ಲಿಯ ಸ್ಥಳದ ಮಹನೀಯರುಗಳನ್ನು ಭೇಟಿಮಾಡಿ ಭೂಮಾಲೀಕರನ್ನೂ ಗೇಣೀದಾರರನ್ನೂ ಮತ್ತು ರೈತರನ್ನೂ ವಿಚಾರಿಸಿ ತಮ್ಮ ವರದಿಯನ್ನು ತಯಾರಿಸಿದ್ದಾರೆ. ಸ್ವಾಮಿ, ನಾನು ಒಬ್ಬ ಹಿಂದುಳಿದ ಪಂಗಡದ ಪರವಾಗಿ ಈ ಸಭೆಗೆ ಸದಸ್ಯನಾಗಿದ್ದೇನೆ. ಮೈಸೂರು ದೇಶದಲ್ಲಿ ಶೇಕಡ 71 ಭಾಗ ವ್ಯವಸಾಯದಿಂದ ಜೀವನ ಮಾಡುತ್ತಿದ್ದಾರೆ. ಎಂದರೆ ಒಟ್ಟಿನಲ್ಲಿ ಈ ರಾಜ್ಯದ ಎರಡು ಕೋಟಿ ಜನರಲ್ಲಿ ಹರಿಜನ ಜನಾಂಗ 30 ಲಕ್ಷ ಇದ್ದಾರೆ. ಒಟ್ಟಿನಲ್ಲಿ ಎರಡುಕೋಟಿ ಜನತೆಯಲ್ಲಿ ಹರಿಜನರು 20 ಲಕ್ಷದಿಂದ 30 ಲಕ್ಷದವರೆಗಿದ್ದಾರೆ. ಅವರಲ್ಲಿ ಈ ವ್ಯವಸಾಯವನ್ನೇ (Labour Agriculturist) ಅವಲಂಬಿಸಿರುವ ಜನ ಶೇಕಡ 80 ರಷ್ಟು ಇದ್ದಾರೆ. ಅದರಿಂದ ಅವರ ಸ್ಥಿತಿಯನ್ನು ಉತ್ತಮಪಡಿಸುವ ಸಲುವಾಗಿ ನಾವು ಸ್ವಾತಂತ್ರವಾದನಂತರ ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿ ಹೊಸ ಸಮಾಜದ ರಚನೆಗೆ ಅನುಗುಣವಾಗಿ ಅನೇಕ ಮೂಲಭೂತವಾದ ತತ್ವಗಳನ್ನು ಮಾಡಲು ಹೊರಟ್ಟಿದ್ದೇವೆ. ಹೊಸ ಹೊಸ ಕಾರ್ಯಗಳನ್ನು ಮಾಡಲು ಹೊರಟಿದ್ದಾರೆ. ಈ ಹೊಸ ಸಮಾಜ ರಚನೆಗಾಗಿ ಸರ್ಕಾರ ಈಗ ಈ ಭೂಶಾಸನದ ವಿಚಾರವನ್ನು ವಿಮರ್ಶೆ ಮಾಡುತ್ತಾ ನಮ್ಮ ರಾಜ್ಯಪಾಲರೂ ಅವರ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ.

“ಉಳುವವನೇ ಭೂಮಿಯ ಒಡೆಯನಾಗಿರಬೇಕೆಂಬುದು ಸರ್ಕಾರದವರ ಅಂಗೀಕೃತವಾದ ಕಾರ್ಯನೀತಿ” ಎಂದು ಇಲ್ಲಿ ಒಪ್ಪಿಕೊಂಡಿದ್ದಾರೆ. ಆದುದರಿಂದ ಈ ಜತ್ತಿ ಸಮಿತಿ ವರದಿಯನ್ನು ಸ್ವಲ್ಪ ಹೆಚ್ಚು ಕಡಮೆ ಒಪ್ಪಿಕೊಂಡಂತಾಗಿದೆ. ಆದ್ದರಿಂದ ಈ ವರದಿಯನ್ನು ಸ್ವಾಗತ ಮಾಡುತ್ತಿದ್ದೇನೆ. ಭೂಮಿಯನ್ನೇ ನಂಬಿರುವವರಿಗೆ ಭೂಮಿಯನ್ನು ಕೊಡುವುದರಿಂದ ಬಹಳ ಉತ್ತಮವಾಗುತ್ತದೆ. ಇಷ್ಟನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಸಭಾಪತಿಯವರು.—ಈ ಠರಾವಿನ ಮೇಲೆ ಸುಮಾರು 31 ಜನ ಮಾನ್ಯ ಸದಸ್ಯರು ಭಾಷಣ ಮಾಡಿದ್ದಾರೆ. ಇದರಿಂದ ಈ ರಿಪೋರ್ಟಿನ ಮೇಲೆ ಕೂಲಂಕಷವಾಗಿ ಚರ್ಚೆಯಾಗಿದೆ ಎಂದು ಹೇಳಬಹುದು; ಮತ್ತು ಈ ದಿವಸ ಈ ಚರ್ಚೆ ಮುಕ್ತಾಯಗೊಳ್ಳುತ್ತದೆ. ಈ ಸಂದರ್ಭದಲ್ಲಿ ಸಭೆಯ ಮಾನ್ಯ ಸದಸ್ಯರು ಸಹಕರಿಸಿ ತಮ್ಮ ಮನಸ್ಸನ್ನು ಬಿಚ್ಚಿ ತಮ್ಮ ಅನುಭವಗಳಿಂದ ಕೂಡಿದ ಅಭಿಪ್ರಾಯಗಳನ್ನು ಕೊಟ್ಟು ಟೀಕಿಸಿ ಸೂಕ್ತ ಸಲಹೆಗಳನ್ನೂ ಕೊಟ್ಟಿದ್ದಾರೆ. ಇವೆಲ್ಲವನ್ನೂ ಪರಿಶೀಲನೆಮಾಡಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಭರವಸೆಯನ್ನು ಸರ್ಕಾರದವರೂ ವ್ಯಕ್ತಪಡಿಸಿದ್ದಾರೆ. ಇಲ್ಲಿಗೆ ಈ ಜತ್ತಿ ಸಮಿತಿಯ ವರದಿಯ ಚರ್ಚೆ ಮುಕ್ತಾಯವಾಗುತ್ತದೆ.

ಇನ್ನು ನಮ್ಮ ಮುಂದಿನ ಕಾರ್ಯಕ್ರಮ ಹೀಗಿದೆ ಎನ್ನುವುದನ್ನು ತಮ್ಮ ಮುಂದೆ ತಿಳಿಸಬೇಕಾಗಿದೆ.

ಮಾರ್ಚಿ 11 ನೆಯ ತಾರೀಖು ಅಡಿಷನಲ್ ಗ್ರಾಂಟ್ಸ್ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳುವುದು. ಮಾರ್ಚಿ 12 ನೆಯ ತಾರೀಖು ಬಡ್ಜೆಟ್ಟನ್ನು ಸಭೆಗೆ ಒಪ್ಪಿಸುವ ನಿರೀಕ್ಷೆಯಿದೆ. ಅದು ಒಪ್ಪಿಸಿದ ಮೇಲೆ ಕೆಲವು ಮಸೂದೆಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ. 12, 13, 14 ನೆಯ ತಾರೀಖುಗಳಲ್ಲಿ ಈ ಬಿಲ್ಲುಗಳನ್ನು ಪೂರೈಸಲು ಅವಕಾಶವಾಗುತ್ತದೆ. 15 ನೆಯ ತಾರೀಖು ಖಾಸಗಿ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

16ನೆಯ ತಾರೀಖು ಭಾನುವಾರ ರಜಾದಿನವಾಗಿದೆ.

17ನೆಯ ತಾರೀಖು II Five-Year Plan ಮೇಲೆ ಒಂದು ಠರಾವು ಬಂದಿದೆ. ಅದನ್ನು ಚರ್ಚೆಗೆ ತೆಗೆದುಕೊಳ್ಳೋಣವೆಂದಿದೆ.

18ನೆಯ ತಾರೀಖು ಅಡಿಷನಲ್ ಗ್ರಾಂಟುಗಳ ಅಪ್ರೋಪ್ರಿಯೇಷನ್ನು ಬಿಲ್ಲುಗಳು. ಇದನ್ನು ಚರ್ಚಿಸಿ ಪೂರ್ಣ ಮಾಡಲು ಅವಕಾಶವಾಗುತ್ತದೆ.

19, 20, 21, 22, 23 ಮತ್ತು 24 ರಜಾ ದಿನಗಳು.

25ನೆಯ ತಾರೀಖು ಮತ್ತೆ ಸಭೆ ಸೇರಿ ಬಡ್ಜೆಟ್ಟಿನ ಸಾಮಾನ್ಯ ಚರ್ಚೆ ನಡೆಸುವುದು. ಈ ಸಾಮಾನ ಚರ್ಚೆಯನ್ನು 26, 27, 28 ಮತ್ತು 29 ರ ವರೆಗೆ ತೆಗೆದುಕೊಳ್ಳಲು ಅನುಕೂಲವಾಗುತ್ತದೆ.

ಈ ರೀತಿಯಾಗಿರುವ ಕಾರ್ಯಕ್ರಮ ಸರ್ವರೂ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ.

18ನೆಯ ತಾರೀಖಾದ ಮೇಲೆ 19ರಿಂದ 25 ರವರೆಗೆ ಮಾನ್ಯ ಸದಸ್ಯರು ಹಬ್ಬಕ್ಕಾಗಿ ಊರಿಗೆ ಹೋಗುವವರಿಗೆ ಅನುಕೂಲವಾಗುತ್ತದೆ.

ಇವೊತ್ತಿನ ಸಭೆ ಇಂದಿಗೆ ಮುಕ್ತಾಯವಾಗುತ್ತದೆ. ಮತ್ತೆ ನಾಳೆ ಎಂದರೆ 11-3-1958 ರಂದು ಪುನಃ 2-15 ಗಂಟೆಗೆ ಸೇರುತ್ತದೆ.

The House adjourned at Six of the Clock to meet again at Fifteen Minutes past Two of the Clock on Tuesday, the 11th March 1958.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. (B) 4743
ದಿನಾಂಕ Date..........................

WD 412—GPB—900—30-10-1958

ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. 4744
ದಿನಾಂಕ Date..........
V-32' N58
N58-4-11-17

MYSORE LEGISLATIVE COUNCIL

TWELFTH DAY.

Tuesday, 11th March 1958.

The House met in the Council Hall, Vidhana Soudha, Bangalore, at Fifteen Minutes past Two of the Clock.

MR. CHAIRMAN (SRI P. SITHARAMIAH, B.A., B.L.) in the Chair.

STARRED QUESTION

(to which oral answer was given)

Preservation of Posts to Scheduled Castes in Forest Department.

Q.*—81. **Sri H. M. GANGADHARIAH (Legislative Assembly Constituency).—

Will the Government be pleased to state :—

(*a*) the method adopted to fill up the vacancies in the Gazetted cadre in the Forest Department ;

(*b*) the number of vacancies in the Gazetted cadre filled up since the advent of reservation of posts to Scheduled Castes ?

A.—**Sri H. S. RUDRAPPA** (Minister for Agriculture).—

(*a*) Vacancies in the Gazetted cadre are filled up by Government in consultation with the Mysore Public Service Commission.

(*b*) 12.

ಶ್ರೀ ಎಚ್. ಎಂ. ಗಂಗಾಧರಯ್ಯ.—ನನ್ನ (ಬಿ) ಪ್ರಶ್ನೆಗೆ ಉತ್ತರವಾಗಿ 12 ಮಂದಿ ಎಂದು ಹೇಳೋಣವಾಗಿದೆ. ಅವರೆಲ್ಲರೂ ಯಾವ ಯಾವ ಪಂಗಡಕ್ಕೆ ಸೇರಿದವರು ?

ಶ್ರೀ ಎಚ್. ಎಸ್. ರುದ್ರಪ್ಪ.—ಬೇರೆ ಕೋಮಿನವರನ್ನು ಸೇರಿಸಿರುವುದು ನನಗೆ ಗೊತ್ತಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್‌ಗೂ ಇದೆಯೆಂದು ಹೇಳಿದ್ದೇವೆ.

ಶ್ರೀ ಎಚ್. ಎಂ. ಗಂಗಾಧರಯ್ಯ.—ಅವರಲ್ಲಿ ಗೆಜೆಟೆಡ್ ಹುದ್ದೆಗೆ ಬರುವುದಕ್ಕೆ ಲಾಯಕ್ಕಾಗಿರುವವರಿಗೆ ಅನ್ಯಾಯವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಹಾಗೆ ಒಂದು ವೇಳೆ ಸರ್ಕಾರದ ಗಮನಕ್ಕೆ ಬಂದರೆ, ತನಿಖೆಮಾಡುತ್ತೇನೆ.

SHORT NOTICE QUESTION AND ANSWER.

Arrests of the members of the Socialist Party.

Q.—2. **Sri M. P. L. SASTRY** (Teachers' Constituency).—

Will the Government be pleased to state :—

(*a*) whether there have been arrests of the members of the Socialists' Party in the State ;

(*b*) if so, the number of persons so far arrested, together with reasons therefor ;

(*c*) the number of cases pending against any of them ;

(*d*) the demands, if any, placed by them before the Government ;

(*e*) the action taken on their representation ?

A.—**Sri C. M. POONACHA** (Minister for Home Affairs and Industries).—

(*a*) Yes.

(*b*) 540 persons have been arrested till 2nd March 1958 for picketing Government Offices and obstructing Government Servants in the discharge of their duties.

(*c*) 13 cases are pending trial up to 2nd March 1958.

(*d*) A copy of the demands presented to Government is placed on the table of the House.

(*e*) No action is considered necessary on the demands.

Sri M. P. L. SASTRY.—May I know the district or districts in which the largest number of arrests have been made of the people belonging to the Socialist Party ?

†**Sri C. M. POONACHA.**—The largest number of persons arrested in this regard happens to be in the district of Shimoga. The number is 429. The next in order comes Bangalore and the number here is 62. The next highest number is in Raichur, *i.e*, 27. In the other districts the number comes down.

Sri M. P. L. SASTRY.—Are the arrests made individually or in groups ?

Sri C. M. POONACHA.—According to the manner in which the Satyagraha is made. If they come in batches, then the whole batch is arrested.

Sri M. P. L. SASTRY.—Has it come to the notice of the Government that the procedure adopted by Government in respect of the arrested persons and the conveniences given to them while in detention, is not the same as was in vogue during the Satyagraha campaign?

Sri C. M. POONACHA.—I would like to know to which Satyagraha movement the Hon'ble Member is referring to ?

Sri M. P. L. SASTRY.–I am referring to the Satyagraha movement carried by the people of India in the year 1942 and the people of Mysore in 1947.

Sri C. M. POONACHA.—You are referring to the freedom struggle. If that is the question, I may submit that these Satyagrahis are treated much better.

Sri M. P. L. SASTRY.—Has it come to the notice of the Government that the arrested persons are hand-cuffed when are taken to the court of law and when they are brought back from the courts ?

Sri C. M. POONACHA.—I have no information in this connection. If my friend wants information of any particular incident, I will get it.

Sri M. P. L. SASTRY.—Is it not a fact that five honest young men from Hoskote were handcuffed and taken to the Office of the Sub-Division Officer from the law court ?

Sri C. M. POONACHA.—I have no information, but since the Hon'ble Member has made a reference, I would like to pursue it.

Sri M. P. L. SASTRY.—Is it not a fact that some of these Satyagrahis who are arrested by the Police and kept in the lock-up and in the jail have complained that the conditions in the jail are awful and this was not the condition of the political prisoners in the previous years ?

Sri C. M. POONACHA.—My friend may be knowing that there are two stages. Actually, pending a trial, there may be a period of remand under police custody and the conditions there are quite different from confinement in a jail after conviction. So far as regular prisoners are concerned, the conditions in the jail are known to be good.

Sri M. P. L SASTRY.—Has it come to the notice of the Government that the Socialist Party Offices are raided and whoever are available are taken to the police station ?

Sri C. M. POONACHA.—I would not like to reply off hand, but there have been incidents where certain Socialist Satyagrahis in writing informed the authorities of their intention to offer Satyagraha and committed offences and as a measure of precaution, certain actions might have been taken. This action might have been taken in pursuance of the intentions being made known to the authorities in writing beforehand.

Sri M. P. L SASTRY.—Has it come to the notice of the Government that the police are harassing the women and children in the houses of the Socialist Satyagrahis when they have gone outside and trying to exact information in regard to movement of the suspected persons ?

Sri C. M. POONACHA.—No such complaint has been received so far.

Sri M. P. L. SASTRY.—In reply to (*e*), it has been stated that no action is considered necessary on the demands made by the Socialist party. From the memorandum submitted by the Socialist Party for the redressal of grievances of the public at large, has it come to the notice of Government that demands numbers 11, 13, 15 and so on are the demands that were included even by the Congress Party and forms part of the manifesto issued by the Congress Party during general elections ?

Sri C. M. POONACHA.—My friend knows it better. It is for that very reason, the answer has rightly been given that no further action seems to be necessary. They form part and parcel of the accepted policies of the present Government and therefore these so called Charter of Demands which have been enumerated by the Socialist Party are more or less accepted policies of the present Government and they are at various stages of execution and accomplishment. Therefore there is no particular reason to take a particular course of action in pursuance of the demands.

---

†Indicates that the remarks or speeches have not been revised by the member concerned.

Sri M. P. L. SASTRY.—So, Sir, the answer given is that no action is considered necessary on the demands. These are the demands that have been put before the Government by the Representatives of the Party. Do they consider that no action in regard to these matters is necessary ?

Mr. CHAIRMAN.—That may be clarified.

Sri C. M. POONACHA.—They are the accepted policies of the Government and most of them are implemented and are being implemented and no further action is necessary.

Sri M. P. L. SASTRY.—Is it the view of the Government then that there is no difference between the Congress Party which has formed the Ministry today and the Socialist Party Leaders as far as the carrying out of these demands of the public are concerned except that it is a question of time ?

Mr. CHAIRMAN.—The Home Minister did not say all the demands would be implemented. He said that in respect of certain demands they were the policies of the Congress and they were being implemented.

Sri M. P. L. SASTRY.—I wanted to know from the Hon'ble Minister whether the difference between the Congress Party and the Socialist Party is only in regard to duration in which these demands are to be carried out.

Sri C. M. POONACHA.—I leave it to the kind inference of my Hon'ble friend. If he were to draw that inference, I am happy over it and he could in turn convince the socialist friends to call off the agitation.

Sri M. P. L. SASTRY.—Were there any negotiations between the Government on the one side and the representatives of the Socialist Party on the other ?

Sri C. M. POONACHA.—A deputation of this Party met the Chief Minister and they had discussion and the Chief Minister in the course of the discussions indicated the intention and the view-points of the Government. Later on, in a Press statement, the Chief Minister advised the Socialist Party not to force the issues and counselled to withhold the contemplated agitation of Satyagraha.

Sri M. P. L. SASTRY.—So, would the Government consider the desirability of having a conference between the representatives of the Government and the Socialist Party in view of the fact that the Government are also interested in giving relief to the public in several of the demands early and make their release so that there may be some kind of peaceful atmosphere in the State ?

Mr. CHAIRMAN.—The Hon'ble Member wants the Government to keep his suggestion in view. Is that what you want ?

Sri M. P. L. SASTRY.—Is it not desirable, that is what I said.

Mr. CHAIRMAN.—I do not think we can commit the Government to that position. Probably Sri Poonacha himself cannot commit the Government to any particular position.

Sri M. P. L. SASTRY.—I thought the Home Minister in charge of Home Portfolio is the spokesman of the Government so far as this question is concerned and he will carry the Government with him.

Mr. CHAIRMAN.—What is your question ?

Sri M. P. L. SASTRY.—My question is very simple. I would like to know whether the Government would consider the desirability of having a conference with the Socialist Party and restore a peaceful atmosphere.

Mr. CHAIRMAN.—The Hon'ble Minister may answer that question.

Sri C. M. POONACHA.—The Government find no need to have any negotiation of the type suggested by my Hon'ble friend.

Mr. CHAIRMAN.—Question hour is over.

Member's Representation.

†**Sri M. P. L. SASTRY** (Teachers' Constituency).—I want to submit to the Chair that some of the members of the House were expecting that the Government would come forward with a proposition with regard to their definite stand on language policy. Several States have submitted memoranda to the Central Government on the report submitted by the Official Languages Commission which is discussed by the Parliamentary Sub-Committee and on which Government Orders are likely to issue. The neighbouring State of Madras has been discussing the memorandum submitted by the State Government to the Central Government and it would have been a great advantage if the memorandum, if any, submitted by the State Government to the Central Government is discussed in the Legislature. Sir, even before the memorandum was submitted by the Madras Government, as could be seen from the speech of the Hon'ble Finance Minister of Madras State, an all-Parties meeting or conference was convened and they were all taken into confidence and then the memorandum was submitted by the Madras Government to the Central Government. I do not think our Government had the privilege of doing it at all. You know, Mr. Chairman, that democracy is nothing but administration by understanding and discussion. Unless there is discussion with several groups and leaders of parties, it would not carry weight and authority in a democratic Government that such a matter should carry. Now, this is the burning problem and it would be to the advantage of the State and it would be to the benefit of the people to know the views of the Members here. Therefore I am submitting to you to move the Government to have that memorandum submitted by the State Government to the Central Government in regard to the Official Languages Commission Report discussed here.

Sri V. VENKATAPPA (Minister for Education).—That is a suggestion made by the Hon'ble Member. We will consider that suggestion.

General Discussion on the Supplementary Estimates for the year 1957-58.

Mr. CHAIRMAN.—Supplementary estimates have been placed on the Table. As regards the procedure on financial matters, of course, I believe, Hon'ble Members are well aware. But I just want to read the relevant portion of the rules for the elucidation of some of the new Members.

> " Rule 148 : (1) The Chairman may at any time during the financial year allot a day for the presentation of a statement of supplementary, additional or excess expenditure when—
>
> (*a*) " the amount authorised by the appropriation for a particular service for any financial year is found insufficient for purposes of that year, or
>
> (*b*) a need arises during the current financial year for expenditure upon some new service not contemplated in the Budget of that year, or
>
> (*c*) any money has been spent on any service during the financial year in excess of the amount granted for the service and for that year.
>
> (2) The Chairman shall allot one or more days for discussion of such estimates of expenditure.
>
> (3) No motion shall be moved on such supplementary, additional or excess statement of expenditure nor shall it be submitted to the vote of the Council."

Therefore Hon'ble Members may kindly offer their valuable opinion and views in respect of supplementary estimates on various items that have been asked for. As regards the scope of the discussion, Hon'ble Members have got right to offer remarks in respect of items covered in the supplementary estimates asked for and not on items which are not covered by the supplementary estimates. With these observations I request the Hon'ble Members to kindly offer their remarks.

Sri B. HUTCHE GOWDA (Legislative Assembly Constituency).—What is the time allotted ?

Mr. CHAIRMAN.—I have allotted one day for this purpose. I suppose it is sufficient. Hon'ble Members will kindly confine their remarks to the Demands concerned. I think we will be able to finish in the course of the day. If necessary we will sit till 7 O'clock. When the Appropriation Bill on these Supplementary Demands come up later on for discussion, if anything is left out, we may take it up at that stage.

†ಶ್ರೀ ಎಂ. ಪಿ. ಎಲ್. ಶಾಸ್ತ್ರಿ (ಉಪಾಧ್ಯಾಯರ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಹೆಚ್ಚುವರಿ ಬೇಡಿಕೆಗಳ ಪ್ರಸಂಗ ನಮ್ಮ ದೇಶದಲ್ಲಿ ವರ್ಷಂ ಪ್ರತಿ ಶ್ಯಾಮಭಟ್ಟರಿಗೆ ಜನ್ಮನಗಡಿ ಬಂದ ಹಾಗೆ ವಾರ್ಷಿಕ ವ್ಯಾಧಿಯು ಬಹಳ ಕಾಲದಿಂದಲೂ ಬರುತ್ತಿದೆ. ಯಾವ ಕಾಲದಲ್ಲೋ ಈ ವ್ಯಾಧಿಯನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕಾಗಿತ್ತು. ಇಂಥಾ ಡಿಫಿಸಿಟ್ ಬಡ್ಜೆಟ್ಟುಗಳನ್ನು ಸಭೆಯ ಮುಂದಿಟ್ಟು ಸದಸ್ಯರ ತೀವ್ರವಾದ ಕಟು ಟೀಕೆಗಳಿಗೆ ತುತ್ತಾಗುತ್ತಿದ್ದಾರೆ. ಇಂಥಾ ಹೆಚ್ಚುವರಿ ಬೇಡಿಕೆಗಳನ್ನು ಸಭೆಯ ಮುಂದೆ ತರುತ್ತಲೇ ಇರಬೇಕಾಗಿದ್ದರೆ ಅವರ ಎದೆಗಾರಿಕೆ ಏನು ಇರಬೇಕು ಎಂದು ಆಶ್ಚರ್ಯವಾಗುತ್ತದೆ.

ಶ್ರೀ ಸಿ. ಎಂ. ಪೂಣಚ್ಚ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಒಂದು ರೀತಿ ಮೆಚ್ಚತಕ್ಕದ್ದು.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಒಂದು ರೀತಿ ಮೆಚ್ಚತಕ್ಕದ್ದು. ಜೊತೆಗೆ ಅಷ್ಟು ದಪ್ಪ ಚರ್ಮ ಇದೆಯಲ್ಲಾ ಎನ್ನುವುದು ಕಂಡುಬಂದಿದೆ. ಹೆಚ್ಚುವರಿ ಬೇಡಿಕೆಗಳನ್ನು ಸಭೆಯಮುಂದೆ ಇಟ್ಟ ಸಂದರ್ಭದಲ್ಲಿ ಫೈನಾನ್ಷಿಯಲ್ ಸೆಕ್ರೆಟರಿಯವರು ಇಂಟರ್‌ಡಕ್ಟರಿ ಮೆಮೊರಾಂಡಮಿನಲ್ಲಿ ಸೂಚನೆಗಳನ್ನು ಮಾಡಿದ್ದಾರೆ. ಅದು ಕಾನೂನುಬದ್ಧವಾಗಿರುವುದರಿಂದ ಕಾನೂನಿಗೆ ತಕ್ಕಂತೆ ಹೆಚ್ಚುವರಿ ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟು ಅವರ ಒಪ್ಪಿಗೆಯನ್ನು ಪಡೆಯತಕ್ಕದ್ದು ಸಂವಿಧಾನದ ಸಂಪ್ರದಾಯ ಪ್ರಕಾರ ಅದನ್ನು ನಡೆಸಿಕೊಳ್ಳಬೇಕು ಎಂದು ಹೇಳುವುದು ಒಪ್ಪತಕ್ಕ ಮಾತು. ಆದರೆ ಈ ಹೆಚ್ಚುವರಿ ಬೇಡಿಕೆಗಳಲ್ಲಿ 1957-58ನೆಯ ವರ್ಷಕ್ಕೆ ಕೇಳಿರತಕ್ಕ ಮೊತ್ತವೇನು ? ಯಾವ ಯಾವ ಇಲಾಖೆಗಳಲ್ಲಿ ಕೇಳಿದ್ದರು ? ಇದಕ್ಕೆ ಪೂರ್ವಭಾವಿಯಾಗಿ ಎಷ್ಟು ಹಣವನ್ನು ಶಾಸನ ಸಭೆಯು ಒಪ್ಪಿ ಅವರಿಗೆ ಕೊಟ್ಟಿದೆ ? ಇದನ್ನು ಕೇಳಬೇಕಾದ ಪ್ರಸಂಗವೇನು ? ಎನ್ನುವ ವಿಷಯದಲ್ಲಿ ನಾಲ್ಕು ಮಾತುಗಳನ್ನಾಡತಕ್ಕದ್ದು ಯೋಗ್ಯವೆಂದು ನಾನು ತಿಳಿದುಕೊಂಡಿದ್ದೇನೆ.

ಸುಮಾರು ಒಂಭತ್ತು ಕೋಟಿ ಡಿಫಿಸಿಟ್ಟು ಬಡ್ಜೆಟ್ಟನ್ನು ಮಾಡಿದ ಸರಕಾರ ಈ ಪಟ್ಟಿಯಲ್ಲಿ Capital outlay not met from Revenue ಎನ್ನುವುದರಲ್ಲಿ ಸುಮಾರು 3,01,00,300 ರೂಪಾಯಿಗಳನ್ನು ಕೇಳಿದ್ದಾರೆ. ಇಲ್ಲಿ ಒಟ್ಟು ಬಡ್ಜೆಟ್ಟಿನಲ್ಲಿ ನಾಲ್ಕು ಕೋಟಿ ಹೆಚ್ಚವರಿ ಬೇಡಿಕೆಗಳನ್ನು ಕೇಳಿದ್ದಾರೆ. ಡಿಫಿಸಿಟ್ಟು ಬಡ್ಜೆಟ್ಟಿನ ವಿಚಾರವಾಗಿ ದ್ರವ್ಯಶಾಖೆಯ ಮಂತ್ರಿಗಳಾದ ಶ್ರೀ ಮರಿಯಪ್ಪನವರು 1957ನೆಯ ಇಸವಿಯ ಜೂನ್ ತಿಂಗಳು 15ನೇ ತಾರೀಖಿನ ದಿವಸ ಮಾಡಿದ ಭಾಷಣದಲ್ಲಿ—

“1957-58 ನೆಯ ವರ್ಷದ ಸಲುವಾಗಿ ನಾನು 1957ನೆಯ ಇಸವಿ ಮಾರ್ಚಿ 20ನೆಯ ದಿನಾಂಕದಂದು ತಾತ್ಕಾಲಿಕ ಆಯವ್ಯಯದ ಅಂದಾಜುಗಳನ್ನು ತಮ್ಮ ಮುಂದೆ ಮಂಡಿಸಿದಾಗ, ಈ ಅಡಚಣೆಗಳು ಅಷ್ಟೇನೂ ಬಗೆಹರಿದಿರಲಿಲ್ಲ. ಆ ದಿನ ನಾನು ‘ಖರ್ಚಿನ ಬೇರೆ ಬೇರೆ ಬಾಬುಗಳ ಸಲುವಾಗಿ ಒಂದೆರಡು ವರ್ಷಗಳಿಗೆ ಸಂಬಂಧಿಸಿದ ನಿಷ್ಕೃಷ್ಟವಾದ ಅಂಕಿ ಅಂಶಗಳನ್ನು ಪಡೆದಾಗಲೇ ನಮ್ಮ ನೈಜವಾದ ಆರ್ಥಿಕ ಪರಿಸ್ಥಿತಿಯೇನೆಂಬುದು ನಮಗೆ ಗೋಚರವಾಗಲು ಸಾಧ್ಯ’ ಎಂಬುದಾಗಿ ಸೂಚಿಸಿದ್ದುದು ತಮಗೆ ಜ್ಞಾಪಕವಿರಬಹುದು. ಈ ಮಾತು ಇಂದಿಗೂ ಅನ್ವಯಿಸುವುದು. ಆದರೂ ಸಹ ಜಮೆಗಳಿಗೂ ವೆಚ್ಚಕ್ಕೂ ಸಂಬಂಧಪಟ್ಟಂತೆ ಸಾಧ್ಯವಾದಮಟ್ಟಿಗೂ ನಿಷ್ಕೃಷ್ಟವಾದ ಅಂದಾಜುಗಳನ್ನು ಈ ಸದನದಲ್ಲಿ ಮಂಡಿಸಬೇಕೆಂಬ ಆಶಯದಿಂದ ಹಣಕಾಸಿನ ಇಲಾಖೆಯವರು ಎಲ್ಲ ಕಡೆಗಳಿಂದಲೂ ಶಕ್ಯವಿದ್ದಷ್ಟು ವಿಷಯ ಸಾಮಗ್ರಿಗಳನ್ನು ಸಂಗ್ರಹಿಸಿಕೊಂಡು, ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟುಮಟ್ಟಿಗೂ ಆ ವಿವರಗಳನ್ನು ಪರಿಶೋಧಿಸಿರುತ್ತಾರೆ.” ಪ್ರಾಂತ ಪುನರ್ವಿಂಗಡಣೆಯಾದ ಮೇಲೆ ಇಲ್ಲಿಗೆ ಬೇಕಾದ ಆಡಳಿತ ಸೌಕರ್ಯಗಳನ್ನು ತೆಗೆದುಕೊಂಡು ಪುನಃ ಇಡೀ ಹಣಕಾಸಿನ ಬಡ್ಜೆಟ್ಟನ್ನು ತಯಾರಿಸಬೇಕೆಂದು ಹೇಳಿದ್ದಾರೆ. ಅಲ್ಲಿ ಹೇಳಿರುವಂತೆ ಸುಮಾರು ಎಂಟು ಕೋಟಿ ರೂಪಾಯಿಗಳನ್ನು ಯೋಜನೆಯ ವೆಚ್ಚಕ್ಕಾಗಿ ಮತ್ತು ಐದು ಕೋಟಿ ರೂಪಾಯಿಗಳನ್ನು ಸಾಲಗಳ ತೀರ್ವೆಗಾಗಿಯೂ ತೆಗೆದಿಟ್ಟಿದ್ದಾರೆ. ಯಾವ ಯಾವ ಬಾಬುಗಳಿಗೆ ಎಷ್ಟು ಹಣಬೇಕಾಗುವುದೋ ಅದನ್ನು ಬಡ್ಜೆಟ್ಟಿನೊಳಗೇ ಮೀಸಲಾಗಿಟ್ಟಿದ್ದಾರೆ. ಇಷ್ಟು ಕೆಲಸ ಮಾಡಬೇಕಾಗಿರುವುದರಿಂದ ನಮ್ಮ ಹಣಕಾಸಿನಲ್ಲಿ ಸುಮಾರು ಒಂಭತ್ತು ಕೋಟಿ ರೂಪಾಯಿಗಳಷ್ಟು ಖೋತಾ ಆಗಬಹುದು ಎಂದು ಹೇಳಿದ್ದಾರೆ.

ಮತ್ತೊಂದು ವಿಷಯ. ಈಗ ಸರಕಾರದವರು ಇಲ್ಲಿ ಎಕ್ಸ್‌ಪ್ಲನೇಷನ್ನನ್ನು ಸರಿಯಾಗಿ ಕೊಟ್ಟಿಲ್ಲ. ಇಲ್ಲಿ ಹೇಳಿರುವಂತೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ವರ್ಕಿಂಗ್ ಎಕ್ಸ್‌ಪೆನ್ಸೆಸ್ಸಿಗೂ ಮತ್ತು ಮೂರು ಕೋಟಿ ರೂಪಾಯಿಗಳನ್ನು capital outlay not met from Revenue ಬಾಬಿಗೂ ಹೀಗೆ ನಾಲ್ಕು ಕೋಟಿ ರೂಪಾಯಿ ಹೆಚ್ಚಿಗೆ ಕೇಳಿರುವುದನ್ನು ನೋಡಿದರೆ ಈ ಆಯವ್ಯಯ ಪಟ್ಟಿಯನ್ನು ತಯಾರುಮಾಡಿರತಕ್ಕ ವಿಧದಲ್ಲಿ ಯಾವುದೋ ಒಂದು ನ್ಯೂನತೆಯಿದೆ. ವಾರ್ಷಿಕವಾಗಿ ಕೊಡತಕ್ಕ ಹಣವನ್ನು ಒಂದು ಹಿಡಿತದಿಂದ ಖರ್ಚುಮಾಡಲು ಮಂತ್ರಿಗಳ ಕೈಯನ್ನು ಅವರ ಕೈಕೆಳಗೆ ಕೆಲಸಮಾಡತಕ್ಕ ಕಾರ್ಯದರ್ಶಿಗಳು ಹಿಡಿದಿಟ್ಟಿದ್ದಾರೆ ಎನ್ನುವುದು ಸೂಕ್ಷ್ಮವಾಗಿ ಇಲ್ಲಿ ಗೊತ್ತಾಗುತ್ತದೆ.

ಇನ್ನು ಎರಡು ಮೂರು ಅಂಶಗಳನ್ನು ಸಭೆಯ ಮುಂದೆ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಇಂತಹ ಹೆಚ್ಚುವರಿ ಬೇಡಿಕೆಗಳನ್ನು ಕೇಳಬಾರದು. ಸುಮಾರು ಜುಲೈ ತಿಂಗಳಿನಲ್ಲಿ ಶಾಸನ ಸಭೆಯು ಸೆಷನ್ನಿನಲ್ಲಿದ್ದಾಗ ಆಯವ್ಯಯದ ಅಂಗೀಕಾರವನ್ನು ಪಡೆದಿದ್ದರು. ಈಗ ಪುನಃ ಶಾಸನ ಸಭೆಯ ಮುಂದೆ ಹೆಚ್ಚಿನ ಬೇಡಿಕೆಗಳನ್ನು ತಂದಿದ್ದಾರೆ. ಈಗ ವರ್ಷದ ಕೊನೆಯಾದುದರಿಂದ ಇಂತಹ ಬೇಡಿಕೆಗಳಿಗಾಗಿ ಕಾನೂನು

(ಶ್ರೀ ಎಂ. ಪಿ. ಎಲ್. ಶಾಸ್ತ್ರಿ)

ಬದ್ಧವಾಗಿ ಶಾಸನದ ಒಪ್ಪಿಗೆ ಪಡೆಯಲು ಈ ರೀತಿಯ ಅವಕಾಶವನ್ನು ಕಲ್ಪಿಸಿಕೊಳ್ಳುವುದಕ್ಕಾಗಿ ಈ ಹೆಚ್ಚುವರಿ ಬೇಡಿಕೆಗಳನ್ನು ಈ ಶಾಸನ ಸಭೆಯ ಮುಂದೆ ತಂದು ಇಂದು ಪಾಸಾಗುತ್ತಿದೆ. ಇದರಲ್ಲಿ ಎರಡು ವಿಷಯಗಳು ನನ್ನ ಮನಸ್ಸಿಗೆ ಒಪ್ಪದೇ ಇರತಕ್ಕದು. ಮೊದಲನೆದಾಗಿ, charged itemsಗಾಗಿ 22,15,400 ರೂಪಾಯಿಗಳನ್ನು ಕೇಳಿದ್ದಾರೆ. ಇದು ಡಿಮ್ಯಾಂಡು 10ರಲ್ಲಿದೆ. ಇದರ Explanatory Note ನಲ್ಲಿ ಹೀಗೆ ಹೇಳಿದೆ:—

On page 6.—"To meet the interest charges of the loans transferred from Bombay for the last five months of 1956-57 expected to be adjusted during that year, but actually passed on for adjustment during current year."

Item Nos. 2 and 3.—"The additional sums now included are required to meet the expenditure on account of interest for six months and discount at 1·25 per cent payable on 4¼ per cent Development Loan 1969 issued in September 1957. No provision was made in the Budget Estimates for the current year, as these items of expenditure could not be determined in the absence of terms of the loan."

ಜೂನ್ ತಿಂಗಳಿನಲ್ಲಿ ಆಯುವ್ಯಯ ಪಟ್ಟಿಯನ್ನು ಸಭೆಯ ಮುಂದೆ ಇಟ್ಟಾಗಲೇ ಶಾಸನ ಸಭೆಯ ಒಪ್ಪಿಗೆ ಪಡೆದಿದ್ದಾರೆ. ಸಾಲ ತೆರುವುದಕ್ಕೆ ಶಾಸನ ಸಭೆಯ ಒಪ್ಪಿಗೆಯನ್ನು ಪಡೆದಿದ್ದಾರೆ. ಶಾಸನ ಸಭೆಯ ಒಪ್ಪಿಗೆಯನ್ನು ಪಡೆದಾಗ ಸಾಲದ ಮೇಲೆ ಬಡ್ಡಿ ಕೊಡುವುದಕ್ಕೂ ಸರಕಾರ ಒಪ್ಪಿಗೆಯನ್ನು ಪಡೆಯಬೇಕಾಗಿತ್ತು, ಇಂತಹ ಸಮಯದಲ್ಲಿ ಇದನ್ನು ಏಕೆ ತರಬೇಕಾಗಿತ್ತು? ಡೆಫಿಸಿಟ್ಟು ಬಡ್ಜೆಟ್ಟು ಹೆಚ್ಚಾಗುತ್ತ ಬಂದು ಹೆಚ್ಚಿನ ಡೆಫಿಸಿಟ್ಟನ್ನು ತೋರಿಸಿದರೆ ಅದನ್ನು ಸರಿತೂಗಿಸುವುದು ಕಷ್ಟಸಾಧ್ಯವಾದೀತು. ಆದ್ದರಿಂದ ಏನೋ ಕೈವಾಡವನ್ನು ತೋರಿಸಿ ಅಂಕಿ ಅಂಶಗಳಿಗೆ ಒಂದು ಬಣ್ಣವನ್ನು ಕಟ್ಟಿ ತೋರಿಸಿದರೆ ನಮ್ಮ ಸ್ಥಿತಿ ಉತ್ತಮವಾದೀತು ಎನ್ನುವ ದೃಷ್ಟಿಯಿಂದ ಮಾಡಿದ್ದಾರೆಂದು ಕಾಣುತ್ತದೆ. ಆಗ್ಲೇ ಹೆಚ್ಚಾಗಿ ಹೇಳಿಬಿಟ್ಟರೆ ಸರಿಯಾಗಿರುವುದಿಲ್ಲ ಎಂದು ಅಲ್ಲಿ ಹೇಳಲಿಲ್ಲ. ಈಗ ನಮ್ಮ ಮೈಸೂರು ಸರಕಾರ ತೆರಬೇಕಾದ ಸಾಲ ಮತ್ತು ಆ ಸಾಲದ ಮೇಲಿನ ಬಡ್ಡಿ ವಿಷ ಏರಿದಹಾಗೆ ಏರುತ್ತದೆ. ಇದನ್ನು ಅನೇಕ ಸದಸ್ಯರು ಹೇಳಿದ್ದಾರೆ. ಹೀಗೆ ದೇಶಾಭಿವೃದ್ಧಿ ಕೆಲಸಕ್ಕೆಂದು ಸಾಲದ ಹೊರೆ ಹೆಚ್ಚಿದ ಪಕ್ಷದಲ್ಲಿ ದೇಶಾಭಿವೃದ್ಧಿ ಕಾರ್ಯಗಳನ್ನು ನಡೆಸುವುದಕ್ಕೆ ಸರಕಾರ ಅಸಮರ್ಥವಾಗುತ್ತದೆ. ಇಲ್ಲಿರುವ Explanatory Noteನಲ್ಲಿ ಸರಿಯಾದ ಕಾರಣಗಳನ್ನು ಕೊಟ್ಟಿಲ್ಲ. ಎಂದು ನಾನು ತಿಳಿದುಕೊಂಡಿದ್ದೇನೆ. ಬಡ್ಡಿಯನ್ನು ಕೊಡತಕ್ಕ ಪರಿಸ್ಥಿತಿ, ನಾವು ಸಾಲವನ್ನು ಹೊತ್ತಿರತಕ್ಕ ಪರಿಸ್ಥಿತಿ, ಇವನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಹುಟ್ಟುವ ಮಕ್ಕಳು ಹೆಚ್ಚಾಗುವಂತೆ ಇದೂ ಏರುತ್ತಿದೆ. ನಮ್ಮ ರಾಜ್ಯದಲ್ಲಿ ಹುಟ್ಟತಕ್ಕ ಮಕ್ಕಳು ಹೆಚ್ಚಾಗುತ್ತಿರುವುದರಿಂದ ಈ ರತ್ನಗರ್ಭಿಯಾದ ಕರ್ನಾಟಕ ರಾಜ್ಯದಲ್ಲಿ ಒಬ್ಬರು ನಾಲ್ಕು ರೂಪಾಯಿಗಳಷ್ಟು ಹೊರೆಯನ್ನು ಹೊತ್ತುಕೊಂಡು ಹೋಗಬೇಕಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಒಬ್ಬ ಸದಸ್ಯರು.—ಸ್ವತ್ತು ಬೇಕಾದಷ್ಟಿದೆ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಹೌದು, ಉತ್ತರ ಕರ್ಣಾಟಕ ಮಾತೆ ರತ್ನಗರ್ಭಿಯಾಗಿ ಸಮುದ್ರ ಪರಿವೇಷ್ಟಿಯಾಗಿ ನಿಂತಿದೆ. ಹೊರಗಡೆಯಿಂದ ಬಂದ ಪ್ರಾಂತಗಳಿಂದ ಇವುಗಳ ಲೆಕ್ಕ ಏನು ಎನ್ನುವುದು ತಿಳಿಯುತ್ತದೆ. ಒಂದೇ ಒಂದು ಉದಾಹರಣೆ ಹೇಳುತ್ತೇನೆ. 1956ನೇ ಇಸವಿಯ ಆಡಿಟ್ ರಿಪೋರ್ಟನ್ನು ಪರಿಶೀಲಸಿದರೆ ಇದು ಸಹಜವಾದ ಸಸಂಮೃದ್ಧವಾದ ದೇಶವೇ, ಇಲ್ಲಿ ಸಾಲದ ಹೊರೆ ಹೆಚ್ಚಾಗುತ್ತಿದೆಯೇ ಎನ್ನುವುದನ್ನು ನೋಡಿದರೆ ಸರಿಯಾದ ರೀತಿಯಲ್ಲಿಲ್ಲವೆನ್ನುವುದು ತಿಳಿಯುತ್ತದೆ.

ಈಗಿನ ಸರಕಾರ ತೆಗೆದುಕೊಳ್ಳತಕ್ಕ ಸಾಲದ ಹೊರೆಯನ್ನು ನೋಡಿದರೆ ಈ ಸಾಲವನ್ನು ತೀರಿಸುವ ಯೋಚನೆಯನ್ನು ಏನೂ ಮಾಡುತ್ತಿಲ್ಲವೆಂದು ತೋರುತ್ತದೆ.

ಹಳೆಯ ಮೈಸೂರಿನ ಪರಿಸ್ಥಿತಿ ಏನಿತ್ತು ಎನ್ನುವುದು ಅನೇಕ ಜನ ಸಭೆಯ ಸದಸ್ಯರಿಗೆ ಮನದಟ್ಟಾಗಿದೆ. ಪ್ರತಿ ವರ್ಷದ ಸಾಲದ ಹೊರೆ ಮತ್ತು ಈ ಸಾಲದ ಮೇಲೆ ಕೊಡಬೇಕಾದ ಬಡ್ಡಿದರ, ಇವು ನಮ್ಮ ಶಕ್ತಿ ಸರ್ವಸ್ವವನ್ನು ಕಿತ್ತುಕೊಂಡು ಹೋಗುವುದರಿಂದ ಈ ಪರಿಸ್ಥಿತಿಯಲ್ಲಿ ಸರಕಾರ ಈ ಸಾಲವನ್ನು ವಾಪಸು ಮಾಡುವ ಸ್ಥಿತಿಯಲ್ಲಿಲ್ಲ ಎನ್ನುವುದು ಕಂಡುಬರುತ್ತದೆ. ಸಾಲಕ್ಕಾಗಿ ಬಡ್ಡಿಯನ್ನು ಕೊಡುವುದು ಹೆಚ್ಚಾಗಬಾರದು ಮತ್ತು ಈ ಸಾಲವನ್ನು ಸತತವಾಗಿ ತೀರಿಸಲು ಆದಷ್ಟು ಪ್ರಯತ್ನ ಮಾಡಬೇಕು.

ಇಲ್ಲಿರುವ 4 ಕೋಟಿ ಚಿಲ್ಲರೆ ರೂಪಾಯಿಗಳ ಬೇಡಿಕೆಯಲ್ಲಿ 22 ಲಕ್ಷ ರೂಪಾಯಿಗಳು charged itemsಗಾಗಿ ಎಂದರೆ ಬಡ್ಡಿಗೋಸ್ಕರ ಹೋಗುತ್ತಿದೆ. ಇಂತಹ ಪರಿಸ್ಥಿತಿಯನ್ನು ಸರಕಾರ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾದ್ದು ಅಗತ್ಯ ಎಂದು ನಾನು ಸೂಚಿಸುತ್ತಿದ್ದೇನೆ.

ಇನ್ನು ಟೋಕನ್ ಗ್ರಾಂಟುಗಳನ್ನು ಕೇಳಿದ್ದಾರೆ. ಯಾವ ಯಾವ ಬಾಬಿಗಾಗಿಯೆಂದರೆ (1) ಫಾರೆಸ್ಟು, (2) ಜನರಲ್ ಅಡ್ಮಿನಿಸ್ಟ್ರೇಷನ್, (3) ಎಜ್ಯುಕೇಷನ್ ಇಷ್ಟು ಬಾಬುಗಳಿಗೆ ಕೇಳಿದ್ದಾರೆ. ಈ ಬಾಬುಗಳಿಗೆ ಪ್ರತಿಯೊಂದಕ್ಕೂ 100 ರೂಪಾಯಿಗಳ ಟೋಕನ್ ಗ್ರಾಂಟನ್ನು ಕೇಳಿದ್ದಾರೆ. ಇದಾದನಂತರ C—Capital outlay not met from Revenue ಎಂಬ ಹೆಡ್ಡಿನಲ್ಲಿ 200 ರೂಪಾಯಿಗಳ ಟೋಕನ್ ಗ್ರಾಂಟನ್ನು, Construction of irrigation, Navigation, Embankment Works (New Commercial) ಎಂಬ ಬಾಬಿಗೆ ಕೇಳಿದ್ದಾರೆ. ಅದೇ ಬಾಬಿನ ಕೆಳಗೆ 51ನೆಯ ಡಿಮ್ಯಾಂಡ್ ಬಗ್ಗೆ 100 ರೂಪಾಯಿಗಳ ಟೋಕನ್ ಗ್ರಾಂಟನ್ನು ಕೇಳಿದ್ದಾರೆ. ಇದೇನೋ ಕಾನೂನುಬದ್ಧವಾಗಿದೆ. ಯಾವುದಾದರೂ ಒಂದು ಹೊಸ ಕೆಲಸವನ್ನು ಪ್ರಾರಂಭಮಾಡುವಾಗ ಅದರ ಬಗ್ಗೆ ಈ ರೀತಿ ಒಂದು ಟೋಕನ್ ಗ್ರಾಂಟನ್ನು ಪಡೆಯಲು ಅವಕಾಶವಿದೆ. ಆದರೆ ಇಲ್ಲಿ ತಿಳಿಸಿರುವಂಥ ಕೆಲವು ಬಾಬುಗಳ ಬಗ್ಗೆ ಹೀಗೊಂದು ಟೋಕನ್ ಗ್ರಾಂಟನ್ನು ಕೇಳುವಂಥ ಪರಿಸ್ಥಿತಿ ಇರಲಿಲ್ಲವೆಂದು ಹೇಳಬೇಕಾಗಿದೆ. ಅಂಥ ಒಂದು ಐಟಂ ಯಾವುದೆಂದರೆ–ಡಿಮ್ಯಾಂಡ ನಂಬರ್ 13. ಮೈಸೂರ್ ಗೆಜೆಟಿಯರ್ ಆಫೀಸಿನ ಬಗ್ಗೆ ಇಂಥ ಒಂದು ಟೋಕನ್

ಗ್ರ್ಯಾಂಟನ್ನು ಪಡೆಯತಕ್ಕ ಅವಶ್ಯಕತೆ ಸರ್ಕಾರದವರಿಗೆ ಇರಬೇಕಾಗಿಲ್ಲವೆಂಬುದು ಇಲ್ಲಿ ಬರೆದಿರುವ ಎಕ್ಸ್‌ಪ್ಲನೇಟರಿ ನೋಟನ್ನು ನೋಡಿದರೆ ಎಲ್ಲರಿಗೂ ಸ್ಪಷ್ಟವಾಗಿ ತಿಳಿಯಬರುತ್ತದೆ. ಆ ಒಂದು ಸಿಬ್ಬಂದಿ 1957ನೆಯ ಅಕ್ಟೋಬರ್ ತಿಂಗಳಿನಲ್ಲೇ ಮಂಜೂರಾಗಿದ್ದುದರಿಂದ ಅದಕ್ಕೆ ಖಚಿತವಾಗಿ ಎಷ್ಟು ಮೊಬಲಗು ಬೇಕಾಗುತ್ತಿದ್ದಿತೋ ಅಷ್ಟು ಗೊತ್ತಾಗದೆ ಇದ್ದಾಗ್ಯೂ ಒಂದು ಸಾವಿರ ರೂಪಾಯಿಗಳ ಹೆಚ್ಚು ಕಡಮೆ ಇರುವಷ್ಟನ್ನಾದರೂ ಹಿಂದಿನ ಬಡ್ಜೆಟ್ಟಿನಲ್ಲೇ ಸೇರಿಸಿ ಕೇಳಬಹುದಾಗಿತ್ತು. ಆ ರೀತಿ ಈ ಐಟಂನ್ನು ಹಿಂದಿನ ಬಡ್ಜೆಟ್ ಅಧಿವೇಶನದಲ್ಲೇಕೆ ತರಲಿಲ್ಲವೆಂದು ಸರ್ಕಾರವನ್ನು ಕೇಳಬೇಕಾಗಿದೆ. ಇದರ ಬಗ್ಗೆ ಹೇಳುವುದಾದರೆ ಸಂಸ್ಕೃತದಲ್ಲಿ “ಯಥೇಚ್ಛಂ ವಿಹರ” ಎಂಬ ಒಂದು ಶ್ಲೋಕವಿದೆ; ಈ ಶ್ಲೋಕದಲ್ಲಿ ಏನು ಒಂದು ಅರ್ಥ ಅಡಗಿದೆಯೋ ಅದೇ ರೀತಿ ನಾವು ಈ ಟೋಕನ್ ಗ್ರ್ಯಾಂಟುಗಳಿಗೆಲ್ಲ ನಮ್ಮ ಅನುಮತಿಯನ್ನು ಕೊಡುತ್ತಾ ಹೋದ ಹಾಗೆಲ್ಲ ಸರ್ಕಾರದವರು ಹಣವನ್ನು ವೆಚ್ಚ ಮಾಡುತ್ತಿರುವುದೂ ಅಧಿಕವಾಗುತ್ತದೆ. ಹೀಗೆ ಟೋಕನ್ ಗ್ರ್ಯಾಂಟನ್ನು ಕೇಳತಕ್ಕಂಥಾದ್ದು ಒಂದು ಪ್ರಕರಣವಾದರೆ, ಅದರಲ್ಲಿ “New Service” ಎನ್ನತಕ್ಕ ಬಾಬಿಗೆ ಕೇಳತಕ್ಕದ್ದು ಇದರದೇ ಒಂದು ದೊಡ್ಡ ಪ್ರಕರಣವಿದೆ. ಈ ಡಿಮ್ಯಾಂಡಿನ ಬಗ್ಗೆ ಹೇಳಿರತಕ್ಕ ಒಂದು ಎಕ್ಸ್‌ಪ್ಲನೇಟರಿ ನೋಟಿನಲ್ಲಿ ‘the post of the Chief Editor and other staff required for revision and publication were sanctioned in October 1957’ ಎಂಬುದಾಗಿ ತಿಳಿಸಿದೆ. ಎಂದ ಮೇಲೆ The actual salaries of the officers and the other staff belonging to the *Mysore Gazetteer* office could have been easily found out and that could have been shown here.

ಸಭಾಪತಿಯವರು.—ಅವರು ಈಗ ಕೇಳಿರತಕ್ಕ ರೀ-ಅಪ್ರೋಪ್ರಿಯೇಷನ್ ಟೆಕ್ನಿಕಲ್ ಆಗಿದೆ.

Sri M. P. L. SASTRY.—My suggestion to Government was that they could have given us the actual figures under this head instead of merely putting it as Rs. 100 as token grant.

ಇನ್ನು ಈ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಕೇಳಿರತಕ್ಕ ಟೋಕನ್ ಗ್ರ್ಯಾಂಟಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ಬಾಬಿನಲ್ಲಿ ವೆಚ್ಚ ದಿನದಿನಕ್ಕೂ ಹೆಚ್ಚಾಗುತ್ತಿದೆ. ಈ ಹಿಂದೆ ನಾನು ಬಡ್ಜೆಟ್ ಮೇಲೆ ಮಾತನಾಡುವಾಗ ಒಂದೆರಡು ಸಾರಿ ಹೇಳಿದ್ದೇನೆ—ಏನೆಂದರೆ ನಮ್ಮ ಸರ್ಕಾರಕ್ಕೆ ಬರತಕ್ಕ ಆದಾಯದಲ್ಲಿ ಅಧಿಕ ಭಾಗ ಈ ಸರ್ಕಾರದ ಉದರಾಭರಣ ನಡೆಸುವುದಕ್ಕಾಗಿಯೇ ವೆಚ್ಚ ಮಾಡುತ್ತಿದ್ದೇವೆಂಬುದು ನಮಗೆ ಅಂಕೀ ಅಂಶಗಳಿಂದ ಗೊತ್ತಾಗಿದೆ. ಇತ್ತೀಚೆಗೆ ಇಂಟಿಗ್ರೇಷನ್ ಆದ ಮೇಲೆ ನಮ್ಮ ಮೈಸೂರು ದೇಶಕ್ಕೆ ನಾಲ್ಕೈದು ಭಾಗಗಳಿಂದ ಸರ್ಕಾರಿ ಜನರು ಬಂದು ಒಂದು ಕಡೆ ಸೇರಿದ ಮೇಲೆ ಏನಾಗಿದೆ ಎಂದರೆ ಹಿಂದೆ ಸರ್ಕಾರಿ ಆಡಳಿತ ಎಷ್ಟು ಬಿಕ್ಕಟ್ಟಾಗಿ ನಡೆಯುತ್ತಿತ್ತೋ ಈ ದಿವಸ ಅಷ್ಟು ಬಿಕ್ಕಟ್ಟಾಗಿ ನಡೆಯುತ್ತಿಲ್ಲ—ಆಡಳಿತ ಬಹಳ ಸಡಿಲವಾಗಿದೆಯೆಂಬುದಾಗಿ ಕಾಣುತ್ತದೆ. ಸರ್ಕಾರದಲ್ಲಿ ಜನರ ಬೇಡಿಕೆಗಳ ಬಗ್ಗೆ ಫೈಲುಗಳು ಸಮರ್ಪಕವಾದ ರೀತಿಯಲ್ಲಿ ಮತ್ತು ಕಾಲಕ್ಕೆ ಸರಿಯಾಗಿ ವಿಲೇವಾರಿಯಾಗುತ್ತಿಲ್ಲವೆಂಬುದಾಗಿ ಎಲ್ಲೆಲ್ಲೂ ಬಹು ಜನರ ಬಾಯಿಂದ ಕೇಳಿಬರುತ್ತಿದೆ. ನಾನು ಈ ಹಿಂದೆ ನಮ್ಮ ಸೆಕ್ರೆಟೇರಿಯಟ್‌ನಲ್ಲಿ ಯಾವ ರೀತಿ ಕೆಲಸ ಕಾರ್ಯಗಳು ನಡೆಯುತ್ತಿದ್ದವು, ಈ ದಿವಸ ಯಾವರೀತಿ ನಡೆಯುತ್ತಿವೆಯೆಂಬುದನ್ನು ನೋಡಿದ್ದೇನೆ. ಆದರೆ ಇಂದು ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಹೇಳಬೇಕಾಗಿದೆ. ಈ ಹಿಂದೆ ಪ್ರಾಪ್ತವಾಗಿದ್ದಂಥ ಆ ಒಂದು ದುರ್ಭಿಕ್ಷಕಾಲದಲ್ಲಿ ಕಂಟ್ರೋಲುಗಳು ಜಾರಿಯಲ್ಲಿದ್ದಾಗ ಸರ್ಕಾರ ಅಷ್ಟೊಂದು ಸಿಬ್ಬಂಧಿಯನ್ನು ಇಟ್ಟುಕೊಳ್ಳುವ ಅಗತ್ಯವಿತ್ತೇ ಎಂಬ ಸಂಶಯ ಆಗಲೇ ಬಹಳವಾಗಿತ್ತು. ಆದರೆ ಈ ದಿವಸ ಈ ಸಿಬ್ಬಂದಿವರ್ಗ ಅದಕ್ಕಿಂತಲೂ ಕಡಮೆಯೇನೂ ಆಗಿಲ್ಲ. ಸರ್ಕಾರಿ ಕಚೇರಿಗಳಲ್ಲಿ ಕುಳಿತು ಕೆಲಸ ಮಾಡತಕ್ಕ ನೌಕರರು ಹಿಂದಿನ ಕಾಲದ ಆಡಳಿತದಲ್ಲಿದ್ದಂತೆ ಆರು ಗಂಟೆಗಳಕಾಲ ನಿರ್ವಂಚನೆಯಿಂದ ಹೇಗೆ ಅವರು ಸೇವೆಸಲ್ಲಿಸಿಕೊಂಡು ಬರುತ್ತಿದ್ದರೋ ಆ ರೀತಿ ಈಗಲೂ ಸೇವೆಸಲ್ಲಿಸುತ್ತಿದ್ದರೆ ಯಾವ ಒಂದು ಆಕ್ಷೇಪಣೆಗೂ ಅವಕಾಶವಿರುತ್ತಿರಲಿಲ್ಲ. ಆ ರೀತಿ ನಿರ್ವಂಚನೆಯಿಂದ ಕೆಲಸಗಳು ನಡೆಸಲ್ಪಡುವುದಾಗಿದ್ದರೆ ಈಗಿರುವ ಸಿಬ್ಬಂದಿಯಲ್ಲಿ ಅರ್ಧಕ್ಕೇ ಈ ಕಾರ್ಯಗಳನ್ನೆಲ್ಲ ನಡೆಸಿಕೊಂಡು ಹೋಗಲು ಸಾಧ್ಯವಿತ್ತಲ್ಲವೇ ಎಂದು ಅನ್ನಿಸುತ್ತದೆ. ಸರ್ಕಾರ ಜನರನ್ನು ಕೆಲಸಕ್ಕೆ ಇಟ್ಟುಕೊಳ್ಳುವಾಗ ಅಂಥ ನಿಷ್ಠಾವಂತರನ್ನೇ ನೋಡಿ ಇಟ್ಟುಕೊಳ್ಳಬೇಕು. ಪ್ರಜಾ ಸರ್ಕಾರದ ಕೈಗೆ ಆಡಳಿತ ಬಂದಿರುವಾಗ, ದೇಶದ ಆಡಳಿತ ಸೂತ್ರವನ್ನು ಕೈಲಿ ಹಿಡಿದಿರುವಾಗ ಪ್ರಜೆಗಳಿಗೂ ಆಡಳಿತವರ್ಗಕ್ಕೂ ಒಂದು ನಿಕಟ ಸಂಪರ್ಕವಿರಬೇಕಾದದ್ದು ಅತ್ಯಗತ್ಯ. ಯುನೈಟೆಡ್ ಕಿಂಗ್‌ಡಂನಲ್ಲಿ ಸೆಕ್ರೆಟೇರಿಯಟ್ ಲೆವಲ್‌ನಲ್ಲಿ ಕೆಲಸಮಾಡತಕ್ಕ ಸೆಕ್ರೆಟರಿಗಳಾಗಲಿ ಅಥವಾ ಸೆಕ್ರೆಟೇರಿಯಟ್‌ನ ಸಿಬ್ಬಂದಿವರ್ಗವಾಗಲಿ ಬಹಳ ವಿಶ್ವಾಸದಿಂದ, ಸಹೃದಯರಾಗಿ ಅಲ್ಲಿಯ ಜನರೊಂದಿಗೆ ಹೊಂದಾವಣಿಕೆಯಿಂದ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆಂದು ಕೇಳಿದ್ದೇನೆ. ಮೇಲಾಗಿ ಸೆಕ್ರೆಟೇರಿಯಟ್‌ನಲ್ಲಿ ಮೂವ್ ಆಗತಕ್ಕ ಫೈಲುಗಳೇನೂ ನಿರ್ಜೀವ ವಸ್ತುಗಳಲ್ಲ. ಅವು ಒಂದು ಆಸ್ತಿ. ಸರ್ಕಾರಕ್ಕೆ ಉತ್ಪತ್ತಿತರುವ ಪ್ರಸಂಗಗಳಿರುತ್ತವೆ. ಆ ಫೈಲುಗಳ ಹಿಂದೆ ಸಂಬಂಧಪಟ್ಟ ನೂರಾರು ಜನಗಳಿರುತ್ತಾರೆ. ಈ ಫೈಲುಗಳು ಸರ್ಕಾರಿ ಆಡಳಿತದ ಉನ್ನತಿ ಅವನತಿಗಳನ್ನು ಸೂಚಿಸತಕ್ಕ ಪ್ರಸಂಗಗಳಿವೆ. ಹಿಂದಿನ ಮೈಸೂರು ಆಡಳಿತ ಬಹಳ ಉನ್ನತ ಮಟ್ಟದಲ್ಲಿತ್ತು. ಆದರೆ ಈ ದಿವಸ ಅದಕ್ಕೆ ಸಂಚಕಾರ ಬರುವ ಚಿನ್ಹೆಗಳು ಕಾಣುತ್ತಿವೆ. ಆದುದರಿಂದ ಸರ್ಕಾರದವರು ಈ ಅಂಶವನ್ನು ತೀವ್ರವಾಗಿ ಪರಿಶೀಲನೆ ಮಾಡತಕ್ಕದ್ದು ಅಗತ್ಯ.

ಇನ್ನು ಡಿಮ್ಯಾಂಡ್ ನಂಬರ್ 10ರಲ್ಲಿ ಹೀಗೆ ಹೇಳಿದ್ದಾರೆ.

> “Estimates of amounts required for further expenditure in 1957-58: Irrigation Works—Other Revenue Expenditure financed from Ordinary Revenues:

An outlay of Rs. 25,91,343 according to Departmental figures has already been booked up to the end of November 1957, against a provision of Rs. 22,00,000 in the current year's

(SRI M. P. L. SASTRY)

estimates. Extensive repair works had to be undertaken, as many of the tanks were damaged as a result of rains. The P.W.D. anticipates to incur the additional expenditure before the close of the year."

ಈ P.W.D. ಯಾವಾಗ್ಲೂ ಹೆಚ್ಚು ಹಣವನ್ನು ವೆಚ್ಚಮಾಡತಕ್ಕಂಥ ಇಲಾಖೆ. ಈ ಇಲಾಖೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಹಳೆ ಮೈಸೂರಿನ P.W.D. ಹಿಂದೆ ನಾಲ್ಕೈದು ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿತ್ತೋ ಅದಕ್ಕಿಂತ ಹೆಚ್ಚು ಹಣವನ್ನು ಈಗ ಕೇಳಿದ್ದಾರೆ. ಈ ರೀತಿ ವೆಚ್ಚಮಾಡಬಾರದು ಎಂಬುದಾಗಿ ಅಕೌಂಟೆಂಟ್ ಜನರಲ್‌ಅವರು ಅವರ ಆಡಿಟ್ ವರದಿಯಲ್ಲಿ ಸೂಚಿಸಿದ್ದಾರೆ. ಈ ಇಲಾಖೆಯವರು ಖರ್ಚುಮಾಡಿರತಕ್ಕ ಪ್ರತಿತಿಂಗಳ ಹಣದ ಬಗ್ಗೆ ಟ್ರೆಜರಿಯವರು ಕೊಡತಕ್ಕ ಅಂಕಿ ಅಂಶಗಳು ಅಕೌಂಟೆಂಟ್ ಜನರಲ್ ಆಫೀಸಿನಲ್ಲಿರತಕ್ಕ ಅಂಕಿ ಅಂಶಗಳಿಗೆ ಸರಿಯಾಗಿ ತಾಳೆ ಬೀಳುತ್ತಿಲ್ಲ; ಆದ್ದರಿಂದ ಈ ಪ್ರತಿಯೊಂದು ಖರ್ಚುವೆಚ್ಚಗಳ ಬಗ್ಗೆ ಆಯಾ ತಿಂಗಳ ಅಂಕಿ ಅಂಶಗಳನ್ನು ಆಯಾಯ ತಿಂಗಳಲ್ಲೇ ತಯಾರಿಸಿ ಕಳುಹಿಸಬೇಕೆಂದು ಅವರು ಪದೇ ಪದೇ ಒತ್ತಾಯ ಪಡಿಸುತ್ತಿದ್ದಾರೆ. ಆದಾಗ್ಲೂ P.W.D. ಅಧಿಕಾರವರ್ಗದವರು ಇದಕ್ಕೇನೂ ಗಮನವನ್ನಾಗಲಿ ಮನ್ನಣೆಯನ್ನಾಗಲಿ ಕೊಟ್ಟ ಹಾಗೆ ಕಾಣುತ್ತಿಲ್ಲ. ಅಕೌಂಟೆಂಟ್ ಜನರಲ್ ಅವರು 1956ನೆಯ ಆಡಿಟ್ ವರದಿಯ 19ನೆಯ ಪುಟದಲ್ಲಿ ಹೀಗೆ ಹೇಳಿದ್ದಾರೆ:--

> "Delay in settlement of accounts with Treasuries by the Public Works Department.—In paragraph 24 of the Audit Report 1956, mention was made of the non-submission of the schedule of monthly settlement with treasuries by the officers of the Public Works Department and the possible effect of non-reconciliation of the differences between the treasury and departmental figures."

They have also raised several objections in regard to clearance of objections. Their money value amounts to Rs. 13 crores and odd. "Some of these date back to periods as far back as 1942-43 and include the following important types of objections, the clearance of which appears to be delayed without adequate reasons or justification, and delay in settlement of which is likely to lead to the continuance of such irregularities" and this should be avoided immediately

"(a) want of estimates

(b) excess over estimates

(c) want of detailed bills, stamped receipts, etc.

(d) non-submission of detailed contingent bills for amounts drawn on abstract contingent bills

(e) non-recovery of excess payments

(f) want of sanction to continuance of temporary establishments."

ಇಲ್ಲಿ ಐದಾರು ತಪ್ಪಿತಗಳನ್ನು ಹೇಳಿದ್ದಾರೆ. Want of estimates, excess over estimates, want of detailed bills, stamped receipts, non-submission of detailed contingent bills for amount drawn on abstract contingent bills, non-recovery of excess payment. Want of sanction to continuance of temporary establishment—ಈ ಐದಾರು ತಪ್ಪಿತಗಳೂ ಕೂಡ ಬಹಳ ಪ್ರಬಲವಾಗಿರುವ ತಪ್ಪಿತಗಳು. ಸುಮಾರು ಹತ್ತು ವರ್ಷಗಳಿಂದಲೂ ವರ್ಷಂಪ್ರತಿ ಇದೇ ತಪ್ಪಿತಗಳನ್ನು ಮಾಡುತ್ತಿದ್ದಾರೆ. ಅಕೌಂಟೆಂಟ್ ಜನರಲ್ ಸೂಚನೆ ಕೊಟ್ಟಿದ್ದರೂ, ಮತ್ತು ಸರ್ಕಾರ ಸುತ್ತೋಲೆಯನ್ನು ಕಳುಹಿಸಿದ್ದರೂ ಅವುಗಳಿಗೆ ಯಾವ ವಿಧವಾದ ಮನ್ನಣೆಯನ್ನೂ ಕೊಡದೆ ಹಾಗೆ ಮಾಡುತ್ತಿದ್ದಾರೆ. ಕ್ಷಮೆಗೆ ಮಾರ್ಗವಿಲ್ಲ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಈ ತರಹ ಇರ್ರೆಗ್ಯುಲಾರಿಟೀಸ್ ಇದ್ದ ಪಕ್ಷದಲ್ಲಿ ಹಣಕ್ಕೆ ಬಹಳ ಧಕ್ಕೆ ಬರುತ್ತದೆ. ಅದನ್ನು ನಿಲ್ಲಿಸಬೇಕಾದುದು ಅಗತ್ಯ.

ಇನ್ನು Capital outlay not met from Revenue ಬಾಬಿನಲ್ಲಿ ಎರಡು ಕೋಟಿ, ಒಂದು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವ ಇಲಾಖೆ ಇದೆ. ಈ ಇಲಾಖೆಯಲ್ಲಿ ಅನ್ಯಾಯವಾಗುತ್ತಿದೆ ಎನ್ನುವುದನ್ನು ತಮ್ಮ ಮೂಲಕ ಸರ್ಕಾರದ ಮುಂದೆ ಇಡುತ್ತೇನೆ.

ಸಭಾಪತಿಯವರು.—ಕ್ಯಾಪಿಟಲ್ ಔಟ್‌ಲೇ ನಾಟ್ ಮೆಟ್ ಫ್ರಂ ರೆವಿನ್ಯೂ ಎನ್ನುವುದರಲ್ಲಿ 57—57 (A) ಡಿಮ್ಯಾಂಡ್‌ಗಳ ಕೆಳಗೆ ಹೊಸದಾಗಿ ಗ್ರ್ಯಾನ್ಸ್‌ನ್ನು ಶೇಖರಣೆ ಮಾಡುವುದಕ್ಕೋಸ್ಕರ ಹಣವನ್ನು ಕೇಳುತ್ತಿದ್ದಾರೆ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಅದೆಲ್ಲಾ ನಮ್ಮಲ್ಲಿ ಗೋಣಿಚೀಲದಲ್ಲಿರುತ್ತದೆ. ಎಲ್ಲಿ ಅಂದರೆ ಇದ್ದಕ್ಕಿದ್ದ ಹಾಗೆ ಮಾಯವಾಗುತ್ತದೆ!

ಸಭಾಪತಿಯವರು.—ಇಲ್ಲಿ ಸರ್ಕಾರ ವೆಚ್ಚಮಾಡುವುದಕ್ಕೆ ಅನುಮತಿ ಕೇಳುತ್ತಿದ್ದಾರೆ. ಎಷ್ಟು ಉತ್ಪತ್ತಿ ಬರುತ್ತದೆ ಎಂಬುದು ಅವರಿಗೆ ಗೊತ್ತಿಲ್ಲ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಇದರಲ್ಲಿ ಅಡ್ವಾನ್ಸ್ ಕೊಟ್ಟಿರುವುದು, ಸಾಲ ಕೊಟ್ಟಿರುವುದು, ಟ್ರೇಡಿಂಗ್ ಅಕೌಂಟ್ಸಿಗೆ ಕೊಟ್ಟಿರುವುದು--ಇವುಗಳಿಂದ ಎಷ್ಟು ಉತ್ಪತ್ತಿ ಬರುತ್ತದೆ ಎಂಬುದು ನಿಖರವಾಗಿ ಗೊತ್ತಿಲ್ಲ.

ಸಭಾಪತಿಯವರು —ಪುಟ 19ರಲ್ಲಿ ಎಕ್ಸ್‌ಪ್ಲನೇಟರಿ ಮೆಮೊರ್ಯಾಂಡಂನಲ್ಲಿ ಹೇಳಿರುವುದನ್ನು ಓದಿನೋಡಿ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ತಮಗೆ ಗೊತ್ತಿರುವ ಹಾಗೆ ಇದೇ ಐಟಂಗಳಲ್ಲಿ ಅಡ್ವಾನ್ಸ್ ತೆಗೆದುಕೊಂಡು ಭತ್ತ ತೆಗೆದುಕೊಂಡು ಬಂದು ಅಲ್ಲಿ ಸಪ್ಲೈ ಮಾಡುತ್ತೇವೆಂದು ಹೇಳಿದರು. ಆಗ ನಾನೂ ತಾವೂ

ಇಬ್ಬರೂ ಇಷ್ಟು ಹಣವನ್ನು ಈ ಬಾಬಿಗೆ ವಿನಿಯೋಗ ಮಾಡುತ್ತಿದ್ದೀರಿ, ಅದರಲ್ಲಿ ಶೇಕಡ 50ರಷ್ಟು ಆದರೂ ಸರ್ಕಾರದ ಬೊಕ್ಕಸಕ್ಕೆ ಬರಲಾರದು ಎಂದು ಹೇಳಿದಾಗ, ಆಗಿನ ಸರ್ಕಾರದವರು ಭರವಸೆಕೊಟ್ಟರು. ಆರೀತಿ ಭರವಸೆ ಕೊಟ್ಟ ಸರ್ಕಾರ ಇವೊತ್ತು ಇಲ್ಲ. ಆ ಜನರೂ ಇಲ್ಲ. ಒಂದು ವರ್ಷದಲ್ಲಿ ಹೇಳಿದ್ದು ತಮಗೆ ಜ್ಞಾಪಕವಿದೆಯೆಂದು ನನಗೆ ಕಾಣುತ್ತದೆ. ಒಂದೂವರೆ ಕೋಟಿ ರೂಪಾಯಿಗಳು ಅಸೆಟ್ಸ್‌ನಲ್ಲಿದೆ, ಎಂದರೆ ಗೋಡೌನ್ಸಿನಲ್ಲಿದೆ ಎಂದು ಹೇಳಿದರು. ಅದು ಗೋಣೀಚೀಲದ ರೂಪದಲ್ಲಿದೆ ಎಂದು ಹೇಳಿ ಎರಡು ವರ್ಷಗಳ ಅಸೆಟ್ಸ್ ಅಂಡ್ ಲೈಯಬಿಲಿಟೀಸ್‌ನಲ್ಲಿ ತೋರಿಸಿದರು. ಆಮೇಲೆ ಅದು ಗೋಡೌನ್ಸಿನಲ್ಲಿಯೇ ಮಾಯವಾಯಿತು!

ಒಬ್ಬ ಸದಸ್ಯರು.—ಇಲಿ ತಿಂದುಬಿಟ್ಟಿತು.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಅದು ಯಾವತರಹ ಇಲಿ ಇರಬಹುದು? ಈಗ No profit, No loss ಎಂದು ಹೇಳುವ ಪದ್ಧತಿಯಾಗಿದೆ. ಅದು ಯಾವರೀತಿ ಫೋಲಾಗುತ್ತದೆ ಎನ್ನುವುದು ಇನ್ನೂ ಜನಗಳಿಗೆ ಗೊತ್ತಿಲ್ಲ.

ಮಾನ್ಯ ಸಭಾಪತಿಗಳೇ, ಈ ವರ್ಷದ ಮಧ್ಯಭಾಗದಲ್ಲಿ ಕೈಗೊಂಡಿರತಕ್ಕ ಕಾಮಗಾರಿಗಳನ್ನು ಸಂಪೂರ್ಣವಾಗಿ ನಡೆಸಬೇಕಾದ ಪಕ್ಷದಲ್ಲಿ ಅಥವಾ ಹೊಸ ಯೋಜನೆಗಳನ್ನು ದೇಶದ ಹಿತದೃಷ್ಟಿಯಿಂದ ಸರ್ಕಾರ ತೆಗೆದುಕೊಳ್ಳಬೇಕಾದ ಪಕ್ಷದಲ್ಲಿ ಸರ್ಕಾರದವರು ಹೆಚ್ಚುವರಿ ಬೇಡಿಕೆಗಳನ್ನು ಕೇಳಬೇಕಾದುದೂ ವಿಹಿತ ಮತ್ತು ಅದಕ್ಕೆ ಈ ಸಭೆ ಕೂಡ ಅನುಮತಿ ಕೊಡಬೇಕಾದುದೂ ವಿಹಿತ.

ಇನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯವರಮೇಲೆ ಆಡಳಿತ ಸಂಬಂಧದಲ್ಲಿ ಕೆಲವು ತಪ್ಪಿತಗಳನ್ನು ಹೊರಿಸಿದ್ದಾರೆ. ಆರೀತಿಯಾಗಿ ಹೊರಿಸಿರುವ ತಪ್ಪುಗಳನ್ನು ಮೊದಲು ತೊಡೆದುಹಾಕಬೇಕು. ಕೆರೆಗಳನ್ನು ದುರಸ್ತು ಮಾಡುವುದು, ಆಹಾರೋತ್ಪತ್ತಿ ಹೆಚ್ಚು ಮಾಡುವುದು, ನಾವು ಕೈಗೊಂಡಿರುವ ತುಂಗ ಮತ್ತು ಭದ್ರಾ ಪ್ರಾಜೆಕ್ಟುಗಳನ್ನು ಪೂರ್ಣಗೊಳಿಸುವುದು—ಇವುಗಳಿಗೆ ಹೆಚ್ಚು ಹಣ ಒದಗಿಸಬೇಕಾದುದು ಅಗತ್ಯ. ಅದಕ್ಕೆ ತಗಲುವ ಖರ್ಚನ್ನು ಈ ಸಭೆ ಒಪ್ಪಬೇಕಾದುದು ಯೋಗ್ಯ. ಆದರೆ ಈ ಸಂದರ್ಭದಲ್ಲಿ ಇಲಾಖೆಗಳಲ್ಲಿರತಕ್ಕ ಲೋಪದೋಷಗಳನ್ನು ನಿವಾರಣೆಮಾಡಬೇಕಾದುದು ಸರ್ಕಾರದ ಮೊಟ್ಟಮೊದಲನೆಯ ಕೆಲಸ. ಕೆಲವರು ಈ ಇಲಾಖೆಯಲ್ಲಿ ಲೋಪದೋಷಗಳಿವೆಯೆಂದು ಸೂಚಿಸಿದ್ದಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆ. ಆಡಳಿತವನ್ನು ಸುಭದ್ರಗೊಳಿಸುವ ಪ್ರಕರಣ, ಸಾಲದ ಹೊರೆಯನ್ನು ಕಡಮೆ ಮಾಡುವ ಪ್ರಕರಣ, ಈಗ ಸಂಬಳ ಸಾರಿಗೆಗಳನ್ನು ಸಾಮಾನ್ಯ ರೀತಿಯಲ್ಲಿ ಪರಿಷ್ಕಾರ ಮಾಡುವ ಪ್ರಕರಣ, ನಮ್ಮ ದೇಶದಲ್ಲಿ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಜನರು ಇರಬೇಕು ಎಂಬ ಪ್ರಕರಣ ಮತ್ತು ಸರ್ಕಾರ ವೆಚ್ಚವನ್ನು ಉಳಿಸತಕ್ಕ ಪ್ರಕರಣ—ಇವೆಲ್ಲವೂ ಇವತ್ತು ತಮ್ಮ ಮುಂದೆ ಇರಬೇಕಾದುದು ಅಗತ್ಯ. ಈರೀತಿ ಹೆಚ್ಚುವರಿ ಬೇಡಿಕೆಗಳನ್ನು ಸರ್ಕಾರ ಕೇಳಬಾರದಾಗಿತ್ತು. ಮೊಟ್ಟಮೊದಲೇ ಸರ್ಕಾರ ಇದನ್ನೆಲ್ಲಾ ಊಹಿಸಬೇಕಾಗಿತ್ತು. ಆದರೂ ಇದಕ್ಕೆ ಒಪ್ಪಿಗೆ ಕೊಡುವುದು ಅನಿವಾರ್ಯವೆಂದು ಸೂಚಿಸುತ್ತಿದ್ದೇವೆ.

†**Sri D. VENKATARAMIAH** (Local Authorities' Constituency).—Sir, I rise to make a few observations on the Supplementary Estimates for the year 1957-58. It has been a well-established practice in democratic countries that whenever a need for spending of amounts which could not be foreseen at the time when the regular budget was prepared, the estimates are brought to the Legislature. I would like to restrict my remarks to one or two demands.

Demand No. 2 relates to remuneration to Shanbhogues and Patels, and the amount provided is Rs. 1,40,000. In speaking about this Demand, I want to bring to the notice of the House the recent judgment of the High Court in the Harihar Election Case, where it has been held that the office of Patel is not an office of profit. I am bringing this to the notice of the House because a number of circulars have been issued at various stages stating that Patels and Shanbhogues are Government servants and as such they should not take part in elections, they should not support any candidate or be candidates themselves. In view of the judgment of the High Court, the position has now become anomalous. The Government has issued circulars stating that they should not stand for elections and the High Court has held that they can stand for elections. I want the Government to make the position clear.

Mr. CHAIRMAN.—You are probably referring to Circulars issued prior to the decision of the High Court.

Sri D. VENKATARAMIAH.—Yes, Sir. All of them have been issued prior to the judgment of the High Court. Now in view of the fact it is held that remuneration got by the Patels and Shanbhogues from the Government is not in the nature of profit or the offices of patels and shanbhogues are not offices of profit, the Government must make a categorical statement.

Mr. CHAIRMAN.—Though they may not hold office of profit in the technical sense or as defined under the Constitution, do you mean to say that they are not Government servants in the other sense?

Sri D. VENKATARAMIAH.—I do not say either this way or that way. There is an anomalous position in view of the High Court's judgment. So the matter has to be clarified. I next come to Demand No. 5. Speaking of timbers and other produce and sandalwood extraction, you know, Mr. Chairman that sandalwood is the monoply of the Government in the old Mysore State. In some territories of the Mysore State, sandalwood is available and they have been left with the *hiduvalidars*. But in the case of old Mysore State, those sandalwood trees belong to Government. This, I would submit, is an invidious distinction and differentiation between one citizen and another. Why not the Forest Act be amended ?

Mr. CHAIRMAN.—In the old Mysore State, it is a monopoly.

Sri D. VENKATARAMIAH.—My submission to you, Mr. Chairman, is that law should be equal to all, to every citizen. If that is a law in one part of the State, let that be a law also in the other parts of the State.

Mr. CHAIRMAN.—You are referring to integrated parts of Mysore State ?

Sri D. VENKATARAMIAH.—Yes. In Madras and Bombay, it is not a Government monopoly and as such I submit that this law should be equally applicable to every citizen, of the Mysore State. That apart, the point itself is whether the Government can have a monopoly of the sandalwood tree in a land belonging to the individual. Is it legal at all is entirely a different matter. For the present, I am not referring to it. As a legislator I am saying......

Mr. CHAIRMAN.—You are pointing out, that there should be uniform legislation ?

Sri D. VENKATARAMIAH.—Yes, Mr. Chairman. The income that we are getting from sandalwood trees is really huge. But my submission is that we are not getting that amount of money from the sandalwood trees that we should have got because the smuggling of sandalwood is on an enormous scale. I bring to the notice of the House and the Treasury Benches that in particular portions of Chikballapur Sub-Division of Kolar District much of this smuggling is going on on a very big scale and to my knowledge nearly 20 to 25 cases have been booked latterly, but for various reasons, they have failed. What is it due to ? Is it for want of investigation or what exactly is the reason, I do not know.

Mr. CHAIRMAN.—The Government have passed an ordinance empowering them to detain suspected carts and lorries, *etc*, where sandalwood is likely to be smuggled. Now it is coming up before you in the shape of a Bill.

Sri D. VENKATARAMIAH.—I am one with you, Mr. Chairman, that deterrent punishment should be given in that respect. So, my submission is firstly that there should be a uniform law regarding Forest Act.

Then I come to Demand No. 10. Sri Sastry referred to the amount of Rs. 25 lakhs and odd which has been spent against 22 lakhs provided in the current year's estimates and something more is now asked for. I may at once submit to you Mr. Chairman that particularly in Kolar District some estimates had been prepared. Whenever we approached the Executive Engineer and whenever we met in the District Relief Committee the Executive Engineer used to bring to the notice of the Committee that the matter has been referred to the Government and the amount is not available and he is awaiting instructions of the Government. Perhaps in view of that and the conditions in other Districts also, this has been brought up. I welcome this Demand No. 10, Mr. Chairman.

Finally, I come to Demand No. 57, regarding voluntary procurement of paddy. While welcoming this Demand I want to make a suggestion that not merely procurement of paddy should be undertaken immediately but the movement of rice also should be undertaken. The sale of rice should be immediately undertaken because there is scarcity of paddy and rice in Kolar District. So, I suggest movement of paddy in addition to procurement of paddy.

ಪ್ರಾಪ್ತಿ ಕ್ರಮಾಂಕ Accession No. 4744
ದಿನಾಂಕ Date..................

ಶ್ರೀ ಬಿ. ಹುಚ್ಚೇಗೌಡ (ವಿಧಾನಸಭಾ ಕ್ಷೇತ್ರ).—ಮಾನ್ಯ ಅಧ್ಯಕ್ಷರೇ ಈ ಸಪ್ಲಿಮೆಂಟರಿ ಬಡ್ಜೆಟ್ಟನ್ನು ಆಗಲೇ ಹೇಳಿದಂತೆ ಯಾವುದಾದರೂ ಒಂದು ಹೊಸ ಸರ್ವಿಸ್ ಅಥವಾ ಅನಿವಾರ್ಯಕ್ಕಾಗಿ, ಹೆಚ್ಚಿಗೆ ಖರ್ಚನ್ನು ಮಾಡಬೇಕಾಗಿ ಬಂದಾಗ ಮಾತ್ರ ತರಬೇಕಾಗಿದೆ. ಈಗ ಸುಮಾರು ನಾಲ್ಕೂವರೆ ಕೋಟಿ ರೂಪಾಯಿಗೆ ಈ ಡಿಮ್ಯಾಂಡ್ ಬಂದಿದೆ. ಆಗಲೇ ಹಿಂದಿನ ಬಡ್ಜೆಟ್ಟಿನಲ್ಲಿ ತಿಂಗಳಿಗೆ ಒಂದು ಕೋಟಿ ರೂಪಾಯಿ ಡಿಫಿಸಿಟ್ ಎಂದು ಹೇಳಿದ್ದರು. ಅದರಲ್ಲಿ ಇದೂ ಒಂದು ಸೇರಿದರೆ ಆಗ ಬಡ್ಜೆಟ್ಟಿನ ಖೋತಾ ಹೆಚ್ಚಾಗುತ್ತದೆಯೇ ಅಥವಾ ಕಡಮೆಯಾಗುತ್ತದೆಯೇ ಎಂಬುದನ್ನು ಕೂಡ ತೋರಿಸಿಲ್ಲ. ಆದ್ದರಿಂದ ನಾನು ತಮಗೆ ಅರಿಕೆಮಾಡಿಕೊಳ್ಳುವುದೇನೆಂದರೆ, ಇಂಥಾ ಸಂದರ್ಭದಲ್ಲಿ ಟ್ರೆಜರಿ ಬೆಂಚಿನವರು ಯಾರಾದರೂ ಮಂಡಿಸಬೇಕಾದರೆ ಅದರಲ್ಲಿರತಕ್ಕ ಐಟಂಗಳ ವಿಚಾರಗಳನ್ನು ವಿಶದವಾಗಿ ತಿಳಿಸಿದರೆ ನಾವು ಇದನ್ನು ಚರ್ಚೆಮಾಡುವುದಕ್ಕೆ ಸುಲಭವಾಗುತ್ತದೆ. ಅಲ್ಲದೆ ಈ ಸಭೆಯ ಅಧಿಕಾರವೂ ಕೂಡ ಲಿಮಿಟೆಡ್. . . .

ಸಭಾಪತಿಯವರು.—ಪ್ರತಿಯೊಂದು ಡಿಮ್ಯಾಂಡಿನ ಕೆಳಗೂ ಎಕ್ಸ್‌ಪ್ಲನೇಟರಿ ನೋಟುಗಳನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಕೆಲವು ಟೆಕ್ನಿಕಲ್ ಡಿಮ್ಯಾಂಡ್ಸ್, ಕೆಲವು ರೀ-ಅಪ್ರೋಪ್ರಿಯೇಷನ್‌ನಿಂದ ಅಡ್ಜೆಸ್ಟ್ ಆಗುತ್ತದೆ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ರಸೀಟ್ಸ್ ಹೆಚ್ಚಿಗೆ ಬರುವುದರಿಂದ ಅಡೀಷನಲ್ ಎಕ್ಸ್‌ಪೆಂಡಿಚರ್ ಆಗುವುದಿಲ್ಲವೆಂದು ಎಕ್ಸ್‌ಪ್ಲನೇಷನ್ ಕೊಟ್ಟಿದ್ದಾರೆ. ಪ್ರಾಯಶಃ ನೋಟುಗಳನ್ನು ಜಾಗರೂಕತೆಯಿಂದ ಓದಿದರೆ ಅರ್ಥವಾಗುತ್ತದೆ. ಕೆಲವು ಕ್ಲಾರಿಫಿಕೇಷನ್ ಬೇಕಾದರೆ ಅದನ್ನು ಕೇಳಿದರೆ ಮಾನ್ಯ ಮಂತ್ರಿಗಳು ಕ್ಲಾರಿಫಿಕೇಷನ್ ಕೊಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—" Additional grant is required to meet further expenditure on account of Kanungo establishment" ಇದು ಏನು ಸ್ವಾಮಿ ? ಕನಂಗು ಎಸ್ಟಾಬ್ಲಿಷ್‌ಮೆಂಟ್ ಎಂದರೇನು. ಶ್ರೀ ಕನಂಗು ಎನ್ನುವವರು ನಮ್ಮಲ್ಲಿ ಇದ್ದಾರೆಯೇ ?

ಸಭಾಪತಿಯವರು.—ಅದನ್ನು ವಿವರಿಸುತ್ತಾರೆ. Sri Baliga may kindly explain that. ಅದರ ಮೇಲೆ ಸದಸ್ಯರು ಹೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಅವರ ಹೆಸರಿನಮೇಲೆ ಈ ಇಲಾಖೆಯನ್ನು ಇಟ್ಟಿದ್ದೀರಾ ? ಟ್ರೆಜರಿ ಬೆಂಚಿನವರಿಗೇ ವಿವರಣೆ ಕೊಡಲು ಕಷ್ಟವಾಗುತ್ತದೆ.

ಸಭಾಪತಿಯವರು.—ವಿಚಾರಮಾಡಿ ಹೇಳುತ್ತಾರೆ

ಶ್ರೀ ಬಿ. ಹುಚ್ಚೇಗೌಡ.—ಆಮೇಲೆ ಡಿಮ್ಯಾಂಡು 5 ರಲ್ಲಿ "Sandal Purchase" ಗಾಗಿ ಒಂದು ಹೆಚ್ಚುವರಿ ಬೇಡಿಕೆ ಕೇಳಿದೆ. ಈ Sandal wood ಮಾರಾಟದಲ್ಲಿ ಮತ್ತು ಸರಕಾರಕ್ಕೆ ಕೊಡತಕ್ಕ ರೇಟುಗಳಲ್ಲಿ ಬಹಳ ವ್ಯತ್ಯಾಸವಿದೆ. ಇದರಿಂದ ಸರಕಾರಕ್ಕೆ ಬಹಳ ನಷ್ಟವಾಗುತ್ತಿದೆ.

ಸಭಾಪತಿಯವರು.—ಇಲ್ಲಿರುವುದು ಅಡಿಷನಲ್ ಗ್ರಾಂಟು ಬಾಬುಗಳು. ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ ವಿಚಾರವಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಇದರಲ್ಲಿ "Sandal Extraction, Purchase and Regeneration" ಎಂದಿದೆ. ಯಾವ ಐಟಂ ನೋಡಿದರೂ ಒಂದಕ್ಕೊಂದು ಸಂಬಂಧವಿಲ್ಲ.

Mr. CHAIRMAN.—In the note it is mentioned:

> "The additional grant is in view of the necessity to supply larger quantities of Sandal wood to the Sandal Oil Factory."

ಇಲ್ಲಿ ಹೇಳಿರುವುದು ಹೊಸದಾಗಿ ಏನನ್ನು ಖರ್ಚು ಮಾಡಿದ್ದಾರೆ ಅದನ್ನು ಪರಿಶೀಲಿಸಿ ಗ್ರಾಂಟು ಸಾಕಾಗುವುದಿಲ್ಲ ಎಂದು ಕೇಳಿದೆ. ಅದರಿಂದ ತಾವು ಹೆಡ್ ಬೈ ಹೆಡ್‌ನಂತೆ, ಡೀಟೆಲ್ಸ್‌ಗಳಿಗೆ ಹೋಗದೆ ಮಾತನಾಡಿಧರೆ ಸರಿಯಾಗಿ ತೋರುತ್ತದೆ. ಅದರಂತೆ ತಾವು ಮುಂದುವರಿಸಬಹುದು.

ಶ್ರೀ ಬಿ. ಹುಚ್ಚೇಗೌಡ.—ಆಮೇಲೆ, ಟಿಂಬರು ಮತ್ತು ಇತರ ಪದಾರ್ಥಗಳಿಗಾಗಿ ಎಂದು ಒಂದು ಡಿಮ್ಯಾಂಡ್ ಇದೆ. ಟಿಂಬರಿನ ವಿಚಾರದಲ್ಲಿ ಬೇಕಾದಷ್ಟು ಜನ ಫಾರೆಸ್ಟು ಏಜೆಂಟುಗಳನ್ನು ಸರಕಾರ ಏರ್ಪಾಡು ಮಾಡಬೇಕು. ಉದಾಹರಣೆಗೆ ಬೊಂಬುಗಳು ಕಾಡಿನಲ್ಲಿ ಹೆಚ್ಚಾಗಿ ಸಿಕ್ಕುತ್ತವೆ. ಭದ್ರಾವತಿಯಲ್ಲಿ ಒಂದು ಪೇಪರು ಮಿಲ್ಲನ್ನು ಮಾಡಿ ಈ ಬೊಂಬಿನ ಸರಬರಾಜಿನಿಂದ ನಡೆಸುತ್ತಿದ್ದಾರೆ. ಎರಡೂವರೆ ಲಕ್ಷ ರೂಪಾಯಿಗಳ ಬೊಂಬುಗಳನ್ನು ಈ ಮಿಲ್ಲಿಗೆ ಸರಬರಾಜು ಮಾಡುತ್ತಾರೆ. ಇದಕ್ಕೆ ಖರ್ಚು ಸುಮಾರು ಎರಡು ಲಕ್ಷವಾಗಬಹುದು. ಹೀಗೆ ಖರ್ಚುಮಾಡುವುದರಿಂದ ಲಕ್ಷಾಂತರ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಹಾಗೆಯೇ ಈಗ ಭದ್ರಾವತಿಯಲ್ಲಿರುವ ಐರನ್ ವರ್ಕ್ಸ್‌ಗೆ ಸೌದೆಯನ್ನು ಕಾಡುಗಳಿಂದ ಸಪ್ಲೈಮಾಡುತ್ತಾರೆ. ಇದಕ್ಕಾಗಿ ಎಂಟು-ಒಂಭತ್ತು ಲಕ್ಷ ರೂಪಾಯಿಗಳು ಖರ್ಚಾಗುತ್ತವೆ; ಆದರೆ ಇದರಿಂದ ಭರುವ ಉತ್ಪತ್ತಿಯನ್ನು ನೋಡಿದರೆ ಎಷ್ಟರಮಟ್ಟಿಗೆ ನಷ್ಟವಾಗುತ್ತಿದೆ ಎನ್ನುವುದು ತಿಳಿಯುತ್ತದೆ. ಇದನ್ನೆಲ್ಲ ಆ ಇಲಾಖೆಗೆ ಸೇರಿದವರು ಸರಿಪಡಿಸಬೇಕಾದ್ದು ಅಗತ್ಯ. ಈ ಇಲಾಖೆಗೆ ಸ್ಯಾಂಡಲ್ ವುಡ್ಡನ್ನು ಸೇರಿಸಲಾಗಿತ್ತು, ಇದಕ್ಕಾಗಿಯೂ ಸಹ ಖರ್ಚನ್ನು ಮಾಡಲಾಗುತ್ತಿದೆ. ಅಲ್ಲದೆ ಬಡ್ಜೆಟ್ಟಿನಲ್ಲಿ ಕೂಡ ಇದರ ಬಾಬಿಗೆ ಆಗುವ ಖರ್ಚುಗಳನ್ನು ತೋರಿಸುತ್ತಿರುವುದನ್ನು ನೋಡಿದರೆ 50 ಸಾವಿರಕ್ಕಿಂತ ಖರ್ಚುಮಾಡಿದರೂ ಉತ್ಪತ್ತಿ ಹೆಚ್ಚಾಗಿ ಬರುತ್ತಿಲ್ಲ. ಹೀಗೆ ಇಷ್ಟು ಖರ್ಚುಮಾಡಿದರೂ ಉತ್ಪತ್ತಿ ಸರಿಯಾಗಿ ಬರದಿದ್ದರೆ ಇಷ್ಟು ಹೆಚ್ಚು ಹಣವನ್ನೇಕೆ ಖರ್ಚುಮಾಡಬೇಕು ಎಂದು ಕೇಳಬೇಕಾಗಿದೆ.

ಅಲ್ಲದೆ ಹೀಗೆ ಫ್ಯಾಕ್ಟರಿಗಳಿಗೆ ಸಪ್ಲೈಮಾಡುತ್ತಾ ಇರುವ ಲೆಕ್ಕದಲ್ಲಿ ಇನ್ನೂ 20 ಲಕ್ಷ ರೂಪಾಯಿಗಳ ಬಾಕಿ ಇದೆ. 1950ರಲ್ಲಿ ಕೊಟ್ಟದ್ದಕ್ಕೆ ಹಣ ಇನ್ನೂ ಬಂದಿಲ್ಲ. ಇದರಲ್ಲಿ ಹೊಸ ಸ್ಟೇಟಿಗೆ ಸಂಬಂಧಪಟ್ಟಂತೆ ಹೇಳುವಾಗ ನಾನು ಹಳೆಯ ಸ್ಟೇಟಿನ ವಿಚಾರಗಳನ್ನು ಮಾತ್ರ ಇಲ್ಲಿ ಹೇಳುತ್ತಿದ್ದೇನೆ.

ಆಮೇಲೆ ಟೋಕನ್ ಗ್ರಾಂಟನ್ನು ಕೊಡುವ ವಿಚಾರದಲ್ಲಿ ನಾನು ಬಹಳ ಅಸಮಾಧಾನವಾಗಿ ಹೇಳಬೇಕಾಗಿದೆ. ಟೋಕನ್‌ಗ್ರಾಂಟು ಸ್ಕೀಮುಗಳಿಗಾಗಿ ಬೇಕು ಎನ್ನುವಾಗ ಈ ರೀತಿಯಾದ ಟೋಕನ್ ಗ್ರಾಂಟನ್ನು ಕೇಳಬೇಕಾಗಿತ್ತು. ಸರಕಾರ ಮುಂಚೆ ನೋಟೀಸು ಕೊಟ್ಟು ಇದಕ್ಕೋಸ್ಕರ ಈ ರೀತಿಯಾದ ಟೋಕನ್ ಗ್ರಾಂಟು ಕೇಳಬೇಕಾಗಿದೆ ಎಂದು ತಿಳಿಸ

(ಶ್ರೀ ಬಿ. ಹುಚ್ಚೇಗೌಡ)

ಬೇಕಾಗಿತ್ತು. ಇಲ್ಲಿ ಡಿಮ್ಯಾಂಡು ಏಳರಲ್ಲಿ "Taxes on Vehicles" ಬಗ್ಗೆ ಟೋಕನ್ ಗ್ರಾಂಟು ಕೊಡಬೇಕೆಂದು ಹೇಳಿದೆ. ಇದರಲ್ಲಿ ಎಷ್ಟು ರೆಕರಿಂಗ್ ಖರ್ಚು ಮತ್ತು ಎಷ್ಟು ನಾನ್-ರೆಕರಿಂಗ್ ವೆಚ್ಚ ಎನ್ನುವುದನ್ನು ಹೇಳದೆ ಹೀಗೆ ಟೋಕನ್ ಗ್ರಾಂಟನ್ನು ಕೇಳುವುದು ಸರಿಯಲ್ಲ. ಇದರ Explanatory Note ನಲ್ಲಿ Re-organisation of the Department—Advancesಗಾಗಿ 6,200 ರೂಪಾಯಿಗಳನ್ನು Contingency fundನಿಂದ ಮಾಡಲಾಗಿದೆ ಮತ್ತು ಇದನ್ನು Re-appropriate ಮಾಡಲು ಈಗ ಟೋಕನ್ ಗ್ರಾಂಟನ್ನು ಕೇಳಬೇಕೆಂದು ಹೇಳಿದ್ದಾರೆ. ಹಾಗೆ ಪುಟ 20 ರಲ್ಲಿ, ಡಿಮ್ಯಾಂಡು 58 ರಲ್ಲಿ "Loans to Khadi and Village Industries Board (to be newly opened)" Token Grant Rs. 100 ಎಂದು ಕೇಳಿದೆ.

ಆಮೇಲೆ ಪುಟ 11ರಲ್ಲಿ, ಡಿಮ್ಯಾಂಡು 27ರಲ್ಲಿ Cottage Industries Schemesಗಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿಲ್ಲದ ಸ್ಕೀಮುಗಳಿಗಾಗಿ 100 ರೂಪಾಯಿಬೇಕೆಂದು ಕೇಳಿದೆ. ಹೀಗೆ ಇವೆನ್ನೆಲ್ಲ ಕೇಳುತ್ತಿರುವುದು ನಮಗೇನೂ ಅರ್ಥವಾಗುವುದಿಲ್ಲ. ಇನೆಲ್ಲ ನಮ್ಮಲ್ಲಿ ತಯಾರಾಗಿದ್ದ ಸ್ಕೀಮುಗಳೇ ಆಗಿದ್ದವು.

ಸಭಾಪತಿಯವರು.—ಇವೆಲ್ಲ New Service ಗಳಾಗಿದ್ದದ್ದರಿಂದ in the course of the year, ಎಷ್ಟು ಹಣವನ್ನು Contingency fund ನಿಂದ ತೆಗೆದುಕೊಳ್ಳಲಾಯಿತು ಅಂತಹವುಗಳಿಗಾಗಿ ಇಲ್ಲಿ Token Grantನ್ನು ಕೇಳುತ್ತಿದ್ದಾರೆ, ಅಷ್ಟೆ.

ಶ್ರೀ ಬಿ. ಹುಚ್ಚೇಗೌಡ.—ಎಸ್ಟಿಮೇಟು ತೆಗೆದುಕೊಂಡು ಕೆಲಸ ನಡೆಸಿದ್ದಾರೆ. Year end ಬಂದಿದೆ ಎಂದು ಇವತ್ತು ಈ ಟೋಕನ್ ಗ್ರಾಂಟನ್ನು ಕೇಳಿದರೆ ಹೇಗೆ ?

ಸಭಾಪತಿಯವರು.—ಇಷ್ಟೇ Actuals ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಇಲ್ಲಿ ಖಾದಿ ಮತ್ತು ಇಂಡಸ್ಟ್ರೀಸ್ ಬೋರ್ಡಿಗೆ ಐದು ಲಕ್ಷ ಎಂದು ಹೇಳಿದ್ದಾರೆ. ಮತ್ತೆ ಡಿಮ್ಯಾಂಡು 27ರಲ್ಲಿ Cottage Industriesಗಾಗಿ ಬೇರೆ ನೂರು ರೂಪಾಯಿಗಳು ಟೋಕನ್ ಗ್ರಾಂಟು ಎಂದು ಹೇಳಿರುವುದನ್ನು ನೋಡಿದರೆ. ಈ ಹಣ ಹೇಗೆ ಖರ್ಚಾಗುತ್ತದೆ ಎನ್ನುವುದಕ್ಕೆ ಒಂದಕ್ಕೊಂದು ಅರ್ಥವಾಗುವುದಿಲ್ಲ.

ಈ ಖಾದಿ ಬೋರ್ಡನ್ನು Village Industries Scheme ನಲ್ಲಿ ಹಿಂದೆ ಶ್ರೀ ವಿಶ್ವೇಶ್ವರಯ್ಯನವರು ತಂದಿದ್ದರು. ಈಗ ಆ ಇಂಡಸ್ಟ್ರೀಸುಗಳೆಲ್ಲ ಇದರಲ್ಲಿ ಸೇರಿವೆಯೋ ಇಲ್ಲವೋ ತಿಳಿಯುವುದಿಲ್ಲ. ಈಗ ಈ ಬೋರ್ಡಿಗಾಗಿ ಇಷ್ಟು ರೂಪಾಯಿಗಳನ್ನು ಕೊಟ್ಟುಬಿಡಿ ಎಂದು ಹೇಳುತ್ತಿದ್ದಾರೆ. ಇದೇ ರೀತಿಯಲ್ಲಿ ಅನೇಕ ಇಲಾಖೆಗಳಿವೆ. ಹಿಂದೆ Multipurpose Society ಗಳಿದ್ದುವು. ಅದರಲ್ಲಿಯೂ ಕೂಡ ಈ ಖಾದಿ ಬೋರ್ಡಿನ ಪ್ರಚಾರಕ್ಕಾಗಿ ಯಾರು ಯಾರಿಗೆ ಎಷ್ಟು ಕೊಟ್ಟಿದ್ದಾರೋ ನಮ್ಮ ಮೈಸೂರು ಸರಕಾರಕ್ಕೆ ಗೊತ್ತಿಲ್ಲ. ಎಷ್ಟೋ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ; ಮತ್ತು ಸಂಬಳಕ್ಕಾಗಿ ಬೇರೆ ಕೊಡುತ್ತಾರೆ. ಹೀಗೆ ಕೊಡುತ್ತಿರುವ ಹಣ ಸರಿಯಾಗಿ ವಿನಿಯೋಗವಾಗುವುದಿಲ್ಲ ಎಂದು ತಿಳಿದುಬಂದಿದೆ. ಹೀಗಾದರೆ ಇವನ್ನು ಸರಿಪಡಿಸಲು ಯಾವರೀತಿ ಮಾಡಬೇಕು ಎನ್ನುವುದನು ಯೋಚಿಸಬೇಕು.

ಈಗ ನಾವು ಈ ಸಣ್ಣ ಕೈಗಾರಿಕೆಗಳಿಗೂ ವಿಶೇಷವಾಗಿ ಹಣವನ್ನು ಕೊಡುತ್ತಿದ್ದೇವೆ. ಆದರೆ ಇವುಗಳ ಆಡಳಿತ ಒಂದು ಸಮರ್ಪಕವಾದ ರೀತಿಯಲ್ಲಿ ಇಲ್ಲದಿರುವುದರಿಂದ ಎಷ್ಟು ಅನುಮಾನವಾಗುತ್ತಿದೆಯೆಂದರೆ ಅದನ್ನು ತಿಳಿಸಲು ಸಾಧ್ಯವಿಲ್ಲ. ಉದಾಹರಣೆಗೆ ಈ ದಿವಸ ಕೇವಲ ಕಂಬಳಿಗಳ ಮಾರಾಟದಲ್ಲೇ ವಿಶೇಷವಾಗಿ ಕಮಿಷನನ್ನು ಅಲ್ಲಿರತಕ್ಕ ಜನ ತೆಗೆದುಕೊಳ್ಳುತ್ತಿದ್ದಾರೆ. ದಿವಸಕ್ಕೆ 20 ಕಂಬಳಿ ಮಾರಾಟವಾದರೆ 75 ರೂಪಾಯಿಗಳ ಕಮಿಷನ್ ಅವರಿಗೆ ಬರುತ್ತದೆ.

ಸಭಾಪತಿಯವರು.—ಹಾಗೆ ಸುಮ್ಮನೆ ಮಾರಾಟ ಮಾಡಲು ಅದು ಹೇಗೆ ಸಾಧ್ಯವಿದೆ ? ಮಾರಾಟ ಮಾಡತಕ್ಕ ಪ್ರತಿಯೊಂದು ಕಂಬಳಿಗೂ ಅವರು ರಶೀದಿಯನ್ನು ಕೊಡಬೇಡವೇ ?

ಶ್ರೀ ಬಿ. ಹುಚ್ಚೇಗೌಡ.—ಏನೂ ಕೊಡುವುದಿಲ್ಲ. ಗ್ರಾಮೋದ್ಯೋಗ ಸಂಘಗಳಲ್ಲಿ ಕೂಡ ಈ ದಿವಸ ಭತ್ತ ಕುಟ್ಟುವುದರಲ್ಲಿ ಪಲ್ಲಕ್ಕೆ ಒಂದು-ಒಂದೂವರೆ ರೂಪಾಯಿ ಕಮಿಷನ್ನಿನ ಪ್ರಕಾರ 25-30 ರೂಪಾಯಿಗಳನ್ನು ದಿನಕ್ಕೆ ತೆಗೆಧುಕೊಂಡಿದ್ದಾರೆ. ಈ ಬಗ್ಗೆ ನಾನು ಛಾಲೆಂಜ್ ಮಾಡುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ ಇಲಾಖೆಯ ಮಂತ್ರಿಗಳು).—ಕೇಂದ್ರ ಸರ್ಕಾರದಿಂದ ಈ ಖಾದಿ ಮತ್ತು ಗ್ರಾಮ ಕೈಗಾರಿಕಗಳ ಬಗ್ಗೆ ನಮಗೆ ಒಂದು ಗ್ರಾಂಟು ಬರುತ್ತದೆ. ಆ ಮೊಬಲಗನ್ನು ನಾವು ಮಾಡಿರತಕ್ಕ ವೆಚ್ಚಗಳೇನಿರುತ್ತವೆಯೋ ಅವುಗಳಿಗೆ ಅಡ್‌ಜೆಸ್ಟ್ ಮಾಡಿಕೊಳ್ಳಬೇಕಾಗಿರುವುದರಿಂದ ಈಗ ಟೋಕನ್ ಗ್ರಾಂಟನ್ನು ಕೇಳಿದ್ದೇವೆ. ಅಷ್ಟು ವಿನಾ ಇದರಲ್ಲಿ ಮತ್ತೇನಿದೆ ?

ಸಭಾಪತಿಯವರು.—ಮಾನ್ಯ ಸದಸ್ಯರು ಹೇಳುತ್ತಿರುವುದು ಈ ವಿಚಾರವನ್ನಲ್ಲ. ಇವುಗಳ ಆಡಳಿತದಲ್ಲಿರತಕ್ಕ ಲೋಪದೋಷಗಳನ್ನು ಯಾರೂ ಸರಿಯಾಗಿ ವಿಚಾರ ಮಾಡುತ್ತಿಲ್ಲವೆಂಬ ವಿಷಯ ಹೇಳುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಹಣ ಪೋಲಾಗುತ್ತಿದೆ. ಡಿಮ್ಯಾಂಡ್ ನಂ. 18ರಲ್ಲಿ 68,000 ರೂಪಾಯಿಗಳನ್ನು ಕೇಳಿದ್ದಾರೆ. The State Port Officer has since intimated ಎಂಬುದಾಗಿ ತಿಳಿಸಿದ್ದಾರೆ. ಆ ಆಫೀಸರು ಆ ರೀತಿ ಕೇಳಿದರು. ಅದಕ್ಕೀಗ ಇವರು ಈ ಹಣಬೇಕೆಂದು ಕೇಳುತ್ತಿದ್ದಾರೆ. ಆದರೆ ಆ ಆಫೀಸರು ಕೇಳಿರತಕ್ಕದ್ದು ನ್ಯಾಯವಾಗಿದೆಯೇ, ಅಷ್ಟು ಹಣ ಅಲ್ಲಿ ಖರ್ಚುಮಾಡತಕ್ಕ ಅವಕಾಶವಿದೆಯೇ ಎಂಬುದನ್ನು ಸರ್ಕಾರದವರು ತಮ್ಮ ಮನಸ್ಸಿಗಾದರೂ ಒಂದು ನೆಮ್ಮದಿಯಿರಲು ಅದನ್ನು ಪರಿಶೀಲಿಸಿ ನೋಡುವುದು ಬೇಡವೇ ?

ಸಭಾಪತಿಯವರು.—ಪ್ರಸಕ್ತ ಸಾಲಿಗೆ 50,000 ರೂಪಾಯಿಗಳನ್ನು ಒದಗಿಸಲಾಗಿತ್ತು. ಆದರೆ ಈ ಬಗ್ಗೆ 1.5 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದುದರಲ್ಲಿ 68 ಸಾವಿರ ಹೆಚ್ಚಾಗಿ ಖರ್ಚಾಗಿದೆ ಎಂದು ಹೇಳಿದ್ದಾರೆ. ಅಲ್ಲಿಗೆ ಒಂದು ಲಕ್ಷ ಹದಿನೆಂಟು ಸಾವಿರ ಆಯಿತು. ಆ ಪೈಕಿ 50ಸಾವಿರ ಹೋದರೆ ಇನ್ನು 68,000 ಉಳಿಯುತ್ತದೆ. ಈಗ ಕೇಳಿರತಕ್ಕದ್ದು ಅದಕ್ಕೆ ಸರಿಹೋಗುತ್ತದೆ. ಆದ್ದರಿಂದ ಲೆಕ್ಕಾಚಾರ ಸರಿಯಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಈ ವಿಚಾರದಲ್ಲಿ ನನ್ನ ಪಾಯಿಂಟ್ ಇಷ್ಟೆ: ಆಫೀಸರು ಆ ರೀತಿ ಬರೆದು ಕಳುಹಿಸಿದರು. ಅದಕ್ಕಾಗಿ ನಾವಿದನ್ನು ಸಭೆಯ

ಮುಂದೆ ತಂದಿದ್ದೇವೆ ಎಂದು ಹೇಳಿದ್ದಾರೆ. ಆದರೆ ಆ ವಿಚಾರ ಇವರ ಮನಸ್ಸಿಗೆ ಒಪ್ಪಿಗೆ ಆಯಿತು ಎಂಬುದನ್ನು ಎಲ್ಲಿ ಹೇಳಿದ್ದಾರೆ ?

ಸಭಾಪತಿಯವರು.—ಆ ಆಫೀಸರೇನು ಬರೆದು ತಿಳಿಸಿದ್ದಾರೋ ಅದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಆದ್ದರಿಂದಲೇ ಈಗ ಅದನ್ನು ಅವರು ಸಭೆಯ ಮುಂದಿಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಅಂಥ ಒಂದು ಆವಶ್ಯಕತೆಯಿದೆಯೆಂಬುದಾಗಿ ಸರ್ಕಾರದವರೆಲ್ಲೂ ಹೇಳಿಲ್ಲ. "ಎತ್ತು ಈಯಿತೆಂದರೆ ಕೊಟ್ಟಿಗೆಯಲ್ಲಿ ಕಟ್ಟು" ಎನ್ನುವಂತೆ ಇದನ್ನು ಮಾಡಿದ್ದಾರೆ. ಡಿಮ್ಯಾಂಡ್ ನಂಬರ್ 10ರಲ್ಲಿ Item No. 1. To meet the interest charges of the loans transferred from Bombay . . . ಎಂದು ಹೇಳಲಾಗಿದೆ. ಈ ರೀತಿ ಇಲ್ಲಿಯತನಕ ನಮಗೆ ಆ ಬೊಂಬಾಯಿ, ಹೈದ್ರಾಬಾದ್, ಮದ್ರಾಸ್ ಮತ್ತು ಕೊಡಗು ಪ್ರದೇಶಗಳ ಬಗ್ಗೆ ಎಷ್ಟು ಸಾಲ ಬಂದಿದೆ ಎಂಬುದನ್ನು ತಿಳಿಸಿಲ್ಲ. ಆ ರೀತಿ ನಮಗೆ ಪ್ರತಿಯೊಂದು ಭಾಗಕ್ಕೂ ಎಷ್ಟೆಷ್ಟು ಸಾಲ ಬಂದಿದೆ ಎನ್ನುವುದನ್ನು ಎಕ್ಸ್‌ಪ್ಲನೇಟರಿ ನೋಟಿನಲ್ಲಿ ಸೂಚಿಸಬೇಕಾಗಿತ್ತು. ಕಳೆದ ಸಾಲಿನ ಬಡ್ಜೆಟ್ ಪ್ರತಿಯನ್ನು ನಮಗಿನ್ನೂ ಒದಗಿಸಿಲ್ಲ. ಆದ್ದರಿಂದ ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ದರದ ಬಡ್ಡಿಯ ಸಾಲ ಎಷ್ಟೆಷ್ಟು ಬಂದಿದೆ ಎಂಬುದು ಗೊತ್ತಾಗುತ್ತಿಲ್ಲ. ಈ ವಿವರಗಳನ್ನೆಲ್ಲ ಕೊಟ್ಟಿದ್ದರೆ ಚೆನ್ನಾಗಿತ್ತು. ಹಿಂದಿನ ಬಾಕಿ ನಿಂತಿರುವ ಬಡ್ಡಿಯ ಬಗ್ಗೆ ಈಗ ಹಣವನ್ನು ಕೇಳಿದ್ದಾರೆ. ಆದರೆ ಈ ಸಾಲಿಗೆಷ್ಟು ಬಡ್ಡಿಯಾಗುತ್ತದೆಯೆಂಬುದನ್ನು ತಿಳಿಸಿಲ್ಲ. ಸರ್ಕಾರದವರು ಹೀಗೊಂದು ಅಡಿಷನಲ್ ಬಡ್ಜೆಟ್ಟಿಗೆ ಬೇಡಿಕೆಗಳನ್ನು ತರುವಾಗ ಇನ್ನು ರೆಗ್ಯುಲರ್ ಬಡ್ಜೆಟ್ಟಿನಮೇಲೆ ಇದು ಎಂಥಾ ಪರಿಣಾಮವನ್ನುಂಟುಮಾಡುತ್ತದೆ ಎಂಬುದನ್ನು ಆಲೋಚಿಸಬೇಕಾದದ್ದು ಅಗತ್ಯ.

ಸಭಾಪತಿಯವರು.—ತಾವು ಕೇಳುತ್ತಿರುವುದು ಪ್ಲಸ್ ಅಂಡ್ ಮೈನಸ್ ಹಾಕಿ ಲೆಕ್ಕ ಕೊಡಬೇಕಾಗಿತ್ತು ಎಂದು ಅಲ್ಲವೇ ?

ಶ್ರೀ ಬಿ. ಹುಚ್ಚೇಗೌಡ.—ನ್ಯಾಯವಾದ ಸಂದರ್ಭಗಳಿದ್ದಾಗ ರೀ ಅಪ್ರೋಪ್ರಿಯೇಷನ್ ಮಾಡಬೇಕಾದದ್ದು ಅಗತ್ಯ. ಹಾಗಿಲ್ಲದೆ ಪ್ರತಿಯೊಂದಕ್ಕೂ ಹೀಗೆ ಮಾಡುತ್ತೇವೆಂದು ಹೇಳುತ್ತಿರುವುದು ಸರಿಯಲ್ಲ.

Sri H. K. VEERANNA GOWDH.—"It may be seen from the details furnished in the Statement that the additional expenditure proposed is, in many cases, covered by receipts and the demands now placed will not affect the financial position in view of increased revenue resources and savings anticipated under other heads for which supplementary demands have not been placed."

ಶ್ರೀ ಬಿ. ಹುಚ್ಚೇಗೌಡ.—ಇನ್ನು ಡಿಮ್ಯಾಂಡ್ ನಂಬರ್ 27. ಈ ಡಿಮ್ಯಾಂಡಿನ ಆರನೆಯ ಐಟಂನಲ್ಲಿ 'ನ್ಯೂಸರ್ವಿಸ್' ಎಂದು ಹೇಳಿದ್ದಾರೆ. ಇದು ಹೊಸದಾಗಿ ಪ್ರಾರಂಭವಾಯಿತೋ, ಹಳೆಯದೋ ಎಂಬುದು ಕ್ಲಿಯರಾಗಿ ಹೇಳಿಲ್ಲ.

ಸಭಾಪತಿಯವರು.—ಆರನೆಯ ಐಟಂನಲ್ಲಿ "This is fully covered by central assistance" ಎಂದು ಹೇಳಿದ್ದಾರೆ. ಆದ್ದರಿಂದ 53 900 ರೂಪಾಯಿಗಳನ್ನು Contingency Fundನಿಂದ ಅಡ್ವಾನ್ಸ್ ಮಾಡಿದ್ದಾರೆ. ಅದು ಕೇಂದ್ರ ಸರ್ಕಾರದಿಂದ ಬರುತ್ತದೆ. ರಿಕೂಪ್ ಆಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಮುಂದಿನ ಬಡ್ಜೆಟ್ಟಿನ ಮೇಲೆ ಇದರಿಂದ ಏನು ಪರಿಣಾಮವಾಗುತ್ತದೆಂಬುದನ್ನು ವಿವರವಾಗಿ ಹೇಳಲಿಲ್ಲ.

ಇನ್ನು ಡಿಮ್ಯಾಂಡ್ ನಂಬರ್ 28ರ ವಿಷಯ. ಈ ಡಿಮ್ಯಾಂಡಿನ ಆರನೆಯ ಐಟಂನಲ್ಲಿ ಈ ರೀತಿ ಹೇಳಿದೆ :

> "The departmental requirements under this head were reduced at the time of finalisation of the budget proposals for 1957-58. As the amount actually required is seen to be more, this sum was advanced from the Contingency Fund."

ಇದು ಕ್ಲಿಯರಾಗಿ ಸರ್ಕಾರದವರ ಇನ್‌ಟೆನ್ಷನ್ ಏನು ಎನ್ನುವುದನ್ನು ತೋರಿಸುತ್ತದೆ. ಹಿಂದೆಬಡ್ಜೆಟ್ಟನ್ನು ಮಂಡಿಸಿದ ಕಾಲದಲ್ಲಿ ಡಿಫಿಸಿಟ್ಟನ್ನು ಕಡಮೆ ತೋರಿಸಲು ಇದನ್ನು ಕಡಮೆಮಾಡಿ ಇವೊತ್ತಿನ ದಿವಸ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಇದಕ್ಕಾಗಿ ಬೇಡಿಕೆಯನ್ನು ತಂದರೆ ಏನು ಸರ್ಕಾರದ ಉದ್ದೇಶ ಗೊತ್ತಾಗುತ್ತದೆ? ರಿಕ್ವೈರ್‌ಮೆಂಟ್ಸ್ ಅವೊತ್ತು ಎಷ್ಟು ಇತ್ತೋ ಇವೊತ್ತು ಅಷ್ಟೇ ಇದೆ.

ಸಭಾಪತಿಯವರು.—ವರ್ಷದ ಅಂತ್ಯದಲ್ಲಿ ಯಾವ ಯಾವ ಡಿಮ್ಯಾಂಡುಗಳಿಗೆ ಎಷ್ಟೆಷ್ಟು ಖರ್ಚು ಆಗದೆ ನಿಲ್ಲುತ್ತದೆಯೋ ಅದನ್ನೆಲ್ಲಾ ಸರೆಂಡರ್‌ಮಾಡಿ ಅದಕ್ಕೆ ಖರ್ಚು ಖೋತಾ ಮಾಡಿದಮೇಲೆ ಲೆಕ್ಕ ತೋರಿಸಿ, ಒಟ್ಟಿನಲ್ಲಿ ಹೆಚ್ಚು ಖರ್ಚಾದುದಕ್ಕೆ ಎಂದು ಇದರಲ್ಲಿ ಹೇಳಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಇಲ್ಲಿ ಕಡಮೆ ತೋರಿಸಿ ಬೇರೆ ಹಣ ತೆಗೆದುಕೊಂಡು ಮಾಡುವುದನ್ನು ಬಡ್ಜೆಟ್ ಮ್ಯಾನಿಪ್ಯುಲೇಷನ್ ಎಂದು ಹೇಳುತ್ತೇನೆ. ಈ ಡಿಮ್ಯಾಂಡಿನಲ್ಲಿ ಇವೊತ್ತು ಒಂದು ಲಕ್ಷ ರೂಪಾಯಿಗಳ ಮೇಲೆ ಗ್ರಾಂಟು ಬೇಕು ಎಂದು ಉದ್ದೇಶಪೂರ್ವಕವಾಗಿ ತೋರಿಸಿದ್ದಾರೆ ಎಂದು ನಾನು ಹೇಳುತ್ತೇನೆ.

ಸಭಾಪತಿಯವರು.—ಡಿಪಾರ್ಟ್‌ಮೆಂಟಲ್ ರಿಕ್ವೈರ್‌ಮೆಂಟ್ಸ್ ಬಾಬಿಗೆ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಬೇಕೆನ್ನುವಾಗ, ಸರ್ಕಾರದವರು 50 ಸಾವಿರ ರೂಪಾಯಿಗಳನ್ನು ಖೋತಾ ಮಾಡಿದರು. ಅದು ಸಾಲದು ಎಂದು 75 ಸಾವಿರ ರೂಪಾಯಿಗಳು ಬೇಕೆಂದು ಕಂಡುಬಂದಮೇಲೆ ಈಗ 25 ಸಾವಿರ ರೂಪಾಯಿಗಳ ಅಡಿಷನಲ್ ಗ್ರಾಂಟನ್ನು ಕೇಳಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—To show less deficit in the Budget ಆಗ ಕಡಮೆ ಹಣ ಕೇಳಿದರು. ಈಗ ಇಲ್ಲಿ ಬೇಕು ಎಂದು back-doorನಿಂದ ಕೇಳುತ್ತಿದ್ದಾರೆ. ಈ ರೀತಿ ಫೈನಾನ್ಷಿಯಲ್ ಜಗ್ಲರಿ ಕೂಡದು ಎಂದು ಹೇಳುತ್ತೇನೆ.

ಸಭಾಪತಿಯವರು.—ಆಗ ಹೊಸದಾಗಿ ಇಷ್ಟೇ ಇರಬೇಕೆಂದು ಅಂದಾಜು ಮಾಡಿದ್ದರು ಈಗ ಖರ್ಚು ಜಾಸ್ತಿಯಾಯಿತು. ಆದ್ದರಿಂದ ಜಾಸ್ತಿ ಹಣ ಬೇಕು

(ಸಭಾಪತಿಯವರು)

ಎಂದು ಕೇಳಿದ್ದಾರೆ. ಆಗ ಕಟ್‌ಡೌನ್ ಮಾಡಿದರು. ಈಗ ಜಾಸ್ತಿ ಡಿಮ್ಯಾಂಡ್ ಮಾಡುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಇನ್ನು ಡಿಮ್ಯಾಂಡ್ ನಂಬರ್ 32ರ ವಿಷಯವಾಗಿ ಕೆಲವು ಸಲಹೆಗಳನ್ನು ಕೊಡಬೇಕಾಗಿದೆ. ಈಗ ಇದರಲ್ಲಿ ಡಿಸ್ಟ್ರೆಸ್ ಏರಿಯಾ ರಿಲೀಫ್ ಬಾಬಿಗಾಗಿ ಬೆಳಗಾಂ ಮತ್ತು ಗುಲ್ಬರ್ಗ ಎರಡು ಡಿವಿಜನ್‌ಗಳಿಗೆ ಮಾತ್ರ ಹಣವನ್ನೊದಗಿಸಬೇಕೆಂದು ತೋರಿಸಿದ್ದೀರಿ. ಇತರ ಜಿಲ್ಲೆಗಳನ್ನು ತೋರಿಸಲಿಲ್ಲ. ಒಂದುವೇಳೆ ಆ ರೀತಿ ಕಷ್ಟವಾಗಿದ್ದರೆ ಟ್ಯಾಕ್ಸ್ ರೆಮಿಷನ್ ಕೊಡಬಹುದಾಗಿತ್ತು. ತಕಾವಿ ಸಾಲವನ್ನು ಕಾಲಕ್ಕೆ ಸರಿಯಾಗಿ ಕೊಡಬಹುದಾಗಿತ್ತು. No profit no loss ಬೇಸಿಸ್ ಮಾಡಿದ್ದರೆ, ಎರಡು ಲಕ್ಷ ರೂಪಾಯಿಗಳಿಗಿಂತಲೂ ಕಡಿಮೆಯಾಗಬೇಕು. ಈಗ ಕೇಂದ್ರ ಸರ್ಕಾರದಿಂದ ಒಂದು ಲಕ್ಷ ರೂಪಾಯಿಗಳು ಬೇರೆ ಬರುತ್ತದೆ.

ಶ್ರೀ ಬಿ. ವೈಕುಂಠ ಬಾಳಿಗ (ಕಾರ್ಮಿಕ ಮತ್ತು ನ್ಯಾಯಾಂಗ ಶಾಖೆಯ ಮಂತ್ರಿಗಳು).—ವೆಚ್ಚವನ್ನು ತೋರಿಸುವುದರೊಳಗೆ ರಿಕವರೀಸ್ ತೋರಿಸಿದ್ದರಿಂದ ಆ ರೀತಿ ಹೆಚ್ಚಿಗೆ ಕಾಣುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಅದು ಸಪ್ಲಿಮೆಂಟರಿ ಡಿಮ್ಯಾಂಡ್. ಆದ್ದರಿಂದ ಆ ರೀತಿ ಖರ್ಚಾಗುತ್ತದೆ. ವಾಪಸ್ಸು ಬರುತ್ತದೆಂದು ಗೊತ್ತಿದ್ದರೂ, ಅದನ್ನು ಖರ್ಚು ಬಾಬಿನಲ್ಲಿ ಏತಕ್ಕೆ ತೋರಿಸಬೇಕು ?

ಇಷ್ಟು ಹೇಳಿ ಇನ್ನು ಮುಂದಾದರೂ ಸರ್ಕಾರದವರು ಇಂತಹ ಲೋಪಗಳನ್ನು ತೋರಿಸದೆ, ಅಂಕಿ ಅಂಶಗಳ ಬಗ್ಗೆ ಸರಿಯಾಗಿ ದಾಖಲೆ ಕೊಡುತ್ತಾರೆಂದು ನಂಬಿರುತ್ತೇನೆ. ಅಲ್ಲದೆ ಇದರಿಂದ ಒಟ್ಟು ಬಡ್ಜೆಟ್ಟಿನ ಮೇಲೆ ಏನು ಪರಿಣಾಮವಾಗುತ್ತದೆ, ಎಷ್ಟು ಖೋತಾ ಬರುತ್ತದೆ, ಎಷ್ಟು ಜಾಸ್ತಿಯಾಗುತ್ತದೆ ಎಂಬುದನ್ನು ಇನ್ನು ಮುಂದೆ ಸರಿಯಾಗಿ ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

Mr. CHAIRMAN.—We shall now rise for lunch, and meet again after half an hour.

The House adjourned for Lunch at Forty-five Minutes past Three of the Clock and re-assembled at Fifteen Minutes past Four of the Clock.

[MR. CHAIRMAN in the Chair]

†ಶ್ರೀ ಟಿ. ಎನ್. ಕೆಂಪಹೊನ್ನಯ್ಯ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಯವರೇ ಸರ್ಕಾರದವರು 4,91,09,700 ರೂಪಾಯಿಗಳ ಸಪ್ಲಿಮೆಂಟರಿ ಗ್ರ್ಯಾಂಟು ಬೇಕು ಎಂದು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದರಲ್ಲಿ ಬಹಳ ಮಟ್ಟಿಗೆ ಕೆಲವೆಲ್ಲ ಟೆಕ್ನಿಕಲ್‌ಗೆ ಸಂಬಂಧಪಟ್ಟದ್ದು ಎಂತಲೂ ಕೆಲವು ಅಡ್ಜಸ್ಟ್‌ಮೆಂಟ್ ಎಂತಲೂ, ಕೆಲವು ಟೋಕನ್ ಗ್ರ್ಯಾಂಟ್ ಎಂತಲೂ ಹೀಗೆ ನಾನಾ ತರಹವಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ಈಗಾಗಲೇ ಟೋಕನ್ ಗ್ರ್ಯಾಂಟುಗಳ ವಿಷಯವಾಗಿ ಮಾನ್ಯ ಸ್ನೇಹಿತರು ಅನೇಕ ವಿಧವಾದ ಆಕ್ಷೇಪಣೆಗಳನ್ನು ಮಾಡಿದ್ದಾರೆ. ಅದು ನ್ಯಾಯ ಎಂದು ತೋರುತ್ತದೆ. ಈಗಾಗಲೇ ವರ್ಷ ಆಖೈರು ಆಗುತ್ತಾ ಬಂದರೂ ಸಂಬಂಧಪಟ್ಟ ಬಾಬುಗಳಿಗೆ ಒಟ್ಟು ಮೊಬಲಗು ಇಷ್ಟೇ ಬೇಕು ಎನ್ನುವ ಬೇಡಿಕೆ ಸರ್ಕಾರದ ಮುಂದೆ ಬರಲಿಲ್ಲ ಎಂದು ಕಾಣುತ್ತದೆ. ಅದರಿಂದ ಏನು ಅನಾಹುತವಾಗುತ್ತದೆಯೋ, ಈ ರೀತಿ ಟೋಕನ್ ಗ್ರ್ಯಾಂಟಿಗೆ ಸಭೆಯ ಒಪ್ಪಿಗೆ ಪಡೆದು ಎಷ್ಟು ರೂಪಾಯಿಗಳನ್ನು ಖರ್ಚು ಮಾಡುತ್ತಾರೆಯೋ ಅದು ಯಾವ ರೀತಿ ವಿನಿಯೋಗವಾಗುತ್ತದೆಯೋ ಎಂದು ಸಂದೇಹ ಉದ್ಭವಿಸುವುದು ಸರಿಯೇ. ಸರ್ಕಾರದವರು ಪ್ರಾರಂಭದಲ್ಲಿ ಯಾವುದಾದರೂ ಒಂದು ಸ್ಕೀಮನ್ನು ಎಕ್ಸ್‌ಪ್ಲೋರ್ ಮಾಡಬೇಕಾದರೆ ಅಂಥಾ ಸಂದರ್ಭದಲ್ಲಿ ಮುಂದೆ ಏನಾಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲದೆ ಇರುವುದರಿಂದ ಆಗ ಮಾತ್ರ ಟೋಕನ್ ಗ್ರ್ಯಾಂಟುಗಳನ್ನು ಕೇಳಬಹುದೇ ಹೊರತು ವರ್ಷದ ಆಖೈರಿನಲ್ಲಿ ಸಪ್ಲಿಮೆಂಟರಿ ಗ್ರ್ಯಾಂಟಿನ ಜೊತೆಗೆ ಟೋಕನ್ ಗ್ರ್ಯಾಂಟ್ ಕೇಳುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಕೆಲವು ರೆಸೀಟ್ಸ್ ಹೆಚ್ಚುತ್ತದೆ ಮತ್ತು ಅಪ್ರೋಪ್ರಿಯೇಷನ್ ಮುಖಾಂತರ ಹೆಚ್ಚಿಗೆ ಬೇಡಿಕೆಗಳನ್ನು ಮೀಟ್ ಮಾಡುತ್ತೇವೆಂದು ಹೇಳಿದ್ದಾರೆ. 10ನೆಯ ಡಿಮ್ಯಾಂಡಿನ ಮೂಲಕ ರೆಸ್ಟೋರೇಷನ್ ಆಫ್ ಬ್ರೀಚ್‌ಡ್ ಟ್ಯಾಂಕುಗಳಿಗೆಂದು 20 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. 1956ನೆಯ ಇಸ್ವಿಯಲ್ಲಿ ಅನೇಕ ಕಡೆ ಮಳೆ ವಿಶೇಷ ಬಿದ್ದುದರ ದೆಸೆಯಿಂದ ಬಹುಮಟ್ಟಿಗೆ ಕೆರೆಗಳು ಒಡೆದು ಹೋಗಿವೆ. ಆದರೆ 1956-57, 1957-58 ಈ ಎರಡು ವರ್ಷ ಕಳೆದರೂ ಕೂಡ ಅನೇಕ ಕಡೆ ಬ್ರೀಚ್‌ಡ್ ಟ್ಯಾಂಕುಗಳನ್ನು ಸರಿಯಾಗಿ ರಿಪೇರಿ ಮಾಡಿಸಿಲ್ಲ. ಹೋದ ಸಾರಿ ಮಳೆ ಬಂದಾಗ ಸ್ವಲ್ಪ ನೀರು ನಿಂತುಕೊಳ್ಳುವುದಕ್ಕೆ ಅವಕಾಶವಾಗಿಲ್ಲ. ಆದ್ದರಿಂದ ಫಸಲು ಕೂಡ ಪಡೆಯುವುದಕ್ಕೆ ಆಗಿಲ್ಲ. ಎಲ್ಲಿ ಇನ್‌ಫ್ಲೂಯೆನ್ಷಿಯಲ್ ಪೀಪಲ್ ಇದ್ದು ಸರ್ಕಾರದಮೇಲೆ ವಿಶೇಷ ಒತ್ತಾಯ ಹಾಕಿದರೋ ಅಂಥಾ ಕಡೆ ಕೆರೆಯ ರಿಪೇರಿ ಆಗಿದೆಯೇ ಹೊರತು ಉಳಿದಕಡೆ ಆಗಿಲ್ಲ. ಸರ್ಕಾರದವರು ಆದಷ್ಟು ಮುತವರ್ಜಿ ವಹಿಸಿ ಈಗಿನ ಕಷ್ಟಕಾಲದಲ್ಲಿ ಜಾಸ್ತಿ ಆಹಾರವನ್ನು ಬೆಳೆಯತಕ್ಕ ಸ್ಕೀಮನ್ನು ಹಾಕಿಕೊಂಡು ಹೆಚ್ಚು ಆಹಾರಧಾನ್ಯವನ್ನು ಬೆಳೆಯಬೇಕು ಎಂದು ಇರುವಾಗ ಅದಕ್ಕೆ ತಕ್ಕಂತೆ ಕೆರೆಗಳಲ್ಲಿ ನೀರು ನಿಲ್ಲುವಂತೆ ಮಾಡಿದರೆ ಅದರಿಂದ ಅನುಕೂಲವಾಗುತ್ತದೆ. ಸರ್ಕಾರದವರು ಇದನ್ನು ಗಮನದಲ್ಲಿ ಇಟ್ಟುಕೊಂಡು ಆದಷ್ಟು ಜಾಗ್ರತೆ ಬ್ರೀಚ್‌ಡ್ ಟ್ಯಾಂಕ್‌ಗಳ ರಿಪೇರಿ ಮಾಡಿಸಿ ಅವುಗಳನ್ನು ಮೊದಲಿದ್ದ ಸ್ಥಿತಿಗೆ ತರಬೇಕು. ಅನೇಕ ಕಡೆ ತೂಬುಗಳು ಕೆಟ್ಟುಹೋಗಿವೆ. ಕೆರೆಯಲ್ಲಿ ನೀರು ಇದ್ದರೂ ತೂಬುಗಳಲ್ಲಿ ನೀರು ಬಾರದೆ ಇರುವ ಪ್ರಸಂಗ ಇದೆ. ಇವನ್ನೆಲ್ಲಾ ಸರ್ಕಾರದವರು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ.

ಪೇಜು 8 ಡಿಮ್ಯಾಂಡ್ 20ರ ಪ್ರಕಾರ ಯೂನಿವರ್ಸಿಟಿಯವರಿಗಾಗಿ ಹತ್ತು ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಸರ್ಕಾರದವರು ವಿಶ್ವವಿದ್ಯಾನಿಲಯ ಅಟಾನಮಸ್ ಆದಮೇಲೆ ಮೂರು ವರ್ಷದಿಂದ ಕೊಡುತ್ತಿದ್ದ ಸರಾಸರಿ ಮೊತ್ತವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದರಂತೆ 44 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಪುನಃ ಈ ವರ್ಷ ಹತ್ತು ಲಕ್ಷ ರೂಪಾಯಿಗಳನ್ನು ಜಾಸ್ತಿ ಕೊಡುವುದಕ್ಕೆ ಇಲ್ಲಿ ನಮ್ಮ ಮುಂದೆ ಒಂದು ಬೇಡಿಕೆ

ಯನ್ನು ತೆಗೆದುಕೊಂಡು ಬಂದಿದ್ದಾರೆ. ಇದರಲ್ಲಿ ಒಂದು ವಿಚಾರ ಹೇಳಬೇಕಾಗಿದೆ.

ಬಡಹುಡುಗರಿಗೆ ಯಾವುದೋ ಒಂದು ಕಾಲದಲ್ಲಿ ಕೊಡುತ್ತಿದ್ದ ಸ್ಕಾಲರ್‌ಷಿಪ್ ಮೊಬಲಗನ್ನು ಈಗಲೂ ಕಂಟಿನ್ಯೂ ಮಾಡಿಕೊಂಡು ಬರುತ್ತಿದ್ದಾರೆಯೇ ಹೊರತು ಇದುವರೆಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ ಹಾಗೆ ಮೊಬಲಗು ಹೆಚ್ಚಿಲ್ಲ. ಈಚೆಗೆ ಡಿಪಾರ್ಟ್‌ಮೆಂಟಿನಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಅಡೀಷನಲ್ ಸಮ್ ಕೊಟ್ಟಿದ್ದಾರೆ. ಅದರಿಂದ ಸ್ವಲ್ಪ ಸಹಾಯವಾಗಿದೆ. ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳ ಸಂಖ್ಯೆ ಬಹಳ ಹೆಚ್ಚಿದೆ. ಹೆಚ್ಚಿದ್ದಕ್ಕೆ ತಕ್ಕಂತೆ ಸರ್ಕಾರದವರು ಯಾವ ವಿಧವಾದ ಮೊಬಲಗನ್ನೂ ಇದುವರೆಗೂ ಕೊಟ್ಟಿಲ್ಲ. ಈಗ ಆದಷ್ಟು ಜಾಗ್ರತೆ ಇನ್ನಾದರೂ ಮೊಬಲಗು ಹೆಚ್ಚಿಸಿದರೆ ಏನಾದರೂ ಸ್ವಲ್ಪ ಬಡಹುಡುಗರಿಗೆ ಸಹಾಯವಾಗುತ್ತದೆ. ಬರತಕ್ಕ ಅಪ್ಲಿಕೇಷನ್ಸ್ ಬಹಳವಾಗಿವೆ. ಆದರೆ ಕೊಡತಕ್ಕದ್ದು ಮಾತ್ರ ಮೊದಲು ಎಷ್ಟು ಇತ್ತೋ ಅಷ್ಟೇ ಇದೆ. ಅದರಿಂದ ಬಡಹುಡುಗರಿಗೆ ಅನುಕೂಲವಾಗುತ್ತಾ ಇಲ್ಲ. 55 ಪರ್ಸೆಂಟ್ ನಂಬರು ಬಂದರೆ ಹುಡುಗರಿಗೆ ಇಂಡಿಯಾ ಸರ್ಕಾರದವರು ಸ್ಕಾಲರ್‌ಷಿಪ್ ಕೊಡುತ್ತಿದ್ದಾರೆ. ಅದು ಈ ವರ್ಷ ಆಖೈರಿಗೆ ಬರುತ್ತದೆ. ಹೋದಸಾರಿ ಯಾರು ಫಸ್ಟ್‌ಕ್ಲಾಸ್ ಬಂದು ಸ್ಕಾಲರ್‌ಷಿಪ್ ಪಡೆಯುವುದಕ್ಕೆ ಅರ್ಹರಾಗಿದ್ದರೋ ಅಂಥವರಿಗೆ ಕೊಟ್ಟರು. ಕೇಂದ್ರ ಸರ್ಕಾರದ ಸ್ಕಾಲರ್‌ಷಿಪ್ ಬಂದ ಮೇಲೆ ಪುನಃ ನಮ್ಮ ಯೂನಿವರ್ಸಿಟಿಯಿಂದ ಬರುವ ಸ್ಕಾಲರ್‌ಷಿಪ್ಪನ್ನು ಕಮಿಟಿಯವರು ಬಡಹುಡುಗರಿಗೆ ಹಂಚಿದರು. ಆದರೆ ಈಚೆಗೆ ಸ್ಕಾಲರ್‌ಷಿಪ್ ಕೇಂದ್ರ ಸರ್ಕಾರದಿಂದ ಬಂದರೂ ಯೂನಿವರ್ಸಿಟಿಯವರು ತಮ್ಮ ಸ್ಕಾಲರ್‌ಷಿಪ್ಪನ್ನು ಇನ್ನೊಬ್ಬರಿಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಇಷ್ಟಪಟ್ಟಿಲ್ಲ. ಎಷ್ಟು ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಡ್ರಾ ಮಾಡಿದ್ದಾರೋ ಅದನ್ನು ವಾಪಸ್ಸು ತೆಗೆದುಕೊಂಡು ಯೂನಿವರ್ಸಿಟಿಗೆ ಜಮಾ ಮಾಡಿಕೊಂಡರು. ಅರ್ಹರಾದ ಬೇರೆ ವಿದ್ಯಾರ್ಥಿಗಳಿಗೆ ಕೊಟ್ಟಿಲ್ಲ. 60-65 ಪರ್ಸೆಂಟ್ ಬಂದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸ್ಕಾಲರ್‌ಷಿಪ್ ಅಪ್ಲಿಕೇಷನ್‌ಗಳನ್ನು ಕನ್‌ಸಿಡರೇಷನ್‌ಗೆ ತೆಗೆದುಕೊಳ್ಳಲಿಲ್ಲ. ಅವರಿಗೆ ಇಂಡಿಯಾ ಸರ್ಕಾರದ ಸ್ಕಾಲರ್‌ಷಿಪ್ ಬರುತ್ತದೆ ಎಂದು ಅವರನ್ನು ಬಿಟ್ಟುಬಿಟ್ಟು ಉಳಿದಿರತಕ್ಕ ಅರ್ಹರಾದ ವಿದ್ಯಾರ್ಥಿಗಳಿಗೆ ಕೊಟ್ಟರು. ಇದುವರೆಗೂ ಅವರಿಗೆ ಸ್ಕಾಲರ್‌ಷಿಪ್ ಬರಲಿಲ್ಲ. ಬರುತ್ತದೆ ಎನ್ನುವ ಭರವಸೆಕೂಡ ಇಲ್ಲ ಎಂದು ಹೇಳುತ್ತೇನೆ. ಎಷ್ಟು ಕಾಗದ ಬರೆದರೂ ಕೊಟ್ಟಿಲ್ಲ. ಕೇಂದ್ರ ಸರ್ಕಾರದವರು ಖುದ್ದಾಗಿ ಇಲ್ಲಿ ಹಂಚುವುದಕ್ಕೆ ಬದಲಾಗಿ ಎಷ್ಟು ಮೊಬಲಗು ಬೇಕೆಂದು ಮೊದಲು ಲೆಖ್ಖ ತೆಗೆದುಕೊಂಡು ಅಷ್ಟು ಮೊಬಲಗನ್ನು ನಮ್ಮ ಸರ್ಕಾರ ಅಥವಾ ಯೂನಿವರ್ಸಿಟಿ ವಶಕ್ಕೆ ಕೊಟ್ಟರೆ ನಮ್ಮ ಸ್ಕಾಲರ್‌ಷಿಪ್ ಕಮಿಟಿಯವರು ಫಸ್ಟ್‌ಕ್ಲಾಸ್‌ನಲ್ಲಿ ಪಾಸುಮಾಡಿದ ಅರ್ಹರಾದ ಹುಡುಗರಿಗೆ ಎಷ್ಟು ಜನಕ್ಕೆ ಕೊಡಬೇಕು ಎಂಬುದನ್ನು ತೀರ್ಮಾನ ಮಾಡಬಹುದು. ಈಗ ಅನೇಕ ಬಡಹುಡುಗರಿಗೆ ಒಂದು ಫ್ರೀಹಾಸ್ಟಲು ಇಲ್ಲ. ಅವರು ಬಹಳ ಅಸಹಾಯಕರಾಗಿ ಶೋಚನೀಯ ಪರಿಸ್ಥಿತಿಯಲ್ಲಿದ್ದಾರೆ. ಸರ್ಕಾರದವರು ಈ ವಿಚಾರ ಯೋಚನೆಮಾಡಿ ಕೇಂದ್ರ ಸರ್ಕಾರದವರಿಗೆ ಬರೆದು ಇಲ್ಲಿ ಬಡಹುಡುಗರಿಗೆ ಯಾವವಿಧವಾದ ಸ್ಕಾಲರ್‌ಷಿಪ್ ಸಿಕ್ಕಿಲ್ಲ, ನೀವು ಸಹಾಯಮಾಡಬೇಕು ಎಂದು ತಿಳಿಸಬೇಕು. ನಮ್ಮ ಎಜುಕೇಷನ್ ಮಿನಿಸ್ಟರ್ ಅವರು ಆದಷ್ಟು ಜಾಗ್ರತೆ ಮುತುವರ್ಜಿವಹಿಸಿ ಇಂಡಿಯಾ ಸರ್ಕಾರಕ್ಕೆ ಈ ವಿಚಾರವನ್ನು ತಿಳಿಸಬೇಕು. ಒಂದುವೇಳೆ ಇಂಡಿಯಾ ಸರ್ಕಾರದವರು ಏನೂ ಸಹಾಯ ಮಾಡದೆ ಹೋದರೆ ನಮ್ಮ ಯೂನಿವರ್ಸಿಟಿ ಮುಖಾಂತರ ಸರ್ಕಾರದವರು ಸಹಾಯ ಮಾಡಬೇಕು. ಎಷ್ಟೋ ಜನ ಬಡವಿದ್ಯಾರ್ಥಿಗಳು ಫಸ್ಟ್‌ಕ್ಲಾಸಿನಲ್ಲಿ ಪಾಸುಮಾಡಿ ಅರ್ಹತೆ ಪಡೆದಿದ್ದಾರೆ. ಅವರು ಫ್ರೀಷಿಪ್ ಇಲ್ಲದೆ ತೊಂದರೆಪಡುತ್ತಿದ್ದಾರೆ. ಪ್ರತಿಯೊಂದು ಕಾಲೇಜಿನಲ್ಲಿಯೂ ಕೂಡ ಇದೇರೀತಿ ಆಗಿದೆ. ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರಿಗೆ ರೆಫರೆನ್ಸ್‌ಮಾಡಬೇಕು ಎಂದು ನಾನು ಸೂಚಿಸುತ್ತೇನೆ. ಅನೇಕಕಡೆ ಕಾಲೇಜುಗಳು ಇದ್ದು ಬಿಲ್ಡಿಂಗ್ಸ್ ಇಲ್ಲ. ಒಂದು ಉದಾಹರಣೆ ಹೇಳುತ್ತೇನೆ. ತುಮಕೂರಿನಲ್ಲಿ 1949ನೆಯ ಇಸ್ವಿಯಲ್ಲಿ 75 ಎಕರೆ ಜಮೀನನ್ನು ಕಾಲೇಜು ಕಟ್ಟುವುದಕ್ಕೋಸ್ಕರ ಆಕ್ವೈರ್‌ಮಾಡಿ ಆಗಿನ ಕಾಲದಲ್ಲೇ ಶ್ರೀಮನ್ಮಹಾರಾಜರಿಂದ ಫೌಂಡೇಷನ್ ಹಾಕಿಸಿದರು. ಪ್ಲಾನ್ ಎಸ್ಟಿಮೇಟ್ ವಗೈರೆ ಆಗಿ ಹಣಕೂಡ ಸ್ಯಾಂಕ್ಷನ್ ಆಯಿತು. ಆಮೇಲೆ ಹಣದ ಅಭಾವದಿಂದ ಕಾಲೇಜನ್ನು ಕಟ್ಟದೆ ಹಾಗೆಯೇ ನಿಲ್ಲಿಸಿದರು. ಈಗ ಒಂಬತ್ತು ವರ್ಷ ಕಳೆದರೂ ಸಹ ಕಟ್ಟಡ ಕಟ್ಟದೆ ಹಾಗೆಯೇ ಇದೆ. ವಿದ್ಯಾಮಂತ್ರಿಗಳ ಹತ್ತಿರ ಡೆಪ್ಯುಟೇಷನ್ ಹೋಗಿ ಯೂನಿವರ್ಸಿಟಿಗೆ ಬರೆದು ಯೂನಿವರ್ಸಿಟಿ ಮೆಂಬರುಗಳಾದ ಶ್ರೀ ಶಾಸ್ತ್ರಿಗಳನ್ನೂ ಮತ್ತು ಶ್ರೀ ಗಂಗಾಧರಯ್ಯನವರನ್ನೂ ಹಿಡಿದು ಅವರ ಮುಖಾಂತರ ಹೇಳಿಸಿದ ಮೇಲೆ ಒಂದು ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟಿದ್ದಾರೆ.

ಪ್ಲಾನ್‌ಗಳು ತಯಾರಾಗಿದ್ದವು. Administrative Sanction ಬಂದಿತ್ತು. Technical Sanctionಗೆ ಬಂದಕಾಲದಲ್ಲಿ, ಇದು 1957ಕ್ಕೆ ಸಂಬಂಧಿಸಿದ್ದು, ನಮಗೆ ಸಂಬಂಧವಿಲ್ಲ ಎಂದು ಆಗಿದ್ದ ಎಸ್ಟಿಮೇಟುಗಳನ್ನು ವಾಪಸುಕಳಿಸಿದರು. ಪುನಃ ಯೂನಿವರ್ಸಿಟಿಯಲ್ಲಿ ಕೇಳಬೇಕು. ಹಾಗೆ ಕೇಳಲು ಅವಕಾಶವಾಗಲಿಲ್ಲ. ಹೀಗೆ ಸರಕಾರದವರು ಕಟ್ಟಡಗಳನ್ನು ಕಟ್ಟಿಸಲಾಗದಿದ್ದರೂ, ಕಟ್ಟಿಸಿರತಕ್ಕ ಬಿಲ್ಡಿಂಗನ್ನು ತೆಗೆದುಕೊಳ್ಳಬೇಕಾದರೂ ಹೀಗೆ ತೊಂದರೆಗಳಾಗುತ್ತಿವೆ. ಆದುದರಿಂದ ಯೂನಿವರ್ಸಿಟಿ ಸಿಂಡಿಕೇಟಿನವರು ಈ ವಿಚಾರವನ್ನು ಸರಕಾರಕ್ಕೆ ಒತ್ತಾಯಪಡಿಸಬೇಕು. ಹೀಗೆ ಇಲ್ಲಿ ಬಿಲ್ಡಿಂಗಿಲ್ಲದಿರುವುದರಿಂದ ಅಲ್ಲಿನ ತರಗತಿಗಳು ಬೆಳಿಗ್ಗೆ 8 ಗಂಟೆಯಿಂದ ಆರಂಭವಾಗಿ ಸಂಜೆ 8 ಗಂಟೆಯವರೆಗೆ ನಡೆಯುತ್ತಿವೆ. ಶಿಕ್ಷಕರಾಗಿರುವವರು ಬೆಳಗಿನಿಂದ ಸಂಜೆಯವರೆಗೆ ಕೆಲಸಮಾಡುತ್ತಿದ್ದಾರೆ. ಹಲವರು ಸುಮಾರು ನಾಲ್ಕಾರು ಮೈಲಿಗಳಿರುವ ಹಳ್ಳಿಗಳಿಂದ ಬರುತ್ತಿದ್ದಾರೆ. ಅಲ್ಲದೆ ಹೀಗೆ ಬೆಳಗಿನಿಂದ ಸಂಜೆಯವರೆಗೆ ಕೆಲಸಮಾಡುವ ಉಪಾಧ್ಯಾಯರುಗಳು ಯಾವ ಕೆಲಸಗಳನ್ನು ತಾನೇ ಸರಿಯಾಗಿ ಮಾಡಲು ಸಾಧ್ಯವಾದೀತು? ಅಲ್ಲದೆ ಈ ಶಾಲೆಗಳಲ್ಲಿ ಊಟ, ತಿಂಡಿ ಸೌಕರ್ಯಗಳೂ ಇಲ್ಲ. ಇದರಿಂದ ತೊಂದರೆಯಾಗಿದೆ. ಎಷ್ಟುಸಾರಿ ಈ ಉಪಾಧ್ಯಾಯರು ತಿರುಗಲು ಸಾಧ್ಯ? ಬೆಳಿಗ್ಗೆ ಅಷ್ಟು ಹೊತ್ತಿಗೇ ಸ್ವಲ್ಪ ಉಪಹಾರವನ್ನು ಮಾಡಿಕೊಂಡು ಬಂದು ಇಲ್ಲಿಯೇ ಕಾದಿದ್ದು ಸ್ಕೂಲಿನ ಕೆಲಸ ಮಾಡುತ್ತಿದ್ದಾರೆ. ಇದರಿಂದ ಎಷ್ಟು ತೊಂದರೆಯಾಗಿದೆ ಎನ್ನುವುದು ತಿಳಿಯುತ್ತದೆ. ಅಲ್ಲದೆ ಇಲ್ಲಿಯ Teacherಗಳು ಮತ್ತು Professorಗಳು ಡೆಲಿಗೇಷನ್ನಿನಲ್ಲಿ ಬಂದು ಶ್ರೀಮಾನ್ ನಿಜಲಿಂಗಪ್ಪನವರಲ್ಲಿಯೂ ಹೇಳಿಕೊಂಡರೂ ಸಹ ಇನ್ನೂ ಕಾರ್ಯತಃ ಏನೂ ಆಗಿಲ್ಲ. ಹುಡುಗರು ಹಸಿದುಕೊಂಡು ಬಂದರೆ ಅವರ ವಿದ್ಯಾಭ್ಯಾಸ ಎಷ್ಟರಮಟ್ಟಿಗೆ ಆಗುತ್ತದೆ ಮತ್ತು ಕಾಲೇಜುಗಳಲ್ಲಿ ಓದುವವರ ಸ್ಟಾಂಡರ್ಡ್ (ಮಟ್ಟ) improve ಆಗುತ್ತದೆಯೇ ಎನ್ನುವುದನ್ನು

(ಶ್ರೀ ಟಿ. ಎನ್. ಕೆಂಪಹೊನ್ನಯ್ಯ)

ನೀವೇ ಯೋಚಿಸಬೇಕು. ಇದಕ್ಕೆ ಜನಗಳಿಂದ ಕೊಟ್ಟಿರತಕ್ಕ ಕಟ್ಟಡಗಳನ್ನು ಆದಷ್ಟು ಬೇಗ ಉಪಯೋಗಿಸಿಕೊಳ್ಳಲು ಅವಕಾಶಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಡಿಮ್ಯಾಂಡು 38 ಗೋಮಾಳಕ್ಕಾಗಿ ಎಂದು ಬಂದಿದೆ. ಗೋಮಾಳಗಳಲ್ಲಿ ಹುಲ್ಲು ಬೆಳೆಯುವುದಕ್ಕಾಗಿ ಸರಕಾರ ಸಹಾಯ ಮಾಡುವುದನ್ನು ಹೆಚ್ಚಿಸಬೇಕು. ಕೆಲವುಕಡೆ ಈ ಗೋಮಾಳಗಳನ್ನು ಆಕ್ರಮಿಸಿಕೊಂಡು ಬಂದಿದ್ದಾರೆ. ಅದರಲ್ಲಿ ಹುಲ್ಲು ಬೆಳೆಯುದ ಪ್ರದೇಶಗಳನ್ನು ವ್ಯವಸಾಯಕ್ಕೆ ತೆಗೆದುಕೊಂಡು ಉಪಯೋಗಿಸಬಹುದು. ಹಾಗೆ ಹುಲ್ಲು ಬೆಳೆಯದೆ ಇರುವ ಭೂಮಿಯು ಬಂಜರು ಬೀಳುತ್ತಿದೆ. ಇಂದು ಈ ರೀತಿಯಾದ ಸ್ಕೀಮುಗಳನ್ನೇನೋ ತರುವುದು ಅತ್ಯುತ್ತಮವಾದುದು. ಹುಲ್ಲು ಹೆಚ್ಚಾಗಿ ಬೆಳೆಯುವುದರಿಂದ ದನಗಳಿಗೆ ಮೇಯಲು ಹುಲ್ಲು ಸಿಕ್ಕುತ್ತದೆ. ಅದರಿಂದ ದನಗಳು ಬದುಕಿಕೊಳ್ಳುತ್ತವೆ. ಆದರೆ ಈ ರೀತಿಯಾದ ಜಮೀನುಗಳ ಸ್ಕೀಮಿಗಾಗಿ ಪಂಚಾಯತಿಯವರ ಸಹಾಯವನ್ನು ಕೇಳಿದ್ದಾರೆ. ಯಾವಯಾವ ಷರತ್ತುಗಳಿಂದ ಕೊಡುತ್ತಾರೆನ್ನುವುದನ್ನು ಹೇಳಿಲ್ಲ. ಅದನ್ನೆಲ್ಲ ಸರಿಯಾಗಿ ವಿಶದಪಡಿಸಿ ಈ ಕಾರ್ಯವನ್ನು ಮಾಡುತ್ತಾರೆಂದು ನಂಬಿದ್ದೇನೆ.

ಡಿಮ್ಯಾಂಡು 32 ಅಲ್ಲಿ Distress Relief works ಗಾಗಿ ಒಬ್ಬ ಕಮೀಷನರನ್ನು ನೇಮಕ ಮಾಡಿದ್ದಾರೆ. ಇದರಲ್ಲಿ ಒಂದು ಲಕ್ಷರೂಪಾಯಿಗಳಷ್ಟು ಲುಕ್ಸಾನು ಆಗುತ್ತದೆ ಎಂದು ತೋರಿಸಿದ್ದಾರೆ. ಇದು ಬಹಳ ಲಿಬರಲ್ ಆಗಿ ತೋರಿಸಿದಂತೆ ಇದೆ. ಈ ವರ್ಷ ಮೈಸೂರು ದೇಶದಲ್ಲಿ ಈಗಿರತಕ್ಕ Distress Relief works ಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ. ಹಿಂದೆ ಏನನ್ನು ಮಾಡಿದ್ದರೋ ಅದನ್ನು write off ಮಾಡುವ ಸಲುವಾಗಿ ಇಲ್ಲಿ ಬಂದಿದೆ ಎಂದು ತೋರುತ್ತದೆ. ಈ ರೀತಿಯಾದ ಕೆಲಸಗಳು ಮೂರು ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ನಡೆಯುತ್ತಿವೆ; ಎಂದರೆ ಮೈಸೂರು, ಬೆಂಗಳೂರು, ಕೋಲಾರ ಮತ್ತು ತುಮಕೂರು; ಮತ್ತು ಇಲ್ಲಿಗೆ ಸಾಕಾದಷ್ಟು ಮೊಬಲಗನ್ನು ಮಂಜೂರು ಮಾಡಿದ್ದಾರೆ. ಅಲ್ಲಿರುವ ಜನಗಳಿಗೇ ಕೂಲಿ ಸಿಕ್ಕುವ ಹಾಗೆ ಏರ್ಪಾಡು ಮಾಡಬೇಕು.

ಇಷ್ಟನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್ (ನಾಮನಿರ್ದೇಶ ಹೊಂದಿದವರು).—ಮಾನ್ಯ ಸಭಾಪತಿಗಳೇ, ನಮ್ಮ ಅರ್ಥ ಮಂತ್ರಿಗಳು ನಮ್ಮ ಮುಂದೆ ಇಟ್ಟಿರುವ 1957-58ನೇ ವರ್ಷಕ್ಕೆ ಸಂಬಂಧಿಸಿದ ಅನುಪೂರಕ ಅನುದಾನಗಳು ಎಂದರೆ Supplementary Estimates ಗಳನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ.

ಸಪ್ಲಿಮೆಂಟರಿ ಗ್ರಾಂಟುಗಳನ್ನು ಕೇಳುವುದು ಪ್ರಜಾಪ್ರಭುತ್ವದಲ್ಲ ಏನೂ ಆಶ್ಚರ್ಯವಲ್ಲ. ಬಹುಮಟ್ಟಿಗೆ ನಮಗೆ ತಿಳಿದಿರುವಹಾಗೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವಿರುವ ಎಲ್ಲ ಪ್ರಾಂತಗಳಲ್ಲೂ ಸಪ್ಲಿಮೆಂಟರಿ ಗ್ರಾಂಟುಗಳನ್ನು ಕೇಳಿಯೇ ಕೇಳುತ್ತಾರೆ. ಇದಕ್ಕೆ ನಮ್ಮ ಭಾರತದ ಸಂವಿಧಾನದಲ್ಲಿಯೂ ಅವಕಾಶವಿದೆ. ರಾಜ್ಯಾಡಳಿತವನ್ನು ನಡೆಸುತ್ತಿರುವ ಕಾಲದಲ್ಲಿ ಅನೇಕವಾದ ಅನಿರೀಕ್ಷಿತವಾದ ಖರ್ಚುಗಳು ಬರುವುದುಂಟು. ಅವುಗಳೆಲ್ಲ ಆಕಸ್ಮಿಕವಾಗಿ ಬರುವುದರಿಂದ ಈ ರೀತಿಯಾದ ಗ್ರಾಂಟುಗಳನ್ನು ಕೇಳಬೇಕಾಗುತ್ತದೆ.

ನಮ್ಮ ಮಾನ್ಯ ಮಿತ್ರರಾದ ಶ್ರೀಮಾನ್ ಶಾಸ್ತ್ರಿಗಳವರು ಮಾತನಾಡುತ್ತ ಈ ಹೆಚ್ಚುವರಿ ಬೇಡಿಕೆಗಳು ಒಂದು ತರಹ "ಜನ್ಮ ನೆಗಡಿ" ಎಂದು ಹೇಳಿ ಇದಕ್ಕೆ ತಕ್ಕ ಔಷಧಿ ಇಲ್ಲವೇ ಎಂದು ಹೇಳಿದರು. ಔಷಧಿಯೇನೋ ಇದೆ. ಅದು ಮೂಗನ್ನು ಕೊಯ್ದುಹಾಕುವುದು. ಪ್ರಜಾಪ್ರಭುಶ್ವದಲ್ಲಿ ಸಪ್ಲಿಮೆಂಟರಿ ಗ್ರಾಂಟುಗಳನ್ನು ಕೇಳದೆ ಇರುವ ಸರ್ಕಾರವೇ ಇಲ್ಲ. ಹಾಗೆ ಕೇಳಲೇ ಬೇಕಾಗುತ್ತದೆ. ಅದು ನಮ್ಮ ಮುಂದೆ ಬರಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಎಲ್ಲಿಯವರೆಗೆ ನಂಬಿಕೆಯಿದೆಯೋ ಎಲ್ಲಿಯವರೆಗೆ ಸಂವಿಧಾನಕ್ಕನುಸಾರವಾಗಿ ರಾಜ್ಯವನ್ನು ನಡೆಸುತ್ತಿದ್ದಾರೆಯೋ ಅಲ್ಲಿಯವರೆಗೂ ಸಪ್ಲಿಮೆಂಟರಿ ಗ್ರಾಂಟುಗಳನ್ನು ಕೇಳಲೇ ಬೇಕಾಗುತ್ತದೆ.

ಇಲ್ಲಿ ಹೀಗೆ ಈ ಬೇಡಿಕೆಗಳಲ್ಲಿ ಸುಮಾರು ನಾಲ್ಕು ಕೋಟಿ ಚಿಲ್ಲರೆಯಷ್ಟು ಹಣವನ್ನು ಕೇಳಿದ್ದಾರೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿರುವಂತೆ ಅನೇಕ ಐಟಮ್ಮುಗಳು ಕೆಲವು ಒಂದುಕಡೆಯಿಂದ ಮತ್ತೊಂದು ಕಡೆಗೆ ಬದಲಾವಣೆ ಆಗಿವೆ. ಇವೆಲ್ಲ Technical ಆಗಿರತಕ್ಕದ್ದು. ಮುಂದೆ ವಾಪಸು ತೆಗೆದುಕೊಳ್ಳಬೇಕಾದದ್ದು. ಕೆಲವು ಮಾತ್ರ ಹಾಗೆಯೇ ಖರ್ಚಿನ ಮೇಲೆ ಬಂದಿದೆ. ಕಾಡಿನಲ್ಲಿರತಕ್ಕ ಸಾಗುವಾನಿ ಮರಗಳನ್ನು ಮಾರುವುದಕ್ಕಾಗಿ ಮತ್ತು ಗಂಧದ ಮರಗಳ ಮಾರಾಟಕ್ಕಾಗಿ 18,57,000 ರೂಪಾಯಿಗಳನ್ನು ಕೊಡಬೇಕಾಗಿದೆ. ಇನ್ನು ಸೇತುವೆಗಳನ್ನು ರಿಪೇರಿ ಮಾಡುವುದಕ್ಕೆ, ಕ್ಷಾಮನಿಧಿಗೆ ಹದಿನೈದು ಲಕ್ಷ ಚಿಲ್ಲರೆ ರೂಪಾಯಿಗಳು; ಒಡೆದುಹೋದ ಕೆರೆಗಳನ್ನು ರಿಪೇರಿ ಮಾಡಲು ಐದು ಲಕ್ಷ ರೂಪಾಯಿಗಳು ಹಾಗೆ ಇನ್ನೂ ಕೆಲವು ಬಾಬುಗಳಿಗಾಗಿ, ಸಾಲಕ್ಕೆ ಕೊಡಬೇಕಾದ ಬಡ್ಡಿ ಇವುಗಳಿಗಾಗಿ ಕೊಡಬೇಕಾಗಿದೆ.

Demand No. 5—ಇದರಲ್ಲಿ ಸಾಗುವಾನಿ ಮರಗಳ ಸಾಗಾಣಿಕೆ ಮತ್ತು ಮಾರಾಟಕ್ಕಾಗಿ 18,57,500 ರೂಪಾಯಿಗಳನ್ನು ಕೇಳಿದ್ದಾರೆ. ಪದೇ ಪದೇ ನಾವು ಹೇಳುತ್ತಾ ಇದ್ದೇವೆ. ಕಾಡಿನ ಸಂಪತ್ತಿಗೆ ಪ್ರತಿಫಲ ಸರಿಯಾಗಿ ಬರುತ್ತಿಲ್ಲ. ಮರಗಳನ್ನು ಕಡಿಯುವುದಕ್ಕೆ ಎಷ್ಟು ವೆಚ್ಚವಾಗುತ್ತದೆಯೋ ಅದರಿಂದ ಬರುವ ಉತ್ಪತ್ತಿ ಎಲ್ಲೋ ಅಲ್ಪಸ್ವಲ್ಪ ಹೆಚ್ಚಾಗಿದೆ. ಖರ್ಚಾಗುವುದರ ಎರಡರಷ್ಟಾದರೂ ಬರಬೇಕು. ಅದರಂತೆ ಹೆಚ್ಚಿನ ಉತ್ಪನ್ನಗಳನ್ನು ಬೆಳೆಸಲು ತಕ್ಕ ಏರ್ಪಾಡನ್ನು ಮಾಡಬೇಕು.

ಡಿಮ್ಯಾಂಡ್ ನಂಬರ್ 8ರ ಮೇಲೆ ನಾನು ಹೇಳತಕ್ಕದ್ದು ಏನೂ ಇಲ್ಲ. ಇನ್ನು 13ನೆಯ ನಂಬರ್ ಡಿಮ್ಯಾಂಡಿನಲ್ಲಿ Mysore Gazetteer (to be opened) ಎಂದು ಹೇಳಿ 100 ರೂಪಾಯಿಗಳ ಒಂದು ಟೋಕನ್ ಗ್ರಾಂಟನ್ನು ಹೇಳಿದ್ದಾರೆ. ಈ ಹಣ ಚೀಫ್ ಎಡಿಟರ್ ಮತ್ತು ಅವರ ಶಿಬ್ಬಂದಿಗಾಗಿ ಗೆಜೆಟಿಯರ್ ಪುನರ್ ಮುದ್ರಣ ಬಹಳ ಆವಶ್ಯಕವಾದದ್ದು. ಮೈಸೂರು ದೇಶದ ಇತಿಹಾಸ, ಸಂಸ್ಕೃತಿ ಗಣಿ ಸಂಪತ್ತು ಮುಂತಾದ ಪ್ರಾಮುಖ್ಯವಾದ ಎಲ್ಲ ವಿಷಯಗಳನ್ನೂ ಇದು ಒಳಗೊಂಡಿರುತ್ತದೆ. ನಮ್ಮ ದೇಶದ ಐತಿಹಾಸಿಕ ಚರಿತ್ರೆಯನ್ನು ಕುರಿತು ಇದು ಒಂದು ಬಗೆಯ ಸಮಗ್ರ ಗ್ರಂಥ. ಸರ್ಕಾರದವರು ಇದಕ್ಕಾಗಿ ಹಣ ವೆಚ್ಚಮಾಡುತ್ತಿರುವುದು ತುಂಬ ಅಗತ್ಯ. ಇನ್ನು ಡಿಮ್ಯಾಂಡ್ ನಂಬರ್ 18ರಲ್ಲಿ ರೇವುಪಟ್ಟಣಗಳ ಅಭಿವೃದ್ಧಿಗಾಗಿ ಹಣವನ್ನು ಕೇಳಿದ್ದಾರೆ. ರೇವುಗಳ ಅಭಿವೃದ್ಧಿ ಆಗಬೇಕು. ಈ ಡಿಮ್ಯಾಂಡಿನಲ್ಲಿ ವಿವರಗಳನ್ನು ಕೊಟ್ಟಿರತಕ್ಕ ಕಡೆ Pay of Officers

ಕಾಲಂನಲ್ಲಿ 13,800 ರೂಪಾಯಿಗಳನ್ನು ಹಾಕಿ, Allowances and Honoraria ಕಾಲಂನಲ್ಲಿ 9,000 ರೂಪಾಯಿಗಳನ್ನೂ T.A. & D.A ಕಾಲಂನಲ್ಲಿ 15,400 ರೂಪಾಯಿಗಳನ್ನೂ ತೋರಿಸಿದ್ದಾರೆ. ಈ ರೀತಿ ತೋರಿಸಿರತಕ್ಕದ್ದನ್ನು ನೋಡಿದರೆ ಕೊನೆಯಪಕ್ಷ ಆಫೀಸರುಗಳ ಸಂಬಳ ಎಷ್ಟಿದೆಯೋ ಅದಕ್ಕಿಂತಲೂ ಈ ಅಲೋಯರ್ಸು ಮತ್ತು ಭತ್ಯೆ ವೆಚ್ಚ ಹೆಚ್ಚಾಗಿರುವಂತೆ ಕಾಣುತ್ತಿದೆ. ಆದುದರಿಂದ ಆಫೀಸರುಗಳು ಆಫೀಸಿನಲ್ಲಿ ಒಂದು ದಿವಸ ಕೂಡ ಇಲ್ಲದಂತೆ ಯಾವಾಗಲೂ ಆಫೀಸನ್ನು ಬಿಟ್ಟು ಹೊರಗಡೆಯೇ ತಿರುಗುತ್ತಿದ್ದಾರೆಂಬುದಾಗಿ ವ್ಯಕ್ತವಾಗುತ್ತದೆ. ಸರ್ಕಾರದವರು ಈ ವಿಚಾರವನ್ನು ಸ್ವಲ್ಪ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಡಿಮ್ಯಾಂಡ್ ನಂಬರ್ 20ರಲ್ಲಿ Grants to Universities ಎಂದು ಹೇಳಿ 100 ರೂಪಾಯಿಗಳ ಒಂದು ಟೋಕನ್ ಗ್ರಾಂಟನ್ನು ಕೇಳಿದ್ದಾರೆ. ನಮ್ಮ ಸರ್ಕಾರದವರು ಇತರ ವಿದ್ಯಾಸಂಸ್ಥೆಗಳಿಗೆ ಹೇಗೆ ಉದಾರವಾಗಿ ಸಹಾಯ ಮಾಡುತ್ತಿದ್ದಾರೋ ಅದೇ ರೀತಿಯಲ್ಲಿ ಈ ಯೂನಿವರ್ಸಿಟಿಗೂ ಪೂರ್ಣ ಸಹಾಯ ಮಾಡುತ್ತಿದ್ದಾರೆ. ಈಗ ನಮ್ಮ ಮೈಸೂರು ವಿಶ್ವವಿದ್ಯಾನಿಲಯದವರು 16½ ಲಕ್ಷ ಗೂಪಾಯಿಗಳ ಗ್ರಾಂಟನ್ನು ಹೆಚ್ಚಿಗೆ ಕೇಳಿದ್ದಾರೆ. ಆ ಪೈಕಿ ಸರ್ಕಾರದವರು ಈವರೆಗೆ ಹತ್ತು ಲಕ್ಷ ರೂಪಾಯಿಗಳನ್ನಾಗಲೇ ಒದಗಿಸಿರುತ್ತಾರೆ. ಆದರೆ ಇನ್ನುಳಿದ ಮೊಬಲಗನ್ನು ಸಹ ಯಾವತ್ತಿದ್ದರೂ ನಮ್ಮ ಸರ್ಕಾರವೇ ಕೊಡಬೇಕು. ಆ ಜವಾಬ್ದಾರಿ ಇವರ ಮೇಲೆ ಬಿದ್ದಿದೆ. ಇದುವರೆಗೂ ಅಫಿಲಯೇಟೆಡ್ ಕಾಲೇಜುಗಳಿಗೆ ಒಂದು ಸ್ಲ್ಯಾಬ್ ಗ್ರಾಂಟನ್ನು ಕೊಡುತ್ತಿದ್ದರು. ಆದರೆ ಇತ್ತೀಚೆಗೆ ಯೂನಿವರ್ಸಿಟಿ ಸಿಂಡಿಕೇಟ್ ಆದಮೇಲೆ ಆ ಗ್ರಾಂಟಿನ ಶೇಕಡ 75ರಷ್ಟನ್ನು ಯೂನಿವರ್ಸಿಟಿಯು ಕೊಡಬೇಕೆಂಬುದಾಗಿ ತೀರ್ಮಾನವಾಗಿರುತ್ತೆಂದು ಕೇಳುತ್ತೇನೆ. ಹೀಗೊಂದು ನಿರ್ಣಯವಾಗಿರತಕ್ಕ ಬಗ್ಗೆ ಒಂದು ಆರ್ಡರನ್ನು ಹೊರಡಿಸತಕ್ಕದ್ದು ಆವಶ್ಯಕವೆಂದು ಹೇಳುತ್ತೇನೆ. ಇನ್ನು ಡಿಮ್ಯಾಂಡ್ ನಂಬರ್ 32ರಲ್ಲಿ 15,52,000ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಯಾವ ಯಾವ ಪ್ರದೇಶದಲ್ಲಿ ಯಾವತ್ತೂ ಅಭಾವವನ್ನು ನೀಗುವುದಕ್ಕೆ ಬಹಳ ಕಷ್ಟವಾಗಿರುತ್ತದೆಯೋ ಅಂಥ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ಯಾವುದಾದರೂ ಕೈಗಾರಿಕೆಗಳನ್ನು ಹಾಕುವುದಾದರೆ ಪರವಾಗಿಲ್ಲ. ವ್ಯವಸಾಯಕ್ಕೆ ಅನುಕೂಲಗಳಿಲ್ಲದ ಕಡೆಗಳಲ್ಲಿ ಯಾವುದಾದರೂ ಒಂದು ಶಾಶ್ವತವಾಗಿ ನಡೆಯತಕ್ಕ ಕೈಗಾರಿಕೆಯನ್ನು ಸ್ಥಾಪಿಸುವುದರಿಂದ ಬಹಳ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಡಿಮ್ಯಾಂಡ್ ನಂಬರ್ 25ರಲ್ಲಿ Dairy Development Scheme, Bangalore Milk Supply Scheme ಎಂಬ ಬಾಬಿಗೆ ಹಣ ಕೇಳಿದ್ದಾರೆ. ಇದು ಬಹಳ ಆವಶ್ಯಕವಾದದ್ದು. ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಹಾಲಿನ ಉತ್ಪತ್ತಿಗಾಗಿ ಹಸು, ಎಮ್ಮೆಗಳನ್ನು ಇಟ್ಟುಕೊಳ್ಳುವುದು ಬಹಳ ಉಪಯುಕ್ತವಾದುದು. ಆದರೆ ನಮ್ಮ ಹಳ್ಳಿಗಳ ಕಡೆ ಕೆಲವರು ಡೈರಿಫಾರಂಗಳನ್ನು ಮಾಡಿದ್ದಾರೆ. ಆದರೆ ಅವರು ಅಲ್ಲಿ ಯಾವ ಎತ್ತು, ಹಸು, ಎಮ್ಮೆಗಳನ್ನೂ ಇಟ್ಟಿರುವುದಿಲ್ಲ. ಅವರು ಆ ಸುತ್ತಮುತ್ತಲೂ ಇರತಕ್ಕ ಹಳ್ಳಿಗಳಲ್ಲಿ ಹಾಲನ್ನು ಕೊಂಡು ಅದನ್ನು ಮಾರಾಟ ಮಾಡಲು ಬೇರೆ ಬೇರೆ ಸ್ಥಳಗಳಿಗೆ ರವಾನೆ ಮಾಡುತ್ತಿದ್ದಾರೆ. ಅಂಥ ಡೈರಿಫಾರಂಗಳನ್ನು ತಾವು ಮಾಡುವುದಿಲ್ಲವೆಂದು ನಾನು ನಂಬಿದ್ದೇನೆ. ಆ ರೀತಿ ಆಗದಂತೆ ಸರ್ಕಾರದವರು ಈ ವಿಚಾರದಲ್ಲಿ ನಿಗಾ ಇಡಬೇಕು. ಈ ಡಿಮ್ಯಾಂಡಿನ ಎಕ್ಸ್‌ಪ್ಲನೇಟರಿ ನೋಟಿನಲ್ಲಿ To meet the cost of purchase of milk ಎಂದು ಹೇಳಿದ್ದಾರೆ. ಈ ಬಾಬಿನಲ್ಲಿ ಡೈರಿ ಡೆವಲಪ್‌ಮೆಂಟಿಗೂ ಹಣಬೇಕೆಂದು ಕೇಳಿದ್ದಾರೆ. ಇದರ ಆವಶ್ಯಕತೆ ನಮಗೆ ಬಹಳವಾಗಿದೆ. ನಮ್ಮಲ್ಲಿ ಹುಲ್ಲುಗಾವಲುಗಳನ್ನು ಹೆಚ್ಚಾಗಿ ಬೆಳಸಬೇಕಾಗಿದೆ. ಎಲಿಫೆಂಟ್ ಗ್ರಾಸ್ ಎನ್ನತಕ್ಕ ಹುಲ್ಲನ್ನು ಒಂದಾವರ್ತಿ ಬೆಳಸಿದರೆ ಇದನ್ನು ಎರಡು ತಿಂಗಳಿಗೊಂದಾವರ್ತಿ ಕೊಯ್ಯುತ್ತಾ ಹೋದಂತೆಲ್ಲ ಅದು ಮತ್ತೆ ಯಥಾಪ್ರಕಾರದಂತೆ ಬೆಳೆಯುತ್ತಲೇ ಇರುತ್ತದೆ. ಇಂಥ ಹುಲ್ಲಿನ ಬೀಜಗಳನ್ನು ರೈತರಿಗೆ ಹೆಚ್ಚು ಹೆಚ್ಚಾಗಿ ಒದಗಿಸಬೇಕಾದ್ದು ಬಹಳ ಅಗತ್ಯವಾದುದು. ಗೋಮಾಳಗಳಿಲ್ಲದ ಪ್ರದೇಶದಲ್ಲಿ ಈ ಹುಲ್ಲನ್ನು ಬೆಳಸತಕ್ಕ ಬಗ್ಗೆ ವ್ಯವಸಾಯದ ಇಲಾಖೆಯವರು ಪ್ರತಿಯೊಬ್ಬ ರೈತನಿಗೂ ಒಳ್ಳೆಯ ಗೊಬ್ಬರ, ಬೀಜ ಇತ್ಯಾದಿಗಳನ್ನೊದಗಿಸತಕ್ಕ ಬಗ್ಗೆ ಈ ಹಣವನ್ನು ತೆಗೆದುಕೊಂಡರೆ ಪರವಾಗಿಲ್ಲ. ಬರಿ ಬೀಜ ಗೊಬ್ಬರಗಳನ್ನು ರೈತರಿಗೆ ಒದಗಿಸುವಂತೆ ಈ ಹುಲ್ಲನ್ನೂ ಸಹ ರೈತರು ಹೆಚ್ಚು ಹೆಚ್ಚಾಗಿ ಬೆಳೆಯುವಂತೆ ಪ್ರಚಾರ ನಡೆಸಬೇಕು. ಇದಕ್ಕೆಲ್ಲ ಹಣದ ಆವಶ್ಯಕತೆ ಬಹಳವಾಗಿದೆಯೆಂದು ಹೇಳುತ್ತೇನೆ. ಇನ್ನು ಡಿಮ್ಯಾಂಡ್ ನಂಬರ್ 47ರಲ್ಲಿ ನಾಲಾ ರಿಪೇರಿಗಳ ಬಗ್ಗೆ ಹಣವನ್ನು ಒದಗಿಸಿದ್ದಾರೆ. ಇದು ಬಹಳ ಅಗತ್ಯವಾದದ್ದು. ಮೈಸೂರು ದೇಶದಲ್ಲಿ ಅನೇಕ ಕಡೆಗಳಲ್ಲಿ ಈ ನಾಲಾ ರಿಪೇರಿ ಕೆಲಸಗಳು ನಡೆದಿರುವುದಿಲ್ಲ. ಎಲ್ಲೋ ರಸ್ತೆಗಳಿರುವ ಕಡೆ ಮಾತ್ರ ಒಂದು ಮೈಲಿ-ಅರ್ಧ ಮೈಲಿಗಳಷ್ಟು ನಾಲಾ ರಿಪೇರಿ ಕೆಲಸಗಳು ನಡೆದಿರುತ್ತವೆ. ಆ ನಾಲೆಗಳು 12-15 ಮೈಲಿಗಳಷ್ಟು ಉದ್ದವಿರುವುದರಿಂದ ಅವು ಪೂರ್ತಿಯಾಗಿ ರಿಪೇರಿಯಾಗದೆಯಿರುವುದರಿಂದ ನಾಲಾ ಆಶ್ರಯದಲ್ಲಿರತಕ್ಕ ಕೊನೆಯ ಜಮೀನುಗಳಿಗೆ ನೀರು ಹೋಗಿ ಮುಟ್ಟುವುದಕ್ಕಾಗುವುದಿಲ್ಲ ಆದರೆ ಒಂದು ಮೈಲಿ ನಾಲೆ ರಿಪೇರಿಗೆ ಒಂದು ನೂರು ರೂಪಾಯಿಗಳನ್ನು ಒದಗಿಸಿರುವುದು ಏತಕ್ಕೂ ಸಾಲದು. ಈ ಬಾಬಿಗಿನ್ನೂ ಹಣವನ್ನು ಹೆಚ್ಚಾಗಿ ಒದಗಿಸಬೇಕು. ಈ ರೀತಿ ಯಾವ ಯಾವ ಬಾಬುಗಳಿಗೆ ಹಣದ ಆವಶ್ಯಕತೆಯಿದೆಯೋ ಅಂಥ ಬಾಬುಗಳನ್ನೇ ನೋಡಿಕೊಂಡು ಅವುಗಳ ಬಗ್ಗೆ ಈ ಹಣವನ್ನು ಕೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಕರ್ಣಾಟಕ ಮೆಡಿಕಲ್ ಕಾಲೇಜಿನ ಬಗ್ಗೆ ಹಣ ಕೇಳಿರತಕ್ಕದ್ದು ಸರಿ. ಖಾದಿ ಕೇಂದ್ರ ಸ್ಥಾಪನೆಗಳ ಬಗ್ಗೆ 35 ಸಾವಿರ ರೂಪಾಯಿಗಳನ್ನು ಕೇಳಿದ್ದಾರೆ. ನಮ್ಮಲ್ಲಿ ಗ್ರಾಮ ಕೈಗಾರಿಕೆಗಳು ಬೆಳೆಯಬೇಕಾದದ್ದು ಅಗತ್ಯ. ನಮ್ಮಲ್ಲಿ ಭತ್ತದ ಬೆಳೆಯನ್ನು ಹೆಚ್ಚು ಮಾಡಬೇಕಾದದ್ದು ಬಹಳ ಮುಖ್ಯ. ಈ ಹಿಂದೆ ಕಂಟ್ರೋಲ್ ಕಾಲದಲ್ಲಿ ಅಕ್ಕಿಯನ್ನು ಕೊಂಡು ಏನು ಕಷ್ಟವನ್ನು ಅನುಭವಿಸಿದ್ದೇವೆಂಬ ಅನುಭವ ಎಲ್ಲರಿಗೂ ಇದೆ. ಕಂಟ್ರೋಲ್ ಕಾಲದ ಅನೀತಿಗಳು ಮತ್ತೆ ತಲೆ ಹಾಕದಂತೆ ನೋಡಿಕೊಳ್ಳಬೇಕು. ಇನ್ನು ಈ ಭತ್ತವನ್ನು ಯಾವ ರೀತಿ ಶೇಖರಣೆ ಮಾಡಬೇಕೆಂಬ ವಿಚಾರದಲ್ಲಿ ನಾವು ಹೆಚ್ಚು ಎಚ್ಚರಿಕೆ ತೆಗೆದುಕೊಳ್ಳಬೇಕಾಗಿದೆ. ಬಹಳ ದಾಸ್ತಾನು ಕೆಟ್ಟುಹೋಗುತ್ತದೆ. ಹಿಂದೆ ಪ್ರತಿ ಡಿಪೋದಲ್ಲಿಯೂ ನೂರಾರು ಪಲ್ಲ ಭತ್ತ ಗೆದ್ದಲು ಹತ್ತಿ ನಷ್ಟವಾಗಿ ಹೋಯಿತು. ಇಷ್ಟೇ ಅಲ್ಲದೆ ಇಲಿ ಹೆಗ್ಗಣಗಳ ಕಾಟವನ್ನು ತಪ್ಪಿಸಬೇಕು. ಆದುದರಿಂದ ಸರ್ಕಾರದವರು ಭದ್ರವಾದ ವೇರ್‌ಹೌಸುಗಳ ಅನುಕೂಲ ಕಲ್ಪಿಸಬೇಕಾದದ್ದು ಅತ್ಯಗತ್ಯ. ಹಿಂದೆ ಕಂಟ್ರೋಲಿದ್ದಾಗ ಕೊಂಡ ಭತ್ತದಲ್ಲಿ ಬಹಳ ನಷ್ಟವಾಗಿದೆ. ಆ ಬಗ್ಗೆ ಲೆಕ್ಕಗಳನ್ನೂ

(ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್.)

ಆಡಿಟ್ ಇಲಾಖೆಯವರು ತನಿಖೆ ಮಾಡುತ್ತಿದ್ದಾರೆ. ಸರ್ಕಾರದವರು ಈ ವಿಚಾರಕ್ಕೆ ತೀವ್ರ ಗಮನ ಕೊಟ್ಟು ಧಾನ್ಯಗಳು ಹಾಗೆ ಕೆಡದಿರಲು ಏರ್ಪಾಡನ್ನು ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಹೀಗೆ ಕೇವಲ ಅಗತ್ಯವಿರತಕ್ಕ ಉದ್ದೇಶಗಳಿಗೋಸ್ಕರವಾಗಿ ಹಣವನ್ನು ಕೇಳಿರುವುದರಿಂದ ನಾನು ಈ ಸಪ್ಲಿಮೆಂಟರಿ ಗ್ರಾಂಟುಗಳನ್ನು ಅನುಮೋದಿಸುತ್ತೇನೆ.

†ಶ್ರೀ ಎಚ್. ಎಂ. ಗಂಗಾಧರಯ್ಯ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, 1957-58ನೆಯ ಸಾಲಿನ ಸಪ್ಲಿಮೆಂಟರಿ ಎಸ್ಟಿಮೇಟುಗಳ ಬಗ್ಗೆ ಸಭೆಯ ಮುಂದೆ ಸರ್ಕಾರದವರು ಮಂಡಿಸಿರತಕ್ಕ ಈ ಡಿಮ್ಯಾಂಡ್‌ಗಳ ಮೇಲೆ ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂಬ ಉದ್ದೇಶದಿಂದ ನಾನೀಗ ಎದ್ದು ನಿಂತಿದ್ದೇನೆ. ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ಟಿ. ಎನ್. ಕೆಂಪಹೊನ್ನಯ್ಯನವರು ತುಮಕೂರಿನ ಫಸ್ಟ್ ಗ್ರೇಡ್ ಕಾಲೇಜಿನ ವಿಷಯವನ್ನಾಗಲೇ ಸಮೂದಿಸಿದ್ದಾರೆ. ತುಮಕೂರಿನಲ್ಲಿ ಫಸ್ಟ್ ಗ್ರೇಡ್ ಕಾಲೇಜಿಗಾಗಿ ಒಂದು ಕಟ್ಟಡ ಕಟ್ಟಿಸಲು ಆರು ಲಕ್ಷ 25 ಸಾವಿರಕ್ಕೆ ಒಂದು ಅಂದಾಜ ತಯಾರಾಗಿದೆ. ಇದನ್ನು ವಿಶ್ವವಿದ್ಯಾನಿಲಯದ ಕೌನ್ಸಿಲ್‌ನವರೂ ಕೂಡ ತೀರ್ಮಾನಮಾಡಿ ಆ ಮೊಬಲಗಿನಲ್ಲಿ ಒಂದು ಕಟ್ಟಡ ಕಟ್ಟಿಸಲು ಒಪ್ಪಿರುತ್ತಾರೆ. ಈ ಹಿಂದೆ ಇದರ ಬಗ್ಗೆ ಒಂದು ಲಕ್ಷ ರೂಪಾಯಿಗಳನ್ನು ಅವರು ಮಂಜೂರು ಸಹ ಮಾಡಿದ್ದರು. ಇಷ್ಟೆಲ್ಲಾ ಆಗಿದ್ದುದರಿಂದ ಇನ್ನೇನು ಅಲ್ಲಿ ಕಟ್ಟಡ ಬೇಗ ಆಗುತ್ತದೆ ಎಂಬುದಾಗಿ ನಾವೆಲ್ಲ ನಿರೀಕ್ಷಣೆ ಮಾಡಿಕೊಂಡಿದ್ದೆವು. ಈ ವಿಚಾರ ಮಾನ್ಯ ಸಭಾಪತಿಗಳಿಗೂ ಗೊತ್ತಿರಬಹುದು. ಆದರೆ ತುಮಕೂರಿನಲ್ಲಿರುವ ಕಾಲೇಜಿನ ವಿಚಾರ ಇತರ ಜಿಲ್ಲೆಗಳಲ್ಲಿರುವ ಹಾಗಿಲ್ಲ. ಈ ದಿವಸ ತುಮಕೂರು ಫಸ್ಟ್ ಗ್ರೇಡ್ ಕಾಲೇಜಿನಲ್ಲಿ 2,000 ವಿದ್ಯಾರ್ಥಿಗಳಿದ್ದಾರೆ ಆ ಪೈಕಿ 200-250 ವಿದ್ಯಾರ್ಥಿನಿಯರಿರುತ್ತಾರೆ. ಈ ವಿದ್ಯಾರ್ಥಿನಿಯರಿಗಾದರೂ ಅಲ್ಲಿ ವಿರಾಮ ಕಾಲದಲ್ಲಿ ವಿಶ್ರಾಂತಿ ಪಡೆಯುವುದಕ್ಕೆ ಒಂದು ಕೊಠಡಿಯಿರುವುದಿಲ್ಲ. ಹೀಗೆಲ್ಲ ತೊಂದರೆಯಾಗಿ ಆ ಹೆಣ್ಣುಮಕ್ಕಳು ಮರದ ಕೆಳಗೆ ಕುಳಿತು ಕಾಲಹರಣ ಮಾಡತಕ್ಕ ಸ್ಥಿತಿ ಬಂದಿದೆ. ದಾರಿಯಲ್ಲಿ ಹೋಗತಕ್ಕ ಜನರು ಆ ಹೆಣ್ಣುಮಕ್ಕಳನ್ನು ಹಾಸ್ಯ ಮಾಡತಕ್ಕ ಪರಿಸ್ಥಿತಿ ಕೂಡ ಬಂದಿದೆ.

ಈ ಸ್ಥಿತಿಯಲ್ಲಿ ಮಕ್ಕಳು ಇದ್ದಾರೆ. ಏತಕ್ಕೆ ಇಂತಹ ವಿದ್ಯಾಭ್ಯಾಸವನ್ನು ಅವರಿಗೆ ಕೊಡಬೇಕು ? ಅನೇಕ ಸಾರಿ ಈ ಬಗ್ಗೆ ವೈಸ್ ಚಾನ್ಸಲರ್ ಅವರಲ್ಲಿ ಮನವಿ ಮಾಡಿದ್ದೇವೆ. ಎಲ್ಲಾ ಕಡೆಗಳಲ್ಲೂ ಕಟ್ಟಡಗಳು ಏರುತ್ತಿರುವಾಗ ತುಮಕೂರಿನ ಜನಗಳು ಏನು ಅಪರಾಧ ಮಾಡಿದ್ದಾರೆ ? ವಿದ್ಯಾರ್ಥಿಗಳಿಗೋಸ್ಕರ ಇತರ ಪ್ರದೇಶಗಳಲ್ಲಿ ಕಟ್ಟಡ ಕಟ್ಟುವುದಕ್ಕೆ ಎಷ್ಟರಮಟ್ಟಿಗೆ ಅನುಕೂಲ ದೊರೆತಿದೆಯೋ ಅಷ್ಟರಮಟ್ಟಿಗೆ ಅನುಕೂಲ ಇಲ್ಲಿ ದೊರೆಯಲಿಲ್ಲವೆ? ಬೆಂಗಳೂರು ಮೈಸೂರು ಪಟ್ಟಣಗಳಲ್ಲಿರುವ ಕಾಲೇಜುಗಳಲ್ಲಿ ಒಂದು ಕಟ್ಟಡದ ಮೇಲೆ ಇನ್ನೊಂದು ಕಟ್ಟಡ ಏರುತ್ತಿದೆ. ನಮಗೇನಾದರೂ ಕಟ್ಟಡಬೇಕು ಎಂದು ಕೇಳಿದರೆ, ನಿಮ್ಮಿಂದ ಕೋಟಾ ಕೊಡಬೇಕು ಎಂದು ಹೇಳುತ್ತಾರೆ. ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿ ಕಟ್ಟಡ ಕಟ್ಟಬೇಕಾದರೆ ಯಾವ ಕಾಲದಲ್ಲೂ ಯಾವ ಕೋಟಾವನ್ನೂ ಕೇಳುವುದಿಲ್ಲ. ಎಷ್ಟು ಕಟ್ಟಡ ಬೇಕಾದರೂ, ಎಷ್ಟು ಮಹಡಿಗಳನ್ನು ಬೇಕಾದರೂ ಕಟ್ಟುವುದಕ್ಕೆ ಹಿಂಜರಿಯುವುದಿಲ್ಲ. ಪ್ರಜಾ ಪ್ರಭುತ್ವ ಸರ್ಕಾರದವರು ವಿದ್ಯಾರ್ಥಿಗಳಿಗೆ ಬೇಕಾದ ಅನುಕೂಲಗಳನ್ನು ಒದಗಿಸಿಕೊಡದೆ ಈ ರೀತಿ ವಿದ್ಯಾಭ್ಯಾಸವನ್ನು ಕೊಡುವುದು ಸರಿಯಲ್ಲ. ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸಮಾಡುವ ಮಕ್ಕಳಿಗೆ ಎಲ್ಲಾ ಸೌಲಭ್ಯಗಳನ್ನು ಇತರರ ಮಟ್ಟದಲ್ಲಿ ಒದಗಿಸದಿದ್ದರೂ ಕಾಲೇಜು ದರ್ಜೆಗೆ ಬೇಕಾದ ಸರಿಯಾದ ಅನುಕೂಲಗಳನ್ನು ಒದಗಿಸಿಕೊಡದಿದ್ದರೆ, ಇಂತಹ ವಿದ್ಯಾಭ್ಯಾಸವನ್ನು ನಿಲ್ಲಿಸುವುದೇ ಉತ್ತಮ. ಒಂದು ಸಾರಿ ನಮ್ಮ ರಾಜ್ಯಪಾಲರು ಕಾಲೇಜಿನ ಅಸ್ತಿಭಾರ ಶಿಲಾ ಪ್ರತಿಷ್ಠೆ ಮಾಡಿದರು. ಆ ಶಿಲೆ ಈಗ ಎಲ್ಲಿ ಬಿದ್ದಿದೆಯೋ ಗೊತ್ತಿಲ್ಲ. ಇದಕ್ಕಾಗಿ 75 ಎಕರೆ ಜಮೀನನ್ನು ಅಕ್ವೈರು ಮಾಡಿದ್ದರು. ಅದು ಎಂತಹ ಸ್ಥಳದಲ್ಲಿದೆ ಅಂದರೆ ಶಾಂತನಿಕೇತನವೇ ಆಗಬಹುದಾಗಿತ್ತು. ಅದು ಪ್ರಕೃತಿ ಸೌಂದರ್ಯದ ವಾತಾವರಣದಲ್ಲಿದೆ. ಏತಕ್ಕೋಸ್ಕರ ಈ ಕಟ್ಟಡವನ್ನು ಕಟ್ಟುವುದಕ್ಕೆ ಹಿಂಜರಿಯುತ್ತಿದ್ದಾರೋ ಗೊತ್ತಿಲ್ಲ. ಇನ್ನೊಂದು ಸಿದ್ಧಗಂಗಾ ಕ್ಷೇತ್ರವಿದೆ. ಅಲ್ಲಿನ ಕಾಲೇಜಿಗೆ ಹುಡುಗರು ದಿನವೂ ನಡೆಯುತ್ತಾ ಹೋಗುತ್ತಿದ್ದಾರೆ. ತುಮಕೂರು ಪಟ್ಟಣದಲ್ಲಿ ತುಂಬ ಅನುಕೂಲವಿದೆ. ಸರ್ಕಾರದವರು ಈ ಕಡೆ ಗಮನ ಕೊಟ್ಟು ಆದಷ್ಟು ಜಾಗ್ರತೆ ಕಟ್ಟಡವನ್ನು ಕಟ್ಟುವಂತೆ ವಿಶ್ವವಿದ್ಯಾನಿಲಯದವರಿಗೆ ಸೂಚನೆ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ಈಗ ಹತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ ಅವರು 16 ಲಕ್ಷ ರೂಪಾಯಿಗಳನ್ನು ಕೇಳಿದ್ದರು. ಈ ಹತ್ತು ಲಕ್ಷ ರೂಪಾಯಿಗಳಲ್ಲಿಯೇ ಕಟ್ಟಡದ ಕೆಲಸ ಪ್ರಾರಂಭಮಾಡಬೇಕೆಂದು ಅವರಿಗೆ ಸೂಚನೆ ಕೊಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತಿದ್ದೇನೆ.

ಇನ್ನು 24ನೆಯ ಡಿಮ್ಯಾಂಡ್ ವಿಷಯ. ನಿಮ್ನ ಪಂಗಡದವರಿಗೆ ಮನೆ ಕಟ್ಟುವುದಕ್ಕೆ, ವಿದ್ಯಾಭ್ಯಾಸಕ್ಕೆ ಮತ್ತು ಅವರಿಗೆ ಕಮ್ಯೂನಿಟಿ ಸೆಂಟರ್ ಇತ್ಯಾದಿ, ಕೆಲಸ ಕಾರ್ಯಗಳಿಗೆಂದು 12 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಕೊಡುವ ಹಣದ ಜೊತೆಗೆ ನಮ್ಮ ಸರ್ಕಾರದವರು ಸ್ವಲ್ಪ ಹಣ ಖರ್ಚುಮಾಡುತ್ತೇವೆಂದು ಹೇಳಿದ್ದಾರೆ. ಈ ಯೋಜನೆ ಪ್ರಾರಂಭವಾದಾಗಿನಿಂದಲೂ ನೋಡುತ್ತಿದ್ದೇನೆ. ಇನ್ನೇನು ಮಾರ್ಚಿ 30ನೇ ತಾರೀಖು ಮುಗಿಯುತ್ತದೆ ಎನ್ನುವಾಗ ಈ ಒಂದು ತಿಂಗಳಿನಲ್ಲಿ ತಾಲ್ಲೂಕ್ ಆಫೀಸಿನಲ್ಲಿ ಹೋಗಿ ನೋಡಿದರೆ, ಸಾವಿರಾರು ಜನರು ಅಲ್ಲಿ ಬಂದಿರುತ್ತಾರೆ. ಏತಕ್ಕೆ ಅಂದರೆ ಮನೆ ಕಟ್ಟಿಸುವವರು, ಕಿಟಕಿ, ಬಾಗಿಲುಗಳಿಗೆ ಲೈಸೆನ್ಸ್ ಪಡೆಯುವವರು, ಹೀಗೆ ಎಲ್ಲಾ ತರಹ ಕೆಲಸಗಳು ಆಗಲೇ ನಡೆಯಬೇಕಾಗಿರುತ್ತದೆ. ಆದರೆ ಎರಡು-ಮೂರು ವರ್ಷಗಳು ಕಳೆಯುವುದರೊಳಗೆ ಒಂದು ಮನೆಯೂ ಇರುವುದಿಲ್ಲ, ಕಿಟಕಿ, ಬಾಗಿಲು ಒಂದೂ ಇರುವುದಿಲ್ಲ. ಏಕೆಂದರೆ ಆತುರಾತುರವಾಗಿ ಕೆಲಸಗಳು ನಡೆದು ವಿಶೇಷವಾಗಿ ನಷ್ಟವಾಗುತ್ತದೆ. ಸಾರ್ವಜನಿಕರ ಹಣ ಈ ರೀತಿಯಾಗಿ ಪೋಲು ಆಗಬಹುದೇ ? ಸರ್ಕಾರದವರಿಗೆ ನಿಮ್ನ ಪಂಗಡದವರೂ ಅಭಿವೃದ್ಧಿಯಾಗಬೇಕು; ಮತ್ತು ಅವರಿಗೂ ಒಂದೊಂದು ಮನೆಯನ್ನು ಕಟ್ಟಿಸಿಕೊಡಬೇಕೆಂಬ ಉದ್ದೇಶ ಇರುವುದಾದರೆ, ಹಣ ಸರಿಯಾಗಿ ವಿನಿಯೋಗವಾಗಬೇಕೆಂಬ ಉದ್ದೇಶದಿಂದಲಾದರೂ ಕಾಲಕ್ಕೆ ಸರಿಯಾಗಿ ಗ್ರಾಂಟನ್ನು ಕೊಟ್ಟು ಸರಿಯಾದ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಮಾಡಲಿ. ಇಲ್ಲದಿದ್ದರೆ, ವಾಸಿಸಲಕ್ಕೆ ಮನೆ ಮಠಗಳಿಲ್ಲದೆ, ಹೊದಿಯುವುದಕ್ಕೆ ಬಟ್ಟೆ ಬರೆ ಇಲ್ಲದೆ ತಿನ್ನುವುದಕ್ಕೆ ಆಹಾರವಿಲ್ಲದೆ ಇನ್ನೂ 20 ವರ್ಷಗಳು ಹಾಗೆಯೇ

ಇರಬೇಕಾಗುತ್ತದೆ. ಸಾರ್ವಜನಿಕರ ಹಣ ಸರಿಯಾದ ರೀತಿಯಲ್ಲಿ ವಿನಿಯೋಗವಾಗಬೇಕು. ಹಿಂದೆ ಒಂದೊಂದು ಸಾರಿ ಹಳ್ಳಿಗಳಲ್ಲಿ ಸಮ್ಮೇಳನಗಳನ್ನು ಏರ್ಪಡಿಸುವುದು, ಸಹಭೋಜನಗಳನ್ನು ಮಾಡಿಸುವುದು, ಅನೇಕ ದೊಡ್ಡ ದೊಡ್ಡ ಮನುಷ್ಯರನ್ನು ನಮ್ಮ ಹಳ್ಳಿಗಳ ಕಡೆ ಕರೆದುಕೊಂಡು ಹೋಗಿ ನಮ್ಮ ಪಂಗಡದವರಿಗೆ ಕೆಲವು ಒಳ್ಳೆಯ ಸೂಚನೆಗಳನ್ನು ಕೊಡಿಸುವುದು ಹೀಗೆಲ್ಲಾ ಮಾಡುತ್ತಿದ್ದೆವು. ಈ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಸರ್ಕಾರದವರು ಹಿಂದೆ ಬಹಳವಾಗಿ ಪ್ರೋತ್ಸಾಹ ಕೊಡುತ್ತಿದ್ದರು. ಅದಕ್ಕೆ ತಕ್ಕ ಹಣವನ್ನು ವರ್ಷವರ್ಷವೂ ಒದಗಿಸುತ್ತಾ ಇದ್ದರು. ಈ ವರ್ಷ ಅದನ್ನೂ ಕೈಬಿಟ್ಟಿದ್ದಾರೆ. ನಮ್ಮ ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಮುಂದೆ ಬರಬೇಕಾಗಿದೆ. ನಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕಾಗಿದೆ. ಅವರು ಎಲ್ಲಾ ದೇವಸ್ಥಾನಗಳಿಗೂ ಹೋಗಬೇಕಾಗಿದೆ. ಸಾರ್ವಜನಿಕರ ಸ್ಥಳಗಳನ್ನು ಉಪಯೋಗಿಸಬೇಕಾಗಿದೆ. ಇಂತಹ ಅನುಕೂಲ ಅವರಿಗೆ ಇವೊತ್ತಿನವರೆಗೂ ಸರಿಯಾಗಿ ದೊರಕಿಲ್ಲ ಇನ್ನು ಮುಂದೆ ಅವರೆಲ್ಲರೂ ಅಭಿವೃದ್ಧಿಯಾಗಬೇಕಾಗಿದೆ. ಈ ದಿವಸ ಹತ್ತಾರು ಜನ ನಿಮ್ಮ ಪಂಗಡದವರು ಸೇರಿಕೊಂಡು ಸಮ್ಮೇಳನಗಳನ್ನು ಮಾಡಬೇಕು.

ಇನ್ನು ಪಾನನಿರೋಧದ ವಿಷಯ. ಇದು ಬಹಳ ಶೋಚನೀಯಕರವಾದ ವಿಷಯವಾಗಿದೆ. ಈ ವಿಷಯದಲ್ಲಿ ಅವರಿಗೆ ತಿಳಿವಳಿಕೆ ಹೇಳಬೇಕಾದುದು ಅತ್ಯಾವಶ್ಯಕ. ಇಂತಹ ಕಾಲದಲ್ಲಿ ಈ ಸಮ್ಮೇಳನಗಳನ್ನು ನಡೆಸುವುದು, ಸಹಭೋಜನಗಳನ್ನೇರ್ಪಡಿಸುವುದು ಇಂತಹ ಬಾಬುಗಳಿಗೆ ಕೊಡುತ್ತಿದ್ದಂಥ ಗ್ರಾಂಟನ್ನು ತೆಗೆದುಹಾಕಿದ್ದಾರೆ. ಇವೊತ್ತಿನ ದಿವಸ ಅವರಿಗೆ ಮನೆಗಳನ್ನು ಕಟ್ಟುವುದರಲ್ಲಿ ಹಣ ವಿಶೇಷವಾಗಿ ದುರ್ವಿನಿಯೋಗವಾಗುತ್ತಿದೆ. 100 ಜನಗಳು ಇರುವ ಕಡೆಯಲ್ಲಿ ಸದ್ಯಕ್ಕೆ ಕೇವಲ ಹತ್ತು ಜನರಿಗಾದರೂ ಸರಿಯಾಗಿ ಮನೆಯನ್ನು ಕಟ್ಟಿಸಿಕೊಟ್ಟರೂ ಸಾಕು. ಅದೇ ಮಹಾ ಸಾಧನೆಯೆಂದು ತಿಳಿದುಕೊಳ್ಳುವವರಲ್ಲಿ ನಾನೂ ಒಬ್ಬ. ಇನ್ನೂ ಇದಕ್ಕೆ ಹಣವನ್ನು ಒದಗಿಸದೇ ಇದ್ದರೆ, ಜಾಗ್ರತೆಯಾಗಿ ಈ ಬಾಬಿಗೆ ಹಣವನ್ನೊದಗಿಸಿ ಎಂದು ಪ್ರಾರ್ಥಿಸುತ್ತೇನೆ.

ಸಭಾಪತಿಯವರು.—ಈ ಐಟಂ ತೆಗೆದುಹಾಕಿಲ್ಲ. ಈ ಐಟಂಗೆ ಮೊದಲೇ ಹೆಚ್ಚಿಗೆ ಹಣ ಒದಗಿಸಿದ್ದಾರೆಂದು ಈಗ ಸೇರಿಸಲಿಲ್ಲ. ಇದು ಸಪ್ಲಿಮೆಂಟರಿ ಗ್ರಾಂಟಾಗಿರುವುದರಿಂದ ಮತ್ತು ಒರಿಜಿನಲ್ ಪ್ರೊವಿಷನಲ್ ಬಡ್ಜೆಟ್ಟಿನಲ್ಲಿ ಈ ಐಟಂ ಸೇರಿರುವುದರಿಂದ ಪ್ರಾಯಶಃ ಹೆಚ್ಚಿಗೆ ಸೇರಿಸಿಲ್ಲ. ಕಮ್ಯೂನಿಟಿ ಸೆಂಟರ್ಸಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ಎಚ್. ಎಂ. ಗಂಗಾಧರಯ್ಯ.—ಪ್ರತ್ಯೇಕವಾಗಿ ಇಂತಹ ಸಮ್ಮೇಳನ ನಡೆಸುವುದಕ್ಕಾಗಿಯೇ ಕೊಡುವ ಗ್ರಾಂಟು ಎಂದು ಒಂದು ಐಟಂ ಇತ್ತು. ನಾವು ಇಷ್ಟು ಹೊತ್ತಿಗೆ ಸಭೆಗಳನ್ನು ಕರೆಯುತ್ತಾ ಇದ್ದೆವು. ಇದರಿಂದ ಆ ಐಟಂನ್ನು ತೆಗೆದುಹಾಕಿದ್ದಾರೆ. ನಾವು ಇಂತಹ ಸಮ್ಮೇಳನಗಳನ್ನು ಹತ್ತಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದೆವು. ಈ ಮಾನ್ಯ ಸಭೆಯ ಅನೇಕ ಸದಸ್ಯರೂ ಕೂಡ ನಮ್ಮ ಜನಗಳಿಗೆ ತಿಳಿವಳಿಕೆ ಹೇಳುತ್ತಿದ್ದರು. ಪ್ರಾಯಶಃ ಇಷ್ಟು ಹೊತ್ತಿಗೆ ನಮಗೆಲ್ಲಾ ಈ ವಿಚಾರದಲ್ಲಿ ತಿಳಿವಳಿಕೆ ಬರಬೇಕಾಗಿತ್ತು, ಖಂಡಿತವಾಗಿ ಆ ಐಟಂನ್ನೇ ತೆಗೆದುಹಾಕಿದ್ದಾರೆ. ಅದಕ್ಕೆ ಒದಗಿಸಬೇಕಾದ ಹಣವನ್ನು ಈಸಲ ಒದಗಿಸಿಲ್ಲ. ಅದು ಬಹಳ ಅಗತ್ಯವಾಗಿದೆ. ಅದನ್ನು ಉಳಿಸಿಕೊಂಡು ಬರಬೇಕು. ಇದು ಅತ್ಯಾವಶ್ಯಕ. ಅದಕ್ಕೆ ಕೊಟ್ಟಂತಹ ಗ್ರಾಂಟನ್ನು ಇನ್ನಾವುದೋ ರೀತಿಯಲ್ಲಿ ದುರ್ವಿನಿಯೋಗ ಮಾಡುವುದು ಸರಿಯಲ್ಲ. ಇಂತಹ ಗ್ರಾಂಟನ್ನು ವರ್ಷದ ಪ್ರಾರಂಭದಲ್ಲಿಯೇ ಕೊಡುವಂತೆ ಏರ್ಪಾಡು ಮಾಡಬೇಕು. ಇದನ್ನು ಸಂಪೂರ್ಣವಾಗಿ ನಮಗೆ ಕೊಡಿಸಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಹೆಚ್ಚಿಗೆ ಹಣವನ್ನು ಮನೆ ಕಟ್ಟಿಕೊಳ್ಳುವುದಕ್ಕೆ ಕೊಡುತ್ತೇವೆಂದು ಹೇಳುತ್ತಾರೆ. 1948ರಲ್ಲಿಯೇ ಈ ಯೋಜನೆ ಪ್ರಾರಂಭವಾಗಿದೆ. ಈಗಾಗಲೇ ಆ ಕಾಲದಲ್ಲಿ ಕಟ್ಟಿದ್ದಂತಹ ಅನೇಕ ಮನೆಗಳು ಇಲ್ಲವೇ ಇಲ್ಲ. ಈ ರೀತಿ ಹಣವನ್ನು ವಿನಿಯೋಗಿಸುವುದಕ್ಕೆ ಬದಲಾಗಿ ಈ ಒಟ್ಟು ಹಣವನ್ನು ನಿಮ್ಮ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸುವುದು ಲೇಸು. ಈಗ ಅವರಲ್ಲಿ ಶೇಕಡ ಐದು ಮಂದಿ ಮಾತ್ರ ವಿದ್ಯಾವಂತರಿದ್ದಾರೆ. ಇನ್ನುಳಿದ ಶೇಕಡ 95 ಮಂದಿ ಅವಿದ್ಯಾವಂತರೇ. ಹೆಚ್ಚು ಹಣವನ್ನು ಇವರ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಬೇಕು. ನಿಮ್ಮ ಪಂಗಡದ ಸ್ಥಿತಿಗತಿ ಉತ್ತಮಪಡಿಸಲು ಕೆಲವೇ ವರ್ಷಗಳು ಮಾತ್ರ ಅಂತಹ ಅನುಕೂಲಗಳನ್ನು ಕಲ್ಪಿಸಿಕೊಟ್ಟರೆ ಸಾಕು ಎಂದು ಹೇಳತಕ್ಕವರಾಗಿದ್ದಾರೆ. ಅದು ತಪ್ಪು. ಇವತ್ತಿನ ದಿವಸ ಅಮೆರಿಕಾದ ನೀಗ್ರೋ ಜನರ ವಿದ್ಯಾವಂತರ ಸಂಖ್ಯೆ ಶೇಕಡ 90 ಇದೆ. ನಮ್ಮದು 50 ಆದರೂ ಆಗಬೇಕು. ಹಾಗಾಗದೆ ಹೋದರೆ ಎಲ್ಲಾ ವಿದ್ಯಾವಂತರ ಜನಸಂಖ್ಯೆ ಜಾಸ್ತಿ ಆಗುವುದಿಲ್ಲ. ದೇಶದಲ್ಲಿ ವಿದ್ಯಾವಂತರ ಸಂಖ್ಯೆಯನ್ನು ಏರಿಸಬೇಕು. ಪ್ರಾಥಮಿಕ ದರ್ಜೆ, ಮಾಧ್ಯಮಿಕ ದರ್ಜೆ, ಪ್ರೌಢ ಶಿಕ್ಷಣದ ದರ್ಜೆಯವರೆಗೂ ಎಲ್ಲರಿಗೂ ಕಡ್ಡಾಯವಾಗಿ ವಿದ್ಯಾಭ್ಯಾಸವನ್ನು ಕೊಡುವುದಕ್ಕೋಸ್ಕರವಾಗಿ ಹಣವನ್ನು ವಿನಿಯೋಗಿಸಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಸಭಾಪತಿಯವರು.—ರಾಜ್ಯದ ಬಡ್ಜೆಟ್ಟಿನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಬಾಬುಗಳಿಗೆ ಹೆಚ್ಚು ಹಣವನ್ನು ಮೊದಲಿನಿಂದಲೂ ಒದಗಿಸುತ್ತಲೇ ಬಂದಿದ್ದಾರೆ. ಅದನ್ನು ತೆಗೆದುಹಾಕಿಲ್ಲ. ಹೆಚ್ಚಿಗೆ ಖಚಾದಗಿರುವುದರಿಂದ ಇದರಲ್ಲಿ ಸೇರಿಸಿದ್ದಾರೆ.

ಶ್ರೀ ಎಚ್. ಎಂ. ಗಂಗಾಧರಯ್ಯ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ್ಗೆ ಈ ವಿಷಯದಲ್ಲಿ ಹೆಚ್ಚಿಗೆ ವಿವರಣೆ ಕೊಡಬೇಕೆಂದು ಹೇಳಿ ಈ ಸಪ್ಲಿಮೆಂಟರಿ ಎಸ್ಟಿಮೇಟನ್ನು ನಾನು ಸ್ವಾಗತಿಸುತ್ತೇನೆ.

ಡಾ॥ ಎಸ್. ಸಿ. ನಂದೀಮಠ್ (ನಾಮನಿರ್ದೇಶ ಹೊಂದಿದವರು).—ಮಾನ್ಯ ಸಭಾಪತಿಗಳೇ ಈಗ ಸರ್ಕಾರದವರು ನಮ್ಮ ಮುಂದೆ ಇಟ್ಟಿರುವ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ವಿಷಯದ ಬಗ್ಗೆ ನನಗೆ ಸ್ವಲ್ಪ ಮಾತನಾಡಬೇಕೆಂಬ ಆಪೇಕ್ಷೆ ಇದೆ. ಮೊದಲು ಡಿಮ್ಯಾಂಡ್ ನಂಬರ್ 13ನ್ನು ತೆಗೆದುಕೊಳ್ಳುತ್ತೇನೆ. ಅದರೊಳಗೆ ಮೈಸೂರು ಗೆಜಟಿಯರ್ ವಿಷಯ ಇದೆ. “The post of the Chief Editor and other staff required for revision and publication of *Mysore Gazetteer* were sanctioned in October 1957. An advance of Rs. 9,000 was made from the Contingency Fund as this constituted a new Service” ಎಂದು ಹೇಳಿದೆ. ಇದರ ಬಗ್ಗೆ ನಾನು ಸ್ವಲ್ಪ ಮಾತನಾಡುತ್ತೇನೆ. ಹಳೆಯ ಮೈಸೂರು ರಾಜ್ಯದಲ್ಲಿ ಗೆಜಿಟಿಯರ್ ಬಹಳ ಚೆನ್ನಾಗಿದೆ. ಅವುಗಳ ಪ್ರತಿಗಳು ಬೇಕಾದರು ಸಿಕ್ಕುತ್ತವೆ. ಹಿಂದೆ ರೈಸ್ ಗೆಜಿಟಿಯರ್ ಮಾಡಿದರೂ ಅಮೇಲೆ ಶ್ರೀ ಹಯವದನರಾಯರ ಎಡಿಟರ್‌ಷಿಪ್,

(ಡಾ|| ಎಸ್. ಸಿ. ನಂದೀಮಠ್)

ನಲ್ಲಿ ಮೈಸೂರು ಗೆಜಿಟಿಯರ್ ಪ್ರತಿಗಳು ಚೆನ್ನಾಗಿ ಆಗಿವೆ. ಆದರೂ ಅವು ಅಗತ್ಯವಾಗಿ ರಿವಿಷನ್ ಆಗಬೇಕು. ಇದರ ಸಂಗಡ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಹಳೆಯ ಮೈಸೂರು ರಾಜ್ಯದಲ್ಲಿ ಗೆಜಿಟಿಯರ್ಸ್ ಮಾಡಿದ್ದಾರೆ. ಅದರಂತೆ ಕರ್ಣಾಟಕದ ಇತರ ಭಾಗದಲ್ಲಿ ಎಂದರೆ ಮುಂಬೈ ರಾಜ್ಯದ ನಾಲ್ಕು ಜಿಲ್ಲೆಯೊಳಗೆ ಗೆಜಿಟಿಯರ್ಸ್ ಮಾಡಿದ್ದರು. ಅವು 1893ನೆಯ ಇಸ್ವಿಯಲ್ಲಿ ಮಾಡಲ್ಪಟ್ಟವು. ಇವೊತ್ತಿನವರೆಗೂ ಅವುಗಳ ಯಾವ ಪ್ರತಿಯೂ ಸಿಕ್ಕಲ್ಲ. ಅವುಗಳಿಗೆ ಬಹಳ ಕೊರತೆ ಇತ್ತು. ಅದಕ್ಕಾಗಿ ಮುಂಬೈ ಸರ್ಕಾರದವರು ಎಂಟು ಹತ್ತು ವರ್ಷಗಳ ಹಿಂದೆ ಅಲ್ಲಿ ಇರತಕ್ಕ ಗೆಜೆಟಿಯರ್ಸನ್ನು ಪುನರ್ ಮುದ್ರಣ ಮಾಡಬೇಕು ಎಂದು ಆರು ಜನಗಳನ್ನು ಒಳಗೊಂಡ ಒಂದು ಕಮಿಟಿಯನ್ನು ನೇಮಿಸಿದರು. ಅದರಲ್ಲಿ ನಾನು ಇದ್ದೆ. ಹತ್ತು ವರ್ಷಗಳು ಕಾರ್ಯಮಾಡಿ ಮೂರು ಜಿಲ್ಲೆಗಳ ಗೆಜೆಟಿಯರ್ಸ್ ಪ್ರಸಿದ್ಧಮಾಡಬೇಕೆಂದು ನಿರ್ಧಾರ ಮಾಡಿದೆವು. ಮಹಾರಾಷ್ಟ್ರಕ್ಕೆ ಒಂದು, ಗುಜರಾತಿಗೆ ಒಂದು ಮತ್ತು ಕರ್ಣಾಟಕಕ್ಕೆ ಒಂದು ಎಂದು ಮಾಡಿದ್ದೆವು. ಅದಗಲ್ಲಿ ಮಹಾರಾಷ್ಟ್ರದ್ದು ಪ್ರಸಿದ್ಧವಾಗಿದೆ. ಗುಜರಾತಿನದು ಮುದ್ರಣವಾಗುವುದರಲ್ಲಿತ್ತು. ಕರ್ಣಾಟಕದ ಬಗ್ಗೆ ಧಾರವಾಡ ಜಿಲ್ಲೆಯನ್ನು ತೆಗೆದುಕೊಂಡಿದ್ದೆವು. ಎಲ್ಲಾ ವಿಷಯ ಸಂಗ್ರಹವಾಗಿದೆ. ಅದು ಮುಗಿಯುವ ಹೊತ್ತಿಗೆ ಕರ್ಣಾಟಕ ರಾಜ್ಯ ಬಂತು. ಆಗ ಕರ್ಣಾಟಕದ ಗೆಜಿಟಿಯರ್ಸ್ ಅಷ್ಟಕ್ಕೇ ನಿಲ್ಲಿಸಿದರು. ಅಲ್ಲಿ ಸಂಗ್ರಹ ಆಗತಕ್ಕಂತ ವಿಷಯ ಹಾಗೆಯೇ ಉಳಿದಿದೆ. ಧಾರವಾಡ ವಿಷಯ ಎಲ್ಲ ವಿಚಾರವೂ ಸಂಗ್ರಹವಾಗಿದೆ. ಕರ್ಣಾಟಕದ ಇತಿಹಾಸವನ್ನು ಗೆಜಿಟಿಯರ್‌ಗೆ ಬೇಕಾದಷ್ಟು ಬರೆದಿದ್ದಾರೆ. ಅದು ಇನ್ನೂ ಮುದ್ರಣ ಆಗಿಲ್ಲ. ರೀಆರ್ಗನೈಜೇಷನ್ ಅದನಂತರ ಕರ್ಣಾಟಕ ವಿಶ್ವವಿದ್ಯಾನಿಲಯದವರು ಒಂದು ಠರಾವು ಪಾಸು ಮಾಡಿ ಅಲ್ಲಿಯ ನಾಲ್ಕು ಜಿಲ್ಲೆಯೊಳಗೆ ಗೆಜಿಟಿಯರ್ ರಿವೈಜ್ ಮಾಡುವ ಅಧಿಕಾರ ಆ ವಿಶ್ವವಿದ್ಯಾನಿಲಯಕ್ಕೆ ಕೊಡಿ ಎಂದು ಮುಂಬೈ ಸರ್ಕಾರವನ್ನು ಕೇಳಿದ್ದಾರೆ. "ಮೈಸೂರು ಸರ್ಕಾರದವರು ಒಪ್ಪಿಕೊಂಡರೆ ನಾವು ಕೊಡುತ್ತೇವೆ" ಎಂದು ಹೇಳಿದರು. ಅದಕ್ಕೆ ಅವರು ದುಡ್ಡು ತೆಗೆದು ಇಟ್ಟಿದ್ದಾರೆ. ನಾವು ಸರ್ಕಾರಕ್ಕೆ ವಿಶ್ವವಿದ್ಯಾನಿಲಯದಿಂದ ಬರೆದುಕೊಂಡಿದ್ದೇವೆ. ಅದು ಏನಾಯಿತು ಎನ್ನುವುದು ಗೊತ್ತಿಲ್ಲ. ಈಗ ಗೆಜಿಟಿಯರ್ ಏನು ತಯಾರು ಮಾಡುತ್ತಿದ್ದಾರೆ ಅದರೊಳಗೆ ಇದನ್ನು ಕೂಡಿಸಿಕೊಳ್ಳಬೇಕು ಎಂದು ಸರ್ಕಾರಕ್ಕೆ ನನ್ನ ಸೂಚನೆ ಇದೆ. 1873ನೆಯ ಇಸ್ವಿಯಿಂದ ಎಂದರೆ ಸುಮಾರು 80 ವರ್ಷಗಳ ಹಿಂದಿನದು. ಅದರಲ್ಲಿ ಇತಿಹಾಸದ ಮೇಲೆ, ಧರ್ಮದ ಮೇಲೆ, ಸಾಹಿತ್ಯದ ಮೇಲೆ ಎಷ್ಟೋ ಸಂಶೋಧನೆ ಆಗಿದೆ. ಈಗ ಈ ಎಲ್ಲ ವಿಷಯಗಳನ್ನೊಳಗೊಂಡು ಪ್ರಕಟಮಾಡುವುದು ಬಹಳ ಅಗತ್ಯ. ನಮಗೆ ಹೈದರಾಬಾದ್ ಜಿಲ್ಲೆಗಳು ಬಂದಿವೆ. ಆ ಜಿಲ್ಲೆಗಳ ಬಗ್ಗೆ ನಾವು ತೀರ ಕತ್ತಲೆಯಲ್ಲಿದ್ದೇವೆ, ನಮಗೆ ಅಲ್ಲಿಯ ವಿಷಯ ಗೊತ್ತಿಲ್ಲ, ಇತಿಹಾಸ ಗೊತ್ತಿಲ್ಲ. ಅಂಕೆ ಸಂಖ್ಯೆ ಗೊತ್ತಿಲ್ಲ, ಅದರಂತೆ ಮಂಗಳೂರು ಕಡೆ ವಿಷಯ ಗೊತ್ತಿಲ್ಲ. ಹೊಸ ಮೈಸೂರು ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳನ್ನು ಒಳಗೊಂಡಂಥ ಉತ್ತಮವಾದ ಗೆಜೆಯಟಿರ್ ಬರೆಯುವುದು ಬಹಳ ಅವಶ್ಯಕ ಇದೆ. ಸರ್ಕಾರದವರು ಈಗಾಗಲೇ ವಿಚಾರಮಾಡಿ ಒಂಭತ್ತು ಸಾವಿರ ತೆಗೆದಿಟ್ಟಿರುವುದು ಬಹಳ ಶ್ಲಾಘನೀಯ ಮತ್ತು ಅದಕ್ಕಾಗಿ ಸರಕಾರಕ್ಕೆ ನನ್ನ ಸಂಪೂರ್ಣ ಅಭಿನಂದನೆ ಇದೆ. ಅದರ ಸಂಗಡ ಮತ್ತೊಂದು ಸೂಚನೆ ಇದೆ, ಹಳೆಯ ಮೈಸೂರು ಸ್ಟೇಟಿಗೆ ಸಂಬಂಧಿಸಿದ್ದು ಮಾತ್ರವಲ್ಲದೆ ಇಡೀ ಮೈಸೂರು ರಾಜ್ಯಕ್ಕೆ ಆಗುವ ಹಾಗೆ ಇದಕ್ಕಿಂತ ಹೆಚ್ಚಿನ ಹಣವನ್ನು ಮುಂದಿನ ಬಡ್ಜೆಟ್ಟಿನಲ್ಲಿ ಪ್ರೊವೈಡ್‌ಮಾಡುತ್ತಾರೆಂದು ಆಶಿಸುತ್ತೇನೆ. ಗೆಜಿಟಿಯರ್ ತಯಾರುಮಾಡುವುದು ಒಳ್ಳೆಯದು ಮತ್ತು ಕಷ್ಟ ಕೆಲಸ. ಬಹಳ ದಿವಸಗಳಿಂದ ನಡೆಯುತ್ತಿದೆ. ಅದಕ್ಕಾಗಿ ತಜ್ಞರ ಸಮಿತಿ ನೇಮಿಸಬೇಕು. ಅದಕ್ಕೆ ಬೇಕಾಗುವ ಹಣ ಒಮ್ಮೆಲೇ ಕೊಡಬೇಕಾಗಿಲ್ಲ. ವರ್ಷೇ ವರ್ಷೇ ಕೊಡುತ್ತಾ ಹೋಗಿ ಸುಂದರ ಕೆಲಸ ಮಾಡಬೇಕು ಎಂದು ಸಲಹೆ.

ಶ್ರೀ ಎಚ್. ಎಫ್. ಕಟ್ಟೀಮನಿ (ಸ್ಥಾನೀಯ ಪ್ರಾಧಿಕಾರೀಕ್ಷೇತ್ರ).—ಮಾನ್ಯ ಸಭಾಪತಿಗಳೇ, ಈ ಪೂರೈಕೆಗಳನ್ನು, ಬೇಡಿಕೆಗಳನ್ನು 'ಸಭೆಯ ಮುಂದೆ ಮಂಡಿಸುವ ಸಂಪ್ರದಾಯ ಏನಿದೆ ಅದು ಸಾಧುವಾದದ್ದು ಅಲ್ಲ ಎಂದು ಮಾನ್ಯ ಶಾಸ್ತ್ರಿಗಳು ಆಕ್ಷೇಪಣೆಯನ್ನು ಕಾವ್ಯಮಯ ಭಾಷೆಯಲ್ಲಿ ಎತ್ತಿದರು. ಆದರೆ ಇಂಥ ಪ್ರಸಂಗ ತಪ್ಪದೇ ಬರುತ್ತವೆ. ಬಡ್ಜೆಟ್ಟಿನ ಕಾಲಕ್ಕೆ ಗೊತ್ತಿಲ್ಲದೆ ಎಷ್ಟೋ ಅನಿರೀಕ್ಷಿತ ವಿಷಯಗಳು ನಂತರ ಬರುತ್ತವೆ. ಅಂಥ ಪ್ರಸಂಗಗಳಲ್ಲಿ ಪೂರೈಕೆ ಪೂರೈಸಬೇಕಾಗುತ್ತದೆ. ಈಸಂಪ್ರದಾಯ ಮೈಸೂರು ಸ್ಟೇಟಿನಲ್ಲಿ ಮಾತ್ರವಲ್ಲ. ಎಲ್ಲಾ ರಾಜ್ಯಗಳಲ್ಲೂ ಇದೆ. ಬೊಂಬಾಯಿಯಲ್ಲಿ ಒಂದು ವರ್ಷ ಎರಡು ಸಲ ಬೇಡಿದಂಥ ಪ್ರಸಂಗ ಇದೆ. ಇದು ಸಾಧುವಾದ ಮತ್ತು ಸರಿಯಾದ ಸಂಪ್ರದಾಯವಾಗಿದೆ. ಬೇಡಿಕೆಗಳನ್ನು ಬೇಡುವಾಗ ಅದರಲ್ಲಿ ಅಡಗಿರುವ ವಿಷಯಗಳನ್ನು ನಾವು ಚರ್ಚಿಸಬಹುದು. ಬೇಡಿಕೆ ಸರಿಯಾದುದೋ ಇಲ್ಲವೋ ಎನ್ನುವುದನ್ನು ಚರ್ಚಿಸಬಹುದು. ಬೇಡಿಕೆಯನ್ನು ಇಡುವುದು ಸಾಧುವಾದಂಥ ಸಂಪ್ರದಾಯ. ಈಗ 4,91,09,700 ರೂಪಾಯಿಗಳ ಬೇಡಿಕೆ ಇದೆ. ಆದರೆ ನಿಜವಾಗಿ ಇಷ್ಟು ಹಣ ಬೇಡಿದ್ದು ಇಲ್ಲ, ಕೇವಲ ಅಡ್ಜೆಸ್ಟ್‌ಮೆಂಟ್ ಮಾತ್ರ ಇದೆ. ಉದಾಹರಣೆಗಾಗಿ 57, 57—A ಮತ್ತು 58 ಮಾತ್ರ ಇದೆ. ಈ ಮೂರು ಬೇಡಿಕೆಗಳನ್ನು ಟೆಕ್ನಿಕಲ್ ಗ್ರೌಂಡ್ಸ್ ಮೇಲೆ ಕೇಳಿದ್ದಾಗಿದೆ. ಬೇರೆ ಬೇರೆ ಇಲಾಖೆಗಳಲ್ಲಿ ಏನು ಉಳಿತಾಯವಾಗುತ್ತದೆ, ಆ ಉಳಿತಾಯಗಳು ಈಗ ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಪೂರೈಸುವಂಥ ಪ್ರಸಂಗ ಇದೆ. ಇದನ್ನು ಸ್ಪಷ್ಟವಾಗಿ ಮೆಮೊರೆಂಡಮ್ಮಿನ ಮೊದಲನೆ ಪೇಜಿನಲ್ಲಿ ಕೊಟ್ಟಿದ್ದಾರೆ. ಟೋಕನ್ ಗ್ರ್ಯಾಂಟ್ಸ್‌ಗೆ ಆಕ್ಷೇಪಣೆ ಮಾಡಿದ್ದಾರೆ. ಹೊಸದಾಗಿ ಯಾವುದಾದರೂ ವಿಷಯ ಉದ್ಭವಿಸಿದರೆ ಅದಕ್ಕೆ ಟೋಕನ್ ಗ್ರ್ಯಾಂಟ್ ಕೇಳುತ್ತಾರೆ. ಯೂನಿವರ್ಸಿಟಿ ಗ್ರ್ಯಾಂಟ್ ಇದೆ. ಯೂನಿವರ್ಸಿಟಿ ಪ್ರೊಫೆಸರ್‌ಗಳಿಗೆ ಇತ್ತೀಚೆಗೆ ಸಂಬಳವನ್ನು ಏರಿಸಿರುವುದರಿಂದ ಹೆಚ್ಚಿಗೆ ವೆಚ್ಚ ಬರಲು ಮೊದಲನೆ ಬಡ್ಜೆಟ್ಟಿನಲ್ಲಿ ಇದನ್ನು ಇಟ್ಟಿರಲಿಲ್ಲ, ಇದು ಹೊಸ ಸರ್ವೀಸು ಆಯಿತು. ಆದ್ದರಿಂದ 100 ರೂಪಾಯಿ ಟೋಕನ್ ಡಿಮ್ಯಾಂಡ್ ಇಟ್ಟು ಈ ಹಣವನ್ನು ತೋರಿಸಿದ್ದಾರೆ. 16 ಲಕ್ಷ ಬೇಡಿದರೂ ಹತ್ತು ಲಕ್ಷದಲ್ಲಿಯೇ ಅವರ ಕರ್ತವ್ಯವನ್ನು ನೆರವೇರಿಸುವಂತೆ ಮಾಡಿದ್ದಾರೆ, ಅದರಂತೆಯೇ ಖಾದಿ ಬೋರ್ಡನ್ನು ಸ್ಥಾಪನೆ ಮಾಡಿದರು. 'ಸೆಂಟ್ರಲ್ ಖಾದಿ ಬೋರ್ಡಿನಿಂದ ಅದಕ್ಕೆ ಗ್ರ್ಯಾಂಟು ಬರುತ್ತದೆ. ಸದ್ಯಕ್ಕೆ ಅದರ ಕಾರ್ಯಕಲಾಪಗಳನ್ನುನಡೆಸಲು ಐದುಲಕ್ಷರೂಪಾಯಿಗಳನ್ನು ಸಾಲದ ರೂಪವಾಗಿ ಕೊಟ್ಟಿದ್ದಾರೆ. ಇದಕ್ಕಾಗಿ ಟೋಕನ್ ಡಿಮ್ಯಾಂಡ್ ಕೇಳಿದ್ದಾರೆ, ಇದು

ಬಹಳ ಅವಶ್ಯವಾದದ್ದು. ಈ ರೀತಿ ಬೇಡಿಕೆಗಳಲ್ಲಿ ಯಾವುದಾದರೂ ಆಕ್ಷೇಪಕರವಾದ ಯಾವ ಒಂದು ವಿಷಯವೂ ಕಂಡುಬರಲಿಲ್ಲ. ಆದ್ದರಿಂದ ಈ ಪೂರೈಕೆ ಬೇಡಿಕೆಗಳಿಗೆ ನನ್ನ ಸಂಪೂರ್ಣ ಅನುಮೋದನೆಯನ್ನು ನೀಡುತ್ತೇನೆ.

Sri B. VAIKUNTA BALIGA.—Sir, I am indeed grateful to all the Hon'ble Members who have participated in this discussion and have rendered very valuable suggestions. Various subjects have been dealt with. Various suggestions have been made in the course of the debate, so that Government may take note of and rectify the matters in future. I must congratulate members on this. They will be taken note of and Government will pay the highest respect to these suggestions and wherever practicable and possible, these suggestions would be carried out. But, I must confessof certain amount of disappointment with regard to criticism that has been levelled without proper appreciation and complete study of the whole matter.

Sir, these Supplementary Demands are nothing new either in this State of this Government. There is provision for these Demands in the Constitution itself. Even the framers of the Constitution, perhaps as wise as ourselves, have thought it fit and necessary that for efficient and smooth working of the Government Supplementary Demands will have to be made and therefore they have made provision for that. Apart from that, we must not fail to take note of the various aspects with regard to the new instances. Sir, it is well-known that a Government and particularly, a Government of a progressive State cannot be stagnant, cannot be indolent and they have to take advantage of the various opportunities that present themselves and the situations that may arise and which may not have been contemplated earlier. When an opportunity comes, when the Central Government take a decision to give financial assistance, I am sure that no member would say that such an assistance should be refused because it was not included in the Budget. I do not think that any Government or any Party could visualise everything while preparing the Budget and include every item in it. Sir, the Budget is prepared with much care so that no aspect escapes the attention. The Budget is fully and meticulously debated upon. Still, Sir, necessity for placing such Supplementary Demands does arise.

Sir, some of the items have been criticised without even being studied well. Take Demand No. I. Only if Hon'ble Members who criticised this had the patience to refer to page 27 of the Budget, they would have found that provision has been made undre "13 other Taxes and Duties." As the charges are classifiable under this head, the grant obtained under "13 Other Taxes and Duties" is surrendered and additional grant to this extent is asked for under this Demand. So, it is abundantly clear that there is nothing new. All that is required is to regularise. Does it show any lack of vision while Budgeting or is it only a minor ministerial adjustment which does not affect the financial position of the Government or the State? To get up and say: "What did the Government do at that time? Had they no vision?" is not right. I do not think any one can say as to what exactly would be the expenditure on the several items. I challenge that it would never be possible. It would be impossible to say that on a particular item Rs. ten thousand, fifteen annas and three pies shall be the expenditure and nothing more. These things will have to be taken considering the market fluctations regarding various commodidies. I will not go into detail but I referred to this elaborately only with the purpose of showing how unhelpful these criticisms were.

Sir, Demand No. 2 is an expenditure to be incurred towards remuneration to Shanbhogues and Patels. The word Kanungo Establishment means the Village officers and this is a term which is known to those that come from Bombay area. Perhaps a more specific word could have been given to this term; I do not blame anybody for that. But, that is not going to change the position. Only if members had seen the complete reference in the Explanatory Note, there would have been no trouble. Sir, Budget copies

(SRI B. VAIKUNTA BALIGA)

have been supplied to members and even if they ask for a fresh copy, they could have got it. But, to say that the explanation is not easily understandable is not right. They have not seen the Budget and criticised this Demand, because this is only an additional amount for further expenditure. Therefore, the criticism offered in this regard is really un-understandable by me. Against the current year's grant of Rs. 9,90,000 an expenditure of Rs. 11,20,518 is incurred to the end of November 1957. All this should be regularised before the year end.

With regard to Demand No. 5, there was some confusion. Sandal wood and sleepers are mixed together. I do not think whether it could be possibly done unless the Note is ignored. Whenever timber is available in increased quantities, it would be supplied to Railways on very attractive terms. Without caring to see whether it is a profitable venture or a losing contract, if simply criticisms are levelled because 18 lakhs are asked, it is not right. But, though it may be profitable, when any expenditure is incurred, it must be brougt to the notice of the House and the House must say whether Government is going to incur the expenditure on a right thing or not. The amount under this Demand is for the increased quantities of timber and sawn materials to be supplied from Belgaum Circle and supplies of additional quantities of sleepers from South Kanara and Shimoga to Railways. All the criticism in this regard, I must say, is misplaced. With regard to item (3), it is the increase in working cost. Absolutely, it is said, it is working cost. It is also said that the expenditure is partly covered by increased revenue. There is increased revenue. The increased revenue will exactly be known only at the end of the year. So, there is nothing which the Government propose to hide at all. If they ask anything and if we cannot give off hand, it is only because the figure would be elsewhere and it will be known only at the end of the years Therefore, I am really unable to accept the criticism levelled.

Demand No. 7. Sir, very interesting critscism was levelled. If Hon'ble Members would just read the Explanatory Note, it would make the position very clear. The hundred rupees asked for is only a token demand. Token grant is not introduced for the first time and it is a very well known procedure where the Government comes under all fire and criticism in the House and therefore, Government put down only the inevitable and the right thing.

With regard to Demand No. 8, "Other Taxes and Duties, (a) Collection Charges", it is stated that the "additional expenditure is on account of the reorganisation of the Department of Commercial Taxes with effect from 23rd November 1957." It is well-known that when integration takes place, when society progresses and when scales of pay are revised, more money will have to be spent on officers and establishment. But to say that after the Budget is passed, even if it is absolutely necessary to increase the salary or dearness allowance of any officers or establishment, it should not be sanctioned unless it is provided for in the budget, is a principle which no Government can accept; at any rate, the present Government is unable to accept such an argument that it should have been provided for prior to the passing of the Budget. So when these things have been done and expenditure has been incurred therefor and we have placed the matter before the House, there is no point in saying that the expenditure on a particular item should not have been incurred. I could have understood the criticism that the expenditure on a particular item could have been reduced, but I cannot understand the criticism that has been levelled against this demand.

Then, with regard to Demand No. 10, the explanatory note says that an "outlay of Rs. 25,91,343 according to departmental figures has already been booked up to the end of November 1957, against a provision of Rs. 22,00,000 in the current year's estimates." Is it or is it not the duty of the Government to bring to the notice of the House that what has been provided for as a tentative basis on a reasonable forecast has been found to be not sufficient and so larger amounts have been spent and they are to be considered by both the Houses of the Legislature ? So I cannot understand the criticism that has been levelled. As stated in the note itself, "extensive repair works had to be undertaken as many of the tanks were damaged as a result of rains."

Mr. CHAIRMAN.—Some Hon'ble Members have complimented Government for having incurred that expenditure.

Sri B. VAIKUNTA BALIGA.—Government is grateful to the members for their useful criticism, but I cannot understand the criticism of the kind levelled by certain members. As mentioned in the note, the breaches to the tanks were caused by rains. Is it possible for any Finance Minister to stop the rains ? If breaches are caused due to excessive rains, that is unavoidable and no Finance Minister can stop it. So, Sir, I will not take the time of the House by elaborating on this in detail.

The next item is with regard to interest on debt and other obligations. This is a charged item and so it is not at all an optional payment. Members will kindly recollect that a loan was floated in 1957. Provision for floating the loan could not have been provided for in the Budget unless the terms for floating the loan had been settled. This is a thing which took shape and which was finalised after the Budget. That point has got to be borne in mind while making any criticism. Then it was also said that members did not know what were the assets that Government got and what were the liabilities that Government had to undertake. These debts have come to us from the various integrating areas. We have also got assets from these integrating areas. When we talk of debts, we have also to remember that along with debts assets also have been received. This is such a complicated thing that it is bound to take not only this much time but perhaps more time, to be settled finally. Owing to the peculiar position in which the new Mysore Government is placed, this is inevitable and we cannot possibly help it. One thing that has got to be borne in mind is that the interest which has got to be paid is a charged liability.

Then, with regard to the remarks about the expenditure on the *Mysore Gazetteer*, I am indeed grateful to the Hon'ble Members for their remarks. The Hon'ble Member Dr. Nandimath made a suggestion that this should not be limited to the old Mysore area. Coming as I do from another integrating area, I am very grateful to him for his suggestion because my views also are similar to his views in this respect. I may, however, assure the member that the Mysore State, as it is understood after integration, is inclusive of not only the old Mysore Area but also Bombay Karnatak, Madras Karnatak, Hyderabad Karnatak and Coorg and so Government has no idea of limiting this to any particular area.

Dr. S. C. NANDIMATH.—The amount provided is very small. It is only Rs. 9,000 and it will not suffice for the entire State including all the integrating areas.

Sri B. VAIKUNTA BALIGA.—I am sorry for the wrong impression that has been created in the mind of the member because of this small provision. There is reason for that. I may say that after the Budget was framed, the Government of India came to a conclusion with regard to revision of State Gazetteers and formulated a scheme for the revision of State Gazetteers. Under that scheme the Central Government will bear 40 per cent of the cost. The sum of Rs. 9,000 which has been provided here is not the full cost of the scheme. This is only more or less like an advance made for the scheme for the present. Ultimately, the final cost will have to be shared between the State Government and the Central Government. It is mentioned in the scheme that in addition to sharing in the cost of the establishment, the Central Government will share in the cost of printing also. So I would request the

(SRI B. VAIKUNTA BALIGA)

Hon'ble Member not to be disheartened in any way by the small provision of Rs. 9,000. As can be seen from the explanatory note itself, it has been mentioned there that "an advance of Rs. 9,000 was made from the Contingency Fund as this constituted a 'new service'." As the expenditure can be met by reappropriation, a token grant for Rs. 100 only has been asked for. The member will, therefore, see that Rs. 9,000 is only a tentative advance and Rs. 100 is only a token grant and the whole cost of the scheme will be shared between the State Government and the Central Government and that the scheme will be extended to all the areas of the new State. With regard to his suggestion about the excellence and the quality of the work, I may assure him that Government will strive its best in this direction because the Mysore Government is as much keen and desirous as any other State Government about maintaining the high quality of the work because it knows that its prestige will be held high only if very high qualities are maintained.

Then, coming to Demand No. 14, this demand for additional grant is on account of the fixation of a uniform rate of D.A. of Rs. 16 per day for all the members of the Legislative Assembly. This is a thing which was passed by an Act of the Legislature and it has got to be met. If the amount already provided for in the Budget was not sufficient for the purpose, an additional amount had to be provided for. There is nothnig unusual about it. This is also an inevitable consequence inasmuch as Government has got a compelling duty to provide for an obligation cast on it by an amendment of the Act with regard to the daily allowance of the members. So I cannot possibly see how Government could have refused to provide for it. Thus, there is no scope for any doubt on this item.

The next demand relates to Ports. I am glad I am the person in charge of the Ports Department and so I can speak with a certain amount of personal knowledge. At the time when the Budget was framed there was no Port Department at all. The idea of creating a separate Ports Department came in the forefront for the first time after the Budget was framed. Our State has got a vast sea coast and a number of potentially brilliant and good ports. If these are to be exploited and worked to provide an access from the hinterland to the sea, then the development of the ports was inevitable. It was for this purpose that the State Ports Department was organised and created. We want to develop our ports. I am sure one day the Mysore State will find these ports as a permanent source of income to the State. The progress of the State will be accelerated by the development of these ports. The provisions under the heads 'Pay of Officers', 'Pay of Establishment' 'Allowances and Honoraria' etc., are absolutely with regard to a new Department that has been set up. These are inevitable when a new Department is set up. I am sure that members will realise that perhaps larger amounts will have to be provided for in the succeeding budgets.

With regard to Demand No. 19, it will be seen that the scheme of the reorganisation of the Department of Mines and Geology was sanctioned in November 1957. If only members had taken pains to understand the real import of this Department, they would have said that the provision that was made was very meagre and ought to have been enhanced.

It is well-known that this State possesses mineral ores of the finest type. We have iron ore of highest purity which can command a productive foreign market. We intend stepping up mining from the present 6 lakh tons to 5 million tons. If this is achieved it would enhance the national income of the State by about 50 crores of rupees. If this is the potentiality, would it be right to criticise that progress in this direction should have been held over? Personally, I feel that this matter should have been attended to much earlier. I do not therefore find much merit in the criticism as far as this item is concerned.

I would now take up criticisms in regard to Demand No. 20. This item is connected with the grant under "37 Education" and is to be met by reappropriation of the savings under 'Education'. It has been accepted on all sides that the University has to be adequately provided for. This is because of several other factors.

(ಉತ್ತರವಿಲ್ಲ.)

ಶ್ರೀ ಎಸ್. ವೈ. ಪಾಟೀಲ್.—ಜನರಲ್ ಕೌನ್ಸಿಲ್‌ನಲ್ಲಿ ಇಪ್ಪತ್ತೈದು ಮಂದಿಯಿರಬೇಕೆಂದೂ, ಎಕ್ಸಿಕ್ಯೂಟಿವ್ ಬೋರ್ಡಿನಲ್ಲಿ ಹನ್ನೊಂದು ಮಂದಿಯಿರಬೇಕೆಂದೂ ಹೇಳಿದ್ದೀರಿ ಈ ಹನ್ನೊಂದು ಮಂದಿ ಸದಸ್ಯರುಗಳು ಯಾರ್ಯಾರು? ಯಾವ ತತ್ವದ ಮೇಲೆ ಅವರನ್ನು ತೆಗೆದುಕೊಂಡಿದ್ದೀರಿ?

Smt. GRACE TUCKER.—Eleven members of the Executive Body come from old Mysore.

ಶ್ರೀ ಎಸ್. ವೈ. ಪಾಟೀಲ್.—ಹೊಸ ಮೈಸೂರಿನ ಭಾಗಕ್ಕೇಕೆ ಪ್ರಾತಿನಿಧ್ಯ ಕೊಟ್ಟಿಲ್ಲ?

Smt. GRACE TUCKER.—The Academe was constituted in 1954 and that goes on for three years.

2 P.M.

Sri G. B. SHANKAR RAO.—What is the expenditure incurred by the State over the year on this academy?

Smt. GRACE TUCKER.—For the year 1955–56, the normal budget was Rs. 15,000 and Development Budget NIL. For the year 1956–57, 15,000 was the normal Budget and for the Development Budget it was 1,10,000. During 1957–58, the normal budget was 15,000 and for the Development Budget Rs. 50,000.

Sri G. B. SHANKAR RAO.—May I know whether there are musicians and cinema stars in the general council of the academy.

Smt. GRACE TUCKER.—I do not know if there are any cinema stars. Regarding musicians Sri Chowdiah is on it.

Sri C. K. RAJAIAH SETTY.—Is it a fact that Government is contemplating to have a scrutinising committee over this committee ?

Smt. GRACE TUCKER.—I am not aware of it.

Sri G. ANNA RAO.—Out of the 44 institutions recognised, may I know how many belong to Hyderabad Karnatak area ?

Smt. GRACE TUCKER.—Two.

Sri V. S. PATIL.—How many are from Belgaum District ?

Smt. GRACE TUCKER.—From Bombay Karnatak there are six. Belgaum in particular has three.

Sri J. P. SARWESH.—How many are from Hyderabad Karnatak area ?

Smt. GRACE TUCKER.—There are two institutions.

Sri J. H. SHAMSUDDIN.—Is it a fact that Government contemplate re-organization of this Sangeet Academy ?

Smt. GRACE TUCKER.—Yes, it is under the consideration of Government.

Sri J. H. SHAMSUDDIN.—Does Government propose to give representation to all kinds of dramas and arts in this academy ?

Smt. GRACE TUCKER.—It would not be possible to do such a thing. With a view to representing, integrating areas, Government have intended to re-organise the Acadency.

Sri J. H. SHAMSUDDIN.—Have Government proposed to give representation to Yaksha-Gana ?

Mr. SPEAKER.—That is a suggestion and not a question.

Sri C. J. MUCKANNAPPA.—May I know who is the Chairman of this Council ?

Smt. GRACE TUCKER.—The Director of Public Instruction is the Chairman.

Smt. L. V. MAGADI.—How many lady members are there in this committee ?

Smt. GRACE TUCKER.—One in the General Council and one on the Executive Board.

ಶ್ರೀ ಎಸ್. ವೈ. ಪಾಟೀಲ್.—ಈ ಸಂಸ್ಥೆಗಳು ಅಕ್ಯಾಡೆಮಿಯಲ್ಲಿ ಸೇರಬೇಕಾದರೆ ಅದಕ್ಕೆ ನಿಯಮಗಳೇನು ?

ಅಧ್ಯಕ್ಷರು.—ಆ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

ಶ್ರೀ ಇ. ಪುಂಡಲೀಕಪ್ಪ.—ಹೈದರಾಬಾದ್ ಕರ್ಣಾಟಕದಲ್ಲಿ ಎರಡು ಇವೆ ಎಂದು ಹೇಳಿದರು. ಯಾವ ಯಾವ ಸ್ಥಳದಲ್ಲಿದೆ ಎಂದು ಹೇಳಬಹುದೋ ?

Smt. GRACE TUCKER.—There is one Karnatak Pradesh Seva Sangeet......

Mr. SPEAKER.—A list may be supplied later on of all the 44 institutions.

As regards question No. 1409, it will be taken up tomorrow. Question time is over.

QUESTIONS FOR ANSWERS ON THE DAY

(but not taken up)

Profit and Loss of the Electricity Department.

Q.—626. **Sri K. PUTTASWAMY** (Mysore).—

Will the Government be pleased to state :—

(*a*) the profits made by the Electricity Department during the years 1954-55, 1955-56 and 1956-57 ;

(*b*) the percentage of return on the Capital investment ;

(*c*) whether there is decrease in the profits ;

(*d*) if so, the reasons therefor ?

A.—**Sri H. K. VEERANNA GOWDH** (Minister for Public Works).—

(*a*) *Year*		*Profit* (+) *or Loss* (—)
1954-55	(+)	35,99,989
1955-56	(+)	19,66,029
1956-57	(—)	19,58,879 (Loss)

(*b*) 1954-55	1.4 per cent
1955-56	0.7 per cent

(*c*) Yes.

(*d*) The reasons are as follows :—

(*i*) The tax on Electricity Consumption was accounted for under XII—Misc. other taxes—Electricity duties outside the Revenue Accounts commencing from the year 1955-56.

(*ii*) Due to States Reorganisation effective from 1st November 1956 as the expenses in the merging areas having increased as against the Gross Revenue realised.

(*iii*) Heavy capital investment during the period on which return will only be got after some years but on which in the meanwhile we have to pay interest—charges and contribution to Depreciation.

Repair of the Road from Bailanarasapura up to Madras-Bangalore Road.

Q.—933. **Sri S. R. RAMAIAH** (Hoskote).—

Will the Government be pleased to state :—

(*a*) the number of years since the villagers deposited the amount for repairing the road from Bailanarasapura in Hoskote taluk up to Madras-Bangalore road ;

(*b*) the reasons for not repairing this road so far ?

A.—**Sri R. CHENNIGARAMIAH** (Minister for Local Self-Government).—

(*a*) Nearly a year—the last contribution was made in June, 1957.

(*b*) the work is being taken up during the current year.

Basis for deciding Divisional Headquarters of Divisional Commissioners.

Q.—971. **Sri A. R. BADRI NARAYAN** (Thirthahalli).—

Will the Government be pleased to state :—

(*a*) the basis on which the Divisional Headquarters of the four Commissioners have been fixed ;

(*b*) whether there were representations from Shimoga District for making Shimoga as one of the divisions ?

A.—**Sri M. P. PATIL** (Minister for Revenue).—

(*a*) Administrative convenience and availability of accommodation has been taken into consideration while deciding on the Headquarters of each division. The Headquarters of each Division is located at the most important city or town in the Division.

(*b*) Yes.

Sub-Inspectors selected by Public Service Commission awaiting Orders of Posting.

Q.—1190. **Sri M. LINGE GOWDA** (Kanakapura).—

Will the Government be pleased to state :—

(*a*) whether it is a fact that the Public Service Commission selected eighteen (18) candidates for the posts of Sub-Inspectors in 1956 ;

(*b*) whether orders have been issued to such selected candidates ;

(*c*) whether it has come to their notice that these selected candidates have not yet been asked to join duty ;

(*d*) if so the action propsed to be taken in the matter ?

A.—**Sri C. M. POONACHA** (Minister for Home Affairs and Industries).—

(*a*) Yes.

(*b*) No.

(*c*) Yes.

(*d*) The matter is under the consideration of Government.

Basis for Fixation of Rent payable by the Tenant.

Q.—1287. Sri D. MOOKAPPA (Sagar).—

Will the Government be pleased to state :—

(*a*) on what basis they have fixed rent payble by the tenant to the land-owner together with figures of maximum and minimum rents determined by them under the existing Land Tenancy Act ;

(*b*) on what basis such rent has been fixed in the integrated areas of the New Mysore State ;

(*c*) whether entries pertaining to the present system of tenancy are made in "Grama" Panchayet and whether this new system has been made known to the ryots through village officers ?

A.—Sri M. P. PATIL (Minister for Revenue).—

(*a*) Either as a multiple of assessment or as a share of the crop raised on the land.

The figures of maximum and minimum rent fixed in the several areas of the State are given below:—

Mysore Area (Excluding Bellary District).—

Maximum Rent	*Minimum Rent*
1/3 and 1/4 of the crop or crops raised on land in Maidan and Malnad areas respectively.	Nil
Bellary District.—	
One-half of the crop or crops raised on the land or its value.	...
Hyderabad Area.—	
(1) in respect of dry Land of Chalka Soil four times the Land Revenue.	Nil
(2) in respect of Dry land of Black Cotton Soil five times the Land Revenue.	...
(3) in respect of Baghat—5 times the land Revenue.	...
(4) in respect of land—	...
(*i*) irrigated by wells—3 times the land Revenue.	...
(*ii*) irrigated by other sources.—4 times the land Revenue.	...
(5) in respect of classes of land which do not fall within any of the above classes.	Reasonable rent determind having regard to the classes of land and the rent fixed for the said categories.

NOTE.—1. Lands irrigated by wells which are assessed as dry shall be deemed to be wet lands for this purpose.
2. Land-holder liable to pay land Revenue.
3. In the case of special improvements made by the land-holder tribunal may fix a higher multiple of Land Revenue as the rent payable therefor.

Maximum Rent

Madras Area.—

Fair Rent (*i*) In the case of wet land—40 per cent of the normal gross produce or its value in money.

(*ii*) In the case of wet land where the irrigation is supplement by lifting water—35 per cent of the normal gross produce or its value in money.

(*iii*) In the case of any other class of land—33 1/3 per cent of the normal gross produce or its value in money.

NOTE.—Land owner entitled to 1/5th of the straw or stalk, of all the crops in every harvest.

(*iv*) In the case of lands referred to in items (ii) and (iii) in which water is lifted by pump sets installed at the cost of the land owner—40 per cent of the normal gross produce or its value in money.

NOTE.—Cultivating tenant to bear all the maintenance charges and the land owner to bear the charges for repairing the pumpsets.

Minimum Rent

When the contract of tenancy provides for payment of rent lower than the fair rent, the contract rent alone shall be payable during the contract period.

	Maximum Rent	*Minimum Rent*
Bombay Area.—	Five times the assessment or Rs. 20 per acre whichever is less.	Twice the assessment.
Coorg Area.—	One-third of the crop or crops raised on the land or its value.	Nil

(*b*) Please see reply to (*a*).

(*c*) Yes.

PAPER LAID ON THE TABLE

Sri B. VAIKUNTA BALIGA (Minister for Labour and Legal Affairs).—Sir, I seek leave to lay on the Table a statement of Vote on Account for Expenditure of the Government of Mysore in 1958-59.

REPORT OF THE SPECIAL COMMITTEE ON RULES OF PROCEDURE

Extension of time for presentation

Sri B. VAIKUNTA BALIGA (Minister for Labour and Legal Affairs).—Sir, I beg to move:

> "That the time limit fixed for presentation of the Report of the Special Committee to consider the Rules of Procedure and Conduct of Business in the Mysore Legislative Assembly be extended and the Report permitted to be presented during the current session."

Mr. SPEAKER.—The question is:

> "That the time limit fixed for presentation of the Report of the Special Committee to consider the Rules of Procedure and Conduct of Business in the Mysore Legislative Assembly be extended and the Report permitted to be presented during the current session."

The motion was adopted.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಡ್ಜರ್ನ್‌ಮೆಂಟ್ ಮೋಷನ್ ವಿಷಯದಲ್ಲಿ ರೂಲಿಂಗ್ ಯಾವಾಗ ಕೊಡುತ್ತೀರೆಂದು ತಿಳಿಸುತ್ತೀರಾ ?

Mr. SPEAKER.—I have not made up my mind about it.

Sri Y. VEERAPPA.—I am submitting the authorities, Sir.

Mr. SPEAKER.—Yes, do so.

Sri C. J. MUCKANNAPPA.—The other day, I requested about some rulings......

Mr. SPEAKER.—Regarding the rulings which have been submitted to me in my chamber, I will look into them.

Sri J. B. MALLARADHYA.—The previous day a representation was made regarding extension of time for the discussion of the Jatti Committee Report. Has any decision been taken ?

Mr. SPEAKER.—We are meeting today to take a decision.

[MR. DEPUTY SPEAKER in the Chair]

REPORT OF THE MYSORE TENANCY AND AGRICULTURAL LAND LAWS COMMITTEE.

Motion to consider (contd).

*ಶ್ರೀ ಎ. ಶ್ರೀನಿವಾಸಶೆಟ್ಟಿ.—(ಕುಂದಾಪುರ) ಸ್ವಾಮಿ, ನಾನು ಹಿಡುವಳಿಯ ಮೇಲ್ಮಿತಿಯನ್ನು

(ಶ್ರೀ ಎ. ಶ್ರೀನಿವಾಸಶೆಟ್ಟಿ)

ಕುರಿತು ಕಳೆದ ಸಾರಿ ಮಾತನಾಡುತ್ತಿದ್ದೆ. ಸ್ವಂತ ಸಾಗುವಳಿಯ ಬಗ್ಗೆ ಮಾಲೀಕರಿಂದ ಭೂಮಿಯನ್ನು ಬಿಡಿಸಿಕೊಳ್ಳುವಾಗ ಅನೇಕ ತೊಂದರೆಗಳು ಬರುವ ಸಂಭವವಿದೆ. ಇದರಲ್ಲಿ, ಪ್ರಾಮುಖ್ಯವಾದ ಒಂದು ವಿಷಯವೆಂದರೆ ಹಿಂದೂ ಮಿತಾಕ್ಷರ ಪದ್ಧತಿಯಂತೆ joint family system ಇದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳಿಯಸಂತಾನವೆಂದು ಇದೆ. ಈ ಕುಟುಂಬಗಳಲ್ಲಿ ಐದಕ್ಕಿಂತ ಹೆಚ್ಚಿಗೆ, ಕೆಲವು ಕಡೆಗಳಲ್ಲಿ ಸುಮಾರು ನೂರಕ್ಕೆ ಮಿಕ್ಕಿ ಜನರಿದ್ದಾರೆ. ಜತ್ತಿ ಸಮಿತಿಯ ವರದಿ ಪ್ರಕಾರ ಐದು ಮಂದಿಯ ಒಂದು ಕುಂಟುಂಬಕ್ಕೆ, ಕುಂಟುಂಬಹಿಡುವಳಿಯ ನಾಲ್ಕುವರೆ ಪಾಲು ಮತ್ತು ಐದು ಮಂದಿಗಿಂತ ಹೆಚ್ಚಿಗಿದ್ದರೆ ಇದರ ಎರಡು ಪಾಲಿನಷ್ಟು ಎಂದು ಇದೆ. ಇದರಿಂದ ಬಹಳ ಗಂಡಾಂತರ ಬರುತ್ತದೆ ಎಂದು ಅನೇಕ ಮಂದಿ ಆಕ್ಷೇಪವೆತ್ತಿದ್ದಾರೆ. ಈಗಾಗಲೇ ಕಳೆದ 8-10 ವರ್ಷಗಳಿಂದ ಭೂಸುಧಾರಣೆ ಜಾರಿಗೆ ಬರುತ್ತದೆ ಎಂಬ ಭೀತಿಯಿಂದ ಅನೇಕ ಕುಟುಂಬಗಳಲ್ಲಿ ಅವರು ಪಾಲು ಮಾಡಿಕೊಂಡಿದ್ದಾರೆ.

ನನ್ನ ಎಣಿಕೆಯಲ್ಲಿ ಅತಿ ಕಡಮೆ ಕುಟುಂಬಗಳಲ್ಲಿ ಪಾಲಾಗದೇಯಿರಬಹುದೆಂದು ಕಾಣುತ್ತದೆ. ಯಾವುದೋ ಕಾರಣಗಳಿಂದ, ಕೋರ್ಟು ವ್ಯವಹಾರಗಳಿಂದಲೋ ಕುಟುಂಬದಲ್ಲಿ ಜಿಜ್ಞಾಸೆಗಳಿರುವುದರಿಂದಲೋ ಪಾಲಾಗದೇಯಿರಬಹುದು. ಆದರೆ ಕೆಲವೇ ಕುಟುಂಬಗಳ ದೆಶೆಯಿಂದ ಈ ರೀತಿಯ ಒಂದು ಕಾಯಿದೆಯನ್ನು ಮಾಡುವುದು ನ್ಯಾಯವಲ್ಲವೆಂದು ಕಾಣುತ್ತದೆ. ನನ್ನ ದೃಷ್ಟಿಯಿಂದ ಹೇಗಿದ್ದರೂ ಕೆಲಮಟ್ಟಿಗೆ ಇಂಥಾ ಗಂಡಾಂತರ ಪರಿಸ್ಥಿತಿಯಲ್ಲಿ ಏನಾದರೂ ಅಲ್ಪಸ್ವಲ್ಪ ಬದಲಾವಣೆ ಮಾಡಬಹುದೋ ಏನೊ. ಆದರೂ ನಿಶ್ಚಿತವಾಗಿ ಹೀಗೆಯೇ ಮಾಡಬೇಕೆಂದು ಹೇಳುವುದಕ್ಕೆ ಧೈರ್ಯವಿಲ್ಲ. ಏಕೆಂದರೆ, ಎಷ್ಟು ಸಂಖ್ಯೆಯಲ್ಲಿ ಪಾಲಾಗದೇಯಿರುವ ಕುಟುಂಬಗಳಿವೆ ಎಂಬ ವಿವರವಿಲ್ಲದೆ ಹೇಳುವುದು ಕಷ್ಟ. ಈ ಮಧ್ಯೆ ಒಂದು ವಿಷಯವನ್ನು ಮಾತ್ರ ಈ ಸಭೆಯ ಮುಂದೆ ಹೇಳಲು ಬಯಸುತ್ತೇನೆ. ಈಗಾಗಲೇ ಕೇರಳದಲ್ಲಿ ಒಂದು ಮಸೂದೆ ಅಲ್ಲಿಯ ಶಾಸನಸಭೆಯಮುಂದಿದೆ. ಅದೇರೀತಿ ಇಲ್ಲಿ ಮಾಡಬೇಕೆಂಬುದು ನನ್ನ ಅಭಿಪ್ರಾಯವಲ್ಲ. ಅಲ್ಲಿ ಕುಟುಂಬದ ಹಿಡುವಳಿಯನ್ನು ಎರಡು ಎಕರೆಯ 15 ಹಿಡುವಳಿ ಎಂದು ಮಾಡಿದ್ದಾರೆ. ಕುಟುಂಬದಲ್ಲಿ ಹೆಚ್ಚುಮಂದಿ ಇದ್ದರೆ 25 ಎಕರೆಯವರೆಗಿರಬಹುದೆಂದು ಅಲ್ಲಿಟ್ಟಿದ್ದಾರೆ. ಇದರಿಂದ ಏನು ತೋರುತ್ತದೆಂದರೆ ಕುಟುಂಬದ ಹಿಡುವಳಿಯನ್ನು ಮೇಲ್ಮಟ್ಟದಲ್ಲಿಟ್ಟರೆ ಭೂಮಿ ಸಾಕಷ್ಟು ಸಿಕ್ಕುವುದಿಲ್ಲವೆ ಅವರು ಈ ರೀತಿ ಮಾಡಿದ್ದಾರೆ. ಆದುದರಿಂದ ಮೇಲಿನ ಮಟ್ಟ ಬೇರೆ ಬೇರೆ ಕಡೆಗಳಲ್ಲಿ ಎಷ್ಟರವರೆಗಿದೆ ಎಂದು ಹೇಳುವುದು ಕಷ್ಟ. ಜತ್ತಿ ಸಮಿತಿಯವರ ಸಲಹೆಯ ವಿಚಾರವನ್ನು ಮುಂದೆ ಹೇಳುತ್ತೇನೆ. ಅಂತೂ ಬೇರೆ ಬೇರೆ ಕಡೆಗಳಲ್ಲಿ ಭೂಮಿಯ ಹಿಡುವಳಿಯ ಮೇಲ್ಮಟ್ಟ ಎಷ್ಟಿಟ್ಟಿದ್ದಾರೆಂಬುದನ್ನು ವಿಚಾರ ಮಾಡುವುದು ಮುಖ್ಯ. ಉತ್ತರ ಪ್ರದೇಶದಲ್ಲಿ 30 ಎಕರೆ, ಡೆಲ್ಲಿಯಲ್ಲಿ 30 ಸ್ಟ್ಯಾಂಡರ್ಡ್ ಎಕರೆ, ಬೊಂಬಾಯಿನಲ್ಲಿ 12 ಎಕರೆಗಳಿಂದ, 48 ಎಕರೆವರೆಗೆ, ಪಶ್ಚಿಮ ಬಂಗಾಳದಲ್ಲಿ 25 ಎಕರೆ, ಹೈದರಾಬಾದು ಎಂದರೆ ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ ಮೂರು ಕುಟುಂಬ ಹಿಡುವಳಿಗಳು, ಸೌರಾಷ್ಟ್ರದಲ್ಲಿ ಮೂರು ಎಕನಾಮಿಕ್ ಹೊಲ್ಡಿಂಗ್‌ಗಳು, ಮಧ್ಯಪ್ರದೇಶದ ಮಧ್ಯಭಾರತದಲ್ಲಿ 50 ಎಕರೆ, ಕೇರಳದಲ್ಲಿ 15 ಎಕರೆ ಎಂದು ಮಾಡಿದ್ದಾರೆ. ಜತ್ತಿ ಸಮಿತಿಯ ವರದಿಯ ಪ್ರಕಾರ ಬೇಸಿಕ್ ಹೋಲ್ಡಿಂಗ್ ಎಂದರೆ 400 ರೂಪಾಯಿ ನಿವ್ವಳ ವಾರ್ಷಿಕ ವರಮಾನ ಬರುವಷ್ಟು ಭೂಮಿ. ಈ 400 ರೂಪಾಯಿ ಒಟ್ಟು ಉತ್ಪನ್ನದ, ಎಂದರೆ 800 ರೂಪಾಯಿನಲ್ಲಿ ಶೇಕಡ 50 ರಷ್ಟು. ಕುಟುಂಬದ ಹಿಡುವಳಿ ಎಂದರೆ ವರ್ಷಕ್ಕೆ 1,200 ರೂಪಾಯಿ ನೆಟ್ ಅಥವ ನಿವ್ವಳ ವರಮಾನ ಬರುವ ಸದಾ ನೀರಾವರಿ ಇರುವ ಜಮೀನು. ಈ ಭೂಮಿಯ ಒಟ್ಟು ಉತ್ಪತ್ತಿ 2,400 ರೂಪಾಯಿ ಇರುತ್ತದೆ ಎಂದಹಾಗಾಯಿತು. ಸದಾ ಕಾಲ ನೀರಾವರಿ ಇಲ್ಲದೆಯಿರುವ ಮಲೆನಾಡು ಮತ್ತು ದಕ್ಷಿಣ ಕನ್ನಡ ಪ್ರದೇಶದಲ್ಲಿ ಈ ನಿವ್ವಳ ವರಮಾನ ಒಟ್ಟು ವರಮಾನದ ಮೂರನೆಯ ಒಂದು ಭಾಗವಿರುತ್ತದೆ. ಎಂದರೆ, ಅಲ್ಲಿ 3,600 ರೂಪಾಯಿ ಉತ್ಪತ್ತಿ ಇರುವ ಭೂಮಿಗೆ ಕುಟುಂಬ ಹಿಡುವಳಿ ಎಂದು ಮಾಡಿದ್ದಾರೆ. ಇವರು ಹೇಳಿರುವ ಪ್ರಕಾರ ಒಂದು ಕುಟುಂಬದ ಹಿಡುವಳಿ ಸದಾ ನೀರಾವರಿ ಇರುವ ಪ್ರದೇಶದಲ್ಲಿ 2,400 ರೂಪಾಯಿ ಉತ್ಪತ್ತಿ ಬರುವ ಭೂಮಿ, ಕುಟುಂಬದಲ್ಲಿ ಐದು ಮಂದಿಗಿಂತ ಹೆಚ್ಚುಮಂದಿ ಇದ್ದರೆ ಇದಕ್ಕೆ ಎರಡರಷ್ಟು ಎಂದರೆ, 4,800 ರೂಪಾಯಿ ಉತ್ಪತ್ತಿ ಬರುವ ಭೂಮಿ. ಈಗ ಸ್ವತಃ ವ್ಯವಸಾಯಮಾಡುವ ಹಿಡುವಳಿದಾರರಿಗೆ ಕುಟುಂಬ ಹಿಡುವಳಿಯ 4½ ಯಷ್ಟು ಇರಬೇಕೆಂದು ಹೇಳಿದ್ದಾರೆ. ಎಂದರೆ 5,400 ರೂಪಾಯಿ ನಿವ್ವಳ ವರಮಾನ ಬರುವ ಭೂಮಿ. ಇದಗ ಒಟ್ಟು ಉತ್ಪತ್ತಿ 10,800 ರೂಪಾಯಿ ಆಗುತ್ತದೆ. ಕುಟುಂಬದಲ್ಲಿ ಐದಕ್ಕಿಂತ ಹೆಚ್ಚುಮಂದಿ ಇದ್ದರೆ ಇದರ ಎರಡರಷ್ಟು ಉತ್ಪತ್ತಿ ಬರುವ ಭೂಮಿ, ಎಂದರೆ 21,600 ರೂಪಾಯಿ ಒಟ್ಟು ಉತ್ಪತ್ತಿ ಬರುವ ಭೂಮಿಯನ್ನು ಇಟ್ಟುಕೊಳ್ಳಬಹುದೆಂದು ಹೇಳಿದ ಹಾಗಾಯಿತು. ನಿವ್ವಳ ವರಮಾನ ಶೇಕಡ 50 ರಷ್ಟು ಎಂದು arbitrary ಯಾಗಿ ಹೇಳಿದ ಹಾಗಾಯಿತು. ನೀರಾವರಿ ಇಲ್ಲದಕಡೆ, 3,600 ರೂಪಾಯಿ, 15,200 ರೂಪಾಯಿ, 30,400 ರೂಪಾಯಿ ಒಟ್ಟು ಉತ್ಪತ್ತಿ ಇರುವ ಭೂಮಿಯನ್ನು ಐದು ಮತ್ತು ಐದಕ್ಕಿಂತ ಹೆಚ್ಚುಮಂದಿ ಇರುವ ಕುಟುಂಬದವರು ಇಟ್ಟುಕೊಳ್ಳಬಹುದೆಂದು ಹೇಳಿದ ಹಾಗಾಯಿತು. ಇದರ ಪ್ರಕಾರ ಎಷ್ಟೆಷ್ಟು ಭೂಮಿ ಬರುತ್ತದೆಯೋ ಗೊತ್ತಿಲ್ಲ. ಬೇರೆ ಬೇರೆ ಊರುಗಳಲ್ಲಿ 50 ಕ್ಕಿಂತ ಹೆಚ್ಚು ಹಿಡುವಳಿ ಇಟ್ಟದ್ದು ಕಾಣಲಿಲ್ಲ. ಈ ರೀತಿ ಮೈಸೂರು ಕರ್ಣಾಟಕದಲ್ಲಿ ಭೂಮಿ ಬರುತ್ತದೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಜತ್ತಿ ಸಮಿತಿಯವರು ಜಾಸ್ತಿ ಸಂಚಾರ ಮಾಡಿದ್ದಾರೆ ಅವರೇ ಹೇಳಬೇಕು, ನಾನು ಹೇಳುವುದಕ್ಕಾಗುವುದಿಲ್ಲ. ಅಂತೂ ಇವರ ಈ ಅಭಿಪ್ರಾಯವನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಇದು ಪ್ರಾಮುಖ್ಯ ವಿಚಾರ, ಇದನ್ನು ಬಹಳ ಆಳವಾಗಿ ಯೋಚನೆಮಾಡಿ ನೋಡಬೇಕು. ಭೂಸುಧಾರಣೆ ಅಥವ ಯಾವುದೇ ಕಾಯಿದೆಯನ್ನು ತಂದರೂ ಯಾರಿಗೆ ಇದರಿಂದ ಉಪಕಾರ ಅಥವಾ ಅಪಕಾರ ಎಂದು ನೋಡಬೇಕೇ ಹೊರತು ಇದರಿಂದ ಯಾರಿಗೂ ಅಪಕಾರವಿಲ್ಲ ಎಂದು ಹೇಳಿದರೆ, ನಮ್ಮ ಮಲೆನಾಡಿನಲ್ಲಿ ಔಷಧ ಕೊಡುವ ಪಂಡಿತರು ಆಯುರ್ವೇದದ ಔಷಧದಲ್ಲಿ ಗುಣವಿಲ್ಲದಿದ್ದರೂ ಅವಗುಣವಿಲ್ಲ ಎಂದು ಹೇಳುತ್ತಾರೆ, ಹಾಗಾಗುತ್ತದೆ. ಹಾವೂ ಸಾಯಬಾರದು ಕೋಲೂ ಮುರಿಯಬಾರದು ಎಂಬ ಗಾದೆ ಇದೆ; ಹಾಗೆ ಈ ರೀತಿಯ ಕಾನೂನನ್ನು ತಂದು ಭೂಮಿಯನ್ನು ಹಂಚುವುದಕ್ಕಾಗದೇ ಹೋದರೆ,

ಅವಗುಣವಿಲ್ಲದ ಔಷಧದ ಹಾಗಾಗುತ್ತದೆ. ಇದು ಮಲೆನಾಡು ಪಂಡಿತರ ಔಷಧದ ಹಾಗಾಗದೇ ಇರಲೆಂದು ಹೇಳಬೇಕಾಗಿದೆ.

ಹೀಗೆ ಹೇಳುವಾಗ ಭೂಸುಧಾರಣೆ ವಿಚಾರ ಮಾಡುವಾಗ ಸಾಮಾನ್ಯವಾಗಿ ನಾವು ಚೈನಾ ಜಪಾನ್ ವಿಚಾರವನ್ನು ಯಾವಾಗಲೂ ಯೋಚನೆ ಮಾಡುತ್ತಿದ್ದೇವೆ. ಕೆಲವು ದಿನಗಳ ಹಿಂದೆ ಶ್ರೀ ಆರ್. ಕೆ. ಪಾಟೀಲ್‌ರವರಂಥ ಪ್ರಮುಖರ ಸಮಿತಿ ಜಪಾನ್ ದೇಶಗಳಿಗೆ ಸಹಕಾರ ರೀತಿಯ ಸಾಗುವಳಿಯನ್ನು ನೋಡುವುದಕ್ಕಾಗಿ ಹೋಗಿ ಒಂದು ವರದಿಯನ್ನು ಕೊಟ್ಟಿದ್ದರು. ಸಾಮಾನ್ಯವಾಗಿ ಚೈನಾ ಮತ್ತು ಜಪಾನ್‌ನಲ್ಲಿ ಒಂದು ಕುಟುಂಬದ ಹಿಡುವಳಿಯ ಮಟ್ಟ 2½ ಎಕರೆ. ಈ ಸಂದರ್ಭದಲ್ಲಿ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ನೂರಾರು ಭೂಮಾಲೀಕರ ಸಂಘಗಳವರು ಇಲ್ಲಿ ಹಿಡುವಳಿಯನ್ನು ಕಡಮೆ ಮಾಡಬೇಡಿ, ಹಾಗೆ ಮಾಡಿದರೆ ದೇಶಕ್ಕೆ ಗಂಡಾಂತರ ಬರುತ್ತದೆ ಎಂದು ಮನವಿ ಮಾಡಿದ್ದರು. ಚೈನಾದಲ್ಲಿ ಹಿಡುವಳಿ ಎರಡೂವರೆ ಎಕರೆ ಎಂದು ಹೇಳುತ್ತಾರೆ. ಅವರು ಹೇಗೆ ಪೂರೈಸುತ್ತಾರೋ ಗೊತ್ತಿಲ್ಲ. ನಮ್ಮ ದೇಶದಲ್ಲಿ 100 ಎಕರೆ 200 ಎಕರೆ ಇದ್ದರೂ ಸಾಲದು ಎಂದು ಹೇಳುತ್ತಾರೆ. ಪಾಟೀಲರ ಸಮಿತಿಯವರ ವರದಿ ಬಹಳ ಚೆನ್ನಾಗಿದೆ. ಅದನ್ನು ಓದಿದರೆ ತಿಳಿಯುತ್ತದೆ. ಚೈನಾಕ್ಕೂ ನಮ್ಮ ದೇಶಕ್ಕೂ ಹೆಚ್ಚು ಕಡಮೆ ಇಲ್ಲ. ಅಲ್ಲಿ ಜನಸಂಖ್ಯೆ ಹೆಚ್ಚು, ಭೂಮಿ ಕಡಮೆ ಇದೆ. ನಮ್ಮ ದೇಶದಲ್ಲಿಯೂ ಹಾಗೆಯೇ ಇದೆ. ನಮ್ಮಲ್ಲಿ ಸಾಕಷ್ಟು ಭೂಮಿ ಇದೆಯೋ ಇಲ್ಲವೋ, ಬಡ ರೈತರಿಗೆ ಭೂಮಿ ಸಿಕ್ಕುತ್ತದೆಯೋ ಇಲ್ಲವೊ ಎನ್ನುವುದನ್ನು ಯೋಚನೆಮಾಡಿ ಕಾನೂನು ಮಾಡಬೇಕಾಗಿದೆ. ಇದೊಂದು ಪ್ರಾಮುಖ್ಯವಾದ ವಿಷಯ. ಕೇವಲ ಭೂ ವಿತರಣೆಯಿಂದ ಭೂ ಸುಧಾರಣೆಯು ಫಲಕಾರಿಯಾಗುವುದಿಲ್ಲ. Exemptions ಮತ್ತು ceiling ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬೇಕಾಗಿದೆ. Exemption ಸಲುವಾಗಿ ರೈಲು ಬಸ್ಸುಗಳಿಗೆ ಟಿಕೆಟ್ಟು ತೆಗೆದುಕೊಂಡು ಪ್ರವಾಸಕ್ಕೆ ದುಡ್ಡು ಖರ್ಚು ಮಾಡಿ ಬೆಂಗಳೂರಿಗೆ ಬರಬೇಕಾಗುತ್ತದೆ ಎಂಬ ಗುಲ್ಲು ಈಗಾಗಲೇ ಕೇಳಬರುತ್ತಿದೆ. ಈ ಬಗ್ಗೆ ಜತ್ತಿ ಸಮಿತಿಯ ವರದಿಯಲ್ಲಿ ಬಹಳ ಬದಲಾವಣೆ ಮಾಡಿಲ್ಲ. ಪಂಚವಾರ್ಷಿಕ ಯೋಜನೆಯಲ್ಲಿ ಏನೇನು ಮಾಡಬೇಕೆಂದು ಇದೆಯೋ ಅದನ್ನೇ ಹೆಚ್ಚಾಗಿ ಇಟ್ಟುಕೊಂಡು ಮಾಡಿದ್ದಾರೆ. ಅಲ್ಲಲ್ಲಿ ಏನೋ ಅಲ್ಪಸ್ವಲ್ಪ ಹೆಚ್ಚು ಕಡಿಮೆ ಮಾಡಿದ್ದಾರೆ.

> "As regards the categories of cultivation which should be exempt from ceiling, the Committee recommend that exemption should be given only in regard orchards where they constitute reasonably compact areas, etc."

ಅಡಿಕೆ ಮತ್ತು ತೆಂಗಿನಕಾಯಿ ತೋಟಗಳ ಬಗ್ಗೆ ಇಲ್ಲಿ ಹೇಳಿಲ್ಲ. ನಮ್ಮ ಪ್ರದೇಶದಲ್ಲಿ ಹೆಚ್ಚಾಗಿ ಅಡಿಕೆ ತೋಟಗಳು ಇವೆ. ಸರಿಯಾದ ಒಂದು ಯೋಜನೆ ಮಾಡಿದ್ದಾದರೆ ಮೈಸೂರು ದೇಶದಲ್ಲಿಯೇ ಉತ್ತಮ ತರದ ಅಡಿಕೆ ತೋಟಗಳು ಆಗಬಹುದು. ದಕ್ಷಿಣ ಕನ್ನಡ ಜಿಲ್ಲೆಯೇ ಒಂದು ದೊಡ್ಡ ಪ್ರಮಾಣದ ಮೇಲೆ ಅಡಿಕೆ ತೆಂಗಿನಕಾಯಿ ತೋಟವಾಗಬಹುದು. ಇದರಿಂದ ಕೆಲವರಿಗೆ ಕಷ್ಟ ಮತ್ತು ತೊಂದರೆಯಾಗಬಹುದು. ಅಡಿಕೆ ಮತ್ತು ತೆಂಗಿನಕಾಯಿ ತೋಟ ಬಿಡಬಹುದು ಎಂಬುದಕ್ಕೆ ಯಾವ ಕಾರಣವೂ ನನಗೆ ಕಂಡುಬರುವದಿಲ್ಲ. ಕಾಫೀ ಮತ್ತು ಟೀ ತೋಟಗಳು ಅದೇ ಪ್ರಮಾಣದಲ್ಲಿಲ್ಲ. ಕಾಫೀ ತೋಟ ಟೀ ತೋಟ ಬಿಡಬಹುದು. ಕಾಫೀ ಮತ್ತು ಟೀ ತೋಟಗಳನ್ನು ಚಿಕ್ಕಪುಟ್ಟ ಪ್ರಮಾಣದಲ್ಲಿ ಹಂಚಿಕೊಟ್ಟರೆ ಏನು ಮಾಡಬಹುದು ? ಈ ತೋಟಗಳಲ್ಲಿ ವಿಶೇಷವಾಗಿ ಬಂಡವಾಳ ಹಾಕಿರುತ್ತಾರೆ. ಅವರಿಗೆ ಅನ್ಯಾಯವಾಗಬೇಕೆಂದು ನಾನು ಹೇಳುವುದಿಲ್ಲ. ಅದುದರಿಂದ ಇನ್ನು ಕೆಲವು ಸಮಯ ಕೊಡಬೇಕು. ಪಂಚವಾರ್ಷಿಕ ಯೋಜನೆಯಲ್ಲಿ ಹೇಳಿದ್ದನ್ನೇ ಮಾಡಬಹುದು. ಆದುದರಿಂದ ತೆಂಗಿನಕಾಯಿ ಅಡಿಕೆತೋಟ ಬಿಟ್ಟುಬಿಡುವದರಲ್ಲಿ ಯಾವ ಕಾರಣವೂ ನನಗೆ ತೋರಿಬರುವದಿಲ್ಲ.

ಇನ್ನೊಂದು ವಿಷಯ. ದೇವಸ್ಥಾನ, ಮಠ ಇವುಗಳ ಭೂಮಿಯನ್ನು ಬಿಟ್ಟುಬಿಡಬಹುದು ಎಂದು ವರದಿಯಲ್ಲಿ ಹೇಳಲಾಗಿದೆ. ಅನೇಕ ಕಡೆಗಳಲ್ಲಿ ಮಠಾಧಿಪತಿಗಳು ಭೂಮಾಲಿಕರಾಗಿದ್ದು ರೈತರಿಗೆ ತೊಂದರೆಯಾಗುತ್ತದೆ. ಅದಕ್ಕೆ ದೇವರು ಜವಾಬ್ದಾರ ಅಲ್ಲ. ಮಠಾಧಿಪತಿಗಳಲ್ಲಿ ಇರುವ ಯಾವ ಭೇದಭಾವ ನನಗಂತೂ ಕಂಡುಬರುವದಿಲ್ಲ. ಆದುದರಿಂದ ಭೂಮಾಲೀಕರಲ್ಲಿ ಯಾವ ಭೇದ ಮಾಡಬಾರದು. ಇಂಥ ಭೂಮಿಗೂ ಸಹ ಒಂದೇ ಕಾನೂನು ಲಾಗು ಆಗಬೇಕೆಂದು ನನ್ನ ಅಭಿಪ್ರಾಯ.

ಈಗ ಇನ್ನೊಂದು ವಿಷಯ ನನ್ನ ನೆನಪಿಗೆ ಬರುತ್ತಿದೆ. ಪಶ್ಚಿಮ ಕರಾವಳಿಯ ಪ್ರದೇಶದ 1951ನೇ ಇಸವಿಯ ಸೆನ್‌ಸಸ್ ಅಂಕಿ ಅಂಶಗಳನ್ನು ನೋಡಿದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಎಕರೆ ಪ್ರದೇಶಕ್ಕೆ 47 ಸೆಂಟ್ಸ ಸಾಗುವಳಿ ಪ್ರದೇಶವಿದೆ. ಅಂದರೆ ಭೂಮಿ ಬಹಳ ಕಡಿಯಾಗಿದೆ. ಆದರೆ ಹಳೇ ಮೈಸೂರು, ಹೈದ್ರಾಬಾದ್ ಭಾಗದಲ್ಲಿ ಇದಕ್ಕೂ ಹೆಚ್ಚಾಗಿದೆ. ನಮ್ಮ ಜಿಲ್ಲೆಯಲ್ಲಿ ಒಂದು ಎಕರೆ ಪ್ರದೇಶವಿದ್ದರೆ, ಅದರಲ್ಲಿ 60 ಸೆಂಟ್ಸ ಸಾಗುಮಾಡಲು ಬಾರದೇ ಇದ್ದ ಭೂಮಿಯೂ 40 ಸೆಂಟ್ಸ ಸಾಗುವಳಿಗೆ ಯೋಗ್ಯವಾದ ಭೂಮಿಯೂ ಇದೆ. ಇದನ್ನೆಲ್ಲಾ ನಾನು ಲೆಕ್ಕಹಾಕಿ ನೋಡಿದ್ದೇನೆ. ಇನ್ನು ಪಶು ಸಂಗೋಪನೆಯ ವಿಷಯ ಯೋಚನೆಮಾಡಬೇಕಾಗುತ್ತದೆ. ಗ್ರಾಮಗಳಲ್ಲಿ ಜಾನುವಾರುಗಳ ಸಂಗೋಪನೆಗೆ ಸಾಕಷ್ಟು grazing land ಉಳಿಯುವಂತೆ ಮಾಡಬೇಕಾದುದು ಅವಶ್ಯಕ. ಭೂಸುಧಾರಣೆ ಮಾಡುತ್ತೇವೆಂದು ಹೇಳಿ ಎಲ್ಲಾ ಭೂಮಿಯನ್ನು ಸಾಗುವಳಿಗೆ ತೆಗೆದುಕೊಂಡುಬಿಟ್ಟರೆ, ಪಶು ಸಂಗೋಪನೆಗೆ ಗ್ರೇಜಿಂಗ ಲ್ಯಾಂಡ ಉಳಿಯದೆ ಗಂಡಾಂತರ ಪರಿಸ್ಥಿತಿಯು ಒದಗುತ್ತದೆ. ಈ ವಿಷಯ ಜತ್ತಿ ಸಮಿತಿ ವರದಿಯಲ್ಲಿ ಹೇಳಿದಹಾಗೆ ಇಲ್ಲ. ಪ್ರತಿಯೊಂದು ಜಾನುವಾರಕ್ಕೆ ಸಾಕಷ್ಟು ಗ್ರೇಜಿಂಗ್ ಲ್ಯಾಂಡ ಉಳಿಯುವಂತೆ ಮಾಡಬೇಕು. ಮೈಸೂರ ಸೆನ್‌ಸಸ್ ರಿಪೋರ್ಟ್ ನೋಡಿದರೆ ಜಾನುವಾರುಗಳ ಸಂಪತ್ತು 18,692 ರಲ್ಲಿ 11,000 ಕುರಿ, ಮೇಕೆಗಳು ಇದ್ದುದು ಕಂಡುಬರುತ್ತದೆ. ಆದುದರಿಂದ ಸಾಕಷ್ಟು ಭೂಮಿ, ಪಶು ಸಂಪತ್ತಿನ ಸಂಗೋಪನೆಗೆ ಇಡದೆ ಯಾವ ಭೂಸುಧಾರಣೆಯನ್ನೂ ಮಾಡಕೂಡದು ಎಂದು ನಾನು ಹೇಳುತ್ತೇನೆ.

ಭೂಮಿಯ ಹಂಚುವಿಕೆಯ ವಿಷಯದಲ್ಲಿ ಅಧಿಕಾರಾರೂಢವಾಗಿರುವ ಪಕ್ಷ ಮತ್ತು ಸರಕಾರ ಮಾಡುತ್ತಿರುವುದನ್ನೆಲ್ಲಾ ಬಹಳ ಬುದ್ಧಿವಂತಿಕೆಯಿಂದ ಮಾಡಲಾಗುತ್ತಿದೆ ಎಂದು ಹೇಳುವಂತೆ ಕಾಣುತ್ತದೆ. ಕೆಲ ವರುಷಗಳ ಹಿಂದೆ ಅವರ ಗುರಿ ಏನು ಇತ್ತು, ಈಗ

(ಶ್ರೀ ವಿ. ಶ್ರೀನಿವಾಸಶೆಟ್ಟಿ)

ಏನು ಹೇಳುತ್ತಿದ್ದಾರೆ ಎಂಬುದನ್ನು ನೋಡಬೇಕು. ಇನ್ನೊಂದು ನಮೂನೆಯ ವಿಷಯ ಎಂದರೆ ಈಗ ಭೂಧಾನದಿಂದ ಎಲ್ಲಾ ಸರಿಹೋಗುತ್ತದೆ ಎಂದು ಹೇಳುತ್ತಿದ್ದಾರೆ. ಕಾನೂನಿನಿಂದ ಆಗುವುದಿಲ್ಲ ಆದರೆ ಭೂದಾನದಿಂದ ಆಗುತ್ತದೆ ಎಂದು ಹೇಳುತ್ತಾರೆ. ಮಹಾತ್ಮಾ ಗಾಂಧಿಯವರ ಹೇಳಿಕೆಯನ್ನು ಎತ್ತಿ ತೋರಿಸುತ್ತಾರೆ. ಆದರೆ ನಾನು ಹೇಳುವದೇನೆಂದರೆ ಕಾನೂನಿನಿಂದ ಪರಿಹಾರ ಆಗದೇ ಇರುವುದು ಭೂದಾನದಿಂದ ಆಗುವುದಿಲ್ಲ. ಅವರು ಈ ರೀತಿಯಾಗಿ ಹೇಳುತ್ತಿರುವುದು ನನಗೆ ಆಶ್ಚರ್ಯವಾಗುತ್ತದೆ. ಭೂದಾನದ ಪ್ರಗತಿ ಯಾವ ರೀತಿಯಾಗಿದೆ ಎಂಬುದು ಗೊತ್ತಿದೆ. ಶ್ರೀ ವಿನೋಬಾ ಭಾವೆಯವರು ಮೈಸೂರು ರಾಜ್ಯದಲ್ಲಿ ಬಂದಾಗ್ಗೆ ಇಲ್ಲಿಯ ಜನರು ಎಷ್ಟು ಎಕರೆ ಭೂಮಿಯನ್ನು ಭೂದಾನವಾಗಿ ಕೊಟ್ಟಿದ್ದಾರೆಂಬುದು ನನಗೂ ಗೊತ್ತಿದೆ. ಅವರು ಇದೇ ರೀತಿ ಭೂದಾನ ಕಾರ್ಯ ಮಾಡುತ್ತಿರಲಿ. ಆದರೆ ಭೂದಾನದಿಂದ ಈ ಸಮಸ್ಯೆ ಪರಿಹಾರವಾಗುತ್ತದೆಂದು ಯೋಚನೆ ಮಾಡದೆ ಆದಷ್ಟುಬೇಗನೇ ಕಾನೂನು ತರಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ compensation ಅಂದರೆ ಪರಿಹಾರದ್ದಾಗಿದೆ. ಜತ್ತಿಸಮಿತಿ ವರದಿಯಲ್ಲಿ ಪರಿಹಾರದ ಬಗ್ಗೆ ಸರ್ವಸಾಧಾರಣವಾಗಿ ಗೇಣಿಯ 15 ಪಟ್ಟು ಇರಬೇಕೆಂದು ನಿರ್ಣಯ ಮಾಡಿದ್ದಾರೆ. ಈ ವಿಷಯ ಹೇಳುವುದು ಕಷ್ಟ. ನ್ಯಾಯವಾಗಿ ಒಂದು ಎಕರೆ ಭೂಮಿಯಲ್ಲಿ ಇಷ್ಟೇ ಉತ್ಪತ್ತಿಯಾಗುವುದು ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಬೊಂಬಾಯಿ ಕಾನೂನು ವಿಷಯದಲ್ಲಿ ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪೊಲಿಟಿಕ್ಸ್ ಅಂಡ್ ಎಕನಾಮಿಕ್ಸನವರು 1953ನೇ ಇಸವಿಯಲ್ಲಿ 16 ಜಿಲ್ಲೆಗಳ 160 ಗ್ರಾಮಗಳಲ್ಲಿಯ ಪರಿಸ್ಥಿತಿಯನ್ನು ಪರಿಶೀಲನೆಮಾಡಿ ಈ ಕಾನೂನಿಂದ ಯಾವ ಪರಿಣಾಮಉಂಟಾಗಿದೆ ಎಂಬುದು ಅವರು ಪ್ರಕಟಿಸಿರುವ ವರದಿಯಲ್ಲಿ ಇದೆ. ಆ ವರಧಿಯನ್ನು ಓದಿದರೆ ಆಶ್ಚರ್ಯವಾಗಬಹುದು. ಅದು Reserve Bank of Indiaದ ಒಂದು Bulletin ನಲ್ಲಿ ಪ್ರಸಿದ್ಧವಾಗಿದೆ. ಅದರಲ್ಲಿಯ ಒಂದು ಭಾಗವನ್ನು ಓದಿ ತೋರಿಸುತ್ತೇನೆ.

> “Thus the main facts brought out by this investigation were: (1) the extensive resumption of lands for personal cultivation by landlords and change of tenants took place even after the enforcement of the Act showing that the protection given to the tenants could not be effective in practice; (2) a more or less normal market prevailed in land showing that the provisions for promoting the transfer of lands into the hands of tillers were not quite effective; and (3) there was an almost complete absence of any signs of lowering the share and cash rents or of any changes in the tenancy practices. The first two of the above listed failure are, it is stated, attributable to certain inherent weakness of the original Act of 1948. The Report observes that the failure to regulate rent is, however, the most distressing in that it is entirely a failure of implementation. The overall result of the investigation indicates the general failure of the Act to promote its principal objectives.”

2-30 P.M.

ಐದು ವರ್ಷದ ಕಾಯಿದೆ ಜಾರಿಯಲ್ಲಿರುವಾಗ ಬೊಂಬಾಯಿ ಸಂಸ್ಥಾನದಲ್ಲಿ ನ್ಯಾಯವಾದ ಗೇಣಿ ನಿರ್ಣಯಮಾಡುವುದಕ್ಕೆ ಆಗಲೇ ಇಲ್ಲ. ಕಾಯಿದೆ ಒಳ್ಳೆಯದಾದರೂ ಅಲ್ಲಿನ ಬಡ ರೈತರೇನಿದ್ದಾರೋ, ಟೆನೆಂಟ್ಸ್ ಯಾರಿದ್ದಾರೋ ಅವರಿಗೆ ಅನುಕೂಲವಿಲ್ಲ. ಜತ್ತಿ ಸಮಿತಿಯ ವರದಿ ಪ್ರಕಾರ ಕಾಲು ಅಂಶವಿದ್ದುದು ಬಹುಶಃ ಮುಕ್ಕಾಲು ಅಂಶ ಅಥವಾ ಅದಕ್ಕಿಂತ ಜಾಸ್ತಿ ಆದರೂ ಆಗಬಹುದು. ಬರೀ ಕಾಯಿದೆ ನೋಡಿದರೆ ಪ್ರಯೋಜನವಾಗುವುದಿಲ್ಲ. ಕಾಯಿದೆ ಯಾವರೀತಿ ಜಾರಿಗೆ ಬರುತ್ತದೆಂಬುದನ್ನು ನೋಡಬೇಕು. ಬೊಂಬಾಯಿನ ಕಾಯಿದೆಯಹಾಗೆ ಆಗಬಹುದು. ಕಾಂಪೆನ್ಸೇಷನ್ 15 ಅಂಶ, 1/5 ಅಂಶ ಎಂದಿದೆ. ಅದು ಬಹಳ ಕಡಮೆಯೆಂಬ ಅಭಿಪ್ರಾಯವಿದೆ. ಕೋರ್ಟುಗಳಲ್ಲಿ ಹೇಗೆ ತೀರ್ಮಾನ ಮಾಡುತ್ತಾರೋ ಗೊತ್ತಿಲ್ಲ. ದಕ್ಷಿಣ ಕನ್ನಡಜಿಲ್ಲೆ, ಮದ್ರಾಸು ಸಂಸ್ಥಾನದಲ್ಲಿದ್ದಾಗ ನಮಗೆ ಯಾವ ತರಹ ಪ್ರಯೋಜನವೂ ಕಂಡುಬಂದಿಲ್ಲ. ಕೋರ್ಟುಗಳಲ್ಲಿ ವ್ಯವಹಾರ ಮಾಡುವುದಕ್ಕೆ ಜನರಿಗೆ ಶಕ್ತಿಯಿಲ್ಲ. ಆದರೆ ನಾನು ಕೋರ್ಟುಗಳನ್ನು ದೂರುವುದಿಲ್ಲ. There is a landlord bias ಎಂದು ಹೇಳಬಹುದು. ಕೋಳಿ ತನ್ನ ಕಡೆಯೇ ಕೆರೆಯುತ್ತದೆ; ಆ ರೀತಿಯಾಗಿದೆಯೆಂದು ಹೇಳಬಹುದು. ಸಾಮಾನ್ಯವಾಗಿ ಕೋರ್ಟುಗಳಲ್ಲಿ ಬಡವರೇ ಹೆಚ್ಚಾಗಿ ಜಡ್ಜಿಗಳಾಗಿರುವುದಿಲ್ಲ. ಇದರಿಂದ ಮಾನಸಿಕವಾದ ಒಂದು ಪರಿಣಾಮವಿರುತ್ತದೆ. ಆದ್ದರಿಂದ ಕಾಯಿದೆ ಮಾಡುವಾಗ ಸರ್ಕಾರದವರು ಬೊಂಬಾಯಿ ಸಂಸ್ಥಾನದಲ್ಲಾದ ಹಾಗೆ ಆಗುವುದಕ್ಕೆ ಅವಕಾಶ ಕೊಡದೆ ನ್ಯಾಯವಾಗಿ ಜಾರಿಗೆ ಬರುವಂತೆಮಾಡಲು ಪ್ರಾಮುಖ್ಯವಾಗಿ ಗಮನ ಕೊಡಬೇಕೆಂದು ಹೇಳುತ್ತೇನೆ.

ಪ್ರತಿಫಲದ ವಿಷಯ ಯೋಚನೆಮಾಡುವುದಾದರೆ ನಮ್ಮಲ್ಲಿ ದೊಡ್ಡ ದೊಡ್ಡ ಜಮೀನುದಾರರಿಲ್ಲ. ಈ ವಿಚಾರದಲ್ಲಿ ಮಹಾತ್ಮಗಾಂಧಿಯವರು ಹೇಳಿರುವುದನ್ನು ಮೊದಲೇ ಸೂಚಿಸಿದ್ದೇನೆ. ಸೇಕಡ 99 ಮಂದಿಗೆ ಈ ವಿಚಾರದಲ್ಲಿ ಅನಾನುಕೂಲವಾಗಬಹುದು. ಹಾಗಾದರೆ ನ್ಯಾಯವಾದ ಪ್ರತಿಫಲ ಸಿಕ್ಕಬೇಕು. ಅದೇನೆಂದು ಈಗ ಹೇಳುವುದಕ್ಕಾಗುವುದಿಲ್ಲ. ರೈತರು ಕೊಂಡುಕೊಳ್ಳುವುದಕ್ಕೆ ಆಗದಿರುವ ರೀತಿ ತೀರ್ಮಾನವಾಗಬಾರದು, ಭೂ ಮಾಲೀಕರು ಕೋರ್ಟುಗಳಿಗೆ ಹೋಗುವಂತೆ ಮಾಡಬಾರದು, ಸಣ್ಣಪುಟ್ಟ ಭೂ ಮಾಲೀಕರ ಜೀವನಮಟ್ಟ ನೋಡಿ ಅವರನ್ನು ರಸ್ತೆಗೆ ಹಾಕದಂತೆ ಸರ್ಕಾರ ಕಾಯಿದೆ ಮಾಡಬೇಕು ಎಂದು ಇಷ್ಟುಮಾತ್ರ ಹೇಳುತ್ತೇನೆ. ಮಾರ್ಕೆಟ್ ವ್ಯಾಲ್ಯೂ ಕೊಡುವುದಕ್ಕೆ ಯಾರಿಗೂ

ಪ್ರತಿ ಕ್ರಮಾಂಕ Accession No.
ದಿನಾಂಕ Date........................

ಸಾಧ್ಯವಿಲ್ಲ. ಸರ್ಕಾರ ಈಗ ರಾಜ್ಯಾಂಗವನ್ನೇ ಬದಲಾಯಿಸಿದೆ.

ಇನ್ನೊಂದು ವಿಷಯ. ಬೇಸಿಕ್ ಹೋಲ್ಡಿಂಗ್ ವಿಚಾರ ನೋಡಿದರೆ ಐನೂರು ರೂಪಾಯಿ ಬೆಲೆಬಾಳುವ ಭೂಮಿಯಾದರೆ ಕ್ರಯದ ಮೊಬಲಗನ್ನು ನಗದಾಗಿ ಕೊಡಬೇಕು, ಉಳಿದಸಂದರ್ಭಗಳಲ್ಲಿ ಬಾಂಡುಗಳನ್ನು ಕೊಟ್ಟು 20 ಕಂತುಗಳಲ್ಲಿ ಹಣ ಪಾವತಿಮಾಡಬೇಕು ಎಂದಿದೆ. ಉತ್ತರ ಪ್ರದೇಶದಲ್ಲಿ ಈಗಾಗಲೇ ಅಲ್ಲಿನ ಸರ್ಕಾರ ಬಾಂಡುಗಳನ್ನು ಕೊಟ್ಟಿದೆ. ಅಲ್ಲಿ ಸೇಕಡ 30 ರಿಂದ 40 ವರೆಗೆ ಕ್ರಯವಿದೆ. ಆ ಪ್ರಕಾರ ಕೊಡಬಾರದು, ಅದು ಸರಿಯಲ್ಲ ಎಂಬ ವಾದವಿದೆ. ಅದೇ ಜತ್ತಿ ಸಮಿತಿಯವರು ಬಹಳ ಕಡಮೆ ಜಮೀನು ಪಡೆದಿರುವ ಚಿಕ್ಕ ಪುಟ್ಟ ಭೂಮಾಲೀಕರಿಗೆ ನಗದಾಗಿ ಕೊಡಬೇಕೆಂದು ಒಪ್ಪಿದ್ದಾರೆ, 500 ರೂಪಾಯಿ ಬಾಳುವಷ್ಟು ಪಡೆದಿರುವವರಿಗೆ ನಗದಾಗಿ ಕೊಡಬೇಕೆಂದು ಹೇಳಿದ್ದಾರೆ. ಅದರೆ ಅದೂ ಸ್ವಲ್ಪ ಕಡಿಮೆಯಾಗಿ ಕಾಣುತ್ತದೆ. ಸರಿಯಾಗಿ ಯೋಚನೆಮಾಡುವುದಾದರೆ ಸುಮಾರು ಐದು ಸಾವಿರ ರೂಪಾಯಿಗಳಷ್ಟು ಬೆಲೆಬಾಳುವ ಭೂಮಿಯಿರುವವರಿಗಾದರೂ ನಗದಾಗಿ ಹಣ ಕೊಡಬೇಕಾಗುತ್ತದೆ. ಇದು ಪ್ರಾಮುಖ್ಯವಾದ ಪ್ರಶ್ನೆ. ಐದು ಸಾವಿರದವರೆಗೆ ಬೆಲೆಬಾಳುವಷ್ಟು ಜಮೀನು ಪಡೆದಿರುವವರಿಗೆ ನಗದಾಗಿ ಹಣ ಪಾವತಿಮಾಡಿ ಅದಕ್ಕಿಂತ ಅಂದರೆ ಐದು ಸಾವಿರ ರೂಪಾಯಿಗಳಿಗಿಂತ ಜಾಸ್ತಿಯಿರುವವರಿಗೆ ಬಾಂಡು ಕೊಡಬಹುದು. ಸರ್ಕಾರಕ್ಕೆ ಕೊಡಲು ಹಣ ಸಾಕಾದಷ್ಟು ಒದಗುವುದಿಲ್ಲ ಎಂದು ಹೇಳುವುದು ಗೊತ್ತಿದೆ. ಪ್ರತಿಫಲ ಕೊಡಬೇಕೆಂದು ಕೇಳುವುದು ನ್ಯಾಯವಾದುದು; ಜಮೀನು ಅಭಿವೃದ್ಧಿಪಡಿಸಿದ್ದೇನೆ, ಅದಕ್ಕಾಗಿ ದುಡಿದಿದ್ದೇನೆ ಕೊಡಿ ಎಂದು ಕೇಳುವುದು ತಪ್ಪಲ್ಲ. ಆದರೆ ಸರ್ಕಾರಕ್ಕೆ ಸಾಧ್ಯವೇ ಎಂಬ ಪ್ರಶ್ನೆಯನ್ನು ನೋಡಬೇಕಾಗಿದೆ. ನಾವೀಗ ಸರ್ಕಾರದಪರವಾಗಿ ಹೇಳುತ್ತಿಲ್ಲ. ಸರ್ಕಾರದಲ್ಲಿ ಯಾರೇ ಇದ್ದರೂ ಸಾಕಷ್ಟು ಹಣವಿದೆಯೋ, ಸಂಪೂರ್ಣವಾಗಿ ಬೆಲೆಕೊಡುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ನೋಡಬೇಕು, ಅದು ಸಾಧ್ಯವಿಲ್ಲ. ಆದರೆ ಏನೇ ಕಷ್ಟಪರಿಸ್ಥಿತಿ ಬಂದರೂ ಕೆಳಮಟ್ಟದ ಚಿಕ್ಕಪುಟ್ಟ ಭೂಮಾಲೀಕರಿಗಾದರೂ ಅದಷ್ಟು ಸಹಾಯಮಾಡಬೇಕು. ಸುಮಾರು ಐದು ಸಾವಿರ ರೂಪಾಯಿ ಕ್ರಯಬಾಳುವ ಭೂಮಿಯ ಹಣ 20 ಕಂತುಗಳಲ್ಲಿ ಕೊಟ್ಟರೆ 250 ರೂಪಾಯಿ ವರ್ಷಕ್ಕೆ ಬರುತ್ತದೆ. ಅಷ್ಟನ್ನು ತೆಗೆದುಕೊಂಡು 20 ವರ್ಷ ಹೇಗೆ ಜೀವನ ಮಾಡಬೇಕು? ಇದನ್ನು ಯೋಚನೆಮಾಡಬೇಕಾಗಿದೆ. ಆದ್ದರಿಂದ ಚಿಕ್ಕಪುಟ್ಟ ಮಾಲೀಕರಿಗೆ ಬಹಳಮಟ್ಟಿಗೆ ನಗದಾಗಿ ಕೊಡಬೇಕೇ ಹೊರತು ಬಾಂಡುಗಳನ್ನು ಕೊಡಬಾರದು. ಹಾಗೆ ಮಾಡದಿದ್ದರೆ ಜೇನುತುಪ್ಪಹಾಕಿ ನೆಕ್ಕಬೇಕಾಗುತ್ತದೆ. ಈಗ ಪಂಚವಾರ್ಷಿಕ ಯೋಜನೆ ನಡೆಯುತ್ತಿದೆ, ಅನೇಕ ಸಣ್ಣ ಭೂಮಾಲೀಕರು ಕೆಳಮಟ್ಟದಲ್ಲಿದ್ದಾರೆ. ಅವರು ರೈತರಿಗಿಂತ ಕೆಳಮಟ್ಟದಲ್ಲಿದ್ದಾರೆ. ಅಂಥವರನ್ನು ರೈತವರ್ಗದಲ್ಲಿ ಸೇರಿಸಿ ಟೆನೆಂಟ್ಸ್‌ನಂತೆ ಭಾವಿಸಬೇಕೇ ಹೊರತು ಭೂಮಾಲೀಕರೆಂದು ಗಮನಿಸಬಾರದು. ಹಾಗೆ ಮಾಡದೆ ಚಿಕ್ಕಪುಟ್ಟ ಮಾಲೀಕರನ್ನು ಭೂಮಾಲೀಕರೆಂದು ಪರಿಗಣಿಸಿದರೆ ಅವರಿಗೆ ನ್ಯಾಯ ದೊರಕಲಾರದು.

ಈಗ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿಫಲ ಯಾವರೀತಿಕೊಡಬಹುದೆಂಬುದನ್ನು ಸೂಚಿಸಿದೆ. ಅದನ್ನು ಯೋಚನೆ ಮಾಡುವಾಗ ಬೇರೆಯಾವುದೂ ಕಾಣುವುದಿಲ್ಲ. ಪ್ರತಿವರ್ಷ ಗೇಣಿ ರೂಪವಾಗಿ ವಕ್ಕಲಿನವರು ದಣಿಗೆ ಕೊಡಬೇಕೆಂದು ಹೇಳಿದೆ. ಇದು ಯಾರ ಹಿತದೃಷ್ಟಿಯಿಂದಲೇ ಹೇಳಿರಲಿ, ಕಾಯಿದೆ ಮಾಡಿದ ಕೂಡಲೆ ದಣಿ ಮತ್ತು ವಕ್ಕಲವರಿಗಿರುವ ಸಂಪರ್ಕ ಗೊತ್ತುಮಾಡಿದರೆ ವಕ್ಕಲಿನವರು ಬಚಾವಾಗಬಹುದು. ಇಲ್ಲದಿದ್ದರೆ ದಣಿ ಕೈಲಿ ಸಿಕ್ಕಿಕೊಂಡರೆ ಪಡಬೇಕಾಗುತ್ತದೆ. ಏಕೆಂದರೆ ಈ ದಿವಸ ಗೇಣಿಪಾವತಿ ಮಾಡಿದರೂ ಕೂಡ ಸೇಕಡ 90 ಮಂದಿಗೆ ರಸೀತಿ ಇದುವರೆಗೆ ಸಿಕ್ಕದಿರುವ ಪರಿಸ್ಥಿತಿಯಿದೆ. ಆದ್ದರಿಂದ ದಣಿಗೂ ಸಾಗುವಳಿದಾರನಿಗೂ ಸಂಪರ್ಕವಿಲ್ಲದಿರುವಂತೆ ಮಾಡಬೇಕು ಇನ್ನು ಮುಂದೆಯೂ ಈಗಿರುವ ಸಂಪರ್ಕವಿದ್ದರೆ ಭೂಸುಧಾರಣೆಯಿಂದ ಪ್ರಯೋಜನವಿಲ್ಲ. ಇದಕ್ಕೆ ಭೂಸುಧಾರಣಾ ಸಮಿತಿ ಹೇಳಿದ ಒಂದೇ ಒಂದು ಉಪಾಯ ಸರಿಯೆಂದು ತಿಳಿಯುತ್ತೇನೆ. ಆದಮಟ್ಟಿಗೆ ಪ್ರತಿಫಲ ನಗದಾಗಿ ಕೊಡಬೇಕು; ಉಳಿದ ಸಂದರ್ಭಗಳಲ್ಲಿ ಅವಕಾಶವಿಲ್ಲದಿದ್ದಾಗ ಬಾಂಡು ರೂಪವಾಗಿ ಕೊಡಬೇಕು. ಜಪಾನ್‌ನಲ್ಲೂ ಇದೇ ರೀತಿಯ ಕಾಯಿದೆಯಿದೆ. 25 ವರ್ಷಗಳಲ್ಲೋ ಏನೋ ಪಾವತಿ ಮಾಡುವಂತೆ ಬಾಂಡು ಕೊಡಬೇಕೆಂದಿದೆ. ಯು.ಪಿ.ನಲ್ಲೂ ಇದೇ ರೀತಿಯಿದೆ. ಆದ್ದರಿಂದ ಯಾವರೀತಿ ನೋಡಿದರೂ ಜತ್ತಿ ಸಮಿತಿಯು ಹೇಳಿರುವ ದಾರಿಯೇ ಸರಿಯೆಂದು ಕಂಡುಬರುತ್ತದೆ. ಕೇರಳದಲ್ಲೂ ಕಾಯಿದೆ ಮಾಡಿದ್ದಾರೆ. ಇಲ್ಲೂ ಕೂಡ ಅದೇ ರೀತಿ ಮಾಡಬಹುದು. ಅಲ್ಲಿ 20 ವರ್ಷಗಳಲ್ಲಿ ಕೊಡುವಂತೆ ಬಾಂಡು ಕೊಡುವಂತೆ ಮಾಡಿದ್ದಾರೆ. ಅಲ್ಲಿ 16 ಪಾಲಿನಷ್ಟು ಎಂದು ಕಾಣುತ್ತದೆ; ಜತ್ತಿ ಸಮಿತಿಯವರು 15 ಪಾಲು ಎಂದು ಮಾಡಿದ್ದಾರೆ. ಕೇರಳದಲ್ಲಿ ಕೆಳಮಟ್ಟದವರಿಗೆ 16 ಪಾಲಿನಷ್ಟು ಮಾಡಿದ್ದಾರೆ. ಅದನ್ನು ಓದಿ ಹೇಳುತ್ತೇನೆ. ಎರಡನೆಯ ಷೆಡ್ಯೂಲಿನಲ್ಲಿ ಅವರು ಈ ರೀತಿ ಹೇಳಿದ್ದಾರೆ.

Schedule 2.

First 5 years 16 times the fair rent on the land, calculated on the maximum rate specified in Col. 3 of Schedule 1.

For the next 5 years	... 14 times.
For the next 5 years	... 12 times.
For the next 5 years	... 10 times.
For 30 acres	... 8 times.
For 50 acres	... 6 times.
Above 100 acres	... 5 times the fair rent.

Mr. DEPUTY SPEAKER.—The time allotted to the Hon'ble Member will be over at 2-45.

Sri V. SRINIVAS SHETTY.—Some more may be given to me because I am in the middle.

ಇನ್ನು, ಒಂದೆರಡು ಸಣ್ಣ ಪ್ರಶ್ನೆಗಳಿವೆ. ಚಾಲ ಗೇಣಿ ಎನ್ನುವುದಿದೆ. ಈ ವಿಷಯದಲ್ಲಿ ಹೆಚ್ಚಿಗೆ ಹೇಳಬೇಕಾದ ಅವಶ್ಯಕವಿಲ್ಲ. ಗೇಣಿಗೆ ಕೊಡುವ ಅಂಶ ಕೆಲವು ವಿಷಯಗಳಲ್ಲಿ ಮಾತ್ರ ಬರುತ್ತದೆ ಮೈನರ್‌ಗಳು, ವಿಧವೆಯರು, ಮದುವೆಯಾಗದ ಹುಡುಗಿಯರು ಮತ್ತು ಸೈನಿಕ ದಳದವರು—ಇವರುಗಳ ವಿಷಯದಲ್ಲಿ ಮಾತ್ರ ಗೇಣಿಯ ಪ್ರಶ್ನೆ ಬರುತ್ತದೆ ಅಷ್ಟೆ. ಅದೇನೂ

(SRI V. SRINIVAS SHETTY)

ಬಹಳ ದೊಡ್ಡ ಗಂಡಾಂತರವೇನೂ ಅಲ್ಲ. ನಾನಿದನ್ನು ಮೊದಲೇ ಹೇಳಿದ್ದೇನೆ. ಗೇಣಿ ಎನ್ನುವುದು ಪಕ್ಕನೆ ಹೊರಟು ಹೋಗುವುದಿಲ್ಲ. ಸ್ವಲ್ಪ ದಿವಸ ಉಳಿದೇ ಉಳಿಯುತ್ತದೆ.

ನಮ್ಮ ಕಡೆ ಇನ್ನೊಂದು ಭಯಂಕರ ಪರಿಸ್ಥಿತಿಯಿದೆ. ಒಕ್ಕಲಿಗನಾದರೂ ಅವನಿಗೆ ನಿಜವಾಗಿ ಹಕ್ಕು ಬಾಧ್ಯತೆ ಸ್ಥಾಪಿಸಿಕೊಳ್ಳುವ ಸ್ಥಿತಿಯಲ್ಲಿ ಅವನಿಲ್ಲ. ಅವರು ಯಾರೊಬ್ಬರಲ್ಲೂ ಗೇಣಿಯ ರಸೀತಿ ಇರುವುದಿಲ್ಲ. ಇದನ್ನು ಅರಿತೇ, ಮದ್ರಾಸಿನವರು ಒಂದು ಕಾಯಿದೆ ಮಾಡಿದ್ದಾರೆ. ಪ್ರತಿಯೊಂದು ಗೇಣಿಯ ಕರಾರನ್ನು ಮೂರು ಪ್ರತಿಗಳಾಗಿ ಮಾಡಿ, ಒಂದು ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸಬೇಕೆಂದಿದೆ. ಇದು ಬಹಳ ಅವಶ್ಯಕವಾದದ್ದು ಎಂದು ಹೇಳುತ್ತೇನೆ. ಇದರಿಂದಾಗಿ ಸರ್ಕಾರದಲ್ಲಾದರೂ ಒಂದು ಕರಾರಿನ ಪ್ರತಿ ಇದ್ದೇ ಇರುತ್ತದೆ. ಇವರಲ್ಲೇನೋ Receipts should be given Compulsorily ಎಂದು ಮಾಡಿದ್ದಾರೆ. ಅದರೆ ರಸೀತಿ ಕೊಡದೆ ಇದ್ದರೆ ಏನು ಮಾಡಬೇಕೆಂದು ಹೇಳಿಲ್ಲ.

Sri B. D JATTI.—Some punishment is proposed.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಬೊಂಬಾಯಿನಲ್ಲಿ fine ವಿಧಿಸಬೇಕೆಂದು ಮಾಡಿದ್ದಾರೆ. ಅದೇ ರೀತಿ ಒಂದು ಕಾಯಿದೆಯನ್ನು ಇಲ್ಲಿಯೂ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಆ ಮೇಲೆ ಇಲ್ಲಿ ಇನ್ನೊಂದು ಸಲಹೆಯಿದೆ. ಗೇಣಿಯ ಪದ್ಧತಿ ಇರುವುದಾದರೆ ಅದು ಶಾಶ್ವತ ರೀತಿಯಲ್ಲಿರಬೇಕೆಂದು ಹೇಳಿದ್ದಾರೆ. ಇದು ಸಾಧುವಾದ್ದು. ಮೈನರರು, ಸೈನ್ಯದಲ್ಲಿರುವವರು, ವಿಧವೆಯರು ಗೇಣಿಗೆ ಕೊಟ್ಟಿದ್ದಾರೆ. ಅವರು ಬಿಡಿಸಿಕೊಳ್ಳಬೇಕಾದರೆ ಐದು ವರ್ಷದ ವಾಯಿದೆ ಕಳೆದನಂತರ ಎರಡು ವರ್ಷದ ನೋಟೀಸ್ ಕೊಟ್ಟು ಬಿಡಿಸಿಕೊಳ್ಳಬೇಕೆಂದಿದೆ. ಈ ವಿಷಯದಲ್ಲಿ ಸ್ವಲ್ಪ ತೊಂದರೆಯಿದೆ. ಅದನ್ನೀಗ ಹೇಳುವುದಕ್ಕೆ ಸಮಯವಿಲ್ಲ. ಮುಖ್ಯವಾಗಿ ಇಂಥವರಿಗೆ ನ್ಯಾಯ ಸುಲಭವಾಗಿ ಸಿಕ್ಕುವಂತಿರಬೇಕು. ಮುಂದೆ ಜಮೀನು ಸಿಕ್ಕಬೇಕೆಂದರೆ ಯಾವ ತೊಂದರೆಯೂ ಇಲ್ಲದಂತೆ ಮಾಡಬೇಕೆಂದು ಹೇಳುತ್ತೇನೆ.

ಆ ಮೇಲೆ ಗೇಣಿಯ ವಿಷಯ ಹೇಳುವಾಗ, ಗೇಣಿಯದಾರನು ಆ ಜಮೀನಿನ ಮೇಲೆ ಮನೆಯನ್ನು ಕಟ್ಟಿದ್ದರಾಗಲೀ, ಅಥವಾ ಬಾವಿ ತೋಡಿಸುವುದೇ ಮುಂತಾದ ವ್ಯವಸಾಯಕ್ಕೆ ಅನುಕೂಲವಾದ ಕಾರ್ಯಗಳನ್ನು ಮಾಡಿದ್ದರೆ ಅದರ ವಿಚಾರ ಏನು ಮಾಡಬೇಕೆಂಬುದು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಜಾರಿಯಲ್ಲಿರುವುದರ ಪ್ರಕಾರ ಏನು ಹೇಳಿದೆ ಯೆಂದರೆ "If there is an agreement to the contrary" ಗೇಣಿದಾರನಿಗೆ ಏನೂ ಪ್ರತಿಫಲ ಕೊಡಬೇಕಾಗಿಲ್ಲವೆಂದು ಹೇಳಿದೆ. ಈ ರೀತಿಯಿರುವುದರಿಂದ ಗೇಣಿಯವನಿಗೆ ಏನೂ ಪ್ರಯೋಜನವಿಲ್ಲ. ದಣಿ ಹೇಳಿದ್ದಕ್ಕೆ ಎಂದೂ ರುಜುಹಾಕುವುದು ಗೇಣಿಯವನ ಪದ್ಧತಿ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಒಕ್ಕಲಿಗೆ ನ್ಯಾಯವಾಗಿ 'ಕೃತು' ಸಿಕ್ಕುವಂತೆ ಮಾಡಬೇಕು.

ಇನ್ನು ಗೇಣಿಯ ಅಂಶ ಎಷ್ಟಿರಬೇಕೆಂಬುದು. ಇಲ್ಲಿ $\frac{1}{4}$ ಅಂಶವನ್ನು ಗೊತ್ತುಮಾಡಿದ್ದಾರೆ. ಒಂದು ವಿಧದಲ್ಲಿ ಇದು ನ್ಯಾಯವೆಂದೇ ಹೇಳುತ್ತೇನೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲೂ, ತೃತೀಯ ಪಂಚವಾರ್ಷಿಕ ಯೋಜನೆಯಲ್ಲೂ ಇದೇರೀತಿ ಇರಬೇಕೆಂದು ಮಾಡಿದ್ದಾರೆ. ಇತರೆ ಪ್ರಾಂತ್ಯಗಳಲ್ಲಿ ಯಾವ ಯಾವ ರೀತಿ ಮಾಡಿದ್ದಾರೆಂದು ನೋಡಿದರೂ, ಬೊಂಬಾಯಿ, ರಾಜಾಸ್ಥಾನಗಳಲ್ಲಿ $\frac{1}{6}$ ಭಾಗ ಮಾಡಿದ್ದಾರೆ, ಒರಿಸ್ಸಾ, ಹಿಮಾಚಲ್ ಪ್ರದೇಶ್, ಮೈಸೂರು ಮುಂತಾದ ಕಡೆಗಳಲ್ಲಿ $\frac{1}{4}$ ಭಾಗ ಇರಬೇಕೆಂದು ಮಾಡಿದ್ದಾರೆ. ಪಂಜಾಬು, ಪೆಪ್ಸು, ತಂಜಾವೂರು ಮುಂತಾದ ಕಡೆಗಳಲ್ಲಿ 40 ರಿಂದ 60ರವರೆಗೆ; ಮಲಬಾರಿನಲ್ಲಿ $\frac{1}{4}$ ಭಾಗ, ಬಂಗಾಳಾದಲ್ಲಿ 40 ರಿಂದ 50ರವರೆಗೂ ಇರಬೇಕೆಂದು ಹೇಳಿದ್ದಾರೆ. ನಾನು ಈ ವಿಷಯದಲ್ಲಿ ಹೆಚ್ಚಿಗೆ ಹೇಳುವುದಿಲ್ಲ. ಜಟ್ಟಿ ಸಮಿತಿಯವರು ಮಾಡಿರುವುದು ನ್ಯಾಯವಾಗಿದೆಯೆಂದು ನಾನು ಭಾವಿಸುತ್ತೇನೆ. ನೀವೇನೋ $\frac{1}{4}$ ಅಂಶ 1/5 ಅಂಶ ಎಂದು ಹೇಳಿದ್ದರೂ ಹೇಗೋ ದಣಿ $\frac{1}{2}$ ಅಥವಾ ಮುಕ್ಕಾಲು ಭಾಗ ಬರುವಂತೆ ಮಾಡಿಯೇ ಮಾಡಿಕೊಳ್ಳುತ್ತಾನೆ. ನೀವು ಹೇಳಿದಂತೆ ಯಾರೂ ಮಾಡಿಕೊಂಡು ಸುಮ್ಮನಿರುವುದಿಲ್ಲ.

ಆಮೇಲೆ allotment of surplus lands ಪ್ರಶ್ನೆಯಿದೆ. ಈ ವಿಷಯದಲ್ಲಿ ಸಮಿತಿಯವರು ಹೇಳಿದ್ದನ್ನು ಸ್ವಲ್ಪ ಬದಲಾವಣೆಮಾಡಿದರೆ ಒಳ್ಳೆಯದು. ಏಕೆಂದರೆ, ಇವರು ಪ್ರಥಮತಃ ಮಜೂರರಿಗೆ ಇಂಥ ಜಮೀನುಗಳನ್ನು ಕೊಡಬೇಕೆಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ landless agriculturistsಗೆ ಕೊಡಬೇಕೆಂದು ಮಾಡಿ, ಯಾರು agriculturist ಆಗಿದ್ದು, ರೈತನಾಗಿದ್ದು, ಯಾವುದೇ ಕಾರಣದಿಂದ displace ಆಗಿರುತ್ತಾನೋ, (landless displaced person ಆಗಿರುತ್ತಾನೋ) ಅಂಥವರಿಗೆ ಕೊಡಬೇಕೆಂದು ನಾನು ಹೇಳುತ್ತೇನೆ. ಅದಾದಮೇಲೆ ಕೂಲಿ ಮಾಡುವವರಿಗೆ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕೋ-ಆಪರೇಟಿವ್ ಫಾರ್ಮಿಂಗ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ, ಸಹಕಾರ ಕೃಷಿಯ ವಿಚಾರದಲ್ಲಿ ನನಗಷ್ಟು ನಂಬಿಕೆಯಿಲ್ಲವೆನ್ನಬೇಕು. ನಾನು ಬಹಳ ವಿಧದಲ್ಲಿ ಪ್ರಯತ್ನಮಾಡಿದ್ದೇನೆ. ಚೈನಾ ವಿಷಯ, ನನಗೆ ಅಷ್ಟು ಗೊತ್ತಿಲ್ಲ. ರಷ್ಯಾದಲ್ಲಿ ಏನಿದ್ದರೂ ಸರ್ಕಾರದ ಬಲಾತ್ಕಾರದಿಂದ, ಒತ್ತಾಯದಿಂದ ಈ ಸಹಕಾರಸಂಘಗಳು ನಡೆಯುತ್ತಿವೆಯೇ ಹೊರತು ಜನರೇ ಒಪ್ಪಿಕೊಂಡು ನಡೆಸುತ್ತಿಲ್ಲ. ನನ್ನ ದೃಷ್ಟಿಯಲ್ಲಿ ನಿಜವಾದ ಕೋ-ಆಪರೇಟಿವ್ ಫಾರ್ಮಿಂಗ್ ಎನ್ನುವುದು ಎಲ್ಲಿ ನಡೆಯುತ್ತಿದೆಯೆಂದರೆ, ಇಸ್ರೇಲ್‌ನಲ್ಲಿ. ಅಲ್ಲಿನವರೆಲ್ಲರೂ ತಾವೆಲ್ಲರೂ ಯೆಹೂದ್ಯರು ; ಜಾತಿ ಮತ ಬೇಧವಿಲ್ಲ ಎಂದು ಒಗ್ಗಟ್ಟಾಗಿ ಸಹಕಾರಸಂಘ ಮಾಡಿಕೊಂಡು ಹುರುಪಿನಿಂದ ಕೆಲಸಮಾಡುತ್ತಿದ್ದಾರೆಂದು ನಾವು ಕೇಳಿದ್ದೇವೆ. ಹಾಗೆಯೇ ನಾವುಗಳೂ ಇಲ್ಲಿ ಕಮ್ಯೂನಿಸ್ಟರು, ಸೋಷಿಯಲಿಸ್ಟರು, ಕಾಂಗ್ರೆಸ್ಸಿನವರು ಇತರರು ಎಲ್ಲರೂ ಒಂದಾದರೆ ಮಾತ್ರ ಇಲ್ಲಿಯೂ ಅದೇ ರೀತಿ co-operative farming ಮಾಡಬಹುದು. ರಷ್ಯಾದಲ್ಲಿ ಒಂದು ಪಕ್ಷವಿದೆ. ಅಲ್ಲಿ ಇದನ್ನನುಸರಿಸುವುದಕ್ಕೆ ಯಾವ ಗಂಡಾಂತರವಿಲ್ಲ. ಚೈನಾದಲ್ಲಿ ಒಂದು ಪಕ್ಷ ಮಾತ್ರವಿದೆ. ಅಲ್ಲಿಯೂ ಗಂಡಾಂತರವಿಲ್ಲ. ಆದ್ದರಿಂದ ಎಲ್ಲಿ ಬೇರೆಬೇರೆ ಪಕ್ಷಗಳು ದೇಶದಲ್ಲಿವೆ ಅಲ್ಲಿ ತೊಂದರೆ ಬರುತ್ತದೆ. ಜೀವನರಂಗದಲ್ಲಿ ಬೇರೆ ಬೇರೆ ಜಾತಿ, ಮತ, ಕೋಮು, ಪಕ್ಷ ಹೀಗೆ ನೂರಾರು ಇದ್ದರೆ ಇದು ಸಾಧ್ಯವೇ ! ಆದ್ದರಿಂದ ನಾವು ಸುಮ್ಮನೆ ಭಾರಿ ಉದ್ದೇಶವಿಟ್ಟುಕೊಂಡು practical idea ಇಲ್ಲದೆ ಕೆಲಸ ಶುರುಮಾಡಿದರೆ ಏನೂ ಪ್ರಯೋಜನವಿಲ್ಲ. ಆ ವಿಷಯದಲ್ಲಿ ಸ್ವಲ್ಪ ಎಚ್ಚರಿಕೆಯಿಂದ ಕೆಲಸಮಾಡಬೇಕು. ಕೋ-ಆಪರೇಟಿವ್ ಸೊಸೈಟಿ ಎಂಬುದು

ಪೊಲಿಟಿಕಲ್ ಸೊಸೈಟಿ ಆದೀತು. ಒಂದು ಕಾಂಗ್ರೆಸ್‌ನವರದು, ಒಂದು ಪ್ರಜಾಸೋಷಿಯಲಿಸ್ಟ್ ಪಾರ್ಟಿಯವರದು, ಮತ್ತೊಂದು ಕಮ್ಯೂನಿಸ್ಟರದು ಹೀಗಾದಲ್ಲಿ ಗಂಡಾಂತರವಾಗುತ್ತದೆ. ಬ್ರಾಹ್ಮಣ, ಬ್ರಾಹ್ಮಣೇತರ ಎಂದು ಅಥವ ಇನ್ನು ಯಾವುದೇ ರೀತಿಯಲ್ಲಿ ಆದರೂ ಗಂಡಾಂತರವಾದೀತು. ಇನ್ನೂ ಅನೇಕ ವರ್ಷಗಳಾದರೂ ಇದು ಸರಿಹೋಗತಕ್ಕ ವಿಷಯವಲ್ಲ ಎಂಥು ನನ್ನ ನಂಬಿಕೆ.

ಭೂಮಿಯ ಬಗ್ಗೆ ಕಾಯಿದೆ ಇಲ್ಲಿಯೂ ಬರುತ್ತದೆ ಎಂದು ಹತ್ತು-ಇಪ್ಪತ್ತು ವರ್ಷಗಳಿಂದ ರೈತರನ್ನು ಭೂಮಿಯಿಂದ ಎಬ್ಬಿಸುತ್ತಿದ್ದಾರೆ. ಪಂಚವಾರ್ಷಿಕ ಯೋಜನೆಯಲ್ಲಿ voluntary surrenders ನಡೆದಿಲ್ಲ, ಅದನ್ನು ನಂಬತಕ್ಕದ್ದಲ್ಲವೆಂದು ಹೇಳುತ್ತಾರೆ. ಎಲ್ಲ ಕಡೆಗಳಲ್ಲಿಯೂ Voluntary surrenders ಆಗುತ್ತಿವೆ. ಇವೊತ್ತು ಯಾವ ಕಾಯಿದೆಯನ್ನು ತಂದರೂ ಸಹ ಈ ರೀತಿ ಯಾರ ಒಕ್ಕಲು ಬಿಡಿಸಿದ್ದಾರೆ ಅಂಥವರಿಗೆ ಭೂಮಿಯನ್ನು ಕೊಡಲಿಕ್ಕೆ ಕಾಯಿದೆಯಲ್ಲಿ ಅವಕಾಶವಿರಬೇಕು. ಇದಕ್ಕೆ ನ್ಯಾಯಪಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಅನೇಕ ಮಂದಿ ಭೂ ಮಾಲೀಕರು ಗೇಣಿಯನ್ನು ಕೊಡದೆಇದ್ದರೆ ಭೂಮಿಯಿಂದ ಒಕ್ಕಲನ್ನು ಎಬ್ಬಿಸುತ್ತಿದ್ದಾರೆ. 1937ರಲ್ಲಿ ಫೈಜಪುರ ಕಾಂಗ್ರೆಸ್ ಅಧಿವೇಶನದಲ್ಲಿ ಈ ವಿಷಯ ಚರ್ಚೆಗೆ ಬಂದು ಅವರು ಒಂದು ಠರಾವನ್ನು ಮಾಡಿದರು. ಗೇಣಿಯನ್ನು ಸಾಲವಾಗಿ ಪರಿಗಣಿಸಬೇಕು ಎಂದು ಒಂದು ನಿರ್ಣಯವನ್ನು ಪಾಸ್‌ಮಾಡಿಸಿದರು. ಅದು ಈ ರೀತಿ ಇದೆ:—

> *Resolution 11*.—Arrears of rent should be recovered in the same manner as civil debt and not by ejection.

ಇದನ್ನು ನಮ್ಮ ಸರ್ಕಾರದ ಗಮನಕ್ಕೆ, ನಮ್ಮ ಆಳುವ ಪಕ್ಷದವರ ಗಮನಕ್ಕೆ ತರುತ್ತಿದ್ದೇನೆ. ಗೇಣಿಯನ್ನು ಕೊಟ್ಟರೂ ಸಹ ಕೊಡಲಿಲ್ಲವೆಂದು ಹೇಳುವವರು ಅನೇಕರಿದ್ದಾರೆ; ಗೇಣಿ ಕೊಟ್ಟರೂ ರಸೀತಿ ಕೊಡದೆ ಇರುವವರೂ ಅನೇಕರಿದ್ದಾರೆ; ಗೇಣಿ ಕೊಟ್ಟರೂ ಸಹ ಅವರ ಮೇಲೆ ಜಗಳಮಾಡಿ, ದಾವೆ ಮಾಡಿರುವವರೂ ಇದ್ದಾರೆ. ಇಂಥದಕ್ಕೆ ನ್ಯಾಯವಾಗಿ ಒಂದು ಕಡೆ, ಒಂದು ಅಡ್ಡಿ ಹಾಕದಿದ್ದರೆ, ಯಾವ ಭೂಮಿಯನ್ನೇ ಆಗಲಿ ಒಕ್ಕಲು ಹಿಡಿದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ನೋಡುವುದಾದರೆ ಕೆಲವು ಒಕ್ಕಲುಗಳಮೇಲೆ ಐದು-ಹತ್ತು ವರ್ಷಗಳ ಹಿಂದೆ ಗೇಣಿ ಡಿಕ್ರಿಗಳಾಗಿವೆ. ಆ ಗೇಣಿಯನ್ನು ಕೊಡಲಿಕ್ಕೆ ಅಸಾಧ್ಯವಾಗಿರುವಂಥ ಅನೇಕ ಒಕ್ಕಲುಗಳವರಿದ್ದಾರೆ. ಭೂ ಸುಧಾರಣೆಯ ಯಾವ ಕಾಯಿದೆಯನ್ನು ತಂದರೂ ಅಂಥ ಒಕ್ಕಲುಗಳಿಗೆ ಉಪಕಾರ ಸಿಕ್ಕುವಂಥಾದ್ದು ಆಗುತ್ತಿಲ್ಲ. ಅದಕ್ಕಾಗಿಯೇ ಫೈಜಪುರದ ಕಾಂಗ್ರೆಸ್ ಅಧಿವೇಶನದಲ್ಲಿನ ಒಂದು ನಿರ್ಣಯದಲ್ಲಿ ಹೀಗೆ ಹೇಳಿದ್ದಾರೆ. Arrears of rent for previous year should be generally wiped out. ಇದೇ ವಿಷಯವನ್ನು ಮಂತ್ರಿಗಳೂ ಸಹ ಅನೇಕ ಕಡೆ ಹೇಳಿದ್ದಾರೆ. ನಾನೇನೂ ಹೊಸದಾಗಿ ಹೇಳುತ್ತಿಲ್ಲ. ಪಂಡಿತ ನೆಹರೂರವರೂ ಮತ್ತು ಇತರರೂ ಸಹ arrears of rent ಏನಾದರೂ ಇದ್ದರೆ wipe out ಮಾಡಬೇಕೆಂದು ಹೇಳಿದ್ದಾರೆ. ಆ ಪ್ರಕಾರವಾಗಿ ಮಾಡದೆ ಇದ್ದರೆ ಯಾವ ಭೂ ಸುಧಾರಣೆಯನ್ನು ಜಾರಿಗೆ ತಂದರೂ ಸಹ ಪ್ರಯೋಜನವಾಗುವುದಿಲ್ಲ. ಹಿಂದಿನ ಗೇಣಿಗೆ ಕೋರ್ಟಿನಲ್ಲಿ ದಾವೆ ಪಡೆದು ಭೂಮಿಯನ್ನು ಕೆಲವರು ಬಿಡಿಸಿಕೊಂಡಿದ್ದಾರೆ. ಈ ಗೇಣಿಯಾದರೋ ಅವನು ಭೂಮಿಯಲ್ಲಿ ಬೆಳೆದದ್ದನ್ನೆಲ್ಲ ಕೊಟ್ಟರೂ ತೀರದ ರೀತಿಯಲ್ಲಿರುತ್ತೆ. ಇದರಿಂದ ಅವನು ಹಿಂದಿನ ಗೇಣಿಯನ್ನು ಕೊಟ್ಟು ಭೂಮಿಯನ್ನು ಬಿಡಿಸಿಕೊಳ್ಳಲಿಕ್ಕೆ ಶಕ್ತನಾಗಿರುವುದಿಲ್ಲ. ಆದುದರಿಂದ ಹಿಂದಿನ ಗೇಣಿ ಬಾಕಿಯನ್ನು ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಯಾವುದೇ ಒಂದೇ ಕಾಯಿದೆಯನ್ನು ಮಾಡಿದರೂ ಸಹ ಅದು ಸರಿಯಾಗಿರಬೇಕು. ಹಿಂದೆ ಕಾಶ್ಮೀರದಲ್ಲಿ ಷೇಕ್ ಅಬ್ದುಲ್ಲಾರವರು ಒಂದು ಕಾಯಿದೆಯನ್ನು ಮಾಡಿ ಆ ಕಾಯಿದೆ ಎಷ್ಟರಮಟ್ಟಿಗೆ ಸರಿಯಾಗಿದೆ ಎಂದು ಪರಿಶೀಲಿಸಲು ಒಂದು ಕಮಿಟಿಯನ್ನು ಮಾಡಿದರು. ಯಾವುದೇಒಂದು ಭೂ ಸುಧಾರಣೆಯನ್ನು ಜಾರಿಯಲ್ಲಿ ತಂದರೂ ನ್ಯಾಯವಾದ credit facilities ಕೊಡದೆ ಎಲ್ಲಿಯವರೆಗೆ ನ್ಯಾಯವಾದ ಸಾಲಗಳ ಸೌಲಭ್ಯವಿರುವಂತೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಯಾವ ಕಾಯಿದೆಯನ್ನು ಮಾಡಿದರೂ ಅದು ಸರಿಬರುವುದಿಲ್ಲ. ಕಾಶ್ಮೀರದಲ್ಲಿ ನ್ಯಾಯವಾದ credit facilities ಮಾಡದೆ ಆ ಕಾಯಿದೆ ಏನೂ ಪ್ರಯೋಜನಕ್ಕೆ ಬಾರದೆಹೋಯಿತು. ಆದುದರಿಂದ ನಮ್ಮ ಮೈಸೂರು ರಾಜ್ಯದಲ್ಲಿ credit facilities ರೈತ ಜನಾಂಗಕ್ಕೆ ದೊರೆಯುವಂತೆ ಮಾಡಲು ಒಂದು ಯೋಜನೆಯನ್ನು ಹಾಕಿಕೊಂಡು ಭೂ ಸುಧಾರಣೆಯನ್ನು ತಂದರೆಮಾತ್ರ ಆ ಭೂ ಸುಧಾರಣೆಯಿಂದ ಜನರಿಗೆ ಪ್ರಯೋಜನವಾಗುತ್ತದೆ. ನಮ್ಮ ಹಳ್ಳಿಯ ಜನರಿಗೆ, ರೈತರಿಗೆ ಹೆಚ್ಚು ಕಂತುಗಳಲ್ಲಿ ಸಾಲ ಆದಷ್ಟು ಬೇಗ ಸಿಕ್ಕುವಹಾಗೆ ಒಂದು ಯೋಜನೆ ಮಾಡಬೇಕು. ಅನಂತರ ಇಂಥ ಕಾಯಿದೆಯನ್ನು ದೇಶದಲ್ಲಿ ಜಾರಿಗೆ ತಂದರೆ ಮಾತ್ರ ಒಳ್ಳೆಯದಾಗುತ್ತದೆಂದು ಸರ್ಕಾರದವರಲ್ಲಿ ಬೇಡಿಕೊಳ್ಳುತ್ತೇನೆ. ಈಗಾಗಲೇ ಬಹಳ ಹೆಚ್ಚಿನ ದರದ ಬಡ್ಡಿಯಲ್ಲಿ ಭೂ ಮಾಲೀಕರಿಂದ ಸಾಲ ತೆಗೆದುಕೊಂಡು, ಆ ಸಾಲವನ್ನು ಹಿಂದಕ್ಕೆ ಕೊಡುವಂಥ ಸ್ಥಿತಿಯಲ್ಲಿ ಹಳ್ಳಿಯ ಜನರಿಲ್ಲ. ಆದುದರಿಂದ ನ್ಯಾಯವಾದ ದರದಲ್ಲಿ ಇವರಿಗೆ ಸಾಲ ಸಿಕ್ಕುವ ಹಾಗೆ ಏರ್ಪಾಡು ಮಾಡುವವರೆಗೂ ಯಾವ ಭೂ ಸುಧಾರಣೆಯೂ ನ್ಯಾಯವಾದ ರೀತಿಯಲ್ಲಿ ಬರುವ ಹಾಗೆಯೇ ಇಲ್ಲ.

ಮತ್ತೆ ಒಂದು ಮಾತು ಹೇಳಿ ನನ್ನ ಭಾಷಣವನ್ನು ಖೈದುಮಾಡುತ್ತೇನೆ. ಯಾವುದೇ ಒಂದು ಕಾಯಿದೆಯನ್ನು ತರುವಾಗಲೂ ಗಂಡಾಂತರಗಳು ಬಾರದೆ ಇಲ್ಲ. ಭೂ ಸುಧಾರಣೆ ಮಾಡಿದರೆ ಹೆಚ್ಚಿಗೆ ಉತ್ಪತ್ತಿ ಬರುವುದಿಲ್ಲವಾದುದರಿಂದ ಭೂ ಸುಧಾರಣೆ ಬರಬಾರದೆಂದು ಭೂ ಮಾಲೀಕರ ಒಂದು ದೊಡ್ಡ ವಾದವಿದೆ. ಹೆಚ್ಚು ಉತ್ಪತ್ತಿ ಬರುವುದಿಲ್ಲವೆಂಬುದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಪ್ರಾರಂಭದಲ್ಲಿ ಉತ್ಪತ್ತಿ ಕಡಮೆಯಾಗಬಹುದು. ಯಾವುದೇ ಒಂದು ಕಾಯಿದೆಯನ್ನು ತರುವಾಗಲೂ ಸಹ ಸರ್ಕಾರದವರಿಗೆ ಕೆಲವು ಗಂಡಾಂತರಗಳು ಬರುತ್ತವೆ, ಉಪದ್ರವಗಳು ಬರುತ್ತವೆ. ಅಂತೆಯೇ ಭೂ ಸುಧಾರಣೆಯ ಕಾಯಿದೆಯನ್ನು ಜಾರಿಗೆ ತರುವಾಗಲೂ ಸ್ವಲ್ಪ ಉಪದ್ರವವಾದೀತು. ದೇಶದ ಹಿತದೃಷ್ಟಿಯಿಂದ, ದೇಶಕ್ಕೆ ಗಂಡಾಂತರ ಬರಬಾರದೆಂಬ ದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ಇದನ್ನು ಆದಷ್ಟು ಬೇಗ

(ಶ್ರೀ ಎ. ಶ್ರೀನಿವಾಸಶೆಟ್ಟಿ)

ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಪಂಡಿತ ನೆಹರೂರವರೇ ಹೇಳಿದ್ದಾರೆ, ದೇಶದ ಆರ್ಥಿಕ ದೃಷ್ಟಿಯಿಂದ, ದೇಶದಲ್ಲಿ ಸಮಾನತೆಯನ್ನು ತರುವ ದೃಷ್ಟಿಯಿಂದ ಭೂ ಸುಧಾರಣೆಯಾಗಬೇಕು, ಇದನ್ನು ಅಗತ್ಯವಾಗಿ ಯೋಚನೆಮಾಡಬೇಕು ಎಂದು. ಅವರು ಹೇಳಿರುವುದಕ್ಕೆ ತಿಲಾಂಜಲಿಯನ್ನು ಕೊಡಬೇಡಿ. ಆದಷ್ಟು ಬೇಗನೆ ಭೂ ಸುಧಾರಣೆಯ ಕಾಯಿದೆಯನ್ನು ಜಾರಿಗೆ ತನ್ನಿ. ಸರ್ಕಾರದ ಪಕ್ಷದಲ್ಲಿ ಈ ವಿಷಯದಲ್ಲಿ ಎಷ್ಟು ಒಗ್ಗಟ್ಟಿದೆಯೋ ಗೊತ್ತಿಲ್ಲ; ಎಷ್ಟು ಜನ ಇದಕ್ಕೆ ತಡೆಹಾಕುತ್ತಾರೆಯೋ ಗೊತ್ತಿಲ್ಲ. ಯಾರೂ ಇದಕ್ಕೆ ತಡೆಹಾಕುವುದಕ್ಕೆ ಹೋಗಬೇಡಿ. ಈ ಕಾಯಿದೆಯನ್ನು ಆದಷ್ಟು ಬೇಗ ತರಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise for lunch and meet again at 3-30.

The House adjourned for Lunch at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair]

***Sri J. H. SHAMSUDDIN** (Honavar).—Mr. Speaker Sir, I rise to support the main recommendations of the Report of the Mysore Tenancy and Agricultural Land Laws Committee. Sir, I feel surprised that this report which contains very modest recommendations for the implementation of the reforms in the agrarian or the agricultural sector of the economy of the State has given rise to a controversy and a furore of agitation in several parts of the State. Sir, I feel rather perplexed that Hon'ble Members of this House as well as others want considerable time for the discussion of the recommendations perhaps on the ground that the recommendations are of a revolutionary character and will perhaps change the status or the strata of society in a convulsive manner. Sir, this is rather indeed inexplicable to me; because the question of land reforms is a problem which has been engaging the attention of the political parties in the country for more than two decades; and several reports and several recommendations and enquiries as to how to achieve the ideal and solve the problem have either been published or printed or circulated for the benefit of the people concerned. Sir, the question of aggrarian reform has to be looked at from the object one has before him or the policy to which one is committed. So far as the Congress is concerned, Sir, the object of the Congress or the policy to which the Congress is committed is that the tiller of the soil should be the owner of the soil and this the fundamental object of the congress is enunciated today within the recent past. It was one of the main planks in the Congress Election Manifesto of 1937 and after 20 years out of which period, for about a decade the Congress itself has been ruling the country, I think it will not be proper for any party in this country—either between the Congress or the Opposition, to discuss details or to discuss the principle involved in this modest suggestion made by the Jatti Committee. I will presently show how the recommendations made by the Jatti Committee fall short of the desired objective of agrarian reform to which all political parties in this country are committed. After all, the main political parties in this country are the Congress, the P.S.P. and the Communist Party, and all these three parties are committed to the land reform in such a way that the peasants are made to own the land they till. Now of course, the question may arise as to how to put into practice this dictum or this policy so as not to cause the least convulsion, least disorganisation or dislocation to the rural economic sector in the country. That is the only line on which any suggestion or recommendation made can be examined or criticised. Sir, as I have been trying to lay before you the dictum or the policy that should guide any land reform, we should evolve a system by which as I said, the tiller of the soil should be the owner of the soil, and the recommendations should be judged from that point of view; and if the recommendations take us nearer to the goal, naturally they should be welcomed; but if they are not taking us near that goal, then we must examine it in such a light that we may add to it or take away from it, so that we may approach our ideal or goal in as short a time as possible.

Sir, what are the main recommendations? It is from that point of view, I have placed the dictum before this House. Now Sir, the question has to be decided from three points of view. One is, whether there should be a ceiling; second, whether there should be eviction or dispossessing the land from the person; and three, if lands are to be taken by fixing a ceiling, whether compensation should be paid for the surplus land taken and if so, how the compensation should be paid. These are the more important features of this report, or should be the feature of any Report on tenancy reform.

Sir, the question is put about the ceiling and it agitates the minds of the people who are interested either as tenants or as landlords, more so from the point of view of landlords. Now the question of ceiling can be divided into two heads. Ceiling on existing holdings, and ceiling on future acquisitions. So far as ceiling on future acquisitions are concerned, I think no legislation is necessary, of a drastic type. Because only two sections in an enactment is sufficient to prevent future acquisition—one is that land should not be transferred to non-agriculturists, and the second is, that all surplus land should not be granted to non-agriculturists or surplus lands should not be granted beyond a certain limit either to individuals or to anybody who comes in for cultivation of land.

Sri C. J. MUCKANNAPPA (Gubbi).—Supposing a non-agriculturist wants to become an agriculturist ?

Sri J. H. SHAMSUDDIN.—In that case, he can go in for land which the Government will dispose of and unless he becomes an agriculturist, he cannot purchase land in the private market.

Sri G. N. PUTTANNA (Tumkur).—Supposing a man wants to become an agriculturist, can he get land within the village or in Andamans or Nicobar?

Sri J. H. SHAMSUDDIN.—If lands are available in the village, he will get it there. If he finds that by going to Andamans he can better his status, he should go there. That is left to the choice of the individual and he will decide having regard to the conditions then prevailing. This is too hypothetical a question to be answered now. This is so far as ceiling on existing holdings is concerned. While enforcing the ceiling, the question has to be looked into whether we are dislocating the present strata of society and whether the advantage that we obtain by placing a ceiling on existing holdings will be greater. So far as the Mysore State is concerned, I feel that if ceilings are put on existing holdings, there will not be much convulsion or dislocation or disturbance in the present strata of society, because according to the recommendations of this committee, the ceiling will be limited to the extent of about 100 acres. So, if a Land Commission is appointed and if it goes into the question of income of a particular class of land and on the basis of the income of a particular class of land if the Commission arrives at a particular standard, I feel that an individual will be able to own about 100 acres of land. Therefore, the ceiling that will be applicable will be in respect of those who will own more than 100 acres of land. What will be the percentage of people who will be affected if we put ceiling on agricultural land in excess of 100 acres ? The answer has been given by the committee itself on page 42 of the report. It says : "The total number of these is only 3·4% of the total population."

Sri C. K. RAJAIAH SETTY (Chiknaikanahally).—Does it include estates also ?

Sri J. H. SHAMSUDDIN.—I am coming to that. It may not include coffee estates because the report says that there will be no ceiling on coffee estates so far as existing holdings are concerned. It suggests a ceiling for future acquisition. Therefore, this percentage will not include holders of coffee estates. Therefore, I may take it that the ceiling applies to agricultural land other than coffee, tea and rubber estates which may come under the exemption. Therefore, only 3 per cent of the population in the State will be affected if ceiling on present holdings

(SRI J. H. SHAMSUDDIN).

is enforced. Therefore, there will be no serious repercussions or reactions or convulsion on the state of the society or on the rural economic sector in the State.

SRI C. K. RAJAIAH SETTY.—May I know whether you accept 100 acres as the ceiling limit?

SRI J. H. SHAMSUDDIN.—I am just saying what the committee has said. After the Land Commission comes into existence and after the income of a particular class of land is assessed and on the basis of income of a particular class of land if ceiling is fixed, the committee comes to the conclusion that it will come to 100 acres per individual. Therefore, I say that if the committee's recommendations with regard to ceiling are accepted, naturally the rural economic sector will not be disturbed or convulsed seriously as it is made out by vested interests in the country who have raised a furore against ceiling.

SRI H. M. CHANNABASAPPA (Krishnarajanagar).—I want to know whether the surplus land in excess of the ceiling will be a means of living and provide employment to every poor class of people?

SRI J. H. SHAMSUDDIN.—The object of ceiling has been mentioned by the committee. It is also stated by the Planning Commission as well as by the several Congress resolutions. The object is to remove the disparity in wealth in the country and agriculture is an important sector where at present disparity in holding or disparity in the means of production exists.

SRI H. M. CHANNABASAPPA.—I hope the Hon'ble Member will agree that the same principle should be applied to the legal profession, industrial sector and all other sectors of economy in the interest of uniformity and consistency of policy?

SRI J. H. SHAMSUDDIN.—Of course, this question must be addressed not to me alone but to all the other Hon'ble Members of this House also. One thing is certain, namely, that the question of having a ceiling on sectors other than the agricultural sector is a big one before the country. How to achieve it is another question. I may tell him that there are other ways than the one adopted here of resuming land. For example, a factory cannot be taken away from the management unless it is nationalised and given over to the labourers. Of course a system is now being evolved which is called profit-sharing or joint management by the owners as well as labourers and the Government of India has laid down a policy that they will encourage such industries wherein the labour take not only an active share in management but also an active share in the profit that accrues.

SRI H. M. CHANNABASAPPA.—Similarly, why not the landlord and the peasant pool their resources together, and share?

SRI J. H. SHAMSUDDIN.—That is a system to be worked out by the competent authority to which the administration of that department is given. If my friend suggests that the reform in the rural economy should be withheld pending accomplishment of that, I am not agreeable to that. I may draw the attention of the Hon'ble Member to an article in the A.I.C.C. Review wherein the Hon'ble Minister for Labour at the Centre Sri Gulzarilal Nanda has aptly answered this question. He has aptly answered the question whether the agricultural reform can wait the evolution of a system by which all the other industrial sectors can be so brought into operation as to have a nationalised aspect or to have a system wherein the labourers or the workers take the lion's share in the profit. There are other methods of reducing the income that accrues to the industrialists. The Wealth Tax, the Expenditure Tax, the Capital Gains Tax and so many other taxes are an indirect method of taking away the profit that accrues to the industry and goes to the private pocket.

SRI H. M. CHANNABASAPPA.—Does the Hon'ble Member say that land should be distributed to all the poor people for cultivation? Then, how will he get money that is required for the purchase of other instruments of production? When excess of money is available with so many people, what does he propose to attract that excess money required in the larger interest of the State and put it to use in the national interest?

Sri J. H. SHAMSUDDIN.—The question of money required for improvement of agriculture is a question of making available easy credit to the rural area. That credit system has to be evolved. We have got experience and we know that immediately this land legislation comes in, the former landlord will not advance money to the agriculturist and therefore the question has to be solved by giving more credit through credit societies or other agencies that Government may bring into existence.

Sri H. M. CHANNABASAPPA.—Where are we to get large amount of money when practically all privatr money lenders are to lend money foe agricultural development?

Sri J. H. SHAMSUDDIN.—The private sector. If they don't lend it to the agriculturists, they will lend it to Government because they will not keep the money idle. The investment market is so much that the terms of investment will attract the money. Therefore, it will go to Government resources and Government distribute it in the form of credit. Therefore, that question can be easily solved. There will not be much difficulty. The question that the ceiling as proposed by the Committee is to be retained and so far as agricultural lands are concerned.

Now I am coming to the point raised by my friend about coffee and rubber estates. So far as the ceiling on the present holding is concerned, the Committee is one with the general trend of opinion in the country; that is, so far as these classes of lands are concerned, no ceiling should be put. The Committee has made a recommendation that ceiling on future acquisitions of land for cultivation of coffee, tea and rubber should be put. That is a fundamental question. I think in that respect the Committee has gone beyond the recommendations of the Second Five Year Plan. The Second Five Year Plan envisages that no ceiling should be put on coffee, rubber and tea plantations. Now generally people think that Communists in this respect are far ahead of the Congress in this particular respect. I do not subscribe to that view so far as land extension is concerned. I have got the latest Bill which is published in Kerala. Even that Government has thought it fit not to put ceiling on existing and future holdings so far as coffee, rubber and tea plantations are concerned. *(An HON'BLE MEMBER.—They are afraid.) It is not because they are afraid of it but because there are sound, economic and cogent reasons for not applying ceiling to these lands. What has happened is, these agricultural operations can successfully be carried on if the holdings are larger and bigger sized. Not only that. The agricultural operation can be said to be agriculture *cum* industry. The agricultural produce is to be processed in such a manner that before bringing it to market, certain mechanical processes are to be undertaken and the produce made fit for market. Not only that. This produce is meant mainly for export. Therefore, putting a ceiling on this may hamper its production and therefore our export trade may be affected. We are in dire need of foreign exchange and therefore any thing that may reduce the exportable surplus of such commodity may affect economy and disturb the balance of payment. That is one of the reasons. The second reason is this. There are certain legislations which make it impossible if the holding is reduced to an uneconomic or optimum size. You know that there are called labour legislations by which facilities of hospital, canteen, maternity and minimum wages—all these legislations come into play, so far as these agricultural operations are concerned. Therefore, the Government of India has said that if the number of labourers employed in Coffee Estate are less than 50, if the size is less than 50 acres, all these lands do not come into play. Therefore, if you put a ceiling on future acquisitions, there will be a tendency to partition these estates so as to evade certain beneficial laws that will accrue to the advantage of the labourers

(SRI J. H. SHAMSUDDIN)

that work in the plantations. From that point of view also, it is not advisable according to me to put a ceiling on future acquisitions so far as coffee, tea and rubber plantations are concerned and therefore Government should think twice before they implement the recommendation of the Committee in this respect.

The second important question so far as this Committee is concerned is the basis of the rent or what you call the quantum of rent. In this particular case, the Committee's recommendation is a little,—may I say—below the expectations if I don't call it in another way. We know that several pieces of legislation were available or existing in different parts of the State. May I refer to the Bombay legislation that came into being when the Committee went into the question. There, the quantum of rent fixed was about one-sixth. Now the Committee has come back to one-fifth. Our intention is to reach the desired goal. The desired goal is that the tiller of the soil should be the owner and reduction of the quantum of rent has a significant meaning in reaching that goal because ultimately the land which is in the possession of the tenant, comes within the purview of resumable area as enunciated by the Committee, the quantum of rent has a significance when we fix the compensation to be paid. The Committee has fixed it at one-fifth instead of one-sixth. I do not know whether the Committee was aware of the financial legislation that was being enacted while the integration came into existence. We have observed a tendency that when the financial law being integrated, the highest amount was picked up. Therefore, the *vice versa* ought to have been there. When the Committee went into the question of fixing a quantum of rent the minimum available in any part of the State ought to have been the standard or the basis. The Committee might have felt for psychological reasons that in certain parts it might give a rude shock and therefore must have taken it into consideration the resultant psychological effect and must have confined itself to one-fifth. I feel that reduction below that will be unjust from my own point of view though there is a great agitation to bring it to one-third or one-fourth. I am surprised that it is a decision carried out in several forms and ways. One of the forms is farmers' quorum giving an idea that all the representatives are nothing but personal cultivators or farmers or tenants. I do not know whether there were tenants in the farmers' quorum. They considered one-third to be reasonable to be fixed. I feel that one-third will be too much a burden on the peasants of the country. The peasants have paid very exorbitant rent in the past. As the Second Five Year Plan says, the past burden should be lightened and if we add to the present burden, then we will be going against the main recommendations of the Committee. One of the terms of reference to the Committee was that they must conform to the spirit and law of the recommendations of the Second Five Year Plan. Of course, in this respect, they have conformed because the suggestion made in the Second Five Year Plan is that the quantum payable by the tenant to the landlord should not exceed one-fifth or one-fourth. Perhaps that might have compelled the Committee to fix it at onefifth. Either we may give a trial for the first few years and if we feel that the burden on the peasantry is unbearable or if a share of their sweat is taken and given to absentee landlords or persons who do not contribute to the cultivation of land, naturally we can bring another legislation to reduce that quantum.

4 P.M.

The fixity of tenure also is important. Therefore the quantum of rent and the fixity of tenure are two very important factors because they have a reaction on the production of food grains in this country. The landholders have been saying that this piece of legislation will retard the progress of food production. I do not think so because if the tenants are made to feel that if they improve the land either by putting more manure or by putting extra labour, the results of them will go to them direct, they will be encouraged to improve the agricultural land under their tenancy. Therefore one should not be scared away by the idea that by this piece of legislation food production in the country will get a set back. That is not the experience. On the other hand, the psychological effect on the tenant, the impetus to the tenant to put more labour and money or in the form of manure will increase the quantity of food available for distribution in this country. Therefore the fixity of tenure is also an important factor. Here the committee suggests five years minimum. I think it is too short a period. The period of tenancy is indefinite according to the committee but the minimum is five years. What I would suggest is that the committee ought to have gone to the extent of saying that such of the tenants as have been cultivating the land for a certain period from a particular date, should be declared as permanent tenants whatever the form may be; you may call such a tenant as a protected tenant or a permanent tenant. In this respect the recommendations of the committee are a little below the expectations of those who are committed to agrarian reforms. This is very necessary so far as old Mysore is concerned because what I feel is that in the old Mysore the record of rights are not up-to-date; the tenancy columns are not properly filled in. Interested people have got a sign of the coming legislation. By the time the Bill is enacted, the preliminaries are completed and the Bill goes to the village level for implementation, the shrewd landholders who are interested will take the clue of the impending legislation and will see that the names of the tenants are not properly recorded in the record of rights. Therefore the committee ought to have made a provision in a legislation of this nature that such of the people who are on the line from a particular period say two or three years, shall be deemed to be tenants of a permanent nature and that they cannot be evicted. Not only that; there is a law in old Mysore that eviction cannot be had under certain circumstances; but there are cases wherein eviction has been resorted to by several malpractices. Therefore the committee ought to have made a provision to the effect that such of the evictions which have taken place contrary to the Act should be annulled and the tenants entitled to apply for resumption of the land within a certain period.

An HON'BLE MEMBER.—How can we do that?

Sri J. H. SHAMSUDDIN.—That ought to have been done by the committee. The Committee have not done it. I am saying all this because that in spite of the recommendations of the committee being executed *in toto*, the advantage or the effect that will accrue to the tenantry will not be very significant and will not be of the nature that is expected by those who are committed to land reform and whose objective is that within a planned period the tenant should be put on a firm basis, that frictions are less and that he is assured of a certain amount of return for his labour and the capital or for the investment that he has made either in the form of money or in the form of labour. Therefore these two healthy suggestions I offer and it is for the Government to accept them or not.

There are other important recommendations and I will restrict myself to certain suggestions which may be in modification of the suggestions made by the committee. The committee in one or two important respects has not adhered to the healthy principle. The committee ought to have exempted the public trust properties either religious or of a charitable nature. The committee wants those lands to be resumed and the institutions deprived of the benefits from the lands. They say that by this they will lose 25 per cent. When I say that public trust properties should be exempted I want to make my position clear. They should not be exempted so far as the quantum of rent is concerned; they should not be exempted so far as fixity of tenure is concerned; they should not be exempted so far as the passing of receipt is concerned; they should be exempted only so far as resumption is concerned or ceiling is concerned.

Sri S. D. KOTHAVALE (Chikodi).—My friend wants lands belonging to public trust to be exempted from the provisions of the Tenancy Act. He wants that provisions regarding exemption should not be applied, similarly provisions regarding fixity of tenure, etc. Therefore his contention comes in complete conflict with the principle which he himself has enunciated so far.

Sri J. H. SHAMSUDDIN.—It may be said that these are institutional ownerships and so the question of personal cultivation comes in. Therefore without disturbing the question of *bona fide* cultivation, institutional or personal cultivation may be so limited that it is possible for the institution to cultivate personally. After all, in any institution cultivation will be through hired labour and the supervision of the head of the institution will be very nominal. Therefore that difficulty enumerated by friend can be obviated this way. I have got a copy of the Kerala Bill in my hands which is of a far-reaching nature. Even there also the question of ceiling is exempted. Public trust and religious trust have been exempted. As I see the Bombay and Hyderabad Acts are of a far-reaching nature. In fact on 1st April 1957 all the tenants were deemed to be tenants under that Act. Even though that Act said that the tenants will not be owners of lands held by public trust, the other restrictions as regards personal cultivation, resumption, passing of receipt were retained. Only the tenant will not become the owner. The institutions were allowed to receive the rent because the object for which the rent is received is a laudable one, *i.e.*, either charitable or religious and by which we are trying to help the poor either by way of medical relief, education and other facilities.

Sri J. B. MALLARADHYA (Nanjangud).—You do not want to exempt educational institutions?

Sri J. H. SHAMSUDDIN.—I include under charitable institutions the educational institutions also. The difference was religious and non-religious. I do concede that educational institutions should receive that exemption.

Sri C. K. RAJAIAH SETTY.—Even to the extent of thousands of acres? Whatever may be extent you want to give exemption?

Sri J. H. SHAMSUDDIN.—Yes. I am not aware that the evil is so radical here. But I have got some knowledge of my area. If my friend feels that thousands of acres are owned here, the minimum that is required for the running of an institution may be retained and the rest may be resumed. So this is another aspect of the committee's recommendation which I want to bring to your notice.

There are other small matters which may be taken into consideration while enacting the piece of legislation. For example, while fixing rent, it is stated that it has to be fixed in terms of produce. But what is gross produce has not been defined by the committee, whether it is one-sixth, one-third or one-fiftht—this quantum of rent has to be fixed. What is produce has to be defined. There is a definition given in the Kerala Bill which may be adopted after suitable modifications. In Bombay when the Act was implemented, the Tahsildar was asked to notify the yield of a particular acre of land for the purpose of assessing the quantum of rent every year and the question was one of produce. Naturally a question arose whether subsidiary crops grown in a particular piece of land should be taken into consideration. There is what is called the main crop. There is what ls called the second crop and there is what is called the subsidiary crop. For example a land may be used for paddy cultivation in one season and in the next season, it may be used for pulses. Naturally whether the crop of pulses should be taken into consideration while fixing the qnantum of rent was the question. Because it was a subsidiary crop, a number of conflicts and controversies arose on this question whether subsidiary crops should be taken into consideration. The civil authorities took it that subsidiary crops should be taken into consideration while fixing the rent and the tenancy authorities said that only the main crop should be taken into consideration.

The result was, lands which were capable of growing two crops of paddy were not put to that use, because the tenant shrewdly felt that if he cultivated paddy for the second time, it would be included for assessment of rent. Therefore he switched on to pulses, because the tenancy authorities were not taking into account, for fixing the rent, pulses growth. By this definition of crops, growing of food crops went down and paddy in particular. Our Committee has not fixed what produce is. While framing definitions, I hope that Government will take into consideration to define what is a gross produce and what are the items to be included in fixing the quantum of rent. This is another suggestion.

There are certain other recommendations of the committee, which may lead to some confusion. It is at page 91; the committee says it is just to minimise evil arising out of non-grant of receipts. The committee feels that presumption should be drawn that if a suit or application for the recovery of arrears of rent is not made within a certain period, *i.e.*, 31st August or October, it should be presumed that the land rent has been paid. That is at page 91. So the question is whether this does not conflict with the general law of limitation. Because a landlord is entitled to recover rent for three years. Therefore, the suggestion that is made in order to protect the tenant that if the landlord does not enforce his remedy by going over to a court of law or to the land tribunal within a particular month of the year, the presumption that the rent is paid will be rather too harsh. And, it will conflict with the general law of the land so far as limitation is concerned. Therefore, that suggestion has to be carefully scrutinised and some method should be evolved so that the evil may be minimised.

Sir, I do not want to deal with the other recommendations of the Committee. Because, I am conscious that there are many members who are anxious to speak. Therefore the question—rather my request to the Government is that these recommendations should be implemented in an expeditious manner. I think any form of discussions or lengthy suggestions in this case are not warranted by the circumstances that prevail in the country and I have my own misgivings in regard to this. I am thankful to the committee that after much labour and careful examination, they have produced a very laudable report. But my warning to the Government, rather my suggestion—I cannot give a warning—to the Government is that this may not be left in a suspended animation and on account of the storm that is brewing over the birth of the child in the form of these recommendations, the child may not succumb. If I refer to certain observations of the committee, there was a Bill in this very august House, the old Mysore Assembly in 1954, to modify the existing law and the amendments were of a very very modest and mild type. That was in the year 1954 and this is the year of grace 1958. The Bill was dropped and it lapsed. On account of the storm that is raised now, I am afraid and hope that a similar calamity or fatality may not happen to this child which according to me is of suspended animation. With these observations, I accept the report of the committee.

*ಶ್ರೀ ಬಿ. ಆರ್. ಪಾಟೀಲ್ (ಹಾನಗಲ್).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಜತ್ತಿ ಕಮಿಟಿಯವರು ಭೂಸುಧಾರಣೆ ಬಗ್ಗೆ ಮಾಡಿರುವ ವರದಿಯ ವಿಚಾರವಾಗಿ ಮಾತನಾಡ ಬೇಕಾದರೆ ನಮಗೆ ಇದರಿಂದ ಕೆಲವೊಂದು ಮಾಹಿತಿಗಳು, ವಿವರಣೆಗಳು ಸಿಕ್ಕಿಲ್ಲ. ಕಾರಣ ಈ ಸಂಬಂಧವಾಗಿ, ಭೂಸುಧಾರಣೆಗಳ ಸಂಬಂಧವಾಗಿ ಬಿಲ್ಲನ್ನು ತರುವ ಮೊದಲು ಕೆಲವೊಂದು ಮಾಹಿತಿಯನ್ನು ತೆಗೆದುಕೊಳ್ಳುವುದು ವಿಹಿತವೆಂದು ನನಗನ್ನಿಸುತ್ತದೆ. ಉದಾಹರಣೆಗೆ extent of non-resumable area ಎಷ್ಟಾಗುತ್ತದೆ; resumable area ಎಷ್ಟಾಗುತ್ತದೆ, owners cultivate ಮಾಡುವ, ಕಡೆಯಿಂದ ಎಷ್ಟು ಭೂಮಿ ಬರುತ್ತದೆ, ಹೀಗೆ ಎಲ್ಲ resume ಮಾಡಿದನಂತರ ಹಂಚಲಿಕ್ಕೆ ಜಮೀನು ಎಷ್ಟು ಉಳಿಯುತ್ತದೆ, ಇವುಗಳನ್ನು ತಿಳಿಯ ಬೇಕು. ಇದರ ಅಂಕಿ ಸಂಖ್ಯೆಗಳನ್ನು ತೆಗೆದುಕೊಳ್ಳದೆ ನಾವು ಈ ಜಮೀನಿನ ಸಂಬಂಧವಾದ ಕಾಯಿದೆ ಮಾಡಿದಾಗ್ಗೆ ಜಮೀನು ಹಂಚಲಿಕ್ಕೆ ಉಳಿಯುತ್ತದೆಯೋ ಇಲ್ಲವೋ ಎನ್ನುವ ಸಂಶಯ ನನಗೆ ಬರುತ್ತದೆ. ಸೀಲಿಂಗ್ ವಿಚಾರದಲ್ಲಿ 5 ಜನರ ಕುಟುಂಬಕ್ಕೆ ಒಂದು ತರಹ, ಐದು ಜನಕ್ಕಿಂತ ಹೆಚ್ಚಿನ ಕುಟುಂಬ ಇದ್ದಾಗೆ ಒಂದು ತರಹ ಹೀಗೆ ಮಾಡಿದ್ದಾರೆ. ಈ ರೀತಿ ಇರುವ ಕುಟುಂಬಗಳು ನಮ್ಮ ರಾಜ್ಯದಲ್ಲಿ ಎಷ್ಟಿವೆ ಎನ್ನುವ ಮಾಹಿತಿಯನ್ನು ನಮಗೆ ಕೊಟ್ಟಿಲ್ಲ. ಆದಕಾರಣ ಸೀಲಿಂಗ್ ನಿರ್ದಿಷ್ಟಪಡಿಸುವಾಗ ಇಂಥ ಅಂಕಿ ಅಂಶಗಳು ನಮಗೆ ಮಹತ್ವವಾದುವೇ ವಿನಾ

(ಶ್ರೀ ಬಿ. ಆರ್. ಪಾಟೀಲ್)

ಈಗ ಕೊಡಲಾದ ಅಂಕಿ ಅಂಶಗಳು ನಮ್ಮನ್ನು ಎಲ್ಲಿಯೂ ಒಯ್ಯುವುದಿಲ್ಲ. ಮತ್ತು ಐದು ಜನರಿಗಿಂತ ಹೆಚ್ಚಾಗಿರುವ ಕುಟುಂಬಗಳನ್ನು ಗಣನೆಗೆ ತೆಗೆದುಕೊಂಡಿದ್ದಾರೆಯೇ ವಿನಾ ಗ್ರಾಮಾಂತರಗಳಲ್ಲಿ ಅನೇಕವಾಗಿರುವ 40-50 ಜನರಿರುವ ಕುಟುಂಬಗಳವರಿಗೆ ಏನು ಅನುಕೂಲಗಳನ್ನೂ ಈ ವರದಿಯಲ್ಲಿ ಮಾಡದೇಯಿರುವುದು ಆಶ್ಚರ್ಯದ ಸಂಗತಿಯಾಗಿದೆ. ಅಲ್ಲದೆ ಈ ವರದಿಯಲ್ಲಿ 1952-53ನೆಯ ಇಸವಿಯಲ್ಲಿದ್ದ ಧಾರಣೆಗಳ ಯಾದಿಯನ್ನೂ ಸಹ ಕೊಟ್ಟಿರುವುದಿಲ್ಲ. ಈ ಪಟ್ಟಿ ನಮಗೆ ಸಿಕ್ಕಿದರೆ ಸೀಲಿಂಗ್ ಗೊತ್ತು ಮಾಡುವುದಕ್ಕೆ ಅಥವ ಅಂದಾಜುಮಾಡುವುದಕ್ಕೆ ಸಾಧ್ಯವಿತ್ತು. ಈಗ ಸೀಲಿಂಗ್ ಏನಾಗುತ್ತದೆ, ಜಮೀನು ಎಷ್ಟು ಉಳಿಯುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ನಮಗೆ ನಮ್ಮ ಹಳ್ಳಿಯ ಅನುಭವವಿರುವಂತೆ ನೋಡಿದರೆ ಬತ್ತದ ಭೂಮಿ ನಾಲ್ಕು ಎಕರೆ ಮತ್ತು 12 ಎಕರೆ Basic ಮತ್ತು Family holding ಇಟ್ಟರೆ ಐದು ಜನಗಳಿಗಿಂತ ಹೆಚ್ಚು ಮಂದಿ ಒಂದು ಕುಟುಂಬದಲ್ಲಿದ್ದರೆ ಆ ಸಂಖ್ಯೆಗೆ ತಕ್ಕಂತೆ 108 ಎಕರೆ ಪ್ರಕಾರ ಹಂಚುತ್ತಾಹೋದರೆ, ಜಮೀನನ್ನು ಜನರಿಂದ ಕಿತ್ತುಕೊಂಡು ರೆಸ್ಯೂಮ್ ಮಾಡಿಕೊಳ್ಳಬಹುದೇ ಹೊರತು ಇದರಿಂದ ರೈತರಿಗೆ ಹೆಚ್ಚು ಅನುಕೂಲವಾಗುವುದಿಲ್ಲ. ಇದು 'ರಿಸಂಪ್ಷನ್' ಕಾಯಿದೆ ಆಗುತ್ತದೆಯೇ ಹೊರತು ಅಥವ ಬೇಸಾಯ ಮಾಡುವವನಿಂದ ಭೂಮಿಯನ್ನು ಕಸಿದುಕೊಳ್ಳುವ ಕಾಯದೆ ಆಗುತ್ತದೆಯೇ ವಿನಾ ಬೇರೆ ಆಗುವುದಿಲ್ಲ, ಬೊಂಬಾಯಿನಲ್ಲಿ ಮುಂದೆ ಹೋಗುತ್ತಿರುವಾಗ ಈ ಹೊತ್ತು ನಾವು ಹಿಂದೆ ಹೋದರೆ, ರೈತರ ಪರಿಸ್ಥಿತಿ ಬಹಳ ಅಧೋಗತಿಗೆ ಹೋಗುತ್ತದೆ. ಚುನಾವಣೆಯ ಸಮಯದಲ್ಲಿ ಜನರಿಗೆ ನಾವು ಏನು ಹೇಳಿದ್ದೇವೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದನ್ನು ಬಿಟ್ಟು ಈ ಹೊತ್ತು ಈ ರೀತಿ ಹೇಳಿದರೆ ಜನರಿಗೆ ಮೋಸಮಾಡಿದ ಹಾಗಾಗುತ್ತದೆ. ನಾವೆಲ್ಲರೂ ರಾಜೀನಾಮೆಕೊಟ್ಟು ಈ ಭೂ ಸುಧಾರಣೆಯ ಪ್ರಶ್ನೆಯನ್ನು ಜನರ ಮುಂದಿಟ್ಟು ಅವರ ಅಭಿಮತವನ್ನು ತೆಗೆದುಕೊಂಡು ಕಾಯದೆ ಮಾಡುವುದರಿಂದ ಜನರಿಗೆ ಕಲ್ಯಾಣಮಾಡಿದ ಹಾಗಾಗುತ್ತದೆ. ಆಗ ಇಲ್ಲಿ ಕುಳಿತಿರುವವರು ನಮ್ಮ ಜನರ ಪ್ರತಿನಿಧಿಸ್ವರೂಪವನ್ನು ತೆಗೆದುಕೊಂಡು ಮಾಡುತ್ತೇವೆನ್ನಬಹುದೇವಿನಾ ಹೀಗೆ ಮಾಡಿದರೆ ಜನರಿಗೆ ವಂಚನೆ ಅಥವ ಮೋಸ ಮಾಡಿದ ಹಾಗಾಗುತ್ತದೆ ಎಂದು ಹೇಳದೆ ಬೇರೆ ದಾರಿ ಕಾಣುವುದಿಲ್ಲ.

ಇನ್ನು ಈ ಸೀಲಿಂಗ್ ಕಡಮೆಯಾಗುತ್ತದೆ, ಇದು ಬಹಳ ಆಗಬೇಕು, ಅಥವ ಸೀಲಿಂಗೇಬೇಡ ಎಂದು ಹೇಳುವುದರಲ್ಲ ಏನೂ ಹುರುಳಿಲ್ಲ. ಹಳ್ಳಿಯಲ್ಲಿ ನಾವು ಜಮೀನ್ದಾರ ಎನಿಸಿಕೊಳ್ಳುವವರು ನಮ್ಮ ಕಮತ ಮಾಡಿಕೊಳ್ಳುವುದಕ್ಕೇ ನಮಗೆ ಬರುವುದಿಲ್ಲ. ರೈತರು ಹೆಚ್ಚು ದಕ್ಷತೆಯಿಂದ ಗೊಬ್ಬರ, ಸೊಪ್ಪು ಹಾಕಿ ಅವರು ವ್ಯವಸಾಯ ಮಾಡಿದಹಾಗೆ ನಮಗೆ ಮಾಡುವುದಕ್ಕಾಗುವುದಿಲ್ಲ. Personal cultivation ಎನ್ನುವುದನ್ನು personated cultivation ಅಥವ supervisory cultivation ಎಂದು ಹೇಳುವುದಕ್ಕಾಗುವುದಿಲ್ಲ. ಹಿರೇತನದ ಕಮತದಿಂದ ಏನೂ ಪ್ರಯೋಜನವಿಲ್ಲ. ರೈತರಿಗೆ ಅನುಭವವಿರುವಹಾಗೆ, ಅವರಿಗೆ ಒಕ್ಕಲತನ ಗೊತ್ತಿರುವಹಾಗೆ ಬಾಕಿ ಜನರಿಗೆ ಗೊತ್ತಿರುವುದಿಲ್ಲ. ನಾವು ಇಲ್ಲಿ ಕುಳಿತಿರುವವರು ಹಳ್ಳಿಗೆ ಹೋಗಿ ಕೆಲಸಮಾಡಲು ಬರುವುದಿಲ್ಲ, ಹಿರೇತನದ ಕಮತ ಮಾಡುತ್ತೇವೆ. ನಾನೂ ಕಮತ ಮಾಡಿದ್ದೇನೆ. ಆದರೆ ಸ್ವತಃ ದುಡಿಯುವುದಕ್ಕೆ ಬರುವುದಿಲ್ಲ. ನಾವು ಮಾಡಿದರೆ ಒಂದು ಜಮೀನಿನಲ್ಲಿ ಎಕರೆಗೆ ಎಂಟು ಒಂಬತ್ತು ಚೀಲ ಬತ್ತ ಬರುತ್ತದೆ, 20 ಎಕರೆಗೆ 180—190 ಚೀಲ ಬರುತ್ತದೆ. ಅದೇ ನಮ್ಮ ರೈತರು ಮಾಡಿದರೆ ಎಕರೆಗೆ 30 ಚೀಲ ಬೆಳೆಯುತ್ತಾರೆ. ಕಮತ ಮಾಡುವುದರಲ್ಲಿ intensive cultivationಗೆ ಹೆಚ್ಚು ಪ್ರಾಧಾನ್ಯ ಕೊಡಬೇಕೇ ಹೊರತು ಹೆಚ್ಚು ಜಮೀನನ್ನು ಮಾಡುವುದು ಪ್ರಯೋಜನವಿಲ್ಲ. ಹೀಗೆ ಹೆಚ್ಚು ಜಮೀನನ್ನು ಮಾಡುವುದೂ ಹೆಚ್ಚು ಹೆಂಡತಿಯರನ್ನು ಮದುವೆ ಮಾಡಿಕೊಳ್ಳುವುದೂ ಒಂದೇ ಆಗುತ್ತದೆ. ಈಗ ಜಮೀನಿನಲ್ಲಿ ಉತ್ಪತ್ತಿ ಕಡಿಮೆ ಆಗುತ್ತದೆ ಎಂದರೆ, ಇದಕ್ಕೆ ಕಾರಣರು ರೈತರಲ್ಲ. ಕುದುರೆಗೆ ಲಗಾಮು ಅಥವ ಏನೂ ಹಾಕದೆ ಬಿಡುವಂತೆ ರೈತರನ್ನು ಕೈ ಬಿಟ್ಟಿದ್ದೇವೆ. ಅವರಿಗೆ ಗೊಬ್ಬರ ಕೊಡುವುದಿಲ್ಲ, ಕಬ್ಬಿಣ ಕೊಡುವುದಿಲ್ಲ, ತಕಾವಿ ಸಾಲ ಕೊಡುವುದಿಲ್ಲ. ಹೀಗಿರುವಾಗ, ಹೆಚ್ಚು ಬೆಳೆಯಿರಿ ಎಂದು ಅವರಿಗೆ ಹೇಳುವುದರಲ್ಲಿ ಅರ್ಥವಿಲ್ಲ. ರೈತರಿಗೆ ಜಮೀನು ಹೋಗುತ್ತದೆಂದು ಜಮೀನ್ದಾರರು ಜಮೀನನ್ನು ರೈತರಿಂದ ಬಿಡಿಸಿಕೊಂಡು ತಾವೇ ಸ್ವತಃ ವ್ಯವಸಾಯ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ವ್ಯವಸಾಯಕ್ಕೆ, ಉತ್ಪತ್ತಿಗೆ ಧಕ್ಕೆ ಬಂದಿದೆ. ಬಡವರಿಗೆ, ರೈತರಿಗೆ ಒಕ್ಕಲುತನ ಮಾಡುವವರಿಂದ ಹೆಚ್ಚು ಉತ್ಪತ್ತಿಗೆ ಧಕ್ಕೆ ಬಂದಿಲ್ಲ. ಜಮೀನ್ದಾರರಾದ ನಮಗೆ ಜಮೀನನ್ನು ಬಿಡುವುದಕ್ಕೆ ಇಷ್ಟವಿಲ್ಲ, ನಾವೇ ವ್ಯವಸಾಯ ಮಾಡುವುದಕ್ಕೆ ಶಕ್ತಿ ಇಲ್ಲ. ಜಮೀನಿನಲ್ಲಿ ದುಡಿಯುವವರಿಂದ ಧಕ್ಕೆ ಬಂದಿಲ್ಲವೆಂದು ನಾನು ಹೇಳುತ್ತೇನೆ, ಹೀಗೆ ಮಾಡುವುದೆಂದರೆ, dog in the manger ನೀತಿಯಾಗುತ್ತದೆ. ನಾವು ಬೇರೆಯವರಿಗೆ ಕೊಡುವುದಿಲ್ಲ, ನಾವೂ ದುಡಿಯುವುದಿಲ್ಲ ಎನ್ನುವಂತಾಗುತ್ತದೆ. ನಮಗೆ ಸ್ವಂತವಾಗಿ ಇದರಲ್ಲಿ ಹಿತವಿದೆ ಎಂದೆನಿಸಬಹುದು, ಆದರೆ ಜಮೀನ್ದಾರರ ದೃಷ್ಟಿಯಿಂದ ಹಾಗೂ ರೈತರ ದೃಷ್ಟಿಯಿಂದ ಹೆಚ್ಚಿನ ಭೂ ಸುದಾರಣೆ ವಿಚಾರದಲ್ಲಿ ಆದಷ್ಟುಮಟ್ಟಿಗೂ ರೈತರಿಗೆ ಹಿತವಾಗುವಂತೆ ಕಾಯಿದೆ ಮಾಡುವುದು ಒಳ್ಳೆಯದು. ಎಲ್ಲರಿಗೂ ಹಿತವಾಗಬೇಕೆಂದು ನಾನು ಹೇಳುತ್ತೇನೆ.

ರೈತರಿಗೆ ಈಗ ನೀರಾವರಿ ಸೌಲತ್ತು ಅಗತ್ಯ. ಎಷ್ಟೋ ಕೆರೆಕಟ್ಟೆಗಳೂ ತೂಬು ವಗೈರೆ ಒಡೆದು ಹೋಗಿ evaporating pans ಆಗಿವೆ. ಇವೆಲ್ಲವನ್ನೂ ಸುಧಾರಣೆ ಮಾಡಿಕೊಟ್ಟರೆ ಹೆಚ್ಚು ಬೆಳೆಯಲು ಅನುಕೂಲವಾಗುತ್ತದೆ. ಹೀಗೆ ಮಾಡದಿದ್ದರೆ ಬಡವರಾದ ರೈತರು ಹೆಚ್ಚು ಬೆಳೆದು ಉತ್ಪತ್ತಿಯನ್ನು ಹೆಚ್ಚುಮಾಡಲು ಸಾಧ್ಯವಿಲ್ಲ. ಸುಮ್ಮನೆ ಅವರ ಮೇಲೆ ಆಪಾದನೆ ಹೊರಿಸುವುದರಲ್ಲಿ ಅರ್ಥವಿಲ್ಲ.

ಜಮೀನನ್ನು ರೆಸ್ಯೂಮ್ ಮಾಡಿಕೊಂಡು ರೈತರ ಕಡೆಯಿಂದ ತೆಗೆದುಕೊಳ್ಳುವುದು ಎನ್ನುವುದು ಬಹಳ ಮಹತ್ವದ ವಿಷಯವಾಗಿದೆ.

Sri S. D. KOTHAVALE.—Would the Hon'ble Member be pleased to suggest what steps or measures should be taken to better the lot of the peasants ?

ಶ್ರೀ ಬಿ. ಆರ್. ಪಾಟೀಲ್—.ಹೀಗೆ ನಡುವೆ ಪ್ರಶ್ನೆಗಳನ್ನು ಕೇಳಿದರೆ ನನ್ನ ವಿಚಾರ

ಸರಣಿತಪ್ಪಿ ಹೋಗುತ್ತದೆ. ಏನಾದರೂ ಪ್ರಶ್ನೆ ಮಾಡಬೇಕೆಂದರೆ, ನಾವು ಬೇರೆ ಎಲ್ಲಾದರೂ ಕುಳಿತು ಮಾಡಬಹುದು, ಪ್ರಶ್ನೆಗಳು ಮತ್ತು ಉತ್ತರಗಳಿಗೆ ಇಲ್ಲಿ ಸ್ಥಾನವಿಲ್ಲ. ಬೇಕಾದರೆ ಆಮೇಲೆ ಬೇಕಾದ ಪ್ರಶ್ನೆಗಳಿಗೆ ಉತ್ತರ ಕೊಡಬಹುದು. ನನಗೆ ತಿಳಿದದ್ದನ್ನು ಹೇಳುತ್ತೇನೆ. ಆದರೆ ಈಗ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಹೀಗೆ ನಡು ನಡುವೆ ಪ್ರಶ್ನೆ ಕೇಳುವುದು 'ಆಟದಾಗೆ ಗೂಟ' ಇದ್ದ ಹಾಗಾಗುತ್ತದೆ. ಮುಂದೆ ಹೋಗುವುದಕ್ಕಾಗುವುದಿಲ್ಲ.

4-30 P.M.

ಇನ್ನು ಜತ್ತಿ ಸಮಿತಿ ವರದಿಯ ಪುಟ 51ರಲ್ಲಿ ಸ್ವಂತ ಸಾಗುವಳಿಗೆ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳುವಾಗ ಈ ರೀತಿಯಾಗಿರಬೇಕೆಂದು ಹೇಳಿದೆ :—

> "(*i*) Where the land owner has under his personal cultivation land which exceeds a family holding but is less than the ceiling limit, he may have the right to resume for personal cultivation, provided that—
>
> (*a*) his tenant is left with a family holding, and
>
> (*b*) the total area obtained by the owner together with the land already under his personal cultivation does not exceed the ceiling; and
>
> (*ii*) if the land owner has less than a family holding or no land under his personal cultivation, he may be allowed to resume one-half the tenant's holding or an area which, together with the land if any under his personal cultivation, makes up a family holding, whichever is less, provided that the tenant is left with not less than a basic holding.
>
> No person who is already personally cultivating land in excess of the ceiling for personal cultivation should be allowed to resume land from his tenants. A person whose holding exceeds the ceiling may be allowed to resume up to one-half of the land leased out to a tenant, subject to the condition that the tenant is left with not less than a basic holding."

ಅಂದರೆ "ಸ್ವಂತ ಒಕ್ಕಲುತನಕ್ಕಾಗಿ ನಿಗದಿ ಮಾಡಿದ ಪರಮಾವಧಿ ಮಿತಿಗೆ ಮೀರಿದಷ್ಟು ಭೂಮಿಯನ್ನು ಆಗಲೇ ಸ್ವಂತವಾಗಿ ಉಳುತ್ತಿದ್ದ ಯಾವೊಬ್ಬ ಮನುಷ್ಯನನ್ನು ತನ್ನ ಗೇಣೀದಾರರಿಂದ ಭೂಮಿಯನ್ನು ತೆಗೆದುಕೊಳ್ಳಲು ಅವಕಾಶ ಕೊಡಕೂಡದು. ಪರಮಾವಧಿ ಮಿತಿಗಿಂತ ಹೆಚ್ಚಿನ ಹಿಡುವಳಿಯಿರುವ ಮನುಷ್ಯನಿಗೆ, ಗೇಣೀದಾರನಿಗೆ ಮೂಲ ಹಿಡುವಳಿಗಿಂದ ಕಡಿಮೆಯಿಲ್ಲದಷ್ಟು ಭೂಮಿಯನ್ನು ಬಿಟ್ಟಿರಬೇಕೆಂಬ ಶರ್ತಿಗಧೀನವಾಗಿ, ಗೇಣೀದಾರನಿಗೆ ಕೌಲು ಕೊಟ್ಟಿದ್ದ ಭೂಮಿಯನ್ನು ಅರ್ಧದಷ್ಟನ್ನು ಮರಳಿ ತೆಗೆದುಕೊಳ್ಳಲು ಅವಕಾಶ ಕೊಡಬಹುದು." ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಆದರೆ ಸೀಲಿಂಗ ಬರದೆ ಅವಧಿಯಾದಮೇಲೆ ಬೇಸಿಕ್ ಹೋಲ್ಡಿಂಗ ಇಟ್ಟು ಜಮೀನನ್ನು ಕಸಿದುಕೊಳ್ಳಬೇಕೆಂಬುದು ಬಹಳ ಅಯೋಗ್ಯವಾಗುತ್ತದೆ. ಏನೇ ಆದರೂ ಸೀಲಿಂಗಿಗೆ ಧಕ್ಕೆ ಬರದಂತೆ ಮಾಡಬೇಕು ಎಂದು ನನ್ನ ಅಭಿಪ್ರಾಯವಾಗಿದೆ.

ಇನ್ನು a person whose holding exceeds the ceiling may be allowed to resume up to one-half of the land leased out to a tenant, subject to the condition that the tenant is left with not less than a basic holding ಎಂದು ಇರುವಾಗ ನಾಲ್ಕೈದು ಸಾವಿರ ಎಕರೆ ಜಮೀನು ಇಟ್ಟುಕೊಂಡಾಗ್ಗೆ half-basic holding ಬಿಡಿಸುವದಕ್ಕೆ ಸಾಧ್ಯವಾಗುವುದಿಲ್ಲ. ಸೀಲಿಂಗಕ್ಕೆ ಮಿಕ್ಕಿದ್ದನ್ನು ಬಿಡಿಸಿಕೊಳ್ಳುವದಕ್ಕೆ ಒಂದು ಊರಿನಲ್ಲಿ ಮಾಡಬಹುದು. ಭೂಮಿಯೆಲ್ಲಾ ಒಂದೇ ಊರಿನಲ್ಲಿದ್ದರೆ ಹಾಗೆ ಮಾಡಲು ಅನುಕೂಲವಾಗಬಹುದು. ಬೇರೆ ಬೇರೆ ಊರುಗಳಲ್ಲಿ ಜಮೀನು ಇದ್ದರೆ ಈ ನಿಯಮದಿಂದ ಅವನಿಗೆ ಜಮೀನು ಉಳಿಯುವುದಿಲ್ಲ. ಕುಟುಂಬ ಹಿಡುವಳಿಯ ಲೆಕ್ಕದ ಪ್ರಕಾರ ಮರಳಿ ಜಮೀನು ತೆಗೆದುಕೊಳ್ಳುವದಕ್ಕೆ ಅವಕಾಶ ಕೊಟ್ಟರೆ ಐದಾರು ಲಕ್ಷ ರೈತರು ಜಮೀನು ಇಲ್ಲದೆ ನಿರ್ಗತಿಕರಾಗಿ ಹೋಗುತ್ತಾರೆ. ಆದುದರಿಂದ ಜತ್ತಿ ಸಮಿ ವರದಿಯಲ್ಲಿ ಶಿಫಾರಸು ಮಾಡಿದಂತೆ ಮಾಡಬಾರದಾಗಿ ನಾನು ವಿನಯದಿಂದ ಕೇಳಿಕೊಳ್ಳುತ್ತೇನೆ. ವರದಿಯ ಅದೇ ಪುಟದಲ್ಲಿ ಮುಂದೆ ಹೀಗೆ ಹೇಳಿದೆ :—

> If a tenant is left with a family holding......

ಆದುದರಿಂದ ಬೇಸಿಕ್ ಹೋಲ್ಡಿಂಗ್ ಇಟ್ಟರೆ ನೆಟ್ಟಗಾಗುತ್ತದೆ. ಯಾವದೊಂದು ಸರಿಯಾದ ಉದಾಹರಣೆಯನ್ನು ಕೊಡದೆ ಈ ರೀತಿ ಹೇಳಿದರೆ ನಮಗೆ ಏನೂ ತಿಳಿಯುವುದಿಲ್ಲ. ಹೀಗಾಗಿರುವದರಿಂದ ಒಂದು ನಿರ್ದಿಷ್ಟಯನ್ನು ಮುಟ್ಟಲಾರದು.

ನಮ್ಮ ರಾಜ್ಯಪಾಲರು ಎರಡೂ ಸಭೆಗಳನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಭೂಸುಧಾರಣೆಯ ಬಗ್ಗೆ ಸರಕಾರದ ನೀತಿ ಏನಿದೆ ಎಂಬುದನ್ನು ತಿಳಿಸಿದ್ದಾರೆ. ಮತ್ತು ಇದೇ ಅಧಿವೇಶನದಲ್ಲಿ ಭೂಸುಧಾರಣೆಯ ಬಗ್ಗೆ ಒಂದು ದೊಡ್ಡದಾದ ಮಸೂದೆಯನ್ನು ಸಹ ಸಭೆಯ ಮುಂದೆ ಮಂಡಿಸಲಾಗುವದೆಂದು ರಾಜ್ಯಪಾಲರು ಹೇಳಿದ್ದಾರೆ: ಅವರ ಭಾಷಣದ ಆರನೆಯ ಪುಟ, 12ನೇ ಪ್ಯಾರಾದಲ್ಲಿ ಈ ರೀತಿ ರಾಜ್ಯಪಾಲರು ಹೇಳಿದ್ದಾರೆ :—

> "It has been the accepted policy of Government that land must be held only by the person who actually cultivates it. This objective has been kept in view while recently revising the rules for the disposal of Government lands for cultivation."

(ಶ್ರೀ ಬಿ. ಆರ್. ಪಾಟೀಲ್)

ಅಂದರೆ ಉಳುವವನೇ ಭೂಮಿಯ ಒಡೆಯ tiller of the land is the owner of the land ಎಂದು ಹೇಳಿದಹಾಗಾಯಿತು. ಹಾಗಾದರೆ, ಹಳ್ಳಿಗಳಲ್ಲಿ ದೇಸಾಯಿ ದೇಶಪಾಂಡೆ ಮುಂತಾದವರಿಗೆ 500 ಎಕರೆ ಭೂಮಿಯನ್ನು ಕೊಟ್ಟು ಬಿಡುತ್ತಿದ್ದರೆಂದು ನನಗೆ ಅನಿಸುತ್ತದೆ. Land for the tiller ಎಂಬುದಾಗಿ ಏನು ಒಂದು ಪಾಲಿಸಿ ಸರಕಾರ ಇಟ್ಟುಕೊಂಡಿದ್ದಾರೆಯೋ ಅದರಲ್ಲಿ ಈ ಭೂಸಮಸ್ಯೆ ಲವಲೇಶವಿಲ್ಲ ಎಂದು ಎನ್ನಲು ಏನೂ ಅಡ್ಡಿಯಿಲ್ಲ.

ನಾವು ಮೊದಲು ಮುಂಬಯಿ ರಾಜ್ಯದಲ್ಲಿ ಇದ್ದೆವು. ಮುಂಬಯಿ ಟೇನನ್ಸಿ ಕಾನೂನದ ಬಗ್ಗೆ ವರದಿಯ ಪುಟ 27ರಲ್ಲಿ ಈ ರೀತಿ ಹೇಳಿದೆ :—

> (4) "Maximum and minimum limits of rent are fixed. The rent would not be less than twice, nor exceed 5 times the assessment or Rs. 20 per acre whichever is less, the tenant paying land revenue and other Government dues. The total payment by the tenant was however limited to 1/6th of the gross produce.
>
> (5) On and with effect from 1st April 1957 to be known as the Tillers' Day every tenant whether permanent, protected or otherwise would be deemed to have purchased from the landlord land held by him as tenant free of all encumbrances subject to the condition that he cultivated the land personally and certain other conditions. But this will not apply to the lands leased by a person who does not hold more than an economic holding and whose annual income from all sources including the rent of the land does not exceed Rs. 1,500. The purchase price would be between 20 and 200 times the assessment and payable in either a lump-sum or in instalments within a maximum period of 12 years with simple interest at 4½ per cent."

ಈ ರೀತಿಯಾಗಿ ಮುಂಬಯಿ ಟೆನನ್ಸಿ ಕಾನೂನದಲ್ಲಿದೆ. ಮೈಸೂರ ರಾಜ್ಯ ಬಹಳ ಮುಂದುವರಿದ ದೇಶ ಎಂದು ನಾವು ಏನೋ ತಿಳಿದುಕೊಂಡಿದ್ದೆವು. ಕನ್ನಡ ಪ್ರದೇಶಗಳೆಲ್ಲಾ ಒಂದುಗೂಡಿದ ಮೇಲೆ ಈ ಹೊಸ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರಿನ ಬದಲು ಮೊದಲಿದ್ದ ಮೈಸೂರು ಎಂಬ ಹೆಸರನ್ನೇ ನಾವು ನಮ್ಮ ಭುಜದ ಮೇಲೆ ಹತ್ತಿಸಿಕೊಂಡಿದ್ದೇವೆ. ಮೈಸೂರು ಮಾದರಿ ಮೈಸೂರು ಅಂದರೆ Ideal State ಎಂದು ತಿಳಿದುಕೊಂಡಿದ್ದೆವು. ಆದರೆ ಈಗ ನೋಡಲು ಇದು Ideal State ಆಗಿರದೆ Idle State ಆಗಿದೆ. ಯಾಕೆಂದರೆ ಈ ಭೂಸುಧಾರಣೆಗಳಿಂದ ಹನ್ನೆರಡು ವರ್ಷಗಳ ಹಿಂದೆ ಮುಂಬಯಿ ಭಾಗದಲ್ಲಿ ಯಾವ ಕಾನೂನು ಇತ್ತೋ ಅದನ್ನು ಈಗ ಜಾರಿಗೆ ತರಲು ಪ್ರಯತ್ನಿಸುತ್ತಿದ್ದಾರೆ. ನಮ್ಮ ಪ್ರಗತಿ 12 ವರ್ಷ ಹಿಂದೆ ಹೋಗುತ್ತಿದೆ. ಮುಂಬಯಿಯಂಥ ಪ್ರಗತಿ ಪರ ರಾಜ್ಯದಿಂದ ಮೈಸೂರು ರಾಜ್ಯಕ್ಕೆ ಬಂದಿರುವ ನಮ್ಮ ಉತ್ತರ ಕರ್ನಾಟಕದ ಪ್ರದೇಶದಲ್ಲಿಯ ರೈತರಿಗೆ ನಾವು ಈಗ ಎಂತಹ ಕಾನೂನು ತರುತ್ತಿದ್ದೇವೆಂದು ಹೇಳೋಣ ? ಇವತ್ತಿನ ದಿವಸ ನಾವು ಮೈಸೂರ ರಾಜ್ಯಕ್ಕೆ ಬಂದು ಒಂದು ದೊಡ್ಡ ಬುದ್ಧಿ ಕಲಿತುಕೊಂಡಂತಾಗಿದೆ. ನಿಜವಾಗಿಯೂ ಹೇಳುವದಾದರೆ ನಾವು ಪ್ರಗತಿ ಪಥದಲ್ಲಿ ಮುಂದಕ್ಕೆ ಹೋಗದೆ ನಮ್ಮ ಪ್ರಗತಿ ಹಿಂದಕ್ಕೆ ಓಡುತ್ತಿದೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಇನ್ನೊಂದು ವಿಷಯ ಜಮೀನು ಬಿಡಿಸಿಕೊಳ್ಳುವದಕ್ಕೆ ಎರಡು ವರ್ಷ ಅವಧಿಯ ನೋಟೀಸು ಇರಬೇಕೆಂದು ಇದೆ. ಆದರೆ ಒಂದು ವರ್ಷ ಅವಧಿಯ ನೋಟೀಸು ಕೊಡಬೇಕೆಂದು ಇರತಕ್ಕದ್ದು ಒಳ್ಳೇದು. ಎರಡು ವರ್ಷಗಳ ಅವಧಿಯ ನೋಟೀಸು ಕೂಡ ಅವಶ್ಯವಿಲ್ಲ. ಯಾಕೆಂದರೆ ಈ ರೀತಿ ಭೂಮಿ ಬಿಡಿಸುವ ನೋಟೀಸು ಬಂದ ಕೂಡಲೇ ರೈತನು ಎರಡು ವರ್ಷ ಭೂಮಿಗೆ ಗೊಬ್ಬರ ಹಾಕುವದಿಲ್ಲ. ಹೆಚ್ಚು ಉತ್ಸಾಹದಿಂದ ಕೆಲಸಮಾಡುವುದಿಲ್ಲ. ಆದ್ದರಿಂದ ಎರಡು ವರ್ಷ ಉತ್ಪತ್ತಿಯ ಮೇಲೆ ಪರಿಣಾಮವಾಗುತ್ತದೆ. ಆದುದರಿಂದ ಒಂದು ವರ್ಷ ನೋಟೀಸು ಸಾಕು ಎಂದು ನನಗೆ ಅನಿಸುತ್ತದೆ.

ಇನ್ನು ರೆಂಟದ ವಿಷಯ ಅಸೆಸ್‌ಮೆಂಟಿನ ಇಂತಿಷ್ಟು ಪಟ್ಟು ಎಂದು ಗೊತ್ತುಮಾಡಿರುವುದು ಸರಿಯಾಗಿಲ್ಲ. ಇನ್ನು ರಿವಿಜನ್ ಆಫ್ ಸೆಂಟಲಮೆಂಟವಾಗಿಲ್ಲ. ಸರಿಯಾದ ಅಂಕಿಅಂಶಗಳು ದೊರೆಯುವದಕ್ಕೆ ಸಾಧ್ಯವಿಲ್ಲ ಈ ವಿಷಯವನ್ನು ಸದ್ಯಕ್ಕೆ ಮುಂದಕ್ಕೆ ಹಾಕಬೇಕೆಂದು ಒಂದು ಸಮಿತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೆ ಸದ್ಯಕ್ಕೆ ಜತ್ತಿ ಸಮಿತಿಯು ತಿಳಿಸಿದಂತೆ ರೆಂಟ ಗೊತ್ತುಮಾಡಿದರೆ ಹಳ್ಳಿಗಳಲ್ಲಿಯ ಸಾವುಕಾರರು ಇದನ್ನು ದುರುಪಯೋಗಪಡಿಸಿಕೊಳ್ಳುವರು.

ಜತ್ತಿ ಸಮಿತಿ ವರದಿಯ 55ನೆಯ ಪುಟದಲ್ಲಿ ಈ ರೀತಿ ಹೇಳಿದೆ :—

> "The Second Five-Year Plan proposes no modifications to the above limits but suggests that it may be useful to fix the maximum rent as a multiple of land revenue."

ಇದರಂತೆ ಮಲ್ಟಿಪಲ್ ಆಫ್ ಲ್ಯಾಂಡ್ ರೆವೆನ್ಯೂ ಹೆಚ್ಚುಮಾಡಬಹುದಾಗಿತ್ತು. ರೀಜನಲ್ ಸೆಟ್ಲ್ಮೆಂಟ್ ಪ್ರಕಾರ ಒಂದು ಕಡೆ ಕಡಮೆ ಒಂದು ಕಡೆ ಹೆಚ್ಚು ಆಗಬಹುದು. ಪಂಚವಾರ್ಷಿಕಯೋಜನೆಯಲ್ಲಿ ಹೇಳಿರುವ ಅಭಿಪ್ರಾಯದ ಪ್ರಕಾರ ಮಲ್ಟಿಪಲ್ ಹೆಚ್ಚುಮಾಡುವ ತತ್ವವನ್ನು ಬಿಟ್ಟು ಮನಸ್ಸಿಗೆ ಬಂದಹಾಗೆ ಮಾಡಿ ಪ್ರಾಸ್ಪರಿಟಿ ಬರುವುದೆಂದರೆ ಅದು ಶುದ್ಧ ತಪ್ಪಾಗುತ್ತದೆಂದು ಹೇಳುತ್ತೇನೆ.

ವಿನಾಯಿತಿ ತೋರಿಸುವಾಗ ಯಾರಿಗೂ ಯಾವ ರೂಪದಲ್ಲಿ ತೋರಿಸುತ್ತಾರೆಂಬುದು ಸೂಕ್ತವಲ್ಲವೆಂದು ಕಾಣುತ್ತದೆ. ಲ್ಯಾಂಡ್ ಕಮಿಷನ್ನಲ್ಲಿ ಒಬ್ಬ ಹೈಕೋರ್ಟ್ ಜಡ್ಜ್, ಒಬ್ಬ ರೆವೆನ್ಯೂ ಅಧಿಕಾರಿ, ಒಬ್ಬ ಅಗ್ರಿಕಲ್ಚರಲ್ ಇಲಾಖಾ ಅಧಿಕಾರಿ ಇರದೆ

ಒಬ್ಬರೇ ಜಡ್ಜ್ ಇದ್ದರೆ ನೆಟ್ಟಗೆ; ಇಂಡಿಪೆನ್‌ಡೆಂಟ್ ಜಡ್ಜ್‌ಮೆಂಟ್ ಒಳ್ಳೆಯದು. ಆದ್ದರಿಂದ ಒಬ್ಬರೇ ಜಡ್ಜ್ ಇರಬೇಕೆಂದು ಹೇಳುವುದು ಸರಿ. ಜಡ್ಜರು ಬೇಕಾದ ಸಲಹೆಯನ್ನು ತೆಗೆದುಕೊಳ್ಳಬಹುದು.

ಆಮೇಲೆ ಜಮೀನು ಬಿಡಿಸಿಕೊಳ್ಳುವ ವಿಚಾರವಿದೆ ಈ ಸಂಬಂಧದಲ್ಲಿ ಫ್ರಾಗ್‌ಮೆಂಟೇಷನ್ ಆಗುತ್ತದೆ ತಕರಾರಿಗೆ ಅವಕಾಶವಾಗಬಹುದು ಎಂಬ ಸಂದೇಹವಿದೆ. ಆದ್ದರಿಂದ ಮಿತಿಯನ್ನಿಟ್ಟು ತೆಗೆದುಕೊಳ್ಳಬೇಕೆಂದು ಶಿಪಾರ್ಸಿರುವುದು ಸ್ವಾಭಾವಿಕ. ಬೇಕಾದಾಗ ಪ್ರಿವೆನ್ಷನ್ ಆಫ್ ಫ್ರಾಗ್ಮೆಂಟೇಷನ್ ಆಫ್ ಹೋಲ್ಡಿಂಗ್ಸ್ ಆಕ್ಟ್ ತತ್ವವನ್ನನುಸರಿಸಿ ಕೆಲಸಮಾಡುವುದು ಸರಿಯೆಂದು ಸಮಿತಿಯ ವರದಿಯಲ್ಲಿ ಹೇಳಿದೆ. ಹಾಗೆ ಮಾಡಿದರೆ ಬಹಳ ಸರಿ ಆಗುತ್ತದೆ, ಆ ರೀತಿ ಮಾಡಬೇಕು ಎಂದು ವಿನಂತಿಯಿದೆ.

ಜಮೀನು ಸಂಬಂಧದಲ್ಲಿ ರೆಸ್ಯೂಮಬಲ್ ಏರಿಯಾವನ್ನು ಲ್ಯಾಂಡ್ ಕಮಿಷನ್‌ನವರು ಡಿಕ್ಲೇರ್ ಮಾಡಬೇಕೆಂಬ ಒಂದು ಅಂಶವಿದೆ. ಸುಪೀರಿಯರ್ ಅಥವಾ ಇನ್‌ಫೀರಿಯರ್ ಜಮೀನುಗಳಿದ್ದಾಗ ಬೇಕಾದ್ದನ್ನು ರೈತರು ಇಟ್ಟುಕೊಂಡು ಬಾಕಿಯಾದ್ದನ್ನು ಬಿಟ್ಟುಕೊಡಲು ಅವಕಾಶವಿರಬೇಕು; ಅಧಿಕಾರಿಗಳು ರೈತರ ಇಚ್ಛೆ ಪ್ರಕಾರ ಅವರಿಗೆ ಬೇಕಾದ್ದನ್ನು ಬಿಟ್ಟು ಉಳಿಕೆ ತೆಗೆದುಕೊಳ್ಳಬೇಕು. ಹಾಗಿಲ್ಲದಿದ್ದರೆ ಲಂಚಕೋರತನಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಒಂದು ನಿಶ್ಚಿತ ಅಭಿಪ್ರಾಯದ ಪ್ರಕಾರ ರೈತರಿಗೆ ಅಥವಾ ಜಮೀನುದಾರರಿಗೆ ವ್ಯವಸಾಯಕ್ಕೆ ಜಮೀನು ಬಿಡುವುದಕ್ಕೆ ಮಾರ್ಗವಿರಬೇಕು.

ಒಟ್ಟಿನ ಮೇಲೆ ಜಮೀನಿನಲ್ಲಿ ಉತ್ಪತ್ತಿ ಹೆಚ್ಚಾಗುವುದಕ್ಕೆ ಸಹಕಾರಿಯಾಗುವಂತೆ ವ್ಯವಸ್ಥೆಯಾಗಬೇಕು. ಸಮತಾವಾದ ನಮ್ಮ ಸಮಾಜದೊಳಗೆ ಬೆಳೆಯಬೇಕೆಂಬ ದೃಷ್ಟಿಯನ್ನು ಎಲ್ಲಾ ರಾಜ್ಯಗಳೂ ತಮ್ಮಲ್ಲಿಟ್ಟುಕೊಂಡು ಮುಂದುವರೆಯುತ್ತಿವೆ. ಅದಕ್ಕೆ ತಕ್ಕಂತೆ ಕಾಯಿದೆಯನ್ನು ಮಾಡುತ್ತಿವೆ. ಈ ದಿವಸ ನಾನು ವಿಚಾರ ಮಾಡಿದ ಹಾಗೆ ಜಮೀನು ಹಂಚಿಕೆ ಮಾಡುವುದಕ್ಕೆ ಹೋಗಿ ಹಂಚಲು ಜಮೀನೇ ಉಳಿಯಲಿಲ್ಲವೆಂದು ಹೇಳುವುದಕ್ಕೆ ಅವಕಾಶವಿರಬಾರದು. ಗಣಪತಿ—ಜಮೀನುದಾರರಿಗೆ ಹೊಡೆಯಲು ಹೋಗಿ ಇಲಿಗೆ—ರೈತರಿಗೆ, ಹೊಡೆದ ಹಾಗಾಗಬಾರದು. ಈ ವಿಚಾರದಲ್ಲಿ ಮಸೂದೆ ತರುವುದಕ್ಕೆ ಮುಂಚೆ ಬೇಕಾದ ಅಂಕಿ ಅಂಶ ತಿಳಿಸಿದರೆ ಒಳ್ಳೆಯದು. ಹಾಗೆ ಮಾಡಿದರೆ ಮುಂದೆ ತಪ್ಪಾಗದಂತೆ ಕಾಯಿದೆ ರಚಿಸಲು ಅನುಕೂಲವಾಗುತ್ತದೆ. ಇದಕ್ಕೆ ಸಮಂಜಸವಾಗಿ ಬೇಕಾದ ಎಲ್ಲಾ ಅಂಶಗಳನ್ನೂ ಸಮಿತಿಯವರಾಗಲೀ ಅಥವಾ ಸರ್ಕಾರದವರಾಗಲೀ ಒದಗಿಸುತ್ತಾರೆಂದು ವಿನಂತಿ ಮಾಡಿ ಆದಷ್ಟು ಎಲ್ಲರೂ ತಮ್ಮ ಸ್ವಾರ್ಥ ಬಿಟ್ಟು ಕೆಲಸ ಮಾಡಬೇಕು. ಜಮೀನುದಾರರು ಸ್ಯಾಕ್ರಿಫೈಸ್ ಮಾಡಿ ದೊಡ್ಡಸ್ತಿಕೆ ತೋರಿಸುವುದು ಒಳ್ಳೆಯದು ಎಂದು ಸೂಚಿಸುತ್ತೇನೆ. ಜಮೀನು ಬಿಡಿಸಿಕೊಳ್ಳುವುದಕ್ಕೆ ಹಕ್ಕಿದೆಯೆಂದು ಇತರರಿಗೆ ತೊಂದರೆ ಮಾಡುವುದು ಒಳ್ಳೆಯದಲ್ಲ. ಮುಂದೆ ನಮ್ಮ ಪರಿಸ್ಥಿತಿ ಏನಾಗುತ್ತದೆಂಬುದನ್ನು ತಿಳಿದು ತಕ್ಕ ವ್ಯವಸ್ಥೆ ಮಾಡಬೇಕು ಎಂದು ವಿನಂತಿ ಮಾಡಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಬಿ. ಎನ್. ಬೋರಣ್ಣಗೌಡ (ಬೇಲೂರು).—ಸ್ವಾಮಿ, ಈ ಸಮಿತಿಯವರು ಕೊಟ್ಟಿರತಕ್ಕಂಥ ವರದಿಯ ಮೇಲೆ ಮಾನ್ಯ ಮಿತ್ರರು ಈಗಾಗಲೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಜತ್ತಿ ಸಮಿತಿಯವರು ಕೊಟ್ಟಿರತಕ್ಕ ಸಲಹೆ ಸ್ವಲ್ಪ ಬದಲಾವಣೆ ಮಾಡತಕ್ಕದ್ದು ಬಹಳ ಪ್ರಕೃತವೆಂದು ನಾನು ಭಾವಿಸುತ್ತೇನೆ. ಸಮಿತಿಯವರು ಮಾಡಿರುವ ಸಲಹೆಯನ್ನು ಸ್ವಾಗತಿಸುತ್ತಾ ನಾನು ಕೆಲವು ವಿಚಾರಗಳನ್ನು ಈ ಸಭೆಯ ಮುಂದೆ ತಿಳಿಸಬೇಕೆಂದು ಬಯಸುತ್ತೇನೆ. ಇಲ್ಲಿಯವರೆಗೆ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಈ ಸಭೆಯ ಮುಂದೆ ತಿಳಿಸಿದ್ದಾರೆ. ನಾನು ಅವರು ತಿಳಿಸಿರುವ ವಿಚಾರಗಳಿಗೆ ಮತ್ತೆ ಹೋಗದೆ ಪ್ರಕೃತವಾಗಿರತಕ್ಕ ಕೆಲವು ಸಲಹೆಗಳನ್ನು ಮಾತ್ರ ಸಭೆಯ ಮುಂದಿಡಬೇಕೆಂದಿದ್ದೇನೆ. ಸಾಧಾರಣವಾಗಿ ನಾವು ಚುನಾಯಿತರಾಗಿ ಬಂದಿರುವವರು. ನಾವು ಯಾರಿಂದ ಚುನಾಯಿತರಾಗಿ ಬಂದಿದ್ದೇವೆಂಬುದನ್ನು ಮೊದಲು ಮನವರಿಕೆ ಮಾಡಿಕೊಳ್ಳಬೇಕು. ನಮ್ಮನ್ನು ಚುನಾಯಿಸಿರುವವರು ಅವರ ಸುಖ ದುಃಖಗಳನ್ನು, ಆಗುಹೋಗುಗಳನ್ನು, ಹಕ್ಕುಬಾಧ್ಯತೆಗಳನ್ನು ಕಾಪಾಡುವುದಕ್ಕಾಗಿ ಇಲ್ಲಿಗೆ ಕಳುಹಿಸಿದ್ದಾರೆ. ಅದನ್ನು ನೋಡದೇನೇ ನಾವು ನಮಗೆ ಮನಬಂದಂತೆ ಮಾತನಾಡುವುದು ಸಂಪ್ರದಾಯಕ್ಕೆ ವಿರೋಧವಾಗುತ್ತದೆ, ತಪ್ಪು ಮಾಡಿದಂತೆ ಭಾಸವಾಗುತ್ತದೆ. ಮೇಲ್ಮನೆಯಲ್ಲಿ ಕೆಲವು ಮಿತ್ರರು ಈ ಸಮಿತಿ ವರದಿ ಮೇಲೆ ಬಹಳ ಟೀಕೆ ಮಾಡಿದ್ದಾರೆ. ಮೇಲ್ಮನೆ ಮಿತ್ರರು ಈ ಸಭೆಯವರು ಯಾವ ರೀತಿ ಚುನಾವಣೆಗೆ ನಿಂತಿದ್ದರೋ ಹಾಗೆ ನಿಂತಿದ್ದರೆ ಅವರಿಗೆ ಈ ಕಷ್ಟ ಗೊತ್ತಾಗುತ್ತಿತ್ತು ಎಂದು ಅವರಿಗೆ ಈ ಸಭೆ ಮೂಲಕ ಹೇಳುತ್ತೇನೆ. ಅವರು ಯಾವುದೋ ರೀತಿಯಲ್ಲಿ ಕೆಲವು ಜನರಿಂದ ಚುನಾಯಿತರಾಗಿ ಬಂದು ಸಾರ್ವಜನಿಕರ. . . .

Sri U. M. MADAPPA (Chamarajanagar).—On a point of order. Can any member of this House make a reference to what was discussed in the Upper House ?

Mr. SPEAKER.—There is no point of order. No offence.

Sri U. M. MADAPPA.—Can he criticise a member of the Upper House ?

Mr. SPEAKER.—He is not criticising. He can just remark about the mentality of some members.

Sri S. D. KOTHAVALE.—You were pleased to say that there is no criticism. In fact he wants to criticise.

ನಮ್ಮ ದೇಶದಲ್ಲಿ ಎರಡು ಕೋಟಿ ಪ್ರಜಾ ಸಂಖ್ಯೆ ಇದೆ. ಈ ಎರಡು ಕೋಟಿ ಪ್ರಜಾ ಸಂಖ್ಯೆಯನ್ನು ಈ August House ಪ್ರತಿನಿಧಿಸುತ್ತಿದೆ. ಈ ದೃಷ್ಟಿಯಿಂದ ನಾವಿಲ್ಲಿ ಮಾತನಾಡುವಾಗ ಆ ಎರಡು ಕೋಟಿ ಜನಸಂಖ್ಯೆಯ ಅಭಿಪ್ರಾಯವನ್ನು ಪ್ರತಿಬಿಂಬಿಸಬೇಕು.

ನಮ್ಮ ದೇಶದಲ್ಲಿ ಹಾಲಿ ಜಮೀನು ಹಂಚಿಕೆಯಾಗಿರುವ ರೀತಿಯನ್ನು ನೋಡಿದರೆ, 1,000 ಎಕರೆಗೆ ಹೆಚ್ಚಿಗೆ ಜಮೀನಿರುವವರು 150 ಮಂದಿ ಇದ್ದಾರೆ. 500 ರಿಂದ 1,000 ಎಕರೆಗಳ ವರೆಗಿರುವವರು 370 ಜನರಿದ್ದಾರೆ.

Sri C. J. MUCKANNAPPA.—I rise to a point of order. The Treasury Bench is empty. I want a ruling.

Mr. SPEAKER.—After all there is one member of the Treasury Bench present. How can there be a point of order ? The Hon'ble Member may of course point out to me that the Treasury Bench is empty.

Sri C. J. MUCKANNAPPA.—The whole Treasury Bench is empty.

Mr. SPEAKER.—There are two here (pointing to Deputy Ministers).

ಶ್ರೀ ಬಿ. ಎನ್. ಬೋರಣ್ಣಗೌಡ.—ಆಮೇಲೆ, 300 ರಿಂದ 500 ಎಕರೆಗಳ ವರೆಗಿರುವವರು 838 ಜನರಿದ್ದಾರೆ. 100 ರಿಂದ 300 ಎಕರೆಗಳವರೆಗಿರುವವರು 12,500 ಜನರಿದ್ದಾರೆ. ಅಲ್ಲಿಗೆ ಒಟ್ಟು 15,761 ಜನ ರೈತ ಕುಟುಂಬಗಳು 100 ಎಕರೆಗಿಂತ ಹೆಚ್ಚಿಗೆ ಜಮೀನಿರತಕ್ಕವರಾಗಿದ್ದಾರೆ.

ಈ ಹೊತ್ತು ನಮ್ಮ ದೇಶದಲ್ಲಿ ಎಷ್ಟು ರೈತ ಕುಟುಂಬಗಳಿವೆ ಎಂಬುದನ್ನು ಯೋಚನೆ ಮಾಡಿ. ನಾವು ಈ 13,661 ಕುಟುಂಬಗಳನ್ನು ಸಲಹಬೇಕೇ ಅಥವಾ ಬಾಕಿ ಕುಟುಂಬಗಳನ್ನು ಸಲಹಬೇಕೇ ಎಂಬುದನ್ನು ಮೊದಲು ಮನವರಿಕೆ ಮಾಡಿಕೊಳ್ಳಬೇಕು. ಇನ್ನೊಂದು ಅಂಶವೇನೆಂದರೆ, ನಮ್ಮಲ್ಲಿ ದೊಡ್ಡ ದೊಡ್ಡ ಜೋಡಿದಾರರಿದ್ದಾರೆ; ಜಹಗೀರಿದಾರರಿದ್ದಾರೆ; ಇನಾಂದಾರರುಗಳಿದ್ದಾರೆ. ಈ ಜೋಡಿದಾರರುಗಳ, ಇನಾಂದಾರರುಗಳ, ಜಹಗೀರುದಾರರುಗಳ ಜಮೀನನ್ನು ಅಲ್ಲಿ ಯಾರು ಹಿಂದೆ ಸಾಗುವಳಿ ಮಾಡುತ್ತಿದ್ದರೋ ಅವರಿಗೇ ಜಮೀನು ಹೋಗಬೇಕೆಂದು ಕಾಯಿದೆ ಕಟ್ಟಳೆಗಳನ್ನು ಮಾಡಬೇಕಾದ್ದು ಯುಕ್ತ. ಕಾಯಿದೆ ಕಟ್ಟಳೆಗಳ ಮೂಲಕ ಸಾಗುವಳಿ ಮಾಡತಕ್ಕ ವರ್ಗದವರಿಗೆ ಜಮೀನು ಸಿಕ್ಕುವಂತೆ ಮಾಡುವುದು ನಮ್ಮ ಧರ್ಮ. ಇದನ್ನು ವಿರೋಧಿಸಿದ ಮಾನ್ಯ ಸದಸ್ಯರಿಗೆ ಒಂದು ಸವಾಲು ಹಾಕುತ್ತೇನೆ. ಈ ಸಭೆಗೆ ಚುನಾಯಿತರಾಗಿ ಬಂದಿರತಕ್ಕ ಮಾನ್ಯ ಮಿತ್ರರಲ್ಲಿ ಎಷ್ಟು ಜನ ನೇಗಿಲು ಹಿಡಿದು ಉಳತಕ್ಕವರಾಗಿದ್ದಾರೆ ? ನಾನಾದರೋ ಈಹೊತ್ತಿಗೂ ನೇಗಿಲು ಹಿಡಿದು ಉಳತಕ್ಕ ರೈತನಾಗಿದ್ದೇನೆ. ನನ್ನಂಥವರು ಈ ಸಭೆಯಲ್ಲಿ ಹತ್ತು ಇಪ್ಪತ್ತು ಜನರಿದ್ದರೆ ಹೆಚ್ಚು. ಅಂದಮೇಲೆ ಮಿಕ್ಕವರಿಗೆ ವಾಸ್ತವವಾಗಿ ಉಳತಕ್ಕ ರೈತನಮೇಲೆ ಪ್ರೀತಿ ವಿಶ್ವಾಸವಿರುತ್ತದೆಯೇ ? ಅನೇಕರು ಇಲ್ಲಿ ದೊಡ್ಡ ದೊಡ್ಡ ಜಮೀನ್ದಾರರಾಗಿರಬಹುದು. ಅಂಥವರು ಪಕ್ಕದಲ್ಲಿರುವ ರೈತನನ್ನು ಪ್ರೀತಿ ವಿಶ್ವಾಸದಿಂದ ನೋಡುತ್ತಾರೆಂಬುದು ಸ್ವಲ್ಪ ಸಂಶಯವೆ. ದುಡಿಯತಕ್ಕವನಿಗೆ ಯಾವ ಕಷ್ಟವಿದೆಯೆಂಬುದು ಅವರಿಗೆ ಗೊತ್ತಿದೆಯೇ ? ನೂರಾರು ಎಕರೆ ಜಮೀನಿಟ್ಟುಕೊಂಡು ಎಕರೆಗೆ ಹದಿನಾಲ್ಕು ಪಲ್ಲ ಹದಿನಾರು ಪಲ್ಲಬೇಕು ಎಂದು ಕೂಗಾಡಿ ವಸೂಲುಮಾಡಿಕೊಂಡು ರೈತನಿಗೆ ಬರೀ ಹುಲ್ಲನ್ನು ಕೊಟ್ಟರೆ ಸಾಕೆಂದಿರುವವರು ರೈತನ ವಿಷಯದಲ್ಲಿ ಹಿತದೃಷ್ಟಿಯಿಂದ ಮಾತನಾಡುತಾರೆಯೇ ? ಎಷ್ಟೇಕಷ್ಟ ಪರಿಸ್ಥಿತಿಯಿದ್ದರೂ ರೈತರಿಂದ ದುಡಿಸಿಕೊಂಡು ತಾವು ಮಾತ್ರ ಸುಖವಾಗಿರಬೇಕೆಂದಿರುವ ಈ ಜಮೀನ್ದಾರರುಗಳು ಎಷ್ಟುದಿನ ಹೀಗೆಯೇ ಇರುವುದಕ್ಕೆ ಸಾಧ್ಯ ?

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ದುಡಿಯುವವನಿಗೆ ಕೊಡಕೂಡದೆಂದು ಯಾರಾದರೂ ಹೇಳಿದರೇ ?

ಶ್ರೀ ಬಿ. ಎನ್. ಬೋರಣ್ಣಗೌಡ.—ನಾನೇನೂ ಹಾಗೆ ಹೇಳಲಿಲ್ಲವಲ್ಲ. ಆದರೆ ದುಡಿಯುವವರಿಗೆ ಯಾವ ರೀತಿ ಕೊಡಬೇಕು, ಹೇಗೆ, ಎಷ್ಟು ಪ್ರಮಾಣದಲ್ಲಿ ಕೊಡಬೇಕು ಎಂಬುದನ್ನು ನೋಡಬೇಕು. ಅವರಿಗೆ ಜೀವನ ನಡೆಸುವುದಕ್ಕೆ ಈ ಹೊತ್ತು ಒಂದು family holding ನಷ್ಟು ಬಿಡಬೇಕೆಂದು ಸಮಿತಿಯ ಸದಸ್ಯರುಗಳು ಸಲಹೆಮಾಡಿದ್ದಾರೆ. ಸ್ವಂತ ಉಳತಕ್ಕವರಿಗೆ, ಸ್ವಂತ ಹಿಡುವಳಿಯನ್ನಿಟ್ಟುಕೊಂಡಿರುವವರಿಗೆ ಅಥವಾ ಆಳುಗಳನ್ನಿಟ್ಟುಕೊಂಡು ಸ್ವಂತ ಬೇಸಾಯಮಾಡತಕ್ಕವರಿಗೆ 5,400 ರೂಪಾಯಿಗಳು ಸಂಪಾದನೆ ಇರತಕ್ಕ ಜಮೀನನ್ನು ಬಿಡಬೇಕೆಂದು ಹೇಳಿದ್ದಾರೆ. ಸಂತೋಷ. ಇದಕ್ಕಿಂತ ಹೆಚ್ಚಿಗೆ ಬೇಕಾಗಿಲ್ಲ. ಆದರೆ ಒಂದು modification ನಾನು ಸೂಚಿಸಬಯಸುತ್ತೇನೆ. ಈ ಹೊತ್ತು ನಮ್ಮ ಪಕ್ಕದಲ್ಲಿರತಕ್ಕ ಮಂಗಳೂರು ಜಿಲ್ಲೆಯವರಿಗೆ, ಸ್ವಂತ ಬೇಸಾಯ ಪದ್ಧತಿಯೆಂಬುದಿಲ್ಲ. ಅವರಿಗೆ ತಮ್ಮ ಜಮೀನೆಲ್ಲಿದೆ, ಯಾರು ಅದನ್ನು ಬೇಸಾಯಮಾಡುತ್ತಿದ್ದಾರೆ ಎಂಬುದು ಕೂಡ ಗೊತ್ತಿಲ್ಲ. ಏಕೆಂದರೆ ಅಳಿಯ ಸಂತಾನದ ಪದ್ಧತಿಯೆಂಬುದಿದ್ದು, ಮಗಳನ್ನು ಮದುವೆಮಾಡಿಕೊಂಡ ದಿನದಿಂದ ಅವಳ ತಂದೆಯ ಆಸ್ತಿಯ ಉತ್ಪತ್ತಿಯಲ್ಲಿ ಒಂದು ಭಾಗ ಅಳಿಯನಿಗೆ ಬರತೊಡಗುತ್ತದೆ ಹೀಗಾಗಿ ಉಡುಪಿಯಲ್ಲಿರುವವನು ಕ್ಯಾಸರಗೋಡಿನ ಒಂದು ಹೆಣ್ಣನ್ನು ಮದುವೆಮಾಡಿಕೊಂಡರೆ, ಅವನಿಗೆ ಯಾರು ಜಮೀನನ್ನು ಉಳುತ್ತಿರುತ್ತಾನೆಂಬುದೇ ಗೊತ್ತಿರುವುದಿಲ್ಲ, ಗುತ್ತಿಗೆಯನ್ನು ಮಾತ್ರ ತೆಗೆದುಕೊಳ್ಳುತ್ತಿರುತ್ತಾನೆ. ಹೀಗೆ ಮಂಗಳೂರು ಜಿಲ್ಲೆಯ ಸ್ಥಿತಿಯೇ ಬೇರೆ; ಕೊಡಗಿನ ಸ್ಥಿತಿಯೇ ಬೇರೆ. ಬಾಕಿ ಇತರ ಕರ್ಣಾಟಕದ ಸ್ಥಿತಿಯೇ ಬೇರೆ. ಹೀಗಿರುವಲ್ಲಿ ಕೊಡಗಿನ ಸ್ಥಿತಿಯನ್ನೇ ಬೇರೆ ಜಿಲ್ಲೆಗೂ ಅನ್ವಯಿಸಬೇಕೆಂದು ಹೇಳುವುದು ಸರಿಯಲ್ಲ. ನಾವು ಬೊಂಬಾಯಿಗಿಂತ ಎಷ್ಟೋ ಮುಂದೆ ಹೋಗಿದ್ದೇವೆ, ಮುಂದುವರಿದ ಮೈಸೂರಿನವರೊಡನೆ ಸೇರುತ್ತೇವೆ ಎಂಬ ಸದ್ಭಾವನೆಯಿಂದ ನಮ್ಮನ್ನು ಸೇರಿದವರಿಗೆ ಈ ರೀತಿ ಮಾಡುವುದು ಸರಿಯಲ್ಲ. ಮುಖ್ಯವಾಗಿ ಸಾಮಾನ್ಯ ಪ್ರಜೆಗೆ ಬಂದದ್ದೇನೆಂಬುದನ್ನು ಯೋಚನೆಮಾಡಬೇಕು. ನಮ್ಮ ಉದ್ದೇಶವೇನಿದ್ದರೂ ಹಿಂದಿರುವವರನ್ನು ಮುಂದಕ್ಕೆ ತೆಗೆದುಕೊಂಡು ಹೋಗಬೇಕೆಂದಿರಬೇಕೇ ಹೊರತು ಮುಂದಿನವರನ್ನ ಹಿಂದಕ್ಕೆ ತರಬೇಕೆಂದಿರಕೂಡದು. ಆದ್ದರಿಂದ ನಾನು ಸರ್ಕಾರದವರಿಗೆ ವಿನಂತಿಮಾಡಿಕೊಳ್ಳುವುದೇನೆಂದರೆ, ಐದು ಜನರಿಂದ ಹೆಚ್ಚಿಗೆ ಇರತಕ್ಕ ಸಂಸಾರಕ್ಕೆ ಈ ಹೊತ್ತು ಸಾಮಾನ್ಯವಾಗಿ ಎರಡು ಹೋಲ್ಡಿಂಗ್ ಅಂದರೆ 10,800 ರೂಪಾಯಿಗಳು ಬರುವುದಕ್ಕೆ ನಿಗದಿಮಾಡಿದ್ದೀರಿ. ಒಂದುವೇಳೆ ಇಪ್ಪತ್ತು ಜನರಿರುವ ಸಂಸಾರವಾದರೆ, ಅಂಥ ಸಂಸಾರಕ್ಕೆ ಇದರಿಂದ ಕಷ್ಟಬರುತ್ತದೆ. ಅದ್ದರಿಂದ ಅವರಿಗೂ ಅನುಕೂಲವಾಗುವಹಾಗೆ ಮಾಡಬೇಕಾದರೆ ಪ್ರತಿ ಐದು ಜನರ ಒಂದು ಸಂಸಾರಕ್ಕೆ ಒಂದು ಹೋಲ್ಡಿಂಗ್ ಎಂದು ಮಾಡಿ, ಹತ್ತು ಜನರಿದ್ದರೆ ಎರಡು ಫಾಮಿಲಿ ಹೋಲ್ಡಿಂಗ್, ಹದಿನೈದು ಜನರಿದ್ದರೆ ಮೂರು ಫಾಮಿಲಿ ಹೋಲ್ಡಿಂಗ್ ಈ ರೀತಿ ತಿದು ಪಡಿಮಾಡಿದರೆ ಒಳ್ಳೆಯದಾಗುತ್ತದೆ.

ಆಮೇಲೆ, ಒಂದು ದೃಷ್ಟಿಯಿಂದ ಕಾಫೀ, ಟೀ, ರಬ್ಬರ್ ಮುಂತಾದ ವ್ಯಾಪಾರದ ಬೆಳೆಗಳನ್ನು ಬೆಳೆಯುವ ತೋಟಗಳಿಗೆ exemption ಕೊಡಬೇಕೆಂದು ಕಮಿಟಿಯವರು ಸಲಹೆಮಾಡಿದ್ದಾರೆ. ಇದನ್ನು ನಾನು ಪೂರ್ಣವಾಗಿ ವಿರೋಧಿಸುತ್ತೇನೆ. ಕಾರಣವಾದರೂ ಇಷ್ಟು. ಈ ಹೊತ್ತು, ಸಮಾಜಕಲ್ಯಾಣವಾಗಬೇಕು,

ಎಲ್ಲರೂ ಒಂದೇರೀತಿಯಲ್ಲಿರಬೇಕು ಎಂದು ಹೇಳುತ್ತಿರುವಾಗ ದೊಡ್ಡದಾದ ಒಂದು ಮೋಟಾರ್ ಇಟ್ಟುಕೊಂಡು ನಮ್ಮಮೇಲೆಲ್ಲಾ ದೂಳೆಬ್ಬಿಸಿಕೊಂಡು ಓಡಾಡುವ ಸಾಹುಕಾರನ ವಿಷಯದಲ್ಲಿ—ಅದೂ ಅವನು ಸುಮ್ಮನೆ ಓಡಾಡುತ್ತಿಲ್ಲ, ನಮ್ಮ ಮೇಲೆಲ್ಲಾ ದೂಳು ಎಬ್ಬಿಸಿಕೊಂಡು ಹೋಗುತ್ತಿರುತ್ತಾನೆ—ಅವನ ವಿಷಯದಲ್ಲಿ ಯಾವ ಮನೋಭಾವನೆಯನ್ನಿಟ್ಟುಕೊಳ್ಳಬೇಕ ? ಈ ಹೊತ್ತು ದೇಶದಲ್ಲಿ ಶ್ರೀಮಂತರು ಅವರು ; ಬೇಕಾದಷ್ಟು ಸಂಪಾದನೆ ಮಾಡಿಕೊಂಡಿರತಕ್ಕವರು ಅವರು ; ಎಂದು ಪ್ಲಾನಿಂಗ್ ಕಮಿಷನ್ನಿನವರೂ ಹೇಳಿದ್ದಾರೆ. ಚಿಕ್ಕ ಚಿಕ್ಕ ತೋಟಗಳನ್ನು ಮಾಡಿಕೊಂಡರೆ ಉತ್ಪನ್ನ ಜಾಸ್ತಿಯಾಗುವುದಿಲ್ಲವೆಂದು ಹೇಳಿ ಅಂಥ ದೊಡ್ಡ ದೊಡ್ಡ ತೋಟಗಾರರನ್ನು ಹಾಗೆಯೇ ಇರಲೆಂದು ಬಿಡುವುದು ಸರಿಯೇ ?

5 P.M.

ಅವರು ಏಕೆ ಸಲಹೆಮಾಡಿದರೋ, ದೊಡ್ಡ ದೊಡ್ಡ ಶ್ರೀಮಂತರನ್ನು ರಾಜ ಮಹಾರಾಜರುಗಳಂತೆ ಹಾಗೆಯೇ ಇಡಲು ಮಾಡಿದರೋ ಏನೋ ಗೊತ್ತಾಗಲಿಲ್ಲ. ಇವರು ಅಲ್ಲಲ್ಲೇ ಗ್ರೂಫ್ಸ್ ಮಾಡಿಕೊಂಡಿರುತ್ತಾರೆ. ಸಾಧಾರಣವಾಗಿ ಒಂದು ದೊಡ್ಡ ಗ್ರೂಫ್‌ನಲ್ಲಿ, ಸಂಸ್ಥೆಯಲ್ಲಿ ಇರುತ್ತಾರೆ. ಒಂದು ಗುಂಪು ಮಾಡಿಕೊಂಡು shares float ಮಾಡುತ್ತಾರೆ. ಇಂಥ ಕಂಪೆನಿಗಳು ಬೇಕಾದಷ್ಟಿವೆ. Indian Coffee Planters ಕೆಲವರು ಕಾಫಿ ತೋಟಗಳನ್ನು ತೆಗೆದುಕೊಂಡಿದ್ದಾರೆ. ಅವರೆಲ್ಲ ಈಗಿರುವಂತೆಯೇ ಶ್ರೀಮಂತರಾಗಿರಲಿ ಎಂದರೆ ಅಲ್ಲಿ ಕೆಲಸಮಾಡತಕ್ಕ ಕೂಲಿಗಾರರಿಗೆ ಹೊಟ್ಟೆಗಿಲ್ಲದೆ ದುಡಿಯಬೇಕು ಎಂಬ ಭಾವನೆಯಿಂದ ಅಲ್ಲಿ ಹೋಗಿ ಸೇರುವವರಿಗೆ ಈಗ ಬಹಳ ತೊಂದರೆಯಾಗಿದೆ. ತೋಟಗಳಲ್ಲಿ ಬೆಳೆಯತಕ್ಕ ಬೆಳೆಗಳಲ್ಲಿ ಇಷ್ಟು ಭಾಗವನ್ನು ಕೆಲಸಗಾರರಿಗೆ ಕೊಡಬೇಕು ಎಂದಿದ್ದರೂ ಏನನ್ನೂ ಕೊಡುತ್ತಿಲ್ಲ. ಅವರಿಗೆ ಯಾವುದಾದರೂ ಸವಲತ್ತು ಬೇಕು ಎಂದರೆ ಅದನ್ನು ಕೊಡುತ್ತಿಲ್ಲ. ಕೆಲಸಗಾರರಿಗೆ ಯಾವರೀತಿಯ ಸವಲತ್ತನ್ನೂ ಕೊಡುತ್ತಿಲ್ಲ. ಇವೊತ್ತು ಲೇಬರ್ ಇಲಾಖೆಯವರು ಯಾರಾದರೂ ಹೋಗಿ ಆ ತೋಟಗಳಲ್ಲಿ ನೋಡಿದರೆ ಕೆಲಸಗಾರರಿಗೆ ಕೊಟ್ಟಿರುವ ಸವಲತ್ತುಗಳೇನೆಂಬುದು ತಿಳಿಯುತ್ತದೆ. ತೋಟಗಳನ್ನು ಹೊಂದಿರುವ ಶ್ರೀಮಂತರು, ತಮ್ಮ ಕೆಲಸಗಾರರಿಗೆ ಕೊಟ್ಟಿರುವ ಸವಲತ್ತುಗಳು ಸರಿಯಾಗಿದೆಯೇ; ಇಲ್ಲವೇ, ಎನ್ನುವುದನ್ನು ಅವರು ಮನವರಿಕೆ ಮಾಡಿಕೊಂಡರೆ ಒಳ್ಳೆಯದು. ಸಾಧಾರಣವಾಗಿ ಕೆಲಸಗಾರರು ವಾಸಮಾಡತಕ್ಕ ಗುಡಿಸಲುಗಳು ಕಾಡು ಹಂದಿಯೂ ಸಹ ವಾಸಮಾಡುವುದಕ್ಕೂ ಸಹ ಯೋಗ್ಯವಲ್ಲದ ಸ್ಥಿತಿಯಲ್ಲಿವೆ. ಕಾಡು ಹಂದಿಗಳು ಎಲ್ಲೋ ತಿಂದುಕೊಂಡು ಎಲ್ಲೋ ಮಲಗಿರುತ್ತವೆ. ಇಂಥವುಕೂಡ ಕೂಲಿಗಾರರು ವಾಸಮಾಡುವ ಗುಡಿಸಲುಗಳಲ್ಲಿ ವಾಸಮಾಡುವುದಕ್ಕಾಗುವುದಿಲ್ಲ. ಅವರಿಗೆ ಕುಡಿಯಲು ನೀರಿಲ್ಲ. ಅವರು ಬರೀ ಹಲಸಿನಕಾಯನ್ನು ತಿಂದು ಜೀವನಮಾಡುತ್ತಿದ್ದಾರೆ. ಅವರ ಮಕ್ಕಳನ್ನಂತೂ ನೋಡುವಹಾಗಿಲ್ಲ. ಈ ತೋಟಗಳ ಮಾಲೀಕರು ದೊಡ್ಡ ದೊಡ್ಡ ಕಾರುಗಳಲ್ಲಿ ಬಂದು ಅಲ್ಲಿರುವ ರೈಟರ ಹತ್ತಿರ ಮಾತನಾಡಿ ಹೊರಟುಹೋಗುತ್ತಾರೆ. ಈ ರೈಟರುಗಳು ತೋಟಗಳಲ್ಲಿ ಕೆಲಸ ಮಾಡಿಸುತ್ತಾರೆ. ಕೆಲಸಗಾರರ ಸ್ಥಿತಿಗತಿಗಳು ಇವರಿಗೆ ಗೊತ್ತಾಗುವುದಿಲ್ಲ. Labour legislations ಎಷ್ಟು ತಂದರೂ ಸಹ ಅವುಗಳನ್ನು ಕಣ್ಮರೆ ಮಾಡುತ್ತಾರೆ. ಇವರು ಎಷ್ಟು ಬುದ್ಧಿವಂತರೆಂಬುದಕ್ಕೆ ಒಂದು ಉದಾಹರಣೆಯನ್ನು ತಮ್ಮ ಮುಂದಿಡುತ್ತೇನೆ. ಶ್ರೀಮಂತರು, ದೊಡ್ಡ ದೊಡ್ಡ ಜಮೀನ್ದಾರರು ಎಷ್ಟು ಮೆಮೊರಾಂಡಂಗಳನ್ನು ಕಳುಹಿಸಿದ್ದಾರೆ, ನಮ್ಮ ಮಾನ್ಯ ಮಿತ್ರರಿಗೆಲ್ಲ ಎಷ್ಟೆಷ್ಟು ಉದ್ದದ ಮೆಮೊರಾಂಡಂಗಳನ್ನು ಎಷ್ಟು ಲಕ್ಷಣವಾಗಿ ಬರೆದು ಕಳುಹಿಸಿದ್ದಾರೆ. Fragmentation ಆಗುವುದರಿಂದ ಉತ್ಪತ್ತಿ ಕಡಮೆಯಾಗುತ್ತದೆ ಎಂದು ಏನೇನೋ ವಾದಗಳನ್ನು ಮಾಡಿದ್ದಾರೆ. ಎಲ್ಲರೂ ಅದನ್ನು ಸರಿ ಎಂದು ಒಪ್ಪಿಕೊಳ್ಳುವುದಾದರೆ, ಈ ಬಗ್ಗೆ 500 ಅಪ್ಲಿಕೇಷನ್‌ಗಳು ಬಂದಿದ್ದರೆ, ಹಳ್ಳಿಯಕಡೆ ಹೋಗಿ ನೋಡಿದರೆ ಸಾವಿರಾರು ಅರ್ಜಿಗಳು ಬಡ ರೈತರಿಂದ ಪಡೆಯಬಹುದು ಎಂದು ಹೇಳುತ್ತೇನೆ. ಅವರ ಕಷ್ಟ ಸುಖಗಳು ಇವರಿಗೆ ಬೇಕಾಗಿಲ್ಲ. ಇವರು ಸುಖವಾಗಿರುವುದು ಮಾತ್ರ ಬೇಕು. ಈ ಮಾನ್ಯ ಸಭೆಯಲ್ಲಿ ಶ್ರೀಮಂತರು ಎಷ್ಟು ಜನರಿದ್ದಾರೆ, ಅಥವ ಎಷ್ಟು ಜನ ಬಡವರಿದ್ದಾರೆ ! ನಾವು ಈ ದಿನ ಇಂಥ ಪರಿಸ್ಥಿತಿಯಲ್ಲಿ ಮುಂದುವರಿಯುತ್ತಿದ್ದೇವೆ.

ಇವೊತ್ತು ಯಾವುದಾದರೂ ಒಂದು ರೀತಿಯಲ್ಲಿ ಸಮಾಜ ಕಲ್ಯಾಣವಾಗಬೇಕು, ದೇಶ ಸುಧಾರಿಸಬೇಕು, ಒಂದು ದೇಶದ ಜನರು ಉಳಿಯಬೇಕು ಎಂದರೆ ಇಂಥ ಕಾನೂನಿನ ವ್ಯಾಪ್ತಿ, ಅಗತ್ಯತೆ ಬಹಳವಿದೆ. ಇವೊತ್ತು ಶ್ರೀಮಂತರು, ಬೇಕಾದಷ್ಟು ಮನೆ ಕಟ್ಟಿಕೊಂಡಿರುವವರು, ಹೆಚ್ಚು ಸಂಪಾದನೆ ಮಾಡಿಕೊಂಡು ಬೇಕಾದಷ್ಟು ದುಡ್ಡನ್ನು ಇಟ್ಟುಕೊಂಡಿರುವವರು ಇಂಥವರನ್ನು ಹಾಗೆಯೇ ಬಿಟ್ಟುಬಿಡಬೇಕು ಎಂದು ಹೇಳುತ್ತಾರೆಯೇ ? ನಮಗೆ ಭತ್ತ, ಗೋಧಿ, ಕಾಫಿ, ಟೀ ಮುಂತಾದುವನ್ನು ಬೆಳೆದುಕೊಡತಕ್ಕ ರೈತನಿಗೆ ಒಂದು ಸೀಲಿಂಗ್ ಹಾಕಿದರೆ ಪಟ್ಟಣಗಳಲ್ಲಿ ಬೇಕಾದಷ್ಟು ಸೌಧಗಳನ್ನು ಕಟ್ಟಿಕೊಂಡು ಮಹಡಿಯಮೇಲೆ ನಿಂತುಕೊಂಡು, ನೆಲದಮೇಲೆ ಕಾಲಿಗೆ ಎಕ್ಕಡವಿಲ್ಲದೆ ತಿರುಗಾಡುವವರನ್ನು ನೋಡುತ್ತಿರುತ್ತಾರೆ. ಇವರು ಕೆಳಗೆ ಬರಬೇಕು. ಈ disparity ಕಡಮೆ ಮಾಡಲು ಒಂದು ಕಾನೂನನ್ನು ತಕ್ಷಣ ಜಾರಿಗೆ ತರಬೇಕು. ಈಗಿನ ಅಸೆಂಬ್ಲಿ ಅಧಿವೇಶನ ಮುಗಿಯುವುದರೊಳಗಾಗಿಯೇ ಈ ಕಾನೂನು ಆಗದೆ ಇದ್ದರೂ ಮುಂದಿನ ಅಧಿವೇಶನದೊಳಗೆ ಒಂದು ಸಮಿತಿಯನ್ನು ಮಾಡಿ, ಶ್ರೀಮಂತರಾಗಿರುವವರನ್ನು ರೈತರ ಮಟ್ಟಕ್ಕೆ ಇಳಿಸುವಂತೆ, ಅವರೂ ಸಾಧಾರಣ ವ್ಯಕ್ತಿಗಳಾಗುವಂತೆ ಮಾಡುವುದಕ್ಕೆ ಒಂದು ಕಾನೂನನ್ನು ಜಾರಿಗೆ ತರಬೇಕಾಗಿ ಬರುತ್ತದೆ. ಒಬ್ಬರನ್ನು ಬಿಟ್ಟು ಇನ್ನೊಬ್ಬರನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ.

ರೋಡ್ ಟ್ರನ್ಸ್‌ಪೋರ್ಟ್ ಹಾಕಿ ಜನಗಳಿಗೆ ಸವಲತ್ತನ್ನು ಮಾಡಿಕೊಡುತ್ತೇವೆಂದು ಹೇಳಿದ್ದರು. ನಮ್ಮ ಕಡೆ ಬಸ್ಸುಗಳಲ್ಲಿ ನೂರಾರು ಜನರನ್ನು ಕುರಿಗಳನ್ನು ತುಂಬಿದಹಾಗೆ ತುಂಬಿಕೊಂಡು ಹೋಗುತ್ತಿದ್ದಾರೆಂದು ನಾನು ತಮಗೆ ತಿಳಿಸುತ್ತೇನೆ. ಶ್ರೀಮಂತರು ಕೆಲವು ಜನ ಮೋಟಾರ್ ಇಟ್ಟುಕೊಂಡಿರುತ್ತಾರೆ. ಇವರಿಗೆ ಪ್ರಯಾಣಿಕರ ಕಷ್ಟ ಗೊತ್ತಿಲ್ಲ. ಅವರುಗಳು ಈ ಮೋಟಾರುಗಳಲ್ಲಿ ಪ್ರಯಾಣಮಾಡಿದರೆ ತಾನೆ ಅದರ ಕಷ್ಟ ತಿಳಿಯುವುದು. ನಾನು ದಿನ ಬೆಳಗಾದರೆ ಬಸ್ಸಿನಲ್ಲಿ ತಿರುಗಾಡುವವನು. ನಾನು ಹಾಗೆ ಪ್ರಯಾಣ ಮಾಡುವಾಗ ನೋಡಿರುವುದರಲ್ಲಿ ಎಷ್ಟು ಜನರನ್ನು ಈ ಮೋಟಾರುಗಳಲ್ಲಿ ತುಂಬುತ್ತಾರೆನ್ನುವುದೇ ಗೊತ್ತಿಲ್ಲ. ಅದರಲ್ಲಿ ಸ್ಥಳವಿರುವವರೆಗೂ

(ಶ್ರೀ ಬಿ. ಎನ್. ಬೋರಣ್ಣಗೌಡ)

ಕುರಿಗಳನ್ನು ತುಂಬುವಹಾಗೆ ತುಂಬುತ್ತಾರೆ. ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಹಾಕಲು ಯೂನಿಯನ್‌ನವರು ಹಾಕಕೂಡದೆಂದು ಹೇಳುತ್ತಾರೆನ್ನುತ್ತಾರೆ. ಈ ಯೂನಿಯನ್‌ಗಳಲ್ಲಿರುವವರೆಲ್ಲ ಬರೀ ಶ್ರೀಮಂತರೇ. ಇವರಿಗೆಲ್ಲ ತಲೆಬಾಗಬೇಕಾಗಿದೆ. ಯಾರು ಯಾರು ದುಡ್ಡಿಟ್ಟುಕೊಂಡಿದ್ದಾರೆಯೋ ಅವರಿಗೆಲ್ಲ ನಾವು ತಲೆಬಾಗಬೇಕಾಗಿದೆ. ದುಡ್ಡಿಟ್ಟುಕೊಂಡಿರುವವರಿಗೆ ಇವೊತ್ತು ಎಲ್ಲ ಕಡೆಯೂ ತಲೆಬಾಗಬೇಕಾದರೆ ಬಡವರ ಗತಿ ಏನೆಂದು ಸ್ವಲ್ಪ ಯೋಚನೆ ಮಾಡಬೇಕು, ಹೀಗೆ ಪ್ರತಿಯೊಂದು ರೀತಿಯಲ್ಲಿಯೂ ಸರ್ಕಾರದವರು ಚೆನ್ನಾಗಿ ಯೋಚಿಸಿ ಶ್ರೀಮಂತರೆನ್ನಿಸಿಕೊಳ್ಳುವವರ ದರ್ಜೆಯನ್ನೂ ಸ್ವಲ್ಪ ಕಡಮೆಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಎಂಥೆಂಥ ಕಾನೂನುಗಳನ್ನೋ ತರುತ್ತಿರುವಾಗ ಇಂಥ ಒಂದು ಕಾನೂನನ್ನೂ ಸರ್ಕಾರದವರು ತರಬೇಕು. ರೈತರ ವಿಚಾರದಲ್ಲಿ ಮತ್ತು ಎಲ್ಲ ಸೆಕ್ಟರುಗಳಲ್ಲಿರುವವರ, ಬೇರೆ ಬೇರೆ ಕೆಲಸ ಕಾರ್ಯಗಳನ್ನು ಮಾಡುವವರ, ಸರ್ಕಾರಿ ನೌಕರರ, ಕಾರ್ಖಾನೆಗಳಲ್ಲಿ ಕೆಲಸಮಾಡುವವರ, ಇವರೆಲ್ಲರ ಜೀವನವನ್ನು ಉತ್ತಮಪಡಿಸಬೇಕಾದರೆ ಯಾವ ಯಾವ ರೀತಿ ಮಾಡಬೇಕೋ ಆ ಕೆಲಸ ಕಾರ್ಯಗಳನ್ನೆಲ್ಲ ಮಾಡತಕ್ಕದ್ದು ನಮ್ಮ ಆದ್ಯ ಕರ್ತವ್ಯ.

ಮಾನ್ಯ ಮಿತ್ರರೊಬ್ಬರು ಮಾತನಾಡುತ್ತ ಕೇರಳದಲ್ಲಿ ಈಗ ಸೀಲಿಂಗ್ ಲಿಮಿಟ್ ಹಾಕಿಲ್ಲವೆಂದು ಹೇಳಿದರು. ಕೇರಳದಲ್ಲಿರುವ ಸನ್ನಿವೇಶವೇ ಬೇರೆ, ಮೈಸೂರಿನಲ್ಲಿರುವ ಸನ್ನಿವೇಶವೇ ಬೇರೆ. ಅಲ್ಲಿ Coffee plantations, Rubber plantations, ಇವನ್ನೆಲ್ಲ ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹೇಳಿದಾಗ ಆ ತೋಟಗಳಿಗೆ ದುಡ್ಡು ಕೊಡುವುದಕ್ಕೆ ಕೇರಳ ದೇಶವನ್ನೆಲ್ಲ ಮಾರಿದರೂ ಸಹ ದುಡ್ಡು ಕೊಡುವುದಕ್ಕಾಗುವುದಿಲ್ಲವೆಂದು ಸುಮ್ಮನಾದರು. ಅಲ್ಲಿ ಸೀಲಿಂಗ್ ಲಿಮಿಟ್ ಹಾಕುವುದಕ್ಕೆ ಅವಕಾಶವಿಲ್ಲ. ಅಲ್ಲಿರುವುದನ್ನು ಇಲ್ಲಿ ಏಕೆ ಹೋಲಿಸಿದರೋ ನನಗಂತೂ ಗೊತ್ತಿಲ್ಲ.

ಮತ್ತೆ ಕೆಲವು ಮಾನ್ಯ ಮಿತ್ರರು, ರೈತನಾಗಿರುವವನು, ಟೆನೆಂಟ್ ಆಗಿರುವವನು ಜಮೀನ್ದಾರನ ಹತ್ತಿರ ಕೈಒಡ್ಡಿ ಗೊಬ್ಬರಕ್ಕೆ, ಗುಳ ತಗುವುದಕ್ಕೆ, ಬೀಜ ತರುವುದಕ್ಕೆ ಸಾಲ ತರುತ್ತಾನೆ; ಭೂಸುಧಾರಣೆ ಮಾಡುವುದರಿಂದ ರೈತರಿಗೂ ಮತ್ತು ಜಮೀನ್ದಾರರಿಗೂ ಇರುವ ಸಂಬಂಧ ಕಡಿದುಹೋಗಿ ಟೆನೆಂಟ್ ಬೇರೆ, ಜಮೀನ್ದಾರ ಬೇರೆಯಾಗುವುದರಿಂದ, ರೈತರಿಗೆ ಮತ್ತು ಟೆನೆಂಟ್ಸ್‌ಗೆ ಕಷ್ಟಕಾಲದಲ್ಲಿ ಸಹಾಯ ಸಿಕ್ಕುವುದಿಲ್ಲವೆಂಬುದಾಗಿ ಹೇಳಿದರು. ಬಹಳ ಸಂತೋಷ. ರೈತರಿಗೆ ಜಮೀನ್ದಾರರ ಬಳಿ ಸಾಲ ಸಿಕ್ಕದೆ ಇದ್ದರೂ ಚಿಂತೆಇಲ್ಲ. ನಾನು ಅದನ್ನು ಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಐದು ರೂಪಾಯಿಗಳ ಸಾಲ ಕೊಟ್ಟು ಲೆಕ್ಕದಲ್ಲಿ ಐವತ್ತುರೂಪಾಯಿಗಳೆಂದು ಬರೆದುಕೊಳ್ಳುವ ಜಮೀನ್ದಾರರಿದ್ದಾರೆ: ಅವರೇ ತಮ್ಮ ಆತ್ಮ ಶೋಧನೆ ಮಾಡಿಕೊಳ್ಳಲಿ. ಅವರು ಏನೇನು ಮಾಡಿದ್ದಾರೆಂಬುದು ಅವರ ಮನಸ್ಸಿಗೇ ಬಂದು, ಅವರ ತಪ್ಪನ್ನು ಅವರು ತಿಳಿದುಕೊಂಡರೆ ಸಾಕು. ಮದುವೆಗೆ ಎಂದು 200 ರೂಪಾಯಿ ಸಾಲ ಕೊಟ್ಟು, 500 ರೂಪಾಯಿ ಎಂದು ಬರೆದುಕೊಂಡಿರುತ್ತಾರೆ. ಮದುವೆಗೆ ಮಾಡಿದ ಸಾಲ ಅವನಿಗೆ ಮಕ್ಕಳಾಗಿ, ಅವನ ಮೊಮ್ಮಗನು ಜಮೀನ್ದಾರರ ಮನೆಯಲ್ಲಿ ದುಡಿದರೂ ಸಹ ಅಲ್ಲಿಗೂ ಸಾಲ ತೀರಿಲ್ಲವೆಂದು ಹೇಳುತ್ತಾರೆ. ಇಂಥ ಪರಿಸ್ಥಿತಿ ಇವೊತ್ತಿಗೂ ಇದೆ. ರೈತನಿಗೆ ಗೊಬ್ಬರ ತರಲು, ಗುಳ ತರಲು, ಬೀಜ ತರಲು ಹಣವಿಲ್ಲದೆಹೋದರೆ ಸಹಕಾರ ಸಂಘಗಳ ಮೂಲಕ ಎಷ್ಟು ಮಾತ್ರ ಸವಲತ್ತುಗಳನ್ನು ಒದಗಿಸಬಹುದೋ ಅಷ್ಟನ್ನು ಒದಗಿಸಲು, ಜನರಮೇಲೆ ಪ್ರೀತಿ ವಿಶ್ವಾಸಗಳಿದ್ದರೆ, ಬಡವರ ಮೇಲೆ ಕನಿಕರವಿದ್ದರೆ ಏರ್ಪಾಡು ಮಾಡಲಿ. ಆದರೆ ಶ್ರೀಮಂತರಾದವರಿಗೆ ಕನಿಕರವನ್ನು ತೋರಿಸಬೇಕಾಗಿಲ್ಲ. ಇಷ್ಟು ಮಾತ್ರ ಹೇಳಿ ಜತ್ತಿ ಸಮಿತಿಯವರು ಮಾಡಿರತಕ್ಕ ಸಲಹೆಗಳನ್ನು ಸ್ವಾಗತಿಸಿ ನಾನು ವಿರಮಿಸುತ್ತೇನೆ.

Dr. K. K. HEGDE (Karkal).— Mr. Speaker Sir, The Government want to introduce legislation of a great magnitude and of a far-reaching consequence in the field of agricultural economics that has been therefor ages past. Under these circumstances, I personally feel that Government has to bear a heavy responsibility and as such the Government have to be very cautious while bringing out this legislation.

Sir, we are just forming ourselves into a new Mysore State by the integration of five different areas and we are already experiencing a lot of difficulty is even in the matter of adopting uniform laws and regulation throughout the State. When we are already feeling helpless in this matter, I do not know whether it would not be too premature and hasty for the Government to think of bringing legislation before this House without deep consideration and without taking into consideration all the pros and cons involved in a matter like this, and also without taking expert advice from eminent people in this line.

Sri M. C. NARASIMHAN (Kolar Gold Fields).—Do you mean to say that the Members of the Committee are not eminent?

Sri B. BASAVALINGAPPA (Bangalore South).—What are you Sir?

Dr. K. K. HEGDE.—I am just a Member of the Assembly. But there are experts who can pronounce their opinion on matters like this.

Sir, we should not forget that even the Planning Commission has said that it is not possible to have a uniform law adopted throughout the State. Before we think of any legislation on the lines contemplated in this Report, we must bear in mind the laws and conditions that are prevailing in various parts of

the State; and in the first instance, wherever possible, these laws may be liberalised if necessity arises.

Besides, Sir, we are just coming into a new State by integrating five different areas with new legislations have been introduced in a number of cases and without giving a fair trial to them, I think it is not fair to think of introducing fresh legislation which may have so many adverse consequences. People feel that the present or existing laws should be given a fair trial before taking the next step in this direction. Sir, even if it is suggested by the Centre or the Planning Commission that we should sponser legislation of a far-reaching character, we as representatives of the people have got every right to modify or change the recommendations contained in the report that is placed before us.

Now coming to the land legislation based on the report of the Tenancy Committee that has been constituted recently with my Hon'ble Friend Sri B. D. Jetty, as its head, I can only say that they have submitted their report to the Government and Government in turn have placed it before us for discussion. I have to say that this Committee has completed its work in a very short period of four months. This Committee was constituted in May last with the directive from the Government that it should submit its report within two months. But the committee, with all its earnestness, could not finish its work within two months, but had to get its term extended by four months. Certainly I feel that even four months is too short a period for drafting a report of this type and on a subject of such great magnitude.

Sri B. BASAVALINGAPPA.—What is the duration you think best?

Dr. K. K. HEGDE.—It should vary from days to years. I only say that four months is too inadequate for this purpose. And even after the formation, there were many impediments before the members of that committee. During that period the legislature was sitting and in some parts of the State there were rains and Members were unable to reach some parts of the State. To add to that, there was also the epidemic of influenza. All these factors proved to be impediments in the way of the members from arriving at proper conclusions by a study of facts first hand on the spot. In fact, if I may disclose a personal conversation, some member of the Committee stated to me that he could have done better if more time had been given and with the limited time that was given, they could not study all the facts.

Sri J. B. MALLARADHYA.—Is that stated anywhere in the Report?

Sri B. BASAVALINGAPPA.—It is thoroughly incorrect.

Mr. SPEAKER.—When did that happen in a private conversation or a public talk?

Dr. K. K. HEGDE.—It is private.

Mr. SPEAKER.—If it is private information, it should not be disclosed here. If it is public information, then it can be mentioned here.

Sir, the committee have said that if a person holds a basic holding, he can evict a tenant in entirety. If a person holds between a family holding and the ceiling limit, he can evict to the extent of half the area. If he owns in exces

(SRI M. C. NARASIMHAN)

of the ceiling—I do not know how any one can own in excess of the ceiling—if he owns in excess of the ceiling, he cannot evict the tenant. I would like to know from the Committee what right they had to take away the rights in the matter of security of tenure conferred on the peasants in South Canara. I will presently submit that so far as South Canara was concerned, the Madras Cultivating Tenants Protection Act conferred a higher degree of security of tenure because section 4A of the Madras Cultivating Tenants Act says:

> "That a person who is holding in his possession five acres of land, shall not be entitled to resume."

In any event, whatever may be the holding, he can never evict the tenant unless the tenant is allowed to have half of the land which is possessed. So, Sir, at no time, under Madras Act could the tenant be evicted. The minimum was that he should possess half of the land, whether it is one acre or two acres, the protection was absolute.

Sri J. B. MALLARADHYA.—Does my Hon'ble friend remember that the whole basis of the Jatti Committee Report is to give all preference to personal cultivation with a view to maximising production? That is the very basis of the Report.

Sri M. C. NARASIMHAN.—I do not know how Sri Mallaradhya thinks that the tenant does not cultivate the land personally. I know there is some talk on this subject. I have heard that Sri C. Rajagopalachari feels that the owner must be made the tiller. I do not know whether you subscribe to that view. It is the tiller that must be made the owner, and not the owner that must be made to be a tiller. I hope you will see there is a subtle distinction in this. So far as the Madras Act was concerned, it definitely conferred a higher type of security of tenure. I would like to know what right the Committee had to take away this security of tenure. In the name of bringing about uniformity, could they ever take away a vested right like this? This was a right which was conferred by a legislative enactment and which is in force now. How can they try to take it away by another reform? I cannot understand how this is a reform. I do not know how this fulfils the declared objective of conferring permanent tenure and how it fulfils the declared objective of liquidating the tenant—landlord relationship?

Likewise, Sir, in respect of two other matters also, the approach of the Committee has been the same. The Committee has been actuated not by the declared intention of conferring security of tenure and liquidating the landlord-tenant relationship, and distributing the land to a maximum number of tenants. That is not the objective before the Committee. The Committee on the other hand, at every stage wanted to save as many rights of landlords as possible, as many interests, as many privileges of the landlords as possible. If only they had taken the approach of conferring the highest benefits available in the whole area, that would have been more or less a satisfactory tenancy legislation. If they had at least kept the recommendations of the Planning Commission in their mind, even that would have been good. Even that they did not do. They knew that ceiling was absolutely necessary. They had no doubt as some of my friends in the Congress Party that for they have, said ceiling was absolutely necessary and they even declared that the tenant-landlord relationship should go. The Planning Commission itself has laid down 3 times the family holding as the ceiling while the Committee has proposed 4½ times the family holding as the ceiling. What right they had to depart from the principle enunciated by the Planning Commission?

Sri J. B. MALLARADHYA.—Does my Hon'ble friend think that the Planning Commission can dictate terms and issue orders as if it is a principality of their kingdom?

Sri M. C. NARASIMHAN.—That is what the Committee says. I do not say that. In fact, my complaint is that on the question of land reform the thinking to a large extent is done at

Delhi. It imposes certain limitations. For example, I know fully well that Kerala is not able to bring in a much more radical land reform because they are afraid of the Congress inside Kerala, the Congress at Delhi and the Planning Commission.

Sri J. H. SHAMSUDDIN.—Can you substantiate your statement by the official statement of the Kerala Government ? Otherwise, it is an unfounded charge against the Kerala Government *vis-a-vis* the Government of India.

Sri M. C. NARASIMHAN.—Not at all. I am aware of the circumstances. I hope you will credit me with that much knowledge.

Sri J. H. SHAMSUDDIN.—I would like to have an official statement by the Kerala Government substantiated by facts and figures.

Sri M. C. NARASIMHAN.—The thinking to a large extent having been done at Delhi, naturally there are certain defects. For example, how do you fit in the Kashmir land reforms within the framework of our Planning Commission's recommendations ? In Kashmir there was virtual expropriation. They did not give compensation. Nobody was allowed to possess more than 22¾ acres of land in Kashmir. Likewise, there was nothing to prevent the Kerala Government to do that. I know fully well that, so far as ceiling is concerned, they did want to have a lower ceiling. For example, they wanted to lower the ceiling of 15 acres to 10 acres. I hope that when the final Act emerges it may come down to 10 acres. That apart, the Planning Commission laid down 3 family holdings as the ceiling. They quote chapter and verse from the report of the Planning Commission. Then why did they not stick to the recommendation of the Planning Commission in this respect ? When they want resumption of land for personal cultivation, they go to the Planning Commission. When they want that the definition of personal cultivation should not include physical labour they rush to international economics and to the Planning Commission. But when it comes to the question of ceiling, they do not want to respect the recommendation of the Planning Commission.

Sri H. M. CHANNABASAPPA.—Is the Hon'ble Member aware that the Planning Commission has asked all the State Governments to fix the ceiling consistent with the conditions in the States, availability of land pressure of population on land, customs and conditions prevailing in the States and so on ?

An HON'BLE MEMBER.—The Hon'ble Member is adopting the communist way of expressing things.

Sri M. C. NARASIMHAN.—How can I express in your way ? That is elementary common sense. I do not belong to your way of thinking. So far as the Planning Commission is concerned, it has never laid down that there should be latitude in all matters. So far as the ceiling is concerned it definitely lays down that it should be three times the family holdings.

Sri D. DEVARAJ URS.—It is left to each State to define the ceiling consistent with its own experience, availability of land and the economic condition prevailing therein.

Sri M. C. NARASIMHAN.—My friend is helping me. What should constitute the basic holding and family holding and what should be the income? These are left to the State. So far as the multiple of the family holding is concerned, the Planning Commission has not given latitude. When you have declared what is your basic holding and family holding, how is it open to you to depart from the multiple prescribed by the Planning Commission ?

The Land Reforms Panel of the Planning Commission had made some recommendations to the Planning Commission. In that Panel was represented the high priest of the Congress Party Sri Sriman Narayan. According to the recommendation of the Panel, the land from which the income will be Rs. 3,600 should be the ceiling. The Planning Commission did not accept it and said that so far as the basic holding is concerned we will leave it to the benevolent States to arrive at

(SRI M. C. NARASIMHAN)

it and unfortunately the States have been benevolent to the landlords and not to the tenants.

Sri H. M. CHANNABASAPPA.—In communist China and Russia they switched on from peasant farming to collective farming and from collective farming to State farming.

Sri M. C. NARASIMHAN.—I am at home in that subject. I will answer that question at the end.

So far as ceiling is concerned, at least did they adopt the Hyderabad ceiling *in toto*? In 1954 Hyderabad had fixed that ceiling and actually so far as Yadgiri is concerned, it is already in force. According to Gulzarilal Nanda, it is in force in Yadgiri.

Sri G. ANNA RAO.—I have read the Economic Review. That is not the position.

Sri M. C. NARASIMHAN.—Sir, at least the Hyderabad ceiling should have been adopted. They have changed what should constitute a family holding. As I have already submitted, they have departed from the Planning Commission's recommendation. That will only amount to instead of large number of tenants getting land, lesser number will get the land. So far as Hyderabad is concerned, it is 4½ family holdings upto 18 to 275 acres of land. If it is 5,600 or 7,400 as informed by the Committee, then naturally it would go to 500 acres. So, the range is........

Sri D. DEVARAJ URS.—He must have some basis. On what calculation he says......

Sri M. C. NARASIMHAN.—There is one rule in relation to this Act. So far as China is concerned, they had twice the average available land. So far as Japan is concerned, it was three times the available land. The per capita income was multiplied by three and that was fixed the ceiling. You could have had the same thing.

So far as the next item, that is rent is concerned, the rent now fixed is 1/4 and 1/5. Once again I do not know why it should have been reduced from the statutory provision of 1/6 or five times the land assessment in Bombay area. At least four districts had that legislation and it was in force. Is it because after land reforms they will ask the people to pay higher rate of rent? There is necessity on economic grounds for reducing the rent. My point is that all should not be brought under same level and take advantage of the reduction and the landlord should be put to penury and suffering. A certain high rate of rent is disadvantageous and therefore, my submission is that 1/6 is fair.

Sri K. S. SURYANARAYANA RAO.—What is the basis for 1/6?

Sri M. C. NARASIMHAN.—Your friend Sri Morarji has fixed that.

Sri K. S. SURYANARAYANA RAO.—You have no basis, is it?

Sri M. C. NARASIMHAN.—When I see that it is advantageous to me and when Sri Morarji has fixed it, why should I have any objection to it?

Sri H. M. CHANNABASAPPA.—The question put to you was, what is the basis on which you came to the conclusion that it should be 1/6th?

Sri M. C. NARASIMHAN.—I will submit some arguments in relation to it. I do not of course have any statistics.

Sri K. S. SURYANARAYANA RAO.—What is the rent fixed by your friends in Kerala?

Sri M. C. NARASIMHAN.—It is 1/12, don't forget it.

An HON'BLE MEMBER.—Do you guarantee that it will not be enhanced during other stages of several Bills to be introduced in Kerala?

Sri M. C. NARASIMHAN.—That is the question you should put to Sri E. S. Namboodripad.

Mr. DEPUTY SPEAKER.—The House will now rise and meet again at 3-45 P.M.

The House adjourned at Five Minutes past Three of the Clock and met again at Forty-five Minutes past Three of the Clock.

[MR. DEPUTY SPEAKER in the Chair]

Sri V. P. DEENADAYALU NAIDU.—May I just elicit a point of information from the Chair? There is a short-notice question and I want to know when it would be taken up.

Mr. DEPUTY SPEAKER.—We will take it up at the end.

Sri M. C. NARASIMHAN.—Mr. Speaker, Sir, I have to say one point about the ceilings. So far as Rajasthan is concerned, Shri Sukhadia, Chief Minister of Rajasthan, had recently constituted a Committee on Land Reforms and they have recommended Rs. 2,400 as the net income for the purpose of ceiling. The family size is also 5 as in our case. If they constitute 5 to 7 members, the ceiling income would be Rs. 2,500.

My friend wanted to know the basis. The basis is the availability of land and the pressure of population. If these two are taken into consideration and borne in mind and also the aspect of social justice, distributive justice, I am sure this very committee would have come to the conclusion of fixing ceiling at a much lower level than has been recommended here.

As I already submitted, the right of resumption under the cloak of personal cultivation is a very dangerous right and it will lead to large-scale eviction of tenants and will also add to the large army of unemployed already in the State. The committee has recommended for purposes of personal cultivation that a person should reside within ten miles or thereabouts from a village. They have omitted the other restriction that was found in the Madras Act, namely, physical labour. Even the Planning Commission did not lay down that physical labour need not be taken into account. I do not know how the committee came to the conclusion that physical labour was unnecessary. I think they were actuated not so much by giving the land to the tiller as by the consideration that the owner should be deemed as tiller. Physical labour is a necessary accompaniment of personal cultivation as has already been accepted as per section 4 (a) of the Madras Act.

Sri G. ANNA RAO.—Is it for the purpose of acquisition?

Sri M. C. NARASIMHAN.—For all purposes. The Governor's address lays down that the tiller should be the owner of the soil. This broad and liberal provision in relation to personal cultivation will not help us realise this objective laid down in the Governor's Address. Sir, it encourages in a manner to accept landlordism or cultivation by hard labour that tenants themselves would be converted into hard labour and there according to the committee they should be deemed to be personally cultivating the land.

The other aspect I wanted to speak about is the rent. The rent should be as low as possible for one reason. I have already submitted that so far as the landlord is concerned, in very many cases he does not perform any gainful function in the matter of production. I am not taking into account those landlords who might be contributing money, seeds, etc. I am talking of the other category. The objective as declared by the committee is to discourage cultivation by non-agriculturists. One of the important provisions from the other recommendations made by the committee is about low rents. This matter was recognised by the Subramanyam Committee in Madras. They held definitely that low rent discourages cultivation by non-agriculturists. Otherwise, as we are all very well aware, investment on land is an investment which yields quick returns. If there is no responsibility of physical labour in regard to personal cultivation and also if the rents are not sufficiently low and fairly attractive, then it is impossible to prevent cultivation by non-agriculturists thereby we will never be adding to the increase in the production which is our declared objective.

I come to another aspect. It is true that these reforms by themselves will not bring a big change in the countryside. As it is even if these ceilings are accepted, I am certain there will not be big changes because already properties are being divided and sub-divided. All that is necessary in respect of the possible recommendations has been effected

(SRI M. C. NARASIMHAN)

and this will only affect future acquisition. I am certain of that.

I am looking to the recommendation in respect of fair rent and eviction, *i.e.*, personal cultivation, etc., as the most important recommendation. In respect of these two recommendations it is unfortunate that the committee has placed one of the most unsatisfactory set of proposals. It is unfortunate they have not placed a correct picture. In respect of land-distribution they could have given us distribution in respect of acreage of various crops wet, dry or garden. If that at least had been given we could have had an idea as to how ceiling would work but even that has not been placed. It is not that those figures were not available. I know for certain that the District Magistrates, Collectors, had sent figures in respect of distribution of land into wet, dry and garden.

Then with regard to the machinery for distribution I do not know why they have chosen officials for Land Tribunals. The elected democratic element seems to have missed the recommendation in respect of the set-up for purposes of land distribution. As I submitted already, General Macarthur in whose company we would not like to be, even he wants that village panchayets themselves should be responsible for the purpose of land distribution, for the purpose of land management, etc., all problems arising from land reform. Japan has done it. China has done it. Of course let us not follow China; we could follow Japan. Why did the committee not think in such terms but only thought in terms of a High Court Judge and other officials alone? It has been repeatedly said by critics of land reforms in various parts of the State that because of the official element at various levels adequate sympathy towards tenants has not been forthcoming. That is a criticism that has been advanced by Balawantrao Committee and various other committees. So it is necessary that the popular element ought to have been there. If Village Panchayet could not be given representation, at least some democratic element should have been brought in. I noticed that the questionnaire does not contain any question as regards the machinery they propose for the distribution of land. At least one question could have been put in the questionnaire to the various interested sections. There is nothing like that. I do not know whether it is accidental or not.

One more point in this connection. So far as plantations are concerned, I am aware of the criticism that plantations should not be exempted from ceiling. I would only submit this; so far as orchards and such other items are concerned they have been exempted. Why is it that plantations have not been exempted is not clear. The logic of it is not very clear. They have said that the existing plantations are concerned they should be exempted from the operation of ceiling and that so far as future acquisitions are concerned, the ceiling shall apply.

Sri H. K. VEERANNA GOWDH.—It is very easy to understand.

Sri M. C. NARASIMHAN.—For orchards you give exemption and not for plantations?

4 P.M.

Sir, relationship is somewhat different in plantations. It is a matter for consideration as to whether some ceiling should apply. I do not think that it is possible for workers to take up plantations. If the Government has the idea of nationalising plantations, then that is another thing.

Sri K. MALLAPPA.—You are not very clear about it.

Sri M. C. NARASIMHAN.—Sir, one more point remains for me. These measures by themselves will not bring about the desired result and will not bring the desired implementation. It must be accompanied definitely by co-operative farming. A point was raised that co-operative farming has not met with the desired result and that it would be a thorough failure. Sir, I heard it on the authority of certain committees that co-operative farming in India is to some extent a failure. It is because popular element has not been sufficiently taken note of, and also popular leadership has not been built up. I believe that land reform would go a long way if there is desired leadership which is very necessary in the successful working of co-operative farming. So far as China is concerned, my friend wanted to know what was the position there. We have the authority of R.K. Patil Mission for the proposition that co-operative farming was one of the main things which increased food production so far as China is concerned. So far as production and the advance in agricultural sector is concerned, the advance registered over these few years is something stupendous in China. I am not for a moment saying that our advance is not stupendous, but only note that in China the advance is much bigger for the reason that land reforms has taken place and secondly it was followed up by co-operative farming, producing farms and also later on by the State sector entering into agriculture. I will give a few figures and observations made by the Patil mission and that will clear some misconceptions. It is not as if the communist system and the communists had anything to do with the advance in agriculture. They had something to do. That the communist leaders came forward and worked enthusiastically in all co-operative farming is there. But otherwise not. I will give you certain figures pertaining to China from the *Eastern Economist* which is biased against China rather than in favour of China. I will give the overall yield in respect of paddy in China. It was 1,190 lbs. per acre in 36-37. In 55-56, it was 2,387 lbs. In South China the figure was 5,300 lbs. So far as irrigation is concerned, it is important to note that there is a very big advance in respect of irrigated area also. Sir, the percentage of irrigated net area was 20.7 in the year 49-50 and 27.3 in the year 55-56, whereas in the same pattern, in India it was 14.6 of the total irrigated area in 1949-50 and it was 14 8 in 55-56. I am submitting this in order to show that the advance was very big. The availability (per capita) of foodgrains in China was 19.9 ounces in the year 1949-50 and it shot up to 28.5 ounces in the year 1955-56. In India it was 18.8 ounces in 1949-50 and it was 20.1 ounces in the year 1955-56. In 49-50 it started more or less on the same level, but in the end, there was a gap of 8.9 ounces in respect of per capita availability. I am saying this in order to show that there has been quite a big advance in China. The reasons for the advance have been refuted by Mr. F. N. Rana, the head of the Co-operative Department in Bombay. But that has been answered by Mr. Patil, the leader of the Co operative Delegation to China. He has stated that there was voluntary joining of the co-operatives. There was no coercion and that there was no violence. On the other hand it was a voluntary joining of the co-operatives and the co-operatives have helped to increase their production.

> " Even according to our colleagues co-operativisation has had no adverse effect on agricultural production and livestock, however reluctant they may be to allow the co-operatives credit for increased production. They have admitted the fact of increased production though they have ascribed it to other causes. If force and violence were the major factors in herding the great majority of peasants into co-operatives, it could not but have had a tremendous effect on the agricultural situation in China."
>
> "It was thus a process of development by appreciation and not condemnation."
>
> "It will thus be seen that the great majority of the peasants joined the co-operatives voluntarily, *i.e.*, without any compulsion or acting against their positive will."

Well, these are the observations made by impartial investigators into China's conditions and they said co-operation was the important factor. I hope that so far as the reforms here are concerned, the Jatti Committee recommendations will be amended in the light of the discussions we have had. Let them be amended not in favour of the landlords, but as far as possible in favour of the dumb millions in whose name Gandhiji

(SRI M. C. NARASIMHAN)

spoke years ago. Sardar Vallabhbhai Patel made the following special reference to the peasants of Karnataka:

> "The brave peasants of Karnataka have vied with you in their sacrifices, in their loss of lands and property, in their privations and their suffering. They have courted attachments, confiscations, imprisonments, and worse. Both men and women have showed utter disregard to sufferings and privations and they are today as ruined and resourceless as can be imagined. The tales of their bravery and their sacrifices have filled me with admiration and pride and the news of their sufferings at times unhinged me."

These were the very words of Sardar Vallabhbhai Patel in respect of the Kartaka peasants when they struggled for freedom. Let our Ministry better the lot of those peasants in the name of social justice and I hope they will bring better land reforms. I quote to you the words of Jawaharlal Nehru in reply to those who did not want land reforms:

> "The wind is blowing to the villages and to the mud huts where dwell our poverty stricken peasantry, and it is likely to become a hurricane if relief does not come to them soon.. All our political problems and discussions are but the background for the outstanding and over-whelming problem of India—the land problem."

This is the position and I hope they will bring better reforms.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ಸನ್ಮಾನ್ಯ ಸಭಾಪತಿಗಳೆ, ಈ ಸಭೆಯ ಮುಂದೆ ಒಂದು ಜಟಿಲವಾದ ಸಮಸ್ಯೆಯನ್ನು ಚರ್ಚೆಗೆ ಇಟ್ಟುಕೊಂಡಿದ್ದೇವೆ. ಪ್ರಪಂಚದ ಇತಿಹಾಸದಲ್ಲಿ, ಭೂಸಮಸ್ಯೆಯನ್ನು ನಿವಾರಣೆಮಾಡಿದರೆ, ಇತರ ಎಲ್ಲ ಸಮಸ್ಯೆಗಳೂ ಪರಿಹಾರವಾದಂತೆಯೇ ಎಂಬ ಕಲ್ಪನೆ ಇದೆ. ಇದು ಸ್ವಂತ ಅನುಭವದಿಂದ ಹೇಳಿದ ವಿಷಯ. ಒಂದು ದೇಶದಲ್ಲಿ ಯಾವ ಕಾರಣದಿಂದಲೇ ಆಗಲಿ ಕ್ರಾಂತಿಯುಂಟಾಗುವ ಭಯ ಅಥವಾ ಹೆದರಿಕೆ ಇರುವುದಾದರೆ, ಅದಕ್ಕೆ ಚಾರಿತ್ರಿಕವಾದ ಒಂದು ವಿಷಯವೇ ಕಾರಣವೆಂದು ಹೇಳಿದ್ದಾರೆ. ಇದಕ್ಕೆ ಆಶಾಭಾವನೆಯಿಂದ ಕೂಡಿದ ಭೂಸುಧಾರಣೆಯೇ ಪರಿಣಾಮಕಾರಿಯಾದ ಉತ್ತರವೆಂದು ಹೇಳಿದ್ದಾರೆ. ಇದನ್ನು ಮಾಡದಿದ್ದರೆ, ದೇಶದಲ್ಲಿರುವ ಕ್ರಾಂತಿಕಾರರು ಜನರ ಮನಸ್ಸನ್ನು ಕಲಕಿ, ಕಲುಷಿತಮಾಡಿ, ಕ್ರಾಂತಿಯನ್ನೆಬ್ಬಿಸಿ ಅನೇಕ ದುಷ್ಪರಿಣಾಮಗಳನ್ನುಂಟುಮಾಡುತ್ತಾರೆಂದು ಅನೇಕ ಮುಂದುವರಿದ ರಾಷ್ಟ್ರಗಳಿಗೆ ಅನುಭವ ಉಂಟಾಗಿದೆ. ಈ ದೃಷ್ಟಿಯಿಂದ, ಭೂಸುಧಾರಣೆ, ಒಕ್ಕಲುತನದ ವಿಚಾರದಲ್ಲಿ ನಮ್ಮ ಮೂಲ ತತ್ವ ಏನಿರಬೇಕೆಂಬುದನ್ನು ಪೂಜ್ಯ ಮಹಾತ್ಮ ಗಾಂಧಿಯವರು ನಮಗೆ ತಿಳಿಸಿದ್ದಾರೆ. ಅದು ಈಗಿನ ವಾತಾವರಣದಲ್ಲಿ ಅನ್ವಯಿಸುತ್ತದೆ. ಹಿಂದೆ 'ಸಾವಿಷ್ಣುಃ ಪೃಥೀವೀಪತಿಃ' ಎಂಬ ತತ್ವವನ್ನು ಅಂಗೀಕಾರ ಮಾಡಿದ್ದೆವು. ಆದರೆ ಇಂದು ಪೂಜ್ಯ ಮಹಾತ್ಮರು ಶಾಂತಿ ದೂತರಂತೆ, ಸಮರ ಸನ್ನಿವೇಶವನ್ನು ನೋಡಿ, ಶಾಂತಿ ಸಂದೇಶವನ್ನು ನೀಡಿ ಹೋಗಿದ್ದಾರೆ. 'ನಾಕೃಷಿಕಃ ಪೃಥಿವೀಪತಿಃ' ಎಂಬ ಸಂದೇಶವನ್ನು ನಮ್ಮ ಮುಂದೆ ಸಾರಿದ್ದಾರೆ. ಕಾಂಗ್ರೆಸ್ ಸರ್ಕಾರದವರು ಎಷ್ಟುಮಟ್ಟಿಗೆ ಈ ಸಂದೇಶವನ್ನು ಅನುಷ್ಠಾನಕ್ಕೆ ತರುತ್ತಿದ್ದಾರೆಂದು ನಾನು ಹೇಳುವುದಿಲ್ಲ. ಹಿಂದಿ ನನಗೆ ಚೆನ್ನಾಗಿ ಬರುವುದಿಲ್ಲ. 'ಜಮೀನ್ ಕಿಸ್ಕಿ? ಕಿಸಾನೊಂಕಿ' ಎಂದು ಜನ ಕೂಗುತ್ತಿದ್ದುದನ್ನು ಮೂವತ್ತು ವರ್ಷಗಳ ಕೆಳಗೆ ಕೇಳಿದ್ದೆ. ನಾನು ವಿದ್ಯಾರ್ಥಿಯಾಗಿದ್ದಾಗ ದೇಶದ ನಾನಾ ಮೂಲೆಗಳಿಂದ ಈ ಕೂಗು ಕೇಳಿಬರುತ್ತಿತ್ತು. ಇದನ್ನು ಕಾಂಗ್ರೆಸ್ ಸರ್ಕಾರ ಯಾವರೀತಿ ಕಾರ್ಯರೂಪಕ್ಕೆ ತಂದಿದ್ದಾರೆಂಬುದು ನಮಗೆಲ್ಲ ತಿಳಿದ ವಿಷಯವಾಗಿದೆ. ಈ ಭೂಸುಧಾರಣೆಯನ್ನು ಜಾರಿಗೆತಂದು ಏಕೆ ದೇಶದಲ್ಲಿ ಕ್ರಾಂತಿಯನ್ನುಂಟುಮಾಡುತ್ತಾರೆಂದು ಹೇಳುವ ಜನ ಕಾಂಗ್ರೆಸ್ ಸಂಸ್ಥೆಯಲ್ಲೇ ಇದ್ದಾರೆಂಬುದನ್ನು ಕೇಳಿ ನನಗಂತೂ ತುಂಬಾ ವ್ಯಥೆಯುಂಟಾಗಿದೆ. ಅನೇಕ ವರ್ಷಗಳಿಂದ ಯಾರು ಯಾರು ಕಾಂಗ್ರೆಸ್ ಮುಖಂಡರು ದೇಶಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ, ಜನರಿಗೆ ಕ್ರಾಂತಿಕಾರಕವಾದ ರೀತಿಯಲ್ಲಿ ಉಪದೇಶ, ಭಾಷಣಗಳನ್ನು ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ನಾನು ಯಾವ ಪಂಗಡವನ್ನು ಅಥವ ಪಕ್ಷವನ್ನು ಪ್ರತಿನಿಧಿಸುತ್ತೇನೋ ಅದರ ಅಭಿಪ್ರಾಯವನ್ನು ಹೇಳುವುದಾದರೆ, ನಾವು ಜತ್ತಿ ಸಮಿತಿಯ ವರದಿಯನ್ನು ಪುಷ್ಟೀಕರಿಸುತ್ತೇವೆ, ಇದಕ್ಕೆ ಬೆಂಬಲ ಕೊಡುವುದಕ್ಕೆ ಸಿದ್ಧರಾಗಿದ್ದೇವೆ ಎಂದು ಕಂಠೋಕ್ತವಾಗಿ ಹೇಳುತ್ತೇನೆ. ಆದರೆ ಇದರಲ್ಲಿರುವ ನ್ಯೂನತೆಗಳನ್ನು ಟೀಕಾ ರೂಪವಾಗಿ ಹೇಳಿದರೆ ಈ ಸಮಿತಿಯ ವರದಿಯನ್ನು ನಾವು ಒಪ್ಪುವುದಿಲ್ಲ ಎಂದು ಭಾವಿಸಬಾರದು. ಇದರಲ್ಲಿ ಕೆಲವು ಬದಲಾವಣೆಗಳಾಗುವುದು ಅಗತ್ಯವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಹೊಸ ಮೈಸೂರು, ಹಳೆಯ ಮೈಸೂರು ಎಂದು ನಾನು ಹೇಳುವುದಿಲ್ಲ; ಈಗಿನ ವಿಶಾಲ ಮೈಸೂರಿನ ವಿಚಾರದಲ್ಲಿ, ನಮ್ಮ ದೇಶದ ಅಭಿಪ್ರಾಯವೇನೆಂಬುದನ್ನು ಸ್ಥೂಲವಾಗಿ ತಿಳಿಸಿದ್ದೇನೆ. ನನ್ನ ಸ್ವಂತ ಅನುಭವದಿಂದ, ಜನರನ್ನು ಕೇಳಿ ಅವರ ಸ್ಥಿತಿಗತಿಗಳನ್ನು ನೋಡಿ ತಿಳಿದುಕೊಂಡಿರುವುದನ್ನು ಹೇಳುತ್ತೇನೆ. Uneconomic holdings, ಎಂದರೆ, ಲಾಭದಾಯಕವಲ್ಲದ ಹಿಡುವಳಿಗಳು ಹೆಚ್ಚು ಸಂಖ್ಯೆಯಲ್ಲಿವೆ ಎಂಬುದನ್ನು ಸಮಿತಿಯವರು ಒಪ್ಪಿದ್ದಾರೆ. ಅಲ್ಲದೆ ಭೂಮಾಲೀಕತ್ವದಲ್ಲಿ ಅಸ್ತವ್ಯಸ್ತವಾಗಿದೆ. ಒಂದು ಕಡೆ ಹೆಚ್ಚು ಜಮೀನಿರುವವರು, ಎಂದರೆ, 38 ಸಾವಿರ ಎಕರೆ, ಎರಡು ಮೂರು ಸಾವಿರ ಎಕರೆ ಇರುವವರಿದ್ದಾರೆ; ಇನ್ನೊಂದು ಕಡೆ ಐದು ಎಕರೆಗಿಂತ ಕಡಮೆ ಉಳ್ಳವರಿದ್ದಾರೆ. ಹೀಗೆ ಭೂಮಾಲೀಕತ್ವದಲ್ಲಿ ಅಂತರ ಎದ್ದು ಕಾಣುತ್ತದೆ . . . . . .

ಶ್ರೀ ಟಿ. ತಾರೇಗೌಡ—38 ಸಾವಿರ ಎಕರೆ ಯಾರಿಗಿದೆ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅದು ಎಲ್ಲರಿಗೂ ತಿಳಿದ ವಿಷಯ. ಈಗ ಜಮೀನನ್ನಿಟ್ಟುಕೊಂಡಿರುವವರಲ್ಲಿ ಕೇವಲ ಸಣ್ಣಹಿಡುವಳಿಗಳನ್ನಿಟ್ಟುಕೊಂಡು ವ್ಯವಸಾಯಮಾಡುತ್ತಿದ್ದಾರೆ. ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಲ್ಲಿ ಸ್ವಂತ ಹಿಡುವಳಿ ಇಲ್ಲದೇ ಇರುವವರಿದ್ದಾರೆ. ಗೇಣಿಯ ವಿಷಯದಲ್ಲಿ ಜನರಿಗೆ ಸ್ಥಿರತೆ ಹೋಗಿದೆ. ಗೇಣಿಯನ್ನುನಿಷ್ಕರ್ಷೆ ಮಾಡುವಾಗ ಕಾಗದದಲ್ಲಿ ಎಷ್ಟೋ ವಿಷಯಗಳಿರಬಹುದು, ಆದರೆ ಗೇಣೀದಾರನ ಹಿತಕ್ಕೆ ಧಕ್ಕೆತರುವಂತಹ ಸ್ಥಿತಿಯಿದೆ. ಗುತ್ತಿಗೆ ಮೊಬಲಗನ್ನು ನಿಷ್ಕರ್ಷೆ ಮಾಡುವಾಗ, ಹೆಚ್ಚುಮಾಡಿ ಅವನ ಬೆನ್ನುಮೂಳೆ ಮುರಿಯುವಂತೆ ಮಾಡುವುದಾಗಿದೆ. ವ್ಯವಸಾಯಮಾಡುವ ಜನರಿಗೆ ಸುಲಭದರದ ಬಡ್ಡಿಯಮೇಲೆ ಸಾಲ ಸಿಕ್ಕುವುದು ದುರ್ಲಭವಾಗಿದೆ. ಅನೇಕ ಸಹಕಾರ ಸಂಘಗಳಿವೆಯೆಂದು ಹೇಳಬಹುದಾದರೂ ಈ ಸಂಘಗಳಲ್ಲಿ ಸಾಲ ಸಿಕ್ಕುವುದು ಎಂಥವರಿಗೆ ಎಂಬುದು ಪರಿಶೀಲನೆ ಮಾಡಿ ನೋಡಿದರೆ ವೇದ್ಯವಾಗುತ್ತದೆ.

ಇನ್ನು ಕಂದಾಯದ ಹೊರೆಯ ವಿಷಯದಲ್ಲಿ ನಾನು ಹೇಳುವುದಾದರೆ, ರೈತನ ತಲೆಯ ಮೇಲಿನ ಹೊರೆ ಜಾಸ್ತಿಯಾಗಿದೆ ಎನ್ನುವುದಕ್ಕೆ ಸಾಕಷ್ಟು ಕಾರಣಗಳಿವೆ. ಇರತಕ್ಕ ಸ್ಥಿತಿಯನ್ನು ಹೇಳುತ್ತೇನೆ. ಒಟ್ಟಿನಲ್ಲಿ ಮುಖ್ಯ ಲಕ್ಷಣವೇನೆಂದರೆ ವ್ಯವಸಾಯ ವೃತ್ತಿಯನ್ನು ಮತ್ತು ಪದ್ಧತಿಯನ್ನು ಮುಂದುವರಿಸುವುದಕ್ಕೆ ಆಶಾದಾಯಕವಾದ ಪರಿಸ್ಥಿತಿ ನಮ್ಮ ದೇಶದಲ್ಲಿಲ್ಲವೆಂಬುದು ನಿರ್ವಿವಾದವಾಗಿದೆ. ಮೈಸೂರು ಸಂಸ್ಥಾನದಲ್ಲಿ ಅದೃಷ್ಟವಶಾತ್ ಸಾಮಾನ್ಯವಾಗಿ ಹಿಡುವಳಿದಾರನ ಒಡೆತನ ಎನ್ನುವ ಪದ್ಧತಿ ನೂರಾರು ವರ್ಷಗಳಿಂದಲೂ ಜಾರಿಯಲ್ಲಿದೆ. ನಮ್ಮ ಲ್ಯಾಂಡ್ ರೆವಿನ್ಯೂ ಕೋಡ್‌ನಲ್ಲಿ large landed estates, ಎಂದರೆ ದೊಡ್ಡ ದೊಡ್ಡ ಹಿಡುವಳಿಗಳಿರುವಂತಹ ಕ್ರಮವನ್ನು ಜಾರಿಗೆ ತರಬೇಕೆಂದು ಸರ್ಕಾರದವರು ಉದ್ದೇಶಪೂರ್ವಕವಾಗಿ ನೂರಾರು, ಸಾವಿರಾರು ಎಕರೆಗಳನ್ನು large land estates ಮಾಡಲು ಪ್ರಯತ್ನ ಮಾಡಿದರು. ಯಾವ ಕಾರಣದಿಂದ ಈ ಫಾರಂಗಳನ್ನು ಮುಂದುವರಿಸಲಿಲ್ಲವೊ ಗೊತ್ತಿಲ್ಲ. peasant proprietorship ಎನ್ನುವುದು ಮುಂದುವರಿಯುತ್ತಿದೆ. ಈರೀತಿ ಭೂಸುಧಾರಣೆಗೆ ಬದಲಾಗಿ ಗೇಣಿಶಾಸನವನ್ನು ಬಲಪಡಿಸಿ ಪರಿಣಾಮಕಾರಿಯಾದ ರೀತಿಯಲ್ಲಿ ಜಾರಿಗೆ ತನ್ನಿ ಎಂದು ಕೆಲವರು ಹೇಳಿದರು. ಆದರೆ, ಗೇಣಿಶಾಸನವನ್ನು ಸುಧಾರಣೆ ಮಾಡುವುದರಿಂದ ಈ ಸುಧಾರಣೆ ಕರಗತವಾಗುತ್ತದೆಂದು ಹೇಳಿದರೆ, ಅದು ಸರಿಯಾದುದಲ್ಲ. ಭೂಸುಧಾರಣೆಯ ಸೂತ್ರವಿಲ್ಲದೆ ಉದ್ದೇಶ ಸಾಧನೆಯಾಗುವುದಿಲ್ಲವೆಂದು ಒತ್ತಿ ಹೇಳಬೇಕಾಗಿದೆ.

ಭೂಸುಧಾರಣೆ ದೇಶದ ಆರ್ಥಿಕದೃಷ್ಟಿಯಿಂದ ಅತಿ ಮುಖ್ಯವಾದ ಒಂದು ಅಂಗ. ಇದನ್ನು ಆರ್ಥಿಕಾಭಿವೃದ್ಧಿಯೋಜನೆಯಲ್ಲಿ ಅಳವಡಿಸಬೇಕೆಂದು ಅನೇಕ ತಜ್ಞರೂ ನಿಪುಣರೂ ಹೇಳಿದ್ದಾರೆ. ದೇಹಶ್ರಮವನ್ನು ಮಾಡಿ ಬೇಸಾಯಮಾಡುವ ರೈತನ ಹಕ್ಕುಬಾಧ್ಯತೆಗಳನ್ನು ತೃಣೀಕರಿಸುತ್ತಿದ್ದೇವೆ, ನಿರ್ಲಕ್ಷಿಸುತ್ತಿದ್ದೇವೆ. ಈ ದೃಷ್ಟಿಯಿಂದಲೂ ಭೂಸುಧಾರಣೆ ಅಗತ್ಯ. ಈಗ ನಮ್ಮ ಆಡಳಿತ ಪಕ್ಷದ ಒಂದು ದೃಷ್ಟಿಕೋನ ಈ ರೀತಿ ಇದೆ. ಬಹುಶಃ ಅವರ ಮನಸ್ಸಿನಲ್ಲಿ, ದೇಶದ ಆರ್ಥಿಕ ಚೌಕಟ್ಟೇನಿದೆಯೋ ಅದಕ್ಕೆ ವ್ಯವಸಾಯದ ಆರ್ಥಿಕ ಚೌಕಟ್ಟನ್ನು ಅಧೀನವಾಗಿಮಾಡಿ, ಇದಕ್ಕೆ ಹೆಚ್ಚು ಪ್ರಾಧಾನ್ಯವನ್ನು ಕೊಡಬೇಕೆಂದಿರುವಂತೆ ಕಾಣುತ್ತದೆ. ಈ ದೃಷ್ಟಿಯಿಂದ ಈ ಸಮಸ್ಯೆಯನ್ನು ಪರಿಹಾರಮಾಡತ್ತೇವೆಂದು ಹೊರಟರೆ, ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ಯಾವ ದೇಶದಲ್ಲಿಯೂ ಇದು ಸಾಧ್ಯವಾಗಿಲ್ಲ. ಕೈಗಾರಿಕೆ ಕ್ಷೇತ್ರದಲ್ಲಿ ಮುಂದುವರಿದಿರುವ ಅಮೆರಿಕಾ ದೇಶವನ್ನು ತೆಗೆದುಕೊಂಡರೂ ಕೂಡ ಅಲ್ಲಿ ವ್ಯವಸಾಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರಕಿದೆ. ಅವರ ಆರ್ಥಿಕ ವ್ಯವಸ್ಥೆ ವ್ಯವಸಾಯದ ಆಧಾರದ ಮೇಲೆಯೇ ರೂಪಿತವಾಗಿದೆ . . . .

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಹಾಗಿದ್ದರೆ, ಇಲ್ಲಿ ವ್ಯವಸಾಯಕ್ಕೆ secondary place ಕೊಟ್ಟಿದ್ದಾರೆಂದು ನಿಮ್ಮ ಅಭಿಪ್ರಾಯವೆ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನು ಹೇಳುತ್ತಿರುವುದನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಉತ್ತರ ಸಿಕ್ಕುತ್ತದೆ.

ಇವರು ಹಾಕತಕ್ಕ ಯೋಜನೆಗಳು, ಇವರು ಕೂಗತಕ್ಕ ದೊಡ್ಡ ಕೂಗು, ಈಗ ಅನುಸರಿಸುತ್ತಿರುವ ಮಾರ್ಗದಿಂದ ಕಾರ್ಯಗತವಾಗುವುದಿಲ್ಲ; ಬರಿಯ ಕಾಗದದ ಮೇಲಿದ್ದು ಪುರಾಣದ ಬದನೇಕಾಯಿ ಆಗಿದೆ. ತತ್ವದ ದೃಷ್ಟಿಯಿಂದ ಈ ರೀತಿಯಾಗಿ ನಾನು ಮಾತನಾಡುತ್ತಿದ್ದೇನೆ.

ಶ್ರೀ ಟಿ. ಡಿ. ಮಾರಣ್ಣ.—ಈ ಯೋಜನೆಯಲ್ಲಿ ಅಗತ್ಯವಿರುವ ಅಂಶಗಳನ್ನು ಕಾರ್ಯಗತಮಾಡುವ ಜವಾಬ್ದಾರಿಯು ಆಡಳಿತ ಪಕ್ಷದವರಿಗೆ ಅಷ್ಟೇ ಸೇರಿದ್ದಲ್ಲ. ಈ ಸಭೆಯಲ್ಲಿಯ ಎಲ್ಲಾ ಪಕ್ಷದವರಿಗೂ ಸೇರಿದ್ದಾಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾವು ಹೇಳಿದ್ದೆಲ್ಲಾ ಅರಣ್ಯರೋದನವಾಗುತ್ತಿದೆ. ನೀವು 150 ಜನವಿರುವುದರಿಂದ ನಾವು 50 ಜನರು ಹೇಳಿದ್ದೆಲ್ಲಾ ಅರಣ್ಯರೋದನವಾಗಿದೆ. ನಾನೇನು ಸುಳ್ಳುಹೇಳುವುದಿಲ್ಲ. ನೀವು ಬೆಳ್ಳಗಿರುವ ಗೋಡೆ ಕರ್ರಗೆ ಇದೆಯೆಂದು ಹೇಳಿದರೆ ಹಾಗೆಯೇ ಎಲ್ಲರೂ ತಿಳಿದುಕೊಳ್ಳುತ್ತಾರೆ.

ಅನೇಕ ವರ್ಷಗಳ ಹಿಂದೆ ಅಮೇರಿಕಾದಲ್ಲಿ ಶೇಕಡಾ 65 ರಷ್ಟು ಜನ ವ್ಯವಸಾಯದಲ್ಲಿ ತೊಡಗಿದವರಾಗಿದ್ದರು. ದೇಶಕ್ಕೆಲ್ಲಾ ಆಹಾರ ಒದಗಿಸತಕ್ಕಂಥಾ ಸ್ಥಿತಿಯಲ್ಲಿದ್ದರು. ಆದರೆ ಇಂದು ಕೇವಲ ಶೇಕಡಾ ಎಂಟರಷ್ಟು ಜನ ವ್ಯವಸಾಯದಲ್ಲಿದ್ದರೂಸಹ ಪ್ರಪಂಚದಲ್ಲಿಯ ಅನೇಕ ರಾಷ್ಟ್ರಗಳಿಗೆ ಆಹಾರ ಒದಗಿಸಲು ಬರತಕ್ಕಂಥ ಒಂದು ಸ್ಥಿತಿಯಲ್ಲಿದ್ದಾರೆ. ಆ ದೇಶದಲ್ಲಿ ವ್ಯವಸಾಯ ಪದ್ಧತಿಯಲ್ಲಿ ಯಾವ ರೀತಿಯಾಗಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ ಎಂಬುದನ್ನು ನಾವು ಇಂದು ತಿಳಿದುಕೊಂಡು ಅದರ ಅಂತರಂಗವನ್ನು ಗ್ರಹಿಸಬೇಕಾಗಿದೆ. ಇದನ್ನು ಹೇಳುವಾಗ ಅಮೇರಿಕಾದಲ್ಲಿರುವ peasant proprietorship ಎಂದರೆ ಒಕ್ಕಲತನಮಾಡುವ ರೈತನೇ ಒಡೆಯ ಎಂಬ ಪದ್ಧತಿಯ ವೈಖರಿ ಯಾವರೀತಿಯಾಗಿ ಅನುಸರಿಸಲಾಗುತ್ತಿದೆ ಎಂಬುದನ್ನು ಮರೆಯುವಂತಿಲ್ಲ. ಯಾವುದೇ ಮುಂದುವರಿದ ರಾಷ್ಟ್ರದಲ್ಲಾಗಲಿ ಕೈಗಾರಿಕೆಗಳಿಗೆ ಎಷ್ಟು ಪುರಸ್ಕಾರ, ಮನ್ನಣೆ, ಯೋಗ್ಯಸ್ಥಾನ ಕೊಟ್ಟಿದ್ದಾರೆಯೋ ಅದಕ್ಕಿಂತಲೂ ಬಹುಶಃ ಅಧಿಕವಾಗಿ ವ್ಯವಸಾಯಕ್ಕೂ ಕೊಡತಕ್ಕಂಥಾ ಒಂದು ಸಿದ್ಧಾಂತವನ್ನು ಆದರ್ಶವಾಗಿ ಇಟ್ಟುಕೊಂಡು ಅನುಸರಿಸುತ್ತಿದ್ದಾರೆಂಬುದು ಎಲ್ಲರೂ ಒಪ್ಪಿಕೊಳ್ಳತಕ್ಕ ವಿಷಯವೆಂದು ಈ ಸಂದರ್ಭದಲ್ಲಿ ನಾನು ಪ್ರತಿಪಾದಿಸುತ್ತೇನೆ.

ಸ್ವಾಮಿ, ನಮ್ಮ ಆಡಳಿತ ವರ್ಗದವರು ಪ್ರಜಾಸತ್ತಾತ್ಮಕ ನೀತಿ, ಸಮತಾವಾದಿ ಸಮಾಜ ರಚನೆಯ ಧ್ಯೇಯವನ್ನು ಒಂದಿಲ್ಲೊಂದು ಸಂದರ್ಭದಲ್ಲಿ ಅನಗತ್ಯವಾಗಿ ದೊಡ್ಡ ದೊಡ್ಡ ಶಬ್ದಗಳಲ್ಲಿ ಮಾತನಾಡುತ್ತಿದ್ದಾರೆ. ಆದುದರಿಂದ ಸಮತಾವಾದಿ ಸಮಾಜ ರಚ

(ಶ್ರೀ ಜೆ. ಬಿ. ಮಲ್ಲಾರಾಧ್ಯ)

ನೆಯ ಧ್ಯೇಯವೇನು ಎಂಬುದನ್ನು ಒಂದೆರಡು ವಾಕ್ಯಗಳಲ್ಲಿ ಹೇಳಬಹುದು. ಭೂಮಿಯಲ್ಲಿ ದುಡಿಯುವ ರೈತ ಮತ್ತು ಭೂಮಾಲಿಕತ್ವ ಇವುಗಳಲ್ಲಿ ಇರತಕ್ಕ ಅಂತರವು ದೂರ ಆಗಬೇಕು. ಗೇಣಿದಾರ ಪದ್ಧತಿಯು ಹೋಗಬೇಕು. ಕೇವಲ ದೇಶದಲ್ಲಿ ಇರತಕ್ಕ ಜಮೀನನ್ನು ಸಾಧ್ಯವಾದಮಟ್ಟಿಗೆ ಯೋಗ್ಯ ಪ್ರಮಾಣದಲ್ಲಿ ಹಂಚಿಬಿಟ್ಟರೆ ಸಮಾಜವಾದ ಆಗುವುದಿಲ್ಲ. ಕೈಗಾರಿಕೋದ್ಯಮಗಳಲ್ಲಿ ಕೆಲಸಮಾಡತಕ್ಕ ಬಡ ಕೂಲಿಗಾರರಿಗೆ ಅನೇಕ ಸೌಕರ್ಯಗಳನ್ನು ಒದಗಿಸಿ ಕೊಡಲಾಗುತ್ತಿದೆ. ಒಂದು ಫ್ಯಾಕ್ಟರಿಯಲ್ಲಿ ಕೆಲಸಮಾಡತಕ್ಕಂಥ ಒಬ್ಬ ಕೂಲಿಗಾರನಿಗೆ ಒಂದು ದಿನಕ್ಕೆ ಎರಡು ರೂಪಾಯಿಂದ ಐದು ರೂಪಾಯಿವರೆಗೆ ಕೂಲಿ ಕೊಡಲಾಗುತ್ತಿದೆ. ಆದರೆ ರೈತನಿಗೆ ಬರತಕ್ಕ ಕೂಲಿ ಏನು ? ಇಷ್ಟು ಅಭಿಮಾನವಿದ್ದರೂ ಸಹ ರೈತನ ಬಗ್ಗೆ ಏನನ್ನೂ ಮಾಡದೇ ಇರುವುದಕ್ಕೆ ಕಾರಣವೇನು ? ಈ ಭೂಸುಧಾರಣೆ ಹತ್ತು ವರ್ಷಗಳೇಕೆ, ಮೂವತ್ತು ವರ್ಷಗಳ ಮುಂಚಿತವಾಗಿಯೇ ಬರಬೇಕಾಗಿತ್ತು. ಕಾಂಗ್ರೆಸ್ ಅಧಿವೇಶನಗಳಲ್ಲಿ ಪಂಡಿತ ನೆಹರೂ ಅವರು ಭೂಸುಧಾರಣೆಯ ಬಗ್ಗೆ ಮೇಲಿಂದ ಮೇಲೆ ಒತ್ತಿಒತ್ತಿ ಹೇಳಿದ್ದಾರೆ. 30 ವರ್ಷಗಳಾಗಿ ಹೋದರೂ ಸಹ ಇನ್ನೂ ಶಾಸನ ಜಾರಿಗೆ ಬಂದಿಲ್ಲ. ಇದು ಎಲ್ಲರಿಗೂ ಸಂಬಂಧಪಟ್ಟ ವಿಷಯ. ಕಾಂಗ್ರೆಸ್, ಪಕ್ಷದಲ್ಲಿ ಅಲ್ಲಲ್ಲಿ ಜಗಳವಿದೆ. ಒಡಕು ಹುಟ್ಟಿದೆ, ಭೂಸುಧಾರಣೆಯನ್ನು ತೆಗೆದು ಇಡುತ್ತಾರೆ ಎಂದು ನನಗೆ ಲಾಬಿಯಲ್ಲಿ ಹೇಳಿದರು.

ಶ್ರೀ ಟಿ. ಡಿ. ಮಾರಣ್ಣ.—ಅವರು ಕಣಿ ಹೇಳುವವರನ್ನು ಕೇಳಿದರೋ ? ಜೋತಿಷ್ಯ ಹೇಳೋರ್ನ ಕೇಳಿದರೋ ಹೇಳಿನರು ?

ಶ್ರೀ ಎನ್. ಜಿ. ನರಸಿಂಹೇಗೌಡ.—ನಿಮ್ಮಂಥ ಸದಸ್ಯರು ಹೇಳಿದರು.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಲಾಬಿಯಲ್ಲಿ ಮಾತನಾಡಿದುದನ್ನು ಸಭೆಯಲ್ಲಿ ಪ್ರಸ್ತಾಪಿಸಬಹುದೇ ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಲಾಬಿ ವಿಧಾನ ಮಂಡಲದ ಒಂದು ಭಾಗ. ಕಣಿ ಹೇಳೋರು ನನ್ನಲ್ಲಿ ಬರುವುದಿಲ್ಲ. ನನ್ನ ಹತ್ತಿರ ಅವರಿಗೆ ಮೂರುಕಾಸೂ ಸಿಕ್ಕುವುದಿಲ್ಲ. ನನ್ನ ಹತ್ತಿರ ಬರುವುದಕ್ಕೆ ಅವರು ಹೆದರುತ್ತಾರೆ. ಅವರಿಗೇನೂ ಅವಕಾಶವಿಲ್ಲ. ಅವರು ನಿಮ್ಮಂಥವರ ಹತ್ತಿರ ಹೋಗಬೇಕು.

ಸ್ವಾಮಿ, ಇವತ್ತಿನ ದಿವಸ ದೇಶದಲ್ಲಿ ಪ್ರಜಾಸಂಖ್ಯೆ ಏರುತ್ತಿದೆ. ಆದರೆ ಜಮೀನಿನ ಪರಿಮಿತಿ ಇದ್ದಷ್ಟೇ ಇದೆ. ದೇಶದಲ್ಲಿ ಬಡತನ ಹೆಚ್ಚಾಗುತ್ತಿದೆ. ಇಂಥಾ ಸಂದರ್ಭದಲ್ಲಿ ಭೂಸುಧಾರಣೆಯಿಂದ ಅಲ್ಲದೆ ಬೇರೆ ಯಾವುದೇ ರೀತಿಯಿಂದ ಜನರಲ್ಲಿಯ ಅಂತರವನ್ನು ನಿವಾರಣೆ ಮಾಡಲಾಗುವುದಿಲ್ಲ. ಇದೊಂದು ಬಹಳ ಗಹನವಾದ ವಿಷಯವಾಗಿರುವುದರಿಂದ ಇದಕ್ಕೆ ಹೆಚ್ಚು ಗಮನ ಕೊಡಬೇಕಾದುದು ಆವಶ್ಯಕ. ವ್ಯವಸಾಯದಲ್ಲಿ ಉತ್ಪತ್ತಿ ಜಾಸ್ತಿಯಾಗದೇ ಹೋದರೆ ಈಗಿನ ಬಡತನದ ಸಮಾಜವಾದವನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಜತ್ತಿ ಸಮಿತಿಯ ವರದಿಯಲ್ಲಿ ಉತ್ಪತ್ತಿ ಜಾಸ್ತಿಯಾಗುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ.

ಸ್ವಾಮಿ, ಒಂದು ದೃಷ್ಟಿಯಿಂದ ನಾವು ಈ ಜತ್ತಿ ಸಮಿತಿಯ ವರದಿಯನ್ನು ಸ್ವಾಗತಿಸುತ್ತೇವೆ. ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕರು, ಗ್ರಾಮಗಳಲ್ಲಿರತಕ್ಕ ವ್ಯವಸಾಯಗಾರರು, ಕೂಲಿಕಾರರು ಪ್ರಮುಖಪಾತ್ರ ವಹಿಸಿದ್ದಾರೆ. ದಾಸ್ಯಶೃಂಖಲೆಯನ್ನು ಬಿಡಿಸಿ ಸ್ವಾತಂತ್ರ್ಯವನ್ನು ಗಳಿಸಿಕೊಡುವುದರಲ್ಲಿ ಪ್ರಮುಖಪಾತ್ರ ವಹಿಸಿದವರಿಗೆ ಆ ಕಾಲದಲ್ಲಿ ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದಿರಿ ಎಂಬುದನ್ನು ಜ್ಞಾಪಿಸಿಕೊಂಡರೆ, ಭೂಸುಧಾರಣೆ ಮಾಡಬೇಕಾದುದು ಅವರಿಗೆ ಒಪ್ಪಿಸಬೇಕಾದ ಕೃತಜ್ಞತೆಯ ಕಾಣಿಕೆಯಾಗಿದೆ. ಇಲ್ಲವೇ ಹೋದರೆ ನೀವು ಕೊಟ್ಟಿರತಕ್ಕಂಥ ವಚನ, ಭಾಷೆಗೆ, ಭ್ರಷ್ಟರಾಗಬೇಕಾಗುತ್ತದೆ. ಈ ದೃಷ್ಟಿಯಿಂದಲೂ ಇದು ಅಗತ್ಯವಾಗಿದೆ, ಅನಿವಾರ್ಯವಾಗಿದೆ ಎಂದು ನಾನು ಹೇಳುತ್ತೇನೆ. ಇನ್ನು ಈ ಭೂಸುಧಾರಣೆಯನ್ನು ಪ್ರತಿಭಟಿಸತಕ್ಕಂಥ ಒಬ್ಬ ಮಾನ್ಯಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದ್ದೇನೆಂದರೆ ಭಾರಿ ಜಮೀನುದಾರರು ಭಾರಿ ಭೂಮಾಲಿಕರು ಈ ಸುದಾರಣೆಯನ್ನು ಪ್ರತಿಭಟಿಸುತ್ತಾರೆ. ಆದರೆ ನಾನು ಅವರಿಗೆ ಒಂದು hypothetical ಪ್ರಶ್ನೆ ಕೇಳುತ್ತೇನೆ. ಅನೇಕ ಕೈಗಾರಿಕೆಗಳಲ್ಲಿ, ಗಿರಣಿಗಳಲ್ಲಿ ಕೂಲಿಕಾರರು ಮುಷ್ಕರ ಹೂಡುತ್ತಾರೆ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದಿದೆ. ಯಾವುದೇ ರೀತಿಯಿಂದ ಭೂಮಾಲಿಕರು ರೈತರಿಗೆ ಭೂಮಿಯಲ್ಲಿ ದುಡಿಯುವ ಕೂಲಿಕಾರರಿಗೆ ಅಹಿತವಾಗುವ ರೀತಿಯಲ್ಲಿ ವರ್ತಿಸಿದರೆ, ನಮಗೆ ಸ್ವಾತಂತ್ರ್ಯ ಪ್ರಾಪ್ತವಾದ ಈ ಹತ್ತು ವರ್ಷಗಳಲ್ಲಿ, ನಮ್ಮ ಪ್ರಜಾಸರಕಾರ ಬಂದಮೇಲೆ, ಅವರು ಒಂದು ವೇಳೆ ಮುಷ್ಕರ ಹೂಡಿದರೆ ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ಊಹಿಸಿಕೊಂಡು ನೋಡಬೇಕು. ಗೇಣಿದಾರರು ಕೆಲಸಮಾಡದೇ ಇದ್ದರೆ ಸಾವಿರ, ಹತ್ತು ಸಾವಿರ ಎಕರೆ ಜಮೀನು ಇಟ್ಟುಕೊಂಡಂಥ ಜಮೀನು ಮಾಲಿಕರ ಪರಿಸ್ಥಿತಿ ಏನಾಗುತ್ತದೆ ? ಗ್ರಾಮಗಳಲ್ಲಿಯ ಕೃಷಿಗೆ ಹೆಚ್ಚಿನ ಪ್ರಾಧಾನ್ಯ ಕೊಟ್ಟು ಸ್ಫೂರ್ತಿಯಿಂದ ಕೆಲಸಮಾಡತಕ್ಕ, ವ್ಯವಸಾಯದಲ್ಲಿ ತೊಡಗಿದ ರೈತಾಪಿ ಜನರಿಗೆ ಎಲ್ಲಾ ಭೂಮಿಯನ್ನು ಕೊಡುವ ಒಂದು ಸಮಾಜ ರಚನೆಯ ಸಿದ್ಧಾಂತವನ್ನು ಇಟ್ಟುಕೊಂಡರೆ, ಭೂಮಾಲೀಕರುಗಳೆಲ್ಲಾ ರಾಜಿನಾಮೆ ಕೊಡಬೇಕಾಗುವ ಪರಿಸ್ಥಿತಿ ಬರಬಹುದು ಎಂದು ನನಗೆ ಅನ್ನಿಸುತ್ತದೆ.

ಸಮಾಜಕ್ಕೆ ನ್ಯಾಯವನ್ನು ದೊರಕಿಸಿಕೊಡುವ ಒಂದು ದೃಷ್ಟಿಯನ್ನು ಇಟ್ಟುಕೊಂಡಿದ್ದರಿಂದ ಜತ್ತಿ ಸಮಿತಿಯ ವರದಿಯನ್ನು ನಾವು ಸ್ವಾಗತಿಸುತ್ತೇವೆ. ಏಕೆಂದರೆ ಗೇಣಿ ನಿಷ್ಕರ್ಷೆ, ಕಂದಾಯ ರಿಯಾಯಿತಿ, ಯಾವರೀತಿ ಜಮೀನು ಹಂಚತಕ್ಕದ್ದು, ಒಂದು ನ್ಯಾಯ ದೃಷ್ಟಿಯಿಂದ ಅಗತ್ಯವಾಗಿದೆ ಎಂಬುದು ನಿರ್ವಿವಾದವಾಗಿದೆ. ಪ್ಲಾನಿಂಗ್ ಕಮಿಷನ್‌ನವರು ಏನು ಹೇಳಿದ್ದಾರೆ ಎಂಬುದನ್ನು ಅನೇಕ ಮಾನ್ಯ ಸದಸ್ಯರು ಪ್ರಸ್ತಾಪಮಾಡಿ ಹೇಳಿದ್ದಾರೆ. ಪ್ಲಾನಿಂಗ್ ಕಮಿಷನ್ ಆದೇಶವನ್ನು, ಕಟ್ಟಾಜ್ಞೆಯನ್ನ ಪರಿಪಾಲಿಸಿಲ್ಲವೆಂದು ಮಾನ್ಯಸದಸ್ಯರಾದ ಶ್ರೀ ಎಂ. ಸಿ. ನರಸಿಂಹನ್ ಅವರು ಹೇಳಿದ್ದು ಬಹಳ ಸಂತೋಷ. ಪ್ಲಾನಿಂಗ್ ಕಮೀಷನ್‌ರವರ ಯೋಗ್ಯವಾದ ಸಲಹೆಗಳನ್ನು ಅಂಗೀಕಾರಮಾಡಿ ಮಾನ್ಯ ಮಾಡಿದ್ದರೆ ಹೆಚ್ಚು ಸಂತೋಷವಾಗುತ್ತಿತ್ತು. ವ್ಯವಸಾಯದ ಬಗ್ಗೆ ಪ್ರಗತಿದಾಯಕವಾದ ಅವರ ಸಲಹೆಗಳ ಬಗ್ಗೆ ಏನಾಯಿತು ? ಭೂಸುಧಾರಣೆಯಲ್ಲಿಯ ಅನಿವಾರ್ಯವಾದ ತೊಡಕುಗಳನ್ನು ದೂರೀಕರಿಸಬೇಕಾಗಿದೆ ಎಂದು ಅವರು ಒತ್ತಿ ಹೇಳಿದ್ದಾರೆ. ರಾಷ್ಟ್ರದ ಹಿತದೃಷ್ಟಿಯಿಂದ ಕೆಲಸಗಾರರಿಗೆ ನ್ಯಾಯವಾದ ರೀತಿಯಲ್ಲಿ ಲಾಭವನ್ನು ಹಂಚುವಹಾಗೆ ಭೂಸುಧಾರಣೆ ಮಾಡಬೇಕೆಂದು ಹೇಳಿ

ದ್ದಾರೆ. ಭೂಸುಧಾರಣೆಯಿಂದ ಅನತಿಕಾಲದಲ್ಲಿ ವ್ಯವಸಾಯಗಾರರ ಜೀವನಮಟ್ಟ ಮೇಲಕ್ಕೆ ಏರುವಂತೆ ಮಾಡಬೇಕು ಎಂದು ಹೇಳಿದ್ದಾರೆ. ಸರಿಯಾಗಿ ಭೂಮಿಯನ್ನು ಹಂಚದೆ, ಭೂಸುಧಾರಣೆಮಾಡದೆ, ಸೋಷಲಿಸಂ ಯೋಗ್ಯವಾಗಿ ಸುಗಮವಾಗಿ ಸಾಧಿಸಲು ಶಕ್ಯವಿಲ್ಲ. ಇಲ್ಲದೇಹೋದರೆ ರೆವಲ್ಯೂಷನ್ ಅಂದರೆ ಕ್ರಾಂತಿ ಉಂಟಾಗುತ್ತದೆ. ಆದುದರಿಂದ ಭೂಸುಧಾರಣೆಗೆ ಹೆಚ್ಚು ಗಮನ ಕೊಡಬೇಕೆಂದು ಅದೇಶ ಕೊಟ್ಟಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ವರ್ಗದವರಿಗೆ ಸಮಾನವಾದ ಅವಕಾಶ ಕಲ್ಪಿಸಬೇಕಾಗಿದೆ. ಇದು ಅತಿ ಮುಖ್ಯವಾದ ಸಲಹೆ. ಜತ್ತಿ ಸಮಿತಿಯ ವರದಿಯಲ್ಲಿ ಯಾವ ಸಂದರ್ಭದಲ್ಲಿಯೂ increase in agricultural production ಅಂದರೆ ಉತ್ಪತ್ತಿ ಹೆಚ್ಚಾಗಬೇಕೆಂಬುದನ್ನು ಸಮಿತಿಯವರು ಹೇಳಿಲ್ಲವೆಂದು ಮಾನ್ಯಸದಸ್ಯರಾದ ಶ್ರೀ ಚನ್ನಬಸಪ್ಪನವರು ಕಟುತರವಾಗಿ ಟೀಕೆ ಮಾಡಿದರು.

4-30 P.M.

ಸ್ವಾಮಿ, ದಯವಿಟ್ಟು ಜತ್ತಿ ಸಮಿತಿ ವರದಿಯ ನಲವತ್ತನಾಲ್ಕನೆಯ ಪುಟದಲ್ಲಿರುವುದನ್ನು ಓದಬೇಕು. ಅಲ್ಲಿ ಇದಕ್ಕೆ ಸಂಬಂಧಿಸಿದಂಥ ಒಂದು ವಿಷಯ ನಿರೂಪಿಸಿದ್ದಾರೆ. ಅದು ಈ ರೀತಿಯಿದೆ:

> “The existence of tenancy hampers intensive cultivation. The landlord is not always interested in improving the land. He generally prefers to invest his resources to extend his holding rather than improve it. The tenant on the other hand lacks both the capital as well as the incentive to make improvements. The increase in personal cultivation resulting from the elimination of the landlord-tenant relationship will therefore make a substantial contribution towards larger production.”

I do not know how this particular paragraph missed the attention of my Hon’ble friend Sri H. M. Channabasappa.

ಇನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯ ಸಂಬಂಧದಲ್ಲಿ ಪ್ಲಾನಿಂಗ್ ಕಮೀಷನವರು ಕೊಟ್ಟಿರುವ ಸಲಹೆಯಲ್ಲಿ ಮೂರು ವಿಷಯಗಳಿಗೆ ಜತ್ತಿ ಸಮಿತಿಯವರು ಹೆಚ್ಚು ಗಮನಕೊಟ್ಟಿದ್ದಾರೆ. ಜಮೀನುದಾರರಿಗೂ ಗೇಣಿದಾರರಿಗೂ ಇರುವ ಬಾಂಧವ್ಯವನ್ನು ರದ್ದುಮಾಡಿ ಎಂದು ಹೇಳಿದ್ದಾರೆ. ಸಮಿತಿಯವರ ಈ ಸಲಹೆ ಕಾರ್ಯರೂಪಕ್ಕೆ ತರಲು ಸಾಧ್ಯವಾಗುವುದಿಲ್ಲ. ಇನ್ನೊಂದು ಕಡೆ ಅವರೇ ಒಪ್ಪಿದ್ದಾರೆ. ಜಮೀನಿಲ್ಲದಿರುವವರಿಗೆ ಜಮೀನು ಹಂಚುವ ವಿಷಯದಲ್ಲಿ ಎಲ್ಲಕ್ಕಿಂತ ಪರ್ಸನಲ್ ಕಲ್ಟಿವೇಷನ್—ಸ್ವಂತ ಸಾಗುವಳಿ ಮಾಡುವ ಉದ್ದೇಶದಿಂದ ಅತಿಮುಖ್ಯವಾದ ಸಲಹೆಮಾಡಿದ್ದಾರೆ. ಜತ್ತಿ ಸಮಿತಿಯ ವರದಿಯ ಅನೇಕ ಪ್ಯಾರಾಗಳನ್ನು ಓದುವಾಗ ನಾವು ಮರೆಯದೆ ಪರ್ಸನಲ್ ಕಲ್ಟಿವೇಷನ್‌ಗೆ ಹೆಚ್ಚು ಪ್ರಾಶಸ್ತ್ಯವಿದೆಯೆಂಬುದನ್ನು ಗಮನದಲ್ಲಿಡಬೇಕೆಂದು ಮನವಿಮಾಡಿಕೊಳ್ಳುತ್ತೇನೆ.

ಇನ್ನು ಈ ವರದಿಯಲ್ಲಿ ನಮೂದಾಗಿರುವ ನಾಲ್ಕಾರು ವಿಷಯಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಸೂಚಿಸಲಿಚ್ಛಿಸುತ್ತೇನೆ. Lease ಅಥವಾ ಗುತ್ತಿಗೆ ಪದ್ಧತಿ ರದ್ದಾಗಬೇಕು, ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಅದನ್ನು ಮುಂದುವರೆಸಬೇಕು ಎಂದು ಸಮಿತಿಯವರು ಹೇಳಿದ್ದಾರೆ. Minors, widows or unmarried women, persons suffering from physical or mental disability, members of the armed forces—ಇವರ ವಿಷಯದಲ್ಲಿ ವಿನಾಯಿತಿ ತೋರಿಸಬೇಕೆಂದು ಹೇಳಿದ್ದಾರೆ. ಇದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಸರ್ಕಾರದವರು ಮಸೂದೆಯನ್ನು ಈ ಸಭೆಯ ಮುಂದೆ ತರುವಾಗ ಇತರ ಪ್ರದೇಶಗಳಲ್ಲಿ, ಇಂಡಿಯಾದಲ್ಲಿರುವ ಇತರ ಪ್ರಾಂತಗಳಲ್ಲಿ ಇರುವ ಪದ್ಧತಿಯನ್ನು ತಿಳಿದುಕೊಂಡು ಒಂದು ಸಮನ್ವಯ ದೃಷ್ಟಿಯಿಂದ ಯೋಚನೆಮಾಡಿ ಅದಕ್ಕೆ ಸಂಬಂಧಪಟ್ಟ ಎಕ್ಸೆಮ್ಷನ್ ಲಿಸ್ಟ್, (ಗೇಣಿಗೆ ಕೊಡುವ ವಿಷಯದಲ್ಲಿ ವಿನಾಯಿತಿ) ನಿರೂಪಿಸಬೇಕೆಂದು ಸಲಹೆಮಾಡುತ್ತೇನೆ.

ಇನ್ನು resumption for personal cultivation ಎಂಬುದು ಅತಿಯಾಗಿ ಚರ್ಚೆಗೆ ಬಂದ ವಿಷಯ. ನಾನು ಈ ಸಂದರ್ಭದಲ್ಲಿ ಹೇಳುವುದಿಷ್ಟು: ಸಮಿತಿಯವರು ಸ್ವಲ್ಪ ಮುಂದೆ ಹೋಗಿದ್ದಾರೆ. ಸಾಧ್ಯವಾದರೆ ಅವರು ಮಿತಿಯನ್ನು ಸೂಚಿಸಿ self-imposed ordinance ಹಾಕಬಹುದಾಗಿತ್ತು ಎಂಬುದು ನನ್ನ ಸ್ವಂತ ಅಭಿಪ್ರಾಯ. ಇದು ಒಪ್ಪುವ ವಿಷಯ. ಶ್ರೀಮಾನ್ ನರಸಿಂಹನ್‌ರವರು ಇದನ್ನು ಒಪ್ಪುವಸ್ಥಿತಿಯಲಿಲ್ಲ. ಅವರೀಗ ಇಲ್ಲಿ ಹಾಜರಿಲ್ಲ. ಒಂದು ವಿಷಯ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಭೂಸುಧಾರಣೆಯನ್ನು ಜಾರಿಗೆ ತರುವಾಗ ಅಲ್ಪಸ್ವಲ್ಪ ಜಮೀನಿಟ್ಟುಕೊಂಡಿರುವ ಹಿಡುವಳಿದಾರರ ಹಿತರಕ್ಷಣೆ ದೃಷ್ಟಿಯಿಂದ ಟೆನೆಂಟ್ಸ್‌ಗೆ, (ಸಾಗುವಳಿದಾರರಿಗೆ ಅಥವಾ ಗೇಣಿದಾರರಿಗೆ) ಹೆಚ್ಚು ಹಕ್ಕುಕೊಡಬೇಕೆಂದು ವಾದಮಾಡುವುದನ್ನು ನಾನು ಒಪ್ಪುವುದಕ್ಕೆ ಸಿದ್ಧವಾಗಿಲ್ಲ. ಈ ಹಕ್ಕು ಊರ್ಜಿತವಾಗಬೇಕೆಂದು ದೊಡ್ಡ ದೊಡ್ಡ ಜಮೀನುದಾರರ ವಿಷಯದಲ್ಲಿ ಹೇಳುವುದಾದರೆ ಅದನ್ನು ಒಪ್ಪುತ್ತೇನೆ. ಅದೇ ಸ್ಮಾಲ್ ಹೋಲ್ಡರ್ಸ್ ವಿಷಯದಲ್ಲಿ, 15 ಎಕರೆಗಳಿಗಿಂತ ಕಡಮೆಯಿರುವ ಜಮೀನುದಾರರ ವಿಷಯದಲ್ಲಿ ಇವರಿಗಿಂತ ಹೆಚ್ಚು ಸೌಲಭ್ಯ ಒಬ್ಬ ಗೇಣಿದಾರನಿಗೆ ಒದಗಿಸುತ್ತೇವೆಂದು ಹೇಳುವುದು ಸರಿಯಲ್ಲ. ಎಲಿಮೆಂಟರಿ ಪ್ರೊಪ್ರೈಟರಿ ರೈಟ್ಸ್ ಎಂದಿರುವುದಕ್ಕೆ ಧಕ್ಕೆ ಬರುವ ಸಂದರ್ಭದಲ್ಲಿ ಹಾಗಾಗಬಾರದೆಂಬುದು ನನ್ನ ಸ್ವಂತ ಅಭಿಪ್ರಾಯ.

ಇನ್ನು “A person whose holding exceeds the ceiling may be allowed to resume upto one-half of the land leased out to a tenant, subject to the condition that the tenant is left with not less than a basic holding” ಎಂಬುದು ಅಷ್ಟು ಅರ್ಥವಾಗಿಲ್ಲ. ಐದು ಅಥವಾ ಅದಕ್ಕೆ ಮೇಲ್ಪಟ್ಟು ಜನರಿರುವ ಸಂಸಾರಕ್ಕೆ ಫ್ಯಾಮಿಲಿ ಹೋಲ್ಡಿಂಗ್ ಇರುವಾಗ ರೈತರಿಗೆ ಬೇಸಿಕ್ ಹೋಲ್ಡಿಂಗ್ ಬಿಡಿ ಎಂದು ಹೇಳುವುದು ಅರ್ಥವಾಗುವುದಿಲ್ಲ. ತನ್ನ ಸ್ವಂತ ಕುಟುಂಬಕ್ಕೆ ಸಾಕಾದಷ್ಟು ಜಮೀನಿಲ್ಲದಿರುವಾಗ ಗೇಣೀದಾರರಿಗೆ ಬಿಡಬೇಕೆಂದು ಹೇಳುವುದು ಸಾಧ್ಯವಲ್ಲ ಎಂಬುದು ನನ್ನ ಸ್ವಂತ ಅಭಿಪ್ರಾಯ.

(ಶ್ರೀ ಜೆ. ಬಿ. ಮಲ್ಲಾರಾಧ್ಯ)

ಅದಕ್ಕಿಂತ ಹೆಚ್ಚು ವಿವಾದಾಸ್ಪದವಾದ ವಿಷಯವೆಂದರೆ “provided the tenant is left with a family holding” ಎಂದಿರುವುದು. ಸ್ವಂತ ಸಾಗುವಳಿಗೆ ಕುಟುಂಬದ ಹಿಡುವಳಿ ಪರಮಾವಧಿಗಿಂತ ಕಡಮೆ ಜಮೀನಿದ್ದರೆ ಗೇಣಿದಾರರಿಂದ ಜಮೀನನ್ನು ವಶಪಡಿಸಿಕೊಳ್ಳುವಾಗ ಗೇಣಿದಾರರಿಗೆ ಫ್ಯಾಮಿಲಿ ಹೋಲ್ಡಿಂಗ್ ಬಿಡಬೇಕು ಎಂದು ಹೇಳುವ ವಿಷಯ, ಜಮೀನುದಾರರಿಗೆ ಸೀಲಿಂಗ್ ನಿಗದಿಮಾಡಿರುವಾಗ ಬೇಸಿಕ್ ಹೋಲ್ಡಿಂಗ್ ಇಲ್ಲದೆ ಫ್ಯಾಮಿಲಿ ಹೋಲ್ಡಿಂಗ್ ಗೇಣಿದಾರರಿಗೆ ಬಿಡಬೇಕೆಂದು ವಾದ ಮಾಡುವುದು ಸಾಧುವಲ್ಲ. ಇದನ್ನು ಸಣ್ಣ ಹಿಡುವಳಿದಾರರ ದೃಷ್ಟಿಯಿಂದ ನಾನು ಹೇಳುವುದು, ನೂರಾರು ಎಕರೆ ಜಮೀನಿರುವವರ ವಿಷಯ ನಾನು ಹೇಳುವುದಿಲ್ಲ.

ಮುಂದೆ ಪರ್ಸನಲ್ ಕಲ್ಟಿವೇಷನ್ ಎಂಬುದರ ಅರ್ಥವೇನೆಂದು ವಿವರಿಸುವಾಗ ಪ್ಲಾನಿಂಗ್ ಕಮಿಷನ್ ಮೂರು ವಿಷಯ ಹೇಳಿದೆ. ಅದನ್ನು ಸೂಚಿಸುವಾಗ ಸಮಿತಿಯವರು ಪರ್ಸನಲ್ ಲೇಬರ್ ಬೇಡವೆಂದು ಶಿಫಾರ್ಸುಮಾಡಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ಏಕೆಂದರೆ ವ್ಯವಸಾಯದ ಸಂಪೂರ್ಣ ಹೊಣೆಯನ್ನು ಒಬ್ಬ ಜಮೀನುದಾರ ಹೊತ್ತಿರುವಾಗ “ನೀನು ಹೋಗಿ ಉಳು, ನೀನು ಶ್ರಮಪಟ್ಟು ಕೆಲಸಮಾಡು” ಎಂದು ಹೇಳುವುದು ಸಾಧುವಲ್ಲ. ದೇಶದಲ್ಲಿ ಸರ್ವ ಕ್ಷೇತ್ರಗಳಲ್ಲಿ ಕೂಲಿಮಾಡುವವನಿಗೆ ಅವಕಾಶವಿಧೆ. ಆದರೆ ಅವನಿಗೆ ನೇಗಿಲು ತೆಗೆದುಕೊಂಡು ಉಳುವುದಕ್ಕೆ ಬರುವುದಿಲ್ಲ, ಅವನಿಗೆ ಜಮೀನಿಲ್ಲ ಎಂದು ಹೇಳಿದರೆ ಕ್ರಾಂತಿಯಾಗುತ್ತದೆ. ಈ ದೃಷ್ಟಿಯಿಂದ ಸಮಿತಿ ಪರ್ಸನಲ್ ಲೇಬರ್ ಬೇಕಾಗಿಲ್ಲವೆಂದು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಆದರೆ ಹಿಡುವಳಿದಾರ ಇಷ್ಟು ದೂರದಲ್ಲಿ ವಾಸಮಾಡಬೇಕು, ಅವನ ಕುಟುಂಬದವರು ಮತ್ತು ಮೇಲ್ವಿಚಾರಣೆ ಮಾಡುವವರು ಜಮೀನಿನಿಂದ ಹತ್ತು ಮೈಲಿ ದೂರದಲ್ಲಿರಬೇಕು ಎಂದು ಹೇಳುವುದು ವಸ್ತುತಃ ಸಾಧ್ಯವಿಲ್ಲದ ವಿಷಯ. ಈ ನಿರ್ಬಂಧ ಹಾಕುವುದು ಸರಿಯಲ್ಲ. ಈ ವಿಚಾರದಲ್ಲಿ ಸ್ಥಳದಲ್ಲಿರುವ ಅಧಿಕಾರಿಗಳಿಗೆ ಮತ್ತು ಸಣ್ಣಪುಟ್ಟ ನೌಕರರಿಗೆ ಅವಕಾಶಕೊಟ್ಟರೆ ವರದಿಮಾಡುವುದಕ್ಕೆ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಹಿಡುವಳಿದಾರ ಜಮೀನಿನ ವ್ಯವಸಾಯಕ್ಕೆ ಸಂಬಂಧಪಟ್ಟ ಹೊಣೆ ಹೊತ್ತುಕೊಳ್ಳುವುದಕ್ಕೆ ಸಿದ್ಧವಾಗಿರುತ್ತಾನೆಂದು ಭಾವಿಸಿ ಆ ನಿರ್ಬಂಧವನ್ನು ಸೂಚಿಸಿ ಪರ್ಸನಲ್ ಕಲ್ಟಿವೇಷನ ಡೆಫಿನಿಷನ್‌ನಲ್ಲಿ ಸೇರಿಸಿದರೆ ಸಾಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಪರ್ಸನಲ್ ಕಲ್ಟಿವೇಷನ್ ಎಂದರೆ ಎಲ್ಲೇ ಇದ್ದರೂ ಲೇಬರ್ ಎಂಪ್ಲಾಯ್ ಮಾಡಿ ವ್ಯವಸಾಯಮಾಡಲು ಅನುಮತಿಕೊಡಬಹುದೆಂಬುದು ತಮ್ಮ ಅಭಿಪ್ರಾಯವೆ ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅಲ್ಲ, ತಾವಾಗಲೇ, ಕುಟುಂಬಕ್ಕೆ ಸಂಬಂಧಪಟ್ಟ ಮಕ್ಕಳು ಅಥವಾ ಸಂಬಂಧಿಗಳಾಗಲಿ ವ್ಯವಸಾಯ ಮಾಡಿದರೆ ಹಕ್ಕಿರಬೇಕು. ಇದರಿಂದ absentee landlordism ಮುಂದುವರಿಸಬೇಕು ಎಂಬುದನ್ನು ಒಪ್ಪುವುದಿಲ್ಲ; ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. The very basis of Jatti Committee report is that there should be elimination absentee landlordism.

ಶ್ರೀ ಬಿ. ಬಸವಲಿಂಗಪ್ಪ.—ಹತ್ತು ಮೈಲಿ ದೂರದೊಳಗಿರಬೇಕೆಂದು ನಿರ್ಬಂಧವಿರಕೂಡದೆಂದು ಹೇಳುತ್ತೀರಾ ? ಕೆಲವರು ಮದ್ರಾಸು, ಬೊಂಬಾಯಿಗಳಲ್ಲಿದ್ದು ದಕ್ಷಿಣ ಕನಡಾದಲ್ಲಿ ಭೂಮಿ ಹೊಂದಿದ್ದರೆ ಆಗೇನು ಮಾಡಬೇಕು ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅವರ ಮಕ್ಕಳು, ಸಂಬಂಧಿಗಳು ಸಾಗುವಳಿಮಾಡುವುದಾದರೆ ನಿರ್ಬಂಧವೇಕೆ ಎಂಬುದನ್ನು ತಾವೇ ಒಪ್ಪಿದ್ದೀರಿ. ಸಣ್ಣ ಸಣ್ಣ ನೌಕರರಿಂದ ಕಿರುಕುಳವಾಗಬಾರದು, ಶಾಸನ ಶಾಸನವಾಗೇ ಉಳಿಯಬಾರದು, ನಿಜವಾಗಿ ಕಾರ್ಯಗತವಾಗಬೇಕು ಎಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ನಾನು ಬೆಂಗಳೂರಿನಲ್ಲಿದ್ದು ನನ್ನ ಜಮೀನನ್ನು ಯಾರಾದರೂ ಮಾಡಲಿ ಎಂದು ಹೇಳುವುದಿಲ್ಲ.

ಇನ್ನು ರೆಂಟ್ ಅಥವಾ ಗೇಣಿ ನಿಷ್ಕರ್ಷೆಮಾಡುವಾಗ ಸಮಿತಿ ಹೇಳುವ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. “It would not be correct to fix the rent as a multiple of assessment. It would be desirable to defer linking the rent in the assessment till after the general revision” ಎಂದು ಹೇಳಿ ಅದಕ್ಕೆ ಕಾರಣ ಸೂಚಿಸಿದ್ದಾರೆ. ದೇಶಾದ್ಯಂತ ರೆವೆನ್ಯೂ ಸೆಟ್ಲ್‌ಮೆಂಟ್ ಆಗುತ್ತದೆ. ಅದಾದಮೇಲೆ ನಿಷ್ಕರ್ಷೆಮಾಡುವುದಾದರೆ ಕೂಡದು ಎಂಬುದು ನನ್ನ ಸ್ವಂತ ಅಭಿಪ್ರಾಯ.

Rentನ್ನು ನಿಷ್ಕರ್ಷೆ ಮಾಡುವುದೇನಿದ್ದರೂ ಈ ಹಿಡುವಳಿಯಿಂದ ಬರತಕ್ಕ ಉತ್ಪತ್ತಿಯ ಮೇಲೆ ನಿಷ್ಕರ್ಷೆ ಮಾಡಬೇಕೇ ಹೊರತು, ಕಂದಾಯಕ್ಕೂ ಅದಕ್ಕೂ (link up ಮಾಡುವುದು) ಒಂದು ಬಾಂಧವ್ಯ ಕಲ್ಪಿಸುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಅಲ್ಲದೆ, ಕಮಿಟಿಯವರು ಗೇಣಿಯನ್ನು ಧಾನ್ಯದ ರೂಪದಲ್ಲಿ ಸಲ್ಲಿಸುವುದನ್ನು ನಿಷೇಧಿಸಿಲ್ಲ. ಈಗಲೂ ಅನೇಕ ಕಡೆ ದವಸಧಾನ್ಯಗಳನ್ನೇ ಗೇಣಿಯಾಗಿ ಕೊಟ್ಟು ಗೇಣಿಯನ್ನು ನಿಷ್ಕರ್ಷಿಸುವುದು ರೂಢಿಯಲ್ಲಿದೆ. ಇನ್ನು ಮುಂದೆಯೂ ಗೇಣಿಯನ್ನು ಅದೇ ವಿಧದಲ್ಲಿ ಕೊಡತಕ್ಕದ್ದು ಸಾಧುವಾದುದೆಂದು ನಾನು ಹೇಳುತ್ತೇನೆ.

ಇನ್ನು quantum of rent ಗೇಣಿಯು ಯಾವ ರೂಪದಲ್ಲಿ ಎಷ್ಟಿರಬೇಕೆಂಬ ವಿಷಯದಲ್ಲಿ ಪ್ಲಾನಿಂಗ್ ಕಮಿಷನ್ನಿನವರ ಸಲಹೆಯನ್ನೇ ಸಮಿತಿಯವರೂ ಒಪ್ಪಿದ್ದಾರೆ. ನಮ್ಮ ಮಾನ್ಯ ಮಿತ್ರರಾದ ಶ್ರೀಮಾನ್ ನರಸಿಂಹನ್‌ರವರು, ಪ್ಲಾನಿಂಗ್ ಕಮಿಷನ್ನಿನವರ ಶಿಫಾರಸನ್ನೇ ಏಕೆ ಒಪ್ಪಿದರು, ಬೊಂಬಾಯಿನಲ್ಲಿರುವಂತೆ ಏಕೆ ಮಾಡಲಿಲ್ಲ ಎಂದು ಕೇಳಿದರು. ಇದು ನ್ಯಾಯವಾದ ಟೀಕೆಯಲ್ಲ. ಮುಖ್ಯವಾಗಿ ಅವರು ಮಾಡಿರುವ ಶಿಫಾರಸಿನಲ್ಲಿ ಮಾಲೀಕರ ಹಿತದೃಷ್ಟಿಯಿಂದ ಹೊರಟಿದ್ದಾರೆಯೇ ಅಥವಾ ರೈತರ ಹಿತದೃಷ್ಟಿಯಿಂದ ಹೊರಟಿದ್ದಾರೆಯೇ ಎಂಬುದನ್ನು ನೋಡಬೇಕು. 1/4 ಭಾಗ, 1/5 ಭಾಗ ಎಂದು ಮಾಡಿರುವುದು ಬಹಳ ಸಾಧುವಾಗಿದೆಯೆಂದು ಕಾಣುತ್ತದೆ. ಅನೇಕ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ನಾವೂ ನೋಡಿದ್ದೇವೆ. 1/4 ಅಥವಾ 1/5 ಎಂದು ಗೊತ್ತುಮಾಡಿರುವುದು ನ್ಯಾಯವಾದ ಗೇಣಿಯ ಪ್ರಮಾಣವೆಂದು ನಾವು ಒಪ್ಪುವುದಕ್ಕೆ ಸಿದ್ಧವಾಗಿದ್ದೇವೆ.

ಆದರೆ, average yield ಎಂದು ಏನು ಹೇಳಿದ್ದಾರೋ ಅದನ್ನು ನಿರ್ಧಾರ ಮಾಡುವುದು ಬಹಳ

ಪು. ಪ್ರಿ ಕ್ರಮಾಂಕ Accession No.(5)....4747
ದಿನಾಂಕ Date........................

ಕಷ್ಟ. ಇದನ್ನು ನಿರ್ಧಾರ ಮಾಡುವವರು ಯಾರು ? ಏನೇನು ವಿಷಯಗಳನ್ನು ಆಧಾರವಾಗಿಟ್ಟುಕೊಂಡು ಮಾಡುತ್ತಾರೆ ಎಂಬುದು ಗೊತ್ತಿಲ್ಲ. ಇದು ಸುಲಭ ಸಾಧ್ಯವಾದ ವಿಷಯವಲ್ಲವೆಂದು ಅವರೇ ಹೇಳಿದ್ದಾರೆ.

> "That the amount of rent payable by the tenant and the compensation for the land transferred from the landlord to the tenant will directly depend on the average produce determined by the land commission."

ಎಂದು ಹೇಳಿದೆ. ಈ Land Commission ಯಾವ ರೀತಿ ಇರಬೇಕು, ಅದರ ರಚನೆ ಯಾವ ರೀತಿ ಇರಬೇಕೆಂಬುದನ್ನು ಮುಂದೆ ಬಿಲ್ ಬಂದಾಗ ಹೇಳುತ್ತೇನೆ. ಈಬಗ್ಗೆ ಒಂದು ನಿರ್ಧಾರವಾದ ರೀತಿ ಇರಬೇಕು. ಈ ಬಗ್ಗೆ ಸರಿಯಾದ ಒಂದು ಕಲಮನ್ನು ಬಿಲ್ಲಿನಲ್ಲಿ ಸೇರಿಸುತ್ತಾರೆಂದು ನಂಬಿದ್ದೇವೆ.

ಆಮೇಲೆ ಗೇಣಿಗೆ ಮಾಲೀಕತ್ವವನ್ನು ಕೊಡುವುದರಲ್ಲಿ ಏನು ಮುಖ್ಯವಾದ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಹದ್ದುಬಸ್ತು ಮತ್ತು resumable part ಯಾವುದು ಎಂಬುದನ್ನು ಕೂಡ್ಲೆ ನಿಗದಿಮಾಡಬೇಕೆಂಬುದನ್ನು ನಾನು ಒಪ್ಪುತ್ತೇನೆ. resumable Part ವಿಷಯದಲ್ಲಿ ತಮ್ಮ ನಿರ್ಧಾರವನ್ನು ಸರ್ಕಾರದವರು ಬೇಗ ವಿಶದಪಡಿಸಬೇಕಾಗಿಲ್ಲವೆಂದು ಹೇಳಿರುವುದು ಸರಿಯಲ್ಲ. ಅದೇ ರೀತಿ ಗೇಣಿದಾರರಿಗೂ ನೇರವಾಗಿ ಸಾಧ್ಯವಾದರೆ ಕೂಡಲೆ ಹಕ್ಕನ್ನು ಒದಗಿಸಿಕೊಡಬೇಕು. ಅದಿಲ್ಲದೆ, 20 ವರ್ಷ ಕಾಯಬೇಕೆಂದು ಹೇಳಿದರೆ ಅವನಿಗೆ ತನಗೆ ಮಾಲೀಕತ್ವವಿದೆಯೆಂಬ ಭಾವನೆಯೇ ಇರುವುದಿಲ್ಲ. ಇವರು ಗೇಣಿಗೆ ಕೊಡಬೇಕೆಂಬ ಅಭಿಪ್ರಾಯವೇ ಇಲ್ಲವೆಂದು ಒಂದು ಕಡೆ ಹೇಳುವುದು, ಆದರೆ ಮಾತ್ರ 20 ವರ್ಷ ಮಾಲೀಕತ್ವವಿಲ್ಲದೆ ಕಾಯಬೇಕೆಂದು ಇನ್ನೊಂದು ಕಡೆ ಹೇಳುವುದು—ನನಗೆ ಅರ್ಥವಾಗದ ನೀತಿಯಾಗಿದೆ.

ಶ್ರೀ ಬಿ. ಡಿ. ಜೆಟ್ಟಿ.—ಒಂದು ವೇಳೆ ಗೇಣಿದಾರರಲ್ಲಿ ಕೊಡುವುದಕ್ಕೆ ಹಣವಿಲ್ಲದಿದ್ದರೆ, ಅತ್ತ ಸರ್ಕಾರದವರೂ ತೆಗೆದುಕೊಳ್ಳದಿದ್ದರೆ ಆಗ್ಗೆ ಯಾವುದಾದರೂ ಒಂದು ವ್ಯವಸ್ಥೆ ಇರಬೇಕೆಂದು ಹೀಗೆ ಮಾಡಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಆದರೂ ಈಗ ಕೊಟ್ಟಿರತಕ್ಕ ಸಲಹೆ ಅಷ್ಟು ಕಾರ್ಯಗತವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಕೂಡಲೆ ಜಮೀನ್ದಾರರ ಮೇಲೆ ಗೇಣಿದಾರರಿಗೆ ಇರತಕ್ಕ dependency ತಪ್ಪಿಸಿ, ಗೇಣಿದಾರರಿಗೆ ತಮಗೆ ಮಾಲೀಕತ್ವ ಬಂದಿದೆಯೆಂದು ಒಂದು hsychological satisfaction ಉಂಟುಮಾಡದೆ ಹೋದರೆ ಏನು ಪ್ರಯೋಜನ ? ಮುಂದೆ ಎಂದೋ 20 ವರ್ಷಕ್ಕೆ ತನಗೆ ಮಾಲೀಕತ್ವ ಸಿಕ್ಕುತ್ತದೆ, 'ನಂದೋ ರಾಜಾಭವಿಷ್ಯತಿ' ಎಂಬ ಭಾವನೆಯಿಟ್ಟುಕೊಂಡು ಏನು ಪ್ರಯೋಜನ ?

An HON'BLE MEMBER.—That is a cunning way of arguing on behalf of landlords.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಯಾರು, ಯಾವುದನ್ನು landlords ಪರವಾಗಿ ಮಾತನಾಡುತ್ತಿದ್ದಾರೆ? ನೀವು ಹೇಳುವುದಕ್ಕೂ ಈಗ ಮಾತನಾಡುತ್ತಿರುವುದಕ್ಕೂ ಏನು ಸಂಬಂಧ? ಅದೇನೋ ಗಾದೆ ಹೇಳುವಂತೆ "ಯಾವೂರು ಗೌಡ ಎಂದರೆ ಕಂಬಳಿಗೆ ಎರಡಾಣೆ" ಎನ್ನುವಂತೆ ಮಾತನಾಡುತ್ತಿದ್ದೀರಲ್ಲಾ.

ಇನ್ನು ಪರಿಹಾರದ ವಿಷಯ ಯೋಗ್ಯ ಗೇಣಿಯ ಹದಿನೈದರಷ್ಟು ಭಾಗವನ್ನು ಕೊಡಬೇಕೆಂದು ಹೇಳಿ ಇದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ.

Dr. R. NAGAN GOWDA.—Just on the last point I would like to know the view of your party. How is the compensation to be paid for and how do you want the transfer to be effected ?

Sri J. B. MALLARADHYA.—The Government should take over the land and execute a deed in favour of the tenant and collect the rent with the land revenue every year. If you do not give the ownership immediately what is the use of this legislation ?

Sri S. D. KOTHAVALE.—You want a formal document to be executed by the Government ?

Sri J. B. MALLARADHYA.—It is only an alternative that Government should pay the landlord from whom they resume the land. In the alternative, from the point of view of the tenant, I want that he should be put immediately in possession of the land which he wants to call his own or which Government wants him to own.

ಆಮೇಲೆ ಸಮಿತಿಯವರು ಪರ್ಮನೆಂಟ್ ಟೆನೆಂಟುಗಳ ವಿಷಯದಲ್ಲಿ ಮೂಲ ಗೇಣಿಗೆ ಎಂಟರಷ್ಟು, ಯೋಗ್ಯ ಗೇಣಿಯ ಎಂಟರಷ್ಟು ಹಣವನ್ನು ವಸೂಲುಮಾಡಿಕೊಂಡು ಮಾಲೀಕತ್ವ ಕೊಡಬೇಕೆಂದು ಹೇಳಿದ್ದಾರೆ. ಈರೀತಿಯ ಒಂದು ವ್ಯತ್ಯಾಸವನ್ನು ಪರ್ಮಸೆಂಟ್ ಟೆನೆಂಟಿಗೂ ಮಿಕ್ಕ ಟೆನೆಂಟುಗಳಿಗೂ ಏಕೆ ಮಾಡಿದ್ದಾರೆಯೋ ಗೊತ್ತಿಲ್ಲ. ಈರೀತಿ discrimination ಮಾಡುವುದು ಸರಿಯಲ್ಲ ಎಂದು ನಾನು ಹೇಳಬಯಸುತ್ತೇನೆ.

Sri S. D. KOTHAVALE.—Permanent tenants are as good as owners. They are irremovable. They have already possessed the highest light.

Sri J. B. MALLARADHYA.—Then why think of paying any compensation at all ?

This discrimination is likely to create lot of confusion.

ಜನರಲ್ಲಿ ಹೆಚ್ಚಿನ ಅತೃಪ್ತಿ ಅಸಮಾಧಾನವನ್ನು ಇದು ಉಂಟುಮಾಡುತ್ತದೆ. ಒಂದು ಶಾಸನವನ್ನು ಜಾರಿಗೆ ತರುವ ಸಂದರ್ಭದಲ್ಲಿ ಸಾಧ್ಯವಾದಮಟ್ಟಿಗೂ ಹೆಚ್ಚಿನ ತೊಡಕುಗಳಿಲ್ಲದ ಹಾಗೆ, ಯಾರಿಗೂ ಅಸಮಾಧಾನವುಂಟಾಗದ ಹಾಗೆ ಮಾಡಬೇಕು. ಹೀಗಿರುವಲ್ಲಿ ಈ ರೀತಿಯ ವ್ಯತ್ಯಾಸವನ್ನೇಕೆ ಮಾಡಿದ್ದಾರೆಂಬುದಕ್ಕೆ ಸಕಾರಣವಾಗಿ ಏನೂ ಕೂಡ ಸಮಿತಿಯವರು ತಿಳಿಸಿಲ್ಲ.

ಆಮೇಲೆ ಪರಿಹಾರವನ್ನು ಕೊಡುವಾಗ ಬಾಂಡುಗಳ ಮೂಲಕ ಇತ್ಯರ್ಥಮಾಡಬೇಕೆಂದು ಹೇಳಿದ್ದೀರಿ. ಇದು ಎಲ್ಲರಿಗೂ ಅಷ್ಟು ತೃಪ್ತಿಯನ್ನುಂಟುಮಾಡುತ್ತ

(SRI J. B. MALLARADHYA)

ದೆಂದು ನಾನು ಭಾವಿಸುವುದಿಲ್ಲ. ಆದರೆ ಎಲ್ಲರನ್ನೂ ತೃಪ್ತಿಪಡಿಸಬೇಕಾದರೆ ಎಲ್ಲಿಂದ ದುಡ್ಡು ತರಬೇಕೆಂಬುದೇನೋ ನ್ಯಾಯವಾದ ಪ್ರಶ್ನೆ. ಮೂಲ ಹಿಡುವಳಿಗಿಂತ ಕಡಿಮೆ ಇರತಕ್ಕವರಿಂದ ಜಮೀನು ತೆಗೆದುಕೊಳ್ಳುವುದಾದರೆ ಪೂರ್ತಿ ಹಣ ಕೊಟ್ಟು ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದ್ದಾರೆ. ಇದನ್ನು ನಾನು ಒಪ್ಪುತ್ತೇನೆ. ಆದರೆ, ನನ್ನ ಪಾರ್ಟಿಯ ಪರವಾಗಿ ಹೇಳುವುದಾದರೆ, ಯಾವ ಜಮೀನನ್ನು, ವಶಪಡಿಸಿಕೊಳ್ಳಬೇಕೋ ಆ ಜಮೀನಿನ ಬೆಲೆ 5,000 ರೂಪಾಯಿಗಳಿಗೆ ಮೀರದೆ ಇದ್ದರೆ ಬೆಲೆಯನ್ನು ಪೂರಾ ಕೊಟ್ಟು ತೆಗೆದುಕೊಳ್ಳಬೇಕು. ಇದರಿಂದ ಬಡ ರೈತನಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸಿದಂತಾಗುತ್ತದೆ. ಈ ಅವಕಾಶವನ್ನು ಈ ಬಿಲ್ಲಿನಲ್ಲಿ ಒದಗಿಸಬೇಕೆಂದು ಹೇಳುತ್ತೇನೆ.

ನೆಗೋಷಿಯಬಲ್ ಬಾಂಡ್‌ಗಳ ವಿಷಯ. ಅನೇಕ ಕಡೆಗಳಲ್ಲಿ ಬಾಂಡುಗಳ ಮಾರ್ಕೆಟ್ ಬೆಲೆ ಏನು ಎನ್ನುವುದನ್ನು ನಿರ್ಧರಿಸುವಾಗ ಅನೇಕ ಸಂದರ್ಭಗಳಲ್ಲಿ ಇವುಗಳ ಬೆಲೆ ಇಳಿದುಹೋಗಬಹುದು. ಆ ಸಂದರ್ಭಗಳಲ್ಲಿ ಏನು ಮಾಡುವುದಕ್ಕಾಗುತ್ತದೆ. ಇದರಲ್ಲಿ ರೈತನಿಗೆ ಯಾವ ರೀತಿಯ ನಂಬಿಕೆ ಇರುತ್ತದೆ. ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಈ ಸಂದರ್ಭದಲ್ಲಿ ಕೂಡ 200 ಎಕರೆ 300 ಎಕರೆ ಹೀಗೆ ಹೆಚ್ಚು ಜಮೀನು ಇರತಕ್ಕವರಿಂದ ಜಮೀನು ವಶಪಡಿಸಿಕೊಳ್ಳುವಾಗ ಅವರಿಗೆ ಕೊಡುವ ಪರಿಹಾರ ದ್ರವ್ಯದ ವಿಷಯದಲ್ಲಿ ಮಾತನಾಡುತ್ತಿಲ್ಲ. 15—20 ಎಕರೆ ಜಮೀನು ಇರತಕ್ಕ ಸಣ್ಣ ಪುಟ್ಟ ಹಿಡುವಳಿದಾರರ ಜಮೀನನ್ನು ವಶಪಡಿಸಿಕೊಂಡಾಗ ಐದುಸಾವಿರ ರೂಪಾಯಿಗಳ ಪರಿಹಾರ ದ್ರವ್ಯವನ್ನು ವರ್ಷಕ್ಕೆ 200 ರೂಪಾಯಿಗಳಂತೆ ಕೊಡುತ್ತಾರೆ. ಎಂದರೆ, ಆ ದುಡ್ಡನ್ನು ಯಾವ ಕೆಲಸಕಾರ್ಯಗಳಿಗೆ ಉಪಯೋಗಿಸುವುದಕ್ಕಾಗುತ್ತದೆ, ಯಾವ ಕೈಗಾರಿಕೆಯಲ್ಲಿ ಹಣವನ್ನು ಹಾಕಿ ಉತ್ಪತ್ತಿ ಜಾಸ್ತಿ ಬರುವಂತೆ ಮಾಡುವುದಕ್ಕಾಗುತ್ತದೆ, ಎಂಬ ಹಿಡುವಳಿದಾರನ ಕಷ್ಟವನ್ನು ತಾವು ಯೋಚನೆ ಮಾಡಬೇಕು. ಅದರಲ್ಲೂ ಪ್ರಜಾ ಸರ್ಕಾರ ಈಕಡೆಗೆ ಹೆಚ್ಚು ಗಮನ ಕೊಡಬೇಕು. ನಾನು ಏನು ವಾದಮಾಡುತ್ತಿದ್ದೇನೆಯೋ ಅದನ್ನು 50 ಎಕರೆಗಳಿಗೆ ಮೇಲ್ಪಟ್ಟಿರುವ ಜಮೀನ್ದಾರರಿಗೋಸ್ಕರ ಮಾಡುತ್ತಿಲ್ಲ. ಸಣ್ಣಪುಟ್ಟ ಜನಗಳಿಗೋಸ್ಕರ ವಾದಮಾಡುತ್ತಿದ್ದೇನೆ. ' ಐದುಸಾವಿರಕ್ಕೆ ಮೀರಿಲ್ಲದೆ ಇರುವ ಸಂದರ್ಭಗಳಲ್ಲಿ ಪರಿಹಾರದ ಹಣವನ್ನು ನಗದು ರೂಪದಲ್ಲಿ ಕೊಡಬೇಕು. ಇನ್ನೊಂದು ವಿಷಯವನ್ನು ಸಮಿತಿಯವರು ಹೇಳಿದ್ದಾರೆ. The resumable extent should vest in Government free from encumbrance ಎಂದರೆ ಪೂರ್ವಾದಿ ಇರುವ ಸ್ವತ್ತನು ಅಥವ ಜಮೀನನ್ನು ವಶಪಡಿಸಿಕೊಳ್ಳಬೇಕಾದಾಗ, ಅಂಥ ಜಮೀನಿನ ವಿಷಯದಲ್ಲಿ ಎಲ್ಲ ಪೂರ್ವಾದಿಗಳನ್ನೂ ತಪ್ಪಿಸಿದ ನಂತರ ಸರ್ಕಾರದ ವಶಕ್ಕೆ ಬರಬೇಕು ಎಂದು ಹೇಳುವುದು ಅಷ್ಟು ಸಾಧುವಾಗಿಲ್ಲ ಮತ್ತು ಅದು ಸಾಧ್ಯವಾಗದ ವಿಷಯವೆಂದು ಹೇಳುತ್ತೇನೆ. ಏತಕ್ಕೆಂದರೆ ಒಂದು ಜಮೀನಿಗೆ ಏನು ಪರಿಹಾರವನ್ನು ನಿಷ್ಕರ್ಷೆಮಾಡುತ್ತೀರೋ ಹಾಗೆ ನಿಷ್ಕರ್ಷೆಮಾಡಿದ ದುಡ್ಡಿನಿಂದ ಪೂರ್ವಾದಿಗಳನ್ನು ತೀರ್ವೆ ಮಾಡಬೇಕು ಎಂದು ಸಲಹೆ ಮಾಡಿದ್ದಾರೆ. ಒಂದು ವೇಳೆ ಒಂದು ಜಮೀನಿಗೆ ಐದು ಸಾವಿರ ರೂಪಾಯಿಗಳ ಪರಿಹಾರವನ್ನು ನಿಷ್ಕರ್ಷೆಮಾಡಿದರೆ ಅದರ ಮೇಲೆ ಸುಮಾರು 12 ಸಾವಿರ ರೂಪಾಯಿಗಳ ಸಾಲವಿದ್ದರೆ ಯಾವರೀತಿ ಅದರ ಮೇಲೆ ಇರುವ ಹೊಣೆಗಾರಿಕೆಯು ತೀರುತ್ತದೆ, ಏಕೆ ಈ ವಿಧವಾದ ಸಲಹೆಯನ್ನು ಸಮಿತಿಯವರು ಮಾಡಿದ್ದಾರೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಪರಿಹಾರ ದ್ರವ್ಯಕ್ಕಿಂತ ಮಿಗಿಲಾಗಿ ಪೂರ್ವಾದಿಗಳಿದ್ದರೆ ಏನು ಮಾಡಬೇಕೆಂಬುದನ್ನು ಸಲಹೆ ಮಾಡಬೇಕಾಗಿತ್ತು. ಪರಿಹಾರ ದ್ರವ್ಯ ಪೂರ್ವಾದಿಗಿಂತ ಕಡಮೆಯಾಗುವುದಾದರೆ ಮಿಕ್ಕ ಹಣವನ್ನು ಯಾರು ಕೊಡಬೇಕು; free of encumbrance ಹೇಗೆ ಆಗುತ್ತದೆ ಎನ್ನುವುದು ಅರ್ಥವಾಗಲಿಲ್ಲ.

ಫ್ಯಾಮಿಲಿ ಹೋಲ್ಡಿಂಗ್ ಮತ್ತು ಬೇಸಿಕ್ ಹೋಲ್ಡಿಂಗ್‌ಗಳ ವಿಷಯದಲ್ಲಿ ನಾನಾ ಟೀಕೆಗಳು ಬಂದಿವೆ. ಕುಟುಂಬಹಿಡುವಳಿಯನ್ನು ನಿಷ್ಕರ್ಷೆಮಾಡುವಾಗ ದ್ರವ್ಯದಒಂದು ಪರಿಮಿತಿಯನ್ನು ನಿಷ್ಕರ್ಷೆ ಮಾಡಿದ್ದಾರೆ. ಒಂದು ಬೇಸಿಕ್ ಹೋಲ್ಡಿಂಗ್ 400 ರೂಪಾಯಿ ಇರಬೇಕು ಮತ್ತು ಫ್ಯಾಮಿಲಿ ಹೋಲ್ಡಿಂಗ್ ಅದರ ಮೂರರಷ್ಟು ಎಂದರೆ 1,200 ರೂಪಾಯಿ ಇರಬೇಕು. ಈ ಸಂದರ್ಭದಲ್ಲಿ ನಮ್ಮ ಪಕ್ಷದವರು ಮಾಡಿರತಕ್ಕ ಲೆಕ್ಕಾಚಾರದ ಪ್ರಕಾರ ಈ ಮಿತಿ ಸ್ವಲ್ಪ ಜಾಸ್ತಿಯಾಗಬೇಕು ಎಂದು ಹೇಳುತ್ತೇನೆ. ನಮ್ಮ ಲೆಕ್ಕಾಚಾರದ ಪ್ರಕಾರ ಬೇಸಿಕ್ ಹೋಲ್ಡಿಂಗ್ 500 ರೂಪಾಯಿ ಮತ್ತು ಫ್ಯಾಮಿಲಿ ಹೋಲ್ಡಿಂಗ್ 2,000 ರೂಪಾಯಿಗಳಿರಬೇಕೆಂದು ಸಲಹೆ ಮಾಡುತ್ತೇನೆ. We have actually worked out the details ಅದಕ್ಕೆ ಆಗಬೇಕಾದ ಸಾಧಕಬಾಧಕಗಳು, ಈಗಿರುವ ಹುಟ್ಟುವಳಿ, ಅದನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವೇ ಇಲ್ಲವೇ ಎಂಬ ಅಂಶಗಳನ್ನೆಲ್ಲ ಅನೇಕ ದೃಷ್ಟಿಯಿಂದ ಯೋಚನೆ ಮಾಡಿದ್ದೇವೆ. ನಾನು ಇಷ್ಟು ಮಾತ್ರ ಹೇಳುತ್ತೇನೆ.

Sri K. S. SURYANARAYANA RAO.—How have you worked at that figure—500 ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಬೇಸಿಕ್ ಹೋಲ್ಡಿಂಗ್ 400 ರೂಪಾಯಿ ಇರಬೇಕು ಎಂದು ನಿಷ್ಕರ್ಷೆ ಮಾಡುವುದಕ್ಕೆ ನಮ್ಮ ಭರತಖಂಡದಲ್ಲಿ national income ಎಂದು ಏನಿದೆ ಅದು ಇವೊತ್ತಿನ ದಿವಸ 281 ರೂಪಾಯಿ ಇದೆ. 1960-61ರಲ್ಲಿ ಎಂದರೆ ಎರಡನೆ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ 315 ರೂಪಾಯಿಗಳಾಗಬಹುದು ಎನ್ನುವ ಉದ್ದೇಶವನ್ನು ಸೂಚಿಸಿದ್ದಾರೆ. 315 national income ಆಗಿ ಇರುವುದು ಸಾಧ್ಯವಾಗುವುದಿಲ್ಲ. Standard of living, ಗ್ರಾಮಾಂತರವಾಸಿಗಳ ಜೀವನಮಟ್ಟ 300 ರೂಪಾಯಿ, 400 ರೂಪಾಯಿ ಆಗಬೇಕೆಂದು ಹೇಳುತ್ತ urban areas ಅಥವ ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ವಾಸಿಸುವವರ ವಿಷಯದಲ್ಲಿ 1,200 ರೂಪಾಯಿ ಇದೆ. ಸಮಿತಿಯವರ ವರದಿಯ ಪ್ರಕಾರ second class officer, ಎಸ್. ಎಸ್. ಎಲ್. ಸಿ. ಪಾಸ್ ಮಾಡಿಕೊಂಡು ಇರುವವನ ಜೀವನಮಟ್ಟಕ್ಕೂ ಇದಕ್ಕೂ ಹೋಲಿಸಿ. ತುಲನಾತ್ಮಕ ದೃಷ್ಟಿಯಿಂದ ನೋಡಿ 400 ರೂಪಾಯಿಗಳ ವರಮಾನ ಬೇಸಿಕ್ ಹೋಲ್ಡಿಂಗ್ ಎಂದು ಮಾಡಿದ್ದಾರೆಂದು ತಿಳಿಯುತ್ತದೆ. ಇದನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಿದೆ. ಹಾಗೆ ಮಾಡಿದರೆ ಕ್ರಾಂತಿಕಾರಕ ಬದಲಾವಣೆ ಮಾಡಿದಂತಾಗುತ್ತದೆಂದು ಯೋಚನೆಮಾಡಿ ಬೇಸಿಕ್ ಹೋಲ್ಡಿಂಗ್ 500 ರೂಪಾಯಿ ಇರಬೇಕು ಮತ್ತು ಫ್ಯಾಮಿಲಿ

ಹೋಲ್ಡಿಂಗ್ 2,000 ರೂಪಾಯಿಗಳಿರಬೇಕೆಂದು ನಿಷ್ಕರ್ಷೆ ಮಾಡಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ತಾವು ಸಲಹೆ ಮಾಡಿದ್ದು ಕೆಲವು ಲೆಕ್ಕಗಳನ್ನು ಹಾಕಿ ಮಾಡಿದ್ದೇವೆಂದು ತಿಳಿಸುತ್ತಿದ್ದೀರಿ. ಈಗ 400 ರೂಪಾಯಿ ಅಥವ 500 ರೂಪಾಯಿ basic holding income ಬರಬೇಕಾದರೆ ಎಷ್ಟು ಎಕರೆ ತರಿಜಮೀನು, ಅಥವ ಎಷ್ಟು ಎಕರೆ ಖುಷ್ಕಿ ಅಥವ ಎಷ್ಟು ಎಕರೆ ಬಾಗಾಯಿತು ಜಮೀನು ಇರಬೇಕು ಎಂದು ತಿಳಿಸುತ್ತೀರಾ ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮಾನ್ಯ ಮಿತ್ರರಾದ ದೇವರಾಜ ಅರಸ್ ರವರಿಗೆ ಇದರ ಪೂರ್ಣಪರಿಚಯ ಮತ್ತು data sheet ಎಂದು ಏನು ಲೆಕ್ಕಾಚಾರ ಮಾಡಿದ್ದೇನೆ, ಅದನ್ನು ಒದಗಿಸಿ ಕೊಡುತ್ತೇನೆ. If the House is willing to give me time I will give now-alone.

Sri D. DEVARAJ URS.—If you have calculated, please mention the acreage.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಆಯಾ ಪ್ರದೇಶಗಳಿಗೆ ಅನುಗುಣವಾಗಿ, ಆಯಾ ಜಮೀನಿನ ಭೂಮಿಯ ಸ್ಥಿತಿಯನ್ನನುಸರಿಸಿ ಅಲ್ಲಿ ವ್ಯವಸಾಯಕ್ಕೆ ಇರತಕ್ಕ ಸೌಕರ್ಯಗಳನ್ನನುಸರಿಸಿ, ವ್ಯವಸಾಯ ಮಾಡತಕ್ಕವನ ಉದ್ದೇಶ, ಅವನ ಶ್ರದ್ಧೆ ಇವನ್ನೆಲ್ಲ ಅನುಸರಿಸಿ ಬೆಳೆಯಾಗುತ್ತದೆ. ನಾವು ಇದನ್ನೆಲ್ಲ ಯೋಚಿಸಿ ಈ ರೀತಿ ನಿಷ್ಕರ್ಷೆಮಾಡಿದ್ದೇವೆ. ಅದರ data sheet ಕೊಡುವುದಕ್ಕೆ ಸಿದ್ಧನಾಗಿದ್ದೇನೆ. There is no Question of hiding facts. If you convince me that four hundred is sufficient, I am willing to accept and my party also will accept.

(*Interruption*)

This will be made available to you for your acceptance. ಈ ರೀತಿ ನಿಷ್ಕರ್ಷೆಮಾಡುವಾಗ ಸಮಿತಿಯವರು ಒಂದು ವಿಷಯವನ್ನು ಹೇಳಿದ್ದಾರೆ. Gross produce ಅಥವ ಸಗಟು ಉತ್ಪತ್ತಿ ಎನ್ನುವುದನ್ನು ನಿಷ್ಕರ್ಷೆಮಾಡುವಾಗ ತರೀ ಸಾಗುವಳಿಗೆ ಲಾಯಖ್ಖಾದ ಜಮೀನಿನ ಉತ್ಪನ್ನದಲ್ಲಿ ಸೇಕಡ 50ರಷ್ಟು ಮತ್ತು ಇತರೆ ಜಮೀನುಗಳಲ್ಲಿ ಸೇಕಡ 33⅓ ರಷ್ಟು ಎಂದು ಹೇಳಿದ್ದಾರೆ. Gross produce ಎಂದು ಏನು ಹೇಳಿದೆ ಅದನ್ನು ನಿಷ್ಕರ್ಷೆಮಾಡವವರು ಯಾರು, ಯಾವ ಆಧಾರದ ಮೇಲೆ ನಿಷ್ಕರ್ಷೆಮಾಡುತ್ತಾರೆ. ಮೇಲಾಗಿ gross produce ಎನ್ನುವುದನ್ನು ನಿಷ್ಕರ್ಷೆಮಾಡುವಾಗ ಯಾವ ಯಾವ ಅಂಶಗಳನ್ನು ಲೆಕ್ಕಾಚಾರಕ್ಕೆ ತೆಗೆದುಕೊಳ್ಳುತ್ತಾರೆಂಬುದನ್ನೆಲ್ಲ ವರದಿಯಲ್ಲಿ ಎಲ್ಲಿಯೂ ನಿರೂಪಿಸಿಲ್ಲ. ಇದನ್ನೆಲ್ಲ ನಿರೂಪಿಸುವುದು ಒಳ್ಳೆಯದು ಮತ್ತು ಅದರಿಂದ ವಿವಾದಕ್ಕೆ ಆಸ್ಪದವಿರುವುದಿಲ್ಲ. ಯಾವ ಯಾವ ಅಂಶಗಳನ್ನು ಇದರಲ್ಲಿ ಸೇರಿಸಬೇಕು ಎನ್ನುವುದನ್ನು ವಿವರವಾಗಿ ತಿಳಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಇನ್ನು ಸೀಲಿಂಗ್ ಎಂದರೆ ವರಮಾನದ ಪರಿಮಿತಿಯನ್ನು ನಿಷ್ಕರ್ಷೆಮಾಡುವ ವಿಷಯದಲ್ಲಿ ಹೆಚ್ಚು ಚರ್ಚೆಗೆ ಅವಕಾಶಕೊಟ್ಟಿದೆ. 4½ ಕುಟುಂಬ ಹಿಡುವಳಿಗಳನ್ನು ನಿಷ್ಕರ್ಷೆಮಾಡಿರುವುದು ಜಮೀನ್ದಾರರ ದೃಷ್ಟಿಯಿಂದ ಮಾಡಿದ್ದಾರೆನ್ನತಕ್ಕ ಒಂದು ಟೀಕೆಯನ್ನು ಮಾಡಿದರು ನಮ್ಮ ಮಾನ್ಯಮಿತ್ರರಾದ ಶ್ರೀಮಾನ್ ನರಸಿಂಹನ್ ಅವರು. ನಾನು ಒಂದು ವಿಷಯವನ್ನು ಸಮಿತಿಯವರಲ್ಲಿ ಕೇಳುತ್ತೇನೆ: ಸೀಲಿಂಗ್ ನಿಷ್ಕರ್ಷೆಮಾಡುವಾಗ the ceiling may be double where the family consists of more than five members. ಒಂದು ವೇಳೆ ಒಂದು ಕುಟುಂಬವು ಐದು ಜನಕ್ಕಿಂತ ಕಡಮೆಯಿರುವುದಾಗಿದ್ದರೆ 1,200 ರೂಪಾಯಿ ಉತ್ಪತ್ತಿ ಬರತಕ್ಕ ಜಮೀನನ್ನು ಕೊಡಬೇಕು ಎಂದು ಹೇಳಿದ್ದಾರೆ. ಐದು ಜನರಿಗೆ ಮೇಲ್ಪಟ್ಟು ಎಷ್ಟು ಜನರಿದ್ದರೂ double the ceiling ಎಂದು ಹೇಳುತ್ತಾರೆ. ಐದು ಜನಕ್ಕೆ ಬದಲಾಗಿ ಆರು ಜನರಿದ್ದರೆ double the ceiling ಆಗುತ್ತದೆ. 25 ಜನ, 50 ಜನ ಇರುವಾಗಲೂ ಸಹ double the ceiling ಎಂದು ಮಾಡುವುದು ಯಾವ ನ್ಯಾಯ ? ಅಳಿಯ ಸಂತಾನದ ಬಗ್ಗೆ ಸ್ವಲ್ಪ ಚರ್ಚೆಯಾಗಿದೆ. ನಾನು ಆ ವಿಷಯವನ್ನು ಕೊನೆಯಲ್ಲಿ ಪ್ರಸ್ತಾಪಿಸುತ್ತೇನೆ. ನನ್ನ ಅಭಿಪ್ರಾಯದಲ್ಲಿ ಐದು ಜನಕ್ಕಿಂತ ಹೆಚ್ಚಾಗಿರುವ ಕುಟುಂಬಕ್ಕೆ double the ceiling ಎಂದು ನಿಷ್ಕರ್ಷೆಮಾಡುವುದು ಅಷ್ಟು ಸಮಂಜಸವಾಗಿಲ್ಲ, ಅದನ್ನು ಎಲ್ಲರೂ ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಕುಟುಂಬದಲ್ಲಿ ಆರುಜನರಿರಲಿ, 25 ಜನರಿರಲಿ, 50 ಜನರಿರಲಿ, ಎಲ್ಲರಿಗೂ ಒಂದೇರೀತಿ ಮಾಡಿರುವುದು ಲೆಕ್ಕಾಚಾರದ ಆಧಾರದಮೇಲೆ ಮಾಡಿದುದಲ್ಲವೆಂದು ನನ್ನ ಸ್ವಂತ ಅಭಿಪ್ರಾಯ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಇಡೀ ಮೈಸೂರು ದೇಶದಲ್ಲಿ, ಭರತಖಂಡದಲ್ಲಿ ಅವಿಭಕ್ತ ಕುಟುಂಬವೇನಿದೆ ಅದು ಸಹಕಾರ ತತ್ವದ ಬುನಾದಿಯ ಮೇಲೆ ಸ್ಥಾಪಿತವಾಗಿರತಕ್ಕದ್ದು. ಜಮೀನು ಸಾಗುವಳಿಯು ಸಹಕಾರ ತತ್ವದಮೇಲೆ ಆಗಬೇಕು, co-operative system ಮುಂದುವರಿಯಬೇಕು ಎಂದು ಹೇಳತಕ್ಕ ಸರ್ಕಾರ, ಹೇಳತಕ್ಕ ಆಡಳಿತ ಪಕ್ಷ ಅವಿಭಕ್ತ ಕುಟುಂಬ ಪದ್ಧತಿಗೆ ಕುಠಾರಪ್ರಾಯವಾದ ಸಲಹೆಯನ್ನು ಮಾಡಿದೆ. ಸಮಿತಿಯ ವರದಿಯಲ್ಲಿನ ಈ ಸಲಹೆಯನ್ನು ಒಪ್ಪಲು ಸಾಧ್ಯವಾಗುವುದಿಲ್ಲ. Why do you make a distinction whether a family of the people wish to do personal cultivation and a different set of people will do personal cultivation ? ಆದುದರಿಂದ ಇಲ್ಲಿ ಸ್ವಲ್ಪ ವಿರೋಧಾಭಾಸಕ್ಕೆ ಅವಕಾಶವಿದೆ. ಅದನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ನನ್ನ ಒಂದು ಪ್ರಾಕ್ಟಿಕಲ್ ಸಲಹೆ ಏನೆಂದರೆ ಒಂದು ಕುಟುಂಬದಲ್ಲಿರತಕ್ಕ ಪ್ರತಿಯೊಬ್ಬ ಮನುಷ್ಯನಿಗೂ ಒಂದು ಬೇಸಿಕ್ ಹೋಲ್ಡಿಂಗ್ ಆದರೂ ಕೊಡಬೇಕು. ಇದು ಐದು ಜನರ ಮೇಲ್ಪಟ್ಟು ಇರುವ ಕುಟುಂಬಗಳಲ್ಲಿ ಸ್ವಂತ ಸಾಗುವಳಿ ಮಾಡತಕ್ಕವನಿಗೆ ಮಾತ್ರ ಅನ್ವಯಿಸಬೇಕು. Not anybody who is a member of the family. Whoever takes to personal clutivation, you do give him the minimum basic holding ಇದನ್ನು ನಾನು ಸ್ವತಃ ಹೇಳುವುದಲ್ಲದೆ ನಮ್ಮ ಪಕ್ಷದ ಪರವಾಗಿಯೂ ಅದೇ ಮಾತನ್ನು ಹೇಳುವವನಾಗಿದ್ದೇನೆ.

5 P.M.

ಶ್ರೀ ಟಿ. ಡಿ. ಮಾರಣ್ಣ.—Individual holding ಗೊತ್ತುಮಾಡಬೇಕೆಂಬುದು ಮಾನ್ಯ ಸದಸ್ಯರ ಅಭಿಪ್ರಾಯವೆ ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—It is not necessary to make allegations of that kind without understanding what I am saying. ಒಬ್ಬರಿಗೆ ಬೇಸಿಕ್ ಹೋಲ್ಡಿಂಗ್ ಒಂದಾದರೂ ಇರಬೇಕು. ಸಮಿತಿಯವರು ಒಂದು ಪರಮಾವಧಿಯನ್ನು ನಿಷ್ಕರ್ಷೆಮಾಡುವಾಗ ಯಾವುದಾದರೂ ಒಂದು ಕುಟುಂಬದಲ್ಲಿ ಐದು ಜನರ ಮೇಲಿದ್ದರೆ, ಆರು ಜನರಿರಲಿ ಅಥವಾ ಅರವತ್ತು ಜನರಿರಲಿ, ಆ ಕುಟುಂಬಕ್ಕೆ ಎರಡರಷ್ಟಿರಬೇಕೆಂದು ನಿರೂಪಿಸಿದ್ದಾರೆ. ಇದು ನ್ಯಾಯವಲ್ಲ. ಆರು ಜನರಿದ್ದರೂ ಎರಡರಷ್ಟು 25 ಜನರಿಗೂ ಎರಡರಷ್ಟು ಎನ್ನುವುದು ಸಮಂಜಸವಾಗಿಲ್ಲವೆಂದು ನಾನು ಹೇಳುತ್ತೇನೆ. ಯಾರು ತಾನು ಸ್ವಂತ ಸಾಗುವಳಿ ಮಾಡುತ್ತಾನೋ ಅವನಿಗೆ ಕನಿಷ್ಟ ಪಕ್ಷ ಒಂದು ಬೇಸಿಕ್ ಹೋಲ್ಡಿಂಗ್ ಕೊಡಬೇಕೆಂದು ಹೇಳುತ್ತೇನೆ. ಹೀಗೆ ಮಾಡಿದರೆ ಜಮೀನು ಅನ್ಯಾಕ್ರಾಂತವಾಗುವುದಿಲ್ಲ.

Sri T. D. MARANNA.—Will it not amount to individual holding?

Sri J. B. MALLARADHYA.—You may call it by any name. I am aware of my own position. It becomes a basic holding, not individual holding. ಬೇಸಿಕ್ ಹೋಲ್ಡಿಂಗ್ ಎಂದು ತಿಳಿದುಕೊಂಡಿದ್ದೇನೆಯೇ ಹೊರತು ಇಂಡಿವಿಜುಯಲ್ ಹೋಲ್ಡಿಂಗ್ ಎಂದಲ್ಲ. ಯಾವುದನ್ನು ವಿನಾಯಿತಿ ಮಾಡಬೇಕೆಂಬುದು ವಾದಗ್ರಸ್ತವಾಗಿದೆ, ಪ್ಲಾನಿಂಗ್ ಕಮಿಷನ್‌ನವರು ಸಲಹೆ ಮಾಡಿರುವ ಐದು ವಿಷಯಗಳಲ್ಲಿ ಮೂರನ್ನು ಒಪ್ಪಿ ಇನ್ನು ಎರಡು ಸಲಹೆಗಳನ್ನು ಅಂಗೀಕಾರ ಮಾಡಿಲ್ಲ. ಈ ಮಾತನ್ನು ಹೇಳುವಾಗ ಸಮಿತಿಯವರನ್ನು ಕಟುವಾಗಿ ಟೀಕಿಸಬೇಕಾಗಿದೆ. ಏಕೆಂದರೆ, ಕಾಫಿ ಮತ್ತು ಟೀ ಪ್ಲಾಂಟೇಷನ್‌ಗಳ ವಿಚಾರದಲ್ಲಿ ಸಮಿತಿ ಸಾಕಷ್ಟು ನಿಗಾ ಕೊಟ್ಟಿಲ್ಲ. ಮಲೆನಾಡು ಅಭಿವೃದ್ಧಿಯ ಸಂಬಂಧದಲ್ಲಿ ಈ ವಿಚಾರವನ್ನು ಕೂಲಂಕಷವಾಗಿ ವಿಮರ್ಶೆಮಾಡಿ, ಮಲೆನಾಡಿನ ಸ್ಥಿತಿಗತಿಗಳೇನಿವೆ, ಮಲೆನಾಡು ಮುಂದುವರಿಯಬೇಕಾದರೆ ಇರತಕ್ಕ ತೊಡರುಗಳೇನು ಎಂಬುದನ್ನೆಲ್ಲಾ ಪರಿಶೀಲನೆ ಮಾಡಿದ್ದೇವೆ. ಸಮಿತಿಯವರು ಕಾಫಿ ಜಮೀನಿನ ವಿಚಾರದಲ್ಲಿ future acquisitionಗೆ ಮಾತ್ರ ಈ ರೀತಿಯ ಸಲಹೆಯನ್ನು ಮಾಡಿದ್ದಾರೆ, ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಕಾಫಿ ಬೆಳೆಯನ್ನು ಇತರ ಬೆಳೆಗಳಿಂದ ಬೇರೆ ರೀತಿಯಲ್ಲಿ ಬೆಳೆಸಬೇಕಾಗಿದೆ. ಇದರಲ್ಲಿ landlord and tenants ಅಥವಾ ಮಾಲೀಕ ಗೇಣಿದಾರರ ಬಾಂಧವ್ಯವೇನಿದೆಯೋ ಅದು ಲೇಶಮಾತ್ರವೂ ಇಲ್ಲ. ಅತಿ ಮುಂದುವರಿದ ಕೇರಳ ಪ್ರಾಂತ ಮತ್ತು ಮದರಾಸು ಈ ರಾಜ್ಯಗಳಲ್ಲಿಯೂ ಕೂಡ ಕಾಫಿ ತೋಟಗಳ ವಿಚಾರದಲ್ಲಿ future acquisitionsಗೂ ಇಲ್ಲ, ಈಗಿರತಕ್ಕವುಗಳಿಗೂ ಇಲ್ಲ. ನಮ್ಮ ದೇಶದ ಆರ್ಥಿಕ ದೃಷ್ಟಿಯಿಂದ ಈ ಹೊತ್ತು ಕಾಫಿ ಎಷ್ಟುಮಟ್ಟಿಗೆ foreign exchange ಸಂಪಾದನೆ ಮಾಡುವುದಕ್ಕೆ ಸಹಕಾರಿಯಾಗಿದೆ ಎನ್ನುವುದನ್ನು ನಾವು ಮರೆಯಬಾರದು. ಸಮಿತಿಯವರು ಉತ್ಪತ್ತಿಯ ದೃಷ್ಟಿಯಿಂದ ನೋಡಿ, ವ್ಯವಸಾಯ ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕಾಗಿ ಈ ಸುಧಾರಣೆಯನ್ನು ತಂದಿದ್ದೇವೆಂದು ಹೇಳಿದ್ದಾರೆ. ವ್ಯವಸಾಯದ ಉತ್ಪನ್ನದ ದೃಷ್ಟಿಯಿಂದ ಕಾಫಿಯ ಬೆಳೆಯನ್ನು ಪರಿಶೀಲಿಸುವುದಾದರೆ, ಹಿಂದಿನ ಹತ್ತು ವರ್ಷಕ್ಕಿಂತ ಈಗ ಹೆಚ್ಚು ಪ್ರಗತಿದಾಯಕವಾಗಿದೆ. ಈಗ 25 ಸಹಸ್ರ ಟನ್ ಬೆಳೆಯಾಗುತ್ತಿದೆ. ಇದು ಹಿಂದಿಗಿಂತ ಹೆಚ್ಚು. ಕೇಂದ್ರ ಸರ್ಕಾರದಿಂದ ರೂಪಿತವಾದ ಕಾಫಿ ಬೋರ್ಡಿನ ಉದ್ದೇಶದ ಪ್ರಕಾರ ನಮ್ಮ ಕಾಫಿ ಬೆಳೆಯನ್ನು 75 ಸಾವಿರ ಟನ್‌ಗಳಿಗೆ ಏರಿಸಬೇಕೆಂದಿದೆ. ಈರೀತಿ ಆಗಲು ಒಂದು ಯೋಜನೆಯನ್ನು ತಯಾರು ಮಾಡಿಕೊಂಡಿದ್ದಾರೆ. ಹೀಗಿರುವಾಗ ಮುಂದೆ ಕಾಫಿ ಜಮೀನುಗಳಿಗೆ ಈ ಪರಿಮಿತಿಯನ್ನು ನಿಷ್ಕರ್ಷೆಮಾಡಬೇಕೆಂದು ಮಾಡಿರುವುದರಿಂದ, ಇದಕ್ಕೆ ಅಡ್ಡಿ ಆತಂಕಗಳನ್ನು ತರುವ ಪರಿಸ್ಥಿತಿ ಒದಗುತ್ತದೆ. ಇದನ್ನು ಪರಿಶೀಲನೆ ಮಾಡಬೇಕೆಂದು ಸೂಚಿಸುತ್ತೇನೆ. ಈ ವಿಷಯವನ್ನು ಯೋಚನೆಮಾಡುವಾಗ ಮೈಸೂರಿನಲ್ಲಿರುವ ಕಾಫಿ ಬೆಳೆಯ ಪರಿಮಿತಿ ಏನೆಂಬುದನ್ನು ಯೋಚನೆಮಾಡಬೇಕು. ಪರದೇಶದ ಕಾಫಿ ಕೇವಲ ಸೇಕಡ ಒಂದರಷ್ಟಿದ್ದರೆ, ಈ ಹೊತ್ತು ನಾವು ಬೆಳೆಯುತಕ್ಕ 25 ಸಾವಿರ ಟನ್‌ಗಳಲ್ಲಿ ಹತ್ತು ಹದಿನೈದು ಸಾವಿರಕ್ಕೆ ಮೇಲ್ಪಟ್ಟು ರಫ್ತು ಮಾಡುತ್ತಿದ್ದೇವೆ. ಇಂಡಿಯಾ ದೇಶದಲ್ಲಿ ಹೆಚ್ಚು ಉಪಯೋಗಿಸುವ ಪರಿಸ್ಥಿತಿ ಇಲ್ಲ. ಕಾಫಿ ಬೆಳೆಯತಕ್ಕ ಜಮೀನಿನ ಮಿತಿಯನ್ನು ಕಡಮೆ ಮಾಡಿದರೆ ಬೆಳೆಯನ್ನು ಹೆಚ್ಚಿಸಲು ಅವಕಾಶವಿದೆಯೇ ಎಂದರೆ, ಅದಿಲ್ಲ. ಪ್ಲಾಂಟೇಷನ್ ಎನ್‌ಕ್ವೈರಿ ಕಮಿಟಿಯವರು ಅಧಿಕಾರಯುತವಾಗಿ ಕೆಲವು ಅಂಕಿ ಅಂಶಗಳನ್ನು ನಿಷ್ಕರ್ಷೆ ಮಾಡಿ ನಮ್ಮ ಮುಂದಿಟ್ಟಿದ್ದಾರೆ. ಅವರ ಪ್ರಕಾರ ಐದರಿಂದ ಹತ್ತಕರೆ ಇರುವ ಪ್ಲಾಂಟೇಷನ್‌ಗಳಲ್ಲಿ ·68 ಹಂಡ್ರೆಡ್‌ವೇಟ್ ಅರ್ಯಾಬಿಕ ಅಥವಾ 1·54 ರೋಬಸ್ಟ ಬೆಳೆಯುತ್ತದೆ. 50 ರಿಂದ 150 ಎಕರೆ ಇರುವುದರಲ್ಲಿ 1·14 ಹಂಡ್ರೆಡ್‌ವೇಟ್, 150 ರಿಂದ 200 ಎಕರೆ ಇರುವುದರಲ್ಲಿ 1·83 ಹಂಡ್ರೆಡ್‌ವೇಟ್, 200 ಎಕರೆಗಳಿಗೆ ಮೇಲ್ಪಟ್ಟಿದ್ದರಲ್ಲಿ 2·26 ಹಂಡ್ರೆಡ್ ವೇಟ್ ದೊಡ್ಡ ಪ್ಲಾಂಟೇಷನ್ ಆದರೆ cost for unit of production ಶೇಕಡ 118 ಆಗುತ್ತದೆ, ಚಿಕ್ಕದಾದರೆ ಶೇಕಡ 234 ಆಗುತ್ತದೆ. ಅಂಕಿ ಅಂಶಗಳನ್ನು ಶೇಖರಿಸಿ ಶಾಸ್ತ್ರೀಯವಾಗಿ ಕಂಡುಹಿಡಿದಿದ್ದಾರೆ. ಈ ದೃಷ್ಟಿಯಿಂದ ಐದು, ಹತ್ತು ಅಥವಾ ಇಪ್ಪತ್ತು ಎಕರೆ ಮಾಡುವುದರಿಂದ ಪ್ರಯೋಜನವಿಲ್ಲ. ಹೀಗೆ ಮಾಡಿದರೆ ಕಾಫಿ ಬೆಳೆಗೆ ಉತ್ತೇಜನ ದೊರೆಯುವುದಿಲ್ಲ. ಜಮೀನಿನ ಪರಿಮಿತಿ ಹೆಚ್ಚಿದಷ್ಟೂ ಉತ್ಪತ್ತಿಯ ವೆಚ್ಚ ಕಡಮೆಯಾಗುತ್ತದೆ. ಈ ದೃಷ್ಟಿಯಿಂದ future acquisitionsಗೆ ಜತ್ತಿ ಸಮಿತಿ ಮಾಡಿರುವ ಸಲಹೆಯನ್ನು ಒಪ್ಪುವುದಕ್ಕಾಗುವುದಿಲ್ಲ. . . .

ಶ್ರೀ ಡಿ. ದೇವರಾಜ ಅರಸ್.—ಕಾಫಿ ಪ್ಲಾಂಟೇಷನ್‌ಗಳ ವಿಚಾರದಲ್ಲಿ future acquisitionsಗೂ ಪರಿಮಿತಿ ಇರಬಾರದೆಂದು ತಾವು ಅಪ್ಪಣೆ ಕೊಡಿಸಿದಿರಿ. ಹೆಚ್ಚು ಪರಿಮಿತಿ ಇದ್ದರೆ ಉತ್ಪತ್ತಿಯ ವೆಚ್ಚ ಕಡಮೆಯಾಗಿ ಉತ್ಪತ್ತಿ ಹೆಚ್ಚಾಗುತ್ತದೆಂದು ಹೇಳಿದಿರಿ. ಇದೇ ರೀತಿ ಬೇರೆ ಬೆಳೆಗಳ ಜಮೀನಿನಲ್ಲಿಯೂ large holdings ನಲ್ಲಿ ಉತ್ಪತ್ತಿ ಜಾಸ್ತಿಯಾಗಿದೆ ಎಂಬುದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಹಾಗಿದ್ದರೆ 200-300 ಎಕರೆಯಷ್ಟು ಪರಿಮಿತಿಯನ್ನು ಬಿಡಲು ಒಪ್ಪಿಕೊಳ್ಳಬಹುದೆ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮಾನ್ಯ ಸದಸ್ಯರು ನಾನು ಹೇಳಿದ ಒಂದು ಮುಖ್ಯ ಅಂಶವನ್ನು ಗಮನಿಸಲಿಲ್ಲವೆಂದು ಕಾಣುತ್ತದೆ. ಮೂಲ ತತ್ವವನ್ನು ಕಾಫಿಗೆ ಅನ್ವಯಿಸುವುದು ಸರಿಯಲ್ಲ; ಏಕೆಂದರೆ, ಮಾಲೀಕನ ಮತ್ತು ಗೇಣೀದಾರನ ಸಂಬಂಧವೇನಿದೆಯೋ ಬೇರೆ

ಜಮೀನುಗಳಲ್ಲಿ, ಅದು ಕಾಫಿ ಬೆಳೆಗೆ ಅನ್ವಯವಾಗುವುದಿಲ್ಲವೆಂದು ಹೇಳಿದ್ದೇನೆ. There is no question of landlord and tenant in coffee plantations.

Sri D. DEVARAJ URS.—It is not merely a question of removing the relationship between the tenant and landlord. From the point of view of distributing land to the cultivators, is it not advisable to put a ceiling on future acquisitions, Otherwise, one may acquire any amount of land.

Sri J. B. MALLARADHYA.—My point has not been understood by my esteemed friend Sri Devaraj Urs. ಈ ವಿಷಯವನ್ನು ಚರ್ಚೆ ಮಾಡುವಾಗ ಪಕ್ಷರಹಿತವಾದ ದೃಷ್ಟಿಯಿಂದ ಚರ್ಚೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಒಂದು ವೇಳೆ ಸಣ್ಣ ಹಿಡುವಳಿದಾರರಿಗೆ ಜಮೀನನ್ನು ಕೊಡಬೇಕೆಂದು ಸರ್ಕಾರ ಬಯಸಿದರೆ ಒಂದು ಲಕ್ಷದ ಐವತ್ತು ಸಾವಿರ ಎಕರೆ ಜಮೀನು ಪಾಳು ಬಿದ್ದಿದೆ. ಅದು ಬೆಳೆಯಬಹುದಾದ ಜಮೀನು. 1932-33 ಮತ್ತು 1936ನೆಯ ಇಸವಿಯಲ್ಲಿ ಸರ್ವೆ ಮಾಡಿದ್ದಾರೆ. ಅದನ್ನು ಕೊಡಬಹುದು. ಆಗ ಕಾಫಿ ಬೆಳೆಯಲ್ಲಿ ಕಡಮೆಯಾಗಿತ್ತು. Because it is only the capitalist who can take up coffee cultivation because of the risks and troubles involved. ಒಬ್ಬ ಮನುಷ್ಯ ಎಕರೆಗೆ ಎರಡೂವರೆ ಅಥವಾ ಮೂರು ಸಾವಿರ ರೂಪಾಯಿ ಖರ್ಚು ಹಾಕಿ ಏಳೆಂಟು ವರ್ಷಕಾಲ ಕಾದು ಬೆಳೆಯನ್ನು ಪಡೆಯಬೇಕು. ಒಂದುವೇಳೆ ಮಳೆ ಬಾರದಿದ್ದರೆ ಆಗಲೂ ಬೆಳೆ ಹೋಗುತ್ತದೆ. ಇದಕ್ಕೆ ಎಷ್ಟು ಜನ ಸಿದ್ಧರಾಗಿದ್ದಾರೆ? ವಾಸ್ತವಾಂಶವನ್ನು ನೋಡದೆ ಎಲ್ಲಕ್ಕೂ ಒಂದೇ ಮಂತ್ರವನ್ನು ಹಾಕುವುದು 'ಅಮೃತಾಂಜನ' ದಂತೆ ಎಲ್ಲ ಕಾಯಿಲೆಗಳಿಗೂ ಒಂದೇ ಔಷಧ ಎಂದು ಹೇಳಿದಹಾಗಾಗುತ್ತದೆ. . . .

ಶ್ರೀ ಟಿ ತಾರೇಗೌಡ.—ಕಾಫಿ ಬೆಳೆ ಬೆಳೆಯುವ ಜಮೀನಿನಲ್ಲಿ ಆಹಾರ ಬೆಳೆ ಬೆಳೆಯುವುದಕ್ಕಾಗುವುದಿಲ್ಲವೆ?

Sri J. B. MALLARADHYA.—It is grown on the slopes of hills. ಮಾನ್ಯ ಸದಸ್ಯರು ದಯೆಯಿಟ್ಟು ಕಾಫಿ ಬೆಳೆಯುವ ಪ್ರದೇಶಕ್ಕೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಬತ್ತದ ಬೆಳೆ ಬೆಳೆಯುವ ಜಮೀನೇ ಬೇರೆ, ಕಾಫಿ ಬೆಳೆಯುವ ಜಮೀನೇ ಬೇರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಟ್ಟದ ಮೇಲೆ ಭತ್ತ ಬೆಳೆಯುತ್ತದೆಂದು ಅವರು ಹೇಳುತ್ತಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹಾಗೆ ಅವರು ಹೇಳಬಹುದು. ಕಾರ್ಮಿಕ ಸ್ಥಿತಿ ಉತ್ತಮ ಪಡಿಸುವುದಕ್ಕೆ ಲೇಬರ್ ಲೆಜಿಸ್ಲೇಷನ್ ಇದೆ. ಕಾಫಿ ಪ್ಲಾಂಟೇಷನ್‌ನಲ್ಲಿ ಒಂದು ಎಕರೆಗೆ 500 ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅಲ್ಲಿಯ ಕೆಲಸಗಾರರ ಹಿತಸಾಧನೆಗೋಸ್ಕರ ಕಟ್ಟುನಿಟ್ಟಾದ ಆಜ್ಞೆ ಇದೆ. ಹಾಗೆ ಹಿತಸಾಧನೆ ಮಾಡದೇ ಇದ್ದರೆ ಅವರಿಗೆ ಶಿಕ್ಷೆ ವಿಧಿಸಲಾಗುವುದು. ಈ ರೀತಿ ಕಾಫಿ ಪ್ಲಾಂಟೇಷನ್ನುಗಳಲ್ಲಿ ಕೆಲಸಗಾರರ ಹಿತಸಾಧನೆ ಮಾಡುತ್ತಿರುವುದರಿಂದ ಎಲ್ಲಾ ಕಡೆ unrest ಕಡಿಮೆಯಾಗಿದೆ. ಕೆಲಸಗಾರರ ಸಂಖ್ಯೆ ಇಷ್ಟೊಂದು ಅಧಿಕ ಪ್ರಮಾಣದಲ್ಲಿ ಇದ್ದರೂ ಸಹ ಅಶಾಂತಿ, ಅಸಮಾಧಾನ, ಅತೃಪ್ತಿ ಅಲ್ಲಿ ಇಲ್ಲ.

ಮಲೆನಾಡಿನ ಅಭಿವೃದ್ಧಿ ಮಾಡಬೇಕೆಂದು ಹುಟ್ಟಿದಾಗಿನಿಂದ ಹೇಳುತ್ತಿದ್ದೇವೆ. ಕೇಂದ್ರ ಸರಕಾರದವರು ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಮಾಡುತ್ತಿದ್ದಾರೆ. ಮಲೆನಾಡು ಬೋರ್ಡ್ ರಚನೆಯಾಗಿದೆ. ಕಾಫಿ ಬೆಳೆಯು ಹೆಚ್ಚು foreign exchange ದೊರಕಿಸಿ ಕೊಡುತ್ತದೆ. ತನ್ಮೂಲಕ ದೇಶದ ಹಿತಸಾಧನೆಗೆ ಸಹಾಯವಾಗುತ್ತದೆಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ಆದುದರಿಂದ ಕೇಂದ್ರ ಸರಕಾರ ಕಾಫಿ ಬೆಳೆಯ ಹತೋಟಿಯನ್ನು ವಹಿಸಿಕೊಂಡಿದ್ದಾರೆ. ನಮ್ಮ ದೇಶದಲ್ಲಿ ಒರಿಸ್ಸಾ, ಮದ್ರಾಸ್, ಕೇರಳ, ಮೈಸೂರು ಪ್ರದೇಶಗಳಲ್ಲಿ ಕಾಫಿ ಹೆಚ್ಚಾಗಿ ಬೆಳೆಯುತ್ತದೆ. ಒಂದು ಶಾಸನ ಮಾಡದೇ ಇದ್ದರೆ ಕೇಂದ್ರ ಸರಕಾರದ ಸಮ್ಮತಿ ಪಡೆಯದೇ ಇದ್ದರೆ, ಅವರು ಆದೇಶ ಕಳಿಸದೇ ಇದ್ದರೆ ಇಂದು ಕಾಫಿ ತೋಟದ ಉತ್ಪನ್ನವು ನಮ್ಮ ಕೈ ಬಿಡುತ್ತಿತ್ತು.

ಇನ್ನು mortgage ವಿಷಯ. ಜಮೀನು ಬದಲಾವಣೆ ಮಾಡುವಾಗ ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಒಂದು ವಿಷಯವನ್ನು ಸಮಿತಿಯವರು ಹೇಳಿದ್ದಾರೆ:

> "Simple mortgages of agricultural land in favour of non-agriculturists need not be prohibited. But mortgages with possession should be in favour of agriculturists only, subject to the condition that the extent mortgaged together with the land held by the mortgagee as owner or tenant or both, does not exceed the ceiling."

ಇದರ ಒಂದು ಪ್ರತಿಕ್ರಿಯೆ ಏನಾಗುತ್ತದೆ ಎಂಬುದನ್ನು ಊಹಿಸಿಕೊಂಡು ನೋಡಿದರೆ, ಇದರ ಅರ್ಥವೇ ಆಗುವುದಿಲ್ಲ. ಒಬ್ಬ ಮನುಷ್ಯ ಜಮೀನನ್ನು ಇನ್ನೊಬ್ಬನಿಗೆ ಕೊಡಕೂಡದು ಎಂಬ ನಿರ್ಬಂಧ ಹಾಕಿರುವುದರ ಅರ್ಥವಾಗುವುದಿಲ್ಲ. Mortgage landನ possession ಕೊಡಕೂಡದು ಎಂದು ಮಾಡಿ ರೈತರಿಗೆ ದೊರೆಯತಕ್ಕ ಸಾಲಸೋಲಕ್ಕೆ ಪ್ರತಿಬಂಧಕವನ್ನು ತಂದೊಡ್ಡಿ ವ್ಯವಸಾಯ ಜೀವನ ಕುಂಠಿತವಾಗುವಂತೆ ಮಾಡುತ್ತೀರಿ. ಒಟ್ಟಿನಲ್ಲಿ non-agriculturists ಆದವರಿಗೆ ಕೊಡುವುದು ಬೇಡ ಎಂಬುದರಲ್ಲಿ ಭೂಮಿ ಸಾಗುವಳಿಯಾಗದೆ ಇರಬಹುದು, ವ್ಯವಸಾಯಕ್ಕೆ ಧಕ್ಕೆ ಬರಬಹುದು ಎಂಬುದು ಇದೆ. ಸಾಲ ತೆಗೆದುಕೊಳ್ಳುವಾಗ mortgage with possession ಇರಕೂಡದು ಎಂದು ಇರುವುದರಿಂದ ವ್ಯವಸಾಯವನ್ನು ಕುಂಠಿತವಾಗುವಂತೆ ಮಾಡಕೂಡದು ಎಂದು ನಾನು ಹೇಳುತ್ತೇನೆ. ಇನ್ನೂ ಎರಡು ಮೂರು ವಿಷಯಗಳ ಬಗ್ಗೆ ಅಂಕಿ ಅಂಶಗಳನ್ನು ಜತೆ ಸಮಿತಿಯವರು ವರದಿಯಲ್ಲಿ ಒದಗಿಸಿದ್ದರೆ ಚೆನ್ನಾಗಿತ್ತು. ರಿಕಾರ್ಡ್ ಆಫ್ ಟೆನನ್ಸಿ ವಿಮರ್ಶೆ ಮಾಡಿ ಲ್ಯಾಂಡ್ ಹೋಲ್ಡಿಂಗಿನ ಒಂದು ಸೆನ್ಸಸ್ ತಯಾರುಮಾಡಿಲ್ಲ. ಈ census of land holdings ಮಾಡಬೇಕೆಂದು ಹಿಂದೆ ಎಲ್ಲಾ ರಾಜ್ಯ ಸರಕಾರಗಳಿಗೆ ಕೇಂದ್ರ ಸರಕಾರದವರು ಒಂದು ಆದೇಶ, ಮನವಿ ಮೂಲಕ ತಿಳಿಸಿದ್ದರೆಂಬುದು ನನ್ನ ಜ್ಞಾಪಕಕ್ಕೆ

(ಶ್ರೀ ಜೆ. ಬಿ. ಮಲ್ಲಾರಾಧ್ಯ)

ಬರುತ್ತದೆ. ಆದುದರಿಂದ ಇದಕ್ಕೋಸ್ಕರ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಈ ಸುಧಾರಣೆಗಳನ್ನು ಜಾರಿಗೆ ತರುವ ಸಂದರ್ಭದಲ್ಲಿ ಅವುಗಳ ಉಪಯೋಗವಾಗುವುದು.

ಇನ್ನು ಲ್ಯಾಂಡ್ ಕಮಿಷನ್ ಮತ್ತು ಲ್ಯಾಂಡ್ ಟ್ರಿಬ್ಯೂನಲ್ ಇವೆರಡನ್ನೂ ರಚನೆಮಾಡುವಾಗ ಅಧಿಕಾರಿವರ್ಗದವರ ವ್ಯಾಮೋಹ ಸದಸ್ಯರಿಗೆ ಇತ್ತು. ಇಂಥಾ ಕ್ಲಿಷ್ಟ ಸಮಸ್ಯೆಗಳನ್ನು ಯೋಚನೆಮಾಡಿ ಪರಿಹಾರವನ್ನು ಸೂಚಿಸುವ ಸಂದರ್ಭದಲ್ಲಿ ಅಧಿಕಾರಿವರ್ಗದವರೊಡನೆ ಖಾಸಗಿ ಜನರು ಬೆರೆತು ಕೆಲಸ ಮಾಡುವಹಾಗೆ ಏಕೆ ಅವಕಾಶ ಕಲ್ಪಿಸಿಕೊಡಲಿಲ್ಲ ಎಂಬುದು ಅರ್ಥವಾಗುವುದಿಲ್ಲ. ಲ್ಯಾಂಡ್ ಕಮಿಷನ್‌ನಲ್ಲಿ ನ್ಯಾಯಾಧೀಶರುಗಳು ಇರಬೇಕಾಗಿತ್ತೆಂದು ನಾನು ಹೇಳುತ್ತೇನೆ. ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಒಬ್ಬ ಸರ್ವಾಧಿಕಾರಿ ಇರಬಹುದು ಎಂದು ಇದೆ. Land Tribunal ಹೆಚ್ಚು ಪರಿಣಾಮಕಾರಿಯಾದದ್ದು. So you must associate non-officials. ಆದಕಾರಣ ಖಾಸಗಿ ಜನರನ್ನು ಸೇರಿಸಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಅನ್ಯಾಯವನ್ನಾದರೂ ನಿವಾರಿಸಿ ಆಡಳಿತಪಕ್ಷದವರು ಖಾಸಗೀ ಜನರನ್ನು ಹಾಕಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಮುಂದೆ ಬರತಕ್ಕ ಕಾನೂನು ಸಂಬಂಧದಲ್ಲಿ ಕೂಡ ಹೆಚ್ಚಿನ ಆಶೋತ್ತರಗಳು ಇರಬಹುದು ಒಂದು ಕಟ್ಟುನಿಟ್ಟಾದ ಶಾಸನ ರಚನೆ ಮಾಡಬೇಕು. ಯಾವ ರೀತಿ ಕಾರ್ಯರೂಪದಲ್ಲಿ ತರಬೇಕು ಎಂಬುದು ಅವರ ಕೈಯಲ್ಲಿದೆ. ಯಾವ ರೀತಿ ಕಾರ್ಯರೂಪದಲ್ಲಿ ಬರುವುದು ಎಂಬುದು ಮುಖ್ಯ ವಿಷಯ. ಈ ಸಮಿತಿಯ ವರದಿಯನ್ನು ಕಟುತರವಾಗಿ ಟೀಕೆ ಮಾಡುವಾಗ ಈ ಶಾಸನ ಮುಂಬಯಿ, ಹೈದರಾಬಾದ ಪ್ರದೇಶಗಳಲ್ಲಿ ಜಾರಿಗೆ ಬಂದದ್ದು ಹಾಸ್ಯಾಸ್ಪದವಾಗಿದೆ ಎಂದು ಹೇಳುವುದು ಈ ಸಂದರ್ಭದಲ್ಲಿ ಅನ್ವಯವಾಗುವುದಿಲ್ಲ. ಟೀಕೆ ಮಾಡುವುದರ ಬದಲು ಈ ಕಾನೂನನ್ನು ಜಾರಿಗೆ ತರುವುದರಲ್ಲಿ ಯಾವ ಯಾವ ರಾಜ್ಯದಲ್ಲಿ ಏನೇನು ತೊಂದರೆಯಾಯಿತು, ಜನತೆ ಪುರಸ್ಕಾರ ಕೊಟ್ಟಿದೆಯೇ, ತೊಂದರೆ ಒಡ್ಡಿದ್ದಾರೆಯೇ ಎಂಬ ಎಲ್ಲ ಅನುಭವಗಳನ್ನೂ ಕ್ರೋಢೀಕರಿಸಿ ಅವುಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ ಒಂದು ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಈ ಶಾಸನವನ್ನು ಕಾರ್ಯಗತ (implementation) ಮಾಡುವುದು ಬಹಳ ಮುಖ್ಯವಾದುದು. ಈಗಾಗಲೇ ಅನೇಕ ಕಾರ್ಮಿಕಶಾಸನಗಳು (labour legislation) ಆಗಿವೆ. ಮೈಸೂರು ಹೆಚ್ಚು ಮುಂದುವರಿದ ಸಂಸ್ಥಾನವಾದರೂ labour legislation ಆಗಿಲ್ಲ. ಹಿಂದಕ್ಕೆ ಒಂದು ಕಾನೂನು ಇತ್ತು. ಅದು ಕಾರ್ಯಗತವಾಯಿತು. ತನ್ಮೂಲಕ ಕಾರ್ಮಿಕ ವರ್ಗದವರಿಗೆ ಸಹಾಯ ಮತ್ತು ಉಪಕಾರವಾಯಿತು. ಅದು ಒಂದು ಬೇರೆ ವಿಷಯ. ನನ್ನ ಮಾನ್ಯ ಮಿತ್ರರು ಅನೇಕ ವಿಷಯಗಳ ಬಗ್ಗೆ ಟೀಕೆ ಮಾಡಿದ್ದಾರೆ. ಗೇಣಿ ಪದ್ಧತಿಯನ್ನು ಸ್ವಲ್ಪ ಬದಲಾವಣೆ ಮಾಡಬೇಕೆಂಬ ಆಶೋತ್ತರಗಳನ್ನು ಇಟ್ಟುಕೊಂಡಿದ್ದಾರೆ. ದೇಶದಲ್ಲಿ 54 ಲಕ್ಷ ಎಕರೆ fallow land ಅಂದರೆ ಬಂಜರು ಭೂಮಿ ಇದೆಯೆಂದು ಶ್ರೀಮಾನ್ ಚನ್ನಬಸಪ್ಪನವರು ತಮ್ಮ ಭಾಷಣದಲ್ಲಿ ಹೇಳಿದರು; ಮತ್ತು ಅದನ್ನು ಏಕೆ ಹಂಚುವುದಿಲ್ಲವೆಂದು ಪ್ರಶ್ನೆ ಕೇಳಿದರು. ಆದರೆ ಯಾವ ಕ್ಷೇತ್ರದಿಂದ ಈ ಅಂಕಿ ಅಂಶಗಳನ್ನು ಅವರು ಸಂಗ್ರಹಿಸಿದ್ದಾರೆ ಎಂಬುದು ಅರ್ಥವೇ ಆಗುವುದಿಲ್ಲ. ಆದರೆ ಅಧಿಕಾರಯುತವಾಗಿ ಒಂದು ರಿಪೋರ್ಟು ಸ್ಟೇಟ್ಸ್ ರಿಆರ್ಗನೈಜೇಷನ್ನಿಗೆ ಸಂಬಂಧಪಟ್ಟದ್ದನ್ನು Government of India, Ministry of Economics and Statistics ನವರು ಸಂಗ್ರಹಿಸಿ ಪ್ರಸಿದ್ಧಪಡಿಸಿದ ಅಂಕಿಅಂಶಗಳು ಈಗ ನನ್ನ ಮುಂದೆ ಇವೆ. ಎಲ್ಲಾ ಬಂಜರು ಭೂಮಿ ಸಾಗುವಳಿಗಳಿಗೆ ಲಾಯಕವಿರುವುದಿಲ್ಲ. ಕೇವಲ 15,64,098 ರಷ್ಟು ಎಕರೆ ಮಾತ್ರ ಬಂಜರು ಭೂಮಿ ಇದೆ ಎಂಬ ಅಂಕಿ ಅಂಶಗಳು ಈ ವರದಿಯಿಂದ ನನಗೆ ದೊರೆತಿವೆ. ಬಹುಶಃ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಚನ್ನಬಸಪ್ಪನವರು ಹಿಡುವಳಿಗಳಲ್ಲಿ ಇರತಕ್ಕ ಬಂಜರು ಭೂಮಿಯನ್ನು ಸಹ ಇದರಲ್ಲಿ ಸೇರಿಸಿ ಹೇಳಿರಬಹುದು, ಹಿಡುವಳಿಗಳಲ್ಲಿ ಕೂಡ ಸ್ವಲ್ಪ ಭಾಗ ಜಮೀನನ್ನು ಬಂಜರು ಇಟ್ಟಿರುತ್ತಾರೆ. ನಿಜವಾಗಿಯೂ ಇದರ ಪರಿಮಿತಿಯನ್ನು ಅವರು ಅರಿತಿದ್ದರೆ ಚೆನ್ನಾಗಿತ್ತು.

ಈ ಶಾಸನವನ್ನು ಜಾರಿಗೆ ತರುವುದಕ್ಕೆ ಮುಂಚಿತವಾಗಿ ಮಸೂದೆಯನ್ನು ಸಭೆಯ ಮುಂದೆ ಇಡುವಾಗ ಹಿಡುವಳಿಗಳಲ್ಲಿ ಬಂಜರು ಭೂಮಿ ಇರಕೂಡದು, ಒಂದುವೇಳೆ ಆ ರೀತಿ ಬಂಜರು ಭೂಮಿ ಇಟ್ಟಿದ್ದಾದರೆ ಅದು ಕಾನೂನಿಗೆರುದ್ಧವಾಗುತ್ತದೆ ಎಂಬುದಾಗಿ ಒಂದು ಪೀನಲ್ ಕ್ಲಾಜ್ ಮಸೂದೆಯಲ್ಲಿ ಸೇರಿಸಬೇಕೆಂದು ನಾನು ಸೂಚಿಸುತ್ತೇನೆ. ಈ ರೀತಿಯಾಗಿ ಒಂದೆರಡು ರಾಷ್ಟ್ರಗಳಲ್ಲಿದೆ. ಈ ವಿಷಯವನ್ನು ಯೋಚನೆಮಾಡಿ ಶಾಸನ ಜಾರಿಗೆತರುವಂತೆ ಮಾಡಿದರೆ ಬಂಜರು ಭೂಮಿ ಉಳಿಯುವುದಕ್ಕೆ ಅವಕಾಶವಾಗುವುದಿಲ್ಲ.

ಇನ್ನು ಇರುವ 15ಲಕ್ಷ ಎಕರೆ ಜಮೀನುಗಳನ್ನು ಸಾಗುವಳಿಗೆ ತರುವ ವಿಚಾರದಲ್ಲಿ, ಅಮೃತಮಹಲ್ ಕಾವಲು ವಿಚಾರದಲ್ಲಿ ರೆವೆನ್ಯೂ ಸಚಿವರು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಿದರು. ಆದರೆ ಬಂಜರು ಜಮೀನುಗಳಲ್ಲಿ ವ್ಯವಸಾಯಕ್ಕೆ ಲಾಯಖ್ಖಾಗಿರುವ ಕಡೆ ಏಕೆ ಕಾಲೊನೈಜೇಷನ್ ಸ್ಕೀಂ ಜಾರಿಗೆ ಕೊಡಬಾರದು ? ಕಾಲೊನೈಜೇಷನ್ ವಿಷಯದಲ್ಲಿ ಸ್ವಂತ ಅನುಭವ ಹೇಳುವುದಾದರೆ ಸಂಸ್ಥಾನದಲ್ಲಿ ಇಲ್ಲಿಯವರೆಗೆ ನಡೆದಿರುವ ಪ್ರಯತ್ನ, ಅಧಿಕಾರಿಯುತವಾಗಿ ನಡೆದಿರುವ ಪ್ರಯತ್ನ ಎಲ್ಲಾ ಪೂರ್ಣವಾಗಿ ನಿರಾಶಾದಾಯಕವಾಗಿದೆ. ಇದಕ್ಕಾಗಿ ವಿನಿಯೋಗಿಸಿದ ರೈತರ ಹಣ ಅನನ್ವಯವಾಗಿ ಅನ್ಯಾಯವಾಗಿದೆ ಎಂಬುದು ನನ್ನ ಸ್ವಂತ ಅನುಭವ. ಆ ರೀತಿ ಆಗಬಾರದು. ಬೆಂಗಳೂರಿಗೆ 15 ಮೈಲಿ ದೂರದಲ್ಲಿರುವ ಗೊಟ್ಟಿಗೆರೆಯಲ್ಲಿ ಒಂದು ಕಾಲೋನಿ ಮಾಡಿದರು, ಚೆನ್ನಗಿರಿ ತಾಲ್ಲೂಕು ಬೈರಾಪುರದಲ್ಲಿ ಒಂದು ಕ್ಷೇತ್ರ ಮಾಡಿದರು; ಸಾರ್ಥಕವಾಗಲಿಲ್ಲ, ಈಗ ಫ್ಯಾಮಿಲಿ ಹೋಲ್ಡಿಂಗ್ ಮತ್ತು ಬೇಸಿಕ್ ಹೋಲ್ಡಿಂಗ್ ಆಧಾರದ ಮೇಲೆ ಸರ್ಕಾರದವರು 15 ಲಕ್ಷ ಎಕರೆ ಜಮೀನೇನಿದೆ ಅದನ್ನು ಜನರಿಗೆ ಹಂಚುವಾಗ ಸರಿಯಾದ ವ್ಯವಸ್ಥೆಮಾಡಬೇಕು. ಬೇಸಿಕ್ ಹೋಲ್ಡಿಂಗ್ ಅಥವಾ ಫ್ಯಾಮಿಲಿ ಹೋಲ್ಡಿಂಗ್ ನಿಗದಿಮಾಡಿ ವಿಂಗಡಿಸಿ ಜಮೀನಿಗೆ ಹದ್ದುಬಸ್ತು ಹಾಕಿ ರೈತರನ್ನು ಬರಮಾಡಿಕೊಂಡು ಕಾಲೊನೈಜೇಷನ್ ಸ್ಕೀಂ ಸರಿಯಾಗಿ ಜಾರಿಗೆಬರುವಂತೆ ಮಾಡಬೇಕು. ಹಾಗೆ. ಮಾಡುವಾಗ ಐದು ಜನ ರೈತರನ್ನು ಕರೆತಂದು ‘‘ನೀವು ಜಮೀನು ನೋಡಿಕೊಳ್ಳಿ’’ ಎಂದು ಹೇಳಿದರೆ

ಏನೂ ಪ್ರಯೋಜನವಾಗುವುದಿಲ್ಲ. ಆ ರೈತರಿಗೆ ಒಂದು ವರ್ಷಕ್ಕಾಗುವಷ್ಟು ದವಸಧಾನ್ಯ ಕೊಡಬೇಕು, ಜಾನುವಾರು ಕೊಡಬೇಕು, ಅವರ ಮನೆಯವರಿಗೆ ಒಂದು ವರ್ಷ ಜೀವನ ನಡೆಸಬೇಕು. ಹೀಗೆ ಮಾಡಿ ಕೋ ಆಪರೇಟಿವ್ ಫಾರಂ ಒಂದು ತರಹ ಏನಾದರೂ ಮಾಡಿದರೆ ಸಾಧ್ಯ, ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಇದು ಅತಿ ಮುಖ್ಯವಾದುದು. ಈ ಸಂಬಂಧವಾದ ಶಾಸನ ಜಾರಿಗೆ ತರುವುದಕ್ಕೆ ಮುಂಚೆ ಈಗ ಇರುವ ಗೇಣಿದಾರರು, ಅಗ್ರಿಕಲ್ಚರಲ್ ಲೇಬರರ್ಸ್—ಇವರ ಹಿತದೃಷ್ಟಿಯಿಂದ ಜತ್ತಿ ಸಮಿತಿ ಸಲಹೆ ಆಧಾರದ ಮೇಲೆ ಅಥವಾ ಸೂಕ್ತರೀತಿ ಬದಲಾಯಿಸಿ 15 ಲಕ್ಷ ಎಕರೆ ಸಂಬಂಧದಲ್ಲಿ ಕಾಲೊನೈಜೇಷನ್ ನಮ್ಮ ಸಲಹೆಯಂತೆ ಮಾಡಿದರೆ ಸಮಿತಿಯ ವರದಿಗೂ ಬೆಂಬಲ ಸಿಕ್ಕುತ್ತದೆ, ಸರ್ಕಾರದ ಧ್ಯೇಯಕ್ಕೂ ಪುರಸ್ಕಾರ ಮತ್ತು ಗೌರವ ದೊರೆಯುತ್ತದೆ.

ಇನ್ನು ಅನೇಕ ಜನರು ಸೀಲಿಂಗ್ ಹಾಕುವುದರಿಂದ ಮತ್ತು ಬೇಸಿಕ್ ಹೋಲ್ಡಿಂಗ್ ಮಾಡುವುದರಿಂದ ಜಮೀನಿನ ಸಂಬಂಧದಲ್ಲಿ ಫ್ರಾಗ್ಮೆಂಟೇಷನ್ ಆಗುತ್ತದೆ, ತುಂಡು ತುಂಡಾಗಿ ವ್ಯವಸಾಯಕ್ಕೆ ಧಕ್ಕೆ ಬರುತ್ತದೆ ಎಂದು ಹೇಳುವುದರಲ್ಲಿ ತಿರುಳಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗತಾನೆ ಶ್ರೀಮಾನ್ ನರಸಿಂಹನ್ ರವರು ಚೈನಾ ಮತ್ತು ಜಪಾನ್‌ದೇಶಗಳ ಅನುಭವವನ್ನು ನಮ್ಮ ಮುಂದಿಟ್ಟಿದ್ದಾರೆ. ಕಮ್ಯೂನಿಸ್ಟರಿಗೆ ಸಂಬಂಧಪಟ್ಟ ವಿಷಯವಾದರೂ ಅದರಲ್ಲಿರುವ ಒಳ್ಳೆಯ ವಿಚಾರವನ್ನು ಸಂಗ್ರಹಿಸಿ ನಮಲ್ಲಿರುವುದನ್ನು ನೋಡಿ ಪರಿವರ್ತನೆ ಮಾಡಿಕೊಳ್ಳೋಣ. ಇದಕ್ಕೆ ರಾಜಕೀಯ ಹಿನ್ನೆಲೆಬೇಡ, ಇದು ರಾಷ್ಟ್ರದ ಪ್ರಶ್ನೆ, ಅಳಿವು ಉಳಿವಿನ ಪ್ರಶ್ನೆ. ಬಹಳ ಮುಖ್ಯವಾದ ಈ ಭೂಮಿಯ ಪ್ರಶ್ನೆಯನ್ನು ರಾಜಕೀಯ ಹಿನ್ನೆಲೆಯಿಂದ ವಿಮರ್ಶೆಮಾಡಬಾರದು. ಲಾರ್ಜ್ ಲ್ಯಾಂಡೆಡ್ ಎಸ್ಟೇಟ್ ಸ್ಕೀಂ, ಅಬ್ಸೆಂಟಿ ಪ್ರೊಪ್ರೈಟರ್‌ಷಿಪ್ ಎಂದು ಹೇಳುವಾಗ ದೊಡ್ಡ ದೊಡ್ಡ ಹಿಡುವಳಿದಾರರು ಏನು ಉದ್ಧಾರ ಮಾಡಿದ್ದಾರೆ? ಏಕೆ ವ್ಯವಸಾಯದ ಉತ್ಪನ್ನವನ್ನು ಹೆಚ್ಚಿಸಿಲ್ಲ? ನೂರಾರು ವರ್ಷಗಳಿಂದ ಈಗಿರುವ ವ್ಯವಸಾಯ ಪದ್ಧತಿಯಂತೆ ದೊಡ್ಡ ದೊಡ್ಡ ಮಾಲೀಕರು ದೇಶಕ್ಕೇನು ಉಪಕಾರ ಮಾಡಿದ್ದಾರೆ? 35 ಸಾವಿರ ಎಕರೆ, 25 ಸಾವಿರ ಎಕರೆ ಇಟ್ಟುಕೊಂಡು ಏನು ಸಹಾಯ ಮಾಡಿದ್ದಾರೆ? ಶ್ರೀ ವಿನೋಬಾಭಾವೆಯವರು ನಮ್ಮ ಸಂಸ್ಥಾನಕ್ಕೆ ಬಂದಾಗ ಕಾಂಗ್ರೆಸ್ ಭಕ್ತರು ಎಷ್ಟು ಜಮೀನನ್ನು ಕೊಟ್ಟರು? ಇದೊಂದೂ ಅರ್ಥವಾಗುವುದಿಲ್ಲ. ಎಪ್ಪತ್ತೈದು ದಿವಸ ಚರ್ಚೆ ನಡೆಯಿತು.

ಶ್ರೀ ಬಿ. ಬಸವಲಿಂಗಪ್ಪ.—ಪಿ. ಎಸ್. ಪಿ. ಎಷ್ಟು ಕೊಟ್ಟಿದೆ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾವೂ ಭೂಧಾನ ಪ್ರಶ್ನೆಯನ್ನು, ತತ್ವವನ್ನು ಒಪ್ಪಿದ್ದೇವೆ. ನಮ್ಮ ಪಕ್ಷದವರಲ್ಲಿ ಜಮೀನಿದ್ದರೆ ಕೊಡುತ್ತಿದ್ದರು. ನಮ್ಮನ್ನು ಒಂದು ಮೀಟಿಂಗಿಗೆ ಕರೆಯುವುದೂ ಕಷ್ಟ; ಪಿ. ಎಸ್. ಪಿ. ಗೆ ಒಂದು ಇನ್ವಿಟೇಷನ್ ಸಹ ಇಲ್ಲ. ಮಾನ್ಯ ಕಾಂಗ್ರೆಸ್ ಮಿತ್ರರು ಕಾಂಗ್ರೆಸ್ ಧ್ಯೇಯ ಪರಿಪಾಲನೆ ಮಾಡುವವರು ಸೀಲಿಂಗ್ ನಿಷ್ಕರ್ಷೆಮಾಡುವಾಗ ಒಂದು ಕ್ಷೇತ್ರದಲ್ಲಿ ಮಾಡಬೇಕು, ಮತ್ತೊಂದು ಕ್ಷೇತ್ರದಲ್ಲಿ ಬೇಡ ಎಂದು ವಾದಿಸಿರುವುದು, ಏಕಕಾಲದಲ್ಲಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿರುವುದು ಆಶ್ಚರ್ಯವನ್ನುಂಟುಮಾಡಿದೆ. ಒಂದು ಕಡೆ ಕನಿಷ್ಠ ಪರಿಮಿತಿ ನೂರು ರೂಪಾಯಿರಬೇಕು, ಇನ್ನೊಂದು ಕಡೆ ಸಾವಿರ ರೂಪಾಯಿಗಳಿರಬೇಕು ಎಂದು ಪ್ರತಿಪಾದಿಸುವುದು ಕಾಂಗ್ರೆಸ್ ಪಕ್ಷದ ತತ್ವವೇನಿದೆಯೋ ಅದಕ್ಕೆ ವಿರುದ್ಧ. ಮುಖ್ಯವಾದ ಭೂಸಮಸ್ಯೆಯನ್ನು ಪರಿಹರಿಸುವಾಗ ಇಲ್ಲದ ಸಲ್ಲದ ವಾದಗಳನ್ನು ತಂದು ನೋಡೋಣ, ಬೀಸೋ ದೊಣ್ಣೆಗೆ ತಲೆ ತಪ್ಪಿಸಿಕೊಂಡರೆ ನೂರುವರ್ಷ ಆಯುಸ್ಸು ಎಂದು ಏನೇನೋ ಹೇಳುವುದು ಸರ್ವಥಾ ಸರಿಯುಲ್ಲ.

ಶ್ರೀಮಾನ್ ಚನ್ನಬಸಪ್ಪನವರು ಲ್ಯಾಂಡ್ ಬ್ಯಾಂಕ್ ಸ್ಥಾಪನೆ ಮಾಡಬೇಕು, ತಕ್ಷಣ ಹಣ ಒದಗಿಸಬೇಕು ಎಂದು ಹೇಳಿದರು. ಅದು ಸಾಧ್ಯವಾಗುವುದಾದರೆ ಸರ್ಕಾರದ ದ್ರವ್ಯದ ಅಭಾವ ನೀಗಿ ಹಣ ಸಿಕ್ಕುವುದಾದರೆ ಬಹಳ ಒಳ್ಳೆಯದು. ಆದರೆ, ಶ್ರೀಮಾನ್ ಚನ್ನಬಸಪ್ಪನವರು ನನಗಿಂತ ಎಷ್ಟೋ ಅನುಭವವುಳ್ಳವರು ಈ ರೀತಿ ಹೇಳಿರುವುದು ಆಶ್ಚರ್ಯಕರ!

ಸ್ವಾಮಿ, ಇನ್ನು ಅಳಿಯಸಂತಾನದ ವಿಷಯ ಮಾತನಾಡುತ್ತಾ ದಕ್ಷಿಣ ಕನಡಾದ ಮಿತ್ರರು ತಮಗೆ ದಕ್ಷಿಣ ಕನಡಾದ ಸಂಬಂಧವೇನೂ ಇಲ್ಲವೆಂದು ಹೇಳಿದರು. ನನಗೆ ಒಂದಲ್ಲ ಒಂದು ರೀತಿಯಲ್ಲಿ ಅಲ್ಲಿನ ಸಂಬಂಧ ಹೆಚ್ಚಿಸಿಕೊಳ್ಳಬೇಕೆಂಬ ಅಭಿಲಾಷೆಯಿದೆ. ಅಳಿಯಸಂತಾನ ಪದ್ಧತಿಯ ಕಡೆ ಹೆಚ್ಚು ಗಮನ ಕೊಟ್ಟಿಲ್ಲ; ಆದ್ದರಿಂದ ಜತ್ತಿ ಸಮಿತಿ ವರದಿಯ ಆಧಾರದ ಮೇಲೆ ರಚಿಸುವ ಮಸೂದೆಯನ್ನು ದಕ್ಷಿಣಕನಡಾ ಜಿಲ್ಲೆಗೆ ಅನ್ವಯಿಸಕೂಡದು ಎಂದು ವಾದ ಮಾಡಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಅದೂ ಕಾಂಗ್ರೆಸ್ ಪಕ್ಷದವರು, ಹಿಂದೆ 15 ವರ್ಷ ದಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾಗಿದ್ದವರು ಈ ರೀತಿ ಸಲಹೆ ಮಾಡಿರುವುದು ಹೆಚ್ಚಿನ ಆಶ್ಚರ್ಯವನ್ನುಂಟುಮಾಡಿದೆ. ಆ ಪ್ರದೇಶಕ್ಕೇ ಒಂದು ಕಾನೂನು, ಇತರ ಪ್ರದೇಶಗಳಿಗೇ ಒಂದು ಕಾನೂನು ಹೀಗೆ ಭಿನ್ನ ಭಿನ್ನವಾದ ಕಾನೂನನ್ನು ಜಾರಿಗೆ ತರಬೇಕೆಂದು ಸಲಹೆ ಮಾಡಿದ್ದಾರೆ. ಸಮನ್ವಯದೃಷ್ಟಿಯಿಂದ ಎಲ್ಲಾ ಕ್ಷೇತ್ರಗಳಲ್ಲೂ ಒಂದೇ ಸಮನಾದ ಯೂನಿಫಾರಂ ಲೀಸ್ ಜಾರಿಗೆ ಬರಬೇಕೆಂದು ಪ್ರಯತ್ನ ಮಾಡಿರುವಾಗ ಜತ್ತಿ ಸಮಿತಿ ವರದಿಯ ಮೇಲೆ ಭಿನ್ನಾಭಿಪ್ರಾಯಪಟ್ಟು ಭಿನ್ನ ಭಿನ್ನವಾದ ಶಾಸನ ಜಾರಿಗೆ ತರುವುದು ಎಷ್ಟುಮಟ್ಟಿಗೆ ಸಾಧುವಾದುದು, ಎಷ್ಟು ನ್ಯಾಯವಾದುದು ಎಂಬುದನ್ನು ಊಹೆ ಮಾಡಬೇಕು.

ಇನ್ನು ಕೋ-ಆಪರೇಟಿವ್ ಫಾರ್ಮಿಂಗ್ ವಿಷಯವನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡತ್ತೇನೆ. ಈ ವಿಷಯದಲ್ಲಿ ಅನುಭವ ಹೇಳದೆ ಅರ್ಥವಾಗುವುದಿಲ್ಲ.

5-30 P.M.

ನಮ್ಮ ಎದುರು ಪಕ್ಷದವರಾದಂಥ ಆಡಳಿತ ಪಕ್ಷದವರು, ಅನೇಕ ವೇದಿಕೆಗಳಿಂದ ತಾವು ಸಹಕಾರ ಸಾಮ್ರಾಜ್ಯ ಸ್ಥಾಪನೆ ಮಾಡುತ್ತೇವೆ, ಕೋ-ಆಪರೇಟಿವ್ ಕಾಮನ್‌ವೆಲ್ತ್‌ನ ರಚನೆ ಮಾಡುತ್ತೇವೆ ಎಂದು ಹೇಳುತ್ತಿದ್ದವರು, ಗ್ರಾಮರಾಜ್ಯ ಕನಸಿನಲ್ಲೂ ಇಲ್ಲದಿದ್ದುದನ್ನು ನೆನಪಿನಲ್ಲುಂಟು ಮಾಡುತ್ತೇವೆ ಎಂದು ಹೇಳಿದವರು, ಇಂದು ಆ ಪಕ್ಷ ಪ್ರತಿನಿಧಿಗಳಾಗಿ ನಿಂತು ಅದೂ ಏಕೈಕ ಪ್ರತಿನಿಧಿಗಳಾಗಿ ನಿಂತು ''ಕೋ-ಆಪರೇಟಿವ್ ಫಾರ್ಮಿಂಗ್ ಬೇಡ'' ಎಂದು ಹೇಳಿದರಲ್ಲಾ! ಇವರ ವಾದ ನನಗೆ ಅರ್ಥವಾಗುವುದಿಲ್ಲ. ಕೋ-ಆಪರೇಟಿವ್ ಫಾರ್ಮಿಂಗ್ ಎನ್ನುವುದು ಇತರ ರಾಷ್ಟ್ರಗಳಲ್ಲಿ ತಲೆಯೆತ್ತಿ ಬೆಳೆಯುತ್ತಿರುವಾಗ ಇಲ್ಲೇಕೆ ಆಗುವುದಿಲ್ಲ

(ಶ್ರೀ ಜೆ. ಬಿ. ಮಲ್ಲಾರಾಧ್ಯ)

ವೆಂದು ನಾನು ಅವರನ್ನು ಪ್ರಶ್ನಿಸುತ್ತೇನೆ. ಇದು ನಿಜ. ಕೋ-ಆಪರೇಟಿವ್ ಫಾರ್ಮಿಂಗ್ ಮುಂದುವರಿಯಬೇಕಾದರೆ ನಮ್ಮಲ್ಲಿ ಹೆಚ್ಚಿನ ಯೋಗ್ಯತೆಯಿರುವವರು ಬೇಕು, ಇದರಲ್ಲಿ ಹೆಚ್ಚಿನ ಆಸಕ್ತಿಯಿರುವವರು ಬೇಕು ; ನಮ್ಮಲ್ಲಿ ಹೆಚ್ಚಿನ ಶೀಲವಿರಬೇಕು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಜನರ ಸೇವೆ ಮಾಡುವ ಮನೋಭಾವನೆಯುಳ್ಳವರು ಹೆಚ್ಚಿನ ಸಂಖ್ಯೆಯಲ್ಲಿ ನಮಗೆ ದೊರಕಬೇಕು. ಈ ಹೊತ್ತು ಸಹಕಾರ ತತ್ವ ಮುಂದುವರಿಯದಿದ್ದರೆ, ಅದಕ್ಕೆ ಕಾರಣ ನಿಸ್ವಾರ್ಥ ಸೇವಾ ತತ್ಪರರ ಅಭಾವ, ಸಾರ್ವಜನಿಕ ಸೇವಾ ಮನೋಭಾವವುಳ್ಳವರ ಅಭಾವ. ಈ ಹೊತ್ತು ಕೋ-ಆಪರೇಟಿವ್ ಫಾರ್ಮಿಂಗ್ ಬಿಟ್ಟು, fragmentation of holding ಆಗುವುದಕ್ಕೆ ಎಡೆ ಕೊಟ್ಟರೆ ಏನಾಗುತ್ತದೆಂದು ಹೇಳುತ್ತೇನೆ. ಒಂದು ಗ್ರಾಮದಲ್ಲಿ 500 ಜನರಿದ್ದಾರೆನ್ನೋಣ. 30 ಫ್ಯಾಮಿಲಿ ಹೋಲ್ಡಿಂಗ್‌ಗಳೇ ಇರಬಹುದು. ಪ್ರತಿಯೊಬ್ಬ ಹಿಡುವಳಿದಾರನೂ ಬೇರೆ ಬೇರೆಯಾಗಿದ್ದು mechanised cultivation ನನ್ನಾಗಲಿ ಆಧುನಿಕ ಪದ್ಧತಿಯಲ್ಲಿ ಪ್ರಯೋಗಗಳನ್ನು ನಡೆಸುವುದಾಗಲಿ ಸಾಧ್ಯವಾಗುವುದಿಲ್ಲ. ಶಾಸ್ತ್ರೀಯವಾಗಿ ವ್ಯವಸಾಯ ನಡೆಸುವ ತಾಕತ್ತು ಇರುವುದಿಲ್ಲ ಎಂದು ಹೇಳುವ ಜನ, ಎಲ್ಲರೂ ಸೇರಿಕೊಂಡು ಸಹಕಾರ ತತ್ವದ ಪ್ರಕಾರ ವ್ಯವಸಾಯವನ್ನೇಕೆ ಮಾಡಕೂಡದು. ಏಕೆ ಹತ್ತು ಹದಿನೈದು ಕ್ಷೇತ್ರಗಳಲ್ಲಿ ಸರ್ಕಾರ ಇದನ್ನು ರೂಢಿಗೆ ತರಲು ಪ್ರೋತ್ಸಾಹ ಕೊಟ್ಟು, ಅದರ ಬಗ್ಗೆ ಹೆಚ್ಚಿನ ಗಮನ ವಿಟ್ಟು ಆದರ್ಶ ರೀತಿಯಲ್ಲಿ ಅದು ಮುಂದುವರಿಯುವಂತೆ ಒಂದು ಪ್ರದರ್ಶನ ಮಾಡಕೂಡದು ಎಂದು ನಾನು ಕೇಳುತ್ತೇನೆ. ಯಾರು ಯಾರು ಸಹಕಾರ ತತ್ವದಲ್ಲಿ ಆಸಕ್ತಿಯುಳ್ಳವರಾಗಿದ್ದಾರೋ ಅವರೆಲ್ಲ ಏಕತ್ರ ಸೇರಲಿ; ಎಲ್ಲ ರಾಜಕೀಯ ಪಕ್ಷದ ಜನರೂ ಇದರಲ್ಲಿ ಕೈಗೂಡಿಸುವಂತೆ ಮಾಡಲಿ; ಹತ್ತಾರು ಗ್ರಾಮಗಳನ್ನು ಈ ದೃಷ್ಟಿಯಿಂದಲೇ ವಿಂಗಡಿಸಿ ನೇರವಾದ ಪ್ರಯತ್ನ ನಡೆಸೋಣ. ಆಗ್ಗೆ ಸಹಕಾರ ಪದ್ಧತಿ ಏಕೆ ಸಫಲವಾಗುವುದಿಲ್ಲ ? ಇದೇ ಪೂಜ್ಯ ಮಹಾತ್ಮಾಜೀಯವರ ಉದ್ದೇಶವಾಗಿರಲಿಲ್ಲವೇ ? ರಾಮರಾಜ್ಯವಾಗುವುದಕ್ಕೆ ಇದು ಪ್ರಥಮ ಹೆಜ್ಜೆಯಾಗಿದೆ. ಯಾರು ಸುಮ್ಮನೆ ಸಹಕಾರ ತತ್ವಬೇಕೆಂದು ಬರೀ ದೊಡ್ಡ ದೊಡ್ಡ ವೇದಿಕೆಗಳ ಮೇಲೆ ನಿಂತು ಕೂಗುತ್ತಾರೋ ಅವರಿಂದ ಇದರ ಸಾಧನೆ ಸಾಧ್ಯವಿಲ್ಲ. ವಾಸ್ತವವಾಗಿ ಸಹಕಾರ ತತ್ವದಲ್ಲಿ ನಂಬಿಕೆಯಿರುವ ಜನರು ಮುಂದೆ ಬಂದರೆ ಮಾತ್ರ ಇದನ್ನು ಸಾರ್ಥಕ ಮಾಡುವುದಕ್ಕೆ ಸಾಧ್ಯವಾದೀತು.

ಕೊನೆಯದಾಗಿ ಶ್ರೀಮಾನ್ ಚೆನ್ನಬಸಪ್ಪನವರು ಈ ಬಿಲ್ಲಿನ ವಿಚಾರವಾಗಿ ಮಾತನಾಡುತ್ತಾ ಇದರಿಂದ ಏನೇನು ಉದ್ದೇಶಗಳು ಸಫಲವಾಗಬೇಕೆಂದಿದೆಯೋ ಆ ಉದ್ದೇಶಗಳು ಇಲ್ಲಿ ಹೇಳಿರುವ ರೀತಿ ಮಾಡುವುದರಿಂದ ಈಡೇರುವುದಿಲ್ಲ, Development of personalityಗೆ ಹಳ್ಳಿಗಾಡಿನಲ್ಲಿ ಅವಕಾಶವಿರುವುದಿಲ್ಲ, ಹಳ್ಳಿಯಲ್ಲಿ leadership ಹಾಳಾಗುತ್ತದೆ, ವ್ಯವಸಾಯ ಮಾಡುವುದಕ್ಕೆ Right type of people ಮುಂದೆ ಬರುವುದಿಲ್ಲ ಎಂದು ನಾನಾ ವಿಧವಾಗಿ ಟೀಕೆ ಮಾಡಿದರು. ನಾನು ಅವರನ್ನು ಒಂದು ಪ್ರಶ್ನೆ ಮಾಡುತ್ತೇನೆ. ಈಗಿರತಕ್ಕ ವ್ಯವಸಾಯ ಪದ್ಧತಿಯಿಂದ ಅವರೀಗ ಹೇಳಿದ ಎಲ್ಲ ವಿಷಯಗಳೂ ಯಶಸ್ವಿಯಾಗಿ ಸಫಲಗೊಳ್ಳುವಂತೆ ಅವರು ಮಾಡಿದ್ದಾರೆಯೇ ? Development of personality ಅಂದರೆ ಮನುಷ್ಯನ ವ್ಯಕ್ತಿತ್ವವನ್ನು ಯೋಗ್ಯ ರೀತಿಯಲ್ಲಿ ನಿರೂಪಿಸುವುದಕ್ಕೆ ನಿಮ್ಮಿಂದೀಗ ಸಾಧ್ಯವಾಗಿದೆಯೇ ? ಅಥವಾ Social Justice–ಸಾಮಾಜಿಕ ನ್ಯಾಯ ಎಲ್ಲ ವಿಷಯಗಳಲ್ಲೂ ಉಂಟಾಗಿದೆಯೇ ? ಒಂದು ಸಾಧಾರಣ industrial Co-operative ಸೊಸೈಟಿಯನ್ನೇ ತೆಗೆದುಕೊಂಡರೂ, ಅಲ್ಲಿ ಈಗ ನೀವು ಯಾವ ಜನಕ್ಕೆ ಅವಕಾಶ ಕೊಡುತ್ತಿದ್ದೀರಿ ? ನೋಡಿ, ರೂರಲ್ ರಿ-ಕನ್‌ಸ್ಟ್ರಕ್ಷನ್ ಮಾಡುತ್ತೇವೆಂದು ಹೇಳಿ ಗ್ರಾಮಸುಧಾರಕರೆಂದು ಮಾಡಿದಿರಿ ; ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಗಳೆಂದು ಮಾಡಿದಿರಿ ; ಇಷ್ಟೆಲ್ಲ ಮಾಡಿಯೂ, ಸ್ವಾತಂತ್ರ್ಯ ಬಂದು ಹತ್ತು ವರುಷಗಳ ಕಾಲ ದೊಡ್ಡದಾಗಿ ರಾಜ್ಯಭಾರಮಾಡಿಯೂ, ಹಳ್ಳಿಗಾಡಿನಲ್ಲಿ Leadership ಬೆಳೆಸುವುದಕ್ಕೆ ಸಾಧ್ಯವಾಗಲಿಲ್ಲವೆಂದು ಹೇಳುತ್ತೀರಲ್ಲಾ ? ಸಹಕಾರ ತತ್ವದಲ್ಲಿ ಯೋಗ್ಯವಾದ ದೃಷ್ಟಿಯಿರತಕ್ಕ ಜನರು, ಶಕ್ತಿವಂತರಾದ, ಉತ್ಸಾಹಿಗಳಾದ ಜನರು ಮುಂದೆ ಬರುವುದಿಲ್ಲವೆಂದು ಹೇಳುತ್ತೀರಲ್ಲಾ ! ನಿಮ್ಮ ರಾಜ್ಯಭಾರದ ವಿಚಕ್ಷಣೆ ನನಗೆ ಅರ್ಥವಾಗುವುದಿಲ್ಲ. ಈಗಲೂ ನೀವು ಸರಿಯಾದ ವಾತಾವರಣವನ್ನು ಕಲ್ಪಿಸುವುದಾದರೆ ಅನೇಕ ಜನ ವಿದ್ಯಾವಂತರು, ಬುದ್ಧಿವಂತರು, ದುಡ್ಡಿಲ್ಲದವರು ಇಂಥ ವ್ಯವಸಾಯಕ್ಷೇತ್ರಗಳಲ್ಲಿ ಹೋಗಿ ನೆಲೆಸುವುದಕ್ಕೆ ಸಿದ್ಧವಾಗಿದ್ದಾರೆಂದು ನಾನು ಹೇಳಬಲ್ಲೆ. ಹೀಗಿರುವಲ್ಲಿ ಜತ್ತಿ ಸಮಿತಿಯ ಅನುಸರಣೆಯಿಂದ ಬರುವುದಿಲ್ಲವೆಂದು ಹೇಳುವುದು ಸರಿಯಲ್ಲ.

ಈ ಆಡಳಿತ ಪಕ್ಷದವರು ತಮ್ಮ ಧ್ಯೇಯ ಸುಖೀರಾಜ್ಯ ಸ್ಥಾಪನೆಯೆಂದು ಹೇಳಿದ್ದಾರೆ. ಶೇಕಡ 72 ಜನರಿಗೆ ಮೀರಿರತಕ್ಕ ಸಂಖ್ಯೆಯವರು ವ್ಯವಸಾಯವನ್ನು ಮುಖ್ಯ ಕಸಬಾಗಿ ಅವಲಂಬಿಸಿರತಕ್ಕ ನಮ್ಮ ದೇಶದಲ್ಲಿ ಭೂಸುಧಾರಣೆಯೆನ್ನುವುದು ಸುಖೀ ರಾಜ್ಯಸ್ಥಾಪನೆಗೆ ಹೆಚ್ಚಿನ ಸಹಕಾರಿಯಾದ ಪದ್ಧತಿಯೆಂಬುದನ್ನು ಯಾರೂ ಮರೆಯಲಾಗದು. ಈ ಏರ್ಪಾಡು ಜತ್ತಿ ಸಮಿತಿಯ ಸಲಹೆಯಾಗಿ, ಅದರ ಮೇಲೆ ರಚನೆಯಾಗತಕ್ಕ ಶಾಸನ ಯಶಸ್ವಿಯಾಗಿ ಮುಂದುವರಿಯಬೇಕಾದರೆ, ನಿಜವಾದ ಸಾರವತ್ತಾದ ಶಕ್ತಿ ಎಲ್ಲಿದೆಯೆಂಬುದನ್ನು ನೋಡಬೇಕು. ಆ ಶಕ್ತಿ ಜನರ ಹೃದಯದಲ್ಲಿದೆ. ಯಾರು ಪ್ರಜಾ ಮುಖಂಡರೋ, ಯಾರು ಜನರ ಹಿತ ದೃಷ್ಟಿಯನ್ನು ಸಾಧನೆ ಮಾಡಬೇಕೆಂದಿದ್ದಾರೆಯೋ ಅವರ ಹೃದಯವನ್ನು ಅವಲಂಬಿಸಿದೆ. ಅವರು ಭೂಮಾಲೀಕರುಗಳಾಗಲೀ, ರಾಜಕಾರಣಿಗಳಾಗಲಿ ಎಲ್ಲರೂ ಅವರ ಹೃದಯವನ್ನು ಪರಿವರ್ತನೆ ಮಾಡಬೇಕು ಮತ್ತು ಈ ಸುಧಾರಣೆಯನ್ನು ಸ್ವಾಗತಿಸಬೇಕು. ಆಗ ಮಾತ್ರ ಈ ಸಮಿತಿಯ ವರದಿಗೆ ಪುರಸ್ಕಾರ ದೊರೆಯುತ್ತದೆ ಮತ್ತು ಅದು ಜಾರಿಗೆ ಬರುತ್ತದೆ.

ಇನ್ನೊಂದೇನೆಂದರೆ, ಶ್ರದ್ಧೆ ಮತ್ತು ಆಸಕ್ತಿಯಿಂದ ಕೆಲಸಗಾರರನ್ನು ಸ್ಫೂರ್ತಿಗೊಳಿಸಬೇಕು. ಒಂದು ಮಾತಿನಲ್ಲಿ ಹೇಳುವುದಾದರೆ, ಧೈರ್ಯವಾಗಿ ನಮ್ಮ ಧ್ಯೇಯ ಧೋರಣೆಗಳನ್ನು ನಾವು ಪ್ರಜೆಗಳ ಮುಂದಿಡಬೇಕು. ಈ ರೀತಿಯ ಧೈರ್ಯದ ವಿಷಯದಲ್ಲಿ ಕಾಂಗ್ರೆಸ್ಸಿನವರು ಹೋಗುತ್ತಿರುವ ರೀತಿ ನೋಡಿದರೆ, ಅವರು, “Prudence is not the better part of valour”—ಈ ನೀತಿಯನ್ನು ಅವಲಂಬಿಸಿರುವಹಾಗೆ ಕಾಣುತ್ತೆ : Prudence is not the better part of valour but courage is the better part of prudence ಎಂದರೆ ಶಕ್ತಿಗಿಂತ, ಧೈರ್ಯಕ್ಕಿಂತ ಯುಕ್ತಿ ಮೇಲು ಎನ್ನುವುದಕ್ಕೆ ಬದಲಾಗಿ ಯುಕ್ತಿಗಿಂತ ಧೈರ್ಯ ಮೇಲು ಎಂಬುದನ್ನು ಅಭ್ಯಾಸಿಸಲೆಂದು ನಾನು ಸೂಚಿಸುತ್ತೇನೆ. ಇವರಿಗೆ ಧೈರ್ಯ ಸಾಲದು. ಇವರ ನೀತಿ ಬದಲಾವಣೆಯಾಗಬೇಕು. ಧೈರ್ಯದಿಂದ ವರ್ತಿಸುವುದನ್ನು ಕಲಿಯಬೇಕು. ಇವರಿಗೆ ಸಾಧ್ಯವಿಲ್ಲದಿದ್ದರೆ ಎದುರುಪಕ್ಷದವರಿಗಾದರೂ ಅವಕಾಶಕೊಡಲಿ ; ನಾವು ಧೈರ್ಯದಿಂದ ಮಾಡಿ ತೋರಿಸುತ್ತೇವೆ.

ಒಬ್ಬ ಕಾಂಗ್ರೆಸ್ ಸದಸ್ಯರು.—ಅದಕ್ಕೇ ಇಷ್ಟರಲ್ಲೇ ಬದಲಾಯಿಸುತ್ತೇವೆ. ಅಲ್ಲಿಯವರೆಗೆ ತಾಳಿ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಇನ್ನೊಂದೇನೆಂದರೆ, ಈ ಸರ್ಕಾರ, ಆಡಳಿತಪಕ್ಷ, ಅಧಿಕಾರ ವಹಿಸಿಕೊಂಡಿರತಕ್ಕ ಜನ ಈಗ್ಗೆ ಎರಡೇ ಅಥವ ಒಂದೇ ವರ್ಷದ ಕೆಳಗೆ ಕಾಂಗ್ರೆಸ್ ಸೆಕ್ಷನ್ನಿನಲ್ಲಿ ಏನು ಹೇಳಿದರೋ, ಆ ಭೂ ಸುಧಾರಣೆಯ ವಿಚಾರದಲ್ಲಿ ಇವರು ಮಾಡಿರತಕ್ಕ ಪ್ರಯತ್ನವನ್ನು ನೋಡಿದರೆ ಹೇಗೆ ತೋರುತ್ತದೆಂದರೆ, ಪಂಜರದಲ್ಲಿ ಸಿಕ್ಕಿಕೊಂಡು ಪೇಚಾಡುತ್ತಿರುವ ಅಳಿಲಿನ ಹಾಗೆ. It is like the energetic vitality of a squirrel running in the cage ಎಂದು ಹೇಳಬೇಕಾಗುತ್ತದೆ.

ಕೊನೆಯದಾಗಿ ಒಂದು ಮಾತು ನಾನು ಹೇಳಿ ಮುಗಿಸುತ್ತೇನೆ. ಈ ಸುಧಾರಣೆ ಯಶಸ್ವಿಯಾಗಬೇಕಾದರೆ ಮುಖ್ಯವಾಗಿ ಒಂದು ಮಾಡಬೇಕು: ಯಾವ ಸ್ವಾತಂತ್ರ್ಯದ ಹೋರಾಟದಲ್ಲಿ ಜನರನ್ನೆಲ್ಲಾ ಸ್ಫೂರ್ತಿಗೊಳಿಸಿ, ಒಂದು ತತ್ವದ ದೃಷ್ಟಿಯಿಂದ ಹುಮ್ಮಸ್ಸಿನಿಂದ ಕೆಲಸಮಾಡಬೇಕೆಂದು ಪ್ರೇರೇಪಿಸಿದೆವೋ ಅದೇ ತರದ ಪ್ರೇರೇಪಣೆ ಈಗ ಆಗಬೇಕಾಗಿದೆ. ಈ ಬಗ್ಗೆ ಆಡಳಿತಪಕ್ಷದವರೂ ಮತ್ತು ಇತರ ಪಕ್ಷಗಳವರೂ ಸೇರಿ ಇಡೀ ಜನತೆಯನ್ನು ಬಹಳಮಟ್ಟಿಗೆ ಒಂದು ಕ್ರಾಂತಿಯಕಡೆಗೆ ಹೊಡೆದೆಬ್ಬಿಸಿ, ಆ ಕ್ರಾಂತಿಯ ಕಿಡಿ, revolutionary impulse ನಶಿಸಿ ಹೋಗದಂತೆ ಶ್ರಮಿಸಬೇಕು ; ಅದು ಪ್ರಜ್ವಲಿಸುವಂತೆ ಮಾಡಬೇಕು. ಅದಕ್ಕೆ ಬದಲು ನೀವು ಇಂದು ನಿಮ್ಮ ಒಳ ಹೋರಾಟದಲ್ಲಿ ತೊಡಗಿ ಆ ಕ್ರಾಂತಿಯ ಕಿಡಿಗೆ ನೀರು ಹುಯ್ಯುತ್ತಿದ್ದೀರಿ ; ಆ revolutionary impulse ನಿಂದ ಜನರು ಮುನ್ನುಗ್ಗಿ ಕೆಲಸಮಾಡುವಂತೆ ಚೇತನಗೊಳಿಸಬೇಕು. ಈ ದೃಷ್ಟಿಯಿಂದ ಹೊರಟರೆ, ನಾವು ಮುಂದುವರಿಯುವುದಕ್ಕೆ ಸಾಧ್ಯವೇ ಹೊರತು ಇಲ್ಲದಿದ್ದರೆ ಸಾಧ್ಯವೇ ಇಲ್ಲ.

ಇನ್ನು, ಒಂದೇ ಒಂದು ಎಚ್ಚರಿಕೆಯ ಮಾತನ್ನು ನನ್ನ ಮಾನ್ಯ ಮಿತ್ರರಿಗೆ ಹೇಳಬೇಕು. ಈ ಶಾಸನವನ್ನು ಜಾರಿಗೆತರುವಾಗ ನಾನು ಮೊದಲೇ ಹೇಳಿದಂತೆ ಪಕ್ಷ, ಪರಪಕ್ಷ ಎಂಬ ಭೇದ ಬೇಡ. ಇದು ನಮ್ಮ ಪ್ರಶ್ನೆ, ಅದು ನಿಮ್ಮ ಪ್ರಶ್ನೆ ಎನ್ನುವುದು ಬೇಡ. ಇಡೀರಾಷ್ಟ್ರದ ಪ್ರಶ್ನೆ ಇದು ಎಂಬುದು ಎಲ್ಲರಿಗೂ ಮನವರಿಕೆಯಾಗಲಿ. ಅಧಿಕವಾದ ಪ್ರಮಾಣದಲ್ಲಿ ಆಹಾರದ ಉತ್ಪನ್ನವಾಗದೆ ಇದ್ದರೆ ನಾವು ಎಂದೂ ಮುಂದಕ್ಕೆ ಹೋಗುವುದಿಲ್ಲ. ಎಲ್ಲರೂ ಮಿಳಿತವಾಗಿ ಹಣವನ್ನು ಯಾವರೀತಿಯಾದರೂ ಹೊಂದಿಸಿಕೊಂಡು, ಈ ಶಾಸನವನ್ನು ಜಾರಿಗೆ ತರಬೇಕೆಂಬ ಸತ್ಯ ಸಂಕಲ್ಪ ಮಾಡಬೇಕೇ ಹೊರತು, ನಾವು ಹೇಳುವುದಕ್ಕೆ ಪ್ರತಿಯಾಗಿ ನೀವು ಹೇಳುವುದು, ನೀವು ಹೇಳುವುದಕ್ಕೆ ಪ್ರತಿಯಾಗಿ ನಾವು ಹೇಳುವುದು ಬೇಡ. ಪಕ್ಷಭೇದ ಮಾತ್ರ ಈ ವಿಷಯದಲ್ಲಿ ಬರುವುದು ಬೇಡ. ಒಟ್ಟಿನಲ್ಲಿ ಮೈಸೂರಿನಲ್ಲಿ ನಾವೇನು ಶಾಸನ ಮಾಡುತ್ತೇವೆ ಅದು ಇಡೀ ಭರತಖಂಡಕ್ಕೇ ಮಾರ್ಗದರ್ಶಕವಾಗಬೇಕು ಎಂಬ ಒಂದೇ ದೃಷ್ಟಿಯಿಂದ ಚರ್ಚೆ ಮಾಡೋಣ. ಸರ್ವರ ಅಭಿಪ್ರಾಯವನ್ನೂ ಸಮನ್ವಯಗೊಳಿಸುವ ದೃಷ್ಟಿಯಿಂದ ಭಾಗವಹಿಸೋಣ. ಮಾನ್ಯ ಮಿತ್ರರು ಕೆಲವರು ಇದನ್ನು ಮರೆತು, ಸಣ್ಣಪುಟ್ಟ ಆರೋಪಗಳನ್ನು ಜತ್ತಿ ಸಮಿತಿಯವರಮೇಲೆ ಮಾಡಿದ್ದಾರೆ. ಅವರು ಹೋದಾಗ ತಮ್ಮನ್ನು ನೋಡಲಿಲ್ಲ, ಮಳೆ ಬಂದಿತ್ತು.—ಈ ವಿಧವಾದ ಟೀಕೆಗಳನ್ನು ಮಾಡುವುದು ಅಸಾಧುವಾದದ್ದು ; ಮತ್ತು ಬಹುಶಃ ಈ ನಾಗರೀಕ ಸಮಾಜದಲ್ಲಿ ಇಂಥ ಆರೋಪಣೆಗಳನ್ನು ಮಾಡಕೂಡದು. ನಾನು ಅನೇಕ ಖಾಸಗಿ ಕಮಿಟಿಯಲ್ಲಿಯೂ ಕೆಲಸಮಾಡಿ ನೋಡಿದ್ದೇನೆ ; ಸರ್ಕಾರಿ ಕಮಿಟಿಯಲ್ಲಿಯೂ ಕೆಲಸಮಾಡಿ ನೋಡಿದ್ದೇನೆ. ಸಮಿತಿಯವರ ಸ್ಥಾನ ಬಹಳ ಕಷ್ಟತರವಾದದ್ದು. ಒಬ್ಬ ಸದಸ್ಯರು ಹೇಳಿದರು, ಎರಡು ತಿಂಗಳಿನಲ್ಲಿ ಇಷ್ಟೊಂದು ದೊಡ್ಡ ರಿಪೋರ್ಟ್ ಬರೆಯುವುದಕ್ಕಾಗುತ್ತದೆಯೇ ? ಮೊದಲೇ ರಿಪೋರ್ಟನ್ನು ಬರೆದಿಟ್ಟುಕೊಂಡಿರಬೇಕು ; ಇಲ್ಲದಿದ್ದರೆ ಹೇಗಾಗುತ್ತದೆ ಎಂದು. ಈರೀತಿ ಹೇಳಬಾರದು. ಈ ವಿಚಾರದಲ್ಲಿ ಜತ್ತಿ ಸಮಿತಿಯವರು ಮತ್ತು ಅವರ ಸಹೋದ್ಯೋಗಿಗಳು ಏನು ಕಷ್ಟಪಟ್ಟಿದ್ದಾರೆ ಎಂಬುದು ನನಗೆ ಗೊತ್ತು. ಅವರು ಮಾಡಿರತಕ್ಕ ಕೆಲಸ ಯೋಗ್ಯವಾದದ್ದು ; ಕಷ್ಟಸಾಧ್ಯವಾದ ಕೆಲಸ ಮಾಡಿದ್ದಾರೆ. ಒಬ್ಬ ಮನುಷ್ಯನಿಗಿರತಕ್ಕ ಆಸ್ತಿಯನ್ನು ವಶಪಡಿಸಿಕೊಳ್ಳಬೇಕು ಅಥವ ಯಾವರೀತಿಯಲ್ಲಾದರೂ ಕಡಮೆಮಾಡಬೇಕೆಂಬ ವಿಚಾರದಲ್ಲಿ ಶಾಸನ ಮಾಡುವಾಗ ಎಲ್ಲರಿಗೂ ತೃಪ್ತಿಯಾಗುವುದಿಲ್ಲವೆಂಬುದು ನಿಜ. ಹೀಗಿರುವಲ್ಲಿ ಅವರು ತಮ್ಮ ಕೆಲಸವನ್ನು ಶ್ರೇಷ್ಠರೀತಿಯಲ್ಲಿ ನಿರ್ವಹಿಸಿದ್ದಾರೆಂದು ನಾನು ಹೇಳಬಲ್ಲೆ. ಈ ಮಾನ್ಯ ಸಭೆಯವರು ಅವರು ಸೂಚಿಸಿರತಕ್ಕ ಮಾರ್ಪಾಡುಗಳನ್ನು, ಮಾಡಿರತಕ್ಕ ಶಿಫಾರಸುಗಳನ್ನು ಅನುಸರಿಸಿ ಶೀಘ್ರವಾಗಿ ಜಾರಿಗೆ ತರುವುದರಲ್ಲಿ ಅನುವಾಗಬೇಕೆಂದು ಸಲಹೆಮಾಡುತ್ತಾ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸುತ್ತೇನೆ.

ಶ್ರೀ ಡಿ. ಮೂಕಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ ಈ ದಿವಸ ಭೂ ಸುಧಾರಣೆಯ ವಿಚಾರವಾಗಿ ಜತ್ತಿ ಸಮಿತಿ ವರದಿಯನ್ನು ಪರಿಶೀಲಿಸುತ್ತಿರುತ್ತೇವೆ. ಭೂಮಿಯ ವಿಚಾರ ಅತಿ ಮುಖ್ಯವಾದ ಪ್ರಶ್ನೆ ಎಂದು ಈಗಾಗಲೆ ಅನೇಕ ಸ್ನೇಹಿತರು ಹೇಳಿದ್ದಾರೆ ಮತ್ತು ನಾನೂ ಅದೇ ಅಭಿಪ್ರಾಯವನ್ನು ಪಡುತ್ತೇನೆ. ಆದರೆ ಈ ವಿಚಾರ ಈ ಮೊದಲು ಹತ್ತು ವರ್ಷಗಳಲಾಗಾಯ್ತು ಪರಿಶೀಲನೆಯಲ್ಲಿದೆ. ದೇಶದ ಬೆನ್ನುಮೂಳೆ ಎಂದು ಹೇಳಿಕೊಂಡಿರತಕ್ಕ ರೈತನ ಸ್ಥಿತಿ ಉತ್ತಮವಾಗಬೇಕಾದ್ದು ಅಗತ್ಯವಾಗಿದೆ, ಇದಕ್ಕಾಗಿ ಕಾಂಗ್ರೆಸ್ ಪಕ್ಷದವರು ಹಿಂದೆಯೇ ದೇಶದ ಬೆನ್ನುಮೂಳೆಯಾಗಿರತಕ್ಕ ರೈತನ ಸ್ಥಿತಿ ಸುಧಾರಿಸಬೇಕು ಎಂದು ಹೇಳಿದ್ದರು. ಸ್ವಾತಂತ್ರ್ಯ ದೊರಕಿ ಹತ್ತು ವರ್ಷಗಳಾದರೂ ಇದನ್ನು ಕಾರ್ಯಗತ ಮಾಡಿರುವುದಿಲ್ಲ. ದೇಶಕ್ಕಾಗಿ ದುಡಿಯತಕ್ಕ ಜನಗಳ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಮಾನ್ಯ ಸರ್ಕಾರದವರು ಒಂದು ಸಮಿತಿಯನ್ನು ನೇಮಕಮಾಡಿದರು. ಅವರ ವರದಿ ಈಗ ನಮ್ಮ ಮುಂದಿದೆ. ಇದರಬಗ್ಗೆ ಈಗಾಗಲೇ ಮಾನ್ಯ ಸ್ನೇಹಿತರನೇಕರು ಟೀಕೆ ಟಿಪ್ಪಣಿಗಳನ್ನು ಮಾಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಹೇಳುವುದಾದರೆ ಜತ್ತಿ ಸಮಿತಿಯವರು ಪ್ರಯಾಸಪಟ್ಟು ಪ್ರಾಂತಾದ್ಯಂತ ಸಂಚಾರಮಾಡಿ,

(ಶ್ರೀ ಡಿ. ಮೂಕಪ್ಪ.)

ಅಂಕಿ ಅಂಶಗಳನ್ನು ಶೇಖರಿಸಿ, ಅನೇಕ ಜನಗಳ ಅಭಿಪ್ರಾಯವನ್ನು ತಿಳಿದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಇಂಥ ವರದಿಯನ್ನು ತಯಾರುಮಾಡಿದುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತ ಕೆಲವು ಸಣ್ಣಪುಟ್ಟ ತಿದ್ದುಪಡಿಗಳೊಡನೆ ಸಮಿತಿಯ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಒಂದು ಕುಟುಂಬ ಹಿಡುವಳಿ ಎಂದರೆ ಸುಮಾರು 1,200 ರೂಪಾಯಿ ಉತ್ಪತ್ತಿ ಬರತಕ್ಕ ಸ್ವತ್ತಾಗಿರಬೇಕೆಂತಲೂ ಇದನ್ನು ಕುಟುಂಬ ಹಿಡುವಳಿ ಎಂದು ಪರಿಗಣಿಸತಕ್ಕದ್ದು ಎಂದು ಹೇಳಿದ್ದಾರೆ. ಅಲ್ಲಿಗೆ 1,200 ರೂಪಾಯಿ ಉತ್ಪತ್ತಿ ಬರಬೇಕು ಎಂದರೆ, ಸಾಧಾರಣವಾಗಿ ಒಂದು ಎಕರೆಗೆ ಎರಡು ಪಲ್ಲ ಭತ್ತ ಗೇಣಿ ಎಂದು ಲೆಕ್ಕಾಚಾರ ಹಾಕಿದರೆ 60 ಪಲ್ಲ ಗೇಣಿ ವಸೂಲುಮಾಡತಕ್ಕ ಒಬ್ಬ ಜಮೀನ್ದಾರ ಗೇಣಿ ವಸೂಲ್ಮಾಡಿಕೊಂಡು ಇರಬಹುದು ಎನ್ನುವ ಅಭಿಪ್ರಾಯವನ್ನು ಅವರು ಸೂಚಿಸಿದ್ದಾರೆ. ಹೀಗೆ 60 ಪಲ್ಲ ಭತ್ತವನ್ನು ವಸೂಲ್ಮಾಡತಕ್ಕ ಒಬ್ಬ ಜಮೀನ್ದಾರ ಗೇಣಿ ಪಡೆಯತಕ್ಕ ಸಂದರ್ಭವಿರಬೇಕಾದರೆ, ಅದಕ್ಕಿಂತಲೂ ಹೆಚ್ಚಿಗೆ ಜಮೀನಿರತಕ್ಕ ಜಮೀನ್ದಾರನಿಂದ ಮಾತ್ರ ಜಮೀನನ್ನು ಗಳಿಸಿಕೊಳ್ಳತಕ್ಕ ಹಕ್ಕುಮಾಡಿದ್ದಾರೆ. ಇದರಿಂದ ಬಹು ಜನ ಗೇಣಿದಾರರಾಗಿರುವವರು ಜಮೀನನ್ನು ಕಳೆದುಕೊಳ್ಳುತ್ತಾರೆ.

ಈ ವರದಿಯಲ್ಲಿ ಒಂದುಕಡೆ ಜಮೀನು ಮಾಲೀಕನು ಸ್ವಂತ ಸಾಗುವಳಿಗೆ ಭೂಮಿಯನ್ನು ಪಡೆಯತಕ್ಕ ಸಂದರ್ಭದಲ್ಲಿ ಭೂಮಿಯ ಒಡೆಯನಿಂದ ಅರ್ಜಿಬಂದ ಐದು ವರ್ಷದವರೆಗೂ ಗೇಣಿಯು ಮುಗಿಯತಕ್ಕದ್ದಲ್ಲವೆಂದು ಹೇಳಿದ್ದಾರೆ. ಈ ಐದು ವರ್ಷಗಳಕಾಲ ಆ ಜಮೀನಿನಲ್ಲಿ ಬೇಸಾಯ ಮಾಡಿದ ನಂತರ ಗೇಣೀದಾರನಾಗಿರತಕ್ಕ ರೈತ ಆ ಜಮೀನನ್ನು ಬಿಟ್ಟುಕೊಡಬೇಕು. ಜಮೀನ್ದಾರನಾದರೋ ಅವನಿಗೆ ಬರತಕ್ಕ ಜಮೀನಿನ ಪ್ರತಿಫಲದಿಂದ ಬೇರೆಕಡೆ ಜಮೀನು ಮಾಡಿಕೊಂಡು ವ್ಯವಸಾಯ ಮಾಡಬಹುದು, ಇನ್ನೇನಾದರೂ ಮಾಡಬಹುದು. ಆದರೆ ಗೇಣಿದಾರನಾದವನು ಈ ಐದು ವರ್ಷಗಳು ಕಳೆದನಂತರ ಹೇಗೆ ಜೀವನ ಮಾಡಬೇಕೆನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ದೇಶದಲ್ಲಿ ಗೇಣಿದಾರನಾಗಿರತಕ್ಕ ರೈತನಿಂದ ಜಮೀನ್ದಾರನಾಗಿರುವವನು ತನ್ನ ಕುಟುಂಬ ಹಿಡುವಳಿಯ ಪರಿಮಿತಿಯವರೆಗೂ ಜಮೀನನ್ನು ಸಾಗುವಳಿಮಾಡಲು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕ ಸಂದರ್ಭ ಬಂದರೆ ಆ ಜಮೀನನ್ನು ಸಾಗುವಳಿ ಮಾಡತಕ್ಕ ಗೇಣೀದಾರ, ಇದುವರೆಗೂ ಆ ಜಮೀನನ್ನೇ ತನ್ನ ಜೀವನೋಪಾಯಕ್ಕೆ ನಂಬಿಕೊಂಡಿರತಕ್ಕ ರೈತ ಮುಂದೆ ತನ್ನ ಜೀವನೋಪಾಯಕ್ಕಾಗಿ ಯಾವ ಉದ್ಯಮವನ್ನು ಮಾಡಲು ಸಾಧ್ಯವೆನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು.

ಸಮಿತಿಯವರು ತಮ್ಮ ವರದಿಯಲ್ಲಿ ಮೂಲ ಹಿಡುವಳಿಗಿಂತಲೂ ಹೆಚ್ಚು ಭೂಮಿ ಇದ್ದು, ಕುಟುಂಬ ಹಿಡುವಳಿಗಿಂತಲೂ ಕಡಮೆ ಜಮೀನು ಇರುವಾಗ ಸ್ವಂತ ಸಾಗುವಳಿಗಾಗಿ ಗೇಣೀದಾರನಿಗೆ ಕೊಟ್ಟಿದ್ದ ಜಮೀನಿನಲ್ಲಿ ಅರ್ಧ ಭಾಗವನ್ನು ವಾಪಸು ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಈ ರೀತಿ ತೆಗೆದುಕೊಳ್ಳುವುದಕ್ಕೆ ಹೋದರೆ ಒಬ್ಬ ಜಮೀನ್ದಾರನು ತನಗೆ ಇರತಕ್ಕ ಜಮೀನನ್ನ ಸಾಧಾರಣವಾಗಿ ಸಾಗುವಳಿ ಮಾಡಲು ನಾಲ್ಕಾರು ಜನರಿಗೆ ಗೇಣಿಗೆ ಕೊಟ್ಟಿರುತ್ತಾನೆ. ಆ ಸಂದರ್ಭದಲ್ಲಿ ನಾಲ್ಕಾರು ಜನ ಗೇಣೀದಾರರಿಂದಲೂ ಜಮೀನನ್ನು ತೆಗೆದುಕೊಳ್ಳಬೇಕು. ಪ್ರತಿಯೊಬ್ಬ ಗೇಣೀದಾರನ ಹತ್ತಿರವೂ ಇರುವ ಜಮೀನು ಮೂಲ ಹಿಡುವಳಿಗಿಂತಲೂ ಕಡಮೆ ಇರತಕ್ಕ ಸಂದರ್ಭದಲ್ಲಿ ಜಮೀನ್ದಾರನು ಆ ಜಮೀನನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಲು ಅವಕಾಶ ಕೊಡುವುದಕ್ಕೆ ಹೇಗೆ ಸಾಧ್ಯ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು.

ಇನ್ನು ಗೇಣಿಯನ್ನು ನಿಗದಿಮಾಡುವ ಸಂದರ್ಭದಲ್ಲಿ ನಮ್ಮ ಸ್ನೇಹಿತರು ಉದಾಹರಣೆ ಹೇಳುತ್ತ ಭಾರತದಲ್ಲೆಲ್ಲ ಮೊದಲು ಜಾರಿಗೆ ಬಂದಿರತಕ್ಕ ಬೊಂಬಾಯಿ ಪ್ರಾಂತದ ಗೇಣೀ ಶಾಸನದ ಪ್ರಕಾರ ಇದರೊಳಗೆ ಸೇರಿಸಿದ್ದಾರೆಂದು ಹೇಳಿದ್ದಾರೆ. ಆದರೆ ಈ ಕರ್ಣಾಟಕ ಪ್ರಾಂತದಲ್ಲಿ ರಾಮರಾಜ್ಯವೆಂದು ಹೇಳಿಸಿಕೊಳ್ಳತಕ್ಕ ಈ ರಾಜ್ಯದಲ್ಲಿ ಆ ಪ್ರಾಂತದಲ್ಲಿ ಈಗಾಗಲೇ ಆಚರಣೆಯಲ್ಲಿ ಬಂದಿರತಕ್ಕ ಒಂದು ಗೇಣಿಯನ್ನಾಗಲೀ, ಅಥವಾ ಒಂದು ಪರಮಾವಧಿಯನ್ನಾಗಲೀ ಏಕೆ ಅನುಷ್ಠಾನಕ್ಕೆ ತರಲಿಲ್ಲವೆನ್ನುವುದು ಅರ್ಥವಾಗುವುದಿಲ್ಲ.

ಗೇಣಿ ಕೊಡಬೇಕಾದರೆ, ಬೊಂಬಾಯಿ ಪ್ರಾಂತದಲ್ಲಿ ಸರ್ಕಾರಕ್ಕೆ ಕೊಡುವ ತರಿಗೆಯ ಐದರಷ್ಟು ಕೊಡಬೇಕೆಂದು ನಿಗದಿ ಮಾಡಿದ್ದಾರೆ. ಆದರೆ ನಮ್ಮ ಕರ್ನಾಟಕ ಪ್ರಾಂತದಲ್ಲಿ ಉತ್ಪತ್ತಿಯಲ್ಲಿ ನಾಲ್ಕನೆಯ ಒಂದು ಭಾಗವನ್ನು ಕೊಡಬೇಕೆಂದು ನಿಗದಿಮಾಡಿದ್ದಾರೆ. ನಾಲ್ಕನೆಯ ಒಂದುಭಾಗ ಎನ್ನುವುದಾದರೆ ಒಂದೊಂದು ಪ್ರದೇಶದಲ್ಲಿ ಆಯಾ ಭೂಮಿಗನುಸಾರವಾಗಿ ಒಂದೊಂದು ರೀತಿಯ ಫಸಲು ಬಂದು ಉತ್ಪತ್ತಿ ಬೇರೆಬೇರೆಯಾಗಿರುತ್ತದೆ. ಹೀಗಿರುವಾಗ ಯಾವ ಆಧಾರದ ಮೇಲೆ ನಾಲ್ಕನೆಯ ಒಂದುಭಾಗವನ್ನು ಕಂಡುಹಿಡಿಯುವುದಕ್ಕೆ ಸಾಧ್ಯ ? ಇದನ್ನು ಕಂಡುಹಿಡಿಯಬೇಕಾದರೆ ಎಷ್ಟು ಎಡರು ತೊಡರುಗಳು ಬರುತ್ತವೆ ಎಂಬುದನ್ನು ಯೋಚಿಸಬೇಕು. ಉಳುವವನೇ ಜಮೀನಿಗೆ ಒಡೆಯ ಎನ್ನುವಾಗ ಜಮೀನನ್ನು ಉಳುವವನಿಗೆ ಕೊಡಬೇಕಾದರೆ ಉತ್ಪತ್ತಿಯ ಹದಿನೈದು ಪಟ್ಟು ಕೊಡಬೇಕೆಂದು ನಿಗದಿಮಾಡಿದ್ದಾರೆ. ಒಂದು ಜಮೀನಿನಲ್ಲಿ ಹತ್ತು ಪಲ್ಲ ಬೆಳೆಯಾಗುತ್ತದೆ ಎಂದು ಲೆಕ್ಕ ಹಾಕಿದರೆ, ಐದನೆಯ ಒಂದು ಭಾಗ ಗೇಣಿ ಲೆಕ್ಕದ ಮೇಲೆ ಎರಡು ಫಲ್ಲ ಭತ್ತ ಎಂದು ಲೆಕ್ಕ ಹಾಕುತ್ತಾರೆ. ಇದರ ಹದಿನೈದರಷ್ಟು ಎಂದರೆ, ಮೂವತ್ತು ಫಲ್ಲ ಭತ್ತದ ಬೆಲೆಯನ್ನು ಜಮೀನ್ದಾರನಿಗೆ ಸಾಗುವಳಿದಾರ ಕೊಡಬೇಕೆಂದು ನಿಗದಿಮಾಡಿದಹಾಗಾಗುತ್ತದೆ. ಈ ಮೂವತ್ತು ಫಲ್ಲ ಭತ್ತಕ್ಕೆ 600 ರೂಪಾಯಿ ಬೆಲೆಯಾಗುತ್ತದೆ. ಅದೇ ಪ್ರದೇಶದಲ್ಲಿ ಈಗ ನ್ಯಾಯವಾಗಿ ಬಕರಿಗೆ ಬರತಕ್ಕ ಜಮೀನು 250 ರಿಂದ 300 ರೂಪಾಯಿ ಬೆಲೆ ಬಾಳುತ್ತದೆ. ಹೀಗಿರುವಾಗ ಪರಿಹಾರವನ್ನು ನಿಗದಿಮಾಡುವಾಗ ಉತ್ಪತ್ತಿಯು 15 ಪಟ್ಟು ಪರಿಹಾರ ಕೊಡಬೇಕೆಂದು ಹೇಳುವುದು ಸಾಧುವಲ್ಲ. ಇದು ಈಗಿನ ಮಾರ್ಕೆಟ್ ರೇಟಿಗೂ ಹೆಚ್ಚಾಗುತ್ತದೆ, ಇದನ್ನು ಕಡಮೆಮಾಡಬೇಕೆಂದು ಸೂಚಿಸುತ್ತೇನೆ.

ಇದರ ಜೊತೆಗೆ ಖಾಯಂ ಸಾಗುವಳಿದಾರ ಟೆಂಪರರಿ ಸಾಗುವಳಿದಾರ ಅಥವಾ ಹಂಗಾಮಿ ಸಾಗುವಳಿದಾರ ಎಂದಿದೆ. ಖಾಯಂ ಸಾಗುವಳಿದಾರನಿಗೆ ಖಾಯಂ ಸಾಗುವಳಿದಾರ ಎಂಟು ವರ್ಷದ ಉತ್ಪತ್ತಿಯನ್ನು ಪರಿಹಾರವಾಗಿ ಕೊಡುವುದಕ್ಕೆ ಅವಕಾಶವಿದೆ. ಖಾಯಂ ಸಾಗುವಳಿದಾರ, ಹಂಗಾಮಿ ಸಾಗುವಳಿದಾರ ಎನ್ನುವುದನ್ನು ಇದುವರೆಗೆ ನಮ್ಮ ಹಳೆಯ ಮೈಸೂರಿನಲ್ಲಿ ಜಾರಿಗೆ ತರಲಿಲ್ಲ. ಒಬ್ಬ ರೈತ

ನೂರಾರು ವರ್ಷಗಳಿಂದ ಒಂದು ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿದ್ದರೂ ಅವನು ಮಾಡಿದ್ದಾನೆ ಎನ್ನುವುದಕ್ಕೆ ಯಾವ ಆಧಾರವೂ ಗೇಣೀದಾರನಲ್ಲಿರುವುದಿಲ್ಲ. ಹೀಗಿರುವಾಗ ಖಾಯಂ ಸಾಗುವಳಿದಾರ ಎನ್ನುವುದನ್ನು ಯಾವ ಆಧಾರದ ಮೇಲೆ ನಿಗದಿಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಪರಿಶೀಲನೆ ಮಾಡಬೇಕಾಗಿದೆ. ಆದುದರಿಂದ, ಈಗಾಗಲೇ ಮೈಸೂರು ರಾಜ್ಯದಲ್ಲಿ ವಿಲೀನವಾಗಿರುವ ಪ್ರಾಂತವನ್ನು ಬಿಟ್ಟು ಹಳೇ ಮೈಸೂರು ಪ್ರಾಂತದಲ್ಲಿ ಒಂದು ತಾರೀಕನ್ನು ನಿಗದಿಮಾಡಿ, ಅಲ್ಲಿಂದೀಚೆಗೆ ಸಾಗುವಳಿ ಮಾಡಿಕೊಂಡು ಬಂದಿರುವವರನ್ನು ಖಾಯಂ ಸಾಗುವಳಿದಾರರೆಂದು ಪರಿಗಣಿಸುವುದು ಸೂಕ್ತ. ಸಾಮಾನ್ಯವಾಗಿ, ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಕಂಟ್ರೋಲ್ ಬಂದಲಾಗಾಯಿತು ಪಹಣಿಯಲ್ಲಿ ಸಾಗುವಳಿದಾರನೆಂದು ನಮೂದಾದಲಾಗಾಯಿತು ಯಾರು ಒಂದೇ ಸಮನಾಗಿ ಒಂದು ಜಮೀನನ್ನು ಸಾಗುವಳಿಮಾಡಿಕೊಂಡು ಬಂದಿದ್ದಾರೋ ಅಂಥವರನ್ನು ಖಾಯಂ ಸಾಗುವಳಿದಾರರೆಂದು ಪರಿಗಣಿಸಿ ಜಮೀನಿನ ಉತ್ಪನ್ನದ ಎಂಟು ಪಟ್ಟು ಪರಿಹಾರ ಕೊಡುವುದಕ್ಕೆ ಅವಕಾಶ ಕಲ್ಪಿಸಬೇಕೆಂದು ಹೇಳಿ ನಾನು ಇದನ್ನು ಪುಷ್ಟೀಕರಿಸುತ್ತೇನೆ.

ನನ್ನ ಮಿತ್ರರು ಕೆಲವರು ಒಂದು ವಿಚಾರವನ್ನು ಹೇಳಿದ್ದಾರೆ. ವ್ಯವಸಾಯದ ವೆಚ್ಚದ ವಿಚಾರ ಹೇಳುತ್ತಾ ನೀರಾವರಿಯುಳ್ಳ ಜಮೀನಾದರೆ ನೀರಾವರಿ ಉತ್ಪನ್ನದ ಎರಡರಷ್ಟು ನಿವ್ವಳ ಲಾಭ, ಮಳೆಯ ಬೆಳೆಯಾದರೆ ಅದರ ಮೂರನೆಯ ಒಂದು ಭಾಗ ನಿವ್ವಳ ಲಾಭವೆಂದು ಪರಿಗಣಿಸಬೇಕೆಂದು ಹೇಳಿದ್ದಾರೆ. ಆದರೆ ನಿವ್ವಳ ಎನ್ನುವುದನ್ನು ಯಾವ ಆಧಾರದ ಮೇಲೆ ಲೆಕ್ಕ ಹಾಕುತ್ತಾರೋ ಗೊತ್ತಿಲ್ಲ. ಏಕೆಂದರೆ, ವ್ಯವಸಾಯ ಮಾಡುವವರಿಗೆ ನಿವ್ವಳ ಎನ್ನುವುದನ್ನು ಕಂಡುಹಿಡಿಯುವುದು ಬಹಳ ಕಷ್ಟ. ರೈತರಲ್ಲಿ ಒಂದು ಗಾದೆ ಇದೆ. ರೈತರ ಕಷ್ಟವನ್ನು ರೈತನೇ ಬಲ್ಲ. ರೈತ ಬೀಜದ ಜೊತೆಗೆ ಹೋದರೆ ಭತ್ತದ ಜೊತೆಗೆ ಬರಬೇಕು, ಎಂದು ಹೇಳುತ್ತಾರೆ. ನಾನು ಸ್ವಂತ ವ್ಯವಸಾಯಮಾಡುವ ರೈತನಾದುದರಿಂದ ರೈತನ ಕಷ್ಟವೇನೆಂಬುದನ್ನು ಸ್ವಲ್ಪ ಮಟ್ಟಿಗೆ ತಮ್ಮ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ಒಬ್ಬ ರೈತ ಸಾಧಾರಣವಾಗಿ ಐದು ಅಥವಾ ಆರು ಎಕರೆ ಜಮೀನನ್ನು ಒಂದು ವರ್ಷದಲ್ಲಿ ಸಾಗುಮಾಡುವುದು ಸಾಧ್ಯ. ಈರೀತಿ ಐದು ಎಕರೆಯನ್ನು ಸಾಗುಮಾಡಿ, ಇದರಲ್ಲಿ ದುಡಿಯಬೇಕಾದರೆ, ತಾನು, ತನ್ನ ಹೆಂಡರು ಮಕ್ಕಳೊಡನೆ ಹಗಲೂ ರಾತ್ರಿ ಮಳೆ ಬಿಸಿಲೆಂದು ಲೆಕ್ಕ ಮಾಡದೆ ಪ್ರತಿದಿವಸವೂ ದುಡಿಯಬೇಕು. ಇದರಿಂದ ಬರುವ ಪ್ರತಿಫಲವನ್ನು ಪಡೆಯಲು ಅನಿರೀಕ್ಷಿತವಾದ ಪ್ರಕೃತಿ ವಿಕೋಪವನ್ನು ಸಹಿಸಿಕೊಂಡು ಕೆಲಸ ಮಾಡಬೇಕು. ಆ ಬೆಳೆಯನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಎಷ್ಟೋ ಎಡರು ತೊಡರುಗಳನ್ನು ಎದುರಿಸಬೇಕು. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಸರಾಸರಿ ಲೆಕ್ಕದ ಪ್ರಕಾರ ಎಕರೆಗೆ ಎಂಟು ಫಲ್ಲ ಬರುತ್ತದೆ ಆರು ಎಕರೆಗೆ 6 × 8 = 48 ಫಲ್ಲ ಅಥವಾ 50 ಫಲ್ಲ ಬರುತ್ತದೆ. ಇದರಲ್ಲಿ ಹತ್ತು ಫಲ್ಲ ಗೇಣಿಗೆ ಹೋಗುತ್ತದೆ. ಉಳಿದ 40 ಪಲ್ಲದಲ್ಲಿ ವರ್ಷವೆಲ್ಲ ತನ್ನ ಸಂಸಾರವನ್ನು ಸಾಕಬೇಕು. ತನ್ನ ವೆಚ್ಚವನ್ನೆಲ್ಲಾ ಮಾಡಿಕೊಂಡು, ಒಂದು ಜೊತೆ ಎತ್ತುಗಳನ್ನು ರಕ್ಷಣೆ ಮಾಡಿಕೊಂಡು ಸಂಸಾರ ಜೀವನವನ್ನು ಸಾಗಿಸಬೇಕು. ಹೀಗೆ ಇಡೀ ವರ್ಷದ ಲೆಕ್ಕ ಹಾಕಿದರೆ 40 ಫಲ್ಲ ಭತ್ತಕ್ಕೆ 600 ರೂಪಾಯಿ ಉತ್ಪತ್ತಿ ಎಂದು ಪರಿಗಣಿಸಿದರೆ ಇದರಲ್ಲಿ 400 ರೂಪಾಯಿ ನಿವ್ವಳ ಲಾಭವೆಂದು ಹೇಗೆ ಭಾವಿಸಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ.

ಇನ್ನೊಂದು ವಿಷಯವನ್ನು ಅನೇಕ ಜನ ಸ್ನೇಹಿತರು ಹೇಳಿದ್ದಾರೆ. ಸ್ವಂತ ಸಾಗುವಳಿ ಜಮೀನಿನ ವಿಚಾರದಲ್ಲಿ ಪರಿಮಿತಿ ಹಾಕುವುದು ಸರಿಯಲ್ಲವೆಂದು ಹೇಳಿದ್ದಾರೆ. ಈರೀತಿ ಪರಿಮಿತಿಯನ್ನು ನಿಗದಿಮಾಡದೇ ಹೋದರೆ ಕಡಮೆ ಜಮೀನಿರುವ ಸಣ್ಣ ಸಣ್ಣ ಹಿಡುವಳಿದಾರರು ಬಹು ಸಂಖ್ಯಾತರಿದ್ದಾರೆ. ಇವರು ಪ್ರತಿಯೊಬ್ಬರೂ ಗೇಣೀದಾರರಾಗಿ ಇವರೂ ಜಮೀನು ಪಡೆಯುವುದಕ್ಕವಕಾಶ ವಾಗುತ್ತದೆ........

ಉಪಾಧ್ಯಕ್ಷರು.—ನಾಳೆ ನಿಮ್ಮ ಭಾಷಣವನ್ನು ಮುಂದುವರಿಸಬಹುದು.

The 6th item of business in the list of business may be taken up tomorrow.

The House will now rise to meet tomorrow at 8-30 A.M.

The House adjourned at Six of the Clock to meet again at Thirty Minutes Past Eight of the Clock on Saturday, the 15th March 1958.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No. (B)......4747
ದಿನಾಂಕ Date..................................

ಕರ್ನಾಟಕ ರಾಜ್ಯ ಪತ್ರಾಗಾರ
(ಆಡಳಿತ ಗ್ರಂಥಾಲಯ)
ಕ್ರಮಾಂಕ Accession No.(B) 4748
ದಿನಾಂಕ Date..............................

MYSORE LEGISLATIVE ASSEMBLY.

SIXTEENTH DAY.

Saturday, 15th March 1958.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS

Mr. SPEAKER.—Question No. 786 will be taken up on Monday.

Sri G. SIVAPPA.—I will not be present on Monday.

Mr. SPEAKER.—It will be taken up on the next day when the Hon'ble Member will be present.

Instances of two or more Ministers attending the same function during tours.

Q.—894. **Sri G. DUGGAPPA** (Chitaldrug).—

Will the Government be pleased to state :—

(*a*) the number of instances when two or more than two Ministers attended the same function during their tours after 1st November 1956 ;

(*b*) the T.A. and D.A. involved in such tour programmes of the Ministers ?

A.—**Sri H. S. RUDRAPPA** (Minister for Agriculture) [On behalf of SRI S. NIJALINGAPPA (Chief Minister)].—

(*a*) Twelve.

(*b*) T.A. and D.A. amounts involved in these tour programmes cannot be bifurcated as the Ministers fulfilled other engagements individually in addition to those attended in common.

Sri H. S. RUDRAPPA.—Sir, I shall reply on behalf of the Chief Minister.

Sri G. DUGGAPPA.—May I know the details of the functions and the names of the Ministers and the places visited by them ?

Sri H. S. RUDRAPPA.—The details are as follows :—

Sl. No.	Month in which the function took place	Details of the function	The Ministers who attended the function
1	November 1956.	Youth Conference at Shimoga.	(1) Chief Minister (2) Minister for Agriculture
2	Do	Laying the foundation stone of the Taluk Multi-purpose Co-operative Society, Ltd., Mulbagal.	(1) Chief Minister (2) Minister for Co-operation
3	December 1956.	Inauguration of the Visala Mysore Ghana Oil Industrialists First Conference at Mysore.	(1) Chief Minister (2) Minister for Agriculture

(SRI H. S. RUDRAPPA)

Sl. No.	Month in which the function took place	Details of the function	The Ministers who attended the function
4	December 1956.	Inauguration of the Social Welfare Centre at Kesthur.	(1) Chief Minister (2) Minister for P.W.D.
5	January 1957	Opening the new building of the Agricultural Association, Chitaldrug.	(1) Chief Minister (2) Minister for Co-operation
6	February 1957.	Opening of the Bannur Bridge.	(1) Chief Minister (2) Minister for P.W.D.
7	May 1957 ...	Laying the foundation stone of the dam across Lakshmanathirtha River, Coorg.	(1) Chief Minister (2) Minister for Home and Industries. (3) Minister for P.W.D.
8	Do	The Maha Mysore Fishermen's Conference, Malpe.	(1) Chief Minister (2) Minister for Labour (3) Minister for L.S.G.
9	Do	Inauguration of the All-India Malnad Conference, Sirsi.	(1) Chief Minister (2) Minister for Labour (3) Minister for Agriculture (4) Deputy Minister for Planning.
10	Do	Laying the foundation stone of the Hubli Medical College, Hubli, and inauguration of the Medical Conference.	(1) Chief Minister (2) Minister for Health
11	June 1957 ...	Participation in the Sandal Ceremony of the Hazarath Khawja Bande Namaz at Public Garden, Gulbarga, and several functions in Bidar and Gulbarga Districts as per tour programme.	(1) Chief Minister (2) Minister for Excise
12	Do	Discussion with the Governor at Bandipur.	(1) Chief Minister (2) Deputy Minister for Planning. (3) Minister for Health (4) Minister for L.S.G.

Sri G. DUGGAPPA.—It will be seen from the information furnished by the Minister that the Chief Minister is invariably present at all these functions. Is the programme pre-planned and do the Ministers travel together so that they may meet in one place?

Sri H. S. RUDRAPPA.—The Ministers will have different programmes. I do not have sufficient information, but I may say that when I attended one or two functions, I had a different programme and I joined the Chief Minister at the particular function which we attended together.

Sri G. DUGGAPPA.—Supplementary to (*b*): May I know whether the Ministers fulfilled other engagements individually in their official capacity or non-official capacity?

Sri H. S. RUDRAPPA.—In their official capacity.

ಶ್ರೀ ಜಿ. ಶಿವಪ್ಪ.—ಜೊತೆಗೆ ಹೋಗುವುದು ಸಾಧ್ಯವಾಗುವುದಿಲ್ಲ, ಆದರೆ ಗೊತ್ತುಮಾಡಿದ ಸಮಾರಂಭಕ್ಕೆ ಕೂಡಿಕೊಂಡು ಬರುತ್ತಾರೆ, ಎಂದು ತಿಳಿದುಕೊಳ್ಳೋಣವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಮಂತ್ರಿಗಳಿಗೆ ಬೇರೆ ಬೇರೆ ಪ್ರೋಗ್ರಾಮುಗಳು ಇರುತ್ತವೆ. ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಅಲ್ಲಿಗೆ ಬೇರೆ ಬೇರೆಯಾಗಿಯೇ ಬರುತ್ತಾರೆ.

Sri G. SIVAPPA.—Supplementary to (*a*): The question is simple and so will they not answer the question clearly and in a straightforward manner?

Sri H. S. RUDRAPPA.—The question is well answered. No Minister attends a particular function and returns. He has also to attend other functions. For instance, I have got a function at Mandya. I attend that function and I have also to join the Chief Minister at another function at Mysore. Under such circumstances, it is not possible to bifurcate the T.A. and D A. for these two journeys separately. That is the difficulty that arises.

ಶ್ರೀ ಜಿ. ಶಿವಪ್ಪ.—ಪ್ರಶ್ನೆ (*a*) ಸ್ಪಷ್ಟವಾಗಿದೆ. ಮಂತ್ರಿಗಳು ಮಂಡ್ಯ, ಮದ್ದೂರುಗಳಿಗೆ ಹೋಗುವುದಕ್ಕೆ ಯಾರೂ ಬೇಡವೆನ್ನುವದಿಲ್ಲ. ಬೇರೆ ಬೇರೆ ಪ್ರೋಗ್ರಾಮ್ ಇಟ್ಟುಕೊಂಡಿದ್ದರೂ ಸಹ, ಜೊತೆಗೆ ಹೋದ ಪ್ರೋಗ್ರಾಮದ ಸಲುವಾಗಿ ಎಷ್ಟು D.A ಮತ್ತು T.A. ಮಂತ್ರಿಗಳು draw ಮಾಡಿದ್ದಾರೆ. ಎಂಬ ಪ್ರಶ್ನೆಯನ್ನು ನಾನು ಕೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ ಶಾಖೆಯ ಮಂತ್ರಿಗಳು).—ಇದಕ್ಕೆ ಉತ್ತರವಾಗಿ ನನ್ನ ಅನುಭವದ ಒಂದು ಉದಾಹರಣೆಯನ್ನು ಹೇಳುತ್ತೇನೆ. 14ನೇ ತಾರೀಖಗೆ ಮುಖ್ಯ ಮಂತ್ರಿಗಳು ಒಂದು ಪ್ರೋಗ್ರಾಮಿಗೆ ಬರುತ್ತಾರೆ ಎಂದು ಇದೆ. ಅಲ್ಲಿ ನಾನೂ ಹೋಗಬೇಕಾಗಿದೆ. ನಾನು 10ನೇ ತಾರೀಖಿನ ದಿನವೇ ನನ್ನ ಟೂರ್ ಪ್ರೋಗ್ರಾಂ ಪ್ರಕಾರ ಹೊರಟುಬಿಡುತ್ತೇನೆ. ಮುಂದೆ 14ನೇ ತಾರೀಖಿನ ದಿನ ಅಲ್ಲಿ ಹಾಜರ್ ಇರುತ್ತೇನೆ. ಇಂಥ ಸಂದರ್ಭದಲ್ಲಿ 10ರಿಂದ 14ನೇ ತಾರೀಖಿನವರೆಗೆ ಇರುವ ನನ್ನ ಟೂರ್ ಪ್ರೋಗ್ರಾಂ T.A. ಮತ್ತು D.A. 14ನೇ ತಾರೀಖಿನ ಸಮಾರಂಭಕ್ಕೆ ಸಂಬಂಧಪಟ್ಟುದಲ್ಲ. ಅದನ್ನು ಅದರಲ್ಲಿ ಸೇರಿಸಲು ಬರುವುದಿಲ್ಲ. ಅದನ್ನಷ್ಟೇ ಬೇರೆಯಾಗಿ ಹೇಳುವುದು ಕಷ್ಟ. ಹಾಗೆಯೇ ಬನ್ನೂರಿನ ಸಮಾರಂಭಕ್ಕೆ ಮುಖ್ಯ ಮಂತ್ರಿಗಳು ಹೋಗಿದ್ದರು. ನಾನು ಮೂರು ನಾಲ್ಕುದಿವಸ ಮೊದಲೇ ಹೊರಟು ಬೇರೆ ಬೇರೆ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಅಲ್ಲಿಗೆ ಹೋಗಿದ್ದೆನು. ಒಬ್ಬರು ಮೊದಲೇ ಹೊರಡಬಹುದು. ಇನ್ನೊಬ್ಬರು ಅದೇ ದಿನ ಹೊರಟು ಬರಬಹುದು. ಆದಕಾರಣ ಒಂದು ದಿವಸದ ಒಂದು ಕಾರ್ಯಕ್ರಮದ T.A. ಮತ್ತು D.A. ಎಷ್ಟು ಆಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಈ ರೀತಿಯಾಗಿ ಆಗುವುದು ಸ್ವಾಭಾವಿಕವಾಗಿದೆ.

ಶ್ರೀ ಎಣ್. ಜಿ. ನರಸಿಂಹೇಗೌಡ.—ಮಂತ್ರಿಮಂಡಲಕ್ಕೆ ಜಂಟಿ ಜವಾಬ್ದಾರಿಯಿದೆಯೇ?

Sri H. S. RUDRAPPA.—It need not be answered because it is a well known constitutional principle.

ಶ್ರೀ ಎಣ್. ಜಿ. ನರಸಿಂಹೇಗೌಡ.—ಹಾಗಾದರೆ ಮಂತ್ರಿಗಳು ಒಟ್ಟುಗೂಡಿ ಒಂದು ಸಮಾರಂಭಕ್ಕೆ ಹೋಗುವುದಕ್ಕೆ ಕಾರಣವೇನು?

ಶ್ರೀ ಎಚ್. ಎಸ್. ರುದ್ರಪ್ಪ.—ಕರೆಯುತ್ತಾರೆ. ಆದ್ದರಿಂದ ಹೋಗುತ್ತಾರೆ.

ಶ್ರೀ ಎಣ್. ಜಿ. ನರಸಿಂಹೇಗೌಡ.—ಒಬ್ಬ ಮಂತ್ರಿಗಳು ಪ್ರವಾಸ ಹೋಗಿದ್ದಾಗ ಇತರ ಮಂತ್ರಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಗಮನಕ್ಕೆ ತಂದರೆ ಅದನ್ನು ಸಂಬಂಧಪಟ್ಟವರಿಗೆ ತಿಳಿಸುವ ಜವಾಬ್ದಾರಿ ನಿಮಗಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಇದೆ, ಜಂಟಿ ಜವಾಬ್ದಾರಿಯಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—12 ಸಂದರ್ಭಗಳಲ್ಲಿ, ಮೂರು ಜನರಿಗಿಂತ ಹೆಚ್ಚು ಮಂತ್ರಿಗಳು ಹೋದ ಸಂದರ್ಭಗಳೆಷ್ಟು?

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನಾಗಲೇ ಓದಿ ಹೇಳಿದೆ.

ಶ್ರೀ ಜಿ. ದುಗ್ಗಪ್ಪ.—ಮುಖ್ಯ ಮಂತ್ರಿಗಳು ಮತ್ತು ಇತರ ಎಲ್ಲಾ ಮಂತ್ರಿಗಳೂ ಒಟ್ಟಿಗೆ ಒಂದೇ ಸಲ ದೆಹಲಿಗೆ ಪ್ಲಾನಿಂಗ್ ಕಮಿಷನ್ನೊಂದಿಗೆ ಚರ್ಚೆ ಮಾಡಲು ಹೋಗಿರಲಿಲ್ಲವೆ?

ಶ್ರೀ ಎಚ್. ಎಸ್. ರುದ್ರಪ್ಪ.—ಎಲ್ಲರೂ ಹೋಗಿರಲಲ್ಲ: ಕೆಲವರು ಮಾತ್ರ ಹೋಗಿದ್ದುದು ನಿಜ.

Sri U. S. NAIK.—How many Ministers visited Mangalore and Karwar?

Sri H. K. VEERANNA GOWDH.—Five Ministers.

Sri U. S. NAIK.—What did they see?

Sri H. K. VEERANNA GOWDH.—I may explain this, Sir. A special plane was chartered to Mangalore for taking Shri S. V. Ramamurthy in connection with the survey of ports, mining areas, etc. So, it was thought that it would be useful if the concerned Ministers also accompanied him and explained the position. Even if no Ministers went there, a plane had to be specially chartered because Shri S. V. Ramamurthy could not go either by train or car. So, without any extra cost the concerned Ministers went with him and gave some explanations. I stayed in Mangalore for four more days and went round on my inspection tour and came back by car.

ಶ್ರೀ ಡಿ. ಟಿ. ಸೀತಾರಾಮರಾವ್.—ಹಾಗೆ, ಒಟ್ಟಿಗೆ ಪ್ರಯಾಣ ಮಾಡುವುದರಿಂದ ಸರ್ಕಾರಕ್ಕೆ ಉಳಿತಾಯವಾಗುತ್ತದೆಂದು ಭಾವಿಸಿದ್ದೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗೆ ಭಾವಿಸಿಲ್ಲ. ವಿಮಾನದಲ್ಲಿ ಹೋದ್ದರಿಂದ ಉಳಿತಾಯವಾಯಿತು. ಬಾಕಿ ಎಲ್ಲಾ ಸಂದರ್ಭಗಳಲ್ಲೂ ಉಳಿತಾಯವಾಗುವುದಿಲ್ಲ.

Sri C. J. MUCKANNAPPA.—May I know the money spent for the journey to Mangalore ?

Sri H. S. RUDRAPPA.—That information is not available.

Sri Y. MANJAYA SHETTY.—Is it a fact that the visit of Sri S. V. Ramamurthy with the other Ministers to S. Canara and N. Canara has benefited the State to a considerable extent ?

Sri H. S. RUDRAPPA.—That is left to the House to consider. When the Government chartered a special plane, it means they did so because it would be beneficial to the State.

ಶ್ರೀ ಟಿ. ಹನುಮಯ್ಯ.—ಜಂಟಿ ಜವಾಬ್ದಾರಿಯಿರುವುದರಿಂದತಾನೆ ಒಟ್ಟೊಟ್ಟಿಗೆ ಹೋಗುತ್ತಿರುವುದು ?

ಶ್ರೀ ಎಚ್ ಎಸ್. ರುದ್ರಪ್ಪ.—ಹೌದು, ಅದಿದೆ.

ಶ್ರೀ ಆರ್. ಸಿ. ಪಾಟೀಲ್.—ಒಂದೇ ಜಿಲ್ಲೆಗೆ ಬೇರೆ ಬೇರೆ ಮಂತ್ರಿಗಳು ಒಂದೇ ಸಲ ಹೋಗುವುದರಿಂದ ಅಲ್ಲಿನ ಆಫೀಸರುಗಳಿಗೆ ತೊಂದರೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ವರ್ಕ್ ಡಿಸ್‌ಲೊಕೇಟ್ ಆಗುವುದುಂಟು.

ಶ್ರೀ ಆರ್. ಸಿ. ಪಾಟೀಲ್.—ಮಂತ್ರಿಗಳು ಪ್ರವಾಸ ಹೋಗುವುದನ್ನು ಮುಖ್ಯ ಮಂತ್ರಿಗಳು ಹತೋಟಿಗೊಳಿಸುತ್ತಾರೆಯೇ ? ಒಂದೇ ಸ್ಥಳಕ್ಕೆ ಒಬ್ಬರಿಗಿಂತ ಹೆಚ್ಚು ಮಂದಿ ಸಚಿವರು ಹೋದರೆ ಆಫೀಸು ಕೆಲಸಕ್ಕೆ ಅಡಚಣೆಯಾಗುವುದನ್ನು ತಪ್ಪಿಸಲು ಮುಖ್ಯ ಮಂತ್ರಿಗಳು ಟೂರ್ ಪ್ರೋಗ್ರಾಂ ಇತರ ಮಂತ್ರಿಗಳು ಹಾಕುವುದನ್ನು ನೋಡಿ ಬದಲಾವಣೆ ಮಾಡುವ ಪದ್ಧತಿಯಿದೆಯೇ ?

Sri H. K. VEERANNA GOWDH.—May I explain, Sir ? Sometimes it did happen without knowing each others' programmes and some two Ministers went to the same place and the concerned departmental Head accompanied the concerned Minister. But, afterwards it was so arranged that Ministers should exchange their tour programmes with other Ministers so as to avoid two Ministers visiting the same place at the same time. As a matter of fact, once I had programmed to visit Gulbarga District but immediately I came to know that the Finance Minister Sri Mariappa had programmed. I cancelled my programme.

Sri A. BHEEMAPPA NAIK.—Is it not a fact that prior information is sent to the Chief Minister in regard to tour programmes ?

Sri H. K. VEERANNA GOWDH.—It is a fact.

Sri A. BHEEMAPPA NAIK.—If that is the case, is it not the duty of the Chief Minister to inform other Ministers ?

Sri H. K. VEERANNA GOWDH.—Even before the Chief Minister directs, the Ministers themselves consult each other and draw up programmes.

ಶ್ರೀ ಎಂ. ಕೆ. ಬೊಮ್ಮೇಗೌಡ.—ಒಬ್ಬರಿಗಿಂತ ಹೆಚ್ಚು ಮಂದಿ ಸಚಿವರು ಏಕಕಾಲದಲ್ಲಿ ಒಂದೇ ಊರಿಗೆ ಹೋಗುವುದನ್ನು ತಪ್ಪಿಸಲು ಎಷ್ಟು ದಿವಸಗಳಿಂದ ಕಾರ್ಯಕ್ರಮ ಕೈಕೊಳ್ಳಲಾಗಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾರೀಖು ಹೇಳುವುದಕ್ಕಾಗುವುದಿಲ್ಲ. ಆರೇಳು ತಿಂಗಳಿಂದೀಚೆಗೆ ಹಾಗೆ ಮಾಡಿರಬಹುದು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಏಕಕಾಲದಲ್ಲಿ ಸ್ಥಳೀಯ ಸಂಸ್ಥೆಗಳ ಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳು ನಮ್ಮ ತಾಲ್ಲೂಕಿನಲ್ಲಿ ಒಂದು ಸಮಾರಂಭ ನಡೆದಾಗ ಬಹುಶಃ ಒಂದೂವರೆ ತಿಂಗಳ ಹಿಂದೆ ಬಂದಿದ್ದರು. ಯಾವಾಗಿನಿಂದ ಹಾಗೆ ಒಬ್ಬರಿಗಿಂತ ಜಾಸ್ತಿ ಮಂತ್ರಿಗಳು ಬರುವುದನ್ನು ತಪ್ಪಿಸಿದೆ ?

ಶ್ರೀ ಎಚ್. ಎಸ್. ರುದ್ರಪ್ಪ.—ಮೊದಲಿನಿಂದ ಈ ಬಗ್ಗೆ ಅಂಡರ್‌ಸ್ಟ್ಯಾಂಡಿಂಗ್ ಇದೆ. ಕೆಲವು ವೇಳೆ ಸ್ವಲ್ಪ ಓವರ್‌ಲ್ಯಾಪ್ ಆಗಬಹುದು, ಅಷ್ಟೆ.

Sri H. C. LINGA REDDY.—When two Ministers go to attend the same function, do they use different cars or go in the same car ?

Sri H. S. RUDRAPPA.—As has already been stated, two ministers do not go to attend the same function. They go to attend different work and therefore they have to take different cars.

Sri M. C. NARASIMHAN.—Sir, I have no remarks on Demand No. 5. So far as the next demand, demand No. 7 is concerned, I do not know how it is a new service. What the reorganisation of this particular Department is not very clear. Are they creating a new office or, are they contemplating to set up any other establishment, it is not clear. It is not even meant for the establishment. The sub-head and the detailed head is not given. It is no doubt a token grant and even then Rs. 6,200 advance was made and under what head is not known. It was necessary to give details. It is very difficult to find out the policy involved in this particular matter.

Sir, the next item on which I should like to say little is, Debt service charges. Item No. 22. It does not bear any Demand No. We cannot vote on it. It is a charged item. But Members are free to make their observations and I would like to offer my remarks on this item with your permission, Sir.

There is a confusion in respect of the interest charges. The ordinary debt the first item is Rs. 10,87,000 on the rupee debt. I think it is to be taken as ordinary debt. My first difficulty in respect of this is that the revised Budget estimate does not seem to

ಗ್ರಾಸ್ಥ ಕ್ರಮಾಂಕ Accession No(B)....4748
ದಿನಾಂಕ Date..............................

include this item of 10,87,000. If you recall the figures contained in Budget papers—the Budget Memorandum does not contain any reference to this item. Though an item of 4½ lakhs has been included, this particular item is not included.

The second difficulty is: there is a reference to permanent loan allocated from the Bombay State and it is possibly for the five months, during earlier part of 1956-57. So far as these items are concerned, my submission is that the debt service charges in respect of our State is becoming enormous and very burdensome. Sir, it was estimated that the total debt from the integrating areas would come to anywhere from 40 to 50 crores. Public debt being estimated to be about 100 crores. The unfunded debts and deposits also included, it would come to an extraordinary sum of Rs. 200 crores. The debt service charges on this particular item to the extent of Rs. 200 crores, would be an extraordinary burden and a burden which a State like ours can never bear. In this connection, I may be permitted to mention, Sir, that the Mysore Finance Enquiry Committee laid down that the Debt Charges should not exceed 10 per cent of the normal revenues. The normal revenues according to the memorandum is put down as about 27 crores.

Mr. SPEAKER.—Some time back, the Government, I remember, said that the debt from the integrating areas is about 75 crores. That seems to be the figure they gave.

Sri M. C. NARASIMHAN.—So far as the Memorandum of the Finance Commission is concerned, it is put down as 40 to 50 crores in one note and in another subsidiary note, it says, it may range up to 50 crores. Of course, it is stated that it is not very clear. The allocation has not yet been made and some reference is made to this in the Finance Minister's speech also.

Mr. SPEAKER.—But you said just now that it is 200 crores.

Sri M. C. NARASIMHAN.—The Memorandum by the Finance Commission on page 7 says that on the basis of the population, the debt at the end of 1956-57 will come up to 90 to 100 crores. The public debt of the Bellary area was unsettled. So I said that unfunded debt and other deposits, etc., at the end of 1960-61 would be another 100 crores.

Mr. SPEAKER.—That is your inference. That is nothing but guess work. The Government do not know the position as yet.

Sri M. C. NARASIMHAN.—Sir, I submit that they have taken this on the basis of the figures.

Sir, there is another point which I wanted to submit in this connection. The Government of India seems to have decided against the State Government's requests. Yesterday I heard on the radio that in the Parliament, a decision was taken not to grant particular requests made by the State Governments in respect of various Central loans. If that is so, it is very unfortunate; especially so far as we are concerned, it becomes extraordinary burden, even taking for a moment that this is not the correct figure, but it is something less. In respect of at least one suggestion made by the Madras Government......

Sri J. B. MALLARADHYA.—My Hon'ble friend mentioned something about the decision in Parliament. Is the decision they have taken to mean that they are not in favour of the rationalisation proposal made by this Government. I do not see this in this morning's paper.

Sri M. C. NARASIMHAN.—There are so many items so far as we are concerned. Reducing a hundred items into one or two items. This was a suggestion made by the Finance Commission. The other thing which I had submitted was loans from the integrating areas—how it should be treated, what portion of it should be treated as grant and how much should be written off. We had also suggested that so far as unproductive loans are concerned, they may be treated as grant. For all these things, unilaterally, a blanket decision appears to have been taken and it will be very unfortunate so far as we are concerned.

There was one other suggestion made by the Madras Government in respect

(SRI M. C. NARASIMHAN)

of the ways and means advances. That was that interest might be charged at least after 1958, *i.e.*, one year after the States Reorganisation and that till 1958 interest might not be charged. So far as the Government of Mysore is concerned, no such argument seems to have been advanced to the Government of India. However, they should see that at least the interest charged should be waived by the Government of India. I would submit once again that it is even now necessary to make a submission to the Government of India with all the weight that we can command to scale down the debts as far as possible.

I find that there is no provision made in respect of the contribution to the sinking fund. After all, it is an item which is known to us already. Unless we make sufficient contribution to the sinking fund, it would not be possible for us to discharge the loans at a later date and the commitment would be too heavy at a later date and in future we will be placed in an extremely difficult position so far as the loans are concerned. In this connection, I should like to submit once again that the Mysore Finance Enquiry Committee had suggested that at least a provision to the level of contribution to the sinking fund should be made.

Sri J. B. MALLARADHYA.—Sir, I would like to know whether the scope of the discussion in regard to this matter should be extended to the items which are not included at all. He is now talking of a lack of provision towards the sinking fund.

Mr. SPEAKER.—Strictly speaking, it is not covered. He is making a suggestion which, of course, is very interesting to hear, but strictly speaking it is not order.

Sri M. C. NARASIMHAN.—I will not develop this point further. My submission is that the interest charges are mounting with every passing year and I am afraid we are treating the future generation with a certain amount of contempt.

So far as items 19 and 27 are concerned, they go together. One is the Department of Mines and Geology and the other is the Bureau of Mineral Development. I cannot understand what this reorganisation of the Department of Mines and Geology exactly refers to, because so far as the Bureau of Mineral Development is concerned, it is a separate organisation. I can understand the justification for additional grants under demand No. 27 but so far as the Geological Department, mineral survey, exploration, etc., is concerned it is a little doubtful as to the justification for that item. The explanatory note also does not contain what the scheme is and what exactly is the purpose to be subserved by this additional grant. I also do not know how far we traverse the ground under this item covered by the Union List, because so far as mineral development, exploration, etc., is concerned, it is also covered by the Union List. To some extent it is also covered by the State List. Therefore, unless details are forthcoming it is somewhat difficult to make a detailed comment in respect of this matter. So far as mineral development is concerned, the note says that additional grant is required in view of the increased activities of the Bureau on account of the demands from the Bhadravati Iron and Steel Works.

So far as this is concerned, I think it was anticipated when the Bureau of Mineral Development was constituted that it would be an expanding department charged with the responsibility of meeting the requirements of the Mysore Iron and Steel Works. So, why was it not anticipated at that stage and why now at the tail end of the year this is being thought of is not very clear to me. One other suggestion I will make in this connection is that so far as the Bureau of Mineral Development is concerned, last time also in the budget discussion some suggestions were made that the recommendations made by the Bheemappa Naik Committee in respect of mineral development ought to be implemented. Certain assurance was forthcoming from the Deputy Minister last time that those suggestions would be borne in mind. I am told that so far as diamond drilling is concerned no provision has been made for the equipment. I do not think that provision for this is included.

Another suggestion has been made in respect of beneficiation of Manganese ore. I do not know if it comes under the Heads given under item 1, column 3. So far as the plants for the mining of Manganese Ore are concerned, it is absolutely necessary that we make development grants. If that is not included in the supplementary grants—I am not able to say whether it is included—it ought to be provided for at least in the next year's budget.

The next demand I want to deal with is Demand No. 28. That is in respect of constitution of Labour Courts. I cannot at all understand why a supplementary grant is asked for in respect of this. It is not as if Government were not aware that they should constitute Labour Courts. The constitution of Labour Courts was contemplated as early as 10th March 1957. The Labour Court was duly constituted after 1956 after an amendment to the Central Industrial Disputes Act and the amendment was passed in 1956 and there was a notification issued that it should be brought into force with effect from 10th March 1957. So, it is not as if it is a new service altogether which they are providing for. They had notice of it even before the budget was presented in last June. I do not know why a supplementary grant is asked for. Apart from that, there is one other thing which I wish to bring to the notice of the House and that is that, though a Labour Court has been constituted 6 or 7 months ago, it is working under a serious handicap. It is not provided with a typewriter and furniture. It is suggested that all these things should be hired. I do not know who will give a typewriter on hire. For want of a typewriter it is very difficult to get copies of depositions, etc. When I made a representation to the Labour Minister, he asked, "Where is the necessity for a typewriter?" Not only that. Even in respect of staff posted to these courts, they are transferred very frequently so much so almost every week there is a change. We do not know what happens in that court. As far as the selection of the place for the court is concerned, some accommodation is of course provided in the Asiatic building. It is actually in the midst of other offices and it is virtually like a shandy. When we are making increased provision in respect of this, it is very necessary that the point I have referred to should be looked into.

As regards Demand No. 10, Tanks, I do not know why supplementary grant is asked for because if I remember correct, most of the tanks breached during last year.

Sri H. K. VEERANNA GOWDH.—In May 1957.

Sri M. C. NARASIMHAN.—On page 5 it is stated:

> "Extensive repair works had to be undertaken as many of the tanks were damaged as a result of rains."

Sri H. S. RUDRAPPA.—Damages were caused in May 1957.

Sri M. C. NARASIMHAN.—My only comment was that damage took place much earlier and how can this provision be made now. In Kolar District a number of tanks were breached quite a long ago but still sufficient attention has not been made. I have myself made several representations but adequate grants have not been given. So far as Kolar is concerned, it is seriously affected by drought conditions and therefore priority should be given to this district. The ryots are mainly depending upon the tanks for irrigation. It is therefore absolutely necessary to repair all these tanks.

Sri H. K. VEERANNA GOWDH.—You were not correct when you stated that no attention is paid.

Sri M. C. NARASIMHAN.—I am not saying that no attention is paid. I only say that adequate attention is not given. I have been making representations since June last. I request the Hon'ble Minister for P.W.D. to consider my request.

Sri J. B. MALLARADHYA.—Only Kolar?

Sri M. C. NARASIMHAN.—I have some enlightened self-interest . . . .

Mr. SPEAKER.—It is a legitimate interest.

Sri M. C. NARASIMHAN.—Because it is a drought stricken area. That is all. Thank you.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಈ ಹೆಚ್ಚುವರಿ ಬಡ್ಜೆಟ್ಟನ್ನು ನಮ್ಮ ಮುಂದೆ ಅನುಮೋದನೆಗೋಸ್ಕರ ತರುವುದಕ್ಕೆ ಮುಂಚಿತವಾಗಿ ಕೆಲವಾರು ಮೂಲಭೂತವಾದ ಸಮಸ್ಯೆಗಳನ್ನು ಆಲೋಚನೆಮಾಡಿ ಇಟ್ಟಿದ್ದರೆ ಸರಿಯಾಗಿತ್ತು ಎಂದು ನನಗನ್ನಿಸುತ್ತದೆ. ಬಡ್ಜೆಟ್ಟನ್ನು ತಯಾರುಮಾಡತಕ್ಕ ಸಂದರ್ಭದಲ್ಲಿ ಆಯಾವರ್ಷದ ಬಡ್ಜೆಟ್ಟಿನಲ್ಲಿ ಆಯಾ ಡಿಮ್ಯಾಂಡಿಗೆ ಎಷ್ಟು ಹಣಬೇಕು ಎನ್ನತಕ್ಕದ್ದನ್ನು ಪ್ರತಿಯೊಂದು ಇಲಾಖಾಮುಖ್ಯಾಧಿಕಾರಿಗಳಿಂದ ತರಿಸಿಕೊಂಡು ways and means ಕಮಿಟಿಯಲ್ಲಿ ಆಲೋಚನೆಮಾಡಿ ನಂತರ ಈ ಸಭೆಯ ಸದಸ್ಯರ ಅಭಿಪ್ರಾಯವನ್ನು ಪಡೆಯತಕ್ಕ ಉದ್ದೇಶವಾದರೂ ಯಾವ ಯಾವ ಕೆಲಸಗಳನ್ನು ದೇಶದ ಅಭಿವೃದ್ಧಿಗೋಸ್ಕರ ಮಾಡಬೇಕು ಎಂಬುದೇ ಆಗಿದೆ. ಈರೀತಿಯಾಗಿ ಮಾಡುವುದು ರೂಢಿ ಮತ್ತು ಅದು ಸರ್ಕಾರದ ಕರ್ತವ್ಯ. ಪ್ರಭುತ್ವವನ್ನು ನಡೆಸತಕ್ಕವರು, ಅಧಿಕಾರವುಳ್ಳವರು ತಮಗೆ ಬೇಕಾದಂಥ ಖರ್ಚನ್ನು ಆಗಿಂದಾಗ್ಗೆ ಮಾಡುವ ಒಂದು ಚಪಲವನ್ನು ಹೊಂದಿರತಕ್ಕದ್ದು ಮನುಷ್ಯನ ಸ್ವಭಾವ. ದೇಶದ ಹಿತದೃಷ್ಟಿಯಿಂದ ಯಾವ ಯಾವ ಕೆಲಸವನ್ನು ಮಾಡಬೇಕು, ಯಾವ ಯಾವ ಕೆಲಸಗಳಿಗೆ ಹಣವನ್ನು ಖರ್ಚುಮಾಡಬೇಕು ಎಂಬುದನ್ನು ಯೋಚಿಸಿ ಅದರಂತೆ ಆಯವ್ಯಯ ಪಟ್ಟಿಯನ್ನು ಮಂಡಿಸಿ ಈ ಸಭೆಯವರ ಅನುಮತಿಯನ್ನು ಪಡೆಯತಕ್ಕದ್ದು ಒಂದು ಪದ್ಧತಿ. ಅದಕ್ಕೋಸ್ಕರವೇ ಬಡ್ಜೆಟ್ಟನ್ನು ತಯಾರುಮಾಡಿ ಕೆಲವಾರು ಡಿಮ್ಯಾಂಡ್‌ಗಳಿಗೆ ಇಷ್ಟಷ್ಟು ಹಣ ಬೇಕು ಎಂದು ಮಾಡುವುದು. ಹೀಗೆ ಅನುಮೋದನೆ ದೊರೆತಿರುವ ಪ್ರಕಾರ ಹಣವನ್ನು ಖರ್ಚುಮಾಡದೆ ಹೆಚ್ಚಿಗೆ ಖರ್ಚುಮಾಡತಕ್ಕದ್ದು; ಒಂದು ಹೆಡ್ಡಿನಲ್ಲಿ ಕಡಮೆಮಾಡಿ ಆ ದುಡ್ಡನ್ನು ಉಳಿಸಿಕೊಂಡು ಬೇರೆ ಕಡೆ ಖರ್ಚುಮಾಡುವುದರ ಪರಿಣಾಮವೇನೆಂಬುದನ್ನು ಆಲೋಚನೆಮಾಡಬೇಕು. ಬಡ್ಜೆಟ್ಟನ್ನು ತಯಾರು ಮಾಡುವಾಗ ಯಾವ ಯಾವ ಹತೋಟಿಯನ್ನಿಟ್ಟುಕೊಂಡಿರಬೇಕು ಎನ್ನುವ ಉದ್ದೇಶಕ್ಕಾಗಿಯೇ ತಯಾರುಮಾಡ ತಕ್ಕದ್ದು ಒಂದು ಸಂಪ್ರದಾಯ. ನನಗೆ ತಿಳಿದ ಮಟ್ಟಿಗೆ ಈ ಸಂಪ್ರದಾಯವನ್ನು ಎಷ್ಟರ ಮಟ್ಟಿಗೆ ಅರಿತುಕೊಂಡು ಈಸಪ್ಲಿಮೆಂಟರಿ ಬೇಡಿಕೆಗಳನ್ನು ತಂದರೂ, ಮತ್ತು ಹೆಚ್ಚುವರಿ ಖರ್ಚುಮಾಡಲು ಅನುಮತಿಯನ್ನು ಕೊಡಿರಿ ಎಂದು ಈಸಭೆಯವರನ್ನು ಕೇಳುತ್ತಿದ್ದಾರೆ ಎನ್ನುವ ವಿಚಾರದಲ್ಲಿ ನನಗೆ ಅನುಮಾನ ಬಂದಿದೆ. ಏಕೆಂದರೆ ಆಯಾ ಇಲಾಖೆಗೆ ಯಾವ ಖರ್ಚಿಗೋಸ್ಕರ ಹಣವನ್ನು ಒದಗಿಸಿದರೋ ಆ ಖರ್ಚನ್ನು ಮಾಡಲಿಕ್ಕೇಬೇಕು, ಆರೀತಿ ಖರ್ಚುಮಾಡುವುದು ಆವಶ್ಯಕ ಮತ್ತು ಖರ್ಚನ್ನು ಉಳಿಸುವಾಗ ಯಾವ ಕೆಲಸಕ್ಕೆ ಹಣವನ್ನು ಒದಗಿಸಲಾಗಿತ್ತೋ ಆ ಹಣವನ್ನು ಉಳಿಸಬಾರದು. ಒಂದು ಕೆಲಸಕ್ಕೋಸ್ಕರ ಮೀಸಲಾಗಿರುವ ಹಣವನ್ನು ಉಳಿಸಬೇಕಾದರೆ ಮಿತವ್ಯಯಮಾಡಿ ಪೋಲಾಗುವ ಹಣವನ್ನು ಉಳಿಸಬೇಕೇ ಹೊರತು ಆಕೆಲಸಕ್ಕೆ ಖರ್ಚುಮಾಡದೆ, ತಮ್ಮ ಮನಸ್ಸಿಗೆ ಬಂದಂತೆ ಖರ್ಚುಮಾಡಿ, ಹೆಚ್ಚುವರಿ ಹಣವನ್ನು ಖರ್ಚುಮಾಡಬೇಕಾದ ಅವಶ್ಯಕತೆಯಾಯಿತಾದುದರಿಂದ ಅದಕ್ಕೆ ಅನುಮತಿಯನ್ನು ಕೊಡಿ ಏಂದು ಕೇಳತಕ್ಕದ್ದು ಅಷ್ಟು ಒಳ್ಳೆಯದಲ್ಲ. ಹೀಗೆ ಮಾಡುವುದು ಈಸಭಾಸದರ ಹಕ್ಕು ಬಾಧ್ಯತೆಗೆ ಚ್ಯುತಿಯನ್ನು ತರತಕ್ಕ ಹವ್ಯಾಸವೆಂದರೆ ತಪ್ಪಾಗುವುದಿಲ್ಲವೆಂಬ ಒಂದು ಮೂಲಭೂತ ಅಭಿಪ್ರಾಯವನ್ನು ನಾನು ತಿಳಿಸುತ್ತಿದ್ದೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ಯಾವ ಯಾವ ಕೆಲಸಗಳಿಗೆ ಅನಾವಶ್ಯಕವಾಗಿ ಖರ್ಚಾಗಿದೆ ಎಂದು ಹೇಳಿ.

ಶ್ರೀ ಕೆ. ಕೆಂಚಪ್ಪ.—ಯಾವ ಯಾವ ಖರ್ಚಿಗೋಸ್ಕರ ಮೀಸಲಾಗಿಟ್ಟಿತ್ತೋ ಅದನ್ನು ಅದಕ್ಕೇ ಖರ್ಚುಮಾಡಬೇಕು, ಹಾಗೆ ಮಾಡದೆ ಮನಸ್ಸಿಗೆ ಬಂದ ಹಾಗೆ ಅವರಿಗೆ ಬೇಕಾದಂತೆ ಕೆಲಸ ಮಾಡತಕ್ಕದ್ದು ಪ್ರಭುತ್ವವನ್ನು ನಡೆಸತಕ್ಕವರ ಚಪಲವಾಗಿರುತ್ತದೆ. ಅದಾಗಬಾರದು, ಅಂಥದಕ್ಕೆ ಅವಕಾಶ ಕೊಡಬಾರದು. ಏಕೆಂದರೆ ನಾವೂ ಮನುಷ್ಯರು, ಮಂತ್ರಿಗಳಾಗಿರುವವರೂ ಮನುಷ್ಯರು. ಮನುಷ್ಯಮಾತ್ರರಾಗಿರುವವರಿಗೆ ಸ್ವಲ್ಪ ಹತೋಟಿ ಬೇಕಾಗುತ್ತದೆನ್ನುವ ಉದ್ದೇಶದಿಂದಲೇ ಬಡ್ಜೆಟ್ಟನ್ನು ಸ್ವಾಭಾವಿಕವಾಗಿ ಮಾಡುವುದು.

11-30 A.M.

ಸಪ್ಲಿಮೆಂಟರಿ ಡಿಮ್ಯಾಂಡ್ ಎಂದರೆ ಏನೆಂಬುದನ್ನು ತಿಳಿದುಕೊಳ್ಳಬೇಕು. ಉದಾಹರಣೆಗೆ ಸಿವಿಲ್ ವರ್ಕ್ಸ್ ತೆಗೆದುಕೊಂಡರೆ, ಬಡ್ಜೆಟ್‌ನಲ್ಲಿ ಯಾವ ರೀತಿಯಲ್ಲಿಯೋ ಹಣವನ್ನೊದಗಿಸಿ, ಹೇಗೋ ತಯಾರುಮಾಡಿ ಒಪ್ಪಿಗೆ ಪಡೆದು ಆಮೇಲೆ ತಮಗೆ ಬೇಕಾಗಿರುವ ಯಾವುದಾದರೂ ಕೆಲಸಗಳನ್ನು ಮಾಡಿಸಿಕೊಳ್ಳುವುದು . . . . .

ಶ್ರೀ ಎಚ್. ಎಸ್. ರುದ್ರಪ್ಪ.—ಮಂತ್ರಿಗಳ ಮನೆಗಳಿಗೇನಾದರೂ ಮಾಡಿಸಿಕೊಂಡಿದ್ದಾರೆಯೆ?

ಶ್ರೀ ಕೆ. ಕೆಂಚಪ್ಪ.—ಅವರ ಮನೆಗಳಿಗೆ ಬೇಕಾದುದನ್ನು ಮಾಡುವುದು ಬೇರೆಇದೆ, ಅದನ್ನು ಕಾಲ ಬಂದಾಗ ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಹೀಗೆ ಬರಿಯ ತತ್ವ ಹೇಳಿ, ವಿವರವಾಗಿ ಹೇಳದೇಯಿದ್ದರೆ ಅನುಮಾನಕ್ಕೆ ಅವಕಾಶವಾಗುತ್ತದೆ.

ಶ್ರೀ ಕೆ. ಕೆಂಚಪ್ಪ.—ತತ್ವವನ್ನು ಮಾತ್ರವೇ ಹೇಳುವುದಿಲ್ಲ. ಬಡ್ಜೆಟ್‌ನಲ್ಲಿ ತತ್ವವಿದೆ. ಈ ತತ್ವವನ್ನನುಸರಿಸಿದ್ದಾರೆಯೆ ಎನ್ನುವ ಬಗ್ಗೆ ಇದರಲ್ಲಿ ಒಂದು ಪದ ಕೂಡ ಇಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲರಿಗೂ ಗೊತ್ತಿರುವ ತತ್ವವನ್ನು ಅವರೇನೂ ಹೇಳಬೇಕಾದುದಿಲ್ಲ.

ಶ್ರೀ ಕೆ. ಕೆಂಚಪ್ಪ.—ನೀವು ಬ್ರಹ್ಮರಾಗಿದ್ದರೆ, ಯಾವುದೂ ಬೇಕಾಗಿರಲಿಲ್ಲ, ಬಡ್ಜೆಟ್‌ಕೂಡ ಬೇಕಾಗಿರಲಿಲ್ಲ . . . . . .

Sri C. J. MUCKANNAPPA.—I rise to a point of order, Sir. ಯಾರಾದರೂ ಮಾತನಾಡುವಾಗ ಇನ್ನೊಬ್ಬರು ಮಾತನಾಡಬೇಕಾದರೆ, ಮಾತನಾಡುತ್ತಿರುವವರು yield ಆದರೆ ಮಾತ್ರ ಮಾತನಾಡಬಹುದೆಂದಿದೆ, ಹೀಗಿರುವಾಗ ಅವರು ಹೀಗೆ ಮಧ್ಯೆ ಮಾತನಾಡಬಹುದೆ!

ಶ್ರೀ ಟಿ. ಡಿ. ಮಾರಣ್ಣ (ಮಾಗಡಿ).—ಅವರು yield ಆಗದೇಯಿದ್ದರೂ ಮಂತ್ರಿಗಳು intervene ಮಾಡಬಹುದು.

ಅಧ್ಯಕ್ಷರು.—ಹಾಗಲ್ಲ, yield ಆದರೆ ಮಾತ್ರ ವಿವರಣೆ ಕೊಡಬಹುದು. ಆದರೆ interruptions ಒಮ್ಮೊಮ್ಮೆ ಆಗುತ್ತದೆ. ಇದನ್ನು ಅಧ್ಯಕ್ಷರಾದವರು ಗಮನಿಸುವುದರೊಳಗಾಗಿ interruptions ಮುಗಿದು ಹೋಗುತ್ತದೆ. ಇಂಥಾದ್ದಕ್ಕೆ ಏನೂಮಾಡುವುದಕ್ಕಾಗುವುದಿಲ್ಲ ಅನೇಕ ವೇಳೆ 'ಪಾಯಿಂಟ್ ಆಫ್ ಆರ್ಡರ್' ಎಂದು ಹೇಳುತ್ತಾರೆ, ಆದರೆ ಅದರಲ್ಲಿ ಯಾವ

‘ಪಾಯಿಂಟ್ ಆಫ್ ಆರ್ಡರ್’’ ಕೂಡ ಇರುವುದಿಲ್ಲ. ಮಾತನಾಡಲು ಅವಕಾಶ ಸಿಕ್ಕಿದ ಹಾಗಾಗುತ್ತದೆ. ‘ಪಾಯಿಂಟ್ ಆಫ್ ಆರ್ಡರ್’’ ಇಲ್ಲದಿದ್ದರೂ ಮಾತನಾಡುವುದಕ್ಕೆ ಅವಕಾಶಸಿಕ್ಕುವುದೆಂದು point of order ಎತ್ತುವುದು ಸರಿಯಲ್ಲ. ಈಗ ಮಾನ್ಯ ಸದಸ್ಯರು ಹೇಳಿದುದರಲ್ಲಿ ‘ಪಾಯಿಂಟ್ ಆಫ್ ಆರ್ಡರ್’’ ಇಲ್ಲವೆಂದು ಹೇಳುವುದಕ್ಕಿಂತಲೂ ಅವರು ಮಾಡಿದುದು interruption ಎಂದು ತಿಳಿದುಕೊಂಡೆ. ಆದರೆ ಅದು ಸ್ವಲ್ಪದೀರ್ಘವಾಗಿತ್ತು.

ಶ್ರೀ ಎಚ್. ಎಸ್. ರುದ್ರಪ್ಪ.—ತಮಗೆ ಬೇಕಾದ್ದು ಖರ್ಚುಮಾಡಿದರೆಂದು ಹೇಳಿದರು.

ಶ್ರೀ ವೈ. ವೀರಪ್ಪ (ಹೋಳೆನರಸೀಪುರ).— ತಮಗೆ ಎಂದರೆ, ಕೆಲವು ಯೋಜನೆಗಳಿಗೆ ಎಂದು ಅರ್ಥ

ಅಧ್ಯಕ್ಷರು.— ತಮಗೆ ಎಂದರೆ, ಅವರ ಮನೆಗೆ ಎಂದರ್ಥವಲ್ಲ ಎಂಬುದನ್ನು ಅವರೂ ಒಪ್ಪಿಕೊಂಡರು. ಆದರೆ ಶಬ್ದಗಳನ್ನುಪಯೋಗಿಸುವಾಗ ಸರಿಯಾಗಿ ಉಪಯೋಗಿಸುವುದೊಳ್ಳೆಯದು. ಅಪಾರ್ಥಕ್ಕೆಡೆಗೊಡದಂತೆ ಹೇಳಿದರೆ ಒಳ್ಳೆಯದು. . . . .

ಶ್ರೀ ಕೆ. ಕಂಚಪ್ಪ.—ನಾನು ಕೆಲವು ಮೂಲ ತತ್ವಗಳನ್ನು ಹೇಳಿ ಆ ತತ್ವಗಳಿಗನುಗುಣವಾಗಿ ಇದರಲ್ಲಿ ಯಾವ ಯಾವುದನ್ನು ಕೇಳಿದ್ದಾರೆಂಬುದನ್ನು ತಿಳಿಸಲು ಪೀಠಿಕಾರೂಪವಾಗಿ ಹೇಳುತ್ತಿದ್ದೆ. ನನ್ನ ಉದ್ದೇಶವನ್ನು ಈರೀತಿ ಹೇಳದಿದ್ದರೆ ಅರ್ಥವಾಗುವುದಿಲ್ಲ. ಮನುಷ್ಯ ಸ್ವಭಾವ. ಮಂತ್ರಿಗಳು ತಮಗೆ ಬೇಕಾದ ಸ್ಥಳದಲ್ಲಿ ಕೆಲಸಗಳನ್ನು ಮಾಡಿಸಿಕೊಳ್ಳುವುದು . . . .

ಅಧ್ಯಕ್ಷರು.— ತಾವು ಯಾವುದಾದರೂ ನಿರ್ದಿಷ್ಟವಾದ ಬಾಬನ್ನು ತೆಗೆದುಕೊಂಡು, ಅದು ಮಂತ್ರಿಗಳಿಗೆಬೇಕಾದುದಾದ್ದರಿಂದ ಮಾಡಿಸಿದ್ದಾರೆಂದು ಹೇಳಿದರೆ, ಅದು ಬೇರೆವಿಷಯ, ಹಾಗೆಮಾಡದೆ ಸುಮ್ಮನೆ ಸರ್ವಸಾಧಾರಣವಾಗಿ ಹೇಳಿದರೆ, ಅದಕ್ಕೆ ಇಲ್ಲಿ ಅವಕಾಶವಿಲ್ಲ. ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿರುವ ಒಂದು ಬಾಬನ್ನು ತೆಗೆದುಕೊಂಡು, ಇಂಥಾದ್ದನ್ನು ಕುರಿತು ಕೆಲಸವನ್ನು ಮಾಡಿದ್ದಾರೆ, ಇದನ್ನು ಮಾಡಬಾರದಾಗಿತ್ತು ಎಂದು ಹೇಳಬಹುದು. ಹೀಗೆ ಯಾವುದಾದರೂ ನಿರ್ದಿಷ್ಟವಾದ ಬಾಬನ್ನು ತೆಗೆದುಕೊಂಡು ಬೇಕಾದರೆ ಹೇಳಿ.

ಶ್ರೀ ಕೆ. ಕೆಂಚಪ್ಪ.—ಹಾಗಾದರೆ, ತತ್ವವನ್ನು ಹೇಳಬಾರದೆ? ಈಗ ಭಾರತ ರಾಜ್ಯಾಂಗದ 205ನೆಯ ವಿಧಿಯ ಪ್ರಕಾರ ಸಪ್ಲಿಮೆಂಟರಿ ಡಿಮ್ಯಾಂಡ್‌ನ್ನು ಸಭೆಯ ಮುಂದಿಡುವಾಗ ಮೂರು ವಿಚಾರಗಳನ್ನು ಯೋಚನೆ ಮಾಡಬೇಕು. ಮೊದಲನೆಯದಾಗಿ ಯಾವುದಾದರೂ ಒಂದು ಬಾಬಿಗೆ ಮೀಸಲಾಗಿಟ್ಟಿರುವ ಹಣ ಕಡಮೆ ಬಂದರೆ, ಅದು ಖರ್ಚಾಗುವುದಕ್ಕೆ ಮೊದಲೇ ಕೇಳುವುದು, ದೇಶದಲ್ಲಿ ಯಾವುದಾದರೂ ಭಾಗದಲ್ಲಿ ಒಂದು ಕೆಲಸವನ್ನು ಮಾಡಬೇಕೆಂದು ಕಂಡುಬಂದರೆ ಅದಕ್ಕಾಗಿ ಕೇಳುವುದು. ಮೂರನೆಯ ಭಾಗ, ಒಂದು ವೇಳೆ ಯಾವುದಾದರೂ ಒಂದು ಭಾಗದಲ್ಲಿ ಒಂದು ಬಾಬಿಗೆ ಅಥವ ‘ಹೆಡ್’ಗೆ ಮೀಸಲಾಗಿಟ್ಟಿರುವ ಹಣ ಸಾಲದೆ ಬಂದು ಹೆಚ್ಚು ಖರ್ಚುಮಾಡಿದರೆ, ಅದನ್ನು ಮಂಜೂರು ಮಾಡಬೇಕೆಂದು ತರುವುದು. ಇದರಲ್ಲಿ ಮೊದಲನೆಯ ಎರಡುಭಾಗಗಳಲ್ಲಿ ಅಷ್ಟು ಹೆಚ್ಚಾಗಿಲ್ಲ. ಸಪ್ಲಿಮೆಂಟರಿಗ್ರಾಂಟ್ ಕೇಳುವುದರಲ್ಲಿ ನನ್ನ ಅಭ್ಯಂತರವಿಲ್ಲ. ಆದರೆ ಅದು ವಿಧಿಗನುಸಾರವಾಗಿರಬೇಕು. ಅದನ್ನು ಕೊಡುವುದಕ್ಕೆ ಅಥವ ಬಿಡುವುದಕ್ಕೆ ಈಸಭೆಗೆ ಅಧಿಕಾರವಿರುತ್ತದೆ. ಅದರೆ ನಾನು ಒಂದು ಅಂಶವನ್ನು ಮಾತ್ರ ಸಭೆಯಗಮನಕ್ಕೆ ತರುತ್ತೇನೆ. ಈಗಾಗಲೇ ನಾನು ಹೇಳಿದುದಗಲ್ಲಿ ಮೂರನೆಯದರ ವಿಚಾರವನ್ನು ಕುರಿತು ಮಾತ್ರ ನಾನು ಹೇಳುತ್ತಿದ್ದೇನೆ. ಮೂಲಭೂತ ತತ್ವವನ್ನು ಹೇಳಿ ಆಮೇಲೆ ಆತತ್ವಕ್ಕೆ ಚ್ಯುತಿಬಂದಿದೆ ಎಂಬುದನ್ನು ತೋರಿಸಿದರೆ ಸರಿಯಾಗುತ್ತದೆ. ಆದುದರಿಂದ ಮೂರನೆಯ ಭಾಗದಲ್ಲಿ ಯಾವುದಾದರೂ ಒಂದು ಬಾಬಿಗೆ ಖರ್ಚು ಇಷ್ಟು ಎಂದು ಹೇಳಿ ಆಮೇಲೆ ಹೆಚ್ಚುಖರ್ಚು ಮಾಡಿದರೆ, ಅದಕ್ಕೆ ಅಸಾಧಾರಣ ಪರಿಸ್ಥಿತಿ, ಎಂದರೆ, ಬಡ್ಜೆಟ್‌ನಲ್ಲಿ ಒದಗಿಸುವಾಗ ಇಲ್ಲದಿದ್ದ ಒಂದು ಪರಿಸ್ಥಿತಿ ಏನಾದರೂ ಬಂದು, ಅದು ಕಾರಣವಾಗಿದ್ದರೆ ಅಗ ಅದನ್ನು ಮಂಜೂರುಮಾಡಬಹುದು. ಇಲ್ಲದಿದ್ದರೆ ಸದಸ್ಯರ ಹಕ್ಕಿಗೆ ಚ್ಯುತಿ ಬರುತ್ತದೆ. ಅಕೌಂಟ್ಸ್ ಹತೋಟಿಯ ವ್ಯವಸ್ಥೆ ನೋಡಿಕೊಳ್ಳಲು ಕಂಟ್ರೋಲರ್ ಇದ್ದಾರೆ, ಅಕೌಂಟೆಂಟ್ ಜನರಲ್ ಇದ್ದಾರೆ, ನೀವು ಮನಸ್ಸಿಗೆ ಬಂದ ಹಾಗೆ ಖರ್ಚುಮಾಡಿ ಎಂದು ಹೇಳ ಬಹುದಾಗಿತ್ತು. ಈ ಸಭೆಗಿರುವ ಹತೋಟಿಯ ಅಧಿಕಾರದ ಮೇಲೆ ನಾವು ಕೇಳುತ್ತಿರುವುದು. 2ನೆಯ ಡಿಮ್ಯಾಂಡಿನಲ್ಲಿ ‘‘land revenue’’ ನಲ್ಲಿ

> ‘‘Against the current year's grant of Rs. 9,90,000 an expenditure of Rs. 11,20,518 is reported to have been incurred to end of November 1957. A sum of Rs. 9,482 is expended to be incurred during the remaining part of the current year. Hence the need for this supplementary grant.’’

ಎಂದು ಹೇಳಲಾಗಿದೆ. ಗ್ರಾಂಟುಗಳನ್ನು ನಿರ್ಧರಿಸುವಾಗ ಯಾವುದನ್ನು ಹೆಚ್ಚು ಮಾಡಬೇಕು ಯಾವುದಕ್ಕೆ ಎಷ್ಟು ಬೇಕಾಗಬಹುದು ಎಂಬುದು ಸರಕಾರಕ್ಕೆ ಗೊತ್ತಿರಲಿಲ್ಲವೇ? ಇಷ್ಟು ಹೆಚ್ಚುವರಿ ಖರ್ಚು ಯಾಕೆ ಮಾಡಬೇಕಾಗಿ ಬಂತು ಎಂಬುದಕ್ಕೆ ಒಂದು ಚಕಾರ ಶಬ್ದಕೂಡ ವಿವರಣೆ ಕೊಟ್ಟಿಲ್ಲ. ಈ ರೀತಿ ಆಗುವುದಾದರೆ ಸಭೆಯ ಮುಂದೆ ಬಡ್ಜೆಟ್ ತಂದು ಪಾಸ್ ಮಾಡುವುದು ಏತಕ್ಕೆ? ಖೋತಾ ಅಥವಾ ಹೆಚ್ಚುವರಿ ಬಡ್ಜೆಟ್ ತಯಾರು ಮಾಡುವಾಗ ಅಂಕಿ ಅಂಶಗಳನ್ನು ಹೆಚ್ಚು ಅಥವಾ ಕಡಿಮೆ ಮಾಡಲಿಕ್ಕೆ ಬರುವುದಿಲ್ಲವೇನು? ಜವಾಬ್ದಾರೀ ಆಗಿದ್ದವರು ಇದನ್ನೆಲ್ಲಾ ನೋಡಬೇಕಾಗಿತ್ತು. ಇದರಲ್ಲಿ ಚ್ಯುತಿ ಏನು ಬಂತು? ಕಾಣದೇ ಇರುವುದು ಸರಕಾರಕ್ಕೆ ಯಾವುದು ಇದೆ? ಖರ್ಚು ಮಾಡಿಬಿಟ್ಟಿದ್ದೀರಿ. ಅ ಕ್ಕೋಸ್ಕರ ಮಂಜೂರು ಮಾಡಿಬಿಡೋಣ ಎಂಬುದು ಯಾವ ನ್ಯಾಯ? ಹೀಗಾಗಿರುವುದರಿಂದ ಈಗ ಈ ಸಭೆಯ ಸದಸ್ಯರ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ಬರುತ್ತದೆ. ಈಗ ಹೊಸದಾಗಿ ವಿಶಾಲ ಮೈಸೂರು ರಾಜ್ಯ ರಚನೆಯಾಗಿದೆ. ಇಂತಹ ಅನೇಕ ಸಂದರ್ಭಗಳು ಬರಬಹುದು. Famine Head ಎಲ್ಲಿ ಇದೆ? ಬರಗಾಲ ಏತಕ್ಕೆ ಬರಬಹುದು? ಹಿಂದಕ್ಕೆ ಬಡ್ಜೆಟ್ ತಯಾರುಮಾಡುವಾಗ ಯಾವದೊಂದೂ ಗೊತ್ತಾಗಲಲ್ಲವೇನು? ಈ ಡಿಪಾರ್ಟ್‌ಮೆಂಟ್ ಹೆಡ್‌ದಲ್ಲಿ ಏನೇನು ಚ್ಯುತಿಬಂದಿದೆ ಎಂಬುದನ್ನು ಅಸೆಂಬ್ಲಿಯ ಸದಸ್ಯರಾದ ನಾವು ತಿಳಿದುಕೊಳ್ಳಬೇಕಾಗಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದರ ಬಗ್ಗೆ ಸ್ವಲ್ಪ clarification ಮಾಡುತ್ತೇನೆ. ಅಂದರೆ ಗೊತ್ತಾಗುವುದು ಬಡ್ಜೆಟ್ ತಯಾರು ಆದಮೇಲೆ ಇತ್ತೀಚೆಗೆ ಈ ಪೋಟಗಿ ವಿಚಾರದಲ್ಲಿ ಹೆಚ್ಚು ಮಾಡಿದೆ. ಆದ್ದರಿಂದ ಈ ರೀತಿ ಮಾಡಬೇಕಾಯಿತು.

ಶ್ರೀ ಕೆ. ಕೆಂಚಪ್ಪ.—ಇದರ explanation ಎಲ್ಲಿ ಇದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೋಸ್ಕರ ನಾನು ಈಗ explanation ಕೊಡುತ್ತಿದ್ದೇನೆ.

ಶ್ರೀ ಕೆ ಕೆಂಚಪ್ಪ.—ಸಾಧಾರಣ ಸನ್ನಿವೇಶವಿರುವಾಗ ಇಂಥಾದ್ದು ಬರುವುದಿಲ್ಲ. ಇದು ಯಾವ ತತ್ವಕ್ಕೆ ಅನುಗುಣವಾಗಿ ಇದೆ ? ಇದನ್ನು ಮೊದಲೇ ಹೇಳದಿರುವದಕ್ಕೆ ಏನು ಭಯ ಬಂತು ? ಸದಸ್ಯರಿಗೆ ಹೇಗೆ ಗೊತ್ತಾಗಬೇಕು ? ಹೇಳದೇ ಇರುವುದಕ್ಕೆ ಕಾರಣವೇನು ?

Sri H. S. RUDRAPPA.—The supplementary grant is on account of increase in the remuneration to Shanbhogues and Patels. The decision to increase the remuneration was taken after the budget session was over.

Mr. SPEAKER.—A small sentence might have been added here for explanation, I would like the Government, under such circumstances, to give an explanatory note if possible.

ಶ್ರೀ ಕೆ. ಕೆಂಚಪ್ಪ.–A small sentence ಗೋಸ್ಕರ ಪೋಟಿಗಿ ಹೆಚ್ಚುಮಾಡಿದ್ದನ್ನು ನಾನು ಕೇಳುತ್ತಿಲ್ಲ.

ಅಧ್ಯಕ್ಷರು.—ಅವರು ಅದಕ್ಕೆ ಹೇಳಿದ್ದಾರೆ. ಇಂಥಾ ಸಂದರ್ಭಗಳಲ್ಲಿ ವಿವರಣೆಯನ್ನು ಸುಲಭವಾಗಿ ಕೊಡಬಹುದು ಎಂದು ನಾನೂ ಸಹ ಹೇಳಿದ್ದೇನೆ.

ಶ್ರೀ ಕೆ. ಕೆಂಚಪ್ಪ.—ಸುಲಭವಾಗಿ explanation ಕೊಡಬಹುದಾದ ಸ್ಥಿತಿಯಲ್ಲಿ ಇದ್ದರೂ ಸಹ ಹಾಗೆ ಯಾಕೆ ಕೊಡಲಿಲ್ಲ ಎಂಬುದಕ್ಕೆ ನನಗೆ ಅನುಮಾನವಾಗುತ್ತಿದೆ. ಏಳೆಂಟು ಲೈನಿನಲ್ಲಿ ಅಥವಾ ಒಂದರ್ಧ ಲೈನಿನಲ್ಲಿ explanation ಕೊಡಬಹುದಾಗಿತ್ತು ಎಂಬುದು ಅಲ್ಲ. ಮೊದಲು ಶಾನುಭೋಗ ಪಟೇಲರು ಇರಲಿಲ್ಲವೇ ? ಅವರ ಬಗ್ಗೆ ಯೋಚಿಸಲು ಅವಕಾಶವಿರಲಿಲ್ಲವೇ ? ಹೀಗೆಯೇ ಅನುಮಾನದಿಂದಲೇ ಕಂಟ್ರೋಲ ಬಂದಿದೆ. ಕಂಟ್ರೋಲ್ ಇಟ್ಟುಕೊಂಡದ್ದರಿಂದ ಇಂದು ಇಂಥಾ ಬಿಕ್ಕಟ್ಟಿನ ಪರಿಸ್ಥಿತಿ ಬಂದಿದೆ. ಆದಕಾರಣ ಈ ಹೆಚ್ಚುವರಿ ಬೇಡಿಕೆಯನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಯಾಕೆಂದರೆ ಈಗಾಗಲೇ ಹಣ ಖರ್ಚುಮಾಡಿ ಬಿಟ್ಟಿದ್ದೀರಿ ಖರ್ಚು ಆಗುವುದಕ್ಕೆ ಮುಂಚಿತವಾಗಿ ಈ ವಿಷಯವನ್ನು ನಮ್ಮ ಮುಂದೆ ಸಭೆಯಲ್ಲಿ ಇಟ್ಟು ಈ ಬಗ್ಗೆ ಏನು ಮಾಡೋಣ ಎಂದು ಕೇಳಬೇಕಾಗಿತ್ತು. ಈ ಮೊದಲೇ ಯಾಕೆ ತರಲಿಲ್ಲ ? ಈ ಪ್ರಶ್ನೆ ಯಾವಾಗ ಉದ್ಭವಿಸಿತು? ಹಿಂದೆ ಅಸೆಂಬ್ಲಿ ಇತ್ತು. ಅಸ್ಲೆಂಬ್ಲಿಯ ಮುಂದೆ ತರಬೇಕಾಗಿತ್ತು. ಈ ರೀತಿ ಆಗಿರುವುದರಿಂದ ಅಸೆಂಬ್ಲಿಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿದೆ ಪ್ರಿವಿಲೇಜ್‌ಕ್ಕೆ ಧಕ್ಕೆ ಬಂದಿದೆ. ಖರ್ಚು ಆದಮೇಲೆ ಸಭೆಯ ಮುಂದೆ ಇಡುವಂಥಾ ಅಸಾಧಾರಣ ಪರಿಸ್ಥಿತಿ ಏನು ಬಂದಿತ್ತು ? ಈ ಕಾರಣದ ಮೂಲಕ ನಾವು ಇದನ್ನು ಒಪ್ಪುವುದಕ್ಕಾಗುವುದಿಲ್ಲ. ನಾವು ಒಪ್ಪಲಿ ಅಥವಾ ಒಪ್ಪದಿರಲಿ ಇದು ಸಭೆಯಲ್ಲಿ ಪಾಸು ಆಗುತ್ತದೆ. ವಿರೋಧ ಪಕ್ಷದವರಿಗೆ ಬಹುಮತ ಬೆಂಬಲವಿಲ್ಲದಿರುವಾಗ, ಪ್ರಭುತ್ವವನ್ನು ನಡೆಸಿಕೊಂಡು ಬರತಕ್ಕಂಥ ಬಹುಮತ ಪಕ್ಷದವರ ಮೇಲೆ ಇಂಥಾ ಅಸಾಧಾರಣ ಪರಿಸ್ಥಿತಿಯಲ್ಲಿ, ಅತ್ಯಧಿಕವಾದ ಜವಾಬ್ದಾರಿ ಇದೆ. ಈ ಸಭೆಯಲ್ಲಿ ವಿರೋಧ ಪಕ್ಷ minority ಯಲ್ಲಿದೆ. ಬಹುಮತ ಪಕ್ಷದವರಾದ ನಿಮ್ಮ ಮೇಲೆ ಗುರುತರವಾದ ಜವಾಬ್ದಾರಿ ಇದೆ ಎಂದು ಮತ್ತೊಮ್ಮೆ ನಾನು ಎಚ್ಚರಿಕೆ ಕೊಡುತ್ತೇನೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಮಂತ್ರಿಗಳು).—ವಿರೋಧ ಪಕ್ಷದ ಸದಸ್ಯರು ಒಬ್ಬರಿದ್ದರೂ ಸಹ ಅವರ ಮಾತನ್ನು ನಾವು ಗಮನಿಸುತ್ತೇವೆ.

ಶ್ರೀ ಕೆ. ಕೆಂಚಪ್ಪ.—ಇನ್ನು ಡಿಮ್ಯಾಂಡ್ ನಂಬರ್ 18 Ports & Pilotage ಬಗ್ಗೆ explanationನಲ್ಲಿ ಈ ರೀತಿ ಹೇಳಿದೆ :—The current year's grant of Rs. 50,000 under the above sub-head was made on an *ad hoc* basis for want of details at the time of budget preparation. The state Port Officer has since intimated that the revised expenditure figure would be to the extent of Rs. 1,68,000. ಆಗ ಅಂಕಿ ಅಂಶಗಳನ್ನು ಕೊಡುವಾಗ ಅನವರ್ಪಕವಾಗಿ ಯಾಕೆ ಕೊಟ್ಟರು ಎಂದು ನಾನು ಕೇಳುತ್ತೇನೆ. ಬಡ್ಜೆಟ್ ತಂದಿದ್ದರು. ಡಿಮ್ಯಾಂಡ್ ಇಟ್ಟಿದ್ದರು. ಅವುಗಳನ್ನು ತಯಾರು ಮಾಡುವಾಗ ಎಷ್ಟು ಖರ್ಚು ಮಾಡಬೇಕಾಗುವುದೆಂದು ಅಧಿಕಾರಿಗಳನ್ನು ಕೇಳಿದ್ದರು. ಸರಕಾರಿ ಡಿಪಾರ್ಟ್‌ಮೆಂಟ್ ಹೆಡ್ ಕೇಳದೆಬಡ್ಜೆಟ್ ಪ್ರೊವಿಷನ್ ಮಾಡುತ್ತಾರೆಯೋ ?

Sri H. K. VEERANNA GOWDH.—May I offer an explanation ?

Sri K. KENCHAPPA.—The explanation may be anything. I want to know if they have prepared and mentioned a figure without obtaining the opinion of the Department.

Sri H. K. VEERANNA GOWDH.—Because there was no head of the Department at that time Mangalore Port was under the charge of some officer who was not connected with this Department.

ಇದು ಮುಂಬಯಿ ಸರಕಾರದಲ್ಲಿದ್ದಾಗ ಒಬ್ಬ ಅಧಿಕಾರಿಯು ಆಡಳಿತ ನೋಡುತ್ತಿದ್ದರು. ಇತ್ತೀಚೆಗೆ 4-6 ತಿಂಗಳುಗಳ ಹಿಂದೆ ಈ ಡಿಪಾರ್ಟ್‌ಮೆಂಟಿನ ರಚನೆಯಾಗಿದೆ. ಮೊದಲು ಇರಲಿಲ್ಲ. 50 ಸಾವಿರ ರೂಪಾಯಿ ರೆಮ್ಯೂನರೇಷನ್ ರೂಪದಿಂದ ಕೊಡುವುದಕ್ಕೆ ಅಂದಾಜ ಮೇಲೆ ಹಾಕಲಾಗಿತ್ತು. ಆದರೆ 4-6 ತಿಂಗಳ ಈಚೆಗೆ ಈ ಡಿಪಾರ್ಟ್‌ಮೆಂಟ್ ರಚನೆಯಾಗಿ staff ತಗೆದುಕೊಳ್ಳಬೇಕಾಯಿತು. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಇತ್ತೀಚೆಗೆ ಇವನ್ನೆಲ್ಲಾ ಮಾಡಬೇಕಾಯಿತು. ಆದ್ದರಿಂದ ಈ ಸಪ್ಲಿಮೆಂಟರಿ ಗ್ರ್ಯಾಂಟ್ ತರಬೇಕಾಯಿತು.

A post was created recently and the Head of the Department has submitted these figures. Therefore we have asked for these supplementary grants.

ಶ್ರೀ ಕೆ. ಕೆಂಚಪ್ಪ.—ಸ್ವಾಮಿ, ಈ ಬಡ್ಜೆಟ್ಟನ್ನು ತಯಾರು ಮಾಡುವಾಗ ಸಿಬ್ಬಂದಿಗಾಗಿ ಎಷ್ಟು ಬೇಕಾಗುತ್ತದೆ ಎಂಬುದನ್ನು ಹಣಕಾಸಿನ ಇಲಾಖೆ ಸಿಬ್ಬಂದಿ ಯೋಚನೆ ಮಾಡಲಿಲ್ಲವೇ ? ಅಲ್ಲಿ ಬೇಕಾದ ಲೆಕ್ಕಾಚಾರ ಮಾಡುವವರಿದ್ದಾರೆ. ಅವರು ಪ್ರತಿಯೊಂದನ್ನೂ ಆಲೋಚನೆ ಮಾಡಿ ಹೇಳುತ್ತಾರೆ.

ಆಮೇಲೆ 21ನೆಯ ಡಿಮ್ಯಾಂಡ್‌ನಲ್ಲಿ ಮೆಡಿಕಲ್ ಬಾಬಿನ ವಿಚಾರ ಹೇಳಿದೆ. ಅದರ ಬಗ್ಗೆ "The provision of Rs. 10,000 made under this

Head is found to be inadequate according to actual requirements as noted below. Hence a demand for supplementary grant is applied for.'' ಎಂದು ಹೇಳಿದ್ದಾರೆ. 10 ಸಾವಿರ ರೂಪಾಯಿ ಇದ್ದುದಕ್ಕೆ ಈಗ 19 ಸಾವಿರ ರೂಪಾಯಿ ಹೆಚ್ಚು ಮಾಡಬೇಕೆಂದು ಕೇಳಿದ್ದಾರೆ. ಸಿಬ್ಬಂದಿ ಸಂಬಳ, ಅಲೋಯನ್ಸ್ ವಗೈರೆಗಾಗಿ ಹೆಚ್ಚು ಹಣಬೇಕೆಂದು ಹೇಳಿದ್ದಾರೆ. ಹಿಂದೆ ಅಂದಾಜು ಮಾಡುವಾಗ ಇದನ್ನೆಲ್ಲಾ ಏಕೆ ಆಲೋಚನೆ ಮಾಡಲಿಲ್ಲ! ಈಗ ಇದನ್ನು ಯಾವ ರೀತಿ ಅಸೆಸ್ ಮಾಡೋಣ ಎಂಬ ಪ್ರಶ್ನೆ ಸದಸ್ಯರ ಮುಂದೆ ಬರುತ್ತದೆ. ಈ ಹಣವನ್ನು ಮುಂದೆ ಖರ್ಚು ಮಾಡುವುದಕ್ಕೆ ಕೇಳುತ್ತಾರೆಯೆ ಅಥವಾ ಖರ್ಚು ಮಾಡಿದ್ದಾರೆಯೇ ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ಇದನ್ನು ಒಪ್ಪಲು ಕಷ್ಟವಾಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಡ್ರಗ್ ಕಂಟ್ರೋಲ್ ಆಕ್ಟ್ ಇರಲಿಲ್ಲ. ಇಂಡಿಯಾ ಸರ್ಕಾರ ಹೊಸದಾಗಿ ಜಾರಿಗೆ ತಂದಮೇಲೆ ನೇಮಕ ಮಾಡಿದ ಆಫೀಸರ ಸಂಬಳ, ಸಿಬ್ಬಂದಿ ಸಂಬಳ ವಗೈರೆಗೆ ಹಣ ಬೇಕಾಯಿತು. ಬಡ್ಜೆಟ್ ಆದಮೇಲೆ ಹೊಸದಾಗಿ ಆದ ಕಾನೂನು ಪ್ರಕಾರ ನೇಮಿಸಿದ ಸಿಬ್ಬಂದಿಗಾಗಿ ಈಗ ಹಣ ಕೇಳಿದೆ.

ಶ್ರೀ ಕೆ. ಕೆಂಚಪ್ಪ.–25ನೆಯ ನಂಬರಿನ ಡಿಮ್ಯಾಂಡಿನ ವಿಚಾರದಲ್ಲಿ "Bangalore Milk Supply Scheme was inaugurated from January 1958. This is a post budget scheme. To meet the cost of purchase of milk, a sum of Rs. 2,70,000 was advanced from the Contingency Fund. The present demand is to recoup the same to that Fund. This expenditure is covered by receipts.'' ಎಂದು ಹೇಳಿದ್ದಾರೆ. ಬಡ್ಜೆಟ್ ತಯಾರಿಸಿದ ಮೇಲೆ ಈ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಇದಕ್ಕೆ 2,70,000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಯಾವ ಉದ್ದೇಶಕ್ಕಾಗಿ, ಎಲ್ಲಿ, ಏಕೆ ಎಂಬುದನ್ನೇನೂ ಸೂಚಿಸಿಲ್ಲ. ಹಾಲೇಕೆ ಕೊಂಡುಕೊಳ್ಳುವುದು, ಆಸ್ಪತ್ರೆಗಳಿಗಾಗಿಯೇ, ಯಾವ ಉದ್ದೇಶಕ್ಕಾಗಿ ಎಂಬುದನ್ನು ಹೇಳಿಲ್ಲ.

Sri T. MARIAPPA.–A mistake is made. This is merely an advance to the department for the purpose of carrying on the activities of milk supply and Rs. 2,70,000 is no expenditure. It was paid out of the contingency fund; it had to be recouped and brought under the consolidated fund. This is going to be covered by receipts; this is merely an advance to the department and this is no expenditure.

ಶ್ರೀ ಕೆ. ಕೆಂಚಪ್ಪ.—ನಮ್ಮ ಬಡ್ಜೆಟ್ಟಿನಲ್ಲಿ ಹಣವನ್ನು ಮೈಸೂರು ದೇಶದ ಉತ್ಪತ್ತಿಯನ್ನು ಕೋ-ಆಪರೇಟಿವ್ ಯೂನಿಯನ್ ಮೂಲಕ ಹಾಲುಸರಬರಾಜಿಗಾಗಿ ಕೊಟ್ಟಿರುವುದರ ಅರ್ಥವೇನೆಂಬುದನ್ನು ಈಗಲಾದರೂ ಊಹೆ ಮಾಡಿಕೊಳ್ಳಿ.

Sri H. S. RUDRAPPA.—The scheme is undertaken by the Government and not by the present society.

ಶ್ರೀ ಕೆ. ಕೆಂಚಪ್ಪ.—ಅಡವಿಯಲ್ಲಿ ಕಳೆದುಕೊಂಡ ದನವನ್ನು ಹುಡುಕುವಷ್ಟು ಈ ವಿಚಾರ ಕಷ್ಟವಾಗಿದೆ. ಆಮೇಲೆ 27ನೆಯ ನಂಬರಿನ ಡಿಮ್ಯಾಂಡಿನಲ್ಲಿ ಇಂಡಸ್ಟ್ರೀಸ್ ಅಂಡ್ ಸಪ್ಲೈಸ್‌ಗೆ 4,53,300 ರೂಪಾಯಿಗಳನ್ನು ಹೆಚ್ಚಾಗಿ ಕೊಡಬೇಕೆಂದು ಕೇಳಿದ್ದಾರೆ. ಈ ಸಂಬಂಧದಲ್ಲಿ "The Khadi centres run by Government have been transferred to the control of the Khadi and Village Industries Board To meet the Establishment Charges, grant of Rs. 35,000 has been advanced from Contingency Fund. As this can be met by re-appropriation, a token grant is necessary.'' ಎಂದು ಹೇಳಿದ್ದಾರೆ. ಆಗಲೇ 35 ಸಾವಿರ ರೂಪಾಯಿಗಳನ್ನು ಕಂಟಿಂಜೆನ್ಸಿ ಫಂಡಿನಿಂದ ಕೊಟ್ಟಿದ್ದಾರೆ. ಇದಕ್ಕೆ ಒಂದು ಬೋರ್ಡ್ ಇದೆ. ಅದರಮೇಲೆ ನಮಗೆ ಕಂಟ್ರೋಲ್ ಹೆಚ್ಚಾಗಿಲ್ಲ ಏಕೆ ಈ ಬೋರ್ಡ್ ಆಗಿದೆ, ಬರೀ ಖಾದಿ ತಯಾರಿಸುವುದಕ್ಕೆ ಆಗಿದೆಯೆ, ಅಥವಾ ಖಾದಿ ತಯಾರಿಸಲು ಸಿಬ್ಬಂದಿ ನೇಮಿಸಿ ಮೀಟಿಂಗ್ ಮಾಡಿಕೊಂಡು ಹೋಗುವುದಕ್ಕೆ ಅಗಿದೆಯೆ ಎಂಬುದು ತಿಳಿಯದು.

Mr. SPEAKER.—No, no. It is a statutory Board.

Sri K. KENCHAPPA.—A statutory Board consisting of purely nominated members and not elected.

Mr. SPEAKER.—That point cannot be agitated upon, because the statute was passed by this House.

ಶ್ರೀ ಕೆ. ಕೆಂಚಪ್ಪ.—ಕಂಟಿಂಜನ್ಸಿ ಫಂಡಿನಿಂದ 35 ಸಾವಿರ ರೂಪಾಯಿಗಳನ್ನು ಅಡ್ವಾನ್ಸ್ ಮಾಡುವುದಕ್ಕೆ ಒಪ್ಪಿ ಎಂದು ಕೇಳುವುದು ಯಾವ ಬಾಬುಗಳಿಗೆ ಹಣಕೊಡುವುದಕ್ಕೆ !

ಶ್ರೀ ಎಚ್. ಕೆ. ವೀರಣ್ಣಗೌಡ.—ಸಭೆ ಒಪ್ಪಿರುವುದಕ್ಕೇ ಕೊಡಿ ಎಂದು ಕೇಳುವುದು.

ಶ್ರೀ ಕೆ. ಕೆಂಚಪ್ಪ.—ಸಭೆ ಒಪ್ಪಿರುವುದು ಸ್ಟ್ಯಾಚ್ಯುಟರಿ ಬೋರ್ಡ್ ಆಗುವ ವಿಧಾನಕ್ಕೆ.

Mr. SPEAKER.—Here is the reply. "To meet the Establishment charges" That means the Board is given Rs. 35,000 in order to meet establishment charges.

12 NOON.

ಶ್ರೀ ಕೆ. ಕೆಂಚಪ್ಪ.—ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್‌ಗೆಂದು Contingency ಫಂಡ್ ನಿಂದ ಹಣವನ್ನು ಕೊಟ್ಟಿದ್ದಾರೆ. ಈ ರೀತಿ ಕೊಡುವುದನ್ನು ಮುಂಚೆಯೇ ವಿಶದವಾಗಿ ಆಲೋಚನೆ ಮಾಡಬಾರದಾಗಿತ್ತೇ ? ಕೊಡುವುದರಲ್ಲೂ ಯಾವರೀತಿ ಕೊಟ್ಟಿದ್ದಾರೆ ! ನೋಡಿ ಮನುಷ್ಯ ಮಾತ್ರದವರು ಏನೇನು ಮಾಡಬಹುದೆಂಬುದು ಇದರಿಂದ ಗೊತ್ತಾಗುತ್ತದೆ. ಈ ವಿಷಯದಲ್ಲಿ ಒಂದು Statutory Board

(ಶ್ರೀ ಕೆ. ಕೆಂಚಪ್ಪ)

ಏರ್ಪಾಡಾಗಿತ್ತು. ಬೋರ್ಡಿನ ರಚನೆಯಾದ ಮೇಲೆ ಈ ಸಭೆಯು ಕೂಡ ಸೇರಿದೆ. ಬೋರ್ಡಿನ ರಚನೆಯ ಬಗ್ಗೆ ಸರ್ಕಾರಿ ಹುಕ್ಕುಂ ಆಗಿರುವುದು ಅದಕ್ಕೆ ಮುಂಚೆಯೇ. ಹೀಗಿರುವಲ್ಲಿ ಆಗಲೇ ಈ ಸಭೆಯ ಮುಂದೆ ಇಷ್ಟು ದುಡ್ಡು ಬೇಕಾಗುತ್ತದೆಂದು ಏಕೆ ಒಂದು demand ತರಲಿಲ್ಲ.

ಅಧ್ಯಕ್ಷರು.—ಈ ಬಗ್ಗೆ ಬೋರ್ಡ್ ರಚನೆ ಆಗಿರಲಿಲ್ಲ.

ಶ್ರೀ ಕೆ. ಕೆಂಚಪ್ಪ.—ಆದರೆ, 'ಲಾ' ಪಾಸಾಗಿತ್ತು. ಬೋರ್ಡ್ ಇನ್ನೂ ರಚನೆ ಯಾಗದೆ ಇದ್ದರೂ ಬೋರ್ಡ್ ಆಗಬೇಕೆಂದು ಕಾನೂನಾಗಿತ್ತು ಮತ್ತು ಅದರಿಂದ ಇಂಥ ಕಾರ್ಯ ಆಗಬೇಕೆಂಬುದು ಗೊತ್ತಾಗಿತ್ತು.

Mr. SPEAKER.—I would like to bring to the notice of the Hon'ble members that while making remarks, they must also take into account certain press notes and Government notifications that appear in the press often. For every matter, it would be rather difficult to give explanation here. Many more things are taken for granted in these matters.

ಶ್ರೀ ಕೆ. ಕೆಂಚಪ್ಪ.—ನಾನು ಮೊದಲೇ ಅರಿಕೆ ಮಾಡಿದ್ದೇನೆ. ಇಂಥ ಸಪ್ಲಿಮೆಂಟರಿ ಬಡ್ಜೆಟ್‌ಗಳನ್ನು ಇಡುವಾಗ ನಮ್ಮ ಕರ್ತವ್ಯ ಬಹಳ ಗುರುತರವಾದ್ದಾಗಿದೆ. ಸರ್ಕಾರದವರು ಸರಿಯಾದ Explanation ಗಳನ್ನು ಕೊಡದೆ ಇದ್ದರೆ ಏನು ಮಾಡುವುದು?

ಅಧ್ಯಕ್ಷರು.—ನೀವು ಕೇಳಕೂಡದೆಂದು ನಾನು ತಮ್ಮನ್ನು ತಡೆಹಿಡಿಯುತ್ತಿಲ್ಲ. ಈ 35,000 ರೂಪಾಯಿಗಳನ್ನು ಕೊಡುವ ಮುನ್ನ ಒಂದು ಸಪ್ಲಿಮೆಂಟರಿ ಡಿಮ್ಯಾಂಡ್ ಇಡ ಬೇಕಾಗುತ್ತೆಂಬುದು ಸರಿ. ಈ ಸಂದರ್ಭದಲ್ಲಿ ಏನೇನಾಗಿದೆಯೆಂಬುದು ಮಾನ್ಯ ಸದಸ್ಯರಿಗೂ ಗೊತ್ತಿರಬೇಕು. ಪ್ರತಿಯೊಂದರ ಬಗ್ಗೆಯೂ ವಿವರಣೆಯನ್ನೀಯಬೇಕೆಂಬುದು ಸರಿಯಲ್ಲ. ಅನೇಕ ಸಂದರ್ಭಗಳಲ್ಲಿ ಸರ್ಕಾರದವರು ಕೆಲವು Press Note ಗಳನ್ನು ಹೊರಡಿಸಿರುತ್ತಾರೆ. ಅದನ್ನೆಲ್ಲಾ ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಕೆಲವು ವಿಷಯಗಳು ಮಾನ್ಯ ಸದಸ್ಯರಿಗೆ ತಿಳಿದಿರಬೇಕೆಂದು ಭಾವಿಸಿ, ಸರ್ಕಾರದವರು ಉತ್ತರ ಕೊಡುತ್ತಾರೆಂದು ತಿಳಿಯಬೇಕು.

ಶ್ರೀ ಕೆ. ಕೆಂಚಪ್ಪ.—ನನ್ನ ಮನಸ್ಸಿಗೆ ತೀರಾ serious ಆಗಿದೆಯೆಂದು ತೋರುವಂಥ ಲೋಪದೋಷಗಳನ್ನು ಮಾತ್ರ ನಾನು ಯಾವಾಗಲೂ ತೋರಿಸುತ್ತೇನೆ. ಅಷ್ಟು ಲಘುವಾದ ವಿಷಯಗಳನ್ನು ನಾನು ಎಂದಿಗೂ ಹೇಳುವವನಲ್ಲ.

ಇನ್ನು 28ನೆಯ ಡಿಮ್ಯಾಂಡ್‌ನಲ್ಲಿ ಮಿಸಲೇನಿಯಸ್ ಹೆಡ್‌ನಲ್ಲಿ ಜೂವಿನೈಲ್ ಬ್ರಾಂಚಿಗೆ ಸುಮಾರು 90,000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವರೇನೋ Labour Court ಮತ್ತು miscellaneous ಕೋರ್ಟುಗಳಿಗೆ ಹಣವನ್ನೇನೋ ಕೊಟ್ಟಿರಬಹುದು ಆದರೆ ಇವರು ಕೊಟ್ಟಿರತಕ್ಕ ವಿವರಣೆಯನ್ನು ನೋಡುವುದಾದರೆ, ಅಲ್ಲಿ ಹೇಳಿದೆ: The departmental requirements under this head were reduced at the time of finalisation of the Budget proposals for 1957-58. As the amount actually required is seen to be more, this sum was advanced from the Contingency fund. The present demand is to recoup the same to that fund." ಎಂದು ಹೇಳಿದ್ದಾರೆ. ಸರ್ಕಾರದವರು ತಮ್ಮ ಅತಿ ಗುರುತರವಾದ ಜವಾಬ್ದಾರಿಯ ನಿರ್ವಹಣೆಯಲ್ಲಿ ಲೋಪ ಮಾಡಿದ್ದಾರೆಂದು ಇದರಿಂದ ವ್ಯಕ್ತವಾಗುತ್ತದೆ. ಸರ್ಕಾರದವರು ಬಡ್ಜೆಟ್ ಮಾಡುವ ಕಾಲದಲ್ಲಿ ವಾಸ್ತವವಾಗಿರುವ ಖರ್ಚನ್ನು ತೋರಿಸದೆ ಕಡಮೆ ಖರ್ಚನ್ನು ತೋರಿಸಿ, ಆ ನಂತರ ಹಣ ಸಾಲದೆ ಬಂತು, ಮೊದಲೇ ಹೆಚ್ಚಿಗೆ ಕೇಳಿದ್ದನ್ನು ನಾವಾಗಿಯೇ ಕಡಮೆ ಮಾಡಿದ್ದೇವೆಂದು ಹೇಳಿ, ಸಪ್ಲಿಮೆಂಟರಿ ಹಣ ಕೇಳಿ ತೆಗೆದು ಕೊಳ್ಳುವುದು ಸರಿಯಾದ ನೀತಿಯಲ್ಲ, ಸರ್ಕಾರದವರಿಗೆ ತಮ್ಮ ಜವಾಬ್ದಾರಿಯ ಅರಿವಿಲ್ಲವೆಂದು ಅರ್ಥವಾಗುತ್ತದೆಯಲ್ಲವೇ?

It is not a question of taking into consideration something. It is a question of prohibiting some expenditure.

ಯಾವಾಗ ಒಂದು ಸಾರಿ ಸರ್ಕಾರದವರು ತಾವು ಇಷ್ಟನ್ನು ಮಾತ್ರ ಖರ್ಚುಮಾಡುತ್ತೇವೆ, ಹೆಚ್ಚಿಗೆ ಮಾಡುವುದಿಲ್ಲವೆಂದು ಮನಸ್ಸು ಮಾಡುತ್ತಾರೋ ಏನೇ ಆದರೂ ಅಷ್ಟನ್ನೇ ಖರ್ಚು ಮಾಡಬೇಕು. ಅದಕ್ಕಿಂತ ಹೆಚ್ಚಿಗೆ ಮಾಡುವುದು ಜವಾಬ್ದಾರಿಯುತವಾದ ಮಾರ್ಗವೇ? ಆದ್ದರಿಂದ ಇಂಥ ಜವಾಬ್ದಾರಿ ರಹಿತ ವರ್ತನೆಯನ್ನು ನಾವು ಒಪ್ಪುವುದಕ್ಕಾಗುವುದಿಲ್ಲ.

Sri T. MARIAPPA.—Sir, my Hon'ble friend will bear with me a little. 1957-58 was a very peculiar year. We presented two budgets in that year. First we presented the Budget for 11 and odd crores. In finalising the Budget for 1957, we reduced it to 9.36 crores. I have made it very clear on the floor of the House several times, that because it was a very peculiar year, we had made provision and we wanted to effect economy to the extent of two crores. But in actual practice, we were not able to effect economy. Therefore, in this particular case, we had to provide little subsequently out of the contingency fund. This Demand is just to recoup it. Therefore, Sir, there is nothing wrong. We could not stick to the economical figure. Therefore we have provided a little more. That is according to the schedule already in vogue when parts of the ex-Bombay State came over to us.

ಶ್ರೀ ಕೆ. ಕೆಂಚಪ್ಪ.—ನಾನು ಏತಕ್ಕೋ ಹೇಳಬಾರದೆಂದು ಇಷ್ಟು ಹೊತ್ತು ಸುಮ್ಮನೆ ಇದ್ದೆ. ಇನ್ನು ಹೇಳಿಬಿಡುತ್ತೇನೆ. ಬಡ್ಜೆಟ್ ತಯಾರುಮಾಡುವಾಗ ಇವರು ಎಷ್ಟು ಉತ್ಪ್ರೇಕ್ಷೆ ಮಾಡಿತೋರಿಸುತ್ತಾರೆ

ನೋಡಿ. ಇವರ ಉತ್ಪ್ರೇಕ್ಷೆಗೆ ಏನು ಕೊಟ್ಟರೂ ಸಾಲದು. Budget means proper apportionment of income and expenditure. ಅಂಥಾದ್ದರಲ್ಲಿ ಇಲಾಖೆಯವರಿಂದ ಎಲ್ಲಾ ಅಂಕಿ ಅಂಶಗಳನ್ನೂ ಅವರ ಅಭಿಪ್ರಾಯಗಳನ್ನೂ ತಿಂಗಳು ಗಟ್ಟಳೆ ಮುನ್ನವೇ ತರಿಸಿಕೊಂಡು, ಚಳಿಗಾಲದಲ್ಲಿ ಪ್ರಾರಂಭವಾಗಿ ಬೇಸಗೆ ಕಾಲವೆಲ್ಲಾ ಪಜೀತಿಪಟ್ಟುಕೊಂಡು ಅಂಕಿಸಂಖ್ಯೆಗಳನ್ನೆಲ್ಲಾ ಕ್ರೋಢೀಕರಿಸಿ ಎಲ್ಲಾ ಮಾಡಿಯೂ–ಮೊದಲು economy ಮಾಡಬೇಕೆಂದಿದ್ದೆವು, ಮಾಡಲಾಗಲಿಲ್ಲ ಎಂದು ಹೇಳಿದರೆ ಅದು ನಿಮ್ಮ ದಕ್ಷತೆಯ ಕುರುಹೇ? ನಾನಿದನ್ನು ಹೇಳಬಾರದೆಂದಿದ್ದೆ. ವಿಧಿಯಿಲ್ಲದೆ ಈಗ ಹೇಳುತ್ತಿದ್ದೇನೆ.

ಆ ಮೇಲೆ 29ನೆಯ ಡಿಮ್ಯಾಂಡ್‌ನಲ್ಲಿ ಹೇಳಿರುವುದನ್ನು ನೋಡಿ. ಇದನ್ನು ತಾವು ಸ್ವಲ್ಪ ಪರಾಂಬರಿಸಬೇಕು. ಇಂಥಾದ್ದೆಲ್ಲಾ ಕಾನೂನು ಪ್ರಕಾರ, ಷೆಡ್ಯೂಲ್ ಪ್ರಕಾರ ಪ್ರೋಗ್ರಾಂ ಒಂದನ್ನು ಗೊತ್ತು ಮಾಡಿಕೊಂಡು ಅದಕ್ಕನುಸಾರವಾಗಿ ಖರ್ಚುಮಾಡಬೇಕೆಂಬುದು ಸಾಮಾನ್ಯ ನಿಯಮ. ಇದರಲ್ಲಿ ಹೇಳಿರುವ ಪ್ರಕಾರ ಎಷ್ಟು ಖರ್ಚುಮಾಡಬೇಕಾಗಿತ್ತೋ ಅದಕ್ಕಿಂತ ಹೆಚ್ಚಿಗೆ 24 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಖರ್ಚುಮಾಡಬೇಕೆಂದಿದೆಯೆಂದು ಹೇಳಿದ್ದಾರೆ; ಮತ್ತು ಈ ಹಣದಲ್ಲಿ ಬಹುಭಾಗವನ್ನು ನಮಗೆ ಹೇಳದೆಯೇ ಖರ್ಚುಮಾಡಿ ಬಿಟ್ಟಿದೆ. ಇಂಥದನ್ನು ನಾವು ಯಾವರೀತಿ ಒಪ್ಪುವುದು? ಕೆಲವು ಸಂದರ್ಭಗಳಲ್ಲಿ ಮಾಡತಕ್ಕ ಕೆಲಸವನ್ನು ಮಾಡುವುದಕ್ಕಾಗಲಿಲ್ಲವೆಂದು ಹೇಳಿ ದುಡ್ಡನ್ನು ಖರ್ಚುಮಾಡದೆ ಬಿಟ್ಟಿರುವುದು ಇಲ್ಲಿದೆ. ಇನ್ನು ಕೆಲವುಕಡೆ ಜಾಗ್ರತೆ ಜಾಗ್ರತೆ ಕೆಲಸಮಾಡಿದ್ದೇವೆ, ಇನ್ನೂ ಹೆಚ್ಚಿಗೆ ಕೆಲಸಮಾಡುತ್ತೇವೆಂದು ಹೇಳಿ ಹೆಚ್ಚಿಗೆ ಹಣ ಕೇಳುವುದು ಇದರಲ್ಲಿದೆ. ಯಾವ್ಯಾವ ಕೆಲಸವನ್ನು ಯಾವ್ಯಾವ ಅವಧಿಯಲ್ಲಿ ಮಾಡಬೇಕೆಂದಿದೆಯೋ ಆ ಅವಧಿಯಲ್ಲಿ ಮಾಡಿ ಆ ಸಂದರ್ಭದಲ್ಲಿ ಮೀಸಲಾಗಿದ್ದ ದುಡ್ಡನ್ನು ಖರ್ಚುಮಾಡಬೇಕೆಂದು ವ್ಯವಸ್ಥೆಮಾಡಿರುವಾಗ ತಾವೇ ಹೇಳಬೇಕು, ಈ ವಿಚಾರದಲ್ಲಿ ನಾನು ಮಾಡುವ ಟೀಕೆ ಸಾಧ್ಯವೇ ಅಲ್ಲವೇ ಎಂಬುದನ್ನು.

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಅವಕಾಶ ಕೊಟ್ಟರೆ, ಉತ್ತರ ಹೇಳುತ್ತೇನೆ.

Sri K. KENCHAPPA.—Against a provision of Rs 12·90 lakhs........

Sri T. D. MARANNA.—On a point of order. ಮಾನ್ಯ ಸದಸ್ಯರು ಮಾತನಾಡುತ್ತಿರುವಾಗ ಮಂತ್ರಿಗಳಿಗೆ ವಿರೋಧವಾಗಿರುವ, ಸರ್ಕಾರದ ಬಗ್ಗೆ ಇರಲಾರದಂಥಾ ವಿಷಯಗಳನ್ನು ತಿಳಿಸಿದರೆ ಮಂತ್ರಿಗಳು ಮಧ್ಯೆ ಪ್ರವೇಶಮಾಡಿ ಅದನ್ನು clarify ಮಾಡುವುದು ನಿಯಮಬದ್ಧವಾಗುತ್ತದೆಯಲ್ಲವೆ?

ಅಧ್ಯಕ್ಷರು.—ಅದು ಪಾಯಿಂಟ್ ಆಫ್ ಆರ್ಡರ್ ಅಲ್ಲ. ಮಂತ್ರಿಗಳು ವಿಶದೀಕರಿಸಬಹುದು. ಮಾಡಬಾರದೆಂದಿಲ್ಲ. ಆದರೆ ನಮ್ಮ ನಿಯಮಾವಳಿಗಳ ಪ್ರಕಾರ ವಿಶದೀಕರಿಸುವುದಕ್ಕೆ ಮುನ್ನ ಮಾತನಾಡುತ್ತಿರುವ ಸದಸ್ಯರು ಮಂತ್ರಿಗಳಿಗೆ ಅವಕಾಶಕೊಡಬೇಕು. ಹಾಗೆ ಅವರು ಮಾಡದೆ ಇದ್ದರೆ ನಾನು ಏನು ಮಾಡಲಿಕ್ಕೂ ಆಗುವುದಿಲ್ಲ. ಸದಸ್ಯರು ಮಂತ್ರಿಗಳಿಗೆ ಮಧ್ಯೆ ಅವಕಾಶ ಕೊಟ್ಟರೆ ಒಳ್ಳೆಯದು. ಮುಂದೆ ಉತ್ತರ ಕೊಡುವಾಗ ಎಲ್ಲ ವಿಷಯಗಳಿಗೂ ಸರಿಯಾಗಿ ಬಹಳ ದೀರ್ಘವಾಗಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಮಂತ್ರಿಗಳಿಂದ ಉತ್ತರವನ್ನು ಪಡೆದಮೇಲೆ ಡಿಮ್ಯಾಂಡನ್ನು ಗ್ರಾಂಟ್‌ಮಾಡುವುದು, ಬಿಡುವುದು ಬೇರೆ ವಿಷಯ. ಆದುದರಿಂದ ಮಂತ್ರಿಗಳಿಗೆ ವಿವರಣೆಯನ್ನು ಕೊಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು. ಅದು ಮುಂದಿನ ಚರ್ಚೆಗೆ ಸಹಾಯ ಮಾಡುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಐಟಂ ನಾಲ್ಕರಲ್ಲಿ To carry on repair works of the damages due to heavy rains and floods in the several circles ಎಂದು ಹೇಳಿದೆ. ಇದನ್ನು ಮೊದಲು ಚೆನ್ನಾಗಿ ಮನದಟ್ಟು ಮಾಡಿಕೊಂಡರೆ ನಾನು ಏನಾದರೂ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಹೋದವರ್ಷ ಮೇ ತಿಂಗಳಿನಲ್ಲಿ ವಿಪರೀತ ಮಳೆ ಬಂದು ಅನೇಕ ರಸ್ತೆಗಳು ಮತ್ತು ಸೇತುವೆಗಳು, ತುಮಕೂರು ಜಿಲ್ಲೆಯಲ್ಲಿ, ಮೈಸೂರು ಜಿಲ್ಲೆಯಲ್ಲಿ, ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಹಾಳಾದುವು. ಇವುಗಳಿಗೆ ಹಣ ಖರ್ಚಾಗಿದೆ. ಒಂದು, ಎರಡು ಮತ್ತು ಮೂರನೆ ಐಟಂಗಳಲ್ಲಿ ಹೆಚ್ಚಿಗೆ ಕೆಲಸಮಾಡಬೇಕು ಎನ್ನುವ ಆಸಕ್ತಿಯಿಂದ ಮುತುವರ್ಜಿ ವಹಿಸಿ ಕೆಲಸಮಾಡಿದ್ದರಿಂದ ಎಷ್ಟು ಹಣ ಮಂಜೂರಾಗಿತ್ತೋ ಅದಕ್ಕಿಂತ ಜಾಸ್ತಿ ಖರ್ಚಾಗಿದೆ. ನವಂಬರ್ ತಿಂಗಳವರೆಗೆ ಎಷ್ಟೆಷ್ಟು ಹಣ ಖರ್ಚಾಗಿದೆ ಎಂದು ಇತ್ತೋ ಅದರ ಪ್ರಕಾರ ಉಳಿದ ನಾಲ್ಕು ತಿಂಗಳಿಗೆ ಅದೇ ಆಸಕ್ತಿವಹಿಸಿ ಕೆಲಸಮಾಡಿದರೆ ಎಷ್ಟು ಖರ್ಚಾಗಬಹುದು ಎಂದು ಅಂದಾಜು ಮಾಡಿಕೇಳಿದ್ದೇವೆ. ಇದರಲ್ಲಿ ಅನುಮಾನಕ್ಕಾಗಲೀ, ಮೋಸಕ್ಕಾಗಲೀ. ಅದಕ್ಷತೆಗಾಗಲಿ ಎಲ್ಲಿ ಅವಕಾಶವಿದೆ ಎಂದು ನನಗೆ ಗೊತ್ತಾಗಲಿಲ್ಲ.

ಶ್ರೀ ಕೆ. ಕೆಂಚಪ್ಪ.—ನನಗೆ ಈಗ ಸಮಾಧಾನವಾಯಿತು. ಮುತುವರ್ಜಿವಹಿಸಿ ಹೆಚ್ಚು ಕೆಲಸ ಮಾಡಿದ ದೃಷ್ಟಿಯಿಂದ ಮೊದಲನೆ ಮೂರು ಬಾಬುಗಳಲ್ಲಿ ಹೆಚ್ಚು ಖರ್ಚಾಗಿರಬಹುದೆಂದು ನಾನಾಗಲೇ ಹೇಳಿದೆ. ಅದಕ್ಕೆ ಮಾನ್ಯ ಮಂತ್ರಿಗಳಿಂದಲೇ ಸಮರ್ಥನೆ ಬಂದುದಕ್ಕೆ ಸಂತೋಷಪಡುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 38 Miscellaneous. ಇದರಲ್ಲಿ explanatory note ನಲ್ಲಿ ಹೀಗೆ ಹೇಳಿದ್ದಾರೆ.

> "A scheme for encouraging the growing of grass in village grazing lands is being implemented immediately by giving grants to such of the Village Panchayets who are willing to participate in the scheme. This was not contemplated earlier and hence the demand for the Supplementary grant in the current year."

ಇದರಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅದಕ್ಕೆ ಸಮರ್ಪಕವಾಗಿ ಉತ್ತರ ಹೇಳಬೇಕು. ಸ್ವಲ್ಪ ದಿವಸಗಳಲ್ಲಿಯೇ ನಮ್ಮ ಮುಂದೆ 1958-59ರ ಬಡ್ಜೆಟ್ ಚರ್ಚೆಗೆ ಬರುತ್ತದೆ. ಈಗ ವರ್ಷದ ಕೊನೆಯ ಭಾಗದಲ್ಲಿ ಬಡ್ಜೆಟ್ಟನ್ನು ಚರ್ಚೆಮಾಡುತ್ತಿದ್ದೇವೆ. ತಮಗೆ ಬೇಕಾದ ಹಳ್ಳಿಗಳಿಗೆ, ಅಥವಾ deserving ಹಳ್ಳಿಗಳಿಗೆ ಹುಲ್ಲು ಬೆಳೆಯುವುದಕ್ಕೆ ದುಡ್ಡನ್ನು ಕೊಡಲು ಇಟ್ಟುಕೊಂಡಿರಬಹುದು,

(ಶ್ರೀ ಕೆ. ಕೆಂಚಪ್ಪ)

ಇದನ್ನು ಈಗ ಏತಕ್ಕೆ ತರಬೇಕಾಗಿತ್ತೋ ನನಗೆ ಅರ್ಥವಾಗುವುದಿಲ್ಲ. ದನಗಳನ್ನು ಮೇಯಿಸುವುದಕ್ಕೆ ಹುಲ್ಲು ಬೆಳೆಯಬೇಕು. ಅದಕ್ಕಾಗಿ ಐದುಸಾವಿರ ರೂಪಾಯಿಗಳನ್ನು ಕೇಳಿದ್ದಾರೆ. ಇದು ವರ್ಷದ ಕೊನೆಯಭಾಗವಾದುದರಿಂದ ಈ ಕೆಲಸ ವರ್ಷಾಂತ್ಯದಲ್ಲಿ ಆಗುವಹಾಗಿಲ್ಲ. ಇಂಥದಕ್ಕೆ ಸಪ್ಲಿಮೆಂಟರಿ ಗ್ರಾಂಟ್ ಏಕೆ ಕೇಳಬೇಕು ಎಂಬುದರ ಅರ್ಥವೇ ನನಗೆ ಆಗುವುದಿಲ್ಲ. ನಾನು ನನ್ನ ಭಾವನೆಗಳನ್ನು ಇದರ ಬಗ್ಗೆ ವ್ಯಕ್ತಪಡಿಸುವುದಕ್ಕೆ ಅಸಮರ್ಥನಾಗಿದ್ದೇನೆ. ಆದುದರಿಂದ ಇಂಥ ಬಾಬುಗಳಿಗೆ ಸಪ್ಲಿಮೆಂಟರಿ ಬೇಡಿಕೆಯನ್ನು ತರಬಾರದಾಗಿತ್ತು. ಹೀಗೆ ತರುವುದರಲ್ಲಿ ಯಾವ ಸದುದ್ದೇಶವಿದೆಯೋ ನನಗೆ ಅರ್ಥವಾಗುವುದಿಲ್ಲ. ಇದರಲ್ಲಿ ಏನೋ ಇದೆ ಎಂಬ ಸಂಶಯ ಬರುತ್ತದೆಂದು ಹೇಳುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ಇದರಲ್ಲಿ ಏನೂ ಇಲ್ಲ.

ಶ್ರೀ ಕೆ. ಕೆಂಚಪ್ಪ.—ಡಿಮಾಂಡ್ 42 ರಲ್ಲಿ Vanivilas Water Works ಗೆ 15 ಸಾವಿರ ರೂಪಾಯಿ, K.R.S. Irrigation works ಗೆ 1,15,800 ರೂಪಾಯಿ, Chamaraja Sagar water works other, works, New supplies, Repairs and carriage, gross debits ಹೀಗೆ ಎಲ್ಲ ಬಾಬುಗಳಿಗೂ ಒಟ್ಟು 8,76,300 ರೂಪಾಯಿಗಳನ್ನು ಹೆಚ್ಚಿಗೆ ಕೇಳಿದ್ದಾರೆ. ಇಂಥದ್ದಕ್ಕೆಲ್ಲ ಡಿಮಾಂಡ್‌ನಲ್ಲಿ ಎಷ್ಟು ದುಡ್ಡನ್ನು ಒದಗಿಸಲಾಗಿತ್ತೋ ಅಷ್ಟನ್ನೇ ಖರ್ಚುಮಾಡಿ ಒಂದು ವೇಳೆ ಸಾಲದೆ ಇದ್ದರೆ ಮತ್ತೆ ಸ್ಯಾಂಕ್ಷನ್ ಮಾಡಿಕೊಡತಕ್ಕದ್ದು ಸಂಪ್ರದಾಯ. ಒಂದು ವೇಳೆ ಅಕಸ್ಮಾತ್ತಾಗಿ ಏನಾದರೂ ಅರ್ಜೆನ್ಸಿ ಇದ್ದು 'ಟ್ಯಾಂಕ್' ಕಟ್ಟಿರುವುದು ಒಡೆದು ಹೋಗಿ, ಡ್ರೈನ್ಸ್' ಕಿತ್ತುಹೋಗಿ, ರಸ್ತೆಗಳು ಕೊಚ್ಚಿ ಹೋಗಿ, ಅಥವಾ ಇನ್ನು ಯಾವುದಾದರೂ ರೀತಿಯಲ್ಲಿ ಅನಿರೀಕ್ಷಿತವಾಗಿ ತೊಂದರೆಯಾಗಿದ್ದರೆ ಅದನ್ನು ಹೇಳಿ. ಆರೀತಿ ಏನೂ ಆಗದೆ ಏತಕ್ಕಾಗಿ ಹೆಚ್ಚು ಖರ್ಚು ಮಾಡಬೇಕೋ ಗೊತ್ತಾಗುವುದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಹೀಗೆ ಮೊಗುಂಅಗಿ ಮಾತನಾಡಿದರೆ ಇಲ್ಲದೆ ಇರುವ ಅನುಮಾನವನ್ನು ಹುಟ್ಟಿಸುತ್ತೀರಿ.

ಶ್ರೀ ಕೆ. ಕೆಂಚಪ್ಪ.—ಅವರಿಗೆ ಹೇಳವುದಕ್ಕೆ ಅಧಿಕಾರವಿದೆ, ಅವರು ಹೇಳುತ್ತಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಆಕ್ಷೇಪಣೆ ಮಾಡಿ, ಅದನ್ನು clarify ಮಾಡುವುದಕ್ಕೆ ಅವಕಾಶ ಕೊಡದೆ ಮುಂದೆ ಮಾತನಾಡಿದರೆ ಯಾರಾದರೂ ಏನು ತಿಳಿದುಕೊಳ್ಳುತ್ತಾರೆ.

ಶ್ರೀ ಕೆ. ಕೆಂಚಪ್ಪ.—ತಾತ್ವಿಕವಾಗಿ ಒಂದು ದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ. ಈರೀತಿ ಮತ್ತೆ ಆಗಬಾರದೆಂದು ಬೇಡಿಕೆಗಳನ್ನು ಮಂಜೂರು ಮಾಡುವುದಕ್ಕೆ ವಿರೋಧ ಮಾಡಿದ್ದೇನೆ. ಇಷ್ಟು ಹೆಚ್ಚು ಹಣವನ್ನು ಯಾವ ಧರ್ಮದಿಂದ ಕೇಳುತ್ತಿದ್ದೀರೆಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲನೆಯ ಐಟಂನಲ್ಲಿ Gokak canal in Ghataprabha Left Bank Canal Division ಇದರ maintenance and repairs ಗೋಸ್ಕರ ಹಣವನ್ನು ಒದಗಿಸಿರಲಿಲ್ಲ. ಈ ಖರ್ಚನ್ನು ಮೊದಲೇ ಊಹೆ ಮಾಡಿ ಬಡ್ಜೆಟ್ಟಿನಲ್ಲಿ ಸೇರಿಸಬಹುದಾಗಿತ್ತು, ಇದು ಹೊಸದಲ್ಲ. ಅಕಸ್ಮಾತ್ತಾಗಿ ಬಿಟ್ಟು ಹೋಗಿದ್ದುದನ್ನು ಈಗ ಸೇರಿಸಿದೆ. ಇದನ್ನು ಮೊದಲು ಬಡ್ಜೆಟ್ಟಿನಲ್ಲಿ ಏಕೆ ಸೇರಿಸಲಿಲ್ಲವೆಂದು departmental action ತೆಗೆದುಕೊಳ್ಳುತ್ತಿದ್ದೇವೆ. ಎರಡನೆಯದು ಮೈಸೂರಿನಲ್ಲಿ pump house ಕೆಲಸ 1958-59ಕ್ಕೆ ಆಗಬೇಕಾಗಿತ್ತು. ಆದರೆ ಮುತುವರ್ಜಿಯಿಂದ ಕೆಲಸಮಾಡಿದ್ದರ ದೆಸೆಯಿಂದ ನಿರೀಕ್ಷೆ ಮಾಡಿದ್ದುದಕ್ಕಿಂತ ಕೆಲಸ ಬೇಗ ಮುಗಿದು, ಮೈಸೂರು ನಗರಕ್ಕೆ ನೀರು ಸರಬರಾಜು ಸ್ವಲ್ಪ ಹೆಚ್ಚಿದೆ. ಹೊಸ ಯೋಜನೆಯ ಪ್ರಕಾರ ಎರಡು ಪಂಪುಗಳನ್ನು ಹೊಸದಾಗಿ ಹಾಕಿದುದರಿಂದ ಸಪ್ಲಿಮೆಂಟರಿ ಗ್ರಾಂಟ್ ಬೇಕಾಯಿತು. ಮೂರನೆಯದು ಬಡ್ಜೆಟ್ ತಯಾರಾಗುವ ವೇಳೆಗೆ ಇದು ಮಂಜೂರಾಗಿರಲಿಲ್ಲ. ಇದನ್ನು ಇತ್ತೀಚೆಗೆ ಮಂಜೂರು ಮಾಡಿದುದರಿಂದು ಈಗ ಸೇರಿಸಲಾಗಿದೆ. ವಿಶ್ವೇಶ್ವರಯ್ಯನಾಲೆ ಬಗ್ಗೆ ನಾನಾಗಲೇ ಹೇಳಿದ್ದೇನೆ. ಅನಿರೀಕ್ಷಿತವಾಗಿ ಹೆಚ್ಚು ಮಳೆ ಬಂದುದರಿಂದ ಅನೇಕ ರಸ್ತೆಗಳು, ಕಾಲುವೆಗಳು, ಕಟ್ಟೆಗಳು ಒಡೆದುಹೋದುವು. ಇವುಗಳ ರಿಪೇರಿಗಾಗಿ ಖರ್ಚಾದ ಮೊತ್ತವನ್ನು ಗಣನೆಗೆ ತೆಗೆದುಕೊಂಡು ನಾಲ್ಕನೆ ಐಟಂನಲ್ಲಿ ಹಣವನ್ನು ಕೇಳಿದ್ದೇವೆ. ಐದನೆಯ ಐಟಂ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಕೆಲಸವನ್ನು ಹೆಚ್ಚು ಪ್ರಯತ್ನ ಮಾಡಿದುದರ ದೆಸೆಯಿಂದ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿಬಂತು. ಅದಕ್ಕೋಸ್ಕರ ಈ ಬೇಡಿಕೆ ಇದೆ. ಆರನೆ ಐಟಂನಲ್ಲಿ ಕೇಳಿರುವುದು ವಿದ್ಯುಚ್ಛಕ್ತಿ ದರದಲ್ಲಿ ವ್ಯತ್ಯಾಸವಾದ ಕಾರಣದಿಂದ, ವಿದ್ಯುಚ್ಛಕ್ತಿಯ ದರಗಳನ್ನು ಪರಿಶೀಲಿಸಿ ವರದಿ ಮಾಡಲು ಥ್ಯಾಕರ್ ಕಮಿಟಿಯನ್ನು ಮಾಡಿದೆವು. ಅವರಿಂದ ವರದಿ ಬಂದಮೇಲೆ ವಿದ್ಯುಚ್ಛಕ್ತಿ ದರದಲ್ಲಿ ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದಾಗ ಈ ದರಗಳಿರಲಿಲ್ಲ. ಸರ್ಕಾರದವರು ಈಗ ಹೆಚ್ಚಿನ ದರದ ಬಾಕಿ (arrears) ಕೊಡಬೇಕಾಗಿ ಬಂದುದರಿಂದ ಸಪ್ಲಿಮೆಂಟರಿ ಗ್ರಾಂಟ್ ಬೇಕೆಂದು ಕೇಳಿದೆ.

ಐಟಂ ಏಳರಲ್ಲಿ, ಬಹಳ ವರ್ಷಗಳ ಹಿಂದೆ ಹಾಕಿದ ಪೈಪುಗಳು ಹಳೆಯವಾಗಿದ್ದವು. ಬೆಂಗಳೂರು ನಗರಕ್ಕೆ ನೀರಿನ ಸರಬರಾಯನ್ನು ಹೆಚ್ಚು ಮಾಡುವ ಸಂಬಂಧದಲ್ಲಿ ನೀರನ್ನು ಕೊಳಾಯಿ ಮೂಲಕ force ಮಾಡಿದಾಗ. ಕೆಲವು ಹಳೆಯ ಪೈಪುಗಳು ಒಡೆದುಹೋದುವು. ಆದಕಾರಣ ಹೊಸ ಪೈಪುಗಳನ್ನು ತೆಗೆದುಕೊಳ್ಳಬೇಕಾಗಿ ಬಂತು. ಅದಕ್ಕಾಗಿ ಸಪ್ಲಿಮೆಂಟರಿ ಗ್ರಾಂಟ್ ಕೇಳಬೇಕಾಗಿ ಬಂತು.

ಎಂಟನೆಯ ಐಟಂನಲ್ಲಿ, ಕೆಲವು ಕೆರೆಗಳನ್ನು ಇತ್ತೀಚೆಗೆ ಕಟ್ಟಲಾಯಿತು. ಅವುಗಳ ಮೇಂಟೆನೆನ್ಸಿಗೆ ಅಗತ್ಯವಾದ ಹಣವನ್ನೊದಗಿಸಿರಲಿಲ್ಲ. ಈ ವರ್ಷ ಅವುಗಳ ಸಾಲ್ತಾಬಾದು ಕಾಮಗಾರಿಗೆ ಹಣ ಅಗತ್ಯ. ಇದರಿಂದ ಸಪ್ಲಿಮೆಂಟರಿ ಗ್ರಾಂಟ್ ಕೇಳಬೇಕಾಗಿ ಬಂತು.

ಒಂಭತ್ತನೆಯ ಮತ್ತು 10ನೆಯ ಐಟಂಗೆ ಬಂದರೆ ಬೆಂಗಳೂರು ನಗರದ ವಾಟರ್ ಸಪ್ಲೈ ಡಿವಿಜನ್‌ನಲ್ಲಿ ನಿರೀಕ್ಷೆ ಮಾಡಿದುದಕ್ಕಿಂತ ಹೆಚ್ಚು ಹಣ ಬೇಕಾಗುತ್ತದೆ. ಈ ಡಿವಿಜನ್ ಆಡಳಿತ ಹೆಚ್ಚಿದುದರಿಂದ ಲಾರಿಗಳನ್ನು ಕೊಂಡುಕೊಳ್ಳಬೇಕಾಗಿದೆ. ಇತರ ಕೆಲವು ಖರ್ಚುಗಳನ್ನೂ ಮಾಡಬೇಕಾಗಿದೆ. ಇದಕ್ಕೆ ಹೆಚ್ಚಿನ ಹಣವನ್ನು ಕೇಳುತ್ತಿದ್ದೇವೆ.

11ನೆಯ ಐಟಂ ಬಗ್ಗೆ ಹೇಳುವುದಾದರೆ, ಹೊಸ ಪೈಪ್‌ಗಳನ್ನು ಕೊಂಡುಕೊಂಡೆವು. ಅವು ಹೊರಗಿನಿಂದ ಬಂದಿವೆ. ಈಗ ಈ ಬಗ್ಗೆ ಹಣವನ್ನು ಕೊಡ

ಬೇಕಾಗಿ ಬಂತು. ಇದರಿಂದ ಹೆಚ್ಚು ಹಣ ಕೇಳುತ್ತಿದ್ದೇವೆ.

ಶ್ರೀ ಕೆ. ಕೆಂಚಪ್ಪ.—ಬಾಕಿಯ ವಿಚಾರಗಳನ್ನು ಸದಸ್ಯರಿಗೂ ಮಹಾಜನರಿಗೂ ಬಿಡುತ್ತೇನೆ. ಕೆಲವು ಬಾಬುಗಳ ವಿಷಯವಾಗಿ, ಹೆಚ್ಚು ಮುತುವರ್ಜಿ ವಹಿಸಿ ಕೆಲಸಮಾಡಿದುದರಿಂದ ಹೆಚ್ಚು ಹಣ ಬೇಕಾಯಿತೆಂದು ಹೇಳಿದರು. ಇದಕ್ಕೆ ಮಾತ್ರ ಮುತುವರ್ಜಿ ಏಕೆ ಬಂತು ಬಾಕಿಯದಕ್ಕೆ ಏಕೆ ಮುತುವರ್ಜಿ ತೆಗೆದುಕೊಳ್ಳಲಿಲ್ಲ ! ಮಿಕ್ಕ ಅನೇಕ ಜನೋಪಯುಕ್ತ ಕೆಲಸ ಕಾರ್ಯಗಳು ಆಗಬೇಕಾಗಿದ್ದು ಆ ಕೆಲಸಗಳಿಗೆ ಹಣ ಖರ್ಚುಮಾಡದೆ ಉಳಿಸಿದ್ದಾರೆ. ಆದುದರಿಂದಲೇ ಮನುಷ್ಯ ಸ್ವಭಾವ ಎಂದು ನಾನು ಹೇಳಿದುದು. ಗ್ರ್ಯಾಂಟ್ ಮಾಡಿದುದಕ್ಕಿಂತ ಹೆಚ್ಚು ಖರ್ಚು ಮಾಡಬಾರದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಕುಡಿಯುವ ನೀರು ಒದಗಿಸಲು ಖರ್ಚು ಮಾಡಬೇಡವೆ ?

ಶ್ರೀ ಕೆ. ಕೆಂಚಪ್ಪ.—ಈ ವರ್ಷಕ್ಕೆ ಇಷ್ಟು ಹಣ ಬೇಕೆಂದು ಅದನ್ನು ಕೊಟ್ಟಿದ್ದೇವೆ. ವರ್ಷ ಮುಗಿಯುವುದಕ್ಕಿಂತ ಮುಂಚೆ ಹೆಚ್ಚು ಖರ್ಚು ಮಾಡಿದ್ದಾರೆ. ಕುಡಿಯುವ ನೀರು, ಕಾಲುವೆ ಎಲ್ಲವೂ ದಕ್ಷಿಣದಿಕ್ಕಿನಲ್ಲಿ ಮಾತ್ರ ಆಗತ್ಯವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಚಿತ್ರದುರ್ಗಕ್ಕೆ ಮಾಡಬೇಕೆಂದು ಅವರ ಉದ್ದೇಶವೆಂದು ಕಾಣುತ್ತದೆ, ನನಗೆ ಗೊತ್ತಾಗಲಿಲ್ಲ.

ಶ್ರೀ ಕೆ. ಕೆಂಚಪ್ಪ.—ಈ ಸಭೆಯ ಸದಸ್ಯರಿಗೆ ಬಡ್ಜೆಟ್ ತಯಾರುಮಾಡಿಕೊಡುವಾಗ ಇಂಥಿಂಥಾ ಕೆಲಸಗಳನ್ನು ಮಾಡುತ್ತೇವೆ, ಇಷ್ಟಿಷ್ಟು ಖರ್ಚು ಮಾಡುತ್ತೇವೆ ಎನ್ನುವ ಮೂಲಭೂತ ವಿಷಯಗಳಿಗೆ ಗಮನ ಕೊಟ್ಟಿಲ್ಲ. ಕಂಟ್ರೋಲರ್ ಇದ್ದಾರೆ, ಅಕೌಂಟೆಂಟ್ ಜನರಲ್ ಇದ್ದಾರೆ, ಇವರೆಲ್ಲರೂ ಪಾಸು ಮಾಡಿದ ಮೇಲೆ ಖರ್ಚುಮಾಡುವ ಮಂತ್ರಿಗಳು ನಮಗೆ ಸಂಬಂಧವಿಲ್ಲ ಎಂದು ಹೇಗೆ ಹೇಳುವುದು ! ಹಾಗಿದ್ದರೆ ಶಾಸನ ಸಭೆಯ ಸದಸ್ಯರ ಮುಂದೆ ಏಕಿಡಬೇಕು ? ಇದೆಲ್ಲವೂ ಏಕಿರಬೇಕು ? ಆದುದರಿಂದ ಈ ಮೂಲ ತತ್ವಕ್ಕೆ ಧಕ್ಕೆ ಬಂದಿದೆ, ಈ ಸಪ್ಲಿಮೆಂಟರಿ ಬಡ್ಜೆಟ್‌ನಿಂದ. ಸದಸ್ಯರ ಹಕ್ಕಿಗೆ ಧಕ್ಕೆ ಬಂದಿದೆ. ಈ ತತ್ವಗಳನ್ನು ಎಷ್ಟುಮಟ್ಟಿಗೆ ಪಾಲನೆಮಾಡಿದ್ದಾರೆಂದರೆ, ಪಾಲನೆ ಮಾಡಿಲ್ಲ. ಆದಕಾರಣ ಈ ಸಪ್ಲಿಮೆಂಟರಿ ಡಿಮ್ಯಾಂಡ್‌ಗಳನ್ನು ಒಪ್ಪುವುದಿಲ್ಲವೆಂದು ಹೇಳುತ್ತೇನೆ. ಇಂಥಾ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ಈ ರೀತಿ ತಂದಿಡಬಾರದಾಗಿತ್ತು. ಇನ್ನು ಮುಂದಾದರೂ ಹೀಗೆ ಮಾಡಬಾರದು. ಇನ್ನು ಕೆಲವು ಕಾಲದಲ್ಲೇ ಬೇರೆ ಸಂದರ್ಭದಲ್ಲಿ ಚರ್ಚೆ ನಡೆಯುತ್ತದೆ. ಇದು ವಿರೋಧಪಕ್ಷದ ವಿಚಾರ ಮಾತ್ರವಲ್ಲ, ಎಲ್ಲ ಸದಸ್ಯರ ಅಧಿಕಾರಕ್ಕೂ ಬಂದಿರುವ ಚ್ಯುತಿಗೆ ಸಂಬಂಧಪಟ್ಟದ್ದು. ಅಧಿಕಾರದಲ್ಲಿರುವವರು ನಾವು ಮೆಜಾರಿಟಿಯಲ್ಲಿದ್ದೇವೆ, ನಾವು ಕೇಳಿದ ಕೂಡಲೆ ಪಾಸ್ ಆಗುತ್ತದೆ ಎನ್ನುವುದಾದರೆ, ಸಂಪ್ರದಾಯಕ್ಕೆ ವಿರೋಧವಾಗುತ್ತದೆ. ಪಕ್ಷದ ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಈ ಸಭೆಯ ಸದಸ್ಯರ ಹಕ್ಕು ಬಾಧ್ಯತೆಗಳಿಗೆ ಲೋಪ ಬಂದಿದೆ. ಸತ್‌ಸಂಪ್ರದಾಯವನ್ನನುಸರಿಸಿಲ್ಲವಲ್ಲ ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ.

Mr. SPEAKER.—The House will now rise for the day and will meet again at One of the Clock on Monday, the 17th March 1958.

The House adjourned at Twenty-six Minutes past Twelve of the Clock, to meet again at One of the Clock on Monday, the 17th March 1958.

Karnataka State Archives.
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No...
ದಿನಾಂಕ Date..........................

ಕರ್ನಾಟಕ ರಾಜ್ಯ ಪತ್ರಾಗಾರ
(ಶಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No(B) ...4749
ದಿನಾಂಕ Date........

MYSORE LEGISLATIVE ASSEMBLY

SEVENTEENTH DAY

Monday, 17th March 1958.

The House met in the Assembly Hall, Vidhana Soudha, Bangalore, at One of the Clock.

MR. DEPUTY SPEAKER (SRI L. H. THIMMA BOVI, B.A.) in the Chair.

QUESTIONS AND ANSWERS

Construction of Channel from Tarnal Tank.

Q.—1109. **Sri P. G. SIDHANTI** (Muddebihal).—

Will the Government be pleased to state :—

(*a*) the date on which the dam of Tarnal tank was constructed together with the cost thereof ;

(*b*) the extent of area submerged under water ;

(*c*) whether the construction of channel has been taken up ;

(*d*) if not, the reason therefor ;

(*e*) whether estimates have been prepared ?

A.— **Sri H. K. VEERANNA GOWDH** (Minister for Public Works).—

(*a*) During the period 1943-47. Rs. 2,70,654-0-0.

(*b*) 46 Acres.

(*c*) Out of a total length of 9,000 feet of channel to be constructed, a length of 900 feet has been completed.

(*d*) Construction of the remaining length of the channel has been ordered to be reserved to be taken up during scarcity period.

(*e*) Yes.

Sri P. G. SIDHANTI.—After this tank was completed, still are there scarcity conditions ?

Sri H. K. VEERANNA GOWDH.—I do not know whether scarcity conditions are still prevailing. It is a 10 or 11 year old story. About the year 1951 it was ordered by the erstwhile Bombay Government that this work should be taken up as a scarcity work. This is a very costly project also. The excavation of the channel itself is estimated to cost Rs. 50,000 and the area that will be irrigated will be very much less. So, unless there is acute scarcity prevailing, this work is not remunerative. This is the opinion of the erstwhile Bombay Government. The position stands at this.

Sri G. SIVAPPA.—May I know what is the irrigable area ?

Sri H. K. VEERANNA GOWDH.—The proposed irrigable area is 160 acres and according to the records available, the entire 160 acres will not be available for irrigation because of the nature of the soil and the terrain of the place. There are a number of hillocks and the place is rocky and so only 80 acres will be available for irrigation out of this 160 acres.

Sri P. G. SIDHANTI.—I find that Rs. 20,000 have been provided in the budget for this purpose.

Sri H. K. VEERANNA GOWDH.—As I said, the story I am relating refers to the year 1951. This was dropped then and now we want to pursue the matter and take it up again.

Sri G. SIVAPPA.—May I know whether it has been given up or it is still under consideration ?

Sri H. K. VEERANNA GOWDH.—It is still under consideration. In spite of the fact that it is a costly project, if it affords relief to the people, we will certainly take it up.

Sri G. SIVAPPA.—It is stated in the reply that Rs. 2,70,654 have been spent on this dam. May I know the extent of area now being irrigated ?

Sri H. K. VEERANNA GOWDH.—They have not yet excavated the entire channel and so only a small acreage is irrigated.

Sri P. G. SIDHANTI.—Is it not a fact that this work was taken up in 1943 to provide employment to labour?

Sri H. K. VEERANNA GOWDH.—Yes.

Sri P. G. SIDHANTI.—Will they pursue this matter even if it irrigates only 50 acres?

Sri H. K. VEERANNA GOWDH.—Yes.

Settlement of Border Disputes with respective Governments.

Q.—760. **Sri B. R. SUNTHANKAR** (Belgaum City).—

Will the Government be pleased to state:—

(*a*) whether it is a fact that the Hon'ble Chief Minister announced on the floor of this House that the Mysore Government would settle the issue of border areas affecting the Mysore State with the various Governments concerned in the Zonal Councils;

(*b*) whether it is a fact that the Chief Minister also announced that he was in correspondence with the respective Governments and the Central Government regarding these border issues;

(*c*) the specific disputed border areas affecting the Mysore State;

(*d*) the proposals of the Government to settle the border issues with the Government of Madras, Kerala and Andhra?

A.— **Sri S. NIJALINGAPPA** (Chief Minister).—

(*a*) The Chief Minister has not in his speech made any reference to the Zonal Councils.

(*b*) Yes.

(*c*) Claims and counter-claims exist all along the borders.

(*d*) By negotiation and understanding.

Sri B. R. SUNTHANKAR.—In reply to (*a*) it is stated that no reference has been made in the Chief Minister's speech to Zonal Councils. Is it not a fact that he has made a reference to the question of border readjustments in his speech here?

Sri S. NIJALINGAPPA.—It is very difficult to remember all that, but I can very well say what I know of the subject that references have been made to the position regarding boundary disputes and steps are being taken to resolve them.

Sri B. R. SUNTHANKAR.—May I know whether the Hon'ble Chief Minister has written to the Chief Minister of Bombay regarding Belgaum and other Marathi border areas and if so, to what effect?

Sri S. NIJALINGAPPA.—The matter is under correspondence.

Sri B. R. SUNTHANKAR.—When does the Hon'ble Chief Minister intend to meet the Hon'ble Chief Minister of Bombay to discuss this matter?

Sri S. NIJALINGAPPA.—Very likely by the end of this month.

Sri B. R. SUNTHANKAR.—Is the Government aware that the Hon'ble Chief Minister of Bombay had assured in the Bombay State Assembly that the Bombay Government would raise the issue of border areas in the Western Zonal Council and that he would take the House into his confidence in regard to this matter?

Sri S. NIJALINGAPPA.—I am not aware of that statement.

Sri B. R. SUNTHANKAR.—In view of that statement by the Bombay Chief Minister, may I know whether the Mysore Government will take this House into their confidence so far as the border area is concerned?

Sri S. NIJALINGAPPA.—It all depends upon the outcome of the talks.

Sri B. R. SUNTHANKAR.—Part (*c*) of my question is a specific one but the answer to that is not specific. May I know whether the Government considers Akalkot, south Sholapur and Jath as border disputes?

Sri S. NIJALINGAPPA.—I have said that there are claims and counter-claims all along the line. What is the use of referring to one or two areas only? There are a number of areas besides those mentioned by my Hon'ble friend.

Sri B. R. SUNTHANKAR.—What are the other areas?

Sri S. NIJALINGAPPA.—It is a very long list. My friend knows what they are.

ಹತ್ತನೆಯ ಡಿಮ್ಯಾಂಡಿಗೆ ಬಂದರೆ ಅದರಲ್ಲಿ 20,00,000 ರೂಪಾಯಿಗಳಿಗೆ ಅನುಮತಿ ಬೇಕಾಗಿದೆ ಎಂದು ಕೇಳಿದ್ದಾರೆ. ಇದರಲ್ಲಿ ನಾವು ಹೋದ ವರ್ಷ ಅಂದಾಜುಮಾಡಿದುದಕ್ಕಿಂತ ಹೆಚ್ಚಾಗಿ ಖರ್ಚಾಗುತ್ತದೆ ಎಂಬುದನ್ನು ಕೂಡ ನಮೂದುಮಾಡಿದ್ದಾರೆ. ಈ ಹಣ ಕೆರೆಗಳ ರಿಪೇರಿಯ ಬಗ್ಗೆ ಬೇಕಾಗಿದೆ ಎಂದು ಕೂಡ ಅವರು ಹೇಳಿದ್ದಾರೆ. ಆದರೆ ಇಂಥಾ ದೊಡ್ಡ ಹಣವನ್ನು ಖರ್ಚುಮಾಡುವಾಗ ಅಥವಾ ಈ ಸಭೆಯ ಅನುಮೋದನೆಯನ್ನು ಕೊಡಬೇಕು ಎಂದು ಕೇಳುವಾಗ, ಅಲ್ಲಿ ಸರ್ಕಾರದವರ ಜವಾಬ್ದಾರಿ ಅಥವಾ ಸಂಬಂಧಪಟ್ಟ ಇಲಾಖೆಯವರ ಜವಾಬ್ದಾರಿ ಹೇಗಿತ್ತು; ಯಾವ ಬಗ್ಗೆ ಈ ಹಣ ಬೇಕಾಗುತ್ತದೆ ಎನ್ನುವ ವಿವರಗಳನ್ನು ಇಲ್ಲಿ ಕೊಟ್ಟಿಲ್ಲ. ಕೊಟ್ಟಿದ್ದರೆ ಇಷ್ಟು ಹೆಚ್ಚು ಟೀಕೆಗೆ ಅವಕಾಶವಾಗುತ್ತಿರಲಿಲ್ಲ ಎಂದು ನಾನು ಅಭಿಪ್ರಾಯಪಡುತ್ತೇನೆ.

(ಶ್ರೀ ವೈ. ವೀರಪ್ಪ)

ಇನ್ನು ಉಳಿತಾಯದ ಯೋಜನೆಯ ವಿಚಾರ. ಕೇವಲ ಮೈಸೂರು ದೇಶದಲ್ಲೇ ಅಲ್ಲ. ಇಡೀ ಇಂಡಿಯಾ ದೇಶದಲ್ಲಿ ಉಳಿತಾಯದ ಯೋಜನೆ ಸರಿಯಾಗಿ ನಡೆದಿಲ್ಲ, ಅದನ್ನು ಜಾರಿಗೆ ತರಬೇಕು ಎಂದು ಹೇಳುವಾಗ ಮೈಸೂರು ಗೆಜಿಟಿಯರ್ ಬಗ್ಗೆ ಸ್ವಲ್ಪ ಹಣವನ್ನು ಖರ್ಚುಮಾಡುವುದಕ್ಕೆ ಇಟ್ಟಿದ್ದಾರೆ. ನನ್ನ ಮಾನ್ಯ ಮಿತ್ರರು ಹೇಳಿದಹಾಗೆ ಹಿಂದೆ ಸೆನ್‌ಸಸ್ ಕಮೀಷನರು ಯಾವ ರೀತಿ ಇದನ್ನು ಮಾಡಿಕೊಂಡು ಬರುತ್ತಿದ್ದರೋ ಅದೇ ರೀತಿ ಈಗಲೂ ಇದರ ಜವಾಬ್ದಾರಿಯನ್ನು ಅವರಿಗೆ ವಹಿಸಿಕೊಟ್ಟಿದ್ದರೆ ನಿಜವಾಗಿ ಸ್ವಲ್ಪ ದುಡ್ಡನ್ನು ಮಿಗಿಸಬಹುದಾಗಿತ್ತು ಎಂದು ನಾನು ಅಭಿಪ್ರಾಯಪಡುತ್ತೇನೆ. ಇನ್ನು ಮುಂದೆಯೂ ಕೂಡ 1960ನೆಯ ಇಸ್ವಿಯಲ್ಲಿ ಸೆನ್‌ಸಸ್ ಇಲಾಖೆಯವರು ಹೆಚ್ಚಿಗೆ ತೀಕ್ಷ್ಣವಾಗಿ ಕೆಲಸವನ್ನು ನೋಡಿಕೊಳ್ಳಬೇಕಾಗಿದೆ. ಆದ್ದರಿಂದ ಸಾಮಾನ್ಯವಾದ ಕೆಲಸವನ್ನು ನಡೆಸುವುದಕ್ಕೆ ಹಿಂದಿನಿಂದ ಬಂದಂಥ ಪದ್ಧತಿಯನ್ನೇ ಅನುಸರಿಸಿ ಅದನ್ನು ಮಾಡಲು ಅವರಿಗೆ ಕೊಟ್ಟಿದ್ದರೆ ಇನ್ನೂ ಸ್ವಲ್ಪ ದುಡ್ಡು ಉಳಿಯುತ್ತಿತ್ತು ಎಂದು ಹೇಳುತ್ತೇನೆ.

18ನೆಯ ಡಿಮ್ಯಾಂಡಿನಲ್ಲಿ 1,68,000 ರೂಪಾಯಿಗಳನ್ನು ಕೇಳಿದ್ದಾರೆ, ಸಂತೋಷ. ಅದರಲ್ಲಿ ಬಹುಭಾಗ ಅಭಿವೃದ್ಧಿಗಾಗಿ ಖರ್ಚು ತೋರಿಸದೆ T.A., D.A. ಕಂಟಿನ್‌ಜೆನ್‌ಸಿಸ್ ಮತ್ತು ಅದರ್ ಚಾರ್ಜಸ್‌ಗೆ ಎಂದು ತೋರಿಸಿದ್ದಾರೆ. ಹಾಗೆ ಹೇಳಿಬಿಟ್ಟರೆ ನಾವು ಸಮರ್ಪಕವಾಗಿದೆ ಎಂದು ಅನುಮೋದನೆಯನ್ನು ಹೇಗೆ ಕೊಡಬೇಕು ? ನಿಜವಾಗಿ ಹಣಕಾಸಿನಮೇಲೆ ವಹಿವಾಟಿನಮೇಲೆ ಆದಾಯ ಖರ್ಚು ಬಾಬಿನಮೇಲೆ ಈ ಸಭೆಗೆ ಯಾವತರಹವಾದ ಜವಾಬ್ದಾರಿ ಇದೆಎಂಬುದು ಗೊತ್ತಾಗುವುದಿಲ್ಲ. ಈ ಸಭೆಯು ತನ್ನ ಹಣಕಾಸಿನಮೇಲೆ ಆಯವ್ಯಯದ ಮೇಲೆ ಹಕ್ಕನ್ನು ಚಲಾಯಿಸಬೇಕಾದರೆ ಸರಿಯಾದ ಅಂಕಿಅಂಶಗಳು ಇರುವುದು ಒಳ್ಳೆಯದು. ಈ ಬಗ್ಗೆ ಮೊಗುಂಆಗಿ ಅನಿರೀಕ್ಷಿತ ಬಾಬುಗಳಿಗೆ ಎಂದು ಹೇಳಿರುವುದರಿಂದ ಹೆಚ್ಚುಹೆಚ್ಚಾಗಿ ಇಷ್ಟು ನಿಖರವಾಗಿ ಖರ್ಚುಮಾಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಸೂಕ್ಷ್ಮವಾಗಿ ಸ್ವಲ್ಪ ಕಾರಣಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು ಎಂದು ನಾನು ಅಭಿಪ್ರಾಯಪಡುತ್ತೇನೆ.

ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಂಬಳಸಾರಿಗೆಗಳ ಬಗ್ಗೆ ಹೆಚ್ಚು ದುಡ್ಡು ಖರ್ಚಾಗುತ್ತಿದೆ ಎಂದು ಇಲ್ಲಿ ಹೇಳಿದ್ದಾರೆ. ಆದರೆ ವಿದ್ಯಾಇಲಾಖೆಯಲ್ಲಿ ಇರುವ ಕೆಳಗಿನ ನೌಕರರಿಂದ ಹಿಡಿದು ವಿಶ್ವವಿದ್ಯಾನಿಲಯದಲ್ಲಿರತಕ್ಕ ನೌಕರರವರೆಗೆ ಅತೃಪ್ತಿ ಉಂಟಾಗಿದೆ. ಏಕೆಂದರೆ, ಸಾಮಾನ್ಯವಾಗಿ ಒಬ್ಬ ಮನುಷ್ಯನ ಸಾಮಾನ್ಯ ಜೀವನವನ್ನು ಒಂದು ಸರಿಯಾದ ಮಟ್ಟದಲ್ಲಿ ನಡೆಸಿಕೊಂಡುಹೋಗಬೇಕಾದರೆ ಏನು ಬೇಕು ಎಂಬುದನ್ನು ತಿಳಿದುಮಾಡಬೇಕು. ಇದು ಇವೊತ್ತಿನ ದಿವಸದ ಕೂಗು ಅಲ್ಲ. ಬಹಳ ದಿವಸಗಳಿಂದಲೂ ಇದೆ. ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷೆಗಳು ಯಾವ ರೀತಿ ನಡೆಯುತ್ತಿವೆ ಎಷ್ಟು ಲೋಪದೋಷಗಳು ಇವೆ ಎಂಬುದನ್ನು ಆಲೋಚನೆಮಾಡಿದರೆ ಒಂದು ನೈತಿಕಮಟ್ಟಕ್ಕೆ ವಿರುದ್ಧವಾದ ರೀತಿಯಲ್ಲಿ ವ್ಯವಹಾರಗಳು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿವೆ ಎಂಬುದು ಸರ್ಕಾರದ ಗಮನಕ್ಕೆ ಬರುತ್ತದೆ. ಅವರು ಕೊಡುತ್ತಿರುವ ವೇತನ ಸಂಬಳಸಾರಿಗೆಗಳು ಸರ್ವಸಾಧಾರಣವಾದ ಮಟ್ಟದಲ್ಲಿ ಇಲ್ಲದೆಇರುವುದೇ ಇದಕ್ಕೆ ಕಾರಣ ಎಂದು ಪರಿಗಣಿಸಬೇಕಾಗಿದೆ. ಈ ಬಗ್ಗೆ ಅವರು ಒಂದು ಟೋಕನ್ ಗ್ರ್ಯಾಂಟನ್ನು ಕೇಳಿದ್ದಾರೆ. ಅವರಿಗೆ ಇನ್ನುಮುಂದೆ ಒಂದು ಸರಿಯಾದ ಮಟ್ಟದಲ್ಲಿ ಸಂಬಳಸಾರಿಗೆಗಳನ್ನು ನಿಗದಿಮಾಡಿದರೆ, ನಿಜವಾಗಿಯೂ ವಿಶ್ವವಿದ್ಯಾನಿಲಯದಲ್ಲಿರುವ ಅಧ್ಯಾಪಕವರ್ಗದವರಿಗೆ ಅದರಿಂದ ಒಂದು ತೃಪ್ತಿ ಬಂದು ಅವರಲ್ಲಿ ಆಗತಕ್ಕ ಕಾರ್ಯ ಚಟುವಟಿಕೆಗಳು ಬಹಳ ಚೆನ್ನಾಗಿ ಆಗುತ್ತವೆ ಎಂದು ಅಭಿಪ್ರಾಯಪಡುತ್ತೇನೆ.

24ನೆಯ ಡಿಮ್ಯಾಂಡಿನಲ್ಲಿ ಹರಿಜನರ ಸಮಸ್ಯೆಬಂದಿದೆ. ಕೇಂದ್ರದ ಸೂಚನೆಯ ಮೇರೆಗೆ ಅದನ್ನು ಮಾಡಿದ್ದಾರೆ. ಇವೊತ್ತಿನ ಸರ್ಕಾರ ಟ್ರೆಜರಿಯಿಂದ ಕೊಡುತ್ತಿರುವ ಹಣವನ್ನು ಹರಿಜನರಿಗೆ ಸರಿಯಾಗಿ ಹಂಚುತ್ತಾ ಇಲ್ಲ. ಕೇವಲ ಭಾಷಣದ ರೀತಿ ಹೇಳುತ್ತಿಲ್ಲ. ನಾನಾ ಕ್ಷೇತ್ರಗಳಿಂದ ಬಂದ ಮಿತ್ರರ ಅನುಭವ ಹಾಗೆ ಇದೆ. ಅವರಿಗೆ ಹೆಂಚು ಹಂಚಬೇಕಾದರೆ ಬಾಗಿಲು ಕೊಡಬೇಕಾದರೆ ಗೋಡೆ ಕಟ್ಟುವುದಕ್ಕೆ ಹಣವನ್ನು ಒದಗಿಸಬೇಕಾದರೆ ಸರ್ಕಾರದವರು ಎಷ್ಟು ಕೊಟ್ಟಿರುತ್ತಾರೋ, ಅಷ್ಟು ನೇರವಾಗಿ ಅವರಿಗೆ ತಲುಪದೆ ಇರುವುದರಿಂದ, ಅವರಿಗೆ ಸರಿಯಾಗಿ ಹಂಚವೆ ಇರುವುದರಿಂದ ಸರ್ಕಾರದ ಒಂದು ಯೋಜನೆ, ಒಂದು ಗುರಿ ಇವೊತ್ತಿನ ದಿವಸ ಜಯಪ್ರದ ಆಗುವುದಕ್ಕೆ ಸಾಧ್ಯ ಆಗಿಲ್ಲ. ಈ ಬಗ್ಗೆ ಹಣವನ್ನು ಸರ್ಕಾರದವರು ಕೇಳುವುದು ಮುಖ್ಯವಲ್ಲ. ಅದನ್ನು ತೃಪ್ತಿಕರವಾದ ರೀತಿಯಲ್ಲಿ ಖರ್ಚುಮಾಡುತ್ತಾ ಇಲ್ಲ. ಹೀಗಿರುವಾಗ, ಅದನ್ನು ಏಕೆ ಕೊಡಬೇಕು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಯಾವ ರೀತಿ ಖರ್ಚುಮಾಡಬೇಕು ಎಂಬುದಕ್ಕೆ ಸಜೆಷನ್ಸ್ ಕೊಡಿ ?

ಶ್ರೀ ವೈ. ವೀರಪ್ಪ.—ಕೇವಲ ನಾನು ಇವೊತ್ತಿನ ದಿವಸ ಕೊಡುವ ಸೂಚನೆಯಲ್ಲ. ಹಿಂದಿನಿಂದಲೂ ಕೂಡ ಅನೇಕ ಮಹನೀಯರು ಸೂಚನೆಗಳನ್ನು ಕೊಟ್ಟಿದ್ದಾಗ್ಯೂ ಇಲ್ಲಿಯವರೆಗೂ ತೃಪ್ತಿಕರವಾದ ಕೆಲಸಗಳು ಆಗುತ್ತಾ ಇಲ್ಲ. ಮಾನ್ಯಮಂತ್ರಿಗಳು ಸ್ಪೆಷಲ್ ಪ್ರೋಗ್ರಾಂ ಹಾಕಿಕೊಂಡು ನನ್ನ ಕ್ಷೇತ್ರಕ್ಕೆ ಬಂದರೆ ಖರ್ಚುಮಾಡಿರತಕ್ಕ ದುಡ್ಡು ಸರಿಯಾದ ರೀತಿಯಲ್ಲಿ ಖರ್ಚಾಗಿಲ್ಲ ಎಂಬುದನ್ನು ಅವರಿಗೆ ಅಂಕಿಅಂಶಗಳಿಂದ ತಿಳಿಸಿ ತೃಪ್ತಿಪಡಿಸಲು ತಯಾರಾಗಿದ್ದೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಯಾವತರಹದ ನ್ಯೂನತೆಗಳಿವೆ. ಯಾವ ರೀತಿ ಸರಿಪಡಿಸಬೇಕು ಎಂದು ಸಜೆಷನ್ಸ್ ಕೊಟ್ಟರೆ ಸ್ವೀಕರಿಸುತ್ತೇವೆ.

ಶ್ರೀ ವೈ. ವೀರಪ್ಪ.—ಸರಿಪಡಿಸುವುದು ಹಂಚುವುದರಲ್ಲೇ ಕಾಣುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಸಕಾಲದಲ್ಲಿ ನೀವು ಕೊಟ್ಟಂಥ ದುಡ್ಡುಗಳನ್ನು ಹಂಚದೆ ಇರುವುದರಿಂದ ನಿಮ್ಮ ಗುರಿ ನೆರವೇರುತ್ತಾ ಇಲ್ಲ. ಮಾರ್ಚಿ, ಏಪ್ರಿಲ್ ತಿಂಗಳುಗಳಲ್ಲಿ ಕೊಡದೆ ಜೂನ್ ತಿಂಗಳಲ್ಲಿ ಕೊಟ್ಟರೆ ದುಡ್ಡು ಸಕಾಲಕ್ಕೆ ಸಿಕ್ಕದೆ ಆ ದುಡ್ಡನ್ನು ಮನೆ ಕಟ್ಟುವುದಕ್ಕೆ ಉಪಯೋಗಿಸದೆ ಬೇರೆ ಕೆಲಸಗಳಿಗೆ ಉಪಯೋಗವಾಗಿ ನೀವು ಕೊಟ್ಟ ದುಡ್ಡು ವ್ಯರ್ಥವಾಗುತ್ತದೆ. ಯಾವುದೋ ಕಾಲದಲ್ಲಿ ಕೊಡುತ್ತಾರೆ. 4–6 ಅಂಗುಲ ಗೋಡೆ ಹಾಕುತ್ತಾರೆ. ದೊಡ್ಡ ಮಳೆ ಬಂದು ಗೋಡೆಗಳು ಬಿದ್ದುಹೋಗುತ್ತವೆ. ಇಂಥಾ ಅನಾಹುತಗಳಾಗಿವೆ. ಹೊಳೆನರಸೀಪುರ, ವೀರರಾಜಪುರ, ಕನ್ನೇರಹಳ್ಳಿ ಈ ಊರುಗಳ ಹರಿಜನರ ಪ್ರತಿಯೊಂದು ಕೇರಿಗೂ ಹೋಗಿದ್ದೇನೆ. ಅಲ್ಲಿ ಗೋಡೆ ಹಾಕಿ ಮೂರು ವರ್ಷವಾದರೂ ದುಡ್ಡು ಸಿಕ್ಕಿಲ್ಲ.

ಪ್ರಾಪ್ತಿ ಕ್ರಮಾಂಕ Accession No.(L)......4749
ದಿನಾಂಕ Date..........................

ನನ್ನ ಕ್ಷೇತ್ರದಲ್ಲಿಯೇ ಒಡ್ಡರ ಪಾಳ್ಯ ಎಂದು ಇದೆ. ಅಲ್ಲಿ ಆರು ಸಂಸಾರಗಳವರು ಗೋಡೆ ಹಾಕಿಕೊಂಡು ಮನೆ ಕಟ್ಟಲು ತಯಾರಾಗಿದ್ದಾರೆ, ಆದರೆ ದುಡ್ಡು ಇಲ್ಲ. ಸಂಬಂಧ ಪಟ್ಟ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಹಣವನ್ನು ವಿನಿಯೋಗಮಾಡದೆ ದುಡ್ಡು ಇಲ್ಲದೆ ಇರುವುದರಿಂದ ಮಾಡಿದ ಕೆಲಸ ವ್ಯರ್ಥವಾಗುತ್ತದೆ. ಈ ಬಗ್ಗೆ ಸರಕಾರದವರು ನಿಗಾ ತೆಗೆದುಕೊಳ್ಳಬೇಕು ಎಂದು ನಾನು ಸೂಚನೆ ಮಾಡುತ್ತೇನೆ.

25ನೆಯ ಹೆಡ್‌ನಲ್ಲಿ ಬೆಂಗಳೂರು ಸಿಟಿಯಲ್ಲಿ ಹಾಲಿನ ವ್ಯವಸ್ಥೆ ಮಾಡುವುದಕ್ಕೆ ಎಂದು ಹೇಳಿದ್ದಾರೆ. ಹಾಲಿನ ವ್ಯವಸ್ಥೆ ಯಾವ ರೀತಿ ಇವೊತ್ತಿನ ದಿವಸ ಆಗುತ್ತಿದೆ? ಯಾವ ಏಜೆನ್ಸಿಯಿಂದ ಆಗುತ್ತಿದೆ? ಎಂಬುದರ ಬಗ್ಗೆ ಸ್ಪಷ್ಟವಾದ ವಿವರಗಳನ್ನು ಕೊಟ್ಟಿಲ್ಲ. ಸ್ಪಷ್ಟವಾದ ವಿವರಗಳನ್ನು ಕೊಟ್ಟಿದ್ದರೆ ಬಹುಶಃ ನಾವು ಮಾತನಾಡಬೇಕಾದ್ದು ಅನಾವಶ್ಯಕವಾಗುತ್ತಿತ್ತು ಎಂದು ಕಾಣುತ್ತದೆ. 39 ನೆಯ ಡಿಮ್ಯಾಂಡಿನಲ್ಲಿ ದೊಡ್ಡ ಹಣವನ್ನು ಸಪ್ಲಿಮೆಂಟರಿ ಬಡ್ಜೆಟ್ ಮೂಲಕ ನಿರೀಕ್ಷಣೆಗಿಂತ ಹೆಚ್ಚಿಗೆ ಕೇಳಿದ್ದಾರೆ. ಖರ್ಚುಮಾಡವುದು ಅನಿವಾರ್ಯವಾಗಿ ಬಂದಿದೆ. ಒಂದು "ನ್ಯೂ ಸರ್ವೀಸ್" ಇದೆ. ಮತ್ತು ಅನೇಕ ಮೈಲಿ ರಸ್ತೆಗಳ ರಿಪೇರಿ ವಗೈರೆಗೋಸ್ಕರ ದುಡ್ಡುಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ಇದನ್ನು ಇನ್ನೂ ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲನೆ ಮಾಡಿದ್ದರೆ ಇಷ್ಟು ದುಡ್ಡು ಸರಕಾರದವರು ಕೇಳುವುದಕ್ಕೆ ಅವಕಾಶವಾಗುತ್ತಿರಲಿಲ್ಲ. 1957–58ನೆಯ ಬಡ್ಜೆಟ್‌ನಲ್ಲಿ ಅನೇಕ ಅಂಕಿ ಅಂಶಗಳಲ್ಲಿ ಇಲ್ಲಿ ಕೇಳಿರತಕ್ಕ ಶೇಕಡ 50 ಭಾಗದ ದುಡ್ಡನ್ನು ಅಡಕ ಮಾಡಿಬಿಟ್ಟು ಈ ಅಸೆಂಬ್ಲಿಯ ಸ್ಯಾಂಕ್ಷನ್ ತೆಗೆದುಕೊಳ್ಳಬಹುದಾಗಿತ್ತು. ಡಿಪಾರ್ಟ್‌ಮೆಂಟಿನವರು ಕಳುಹಿಸಿದ ಅಂಕಿ ಅಂಶಗಳ ಆಧಾರವನ್ನು ಇಟ್ಟುಕೊಂಡು ಇವೊತ್ತಿನ ದಿವಸ ಬಹು ಭಾಗದ ಸಪ್ಲಿಮೆಂಟರಿ ಗ್ರಾಂಟನ್ನು ಕೇಳುವುದಕ್ಕೆ ಅವಕಾಶವಾಯಿತು ಎಂದು ನಾನು ಹೇಳಬೇಕಾಗಿದೆ. 32 ನೆಯ ಹೆಡ್ಡಿಗೆ ಬಂದರೆ ಈ ರಿಪೇರಿ ವಗೈರೆ ಸ್ಕೀಮುಗಳಿಗಾಗಿಯೂ ಮತ್ತು "for adjusting the net loss in the transactions relating to the sale of of rice in scarcity areas in Mysore Division—ಇದಕ್ಕಾಗಿಯೂ ದುಡ್ಡುಬೇಕು ಎಂದು ಹೇಳಿದ್ದಾರೆ.

5 P.M.

ದುಡ್ಡನ್ನು ಖರ್ಚು ಮಾಡಬೇಕಾದರೂ ಕೂಡ ಯಾವ ಯಾವ ಬಾಬಿನಿಂದ ಯಾವ ಯಾವ ಮಟ್ಟದಲ್ಲಿ ಖರ್ಚು ಮಾಡಬೇಕೆಂಬುದನ್ನು ಪರಿಶೀಲನೆ ಮಾಡಬೇಕು. ಹೀಗೆ ಪರಿಶೀಲನೆ ಮಾಡದೇ ಇರುವುದರಿಂದ ನಿರೀಕ್ಷಣೆ ಮಾಡಿದ್ದಕ್ಕಿಂತ ಹೆಚ್ಚಾಗಿ ಖರ್ಚುಮಾಡಬೇಕಾಗಿ ಬಂತು. ನಿಜವಾಗಿಯೂ ಕೂಡ ಈ ಹೆಚ್ಚುವರಿ ಡಿಮ್ಯಾಂಡುಗಳನ್ನು ಸ್ವಲ್ಪವೂ ಒಪ್ಪುವುದಕ್ಕೆ ಸಹ ಸಂಕೋಚದಿಂದ ಹಿಂಜರಿಯಬೇಕಾಗುತ್ತದೆ. 17ನೆಯ ಪುಟದಲ್ಲಿ ಕೊಟ್ಟಿರುವುದನ್ನು ನೋಡುವುದಾದರೆ ಅದರಲ್ಲಿ ಅನೇಕ ಲೋಪದೋಷಗಳಿವೆ ಎಂದು ಹೇಳಿದರೆ ತಪ್ಪಾಗಲಾರದು. ಸರಕಾರದವರು ಒಂದು ನಿರ್ದಿಷ್ಟ ಕಾರ್ಯಕ್ರಮವನ್ನಿಟ್ಟುಕೊಂಡು ಇಷ್ಟೇ ದುಡ್ಡು ಖರ್ಚುಮಾಡಬೇಕಾಗುತ್ತದೆ ಎಂಬುದನ್ನು ಸ್ವಲ್ಪಮಟ್ಟಿಗೆ ಯೋಚನೆಮಾಡಿ ಪರಿಶೀಲನೆ ಮಾಡಿದ್ದರೆ ಇಂಥ ಪ್ರಸಂಗ ಒದಗುತ್ತಿದ್ದಿಲ್ಲ. "Item No. 6. For meeting the arrears of power charges. An Expenditure of Rs. 63,774 according to Departmental figures against a provision of Rs. 1,74,000 has been incurred up to the end of October 1957" ಎಂದು ಹೇಳಲಾಗಿದೆ. ಈ ರೀತಿಯಾಗಿ ಹೇಳಿದರೆ ಹೇಗೆ ಗೊತ್ತಾಗಬೇಕು ? ಇಂಥ ಒಂದು ಡಿಮ್ಯಾಂಡನ್ನು ಕೇಳಬೇಕಾದರೆ ಸರಿಯಾಗಿ ಯಾವ ಕಾಲದಲ್ಲಿ ಖರ್ಚು ಆಯಿತು ? ಏಕೆ ಖರ್ಚಾಯಿತು ? ಎಂಬುದರ ಬಗ್ಗೆ ಕೂಲಂಕಷವಾಗಿ ಎಲ್ಲ ವಿವರಗಳನ್ನೂ ನಮೂದು ಮಾಡಿದ್ದರೆ ಇಷ್ಟು ಚರ್ಚೆಗೆ ಅವಕಾಶವಾಗುತ್ತಿದ್ದಿಲ್ಲ, ಅನಿರೀಕ್ಷಿತವಾಗಿ ಕಟ್ಟೆ, ಕಾಲುವೆ, ಕೆರೆ ಒಡೆದು ಹೋಯಿತು ಎಂದು P.W.D. ಮಂತ್ರಿಗಳು ಹಣ ಖರ್ಚುಮಾಡುವುದಕ್ಕೆ ಕಾರಣ ಹೇಳಿದರು. ಆದರೆ ಯಾವ ಯಾವ ಊರಿನಲ್ಲಿ ಯಾವ ಯಾವ ಕಡೆ ಎಂಥೆಂಥ ಕೆಲಸಗಳು ನಡೆದಿವೆ ಎಂಬುದನ್ನು ಸೂಕ್ಷ್ಮವಾಗಿ ಹೇಳಿಲ್ಲ. ಮುಖ್ಯವಾಗಿ ನೀರು ಹರಿದು ಹೋಗುವಾಗ ಮುಂಚಿತವಾಗಿ ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ನಿರೀಕ್ಷಣೆ ಮಾಡಲು ಆಗುವುದಿಲ್ಲ ಎಂಬುದು ಸರಿಯೇ ? ಬಡ್ಜೆಟ್ ನಮ್ಮ ಮುಂದೆ ಇಟ್ಟಾಗ ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚು ಆಯಿತು ಎಂಬುದರ ಬಗ್ಗೆ ಸೂಕ್ಷ್ಮವಾಗಿ ವಿವರಗಳನ್ನಿಟ್ಟಿದ್ದರೆ ನಮಗೆ ಅನುಕೂಲವಾಗುತ್ತಿತ್ತು. ಆದ್ದರಿಂದ ಈ ಬಡ್ಜೆಟ್ ಅಷ್ಟು ಆಶಾದಾಯಕವಾಗಿಲ್ಲ. ಇದೊಂದು ಅನಿರೀಕ್ಷಿತ ಬಡ್ಜೆಟ್ ಎಂದು ಕಾಣುತ್ತದೆ. ಈ ಖರ್ಚಿನ ಬಾಬುಗಳನ್ನೆಲ್ಲಾ ಹೋದ ವರ್ಷ ಎಂದರೆ 1957-58ನೆಯ ಸಾಲಿನ ಬಡ್ಜೆಟ್ ನಮ್ಮ ಮುಂದೆ ಇಡುವಾಗ ಅದರಲ್ಲಿ ಅಡಕ ಮಾಡಬೇಕಾಗಿತ್ತು. ಈ ದುಡ್ಡು ವ್ಯಯ ಆಗದಂತೆ ದುಡ್ಡಿನ ಮೇಲೆ ಹೆಚ್ಚಿಗೆ ಹತೋಟಿಯನ್ನು ಇಟ್ಟುಕೊಂಡು, ನೇರವಾಗಿ ಸಮರ್ಪಕವಾಗಿ ಪರಿಶೀಲನೆಮಾಡಿ ಈ ಬಡ್ಜೆಟ್‌ನ್ನು ಒಂದು ವೇಳೆ ತಯಾರ್‌ಮಾಡಿದ್ದರೆ ನಾವು ಅನುಮೋದಿಸಬಹುದಾಗಿತ್ತು. ಆದರೆ ಈಗ ಅನುಮೋದಿಸುವುದಕ್ಕೆ ಸ್ವಲ್ಪ ಸಂಕೋಚವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಾಮಿ, ಮೊನ್ನೆಯ ದಿನ ಮತ್ತು ಈ ದಿನ ಸಪ್ಲಿಮೆಂಟರಿ ಗ್ರಾಂಟ್ಸ್ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಟೀಕೆಮಾಡಿದ್ದಾರೆ ಹಾಗು ಕೆಲವು ಸಲಹೆಗಳನ್ನು ಸಹ ಕೊಟ್ಟಿದ್ದಾರೆ. ಸದಸ್ಯರು ಟೀಕೆಮಾಡಬೇಕಾದ್ದು ಅತ್ಯಗತ್ಯ. ಮಾನ್ಯ ಸದಸ್ಯರು ಮಾಡಿರತಕ್ಕಂಥ ಅನೇಕ ಸಲಹೆಗಳನ್ನು ಸರಕಾರದ ಗಮನದಲ್ಲಿಟ್ಟುಕೊಂಡು ಕಾರ್ಯ ಮಾಡಲಾಗುವುದೆಂದು ಇಷ್ಟೇ ಈಗ ನಾನು ಹೇಳಲಿಚ್ಛಿಸುತ್ತೇನೆ. ನನ್ನ ಪಬ್ಲಿಕ್ ವರ್ಕ್ಸ್ ಇಲಾಖೆಯ ಆಡಳಿತಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳ ಬಗ್ಗೆ ಕೆಲವು ಮಾನ್ಯ ಸದಸ್ಯರು ಟೀಕೆಮಾಡಿದ್ದಾರೆ ಮೊನ್ನೆಯ ದಿವವೇ ಅಲ್ಲಲ್ಲೆ ಆಗಾಗ್ಗೆ ಸಮಜಾಯಿಷಿ ಕೊಟ್ಟಿದ್ದೇನೆ. ಬಹುಮಟ್ಟಿಗೆ ಅನೇಕ ಅಂಶಗಳನ್ನು ಮಾನ್ಯ ಸದಸ್ಯರ ಮುಂದೆ ಇಟ್ಟಿದ್ದೇನೆ. ಶ್ರೀ ಕೆಂಚಪ್ಪನವರು ತಮ್ಮ ಭಾಷಣದಲ್ಲಿ ಟೀಕೆ ಮಾಡಿದ್ದಾರಲ್ಲದೆ ಸಲಹೆಗಳನ್ನೂ ಸಹ ಕೊಟ್ಟಿದ್ದಾರೆ. ಮುಖ್ಯವಾದ ಅವರ ಸಲಹೆ ಏನೆಂದರೆ ಮನುಷ್ಯ ಸ್ವಭಾವದ ಪ್ರಕಾರ, ತನಗೆ ಬೇಕಾದ ಕಡೆ ಹೆಚ್ಚು ಖರ್ಚುಮಾಡಿ ಕೆಲಸಕಾರ್ಯಗಳನ್ನು ಮಾಡಲಾಗುತ್ತದೆ. ಆದರೆ ಬೇರೆ ಕಡೆಗೆ ಉದಾಸೀನ ಮಾಡುವುದು ಸ್ವಾಭಾವಿಕ, ಬೇರೆ ಕಡೆ ಮಾಡಬೇಕಾದ ಕಾರ್ಯವನ್ನು ಮರೆಯಬೇಡಿ ಎಂದು ಒಂದು ಉತ್ತಮ ಸಲಹೆ ಮಾಡಿದ್ದಾರೆ. ಶ್ರೀ ಕೆಂಚಪ್ಪನವರು ಶಾಸನ ಸಭೆಗೆ ಹೊಸಬರೇನೂ ಅಲ್ಲ. ಹಿಂದೆ ಅವರು ಪ್ರಜಾಪ್ರತಿನಿಧಿ ಸಭೆಯಲ್ಲಿದ್ದರು.

(ಶ್ರೀ ಎಚ್. ಕೆ. ವೀರಣ್ಣಗೌಡ)

ಅವರಿಗೆ ಆಡಳಿತದ ಅನುಭವ ಚೆನ್ನಾಗಿ ಇದೆ. ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಆಡಳಿತ ನಡೆಸಿ ಅನುಭವವನ್ನು ಪಡೆದಿದ್ದಾರೆ. ತಮ್ಮ ಅನುಭವವನ್ನು ಎಚ್ಚರಿಕೆಯ ರೂಪದಲ್ಲಿ ನಮಗೆ ಕೊಟ್ಟಿದ್ದಾರೆ. ಅದನ್ನು ಸರಕಾರ ಶಿರಸಾ ವಹಿಸಿ ಅಂಗೀಕಾರ ಮಾಡುವುದಕ್ಕೆ ಯೋಗ್ಯವಾಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮಾನ್ಯ ಮಂತ್ರಿಗಳು ಬಹಳ ವ್ಯಂಗ್ಯವಾಗಿ ಅಪ್ಪಣೆ ಕೊಡಿಸಿದ್ದಾರೆ!

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೆ ಹೇಳುವುದಕ್ಕೆ ಅವಕಾಶವಿಲ್ಲ. ಮಾನ್ಯ ಶ್ರೀ ಕೆಂಚಪ್ಪನವರು ಬಹಳ ಅನುಭವ ಪೂರ್ವಕವಾಗಿ ಹೇಳಿದ್ದಾರೆ. ಇಂಥಾ ತಪ್ಪು ಮಾಡಬಾರದು ಎಂದು ಅವರು ಹೇಳಿದ್ದಾರೆ. ಅವರಿಗೆ ಆಡಳಿತದ ಅನುಭವವಿದೆ. ಅದನ್ನು ನಾವು ತಲೆಬಾಗಿ ಶಿರಸಾವಹಿಸಿ ಅವರ ಅಭಿಪ್ರಾಯವನ್ನು ಅಂಗೀಕರಿಸುತ್ತೇವೆ. ಅವರ ಅಭಿಪ್ರಾಯ ಸೂಕ್ತವಾಗಿದೆ. ಆದ್ದರಿಂದ ನಾನು ವ್ಯಂಗ್ಯವಾಗಿ ಏನೂ ಹೇಳಲಿಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಹಾಗಾದರೆ ಅವರ ಟೀಕೆ ಸರಿಯಾಗಿದೆ ಎಂದು ನೀವು ಒಪ್ಪುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅನುಭವದಿಂದ ಹೇಳಿದ್ದು ಯಾರೇ ಹೇಳಿದರೂ ಸಹ ಅದು ಸರಿಯಾದುದೇ. ಡಾಕ್ಟರ್ ನಾಗನಗೌಡರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಬೆಳ್ಳಾ ಕಾಲುವೆ ರೀಪೇರಿಯ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಅವರು ಹೇಳಿದ್ದಾರೆ. ಡಿಮ್ಯಾಂಡ್ 10ರಲ್ಲಿ ಹೆಚ್ಚು ಹಣ ಕೇಳಿದ್ದೇವೆ. ಇದು ತುಂಗಭದ್ರಾ ಬೋರ್ಡ್ ಆಡಳಿತಕ್ಕೆ ಸಂಬಂಧಪಟ್ಟಿದ್ದಾಗಿದೆ. ಆ ಕಮಿಟಿಯ ಚರ್ಚೆಯಲ್ಲಿ ಇದೆ. ಅವರು ಒಂದು ತೀರ್ಮಾನವನ್ನು ಮಾಡಿದಮೇಲೆ ಅದನ್ನು ತೆಗೆದುಕೊಳ್ಳುತ್ತೇವೆ. ಅವರು ಒಂದು ರಸ್ತೆಯ ಬಗ್ಗೆ ಸಹ ಪ್ರಸ್ತಾಪ ಮಾಡಿದ್ದಾರೆ. ಸರಕಾರ ಅದನ್ನು ಕೈಕೊಳ್ಳುತ್ತದೆಂದು ಭರವಸೆ ಕೊಡುತ್ತೇನೆ.

Dr. R. NAGAN GOWDA.—Sir, it has nothing to do with the Board. It is out of the fund of the sugarcane cess that....

ಶ್ರೀ ಎಚ್. ಕೆ. ವೀರಣ್ಣಗೌಡ.—ಕಬ್ಬಿನ ಸುಂಕವನ್ನು ನಿಧಿಯನ್ನಾಗಿ ಶೇಖರಿಸಿ ರಸ್ತೆ ಮುಂತಾದ ಅಭಿವೃದ್ಧಿಕಾರ್ಯಗಳಿಗೆ ಆ ಹಣವನ್ನು ಖರ್ಚು ಮಾಡುವುದಕ್ಕೆ ಉಪಯೋಗಿಸುವಂತೆ ಒಂದು ಏರ್ಪಾಡ ಮಾಡಬೇಕೆಂದು ಅವರು ಸಲಹೆ ಕೊಟ್ಟಿದ್ದಾರೆ. ಸರಕಾರ ಅವರ ಸಲಹೆಯನ್ನು ಕಾರ್ಯಗತ ಮಾಡುತ್ತದೆ. ಈ ಸಂಬಧದಲ್ಲಿ ಅಗತ್ಯವಾದ ಒಂದು ಶಾಸನವನ್ನು ಮಾಡುವ ವಿಷಯವನ್ನು ಸರಕಾರ ಆಲೋಚಿಸುತ್ತಿದೆ. ಈಗಾಗಲೇ ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಒಂದು ಈ ಸಂಬಂಧ ಮಸೂದೆಯನ್ನು ಸಹ ತಯಾರುಮಾಡಲಾಗುತ್ತಿದೆ. ಅದನ್ನು ಈ ಸಭೆಯಲ್ಲಿ ಮಂಡಿಸತಕ್ಕದ್ದಿದೆ. ಈ ಕಬ್ಬಿನ ಸುಂಕವನ್ನು ನಿಧಿಯನ್ನಾಗಿ ಶೇಖರಿಸಿ ಈ ಹಣವನ್ನು ಆ ಪ್ರಾಂತದ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವುದಕ್ಕೆ ಅವಕಾಶವಾಗುವಹಾಗೆ ಮಾಡಲಾಗುವುದೆಂದು ಡಾಕ್ಟರ್ ನಾಗನಗೌಡರವರಿಗೆ ನಾನು ಭರವಸೆಯನ್ನು ಕೊಡುತ್ತೇನೆ. ಇನ್ನು ತೆಲಗಿಯ ಹತ್ತಿರ ಎರಡು ಸೇತುವೆಗಳ ರಿಪೇರಿ ಕೆಲಸದ ವಿಚಾರದಲ್ಲಿ ಅವರು ಹೇಳಿದ್ದಾರೆ. 30ನೆಯ ಮೈಲಿ ಹತ್ತಿರವಿರುವ ಸೇತುವೆಯ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದೆಂದು ನಾನು ಅವರಿಗೆ ಭರವಸೆಯನ್ನು ಕೊಡುತ್ತೇನೆ. ಶ್ರೀ ಮಲ್ಲಾರಾಧ್ಯರವರು ತಮ್ಮ ಭಾಷಣದಲ್ಲಿ ವಿವರವಾಗಿ ಎಲ್ಲಾ ಡಿಮ್ಯಾಂಡುಗಳನ್ನೂ ಪ್ರಸ್ತಾಪಮಾಡಿ ಸೂಚನೆ ಗಳನ್ನಿತ್ತಿದ್ದಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಕೆಲವು ವಿವರಗಳನ್ನು ಅವರು ಕೇಳಿದ್ದಾರೆ. ನನಗೆ ಗೊತ್ತಿದ್ದಮಟ್ಟಿಗೆ ಕೆಲವು ಅಂಶಗಳ ವಿವರಗಳನ್ನು ಈಚೆಗೆ ನಾನು ತರಿಸಿದ್ದೇನೆ.

ಸಾಮಾನ್ಯವಾಗಿ ರಿಪೇರಿಗಾಗಿ ಎಷ್ಟು ಹಣ ಖರ್ಚಾಗಿದೆ, ರಿಪೇರಿ ಎಷ್ಟಾಗಿದೆ, ಖರ್ಚಿಗೆ ತಕ್ಕ ಕೆಲಸವಾಗಿದೆಯೆ ಮತ್ತು ಈ ಖರ್ಚಿನ ಬಗ್ಗೆ ಆಡಿಟ್ ಇದೆಯೋ ಇಲ್ಲವೋ ಅನುಮಾನಾಸ್ಪದವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಹಾಗೆ ಅನುಮಾನ ಪಡುವಮಟ್ಟಿಗೆ ಉದಾಸೀನತೆಯಿಂದ ಕೆಲಸ ನಡೆಯಲಾರದೆಂದು ಭರವಸೆಯನ್ನು ಕೊಡುತ್ತೇನೆ. ರಿಪೇರಿಯ ಕೆಲಸವಾದಮೇಲೆ ಅದನ್ನು ತನಿಖೆ ಮಾಡುತ್ತಾರೆ; ಆಡಿಟ್ ಸಹ ಆಗುತ್ತದೆ. ಮಾನ್ಯ ಸದಸ್ಯರು ಊಹೆ ಮಾಡಿರುವಷ್ಟುಮಟ್ಟಿಗೆ ಹಣ ಪೋಲಾಗುವುದಿಲ್ಲ, ಖರ್ಚಾಗಿರುವುದಕ್ಕೆ ತಕ್ಕಷ್ಟು ಕಾರ್ಯ ನಡೆದಿದೆ, ಲೆಕ್ಕ ಪತ್ರ ಆಡಿಟ್ ಆಗುತ್ತಿದೆ ಎಂದು ಭರವಸೆಯನ್ನು ಕೊಡುತ್ತೇನೆ.

ಇನ್ನೊಂದು ಸಲಹೆಯನ್ನು ಕೊಟ್ಟಿದ್ದಾರೆ. ಸ್ಥಳೀಯ ಜನರ ಸಹಕಾರ ಅಗತ್ಯ, ರಿಪೇರಿಯ ಕೆಲಸಗಳಲ್ಲಿ ಅವರ ನೆರವು ಆವಶ್ಯಕ ಎಂದು ಹೇಳಿದರು. ಮಾನ್ಯ ಸದಸ್ಯರು ರೆವೆನ್ಯೂ ಇಲಾಖೆಯಲ್ಲಿ ಬಹಳ ದಿವಸ ಉನ್ನತ ಪದವಿಯಲ್ಲಿದ್ದರು. ಅವರಿಗೆ ಈ ವಿಚಾರ ಗೊತ್ತಿದೆ. ಮೊದಲು ಕೆರೆಗಳು ರೆವೆನ್ಯೂ ಆಡಳಿತಕ್ಕೊಳಪಟ್ಟಿದ್ದಾಗ ರೈತರು ವರ್ಷೇ ವರ್ಷೇ ಅವುಗಳನ್ನು ರಿಪೇರಿ ಮಾಡಿ ಕೆರೆ ಕೊಳೆಯಾದಾಗ ಮೀನು ತೆಗೆದುಕೊಳ್ಳಬಹುದು ಎಂದಿತ್ತು. ಆಮೇಲೆ ಏಕರೇಜ್ ಸೆಸ್ ಎಂದು ಹಾಕಿ ಸಾಧಾರಣವಾಗಿ ಸರ್ಕಾರದವರೇ ರಿಪೇರಿ ಮಾಡಬೇಕಾಯಿತು. ಒಂದು ರೂಪಾಯಿಂದ ಮೂರು ರೂಪಾಯಿಗಳವರೆಗೆ ಏಕರೇಜ್ ಸೆಸ್ ವಸೂಲು ಮಾಡುತ್ತಿದ್ದರು. ರೈತರಿಗೆ ತಾವೇ ಕೆರೆಯ ರಿಪೇರಿ ಕೆಲಸ ಮಾಡಲು ಆಸಕ್ತಿ ಕಡಿಮೆಯಾಗಿ 'ನೀವೇ ಮಾಡಿ' ಎಂದು ಹೇಳುವುದು ಜಾಸ್ತಿಯಾಯಿತು. ಒಂದುಕಡೆ ಕೆರೆ ಒಡೆದು ನೀರು ಹೋಗುತ್ತಿದ್ದರೆ ಸುಮಾರು ಹದಿನಾರು ಊರುಗಳಲ್ಲಿ ಜನ ನೋಡುತ್ತಿದ್ದರೇ ಹೊರತು ನೀರು ಹೋದರೆ ತಮಗೆ ತೊಂದರೆಯಾಗುವುದೆಂದು ಗಮನಿಸಿ ಯಾರೂ ಮಣ್ಣು ಸಹ ಹಾಕಲಿಲ್ಲ; ಅಧಿಕಾರಿಗಳೇ ಆ ಕೆಲಸವನ್ನು ಮಾಡಿಸಲಿ ಎಂದು ಜನ ಉದಾಸೀನರಾಗಿರುತ್ತಾರೆ. ಇದು ಉತ್ಪ್ರೇಕ್ಷೆಯೇನಲ್ಲ. ಕೆರೆ ಒಡೆದು ನಮ್ಮ ಕೆರೆಯ ನೀರು ಹೋದರೆ ನಾವು ಮುಳುಗಿ ಹೋಗುತ್ತೇವೆಂದು ಕೂಡ ಯೋಚನೆ ಮಾಡುವುದಿಲ್ಲ. ರಿಪೇರಿ ಸರ್ಕಾರದವರೇ ಮಾಡಲಿ ಎಂದು ಹೇಳುತ್ತಾರೆ ಅಂದಮಾತ್ರಕ್ಕೆ ಜನರ ಸಹಕಾರ ತೆಗೆದುಕೊಳ್ಳಬಾರದೆಂದಿಲ್ಲ. ಅವರ ಸಹಕಾರ ಪಡೆಯಲು ಪ್ರಯತ್ನ ಮಾಡುವುದು ಸೂಕ್ತ. ಜನರ ಮನೋಭಾವನೆ ಯಾವ ರೀತಿಯಿದೆಯೆಂಬುದನ್ನು ಮಾತ್ರ ಸೂಚನೆ ಮಾಡಿದೆ, ಅಷ್ಟೆ.

ಇನ್ನು 29ನೆಯ ಡಿಮ್ಯಾಂಡಿನ ಎರಡನೆಯ ಐಟಂ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇದು ಸೇತುವೆಗಳಿಗೆ ಸಂಬಂಧಪಟ್ಟಿದೆ. ಮಳೆಯಿಂದ ನಷ್ಟವಾಗಿರುವುದನ್ನು ಸರಿಪಡಿಸಬೇಕಾಗಿದೆ. ಕಾವೇರಿ ಸರ್ಕಲ್‌ನಲ್ಲಿ ಆರು ಲಕ್ಷ ರೂಪಾಯಿಗಳವರೆಗೆ ಕೇಳುತ್ತಿದ್ದಾರೆ. ಒಟ್ಟು 25 ಲಕ್ಷ ರೂಪಾಯಿಗಳವರೆಗೆ ನಷ್ಟವಾಗಿದೆ. ಹಣ ದೊಡ್ಡದಾಗಿ ಕಂಡರೂ ಊಹೆ ಮಾಡುವಷ್ಟು ಅಸಾಧ್ಯವಾಗಿಲ್ಲವೆಂದು ಸೂಚಿಸುತ್ತೇನೆ.

ರಸ್ತೆಗಳಿಗಾಗಿ ಬರತಕ್ಕಂಥ ರೋಡ್ ಸೆಸ್ ಮುಂತಾದ ಸೆಸ್ ಹಣಕ್ಕಿಂತ ಹೆಚ್ಚಾಗಿ ರಸ್ತೆಯ ರಿಪೇರಿಗಾಗಿ ಉಪಯೋಗಮಾಡಿ ರಸ್ತೆಗಳನ್ನು ಒಳ್ಳೆಯ ಸ್ಥಿತಿಯಲ್ಲಿಡುವುದು ಸರಿಯಾದ ತತ್ವವಲ್ಲ ಎಂದು ಹೇಳುವುದು ಚರ್ಚಾಸ್ಪದವಾದ ವಿಷಯ, ಬರಬಹದಾದ ರೋಡ್ ಸೆಸ್ ಮುಂತಾದುವುಗಳಿಂದಲೇ ರಸ್ತೆಗಳನ್ನು ಒಳ್ಳೆಯ ಸ್ಥಿತಿಯಲ್ಲಿಡುವುದು ಕಷ್ಟವಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಎಲ್ಲಾ ರಸ್ತೆಗಳನ್ನು ಅದರಿಂದ ಸರಿಯಾದ ಸ್ಥಿತಿಯಲ್ಲಿಡಲು ಸಾಧ್ಯವೆಂದು ನಾನು ಹೇಳಲಿಲ್ಲ. Repairs of a particular type ಎಂಬ ವಿಚಾರ ಹೇಳಿದೆ. ಬರಿಯ ವೆಹಿಕಲ್ ಟ್ಯಾಕ್ಸ್‌ನಿಂದ ಸಾಧ್ಯವೆಂದು ಹೇಳಲಿಲ್ಲ. We must fix the proportion between the amount of vehicles tax recovered and the amount that is set apart out of that for repairs of a particular road.

ಶ್ರೀ ಎಚ್. ಕೆ. ವೀರಣ್ಣಗೌಡ.—ಸಾಮಾನ್ಯ ರಿಪೇರಿಯ ಕೆಲಸ ಅವರು ಹೇಳಿದ ಹಾಗಾಗಬಹುದು. ಸ್ಪೆಷಲ್ ರಿಪೇರ್ಸ್‌ಗೆ ಹೆಚ್ಚು ಹಣ ಬೇಕಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—29ನೆಯ ಡಿಮ್ಯಾಂಡಿನ ಮೂರನೆಯ ಐಟಂ ಬಗ್ಗೆ ಕೇಳಿದ್ದ ವಿವರ ಹೇಳಲಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಆ ವಿಚಾರದಲ್ಲಿ ನಾನು ಹೇಳಿದ್ದನ್ನು ಗಮನಿಸಲಿಲ್ಲವೆಂದು ಕಾಣುತ್ತದೆ. ವೆಸ್ಟ್ ಕೋಸ್ಟ್ ರಸ್ತೆಯಲ್ಲಿ ನಿರ್ಮಾಣ ಮಾಡಬೇಕಾದ ಮೂರು ಸೇತುವೆಗಳಿಗೆ ಈ ಹಣವು ಬೇಕಾಗುತ್ತದೆ. ಈ ಬಾಬತು ಪೂರ್ಣ ಹಣವನ್ನು ಇಂಡಿಯಾ ಸರ್ಕಾರದವರು ಕೊಡುತ್ತಾರೆ.

Sri J. B. MALLARADHYA.—May I invite the attention of the Hon'ble Minister to page 13, item 3 ? That has nothing to do with the grant from the Government of India. It is stated that the expenditure could be met by reappropriation. So this is not a case in which the Government is expecting any grant from the Government of India. The Hon'ble the Minister has himself said in the explanatory note that the "provision could be met by reappropriation of sanctioned grants".

Sri H. K. VEERANNA GOWDH.—This relates to column 3, item III Bridges-5, Schemes financed from Union Funds for the development of West Coast Roads.

Sri J. B. MALLARADHYA.—What I am asking for is this. In respect of item No. 3 of the Explanatory Note, what is the amount required ? Why is it that this amount is not stated here ? The Hon'ble Minister is asking for a demand without mentioning the amount. Is there any estimate ? He is asking only for a token grant. So I want to know the estimate.

Sri H. K. VEERANNA GOWDH.—When I explained this particular item, the Hon'ble member was not in the House. The estimates for all these bridges have been prepared and they have been sanctioned. The Government of India have to meet this expenditure and they have agreed to do so. So only a token grant of Rs. 100 is asked for in order to bring this to the notice of the House and to take its sanction for these works. If the Hon'ble member wants, I shall give the detailed estimates of these bridges. The construction of the bridge over the Uppanda River on the West Coast is estimated to cost Rs. 8·15 lakhs. The construction of the bridge over the Kalyanapur River on the West Coast is estimated to cost Rs. 13·38 lakhs and the construction of the bridge over the Mabukkal River on the West Coast is estimated to cost Rs. 21·52 lakhs.

Sri J. B. MALLARADHYA.—Will the Hon'ble Minister kindly read the note in his copy ?

Sri B. VAIKUNTA BALIGA.—Sir, may I be permitted to intervene. I know something about this particular item. These three bridges were sanctioned after the budget for 1957-58 was passed by the House and, therefore, they could not have been foreseen and provided for in the budget. The entire expenditure of these three bridges is met by the Centre and so the token grant that is asked for here is only to bring to the notice of this House the fact that these three bridges have been sanctioned by the Centre, and the expenditure could be met by reappropriation on receiving the grant from the Centre. So the finances of this State are not committed in any way. That is why only a token grant is asked for so that members may express their opinion on these works.

Sri J. B. MALLARADHYA.—The elaborate and lucid explanation given by the Hon'ble Minister for Labour and Legal Affairs takes me nowhere. I may refer to what is there in cold print in the statement before us. What he now says is there and so I want to know which is correct.

Sri B. VAIKUNTA BALIGA.—May I read the relevant entry at page 13 under Demand No. 29? Under column 3, this is what is stated: "III-Bridges-5, Schemes financed from Union Funds for the development of West Coast Roads". I may remind the Hon'ble member that these bridges are on the West Coast Roads.

Sri J. B. MALLARADHYA.—Will the Hon'ble Minister kindly read the explanatory note to item 3?

Sri B. VAIKUNTA BALIGA.—I am coming to that in order. This is what the note to item 3 says: "Three works, *viz.*, Construction of Bridges across (1) Uppanda River, (2) Kalyanapur River, and (3) Mabukkal River in South Kanara District have been since sanctioned." I emphasise the word 'since'. So they could not have been included in the Budget. The note further says "the provision could be met by reappropriation of sanctioned grants." So it is a question only of reappropriation of the grants from the Centre and nothing more. The note further says: "as they are items of new service, a token grant of Rs. 100 is required."

Sri J. B. MALLARADHYA.—In fact, I may definitely tell the House and Mr. Speaker that I am not convinced of this explanation. If the Government of India have sanctioned for a specific purpose, then where is the need for reappropriation? For what purpose it was sanctioned and why it should be reappropriated is my point. The question of reappropriation arises when the grant is made for one purpose and the amount is sought to be spent for some other purpose.

Sri T. MARIAPPA (Minister for Finance).—Sir, with the permission of the Speaker, let me intervene. There is a lot of force in what Sri Mallaradhya says. The provision is made for the west coast road. But for three specific items, there was no provision. Therefore it is a 'new service,' and we have asked a token grant of Rs. 100. When the amount is received from the Government of India, we reappropriate the money and utilise the money. The explanation is correct. I think the Hon'ble Member is satisfied.

Sri J. B. MALLARADHYA.—I am still not convinced, Sir.

Sri T. MARIAPPA.—We have made the provision for West Coast Road, but there was no specific provision for these bridges. Now that these bridges have been sanctioned, we have brought this Demand for a token grant so that the Legislature can be kept informed and so that we can pay the Bills if and when they are received. West Coast Road has already been provided for. For these bridges, there was no provision. They are all small bridges.

Sri J. B. MALLARADHYA.—Why did they not provide for these bridges? Any how, I do not want to pursue, Sir. But I would invite the attention of the Hon'ble Minister to this point; I request him to look into the matters. There is something wrong, or it will be necessary to give a little more clarification.

Sri S. NIJALINGAPPA.—It will be looked into.

ಶ್ರೀ ಎಚ್. ಕೆ. ವೀರಣ್ಣಗೌಡ.—‘ಅಪ್ರೋಚ್’ ರೋಡುಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆ ತೆಗೆದುಕೊಳ್ಳುವುದು ಸೂಕ್ತವೆ ಎಂದು ಶ್ರೀಮಾನ್ ಮಲ್ಲಾರಾಧ್ಯರು ಕೇಳಿದರು. 32ನೆಯ ಡಿಮ್ಯಾಂಡ್ ಸಂಬಂಧದಲ್ಲಿ ಮಾತನಾಡುತ್ತಾ ಗುಲ್ಬರ್ಗ ಜಿಲ್ಲೆಯಲ್ಲಿ ನಾಲ್ಕು ಅಪ್ರೋಚ್ ರೋಡ್‌ಗಳ ಕೆಲಸಗಳನ್ನು ತೆಗೆದುಕೊಳ್ಳುವುದು ಉಚಿತವೆ ಎಂದೂ ಅವರು ಕೇಳಿದರು. Famine Relief works ನಲ್ಲಿ ಇಂಥ ಕೆಲಸಗಳನ್ನು ತೆಗೆದುಕೊಳ್ಳುತ್ತಾರೆ; ತಪ್ಪೇನೂ ಅಲ್ಲ.

42ನೆಯ ಡಿಮ್ಯಾಂಡ್‌ನಲ್ಲಿ (5) ನೆಯ ಬಾಬಿನ ವಿಚಾರವನ್ನು ಪ್ರಸ್ತಾಪಿಸುತ್ತ frequency Conversion ಹೊಸದೇನೂ ಅಲ್ಲ; ಹೀಗಿದ್ದರೂ ಇದನ್ನು ಮೊದಲೇ ಬಡ್ಜೆಟ್‌ನಲ್ಲಿ ಏಕೆ ಸೇರಿಸಲಿಲ್ಲ ಎಂದು ಕೇಳಿದರು. ಮುಂಚಿತವಾಗಿಯೇ ಎಲೆಕ್ಟ್ರಿಸಿಟಿ ಬೋರ್ಡಿನವರು ಇಂಥಿಂಥಾ ಕಡೆ frequency conversion ಕೆಲಸವನ್ನು ತೆಗೆದುಕೊಳ್ಳುತ್ತೇವೆಂದು ನಮಗೆ ನೋಟೀಸ್ ಕೊಡುವುದಿಲ್ಲ. ಅವರು ಕೆಲಸ ಮಾಡುತ್ತಿರುತ್ತಾರೆ. ಮಾಡಿದಮೇಲೆ ನಮಗೆ ಬಿಲ್ ಕಳುಹಿಸುತ್ತಾರೆ. ಹೀಗೆ ವಾಣೀವಿಲಾಸ ವಾಟರ್ ವರ್ಕ್ಸ್‌ಗೆ frequency conversion ಮಾಡಿ ಇಷ್ಟು ಹಣ ಕೊಡಬೇಕೆಂದು ಅವರು ನೋಟೀಸ್ ಕಳುಹಿಸಿರುವುದರಿಂದ ನಾವು ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ಸಭೆಯ ಮುಂದಿಡಬೇಕಾಯಿತು.

ಥ್ಯಾಕರ್ ಸಮಿತಿಯ ವರದಿಯನ್ನು ಅಂಗೀಕಾರ ಮಾಡಿ ವಿದ್ಯುಚ್ಛಕ್ತಿಯ ದರವನ್ನು ಹೆಚ್ಚಿಸಿದಮೇಲೆ ಮೊದಲಿಗಿಂತ ಹೆಚ್ಚಿನ ದರದಲ್ಲಿ ವಿದ್ಯುಚ್ಛಕ್ತಿ ಚಾರ್ಜು ಕೊಡಬೇಕಾಗಿ ಬಂತು. ಆದರೆ 11 ತಿಂಗಳ ಕಾಲ ಮೊದಲಿನ ದರದಂತೆಯೇ ಕೋಲಾರ ಚಿನ್ನದ ಗಣಿಗೆ ಉಪಯೋಗಿಸುವ ವಿದ್ಯುಚ್ಛಕ್ತಿಗೆ ಕೊಡುತ್ತಿದ್ದೆವು. ಆದಕಾರಣ ಈ ಅವಧಿಯಲ್ಲಿ ಉಪಯೋಗಿಸಿದ ವಿದ್ಯು

ಚ್ಛಕ್ತಿಗೆ ಹೆಚ್ಚಿಸಿದ ದರದಲ್ಲಿ ಕೊಡಬೇಕಾಗಿದೆ. ಆದಕಾರಣ ಸಪ್ಲಿಮೆಂಟರಿ ಗ್ರ್ಯಾಂಟ್ ಕೇಳಬೇಕಾಗಿದೆ.

ಅವರು ಇನ್ನೊಂದು ಸಲಹೆಯನ್ನು ಮಾಡಿದರು. ವರ್ಷವರ್ಷವೂ ರಿಪೇರಿಗಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ; ಎಂಥ ಮಳೆ ಬಂದರೂ ಇಂಥ ರಿಪೇರಿ ಇಲ್ಲದೇ ಇರುವಹಾಗೆ ಮಾಡಬಹುದು ಎಂದು ಹೇಳಿದರು. ನಾನು ತಜ್ಞರನ್ನು ಕರೆಸಿ ಈ ವಿಚಾರದಲ್ಲಿ ಅವರ ಅಭಿಪ್ರಾಯವನ್ನು ಕೇಳಿದೆ......

Sri J. B. MALLARADHYA.—By way of explanation. My objection was that year after year the Government is spending 8 to 10 lakhs of rupees towards damages caused by heavy rains in respect of Visveswaraya cannal. If they only capitalise the expenditure they can do something substantial. What is it that they propose to do? That is what I asked. Have they got on idea as to what is spent so far? Every year, it is a hardy annual.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನೇ ಹೇಳುತ್ತಿದ್ದೆ. ಪ್ರತಿವರ್ಷವೂ ಇಷ್ಟು ಖರ್ಚು ಬರುವುಧಿಲ್ಲ. But it cannot be altogether avoided ಬಂದಹಾಗೆ ನೋಡಿಕೊಂಡು ರಿಪೇರಿ ಮಾಡಬೇಕಾಗುತ್ತದೆ.

42ನೆಯ ಡಿಮ್ಯಾಂಡ್‌ನಲ್ಲಿ 11ನೆಯ ಬಾಬಿಗೆ ಸಂಬಂಧಪಟ್ಟಹಾಗೆ, ಪೈಪ್‌ಗಳಿಗೆ ಟೆಂಡರುಗಳನ್ನು ಕರೆದಿರಲಿಲ್ಲವೆ ಎಂದು ಕೇಳಿದರು. ಇನ್ನೊಂದು ಸಂದರ್ಭದಲ್ಲಿ ಇದಕ್ಕೆ ಉತ್ತರ ಕೊಟ್ಟಿದ್ದೇನೆ. ಮೊದಲು ಕ್ಯಾಸ್ಟ್ ಐರನ್ ಪೈಪುಗಳು ಸಾಕೆಂದು ಮಾಡಿದ್ದೆವು. ಆಮೇಲೆ ಸ್ಟೀಲ್ ಪೈಪ್ ಅಗತ್ಯವೆಂದು ಕಂಡುಬಂತು. ಅದನ್ನು ಹೊರಗಿನಿಂದ ತರಿಸಿಕೊಳ್ಳಬೇಕೋ ಏನೋ ಎಂದು ಯೋಚನೆ ಮಾಡಿದ್ದೆವು. ಆದರೆ ಹಾಗಾಗಿದ್ದರೆ ಕಾಲಾತೀತವಾಗುತ್ತಿತ್ತು. ಈಚೆಗೆ ಭದ್ರಾವತಿಯಲ್ಲೇ ತಯಾರುಮಾಡಿ ಕಳುಹಿಸಿದರು. ನಿರೀಕ್ಷೆ ಮಾಡಿದ್ದಕ್ಕಿಂತ ಮುಂಚಿತವಾಗಿ ಈಗ ಅವರಿಗೆ ಹಣ ಕೊಡಬೇಕಾಗಿದೆ.

ಶ್ರೀಮಾನ್ ವೆಂಕಟೇಗೌಡರು details for new items ಕೊಡಬೇಕಾಗಿತ್ತು ಎಂದು ಹೇಳಿದರು. ಇದನ್ನು ಒಪ್ಪುತ್ತೇನೆ. ಇನ್ನು ಮುಂದೆ ಹೆಚ್ಚು ವಿವರಗಳನ್ನು ಕೊಡಲು ಅವಕಾಶವಿದೆ.

ಶ್ರೀಮಾನ್ ಸುಂತನ್‌ಕರ್ ಅವರು ಯಾವ ಯಾವ ಕೆಲಸಗಳಿಗೆ ಎಷ್ಟೆಷ್ಟು ಬೇಕೆಂಬ ಬಗ್ಗೆ ಪಟ್ಟಿಯನ್ನು ವಿವರಣೆಯೊಡನೆ ಕೊಡಬೇಕೆಂದು ಹೇಳಿದರು ಹಾಗೆ ಮಾಡುವುದು ಕಷ್ಟ. ಅದೇ ಒಂದು ಸಣ್ಣ ಪುಸ್ತಕವಾಗುತ್ತದೆ. ಏನಾದರೂ ವಿವರಗಳನ್ನು ಕೇಳಿದರೆ ಅದಕ್ಕೆ ಉತ್ತರ ಹೇಳಬಹುದೇ ಹೊರತು ಪ್ರತಿಯೊಂದಕ್ಕೂ ಪಟ್ಟಿಯನ್ನು ಕೊಡಬೇಕಾದರೆ ಕಷ್ಟ. ಇದನ್ನು ಕಾರ್ಯಗತ ಮಾಡುವುದು ಕಷ್ಟಸಾಧ್ಯವಾದ ಕೆಲಸ ಎಂದು ನನ್ನ ಅಭಿಪ್ರಾಯ.

ಎರಡನೆಯದಾಗಿ, newly integrated ಪ್ರದೇಶಗಳನ್ನು ಉಪೇಕ್ಷೆ ಮಾಡುತ್ತಿದ್ದಾರೆಂದು ಹೇಳಿದರು. ಅವರು ಹೀಗೆ ಆರೋಪಣೆ ಮಾಡಿದರೆಂದು ನಾನು ಮಾಡುವುದಿಲ್ಲ. ಪ್ರಾಯಶಃ ಇಲ್ಲಿರುವುದು ಅವರಿಗೆ ಅಸಮಾಧಾನವಾಗಿರಬಹುದು, ಅದರಿಂದ ಅವರು ಹಾಗೆ ಹೇಳಿದ್ದಾರೆ ನನಗೆ ಗೊತ್ತಿರುವಹಾಗೆ, ಹಿಂದಿನ ಸರ್ಕಾರಗಳಲ್ಲಿ ಕೆಲವು ಕೆಲಸಕಾರ್ಯಗಳು ಹತ್ತಾರು ವರ್ಷಗಳು ನಿಧಾನವಾಗಿದ್ದುವು. ಅಂಥ ಕೆಲಸಗಳನ್ನು ಬಹಳ ಜಾಗ್ರತೆಯಾಗಿ ತೆಗೆದುಕೊಂಡು ಮಾಡಬೇಕೆಂದು ನಾನೇ ಅನೇಕವೇಳೆ ಆ ಪ್ರದೇಶಗಳಿಗೆ ಹೋಗಿ ಪ್ರಯತ್ನಮಾಡಿದ್ದೇನೆ. ಹೀಗಿರುವಾಗ ಅವರು ಈ ರೀತಿ ಹೇಳಬೇಕಾದರೆ, ಇದಕ್ಕೆ ಹಿನ್ನೆಲೆಯನ್ನೇನಾದರೂ ಇಟ್ಟುಕೊಂಡು ಹೀಗೆ ಹೇಳಿದರೋ ಏನೋ ಎನಿಸುತ್ತದೆ.

Sri B. R. SUNTHANKAR.—Will the Hon'ble Minister speak in English? I do not understand him.

Sri S. D. KOTHAVALE (Chikodi).—The Hon'ble Member can understand Kannada, Sir.

Sri B. R. SUNTHANKAR.—May I tell honestly? I did not understand the Minister. I know a bit of Kannada. I can understand very little of Kannada.

5-30 P.M.

Sri H. K. VEERANNA GOWDH.—Sir, the Hon'ble Member said that the newly integrated areas were being neglected. That is not a fact. When he made that remark, the background seems to be the language question.

Sri B. R. SUNTHANKAR.—That is the feeling generally about the integrated areas.

Sri H. K. VEERANNA GOWDH.—I know Sir, that some of the works there were pending for 8 or 10 or 12 years. Works are being expedited, money is being spent and they are in progress. Therefore, his accusation that the integrated areas generally are neglected is far from truth. ಆಮೇಲೆ ಶ್ರೀಮಾನ್ ಖೋತ್ ಅವರು, ದೂದ್ ಗಂಗಾ ನದಿಗೆ ಸೇತುವೆ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಈ ಕಾರ್ಯವನ್ನು ಕೈಗೊಳ್ಳಬೇಕೆಂದು ಸರ್ಕಾರದವರು ಯೋಚನೆಮಾಡಿದ್ದಾರೆ. ಶ್ರೀಮಾನ್ ವೀರಪ್ಪನವರು ಸರಿಯಾದ ವಿವರಗಳು ಇಲ್ಲ ಎಂದು ಹೇಳಿದರು. ನಾನು ಮೊದಲೇ ಹೇಳಿದಹಾಗೆ ಎಲ್ಲಾ ವಿವರಗಳನ್ನು ಕೊಡುತ್ತಾ ಹೋದರೆ, ಬಹಳ ದೊಡ್ಡ ಕಥೆಯೇ ಆಗುತ್ತದೆ. ಆದ್ದರಿಂದ ಇಷ್ಟು ಮಾತ್ರ ಹೇಳಬಹುದು. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಅಷ್ಟು ಮಟ್ಟಿನ ವಿವರಗಳನ್ನು ಕೊಟ್ಟಿದೆ. ಎಕ್ಸ್‌ಪ್ಲನೇಟರಿ ನೋಟಿನಲ್ಲಿ ವಿವರಗಳನ್ನು ಕೊಟ್ಟಿದೆ. ಮಾನ್ಯ ಸದಸ್ಯರು ಮಾಡಿರುವಂತಹ ಟೀಕೆಗಳಿಗೆ ನಾನು ಕೊಟ್ಟಿರುವ ವಿವರಗಳನ್ನೆಲ್ಲಾ ಕೇಳಿ ಅವರು ಸಮಾಧಾನರಾಗಿದ್ದಾರೆಂದು ತಿಳಿದು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೆಲವು ಕಡೆಗಳಲ್ಲಿ ಕೆರೆಯ ಕೋಡಿ, ತೂಬು ರಿಪೇರಿಗಳು ಮೂರು ನಾಲ್ಕು ವರ್ಷಗಳಾದರೂ ಆಗಿಲ್ಲ ಎಂದು ಹೇಳಿದ್ದಕ್ಕೆ ಸಚಿವರು ಏನೂ ಉತ್ತರ ಕೊಡಲಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸದಸ್ಯರು ಅಂತಹ ಉದಾಹರಣೆಗಳು ಯಾವುದು ಎಂಬುದನ್ನು ಹೇಳಿದರೆ ಅದಕ್ಕೆ ಗಮನ ಕೊಡಲಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಕೆರೆಯ ತೂಬು, ಕೋಡಿ ರಿಪೇರಿಗಾಗಿ ಗ್ರಾಂಟನ್ನು 10-12 ವರ್ಷಗಳಿಂದ ಕೇಳುತ್ತಿದ್ದರೂ, ಗ್ರಾಂಟು ಇಲ್ಲವೆಂದು ನಮಗೆ ಕಾಗದ ಪತ್ರಗಳು ವಾಪಸ್ಸಾಗಿ ಬರುತ್ತಿವೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಗ್ರಾಂಟು ಇಲ್ಲವೆಂಬ ಪ್ರಶ್ನೆ ಬರುವುದಿಲ್ಲ. ಮೈನರ್ ಕೆರೆಗಳ ರಿಪೇರಿಗಾಗಿ ಇಂಡಿಯಾ ಸರ್ಕಾರದವರು ಗ್ರಾಂಟು ಕೊಟ್ಟಿದ್ದಾರೆ. ಈ ಹಣವನ್ನು ಮೈನರ್ ಇರಿಗೇಷನ್ ಸ್ಕೀಮಿನಲ್ಲಿ ಈ ಕೆರೆಗಳ ರಿಪೇರಿಯನ್ನು ಮಾಡುವುದಕ್ಕೆ ಉಪಯೋಗ ಮಾಡಲಾಗುತ್ತದೆ.

Sri M. P. PATIL.—Sir, regarding the question raised by the Hon'ble Member, I would state that he seems to be under a wrong impression. It is true that in the past annewari was made by only eye inspection, but recently the Government have introduced the random sampling crop cutting experiment and now annewari is fixed on the basis of the crop cutting experiments and not by eye inspection and therefore there is no question of making annewari either more or less than what it is.

Regarding Demand No. 2, there are two items in it-remuneration to Shanbhogues and Patels and Kanungo Establishment. It seems the word 'Kanungo Establishment' has created a lot of misunderstanding to the Hon'ble Members. I have already explained the word and it means the establishment of Circle Inspectors and the staff which is meant for inspecting the village records. As a matter of fact, this item ought to have been included in the budget, but by oversight it was not included. I would like to bring to the notice of members that the State was reorganised in the month of November and the Divisional Commissioner's Office was opened just at that time and therefore by oversight this item was not included in the budget. In future care will be taken to see that such items are included in the budget.

Regarding the remuneration of Shanbhogues and Patels, I have already explained that this supplementary Demand is due to increase in the allowance of the village officers. The Government took the decision to increase their allowances after the budget was passed and therefore the Divisional Commissioners have asked for these supplementary grants. This could not have been anticipated at the time of the budget.

Regarding Demand No. 38, improvement of gomal, it is said that as it is a new service it ought to have been included in the budget and that there was no hurry to include it in the supplementary Demands. In this case I agree that it could be included in the budget but the point is that if the gomals are to be improved, some procedure has to be evolved before the rainy season. I request the Hon'ble Members to read this scheme and then they will realise why the decision had to be taken early and it had to be included in the supplementary Demands. The Government has sanctioned a scheme under which the village panchayats will be given Rs. 150 per acre for the improvement of gomal. The village panchayats with the help of the villagers are to dig the trenches round about the block, put manure, plough, etc. All these operations are to be ready by monsoon so that when the monsoon starts the seed grass will be sown and the grass will be grown. With that view, all this procedure has to be gone through. It was necessary to sanction this scheme immediately. If this scheme was to be included in the budget, there would not be sufficient time to take up this scheme this year and it would have been postponed to the next year. That is the only reason why this scheme has been sanctioned in this supplementary Demand. Otherwise, there was no other reason.

The Hon'ble Member Dr. Nagan Gowda raised the question of token grant. It is true that it is now a token grant and adequate provision has been made in the budget and more money is necessary for this scheme. There is no doubt about it. It is only a token grant. Excepting that practically no funds will be spent by the end of March. Regarding this it was said that it was a new service and a question of policy. As a matter of fact, this is not a question of policy and this is not an entirely new scheme. If the Minister was in the erstwhile Mysore Government service, he must be knowing that the old Mysore Government had issued a number of circulars for the improvement of gomal. Of course, there is some difference in respect of details, but the improvement of the gomal was one of the schemes which the erstwhile Mysore Government had undertaken. Similarly the Bombay Government had issued circulars for the improvement of gomal. Apart from that, even in the Five Year Plan there is a scheme for the improvement of the grass lands and therefore, this scheme is not a new scheme at all and this question is not a question of policy. The policy has already been determined long ago and this has been accepted not only in our State but in all the other States.

Sri C. K. RAJAIAH SETTY (Chiknaikanahalli).—Is it done through the agency of the Agriculture Department?

Sri M. P. PATIL.—Gomals are under the control of the Revenue Department and therefore, the scheme is sanctioned by the Revenue Department.

Regarding Demand No. 57, the necessity of demanding this amount arose as the Government decided to purchase paddy in the month of December. As the House knows, upto this time, the Government of India used to supply rice to us for running fair price shops, but they stopped supplying rice from the month of February and we had to think over whether we should purchase rice independently or we should depend upon the Government of India. We carried on correspondence with the Government of India and the Government of India flatly said that as the Southern Zone was formed and as the Southern Zone was self-sufficient in the matter of rice, the Government of India was not prepared to supply rice at all and that, if any State Government wanted any paddy or rice for their purpose, they should purchase independently. After we received this reply this Government considered this question and decided to purchase paddy That decision was taken in the month of December and, therefore, provision was to be made for the purpose of purchasing paddy. In this connection, Mr. Sunthankar complained that the price fixed for paddy by Government was not adequate. As a matter of fact, the Government of Mysore has not fixed the rate of paddy at all. We have decided to purchase paddy at the rate prevailing in the market and we are following that policy throughout our State. We have not fixed any rate and therefore the question whether it is adequate or not does not arise at all. Regarding the Southern Zone, Mr. Sunthankar may be of the opinion that the Zone is not desirable because I know that he is interested more in the Bombay State or Maharashtra than in the Mysore State. Apart from that, I am not of that opinion. On the other hand, I have definitely said that the Southern Zone is in the interests of our State and therefore, the Southern Zone is necessary, But at the same time I have said that as we expected, as both the Government of India and the State Governments concerned expected, the rice was not moving to our expectation from Andhra to Madras or to Mysore; it is a fact, but that does not mean I am against the Southern Zone. That was the position a few months ago. Recently rice is moving from Andhra to the Mysore State in a larger quantity and I hope our needs will be met by the Andhra State. As I said, carlier the Southern Zone is really in the interests of our State. If the Southern Zone had not been there, I am quite sure that the rates which are reasonable to-day would have risen and we would have had to open more fair price shops and it would have been very difficult for us to supply rice to the people and under the circumstances it will be seen....

Sri J. B. MALLARADHYA.—But the point raised by me in respect of Demand No. 38 was that it was a scheme included in the Second Five-Year Plan. It is not as if the improvement of gomal in Mysore State was not there in the previous administration. But this is a new policy and scheme which has been inaugurated by the Honourable Revenue Minister. When there was the Second

(SRI J. B. MALLARADHYA)

Five-Year Plan, where was necessity for including it in the supplementary Demands? It could as well have been included in the Second Five-Year Plan. At no time the Government had taken over the management and improvement of gomal land to be entrusted to village panchayats. There was no circular issued in this behalf, but what I objected to was that even if they accepted this question of policy, on the ground that it was a scheme under the Second Five-Year Plan, there was no point in saying that this expenditure was not foreseen. They could have included it in the Second Five-Year Plan and got a larger amount.

In respect of Demand No. 57 I said that on the date that the Government incurred Rs. 1,18,00,000 what was the amount at the credit of the Contingency Fund? To-day the Accountant General has not given the details under three major heads–Consolidated Fund Contingency Fund and Public Account. I want to know that on the date that the Government incurred Rs. 1,18,00,000 what was the amountat credit of Contingency Fund? Was there a legal sanction behind it?

Sri M. P. PATIL.—I did not say that that particular scheme was included in the Five-Year Plan. The improvement of grazing lands is under the Five-Year Plan; it is part of that scheme. I said that the erstwhile Mysore Government also had such a scheme; I said, as far as the details are concerned, they are not the same; the original scheme was different. This scheme differs in some details. This is a different matter. But this is not a new policy. The Hon'ble Member is raising the question whether it is a new policy at all. It is not a question of new policy. He can say that it is a separate scheme, but the policy as such is the same which the old Mysore Government had followed and which the Government of India also are following and which the Planning Commission has laid down. So it is not a question of new policy at all. Regarding the amounts spent from the Contingency Fund, the details are given in the Explanatory Note under Demand No. 57:

> "The Scheme of voluntary procurement of paddy was accorded sanction in the latter part of the year 1957. To implement this scheme, a sum of Rs. 118 lakhs is necessary. This sum was advanced from the Contingency Fund in two stages of Rs. 25 lakhs and Rs. 93 lakhs. The present Demand is to recoup the advances made out of the Contingency Fund."

Sri J. B. MALLARADHYA.—My objection was that at the time the Government incurred the expenditure of 1,18,00,000 where was the contingency fund of that magnitude? They had only a crore of rupees and where did they get Rs. 118 lakhs?

Sri M. P. PATIL.–I think the Hon'ble Member may be aware that because the Contingency Fund was not sufficient, the ordinance was issued and the amount of the Contingency Fund was increased.

Sri J. B. MALLARADHYA.—On what date the expenditure for pro curement of paddy was incurred?

Sri M. P. PATIL.—The ordinance was issued on the 5th February 1958 and the paddy was being purchased from the 25th January, but there were also funds—Rs. 50 lakhs under this item and the amount was spent from that item. After the ordinance was issued, the amount was spent from the Contingency Fund.

Sri J. B. MALLARADHYA.—What the Minister said is not clear to me. The specific point raised by me was that when the Government actually incurred this expenditure to the tune of Rs. 118 lakhs, what was the amount to the credit of the Contingency Fund? Did they have proper sanction behind it?

Sri M. P. PATIL.—The proper sanction was given and the amount was spent according to the sanction. There was no irregularity.

Sri J. B. MALLARADHYA.—But on what dates the expenditure was incurred?

Sri M. P. PATIL.—The ordinance was issued on the 5th February and the expenditure was incurred in the Districts ; I shall have to get the dates.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—Crop cutting experiment ಮಾಡಿ ಎಷ್ಟು ಫಸಲಾಗುತ್ತದೆಂದು ನಿಗದಿಮಾಡಲು ಏರ್ಪಾಡು ಮಾಡಿರುವುದಾಗಿ ಹೇಳಿದರು. ಇದಕ್ಕೆ ಒಂದು ತಾಲ್ಲೂಕು ನಕ್ಷೆಯನ್ನು ತೆಗೆದುಕೊಂಡು ಅದರಮೇಲೆ ನಾಲ್ಕು ಗೆರೆ ಎಳೆದು ಅವುಗಳ ಮಧ್ಯೇ ಒಂದೊಂದು ಆರಿಸಿಕೊಂಡು experiments ಮಾಡುತ್ತಾರೆ. ಇದರ ಆಧಾರದ ಮೇಲೆ ಪರಿಹಾರ ಕಾರ್ಯಗಳನ್ನು ಮುಂದುವರಿಸುತ್ತಾರೆಯೋ ಎಂದು ಕೇಳುತ್ತೇನೆ.

Sri M. P. PATIL.—The crop cutting experiment islaid down by statistics. It is accepted by all. I could not exactly understand what the Hon'ble member wants.

Sri C. K. RAJAIAH SETTY.—How long this has been in force ?

Sri M. P. PATIL.—I think the crop cutting experiment system is in vogue in the old Mysore for the last 4 to 5 years.

Sri M. C. NARASIMHAN.—The Hon'ble Minister was speaking of the southern zone. Is it not a fact that on account of establishment, the price of jawar has come down because of the restrictions imposed ?

Sri M. P. PATIL.—I cannot say whether they have come down or gone up. It is reasonable.

